ಶ್ರೀ ಕೃಷ್ಣ ಚರಿತ್ರೆ

ಶ್ರೀ ಬಂಕಿಂಚಂದ್ರ ಛಟೋಪಾಧ್ಯಾಯರ ಬಂಗಾಳಿಯಿಂದ ಪರಿವರ್ತಿಸಿದ
ಶ್ರೀ ಕೃಷ್ಣ ಜೀವಿನಿಯು ಸಂಶೋಧನೆಯಿಂದ
ಕೂಡಿದ ಸಮಾಲೋಚನೆ

ಪರಿವರ್ತಕ

ಆರ್. ವ್ಯಾಸರಾವ್

ಮುನ್ನುಡಿ

ಡಿ. ವಿ. ಜಿ.

VEC, Library
001061

VEC, Library
001061
261 (K)
ಕಂಪನಿ
VIJAYA EVENING COLLEGE,
LIBRARY
BANGALORE-4.
ACCN. NO. ....
SECTION ....
COST ....
Date .... Librarian.

VECKAN 1082

VIJAYA EVENING COLLEGE
LIBRARY
BANGALORE-4.
ACCN. NO. 1061
SECTION Kan
COST 7.50

Date 21.11.68 Librarian.

ಗ್ರಂಥಕರ್ತರು : ಶ್ರೀ ಆರ್. ವ್ಯಾಸರಾವ್

(೧೮೮೧–೧೯೫೮)

ಶ್ರೀ ಕೃಷ್ಣ ಚರಿತ್ರೆ

ಶ್ರೀ ಬಂಕಿಂಚಂದ್ರ ಛಟೋಪಾಧ್ಯಾಯರ ಬಂಗಾಳಿಯಿಂದ ಪರಿವರ್ತಿಸಿದ
ಶ್ರೀ ಕೃಷ್ಣಜೀವಿನಿಯ ಸಂಶೋಧನೆಯಿಂದ
ಕೂಡಿದ ಸಮಾಲೋಚನೆ

ಪರಿವರ್ತಕ
ಆರ್. ವ್ಯಾಸರಾವ್

ಮುನ್ನುಡಿ
ಡಿ. ವಿ. ಜಿ.

ಚೇತನಾ ಪ್ರಿಂಟರ್ಸ್, ಬೆಂಗಳೂರು-೯
೧೯೬೫

ನಾಲ್ಕನೆಯ ಮುದ್ರಣ ೧೯೬೫

ಪ್ರಕಾಶಕರು :
ದಿವಂಗತ ಆರ್. ವ್ಯಾಸರಾವ್‌ರವರ ಮಕ್ಕಳಪರವಾಗಿ
ಆರ್. ವಿ. ಪ್ರಭಾಕರ್‌ರಾವ್
ಬೆಂಗಳೂರು-೧೧.

ಬೆಲೆ : ಏಳು ರೂಪಾಯಿ ಐವತ್ತು ಪೈಸೆ

ಪ್ರತಿಗಳು ದೊರೆಯುವ ಸ್ಥಳ :
ಆರ್. ವಿ. ಪ್ರಭಾಕರ್‌ರಾವ್
'ವ್ಯಾಸಕೃಪ', ೬೫೬, ೧೧ನೇ ಮೇನ್‌ರಸ್ತೆ,
ಜಯನಗರ, ೪ನೇ ಬ್ಲಾಕ್,
ಬೆಂಗಳೂರು-೧೧.

ಮುನ್ನುಡಿ

ಮನುಜನೊ ಕವಿವಾಕ್ಕೃತಿಭಾ ।
ಜನಿತನೊ ಜಗದಾತ್ಮಸಂಸ್ಫುರಣವೋ ಕೃಷ್ಣಂ ॥
ಅನುಮಿತಿಯೆಂತಾದೊಡಮಾ ।
ಘನವಿದ್ಯುದ್ದೀಪ್ತಿ ನಮಗೆ ಸತ್ಯಂ ಶರಣಂ ॥

೧. ಗ್ರಂಥವಿಚಾರ

ಶ್ರೀಕೃಷ್ಣತತ್ತ್ವವನ್ನು ಕುರಿತದ್ದು ಈ ಗ್ರಂಥ. ನಮ್ಮಲ್ಲಿ ಬಹುಕಾಲದಿಂದ ಲೋಕಾಂಗೀಕೃತವಾಗಿ ಬಂದಿರುವ ಕೃಷ್ಣಮೂರ್ತಿಯ ಚಿತ್ರವೊಂದು ಸರ್ವಜನ ಪರಿಚಿತವಾದದ್ದು ಉಂಟಷ್ಟೆ? ಅದರಲ್ಲಿ ಚಾರಿತ್ರಿಕವಾದ (Historical) ಭಾಗ ಎಷ್ಟೆಂಬುದನ್ನು ಇಲ್ಲಿ ವಿಚಾರಮಾಡಿದೆ. ಹೀಗೆ ಇದು ನಮಗೆ ಉಪಕಾರಕವಾಗಿದೆ. ಈ ಗ್ರಂಥದ ಪುನಃ ಪ್ರಕಟನೆಯಿಂದ ಕನ್ನಡ ಮಹಾಜನರು ಸಂತೋಷ ಪಟ್ಟಾರೆಂದು ನಾನು ನಂಬಿದ್ದೇನೆ.

ಈ ಗ್ರಂಥವನ್ನು ನಾನು ಓದಿ ೩೫–೩೮ ವರ್ಷದ ಮೇಲಾಗಿದೆ. ಅದನ್ನು ಮರಳಿ ಓದುವ ಅವಕಾಶ ನನಗೆ ದೊರೆಯದೆ ಹೋಗಿದ್ದರೂ ಅದನ್ನು ಪದೇ ಪದೇ ಸ್ಮರಣೆಗೆ ತಂದುಕೊಂಡಿದ್ದೇನೆ. ಈಚೆಗೆ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ವ್ಯಾಸಂಗಗೋಷ್ಠಿಯಲ್ಲಿ ಭಗವದ್ಗೀತೆಯನ್ನು ಕುರಿತು ಪ್ರವಚನ ಮಾಡುವ ಸಂದರ್ಭದಲ್ಲಿ ಶ್ರೀ ಬಂಕಿಮಚಂದ್ರ - ಶ್ರೀ ವ್ಯಾಸರಾಯರವರ ಕೃಷ್ಣಚರಿತ್ರೆಯನ್ನು ಆಗಾಗ ನೆನಪಿಗೆ ತಂದುಕೊಂಡು ಆ ಗ್ರಂಥವನ್ನು ಎಲ್ಲರೂ ನೋಡಬೇಕೆಂದು ಬಿನ್ನಯಿಸಿದ್ದೇನೆ.

ಶ್ರೀಕೃಷ್ಣ ಎಂಬುದು ಒಂದು ಪ್ರಸಿದ್ಧರಹಸ್ಯ. ಹಿಂದೂ ಜನರು ಅದನ್ನು ಶ್ರದ್ಧೆಯಿಂದ ಅಂಗೀಕರಿಸಿದ್ದಾರೆ. ವಿಚಾರಮಾಡಹೊರಟವರು ವಿಸ್ಮಿತರಾಗಿದ್ದಾರೆ. ಶ್ರೀಕೃಷ್ಣವ್ಯಕ್ತಿ ಮನಸ್ಸಿಗೆ ರಮಣೀಯವಾಗಿ, ಆದರೂ ಬುದ್ಧಿಗೆ ಪೂರ್ತಿ ಅರ್ಥವಾಗದ್ದಾಗಿ ಉಳಿದುಕೊಂಡಿದೆ. ಅದರ ಮರ್ಮವೇನು?

ಪ್ರಸಿದ್ಧ ದಶಾವತಾರಗಳಲ್ಲಿ ಶ್ರೀಕೃಷ್ಣಾವತಾರದಂತೆ ಬುದ್ಧಿಪ್ರಯತ್ನಕ್ಕೆ ದುಸ್ಸಾಧ್ಯವಾಗಿರುವ ಅವತಾರ ಇನ್ನಾವುದೂ ಇಲ್ಲ. ಮತ್ಸ್ಯ-ಕೂರ್ಮ-ವರಾಹಾವತಾರಗಳು ಸ್ಪಷ್ಟವಾಗಿಯೇ ಮನುಷ್ಯೇತರಗಳು. ಅವು ಸಂಪೂರ್ಣ ಅದ್ಭುತಗಳು. ದೈವಾದ್ಭುತಗಳು ಹೇಗೆ ಬೇಕಾದರೂ ಇರಬಹುದು. ಮನುಷ್ಯನು ಅವುಗಳ ವಿಷಯದಲ್ಲಿ ವಿಸ್ಮಯವನ್ನೂ ಸಂಶಯವನ್ನೂ ಪಡಲು ಕಾರಣವಿಲ್ಲ. ಅವನ ವಿಸ್ಮಯಕ್ಕೂ ಸಂಶಯಕ್ಕೂ ಕಾರಣ ಬರುವುದು ಮಾನುಷಾವತಾರದ ವಿಷಯದಲ್ಲಿ. ಏಕೆಂದರೆ, ಮನುಷ್ಯನಿಗೆ ಮನುಷ್ಯಪ್ರಪಂಚದ ಪರಿಚಯ ಸಾಕ್ಷಾತ್ತಾಗಿರುತ್ತದೆ. ಮನುಷ್ಯನಲ್ಲಿ ಯಾವುದು ಸಾಧ್ಯ, ಯಾವುದು ಅಸಾಧ್ಯ, ಯಾವುದು ಸ್ವಾಭಾವಿಕ, ಯಾವುದು ಅಸ್ವಾಭಾವಿಕ ಎಂಬುದನ್ನು ಅವನು ಸ್ವಾನುಭವದಿಂದ ಊಹಿಸಿಕೊಳ್ಳಬಲ್ಲವನಾಗಿರುತ್ತಾನೆ. ಹೀಗೆ ಮತ್ಸ್ಯ ಕೂರ್ಮ-ವರಾಹಾವತಾರಗಳು ಮನುಷ್ಯವಿಚಾರಕ್ಕೆ ಹೊರಪಟ್ಟವಾಗಿರುತ್ತವೆ.

ನರಸಿಂಹಾವತಾರವು ಮನುಷ್ಯಾಂಶವನ್ನು ಕಿಂಚಿನ್ಮಾತ್ರ ಅಂಗೀಕರಿಸಿಕೊಂಡಿದೆಯಾದರೂ ಇಲ್ಲಿಯೂ ಹೆಚ್ಚು ಪ್ರಶ್ನೆ ಏಳಲಾರದು. ಏಕೆಂದರೆ, ಇದೂ ಸಹ ಅದ್ಭುತದ ಪ್ರಸಂಗ.

ವಾಮನಾವತಾರದ ಮಾತೂ ಅಷ್ಟೇ.

ಪರಶುರಾಮಾವತಾರದಲ್ಲಿ ನೀತಿ ಸಂಬಂಧದ ಪ್ರಶ್ನೆ ಉತ್ಕಟವಾಗಿಲ್ಲ. ಮಾತೃಹತ್ಯಾ ಪ್ರಸಂಗದಲ್ಲಿ ಏಳುವ ಪ್ರಶ್ನೆಗೆ ಒಂದಾನೊಂದು ಸಮಾಧಾನವು ಸಾಧ್ಯವಾಗಿದೆ. ಅದನ್ನು ಕೆಲವರಾದರೂ ಒಪ್ಪಬಹುದು.

ಇನ್ನು ಶ್ರೀರಾಮಾವತಾರವಾದರೋ ಸಂಪೂರ್ಣವಾಗಿ ಮಾನುಷ. ಮಹಾನೀತಿಪ್ರಶ್ನೆಗಳನ್ನೆಬ್ಬಿಸುವಂಥ ಪ್ರಕರಣಗಳು ಯಾವುವೂ ಇಲ್ಲಿಲ್ಲ. ವಾಲಿವಧೆಯ ಪ್ರಕರಣದಲ್ಲಿ ನೀತಿಪ್ರಶ್ನೆಗೆ ಅವಕಾಶ ಕಂಡರೂ ಅದು ಅಪರಿಹಾರ್ಯವಾದ ಪ್ರಶ್ನೆಯಲ್ಲ. ಒಂದಾನೊಂದು ಧರ್ಮಸೂಕ್ಷ್ಮದ ದೃಷ್ಟಿಯಿಂದ ಅದನ್ನೆದುರಿಸಲಿಕ್ಕಾಗುತ್ತದೆ.

ಇನ್ನು ಎಂಟನೆಯ ಅವತಾರವಾದ ಶ್ರೀಕೃಷ್ಣಮೂರ್ತಿಯದಾದರೋ ಸಂಪೂರ್ಣ ಮಾನುಷವಾಗಿರುವುದರ ಜೊತೆಗೆ ಅಮಾನುಷವೂ ಆಗಿದೆ. ಕೃಷ್ಣ ಚರಿತ್ರೆಯಲ್ಲಿ ನೀತಿಸಂದಿಗ್ಧತೆಗೆ ಅವಕಾಶಕೊಡುವ ಪ್ರಕರಣಗಳು ನಾಲ್ಕಾರಿವೆ. ಭಗವದವತಾರವು ಧರ್ಮೋದ್ಧಾರಕ್ಕಾಗಿ ಆಗತಕ್ಕದ್ದೆಂದು ಕೃಷ್ಣವಚನವೇ

ಇದೆ. ಕೃಷ್ಣಚರಿತೆಯನ್ನು ನೋಡಿದರೋ, ಎಷ್ಟೋ ಸಂದರ್ಭಗಳು ಧರ್ಮ ವಿರೋಧಿಗಳಾಗಿವೆ. ಈ ಅಸಾಮಂಜಸ್ಯವನ್ನು ಪರಿಹರಿಸುವುದು ಹೇಗೆ? ಕೃಷ್ಣನೇನು ಸಾಮಾನ್ಯ ಮನುಷ್ಯರಂತೊಬ್ಬನೆ? ಹಾಗಾದರೆ ಸಾಮಾನ್ಯ ಜನಕ್ಕೆ ಅನ್ವಯಿಸುವ ನೀತಿಸೂತ್ರಗಳನ್ನು ಅವನಿಗೆ ಅನ್ವಯಿಸಕೂಡದೆ? ಸಾಮಾನ್ಯ ನೀತಿಯು ಆತನಿಗೆ ಅನ್ವಯಿಸತಕ್ಕದ್ದಲ್ಲವಾದರೆ ಆತನ ಚರ್ಯೆ ಯನ್ನು ಹೇಗೆ ಸಮರ್ಥಿಸಲಾದೀತು? ಅಂಥವನು ಮನುಷ್ಯಜಾತಿಗೆ ಹೇಗೆ ಗುರುವೆನಿಸಿಯಾನು? ಯಾವುದು ಗರ್ಹಣೀಯವೆಂದೂ, ತ್ಯಾಜ್ಯವೆಂದೂ ಸಾಮಾನ್ಯ ಜನಕ್ಕೆ ಬೋಧೆಯಾಗಿದೆಯೋ ಅಂಥಾದ್ದನ್ನು ತ್ಯಜಿಸದೆ ಆಚರಿಸಿ ರುವವನನ್ನು ಮನುಷ್ಯಲೋಕವು ಹೇಗೆ ತಾನೇ ಪೂಜಿಸೀತು? ಅದು ಅಂಥವ ನನ್ನು ಏಕೆ ಪೂಜಿಸಬೇಕು? ಹೀಗೆಲ್ಲ ಹೊರಡುತ್ತದೆ ವಿಚಾರ ಸರಣಿ.

ಈ ಪ್ರಶ್ನಪರಂಪರೆ ನಮ್ಮ ಕಾಲದ್ದೇನೂ ಅಲ್ಲ; ಪುರಾತನವಾದದ್ದೇ. ಭಾಗವತದಲ್ಲಿಯೇ ಈ ಪ್ರಶ್ನೆಯನ್ನು ಪರೀಕ್ಷಿದ್ರಾಜನು ಕೇಳಿದ್ದಾನೆ (ಭಾಗವತ, ೧೦-೩೩). ಶುಕರು ಅದಕ್ಕೆ ಉತ್ತರ ಹೇಳಿ ದ್ದಾರೆ: ಶ್ರೀಕೃಷ್ಣನು ಆಕಾರದಲ್ಲಿ ಮನುಷ್ಯನಾದರೂ ಸ್ವಭಾವದಲ್ಲಿ "ಈಶ್ವರ"ನು. "ಈಶ್ವರ"ರಾದವರು ಲೋಕದ ಧರ್ಮವಿಧಿಗಳನ್ನು ಮೀರಿ ನಡೆದು ಆ ಮೂಲಕ ಧರ್ಮವನ್ನುಸ್ಥಾಪಿಸತಕ್ಕವರು—ಎಂದು ಮೊದಲಾಗಿ ವಿವರಣೆ ಹೇಳಿದ್ದಾರೆ. ಹೀಗೆ ಶ್ರೀಕೃಷ್ಣವಿಚಾರವು ಕೊಂಚ ಮಟ್ಟಿಗೆ ಸಾಮಾನ್ಯ ಜನದ ಲಕ್ಷಣದಿಂದ ಕೂಡಿದ್ದಾಗಿಯೂ ಇನ್ನು ಕೊಂಚ ಮಟ್ಟಿಗೆ ಸಾಮಾನ್ಯ ಜನದ ಮಟ್ಟವನ್ನು ದಾಟಿದ್ದಾಗಿಯೂ ಇದೆ. ಕೃಷ್ಣನ ವ್ಯಕ್ತಿತ್ವವು ಮಾನುಷ-ಅಮಾನುಷಗಳ ಮಿಶ್ರಣವಾಗಿದೆ. ಆದ್ದರಿಂದಲೇ ಅದರ ಕ್ಲಿಷ್ಟತೆ. ಈ ಕಾರಣದಿಂದಲೇ ಅದು ಬುದ್ಧಿವಿಚಾರಕ್ಕೆ ಸುಲಭವಾಗದೆ ಇದೆ.

ವಿಚಾರಕ್ಕೆ ಸಿಕ್ಕದಿದ್ದರೂ ಕೃಷ್ಣವ್ಯಕ್ತಿತ್ವವು ಶ್ರದ್ಧೆಗೆ ವಿಷಯವಾಗಿದೆ. ಶ್ರೀರಾಮಚರಿತ್ರೆಯಲ್ಲಿ ವಿಶ್ವಾಸವನ್ನಿಟ್ಟುಕೊಂಡಿರತಕ್ಕ ಜನ ಶ್ರೀಕೃಷ್ಣಚರಿತ್ರೆ ಯಲ್ಲಿಯೂ ಹಾಗೆಯೇ ಪರಿಪೂರ್ಣ ವಿಶ್ವಾಸವನ್ನಿಟ್ಟುಕೊಂಡಿದ್ದಾರೆ. ಆದದ್ದ ರಿಂದ ಕೃಷ್ಣಾವತಾರದ ವಿಶೇಷಲಕ್ಷಣವು ಜಿಜ್ಞಾಸಾರ್ಹವಾಗಿದೆ ಶ್ರೀರಾಮನ ಗುಣಾತಿಶಯಗಳು ನಮ್ಮ ಭಕ್ತಿಗೆ ಕಾರಣವಾಗಿ,ಭಕ್ತಿಯನ್ನು ಪೋಷಿಸುತ್ತವೆ.

ಶ್ರೀಕೃಷ್ಣನ ಗುಣಾತಿಶಯಗಳಲ್ಲಿಯಾದರೋ ನಮ್ಮ ಭಕ್ತಿಯನ್ನು ಪ್ರೋತ್ಸಾಹಿಸಬಲ್ಲವು ಯಾವುವು? ಇದು ವಿಚಾರ.

ಅಥವಾ ಭಕ್ತಿಗೂ (Faith) ವಿಚಾರಕ್ಕೂ (Rationalism) ಪರಸ್ಪರ ವಿರೋಧವೆಂದೇ ಭಾವಿಸಬೇಕೋ? ಏಕೆಂದರೆ, ವಿಚಾರವೆದ್ದ ಕಡೆ ನಮ್ಮ ಅನುಭವವೂ ಕಾರ್ಯಕಾರಣಸಾಮಂಜಸ್ಯವಿವೇಕವೂ ಅದರಿಂದ ಉಂಟಾದ ಅಂತರಂಗ ನಿರ್ಣಯವೂ ಸಮ್ಮತಿಸದೇ ಹೋದ ಪಕ್ಷದಲ್ಲಿ ಸಂದೇಹ ಉಳಿದು ಕೊಳ್ಳುತ್ತದೆ; ಭಕ್ತಿ ಅಷ್ಟುಮಟ್ಟಿಗೆ ಕುಂಠಿತವಾಗುತ್ತದೆ. ನಮ್ಮ ಕೃಷ್ಣಭಕ್ತಿ ಅವಿಚಾರದ್ದೆ ? ಅಂಧಶ್ರದ್ಧೆಯದೆ?

ಹೀಗೆ ಕೃಷ್ಣಾವತಾರವು ಸಾಮಾನ್ಯರಿಗೆ ಸಂಶಯವಿಸ್ಮಯಭೂಯಿಷ್ಠವಾಗಿದೆ. ಈ ವಿಚಾರದಲ್ಲಿ ಜಿಜ್ಞಾಸೆ ನಡಸಲು ಸಹಾಯ ಕೊಡುವ ಗ್ರಂಥ ಬಂಕಿಮಚಂದ್ರ ಚಟರ್ಜಿಯವರದು. ಈ ಅಮೂಲ್ಯ ಗ್ರಂಥವನ್ನು ಬಂಗಾಳಿಯಿಂದ ಕನ್ನಡಕ್ಕೆ ಅನುವಾದಮಾಡಿ ಉಪಕರಿಸಿರುವವರು ಶ್ರೀಮಾನ್ ಆರ್. ವ್ಯಾಸರಾಯರವರು.

೨. ಗ್ರಂಥಕರ್ತೃವಿಚಾರ

ಶ್ರೀಮಾನ್ ವ್ಯಾಸರಾಯರವರ ಜೀವಿತಕಾಲ ಕ್ರಿ. ಶ. ೧೮೮೧ರಿಂದ ೧೯೫೮ರ ವರೆಗೆ. ಅವರು ಬಡಗನಾಡು ಎಂಬ ಕನ್ನಡ ಬ್ರಾಹ್ಮಣ ಪಂಗಡಕ್ಕೆ ಸೇರಿದವರು. ಅವರ ಪೂರ್ವಿಕರು ಬೆಂಗಳೂರು ದಕ್ಷಿಣ ತಾಲ್ಲೂಕಿನ ರಾಮೋಹಳ್ಳಿಗೆ ಸೇರಿದವರು. ಅವರ ತಂದೆ ಶ್ರೀ ಆರ್. ನಂಜುಂಡಪ್ಪನವರು. ಅವರು ಸರಕಾರಿ ಕೆಲಸದಲ್ಲಿ ಕಛೇರಿ ಗುಮಾಸ್ತೆಯಾಗಿದ್ದು ಗುಡಿಬಂಡೆಗೆ ವರ್ಗವಾಗಿ ಅಲ್ಲಿದ್ದರೆಂದು ತಿಳಿದುಬರುತ್ತದೆ. ವ್ಯಾಸರಾಯರು ಹುಟ್ಟಿದ್ದು ಅಲ್ಲಿ. ಅವರ ತಾಯಿಯ ಹೆಸರು ಸಾವಿತ್ರಮ್ಮನವರು. ನಂಜುಂಡಪ್ಪನವರ ಐವರು ಮಕ್ಕಳಲ್ಲಿ ವ್ಯಾಸರಾಯರು ನಾಲ್ಕನೆಯವರು. ಬಾಲ್ಯದಲ್ಲಿಯೇ ಅವರು ಕರ್ತವ್ಯನಿಷ್ಠರು, ವಿವೇಕಿಗಳು ಎಂಬ ಸೂಚನೆ ತೋರುತ್ತಿತ್ತೆಂದು ಅವರ ಬಾಲ್ಯವನ್ನು ಕಂಡವರು ಹೇಳಿದ್ದಾರೆ.

ವ್ಯಾಸರಾಯರ ವಿದ್ಯಾಭ್ಯಾಸ ಗುಡಿಬಂಡೆಯಲ್ಲಿ ಸಾಧ್ಯವಿದ್ದಷ್ಟು ಸಾಗಿ, ಅವರು ಮುಂದಿನ ವಿದ್ಯಾರ್ಜನೆಗಾಗಿ ಬೆಂಗಳೂರಿಗೆ ಬಂದು ವೆಸ್ಲಿಯನ್

ಮಿಷನ್ ಹೈಸ್ಕೂಲನ್ನು ಸೇರಿದರು. ಅಲ್ಲಿ ಉತ್ತೀರ್ಣರಾಗಿ ಸೆಂಟ್ರಲ್ ಕಾಲೇಜನ್ನು ಸೇರಿ ಭೂಗರ್ಭಶಾಸ್ತ್ರವನ್ನು (Geology) ವಿಶೇಷವಾಗಿ ವ್ಯಾಸಂಗ ಮಾಡಿ, ೧೯೦೪ರಲ್ಲಿ ಬಿ. ಎ. ಪದವಿಯನ್ನು ಸಂಪಾದಿಸಿದರು. ಆ ಸಮಯದಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಅದೇ ಶಾಸ್ತ್ರದ ವಿದ್ಯಾರ್ಥಿಗಳಲ್ಲಿ ಗಣ್ಯರಾದವರ ಪೈಕಿ ಸರ್ ಮಿರ್ಜಾ ಇಸ್ಮೈಯಿಲ್ ಅವರೊಬ್ಬರು.

ಆಗ ಸೆಂಟ್ರಲ್ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರದ ಇಲಾಖೆಯಲ್ಲಿ ಮುಖ್ಯ ಪ್ರೊಫೆಸರಾಗಿದ್ದವರು ವಿ. ಎಸ್. ಸಾಂಬಶಿವ ಅಯ್ಯರ್ ಎಂಬ ಗಣ್ಯರು. ಅವರು ತಮ್ಮ ಶಾಸ್ತ್ರದಲ್ಲಿ ಆಗಿನ ಕಾಲಕ್ಕೆ ಪೂರ್ಣಪಂಡಿತರಾಗಿದ್ದದ್ದಲ್ಲದೆ ದೇಶಾಭಿಮಾನಿಗಳೂ, ಧರ್ಮಿಷ್ಠರೂ ಆಗಿದ್ದರು. ನಮ್ಮ ದೇಶದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ ದೇಶದ ಸಂಪದಭಿವೃದ್ಧಿಯನ್ನು ಮುಂದುವರಿಸಬೇಕೆಂಬ ಕುತೂಹಲ ಅವರಲ್ಲಿ ತೀವ್ರವಾಗಿತ್ತು. ಅವರು ಸ್ವದೇಶೀವಾದಿಗಳು. ಭೂಗರ್ಭದಲ್ಲಿ ಅಡಗಿರುವ ಖನಿಜಸಂಪತ್ತನ್ನು ಉಪಯೋಗಕ್ಕೆ ತಂದುಕೊಡಬೇಕೆಂಬ ಉತ್ಸಾಹ ಅವರಲ್ಲಿ ಬಲವಾಗಿತ್ತು. ವ್ಯಾಸರಾಯರ ಶಾಸ್ತ್ರನಿಪುಣತೆಯನ್ನು ಕಂಡು ಸಾಂಬಶಿವ ಅಯ್ಯರವರು ಸಂತೋಷಪಟ್ಟು ತಕ್ಕ ಕಾರ್ಯಾವಕಾಶವನ್ನು ಶಿಷ್ಯನಿಗೆ ದೊರಕಿಸಿಕೊಡಬೇಕೆಂದು ಮನಸ್ಸುಮಾಡಿದರು. ಅದಕ್ಕೆ ೧೯೦೫ರಲ್ಲಿ ಪ್ರಥಮಾವಕಾಶ ದೊರೆಯಿತು. ಮೈಸೂರು ಸರಕಾರದ ಜಿಯಲಾಜಿಕಲ್ ಇಲಾಖೆಯಲ್ಲಿ ಅಪ್ರೆಂಟಿಸ್(ಉಮೇದುವಾರ)ಆಗಿ ನೇಮಕ ಮಾಡಿಸಿದರು. ಅಲ್ಲಿಂದ ಮುಂದಕ್ಕೆ ವ್ಯಾಸರಾಯರ ಏಳಿಗೆ ಸುಲಭವಾಯಿತು.

ವ್ಯಾಸರಾಯರು ದೇಶದ ಅನೇಕ ಯಂತ್ರೋದ್ಯಮ ಸಂಸ್ಥೆಗಳಿಗೆ ಸೇರಿ ಸೇವೆ ಸಲ್ಲಿಸಿದರು. ಬೆಂಗಳೂರಿನ ಪೆನಿನ್ಸುಲಾರ್ ಮಿನರಲ್ ಕಂಪನಿಯಲ್ಲಿ ಖನಿಜಶೋಧಕರಾಗಿದ್ದರು. ಸಿಂಧುವಳ್ಳಿಯ ಪ್ರದೇಶದಲ್ಲಿ ಕ್ರೋಮ್ ಖನಿಜ ಸಂಪತ್ತು ಅಡಗಿರುವುದನ್ನು ಕಂಡುಹಿಡಿದರು. ೧೯೦೭ರಲ್ಲಿ ತಾತಾ ಸನ್ಸ್ ಕಂಪನಿಯ ಜಿಯಾಲಜಿಸ್ಟ್ ಆಗಿ ಕೆಲಸ ಮಾಡಿದರು. ೧೯೦೮ರಿಂದ ೧೯೧೭ರ ವರೆಗೆ ತಾತಾ ಐರನ್ ಅಂಡ್ ಸ್ಟೀಲ್ ಕಂಪನಿಯ ಜಿಯಾಲಜಿಸ್ಟ್ ಮತ್ತು ಭೂಗರ್ಭ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದರು. ೧೯೧೭ರಲ್ಲಿ ಮೈಸೂರು ಸರಕಾರದ ಆಹ್ವಾನದಂತೆ ಇಂಡಸ್ಟ್ರಿಯಲ್ ಜಿಯಾಲಜಿಸ್ಟ್ ಆಗಿ, ೧೯೨೧ರ ವರೆಗೆ ಬಹು ಶ್ರದ್ಧೋತ್ಸಾಹಗಳಿಂದ ಕೆಲಸಮಾಡಿದರು. ಮೈಸೂರಿನಲ್ಲಿ

ಪಿಂಗಾಣಿ (ಪೋರ್ಸ್‌ಲೆನ್) ಸಾಮಾನುಗಳ ತಯಾರಿಕೆಗೆ ತಳಪಾಯ ಹಾಕಿದವರು ಇವರೇ. ಹಾಗೆಯೇ ಮೈಸೂರು ಸಂಸ್ಥಾನದಲ್ಲಿ ಅನೇಕ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲವಾಗುವ ಸಂಪನ್ಮೂಲಗಳನ್ನು ಕುರಿತು ವಿವರಗಳನ್ನು ಸಂಗ್ರಹಿಸಿಕೊಟ್ಟರು. ಕಲ್ಕತ್ತಾದ ದಾಲ್‌ಚಂದ್ ಬಹದೂರ್ ಸಿಂಗ್ ಎಂಬ ಸಂಸ್ಥೆಯು ಇವರ ಕಾರ್ಯಶ್ರದ್ಧೆಯನ್ನೂ ದಕ್ಷತೆಯನ್ನೂ ತಿಳಿದು ತಮ್ಮ ಕಲ್ಲಿದ್ದಲು ತಯಾರಿಕೆಯ ಸಂಸ್ಥೆಯಲ್ಲಿ ಭೂಗರ್ಭಶಾಸ್ತ್ರದ ಸಲಹೆಕಾರರಾಗಿ (ಕನ್ಸಲ್ಟಿಂಗ್ ಜಿಯಾಲಜಿಸ್ಟ್) ಬರಲು ಆಹ್ವಾನಕೊಟ್ಟರು. ಸೆಂಟ್ರಲ್‌ಪ್ರಾವಿನ್ಸಿನ ಜಗರಖಂಡ ಕಲ್ಲಿದ್ದಲು ಸಂಸ್ಥೆಯ ಸಲಹೆಕಾರರಾಗಿ, ಕೋಯ ಮತ್ತು ಸರಗೂಜಾ ಸಂಸ್ಥಾನಗಳಲ್ಲಿ ಅಡಗಿದ್ದ ಕಲ್ಲಿದ್ದಲ ಅದುರನ್ನು ಪರೀಕ್ಷಿಸಿ, ಅಲ್ಲಿ ಉತ್ಪಾದನೆಯ ಕಾರ್ಯಕ್ಕೆ ವಿಪುಲವಾಗಿ ಅವಕಾಶವಿದೆಯೆಂದು ಸಲಹೆಮಾಡಿದರು. ಬೆಳಗಾವಿ ಜಿಲ್ಲೆಯ ಸಾವಂತವಾಡಿಯಲ್ಲಿ ಬಾಕ್ಸೈಟ್ ಲೋಹ ಮೂಲವಿರುವುದನ್ನು ಕಂಡುಹಿಡಿದು ಅದರ ಉತ್ಪಾದನೆಗೆ ನೆರವಾದರು. ಮೈಸೂರು ಸರಕಾರದ ಸಹಾಯದಿಂದ ಅಲ್ಯೂಮಿನಿಯಂ ಕಾರ್ಖಾನೆಯೊಂದನ್ನು ಆಗಮಾಡಿಸುವುದಕ್ಕೂ ಪರಿಶ್ರಮ ಮಾಡಿದರು. ಹಿರಣ್ಯಕೇಶಿ ಹೈಡ್ರೋ-ಎಲೆಕ್ಟ್ರಿಕ್ ಪ್ರಾಜೆಕ್ಟ್ ಎಂಬ ವಿದ್ಯುದುತ್ಪಾದನೆಯ ಯೋಜನೆಗೆ ಸಂಬಂಧಿಸಿದ ಪ್ರಾರಂಭ ಕಾರ್ಯ ನಡೆದದ್ದು ವ್ಯಾಸರಾಯರವರಿಂದ.

ಹೀಗೆ ವ್ಯಾಸರಾಯರು ದೇಶದಲ್ಲಿ ಹತ್ತಾರು ಕಡೆ ಅನೇಕ ವರ್ಷಕಾಲ ಕೆಲಸಮಾಡಿ ವಿಶ್ರಾಂತಿಗಾಗಿ ಬೆಂಗಳೂರಿನಲ್ಲಿ ನೆಲಸಿದರು. ಆಗ ಸರ್ ಮಿರ್ಜಾ ಇಸ್ಮೈಯಿಲ್ ಅವರು ದಿವಾನರಾಗಿದ್ದರು : ಅವರ ಹಿಂದಿನ ಸಹಪಾಠಿಗಳಾಗಿದ್ದ ವ್ಯಾಸರಾಯರ ಅನುಭವದಿಂದ ಮೈಸೂರಿಗೆ ಆಗಬೇಕಾದ ಪ್ರಯೋಜನಗಳು ಇನ್ನೂ ಇವೆಯೆಂದು ಮಿರ್ಜಾ ಅವರು ಮತ್ತೆ ವ್ಯಾಸರಾಯರ ಸಲಹೆ ಸಹಾಯಗಳನ್ನು ಪಡೆದರು. ೧೯೩೬-೩೭ ರಲ್ಲಿ ವ್ಯಾಸರಾಯರ ಸಲಹೆಯಂತೆ ಕೆಲವು ಹೊಸ ಉದ್ಯಮಗಳು ಪ್ರಾರಂಭವಾಗಲು ಅನುಕೂಲವಾಯಿತು : ಸ್ಟೋನ್‌ವೇರ್ ಪೈಪುಗಳ ನಿರ್ಮಾಣ, ಕಾರ್ಬನ್ ಡೈ ಆಕ್ಸೈಡಿನ ತಯಾರಿಕೆ, ಕಾರ್ಬನ್ ಎಲೆಕ್ಟ್ರೋಡುಗಳ ತಯಾರಿಕೆ —ಇತ್ಯಾದಿ. ಯಶವಂತಪುರದಲ್ಲಿ ಮೈಸೂರು ಎಲೆಕ್ಟ್ರೋ–ಕೆಮಿಕಲ್ ವರ್ಕ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಲು ಕಾರಣರಾದವರಲ್ಲಿ ವ್ಯಾಸರಾಯರು

ಮುಖ್ಯರು. ಇವರು ಸ್ಥಾಪಿಸಿದ ಮೈಸೂರು ಸ್ಟೋನ್‌ವೇರ್ ಪೈಪ್ಸ್ ಅಂಡ್ ಪಾಟರೀಸ್ ಸಂಸ್ಥೆ ತುಂಬ ಯಶಸ್ಸನ್ನು ಸಂಪಾದಿಸಿದೆ. ತಂದೆ ಪ್ರಾರಂಭಿಸಿದ ಕಾರ್ಯವನ್ನು ಮಗ, ಶ್ರೀ ಆರ್. ವಿ. ಪ್ರಭಾಕರರಾಯರು, ಈಗ ಬಹು ದಕ್ಷತೆಯಿಂದ ಮುಂದುವರಿಸುತ್ತಿದ್ದಾರೆ.

ನನಗೆ ವ್ಯಾಸರಾಯರವರ ಪ್ರತ್ಯಕ್ಷ ದರ್ಶನವಾಗುವುದಕ್ಕೆ ಎಷ್ಟೋ ಕಾಲದ ಹಿಂದಿನಿಂದಲೂ ಅವರ ವ್ಯಕ್ತಿಮಹತ್ತ್ವ ತಿಳಿದಿತ್ತು. ಅವರ ಉದಾತ್ತಭಾವಗಳನ್ನೂ ಅವರ ಸಾಹಿತ್ಯ ಪ್ರೇಮವನ್ನೂ ಕುರಿತು ನಾಲ್ಕಾರು ಮಂದಿ ಸ್ನೇಹಿತರು ನನಗೆ ತಿಳಿವಳಿಕೆ ಕೊಟ್ಟಿದ್ದರು. ನಾನು ಅವರನ್ನು ಮೊದಲು ಕಂಡದ್ದು ಸುಮಾರು ಇಪ್ಪತ್ತೈದು ವರ್ಷಗಳಿಗೆ ಹಿಂದೆ ಇರ ಬಹುದು. ಅದು ನನಗೆ ಪೂಜ್ಯರೂ ಅಭಿಮಾನಿಗಳೂ ಆಗಿದ್ದ ನವರತ್ನ ರಾಮರಾಯರವರ ಮನೆಯಲ್ಲಿ. ರಾಮರಾಯರೂ ವ್ಯಾಸರಾಯರೂ ಬೀಗರು ; ಅದಕ್ಕಿಂತ ಹೆಚ್ಚಾಗಿ ಸ್ನೇಹಿತರು. ವ್ಯಾಸರಾಯರನ್ನು ನನಗೆ ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ರಾಮರಾಯರು ಆಡಿದ ಮಾತು ಗಳು ಅವರ ಪ್ರೇಮವನ್ನೂ ಗೌರವಭಾವವನ್ನೂ ವ್ಯಕ್ತಪಡಿಸಿದುವು. ಅವರಿಬ್ಬ ರಿಗೂ ಇದ್ದ ಮೈತ್ರಿಯು ನನ್ನ ಮನಸ್ಸಿನಲ್ಲಿ ಒಂದು ಚೋದ್ಯವನ್ನುಂಟು ಮಾಡಿತು.

ರಾಮರಾಯರು ರಸಿಕರು; ವ್ಯಾಸರಾಯರು ವ್ರತಿಗಳು. ರಾಮರಾಯರು ವಾಗ್ವಿಸ್ತಾರವುಳ್ಳವರು; ವ್ಯಾಸರಾಯರು ಮಿತಭಾಷಿಗಳು. ರಾಮರಾಯರು ವಿವಿಧವೂ ವಿಪುಲವೂ ಆದ ಸಾಹಿತ್ಯದಲ್ಲಿ ಪರಿಶ್ರಮ ಮಾಡಿದವರು; ವ್ಯಾಸ ರಾಯರ ಸಾಹಿತ್ಯದೃಷ್ಟಿಯಲ್ಲಿ ವಿಪುಲತೆಗಿಂತ ತತ್ತ್ವಕುತೂಹಲ ಹೆಚ್ಚಾಗಿತ್ತು. ರಾಮರಾಯರ ವ್ಯವಸಾಯ ಕ್ಷೇತ್ರಗಳು ಅನೇಕವಾಗಿದ್ದುವು; ವ್ಯಾಸರಾಯರು ತಮ್ಮ ಕ್ಷೇತ್ರವನ್ನು ಮಿತಪಡಿಸಿಕೊಂಡಿದ್ದರು. ಹೀಗೆ ಅವರಿಬ್ಬರ ಮನೋ ವೃತ್ತಿಗಳು ಬೇರೆ ಬೇರೆ ಜಾತಿಯವಾಗಿದ್ದರೂ ಅವರ ಪರಸ್ಪರ ಸ್ನೇಹವು ಅವರ ಸೈಜವಾದ ಉದಾರತೆಯನ್ನೂ ಸಹಾನುಭವಗುಣವನ್ನೂ ತೋರಿಸುತ್ತದೆ.

ವ್ಯಾಸರಾಯರು ಬಂಗಾಳಾ ಸೀಮೆಯಲ್ಲಿ ಪ್ರವಾಸ ಮಾಡಿದಾಗ ಆ ಜನದ ಸಾಹಿತ್ಯದಿಂದ ತಮ್ಮ ಸ್ವಜನದ ಸಾಹಿತ್ಯಕ್ಕೆ ಸಾಧ್ಯವಾದದ್ದನ್ನು ಸಂಪಾದಿಸಿಕೊಳ್ಳಬೇಕೆಂದು ಅವರಲ್ಲುದಿಸಿದ ಆಲೋಚನೆಯು ಅವರ ಸ್ವಭಾವ

ವನ್ನು ಚೆನ್ನಾಗಿ ಪ್ರಕಾಶಪಡಿಸುತ್ತದೆ. ನೂರಾರು ಮಂದಿ ವಿದ್ಯಾವಂತರಾದ ಕನ್ನಡಿಗರು ಬಂಗಾಳದಲ್ಲಿಯೂ, ಮಹಾರಾಷ್ಟ್ರದಲ್ಲಿಯೂ, ಆಂಧ್ರದಲ್ಲಿಯೂ, ತಮಿಳುನಾಡಿನಲ್ಲಿಯೂ ಹತ್ತಾರು ವರ್ಷ ಪ್ರವಾಸಮಾಡಿದ್ದಾರೆ. ಆದರೆ ಆಯಾ ಪ್ರದೇಶಗಳ ಸಾಹಿತ್ಯದಿಂದ ಸ್ವಭಾಷೆಗೆ ಲಾಭ ದೊರಕಿಸಬೇಕೆಂಬ ಯೋಚನೆ ಬಂದವರು ನಾಲ್ಕಾರು ಮಂದಿ ಕೂಡಾ ಇಲ್ಲ. ಹಾಗೆಯೇ ಬಂಗಾಳಿಗಳೂ, ಗುಜರಾತಿಗಳೂ, ಮಹಾರಾಷ್ಟ್ರರೂ, ತಮಿಳರೂ ನೂರಾರು ಮಂದಿ ಕನ್ನಡ ದೇಶದಲ್ಲಿ ಎಷ್ಟೋ ವರ್ಷಗಳಿಂದ ನೆಲಸಿಕೊಂಡಿದ್ದಾರೆ. ಕನ್ನಡಸಾಹಿತ್ಯದಲ್ಲಿ ಬೆಲೆಯುಳ್ಳದ್ದೇನಿದೆ ಎಂದು ವಿಚಾರಿಸಿದವರು ಅವರಲ್ಲಿ ನಾಲ್ಕು ಮಂದಿ ಕೂಡಾ ಇಲ್ಲ. ಈ ಸಂಕುಚಿತ ಸ್ವಭಾವದಿಂದ ವಿಲಕ್ಷಣರಾದವರು ವ್ಯಾಸರಾಯರು. ಅವರು ಎಲ್ಲಿದ್ದರೂ ತಮ್ಮ ಜನದ, ತಮ್ಮ ಭಾಷೆಯ ಚಿಂತನೆ ಮಾಡುತ್ತಿದ್ದವರು.

ಅವರು ಬಂಗಾಳಿಯಿಂದ ಆರಿಸಿಕೊಂಡ ಗ್ರಂಥಗಳು ಇವು —

೧. ವಿವಾಹಮಂಗಳ
೨. ದುರ್ಗಾದಾಸ
೩. ಪ್ರತಾಪಸಿಂಹ
೪. ಬ್ರಾಹ್ಮಣರ ಹುಡುಗಿ
೫. ಗುಲ್ಪಗುಚ್ಛ
೬. ಶ್ರೀಕೃಷ್ಣ ಚರಿತ್ರೆ

ಇವೆಲ್ಲ ಗಂಭೀರಸ್ವಭಾವವುಳ್ಳ ಗ್ರಂಥಗಳು. ನಾವೆಲ್ ಕಥೆಗಳು ಕೂಡ ಮನೋರಂಜಕ ಮಾತ್ರವಲ್ಲ; ದೇಶಪ್ರೇಮ ಪ್ರಚೋದಕವಾದವು, ಉತ್ತಮ ಜೀವನದರ್ಶನವನ್ನು ತೋರಿಸತಕ್ಕವು. ''ವಿವಾಹಮಂಗಳ'' ಎಂಬ ಗ್ರಂಥವು ಆ ಸಂಸ್ಕಾರದಲ್ಲಿ ಪ್ರಯುಕ್ತವಾಗುವ ಮಂತ್ರಗಳನ್ನು ಕೊಟ್ಟು, ಅವುಗಳ ಅರ್ಥವನ್ನು ವಿವರಿಸಿ,ಆ ಸಂಸ್ಕಾರವು ಎಷ್ಟು ಪವಿತ್ರವಾದದ್ದು, ಅದರ ಜವಾಬ್ದಾರಿ ಎಷ್ಟು ಗುರುತರವಾದದ್ದು– ಎಂಬುದನ್ನು ಮನಸ್ಸಿಗೆ ತರುತ್ತದೆ.

ಶ್ರೀಕೃಷ್ಣಚರಿತ್ರೆಯ ಸ್ವಭಾವವೆಂಥಾದ್ದೆಂದು ಮೇಲೆ ಹೇಳಿದೆ. ಇಂಥಾ ಗ್ರಂಥವನ್ನು ವ್ಯಾಸರಾಯರು ಭಾಷಾಂತರಕ್ಕಾಗಿ ಆರಿಸಿಕೊಂಡದ್ದು ಅವರಿಗೆ ನೈಜವಾಗಿದ್ದ ತತ್ತ್ವಕುತೂಹಲವನ್ನು ಪ್ರಕಾಶಪಡಿಸುತ್ತದೆ.

ವ್ಯಾಸರಾಯರು ತತ್ತ್ವನಿಷ್ಠರು. ಅವರು ವ್ಯಕ್ತಿಜೀವನದಲ್ಲಿ ಪರಿಶುದ್ಧರಾಗಿದ್ದವರು, ಪ್ರಾಮಾಣಿಕರು, ಉದಾರಿಗಳು. ೧೯೫೮ರಲ್ಲಿ ಗೋಖಲೆ ಸಂಸ್ಥೆಯ ಬಗ್ಗೆ ಸಹಾಯವನ್ನು ಬೇಡಲು ನಾನು ಅವರ ಮನೆಗೆ ಹೋಗಿದ್ದೆ. ಅನಾರೋಗ್ಯದಿಂದ ಅವರು ಮೆತ್ತಗಾಗಿದ್ದರು. ಶಕ್ತಿ ಕುಗ್ಗಿತ್ತು. ದೇಹದಲ್ಲಿ ಕೊಂಚ ಬಾಧೆಯೂ ಇತ್ತೆಂದು ತೋರುತ್ತದೆ. ಆದರೂ ನಗುಮುಖದಿಂದ ನನ್ನನ್ನು ಬರಮಾಡಿಕೊಂಡು ಮಾತನಾಡಿಸಿದರು. ನನ್ನ ಉದ್ದೇಶವನ್ನು ವಿವರಿಸಲು ನಾನು ಬಹು ಮಾತುಗಳನ್ನಾಡಬೇಕಾಗಿರಲಿಲ್ಲ. ಪ್ರಸ್ತಾವವನ್ನೆತ್ತಿದ ಕೂಡಲೇ ಉದ್ದೇಶವನ್ನು ಗ್ರಹಿಸಿ ಉದಾರವಾಗಿ ಸಹಾಯಕೊಟ್ಟರು. ಅದಕ್ಕಿಂತ ಹೆಚ್ಚಾಗಿ ತಮ್ಮ ಮೆಚ್ಚಿಕೆಯನ್ನು ಹೇಳಿ ತಮಗೆ ಆರೋಗ್ಯಹಿಂತಿರುಗಿದ ಮೇಲೆ ಮತ್ತೂ ಸಹಾಯ ಮಾಡಬೇಕೆಂದು ತಾವು ಉದ್ದೇಶಿಸಿರುವುದನ್ನು ಸ್ಪಷ್ಟಪಡಿಸಿದರು. ಅಲ್ಲಿಂದ ಕೆಲವು ತಿಂಗಳುಗಳೊಳಗಾಗಿ ವಿಧಿ ಅವರನ್ನು (ತಾ|| 24-6-58) ನಮ್ಮಿಂದ ಅಗಲಿಸಿತು.

ಅವರಿಂದ ಉಪಕೃತರಾದವರು ಹತ್ತಾರು ಮಂದಿ. ಅಂಥವರಲ್ಲಿ ಕೆಲವರನ್ನು ನಾನು ಬಲ್ಲೆ. ಬಹುಮಂದಿ ವಿದ್ಯಾರ್ಥಿಗಳನ್ನು ಮನೆಯಲ್ಲಿರಿಸಿಕೊಂಡು ಪೋಷಿಸಿ ಅವರು ಲೋಕದಲ್ಲಿ ಯೋಗ್ಯ ಜೀವನ ನಡಸುವಂತೆ ಅನುಕೂಲಪಡಿಸಿದರು. ಹೀಗೆ ವ್ಯಾಸರಾಯರಿಂದ ಸಹಾಯಪಡೆದ ಜನರ ಹೆಸರುಗಳು ಅವರ ಮಕ್ಕಳಿಗೇ ಪೂರ್ತಿಯಾಗಿ ಗೊತ್ತಿಲ್ಲ. ಇತರರು ನನಗೆ ಆ ಸಂಗತಿಗಳನ್ನು ಹೇಳಿದ್ದಾರೆ. ಹೀಗೆ ಗುಪ್ತಧರ್ಮ ನಡಸುತ್ತಿದ್ದವರು ವ್ಯಾಸರಾಯರು.

ತಾವು ವ್ಯಾಸಂಗ ಮಾಡಿದ ಶಾಸ್ತ್ರದಲ್ಲಿ ನಿರಂತರವಾದ ಆಸಕ್ತಿ, ಜೀವನ ತತ್ತ್ವದ ವಿಷಯದಲ್ಲಿ ಶ್ರದ್ಧಾಳುತೆ, ಲೋಕವಿಷಯದಲ್ಲಿ ಸಹಾಯತತ್ಪರತೆ, ಸ್ವಂತ ಜೀವನದಲ್ಲಿ ಪ್ರಾಮಾಣಿಕತೆ, ಪರಿಶುದ್ಧಿ, ಕಾರ್ಯದಕ್ಷತೆ–ಇವು ವ್ಯಾಸರಾಯರ ಗುಣವಿಶೇಷಗಳು.

೩. ಕೃಷ್ಣತತ್ತ್ವವಿಚಾರ

ಶ್ರೀಕೃಷ್ಣಚಾರಿತ್ರವಿಚಾರದಲ್ಲಿ ಎರಡು ಬಗೆಯ ಸಮಾಧಾನಗಳು ಸಾಧ್ಯ ತೋರುತ್ತವೆ.

೧) ಗೋಪಿಕಾ ರಾಧಿಕಾ ಮೊದಲಾದ ಪ್ರಸಂಗದ ಪ್ರಣಯಕಥೆಗಳು ಕೇವಲ ಕಲ್ಪನೆಗಳು, ವಾಸ್ತವಗಳಲ್ಲ. ಮನೋರಂಜನೆಗಾಗಿ ಕವಿಗಳು ಅವು

ಗಳನ್ನು ಬಗೆಬಗೆಯಾಗಿ ಕಟ್ಟಿ ವರ್ಣಿಸಿದ್ದಾರೆ. ಆ ಕಥೆಗಳು ಗೀತಾಚಾರ್ಯ ನಿಗೆ ಸಂಬಂಧಪಟ್ಟವಲ್ಲ–ಎಂದು ಒಂದು ಸಮಾಧಾನ. ಈ ದೃಷ್ಟಿಯನ್ನಿರಿಸಿ ಕೊಂಡರೆ ಪ್ರಣಯಲೀಲೆಯ ಭಾಗವನ್ನೆಲ್ಲ ಸುಳ್ಳೆಂದು ತಳ್ಳಿಹಾಕ ಬೇಕಾಗುತ್ತದೆ.

೨) ಆ ಲೀಲೆಗಳು ಮಹಾಪುರುಷನೊಬ್ಬನ ಅದ್ಭುತಚರ್ಯೆಗಳು, ಅವು ಸಾಮಾನ್ಯಮನುಷ್ಯನಿಗೆ ಅನ್ವಯಿಸತಕ್ಕವಲ್ಲ. ಕೆಲವು ವಿಶೇಷ ಜಾತಿಯ ಕಾಮುಕರಿಗೆ ಅವರ ವ್ಯಾಧಿಯ ಪರಿಹಾರಕ್ಕಾಗಿ ಆ ಮಹಾಪುರುಷನು ಒಂದು ಲೋಕೋತ್ತರವಾದ ಚಿಕಿತ್ಸಾವಿಧಾನವನ್ನು ಪ್ರಯೋಗಮಾಡಿದನು. ಮಾನುಷ ವ್ಯಕ್ತಿಯಲ್ಲಿ ಕಾಮವು ಒಂದು ಅನಿವಾರ್ಯವಾದ ಶಕ್ತಿ. ಅದು ಎಷ್ಟೋ ವೇಳೆ ಅತಿರೇಕಕ್ಕೆ ಬಂದು ಅದಮ್ಯವಾಗುತ್ತದೆ. ಅಂಥಾ ವಿಶೇಷ ಸಂದರ್ಭಗಳಿಗೆ ತಕ್ಕ ಪ್ರತಿಕ್ರಿಯೆಯನ್ನು ಅದ್ಭುತ ಮಹಿಮನಾದ ಕೃಷ್ಣನು ತೋರಿಸಿದ್ದಾನೆ. ಯಾರು ಅಂಥಾ ಅದ್ಭುತ ಮಹಿಮರೋ – ಭಾಗವತಕಾರನ ಭಾಷೆಯಲ್ಲಿ ಯಾರು ಅಂಥಾ "ಈಶ್ವರ"ರೋ– ಅಂಥವರು ಮಾತ್ರ ಆ ಚರ್ಯೆಗೆ ಅಧಿಕಾರಿ ಗಳು. ಮಿಕ್ಕವರಲ್ಲಿ ಆ ಚರ್ಯೆ ದೋಷವಾಗುತ್ತದೆ. ಇದು ಎರಡನೆಯ ಸಮಾಧಾನ.

ಬಂಕಿಮಚಂದ್ರರು ಈ ಎರಡರಲ್ಲಿ ಮೊದಲನೆಯ ಮಾರ್ಗವನ್ನು ಹಿಡಿ ದಿದ್ದರೆಂದು ತೋರುತ್ತದೆ. ಬಂಕಿಮಚಂದ್ರರು ಮಹಾ ದೈವಭಕ್ತರು. ಅವರು ಹೇಗೆ ಕಲ್ಪನಪ್ರತಿಭೆಯುಳ್ಳವರಾಗಿದ್ದರೋ ಹಾಗೆಯೇ ತತ್ತ್ವನಿಷ್ಠರೂ ಆಗಿ ದ್ದರು. ಅವರನ್ನು ಕುರಿತು ಪ್ರೊ|| ಎ. ಆರ್. ಕೃಷ್ಣಶಾಸ್ತ್ರಿಗಳವರು ಬರೆದಿರುವ ಕನ್ನಡ ಗ್ರಂಥವು ಎಲ್ಲರೂ ಓದತಕ್ಕದ್ದಾಗಿದೆ. ವಿಷಯನಿರೂಪಣೆಯಲ್ಲಿಯೂ ಶೈಲಿಯ ಸರಳತೆಯಲ್ಲಿಯೂ ವಾಕ್ಪ್ರಾಮಾಣಿಕತೆಯಲ್ಲಿಯೂ ಶ್ರೀಮಾನ್ ಕೃಷ್ಣಶಾಸ್ತ್ರಿಗಳವರ ಲೇಖನ ಆದರ್ಶಪ್ರಾಯವಾಗಿದೆ. ಈ "ಶ್ರೀಕೃಷ್ಣಚರಿತ್ರೆ" ಗ್ರಂಥವನ್ನು ಓದುವ ಮಹಾಶಯರು ಶ್ರೀಕೃಷ್ಣಶಾಸ್ತ್ರಿಗಳ "ಬಂಕಿಮಚಂದ್ರ" ಗ್ರಂಥವನ್ನೂ ಓದಬೇಕೆಂದು ಬಿನ್ನಯಿಸುತ್ತೇನೆ.

ವಿಷ್ಣುಪುರಾಣ, ಹರಿವಂಶ, ಭಾಗವತ, ಗೀತಗೋವಿಂದ (ಜಯದೇವ), ಕೃಷ್ಣಕರ್ಣಾಮೃತ (ಲೀಲಾಶುಕ) ಮೊದಲಾದ ಪುರಾಣಗಳೂ ಕಾವ್ಯಗಳೂ

ಸಂಪೂರ್ಣವಾಗಿ ಸುಳ್ಳಿನ ಕಂತೆಯೆಂದು ತಳ್ಳಿಹಾಕುವುದು ಕಷ್ಟವೆಂದು ನನಗೆ ತೋರುತ್ತದೆ. ಈ ನಾನಾ ಗ್ರಂಥಗಳನ್ನು—ಅದರಲ್ಲಿಯೂ ಮೊದಲ ಮೂರನ್ನು ನಮ್ಮ ಜನ ಬಹುಕಾಲದಿಂದ ಪೂಜ್ಯಗಳೆಂದು ನಂಬಿಕೊಂಡು ಬಂದಿದ್ದಾರೆ. ಆ ಜನರಲ್ಲಿ ಪವಿತ್ರಬುದ್ಧಿಯುಳ್ಳವರು ಯಾರೂ ಇರಲಿಲ್ಲವೆಂದು ಭಾವಿಸುವುದು ಸುಲಭವಲ್ಲ. ಈ ನೂರಾರು ವರ್ಷಗಳ ಜನರೆಲ್ಲರೂ ವಿಷಯಲಂಪಟತೆಯನ್ನು ಅನುಮೋದಿಸುವವರಾಗಿದ್ದರೆಂದು ನನಗೆ ಅನ್ನಿಸುವುದಿಲ್ಲ. ಅವರಲ್ಲಿ ಸದಾಚಾರವಂತರೂ ವ್ರತನಿಷ್ಠಾವಂತರೂ ಸಹಸ್ರಾರು ಮಂದಿ ಇದ್ದಿರಬೇಕು. ಅಂಥವರಿಗೂ ಶ್ರೀಕೃಷ್ಣಚರಿತೆಯ ಪ್ರಣಯಾಂಶದಲ್ಲಿ ದೋಷವೇನೂ ತೋರದೆ ಅದೂ ಒಂದು ವಿಶ್ವಸನೀಯಾಂಶವೆಂದೇ ತೋರಿರಬೇಕು. ಅದು ಹಾಗೆಂದು ನಾವಿಟ್ಟುಕೊಂಡ ಪಕ್ಷದಲ್ಲಿ ಅದರಲ್ಲಿ ವಿಶೇಷಾರ್ಥ ತೋರಿಬರುತ್ತದೆ. ಭಗವತ್ಕೃಪೆಗೆ ಬಾಹಿರವಾದ ಪ್ರಾಣಿ ಯಾವುದೂ ಇರದು. ದೋಷಿಗಳಿಗೂ ಪಾಪಿಗಳಿಗೂ ಕೂಡ ಭಗವತ್ಕೃಪೆ ಸಿದ್ಧವಾಗಿರುತ್ತದೆ. ಕೆಲವು ಮಂದಿ ಪಾಪಿಗಳಿಗೆ ಆ ಭಗವತ್ಕೃಪೆ ದಂಡನೆಯ ಉಗ್ರರೂಪವನ್ನು ತಾಳಿ ಬರುತ್ತದೆ. ಇನ್ನು ಕೆಲವು ಮಂದಿಗೆ ಅದೇ ಭಗವತ್ಕೃಪೆ ಕಾಮ್ಯಾರ್ಥಪ್ರದಾನರೂಪದಲ್ಲಿ ಬರುತ್ತದೆ. ಸಮರ್ಥನಾದ ಉಪಾಧ್ಯಾಯನು ತನ್ನ ಶಿಷ್ಯರಾದ ಹತ್ತು ಮಂದಿ ಬಾಲಕರಲ್ಲಿ ಮೂವರನ್ನು ನಯವಾಗಿ ಮಾತನಾಡಿಸುತ್ತಾನೆ; ಮೂವರನ್ನು ಬೆದರಿಸಿ ಗದರಿಸುತ್ತಾನೆ; ನಾಲ್ಕು ಮಂದಿಗೆ ಬೆತ್ತವನ್ನು ಪ್ರಯೋಗಿಸುತ್ತಾನೆ. ಸ್ವಭಾವಾನುಸಾರವಾಗಿ ಶಿಕ್ಷಣೆ. ಗೋಪಿಯರು ಮೃದು ಸ್ವಭಾವದವರು. ಅವರಲ್ಲಿ ಕೃಷ್ಣವಿಷಯದಲ್ಲಿದ್ದ ಚಾಪಲ್ಯಾತಿಶಯದ ವಿನಾ ಬೇರೆ ದೋಷ ಯಾವುದೂ ಇರಲಿಲ್ಲ. ಕೃಷ್ಣಪ್ರೀತಿಯನ್ನು ವಿನಾಯಿಸಿದರೆ ಅವರು ಸಂಪೂರ್ಣವಾಗಿ ಪತಿವ್ರತೆಯರಾಗಿದ್ದರು. ಅವರು ಸ್ವಭಾವದಿಂದ ವ್ಯಭಿಚಾರಿಗಳಲ್ಲ; ಶ್ರೀಕೃಷ್ಣನ ಸೌಂದರ್ಯವಿಶೇಷದಿಂದಲೂ ಸಾಹಸವಿಶೇಷದಿಂದಲೂ ಮೋಹಕ್ಕೊಳಗಾಗಿದ್ದವರು. ಕೃಷ್ಣಕಾರಣದಿಂದಾದ ಮೋಹಕ್ಕೆ ಕೃಷ್ಣನಿಂದಲೇ ಪರಿಹಾರ ದೊರೆಯಬೇಕಾಯಿತೆಂದು ನಾವು ಭಾವಿಸಿಕೊಳ್ಳಬೇಕಾಗುತ್ತದೆ.

ಒಟ್ಟಿನಲ್ಲಿ ಕೃಷ್ಣನೆಂಬುದು ಒಂದು ದೃಷ್ಟಿಯಿಂದ ಒಬ್ಬಾನೊಬ್ಬ ಮನುಷ್ಯನ ಹೆಸರು; ಇನ್ನೊಂದು ದೃಷ್ಟಿಯಿಂದ ಒಂದು ರಹಸ್ಯದ ಹೆಸರು. ಒಂದು ದೃಷ್ಟಿಯಿಂದ ಲೋಕಸಾಮಾನ್ಯ; ಇನ್ನೊಂದು ದೃಷ್ಟಿಯಿಂದ ಲೋಕಾತೀತ-

ವಾದ ಅದ್ಭುತ. 'ಕೃಷ್ಣ' ಎಂದರೆ ಕಪ್ಪು ಎಂದು ಅರ್ಥವಲ್ಲವೆ? ಕೃಷ್ಣನಿಗೆ ಶ್ಯಾಮ, ಶ್ಯಾಮಸುಂದರ–ಎಂದೂ ಹೆಸರುಗಳಿವೆ. "ಶ್ಯಾಮ" ಎಂದರೂ ಕಪ್ಪು. ಕಪ್ಪು ಬಣ್ಣವು ರಹಸ್ಯದ ಸಂಕೇತ.* ಯಾವುದು ಗುಪ್ತವೋ, ಯಾವುದು ಗೂಢವೋ ಅದು ಕೃಷ್ಣ, ಎಂದರೆ ಅಸ್ಪಷ್ಟ. ಭಗವದ್ರಹಸ್ಯವು ಅಸ್ಪಷ್ಟವಾದದ್ದು. ಅದೇ ಬ್ರಹ್ಮರಹಸ್ಯ. ಒಬ್ಬ ಪುರಾತನರು ಬ್ರಹ್ಮತತ್ತ್ವವನ್ನು—

ವ್ಯಾಖ್ಯಾಶತೈರಪ್ಯತಿದುರ್ಗ್ರಹೋಽರ್ಥಃ ।
ಪುರಾಣವಾಣೀಚಿಕುರೇಷು ಗೂಢಃ ॥

—ಎಂದು ವರ್ಣಿಸಿದ್ದಾರೆ. ಉಪನಿಷತ್ತು ಕೂಡಾ ಇದನ್ನೇ ಹೇಳುತ್ತದೆ.—

ಯತೋ ವಾಚೋ ನಿವರ್ತನ್ತೇ ।
ಅಪ್ರಾಪ್ಯ ಮನಸಾ ಸಹ ॥

ಹೀಗೆ ಅತ್ಯಂತ ರಹಸ್ಯವಾಗಿರುವ ಬ್ರಹ್ಮಚೈತನ್ಯದ ಕಾರ್ಯದಶೆಯಾದ ಈಶ್ವರ ಯೋಗದ ಒಂದು ವಿಶೇಷ ಲೀಲಾವಿಭೂತಿಯನ್ನು ಲೋಕಕ್ಕೆ ತಿಳಿಯಪಡಿಸುವ ಸಾಧನವು, ಭಾಗವತಕಾರನ ಶ್ರೀಕೃಷ್ಣ ಚರಿತೆ–ಎಂದು ನನಗನ್ನಿಸುತ್ತದೆ.

ಈಗ ಏನು ಹೇಳಿದಂತಾಯಿತು? ಕೃಷ್ಣನನ್ನು ಮನುಷ್ಯಮಾತ್ರನೆಂದು ಪರಿಗಣಿಸುವವರು ಪ್ರಣಯಕಥೆಗಳನ್ನು ಕಲ್ಪನೆಯೆಂದು ವರ್ಜಿಸತಕ್ಕದ್ದು. ಕೃಷ್ಣನನ್ನು ಮನುಷ್ಯಮಾತ್ರನಲ್ಲ, ಅತಿಮಾನುಷನು, ಆಧಿಪುರುಷನು–ಎಂದು ಭಾವಿಸುವವರು ಕೃಷ್ಣನ ಪ್ರಣಯಕಥೆಯು ಸಾಮಾನ್ಯ ಮನುಷ್ಯರಿಗೆ ಅನ್ವಯಿಸಲಾರದ ಒಂದು ವಿಶೇಷಾಕಾರದ ಲೋಕಾನುಗ್ರಹವಿಧಾನವೆಂದು ಗ್ರಹಿಸತಕ್ಕದ್ದು. ಧರ್ಮ, ಅಧಿಧರ್ಮ–ಈ ಎರಡು ತತ್ತ್ವಗಳು ಶ್ರೀಕೃಷ್ಣನಲ್ಲಿ ರೂಪಗೊಂಡಿವೆ. ಆಳವೂ ವಿಶಾಲವೂ ಆದ ಜೀವನಾನುಭವವುಳ್ಳವರಾಗಿ ಲೋಕಸಹಾನುಭೂತಿಯನ್ನು ಅಭ್ಯಾಸಕ್ಕೆ ತಂದುಕೊಂಡಿರುವ ಆಸ್ತಿಕರಿಗೆ ಈ ಸಾಮರಸ್ಯ ದೃಷ್ಟಿಯು ಗ್ರಾಹ್ಯವಾದೀತೆಂದು ನಾನು ನಂಬಿಕೊಂಡಿದ್ದೇನೆ.

ಅಂತೂ ಈ ವಿಷಯವು ಸಾವಧಾನವಾದ ಮತ್ತು ತಲಸ್ಪರ್ಶಿಯಾದ ಆಲೋಚನೆಯನ್ನೂ ವಿಮರ್ಶೆಯನ್ನೂ ಅಪೇಕ್ಷಿಸುತ್ತದೆ. ಅದಕ್ಕೆ ಸಾಧಕವಾದ

---

* ಶ್ಯಾಮೋ ಗಂಭೀರೋ ವರ್ಣಃ । ಶ್ಯಾಮ ಇವ ಶ್ಯಾಮೋಹಾರ್ದಂ ಬ್ರಹ್ಮ । ಅತ್ಯಂತ ದುರವಗಾಹ್ಯತ್ವಾತ್ ॥ —ಛಾಂದೋಗ್ಯ—ಶಾಂಕರ ಭಾಷ್ಯ

ಗ್ರಂಥ ಶ್ರೀ ವ್ಯಾಸರಾಯರು ನಮಗೆ ದೊರಕಿಸಿರುವ ಶ್ರೀಕೃಷ್ಣಚರಿತ್ರೆ. ಇದನ್ನು ನಮ್ಮ ಜನ ವ್ಯಾಸಂಗಮಾಡುವುದರಿಂದ ಅವರ ಶ್ರೀಕೃಷ್ಣಜಿಜ್ಞಾಸೆಗೆ ಉಪಕಾರ ವಾಗುವುದಲ್ಲದೆ ಅವರ ಸಂಶೋಧನಾಭ್ಯಾಸವೂ ಸುಶಿಕ್ಷಿತವಾಗುತ್ತದೆ.

೪. ಚರಿತ್ರೆಯೋ, ಕಾವ್ಯವೋ?

ಪುರಾಣಪುರುಷರನ್ನು ಕುರಿತು ಪ್ರಶಂಸೆಮಾಡಹೊರಟವನು ನಮ್ಮ ಕಾಲದಲ್ಲಿ ಒಂದು ಪ್ರಶ್ನೆಯನ್ನು ಎದುರಿಸಬೇಕಾಗುತ್ತದೆ. ಆ ಮಹಾಪುರುಷನು ಕವಿಕಲ್ಪಿತ ವ್ಯಕ್ತಿಯೇ, ಅಥವಾ ಚರಿತ್ರೆಗೆ ಸೇರಿದ ವಾಸ್ತವ ವ್ಯಕ್ತಿಯೇ?

ಆ ಆದರ್ಶ ಪುರುಷನು ಕಾಲ್ಪನಿಕನೆಂದು ಹೇಳಿದರೆ ಅವನ ಆದರ್ಶಶಕ್ಯತೆ ಕರಗಿಹೋಗುತ್ತದೆ. ಕವಿಯು ತನ್ನ ಪ್ರತಿಭೆಯ ಬಲದಿಂದಲೋ ವಾಕ್ಚಮ ತ್ಕಾರದಿಂದಲೋ ಎಂಥ ವ್ಯಕ್ತಿಯನ್ನಾದರೂ ಸೃಷ್ಟಿಸಬಹುದು. ಆದರೆ ಆ ಸೃಷ್ಟಿ ಕೇವಲ ಮಾನಸಿಕವಾದೀತು. ಅದು ವಾಸ್ತವ ಪ್ರಪಂಚದಿಂದ ವಿಲ ಕ್ಷಣವಾಗಿರುತ್ತದೆ. ಜನ ಅದನ್ನು ಅನುಕರಿಸುವುದು ಸಾಧ್ಯವಾಗದು. ಆದ ದ್ದರಿಂದ ಆ ಕಲ್ಪನೆ ಲೋಕಕ್ಕೆ ಆದರ್ಶವಾಗಲಾರದು. ಲೋಕಕ್ಕೆ ಆದರ್ಶ ವಾಗಬೇಕಾದರೆ ಆ ಮಹಾಪುರುಷನು ಲೋಕದ ಜನರಂತೆ ದುರ್ಬಲನಾಗಿದ್ದೂ ನಿಸ್ಸಹಾಯನಾಗಿದ್ದೂ ಈ ನಾನಾ ನ್ಯೂನತೆಗಳಿದ್ದರೂ ಅವುಗಳನ್ನು ದಾಟಿ ಮೇಲಕ್ಕೆದ್ದವನಾಗಿರಬೇಕು. ನಮ್ಮ ಕೃಷ್ಣನಂಥ ಪುರಾಣಪುರುಷನಾದರೋ ದೈವಾಂಶವುಳ್ಳವನು, ಮಹಾಶಕ್ತಿವಂತನು ಮತ್ತು ಅದ್ಭುತವೀರ್ಯನು. ಅಂಥವನು ನಡೆದಂತೆಲ್ಲ ಸಾಮಾನ್ಯರಾದ ನಾವು ನಡೆಯಲಾದೀತೋ? ಹೀಗೆ ಬರುತ್ತದೆ—ಕೇವಲ ಕವಿಕಲ್ಪಿತನಾದ ಆದರ್ಶಪುರುಷನ ವಿಷಯದಲ್ಲಿ ನಮ್ಮಂಥವರ ಪ್ರಶ್ನೆ.

ಹೀಗಲ್ಲದೆ ನಮ್ಮ ಪುರಾಣಪುರುಷನು ಚಾರಿತ್ರಿಕ ವ್ಯಕ್ತಿ, ವಾಸ್ತವ ವ್ಯಕ್ತಿ ಎಂದು ಹೇಳುವುದಾದರೆ ಆಗ ಬೇರೊಂದು ಪ್ರಶ್ನೆ ತಲೆಯೆತ್ತುತ್ತದೆ. ಆ ವ್ಯಕ್ತಿ ವಾಸ್ತವನಾಗಿದ್ದವನೆನ್ನಲು ಋಜುವಾತುಗಳೆಲ್ಲಿ? ಅವನಿದ್ದ ಸ್ಥಳ ಯಾವುದು? ಅವನ ತಾರೀಖು ಯಾವುದು? ಅವನಿಗೆ ನಾಲ್ಕು ಕೈ ಇತ್ತೆಂದಾಗಲಿ, ಅವನು ಸಾವಿರ ವರ್ಷ ಬದುಕಿದನೆಂದಾಗಲಿ ಅವನು ಇಚ್ಛಾಮಾತ್ರದಿಂದ ರೂಪವನ್ನು ಬದಲಾಯಿಸಿಕೊಳ್ಳಬಲ್ಲವನೆಂದಾಗಲಿ, ಅವನು ನೆನೆದ ಕೂಡಲೆ ಇಷ್ಟವಾದ ಸ್ಥಳವನ್ನು ಸೇರಬಹುದಾಗಿತ್ತೆಂದಾಗಲಿ, ಅವನು ಒಂದೇ ಕಾಲದಲ್ಲಿ ಹತ್ತಾರು

ಕಡೆ ಸಾಕ್ಷಾತ್ತಾಗಿ ಇರಬಹುದಾಗಿತ್ತೆಂದಾಗಲಿ ನಾವು ನಂಬುವುದು ಹೇಗೆ? ಅವನ ವಿಷಯದಲ್ಲಿ ಹೇಳುವ ಸಂಗತಿಗಳು ನಮ್ಮ ಅನುಭವದಲ್ಲಿ ನಡೆಯುತ್ತಿಲ್ಲ. ಅಂಥಾ ಸಂಗತಿ ಅವನಿಂದಾಗಲಿ ಅವನ ಕಾಲದಲ್ಲಾಗಲಿ ನಡೆಯುತ್ತಿತ್ತೆಂದು ನಂಬಲು ನಾವು ಸಾಕ್ಷಿಗಳನ್ನೂ ಪ್ರತ್ಯಕ್ಷಪ್ರಮಾಣಗಳನ್ನೂ ಕೇಳುತ್ತೇವೆ. ನ್ಯಾಯಸ್ಥಾನದಲ್ಲಿಯ ಒಂದು ಮೊಕದ್ದಮೆಯಲ್ಲಿ ಕಕ್ಷಿ ಹೇಳಿದ್ದನ್ನು ಪರೀಕ್ಷಿಸಿ ರುಜುವಾತುಗಳನ್ನು ಅಪೇಕ್ಷಿಸುವಂತೆ ನಮ್ಮ ಮಹಾಪುರುಷನ ವಿಷಯದಲ್ಲಿ ರುಜುವಾತನ್ನು ಬೇಡುತ್ತೇವೆ. ರಾಮ, ಕೃಷ್ಣ ಮೊದಲಾದ ಅವತಾರಪುರುಷರ ವಿಷಯದಲ್ಲಿ ನಾವು ಹೇಗೆ ರುಜುವಾತುಪಡಿಸಲಾದೀತು? ಹೀಗೆ ಪುರಾಣಪುರುಷನು ವಾಸ್ತವ ವ್ಯಕ್ತಿಯೆಂದು ಸಿದ್ಧಾಂತ ಮಾಡುವುದು ಅಶಕ್ಯವಾಗುತ್ತದೆ.

ಪುರಾಣಪುರುಷನು ಹೀಗೆ ಒಂದು ಪಕ್ಕದಲ್ಲಿ ಕಾಲ್ಪನಿಕವ್ಯಕ್ತಿಯಾಗದೆ ಇನ್ನೊಂದು ಪಕ್ಕದಲ್ಲಿ ವಾಸ್ತವಿಕ ವ್ಯಕ್ತಿಯೂ ಆಗದೆಹೋದರೆ ಆ ಮಹಾಪುರುಷನ ವಿಷಯದಲ್ಲಿ ನಮ್ಮ ಭಾವನೆ ಹೇಗಿರಬೇಕು?

ಈ ಎರಡು ದಾರಿಗಳಲ್ಲದೆ ಮೂರನೆಯದೊಂದುಂಟೆಂದು ನನಗೆ ಅನ್ನಿಸುತ್ತದೆ. ಪುರಾಣಪುರುಷನು ಒಂದುಭಾಗದಲ್ಲಿ ವಾಸ್ತವ ವ್ಯಕ್ತಿ, ಇನ್ನೊಂದು ಭಾಗದಲ್ಲಿ ಕಲ್ಪಿತ ವ್ಯಕ್ತಿ. ಅವನು ವಾಸ್ತವಿಕ ಕಾಲ್ಪನಿಕಗಳ ಸಮ್ಮಿಶ್ರಣ.

ಮಹಾಕವಿಯು ಒಂದು ಮಹಾತತ್ತ್ವವನ್ನು ಜನಕ್ಕೆ ಮನದಟ್ಟು ಮಾಡಿಸುವ ಉದ್ದೇಶವುಳ್ಳವನಾಗಿರುತ್ತಾನೆ. ಅವನ ಅಂತರ್ದೃಷ್ಟಿಯಲ್ಲಿರುವ ಮಹಾಜೀವಿತತತ್ತ್ವವು ವಾಚಕರ ಅಂತರಂಗದಲ್ಲಿ ತಾನಾಗಿ ಒಡಮೂಡಿ ಅನುಭೂತವಾಗಬೇಕೆಂಬುದು ಸಂಕಲ್ಪ. ತತ್ತ್ವವು ಸ್ವಾನುಭವವಾಗಬೇಕು ಎಂಬುದು ಮುಖ್ಯ. ಆ ಸ್ವಾನುಭವವನ್ನು ಉಂಟುಮಾಡುವುದಕ್ಕಾಗಿ ಕಥಾಸಂವಿಧಾನ. ಕಥೆಯ ಪೋಷಣೆಗೆ ಪಾತ್ರಸೃಷ್ಟಿ, ಸಂದರ್ಭ ವರ್ಣನೆ, ವಾಕ್ಯಾಲಂಕಾರ ಮೊದಲಾದುವು ಪರಿಕರಗಳು.

ತತ್ತ್ವವು ವಾಚಕನಿಗೆ ಸ್ವಾನುಭವಸಿದ್ಧವಾಗಬೇಕು ಎಂಬುದಲ್ಲವೆ ಇಲ್ಲಿನ ಮುಖ್ಯಾಂಶ? ಮನುಷ್ಯನಿಗೆ ಕವಿಯ ಮಾತು ಪ್ರೇರಕವಾಗಬೇಕಾದರೆ ಆ ಮಾತಿನಲ್ಲಿ ಎರಡು ಶಕ್ತಿಗಳಿರಬೇಕು. ಮೊದಲನೆಯದಾಗಿ ಆ ಮಾತು ವಾಚಕನಿಗೆ ಮೊದಲೇ ಇರುವ ಪೂರ್ವಾನುಭವವನ್ನು ಸ್ಮರಣೆಗೆ ತರಬೇಕು. ಎರಡನೆಯದಾಗಿ ಒಂದು ನವೀನಜೀವನದರ್ಶನವನ್ನು ತೋರಬೇಕು. ಪೂರ್ವ

ಪರಿಚಿತವಾದದ್ದೇ ಹೊಸದಾಗಿ ಆಗುವ ಪರಿಚಯಕ್ಕೆ ಅವಶ್ಯವಾದ ಆಧಾರ ಭೂಮಿ. ಹೀಗೆ ವಾಸ್ತವಾಂಶವು ಕವಿಯ ಕಾರ್ಯಕ್ಕೆ ಪ್ರಥಮ ಸಾಮಗ್ರಿ ಯಾಗುತ್ತದೆ. ಹೀಗೆ ಪುರಾಣಪುರುಷನ ಒಡಲು–ಅವನ ಸ್ಥೂಲಗಾತ್ರವು–ಚರಿತ್ರೆಯಿಂದ ಬಂದದ್ದಾಗುತ್ತದೆ. ಕವಿಯು ಒಬ್ಬ ಚಾರಿತ್ರಿಕ ವ್ಯಕ್ತಿಯನ್ನು ತನ್ನ ನಾಯಕನನ್ನಾಗಿ ಆರಿಸಿಕೊಂಡರೆ ಅವನು ಉದ್ದೇಶಿಸಿರುವ ಕಾರ್ಯಕ್ಕೆ ತಕ್ಕ ಪೂರ್ವಸಿದ್ಧತೆ ಅದರಿಂದ ಒದಗಿಬರುತ್ತದೆ. ಚರಿತ್ರೆಯು ಜನಕ್ಕೆ ಚಿರ ಪರಿಚಿತವಾದದ್ದಾದಕಾರಣದಿಂದ ಅದು ಜನದ ಅಂತರಂಗದಲ್ಲಿ ಉದ್ದಿಷ್ಟವಾದ ವಾತಾವರಣವನ್ನು ಕಲ್ಪಿಸಬಲ್ಲದ್ದಾಗುತ್ತದೆ. ಈ ವಾತಾವರಣದಲ್ಲಿ ಕವಿ ತನ್ನ ಎರಡನೆಯ ಕೆಲಸವನ್ನು ಮಾಡುವುದು ಸುಲಭವಾಗುತ್ತದೆ. ಹಿಂದೆ ಎಂದೋ ಕಟ್ಟಿಸಿ ಸಿದ್ಧವಾಗಿರುವ ಮನೆಯೊಳಕ್ಕೆ ಊರಿಗೆ ಹೊಸದಾಗಿ ಬಂದವನು ಪ್ರವೇಶಮಾಡಿ ನೆಲಸಿದಂತೆ ಕವಿಯ ಕೆಲಸವು ಸುಲಭವಾಗುತ್ತದೆ. ಹೀಗೆ ಪುರಾಣಪುರುಷನನ್ನು ಕುರಿತ ಕಾವ್ಯದಲ್ಲಿ ಚರಿತ್ರಾಂಶವು ಮೂಲಭೂತವಾಗುತ್ತದೆ. ವಾಸ್ತವಾಂಶವಿಲ್ಲದೆ ಪುರಾಣಪುರುಷನಿಲ್ಲ.

ಆದರೆ ವಾಸ್ತವಾಂಶದ ಜೊತೆಗೆ ಕಲ್ಪಿತಾಂಶ ಸೇರಿಕೊಳ್ಳುತ್ತದೆ. ಕಲ್ಪಿತಾಂಶವಿಲ್ಲದೆ ಹೋದರೆ ಕಾವ್ಯವೇ ಇಲ್ಲ. ಈ ಕಲ್ಪಿತಾಂಶವು ನಾಯಕನ ಮನೋಧರ್ಮದ ಚಿತ್ರಣದಲ್ಲಿರುತ್ತದೆ. ಎಲ್ಲರಿಗೂ ಚೆನ್ನಾಗಿ ತಿಳಿದಿರುವ ಒಂದಾನೊಂದು ಸಂದರ್ಭದಲ್ಲಿ ಒಬ್ಬ ಮಹಾಪುರುಷನು ಹೇಗೆ ನಡೆದುಕೊಂಡ? ಸಾಮಾನ್ಯ ಸಂದರ್ಭದಲ್ಲಿ ಮಹಾಪುರುಷನ ವಿಶೇಷವೇನು? ಇವು ಕವಿ ಇರಿಸಿಕೊಂಡಿರುವ ಪ್ರಶ್ನೆಗಳು. ನಮ್ಮ ಲೋಕದಲ್ಲಿ ತಂದೆಯ ಆಸ್ತಿಪಾಸ್ತಿಗಳನ್ನು ಮಕ್ಕಳಿಗೆ ಹಂಚಿಕೊಡುವುದರಲ್ಲಿ ಹೆಚ್ಚುಕಡಿಮೆಯಾಯಿತೆಂದು ದೂರುಮಾತು ಹುಟ್ಟುವುದು ಸಾಮಾನ್ಯ. ಅಣ್ಣತಮ್ಮಂದಿರಲ್ಲಿಯೂ ಅವರುಗಳ ಹೆಂಡಿರು ಮಕ್ಕಳುಗಳಲ್ಲಿಯೂ, ಅದಕ್ಕೂ ಹೆಚ್ಚಾಗಿ ಆ ಹೆಣ್ಣುಗಳ ತಾಯಿತಂದೆಯ-ರಲ್ಲಿಯೂ ದೂರುಮಾತೂ ಗೊಣಗಾಟವೂ ಅಪವಾದವೂ ಹೊರಡುವುದು ಅಸಾಮಾನ್ಯವಲ್ಲ. ಹೀಗೆ ಪಿತ್ರಾರ್ಜಿತದ ಹಂಚಿಕೆಯ ವಿಷಯದಲ್ಲಿ ತಕರಾರೇಳುವುದು ಸಾಮಾನ್ಯ. ಅಂಥ ಸಂದರ್ಭದಲ್ಲಿ ದಶರಥನ ಮಕ್ಕಳು ತಕರಾರಿಗೆ ಹೋಗದೆ ತಮಗೆ ಪಾಲು ಬೇಡವೆಂದು ಸಂತೋಷದಿಂದ ಹೇಳಿದ್ದು ಲೋಕ ಸಾಮಾನ್ಯವಲ್ಲ. ಅದು ವಿಶೇಷ. ಈ ವಿಶೇಷವೇ ವಾಲ್ಮೀಕಿಯ ಕಾವ್ಯದ

ಸಾರ. ವಾಸ್ತವಿಕ-ಕಾಲ್ಪನಿಕ ಸಂಗತಿಗಳ ಉಭಯೈಕ್ಯ ಸಮ್ಮೇಳನಕ್ಕೆ ಇದು ನಿದರ್ಶನ. ಇದರಂತೆಯೇ ಶ್ರೀಕೃಷ್ಣ ವಿಷಯವನ್ನೂ ಗ್ರಹಿಸಬೇಕಾದದ್ದು. ಶ್ರೀಕೃಷ್ಣನೆಂಬ ಮನುಷ್ಯವ್ಯಕ್ತಿ ಚಾರಿತ್ರಿಕವಾದದ್ದು. ಅದು ಅವಾಸ್ತವವಲ್ಲ. ಆ ವ್ಯಕ್ತಿಯ ಮಹಾ ಮಹಿಮೆಯನ್ನು ವರ್ಣಿಸಿ ಒಂದು ವಿಶ್ವಧರ್ಮತತ್ತ್ವವನ್ನು ಲೋಕಕ್ಕೆ ಮನದಟ್ಟುಮಾಡಬೇಕೆಂಬುದು ವ್ಯಾಸ,ಪರಾಶರ, ಭಾಗವತಕಾರಾದಿಗಳ ತಾತ್ಪರ್ಯ. ವಿಶ್ವಧರ್ಮವನ್ನು ರೂಪುಗೊಳಿಸುವುದೆಂದರೆ ಮನುಷ್ಯಜೀವನದ ಯಾವ ಮುಖ್ಯ ಭಾಗವನ್ನೂ ಬಿಡದೆ ಮನುಷ್ಯಜೀವನದ ಎಲ್ಲ ಪಾರ್ಶ್ವಗಳನ್ನೂ ಪರಾಮರ್ಶಿಸುವುದು ಅವಶ್ಯವೆಂದು ಒಪ್ಪಿಕೊಂಡಂತಾಯಿತು. ಇಂಥಾ ನಾನಾ ಜೀವನದೃಶ್ಯಗಳನ್ನು ಕೃಷ್ಣಚರಿತ್ರೆಯು ಒಳಗೊಂಡಿರಬೇಕಾಯಿತು. ಈ ಕಾರಣದಿಂದ ನಾವು ಕೃಷ್ಣಕಥೆಯ ಮೂಲಕ ಮನುಷ್ಯಸ್ವಭಾವದ ನಾನಾ ಮುಖಗಳನ್ನು ಪರಿಚಯ ಮಾಡಿಕೊಳ್ಳುವುದಾಗುತ್ತದೆ. ಮನುಷ್ಯನ ನಿತ್ಯಜೀವನದಲ್ಲಿ ಬಗೆಬಗೆಯ ಆಶೆಗಳೂ ಆವೇಶಗಳೂ ಹೋರಾಡುತ್ತಿರುತ್ತವೆ. ಅವುಗಳಲ್ಲಿ ಮುಖ್ಯವಾದವು ಕಾಮ, ಲೋಭ, ಕ್ರೋಧ. ಇಂಥ ಪ್ರಬಲ ದುರ್ಗುಣಗಳನ್ನು ಹದ್ದಿನಲ್ಲಿರಿಸಿ ತಿದ್ದಲು ವಿಹಿತವಾಗಿರುವ ಶಿಕ್ಷಣಕ್ರಮಗಳೂ ಧರ್ಮಾರ್ಥ ಕಾಮಮೋಕ್ಷಗಳೆಂಬ ಪುರುಷಾರ್ಥ ಚತುಷ್ಟಯದ ನೀತಿ ನಿಯಮಗಳು. ಧರ್ಮ-ಮೋಕ್ಷಗಳ ಪ್ರಸಂಗಗಳು ಭಾರತದಲ್ಲಿಯ ಕೃಷ್ಣಚರಿತ್ರೆಯ ಮುಖ್ಯವಿಚಾರವಾಗಿವೆ. ಅರ್ಥ ಅಥವಾ ಸಂಪದ್ವಿಭಜನೆಯ ಪ್ರಶ್ನೆಯು ರಾಜ್ಯವಿಚಾರದ ಮೂಲಕ ಭಾರತದ ಧರ್ಮ ಪ್ರಕರಣದಲ್ಲಿ ಅಂತರ್ಗತವಾಗಿರುತ್ತದೆ. ಅರ್ಥವೇ—ಸ್ವಾರ್ಥವೇ ಧರ್ಮವನ್ನು ಅಲುಗಾಡಿಸುವ ಪ್ರಪಂಚಾಂಶ. ಹೀಗೆ ಧರ್ಮ-ಅರ್ಥ-ಮೋಕ್ಷಗಳೆಂಬಮೂರು ಪುರುಷಾರ್ಥಗಳು ಮಹಾಭಾರತದ ಕೃಷ್ಣಚರಿತ್ರೆಯಲ್ಲಿ ಎದ್ದುಕಾಣುತ್ತವೆ. ಅಲ್ಲಿ ಪ್ರಕಾಶವಾಗದಿರುವ ಪುರುಷಾರ್ಥವು ಕಾಮವೆಂಬುದು.

ಈ ಕಾಮವೆಂಬ ಪುರುಷಾರ್ಥದ ಸ್ವರೂಪವನ್ನು ಹೆಚ್ಚಾಗಿ ಎತ್ತಿ ತೋರಿಸಿರುವವರು ವಿಷ್ಣುಪುರಾಣಕಾರರು ಮತ್ತು ಭಾಗವತಕಾರರು. ಈ ಎರಡು ಗ್ರಂಥಗಳೂ ಗೋಪಿಕಾಪ್ರಣಯವ್ಯಾಜದಿಂದ ಕಾಮಸ್ವರೂಪವನ್ನೂ ಕೃಷ್ಣಪ್ರತಿಕ್ರಿಯೆಯನ್ನೂ ತೋರಿಸುತ್ತವೆ. ಅದರ ತಾತ್ಪರ್ಯ ಹೀಗೆ. ಶ್ರೀಕೃಷ್ಣನು ಕಾಮುಕತೆಯನ್ನು ಒಂದು ಜಾತಿಯ ವ್ಯಾಧಿಯೋ ಎಂಬಂತೆ ಕಂಡು ಕನಿಕರಿಸಿದವನು. ಪ್ರಪಂಚದ ನಾನಾ ಜಾತಿಯ, ನಾನಾ ಅವಸ್ಥೆಗಳ,

ನಾನಾ ಸಂಸರ್ಗಪ್ರಕಾರಗಳ ಸ್ತ್ರೀ ಪುರುಷವರ್ಗಗಳಲ್ಲಿ ಕಾಮುಕರದೂ ಒಂದು ವಿಶೇಷಜಾತಿಯುಂಟು; ಕನಿಕರವು ಅವರಿಗೂ ಸಲ್ಲುತ್ತದೆ; ಸದ್ಗತಿ ಅವರಿಗೂ ಅಪೇಕ್ಷ್ಯವಾದದ್ದು; ಅವರಿಗೆ ಅನ್ವಯಿಸುವ ಚಿಕಿತ್ಸಾವಿಧಾನವೂ ಒಂದುಂಟು. ಧನಾಕಾಂಕ್ಷೆಯು ಹೇಗೆ ಅತಿರೇಕವಾಗಿ ಲೋಭರೂಪದಿಂದ ಪಾಪಪ್ರೇರಕ ವಾಗುತ್ತದೆಯೋ ಕಾಮವೂ ಹಾಗೆಯೇ ಅತಿರೇಕಕ್ಕೆ ಬಂದಾಗ ಪಾಪಕಾರಿ ಯಾಗುತ್ತದೆ. ಹಾಗೆ ಆದಾಗ ಅಲ್ಲಿ ಸಲ್ಲಬೇಕಾದದ್ದು ಜುಗುಪ್ಸೆ ಮಾತ್ರವಲ್ಲ, ಸಹಾನುಭೂತಿಗೂ ಅಲ್ಲಿ ಎಡೆಯುಂಟು. ಆದರೆ ಈ ವಾದದ ವ್ಯಾಪನೆಗೆ ಪರಿಮಿತಿಯುಂಟು. ಯಾರು ಭಾಗವತಕಾರನ ಭಾಷೆಯಲ್ಲಿ "ಈಶ್ವರ"ರೋ, ಯಾರಿಗೆ ತಮ್ಮ ಇಂದ್ರಿಯಾವೇಶಗಳ ಮೇಲೆ ಸಂಪೂರ್ಣವಾಗಿ ಅಧಿಕಾರ ವುಂಟೋ ಅವರು ಮಾತ್ರ ಈ ಕಾಮರೋಗಕ್ಕೆ ವೈದ್ಯರಾಗಬಲ್ಲರು. ಲೋಕದ ಸಾಮಾನ್ಯರೋಗಗಳಿಗೆ ಕೂಡ ಎಲ್ಲರೂ ಚಿಕಿತ್ಸಕರಾಗಲಾರರು. ಯಾರು ಸಾಂಗವಾಗಿ ವೈದ್ಯಶಾಸ್ತ್ರದಲ್ಲಿ ಶಿಕ್ಷಣಪಡೆದು ಅನುಭವ ಸಂಪಾದಿಸಿಕೊಂಡಿರು ತ್ತಾರೋ ಅಂಥವರು ಮಾತ್ರವೇ ಲೋಕದ ಸಾಮಾನ್ಯರೋಗಗಳಿಗೆ ಔಷಧ ಕೊಡಬಲ್ಲವರು. ದೈಹಿಕರೋಗಿಗಳ ವಿಷಯದಲ್ಲಿಯೇ ಇದು ಸಲ್ಲುವುದಾದರೆ ಮಾನಸಿಕರೋಗವಾದ ಮತ್ತು ಜೀವದ ಪೂರ್ವಜನ್ಮವಾಸನಾರೂಪವಾದ ಕಾಮರೋಗಕ್ಕೆ ಸಾಮಾನ್ಯ ಮನುಷ್ಯನು ಹೇಗೆ ಚಿಕಿತ್ಸೆ ಮಾಡಲಾದೀತು? ಆದದ್ದರಿಂದ ಶ್ರೀಕೃಷ್ಣನು ಅನುಸರಿಸಿದನೆಂದು ಹೇಳುವ ಗೋಪೀಪ್ರಣಯ ಶಿಕ್ಷಣವು ಕೃಷ್ಣನೊಬ್ಬನ ವಿಷಯದಲ್ಲಿಯೇ ಅನ್ವಯಿಸತಕ್ಕದ್ದು, ಇತರರಿಗಲ್ಲ.

ಶ್ರೀಕೃಷ್ಣನು ಅಷ್ಟಮಹಿಷಿಯರನ್ನೂ ಮೂವತ್ತೆರಡು ಮಂದಿ ಉಪ ಪತ್ನಿಯರನ್ನೂ ಅಸಂಖ್ಯಾತ ಮಂದಿ ಗೋಪಿಯರನ್ನೂ ನರಕಾಸುರನ ಅಂತಃಪುರದಿಂದ ಬಂದ ಹದಿನಾರುಸಾವಿರ ಮಂದಿ ಸುಂದರಿಯರನ್ನೂ ಆಳಿದ ನೆಂಬುದು ಕಥೆ. ಅಷ್ಟೇ ಅಲ್ಲ, ನಾರದರು ಇನ್‌ಸ್ಪೆಕ್ಷನ್ ಮಾಡಹೊರಟಾಗ ಒಂದೇ ಕಾಲದಲ್ಲಿ ಕೃಷ್ಣನು ನೂರಾರು ಕಡೆಗಳಲ್ಲಿ ನೂರಾರು ಗೋಪಿಕೆಯರ ಮನೆಯಲ್ಲಿ ನೂರಾರು ರೀತಿಯ ಸೇವೆಸತ್ಕಾರಗಳನ್ನು ಮಾಡುತ್ತಲೂ ಪಡೆಯು ತ್ತಲೂ ಇದ್ದನಂತೆ. ಹತ್ತು ಸಾವಿರ ಮಂದಿಯ ಮಾತು ಹಾಗಿರಲಿ, ಸಾವಿರ ಮಂದಿಯ ಮಾತು ಹಾಗಿರಲಿ, ನೂರುಮಂದಿಯನ್ನು ಏಕಕಾಲದಲ್ಲಿ ಆಳ ಬಲ್ಲ ಮಹಾಪುರುಷನು ಯಾವನಾದರೂ ಎಲ್ಲಿಯಾದರೂ ಇರುವ ಪಕ್ಷದಲ್ಲಿ

ಅಂಥವನು ಕೃಷ್ಣನನ್ನು ಅನುಕರಿಸುವ ಆಲೋಚನೆಯನ್ನು ಮಾತಿಗೆತ್ತ ಬಹುದು. ನಮ್ಮ ದೇಶದ ರಾಜರು ನವಾಬರುಗಳಲ್ಲಿ ಕೆಲವರ ಅಂತಃಪುರಗಳು ನೂರು-ಇನ್ನೂರು ಮಂದಿ ಕಾಂತಾಮಣಿಯರನ್ನು ಪೋಷಿಸುತ್ತಿದ್ದುವಂತೆ. ಇದು ಬಹುಮಂದಿ ಒಪ್ಪಿಕೊಂಡಿರುವ ಸಂಗತಿ. ಈ ವಾಸ್ತವವಾದ ಅಂತಃ ಪುರಬಾಹುಳ್ಯದ ಆಧಾರದ ಮೇಲೆ ಭಾಗವತಕಾರನು ಉತ್ಪ್ರೇಕ್ಷೆಯನ್ನು ಕಟ್ಟಿ ಶ್ರೀಕೃಷ್ಣನ ಅಂತಃಪುರವನ್ನು ನಿರ್ಮಿಸಿದ್ದಾನೆ. ಅದು ಶೃಂಗಾರರಸವನ್ನು ಪರಿಪೋಷಿಸುವುದಕ್ಕಾಗಿ ಮಾಡಿದ ಉಪಾಯ. ನಮ್ಮ ಮನಸ್ಸಿನಲ್ಲಿ ರಸಾ ವಿರ್ಭಾವವಾದ ಹೊರತು ಅನುಭವ ತನ್ನ ಪೂರ್ಣರೂಪಕ್ಕೆ ಬರಲಾರದು. ವಾಚಕರ ಅನುಭವಪೂರ್ಣತೆಗಾಗಿ ಕವಿ ಮಾಡಿದ ಒಂದು ಉತ್ಪ್ರೇಕ್ಷೆಯ ಸಂಘಟನೆಯನ್ನು ಚಾರಿತ್ರಿಕ (Historian's) ದೃಷ್ಟಿಯು ಬದಿಗಿರಿಸ ಬಹುದು. ತಾತ್ತ್ವಿಕ ದೃಷ್ಟಿಯಾದರೋ ಕೃಷ್ಣಚರ್ಯೆಯು ಕಾಮುಕರ ಶಿಕ್ಷಣಾರ್ಥವಾದದ್ದೆಂದು ಗ್ರಹಿಸಬೇಕಾದದ್ದು. ಜಗತ್ತಿನಲ್ಲಿ ಕಾಮುಕ ಜಾತಿಯೂ ಒಂದುಂಟು. ಆ ಜಾತಿಗೂ ಸದ್ಗತಿಯನ್ನು ಬಯಸಲು ಅಧಿಕಾರ ವುಂಟು. ಆ ಸದ್ಗತಿಯನ್ನು ಸಾಧಿಸಿಕೊಳ್ಳಲು ಒಂದು ಉಪಾಯ ಉಂಟು. ಆ ಉಪಾಯವನ್ನು ಪ್ರಯೋಗಿಸ ಹೊರಡುವವರು ಕೃಷ್ಣನಂತೆ ಇಂದ್ರಿಯಾತೀತ ರಾಗಿ ಆತ್ಮೌಪಮ್ಯವನ್ನು ಸರ್ವತ್ರ ಅನುಭವಿಸಿದವರಾಗಿ ಈಶ್ವರರಾದವರಾಗಿರ ಬೇಕು. ಮನೋವಿಕಾರಕ್ಕೆ ಎಡೆಕೊಡದೆ ತಮ್ಮ ಸ್ವಭಾವವನ್ನು ಹದ್ದಿನಲ್ಲಿರಿಸಿ ಕೊಂಡು ತತ್ತ್ವೈಕನಿಷ್ಠರಾಗಿರುವವರೇ "ಈಶ್ವರ"ರು.

ಒಟ್ಟಿನಲ್ಲಿ ಕೃಷ್ಣಚರಿತ್ರೆಯನ್ನು- ಆ ಪದದಲ್ಲಿ ಚರಿತ್ರೆ ಎಂದಿದ್ದರೂ- ಅದು ಕಾವ್ಯವೆಂದು ಗ್ರಹಿಸತಕ್ಕದ್ದೇ ಹೊರತು ಕೇವಲ ಚರಿತ್ರೆಯೆಂದಲ್ಲ. ಇಲ್ಲಿ ಚರಿತ್ರೆಯೆಂದರೆ ವಾಸ್ತವಸಂಗತಿಗಳ ನಿರೂಪಣೆ—ಯಾವಗ್ರಂಥವನ್ನು ಇಂಗ್ಲೀಷಿನಲ್ಲಿ 'ಹಿಸ್ಟರಿ' (History) ಎಂದು ಕರೆಯುತ್ತೇವೋ ಆ ಪ್ರಬಂಧ ಚರಿತ್ರೆ. ಚರಿತ್ರೆ ಅಥವಾ ಚರಿತೆ ಎಂದರೆ ನಡವಳಿಕೆ, ಮಾಡಿಕೆ ಎಂದರ್ಥ. ಪಾರಿಭಾಷಿಕವಾಗಿ ಚರಿತ್ರೆಯೆಂದರೆ "ಹಿಸ್ಟರಿ"-ದೇಶದ ಅಥವಾ ವ್ಯಕ್ತಿ- ಮನುಷ್ಯನ ಬಹಿರಂಗ ವೃತ್ತಾಂತ. ಕೃಷ್ಣಚರಿತ್ರೆ ಎಂಬ ಪದದಲ್ಲಾದರೋ ಚರಿತ್ರೆ (ಅಥವಾ ಚರಿತೆ) ಎಂಬ ಮಾತಿಗೆ ಕಾವ್ಯ ಅಥವಾ ಅಂತರಂಗ ವೃತ್ತಾಂತ ಎಂದೇ ಅರ್ಥ.

ಚರಿತ್ರೆಗೂ ಕಾವ್ಯಕ್ಕೂ ಇರುವ ವ್ಯತ್ಯಾಸವೇನು? ಚರಿತ್ರೆಯಲ್ಲಿ ಬಹಿರಂಗ ಘಟನೆಗಳು ಮುಖ್ಯ; ಪ್ರತ್ಯಕ್ಷವಾಗಿ ಕಾಣಬಂದ ಹೊರಲೋಕದ

ಸಂಗತಿಗಳು ಮುಖ್ಯ. ಆ ಸಂಗತಿಗಳಿಗೆ ಕಾರಣವಿವರಣೆ ಮಾಡಲು ಲೇಖಕನು ಚಾರಿತ್ರಕ ವ್ಯಕ್ತಿಗಳ ಅಂತರಂಗವಿಚಾರಗಳಿಗೆ ಕೈಹಾಕುತ್ತಾನೆ. ಇವು ಅವನು ಮಾಡುವ ಊಹೆಗಳು. ಇವು ಅಷ್ಟು ಮುಖ್ಯವಲ್ಲ. ಚರಿತ್ರಲೇಖಕನಿಗೆ ಮುಖ್ಯವಾದದ್ದು ಬಹಿರಂಗ. ಬಹಿರಂಗ ವ್ಯಾಪಾರ ಮೊದಲಿನದು, ಅಂತರಂಗ ವ್ಯಾಪಾರ ಆಮೇಲಿನದು.

ಕಾವ್ಯದಲ್ಲಿ ಇದಕ್ಕೆ ಪ್ರತಿಪರ್ತನೆ. ಕಾವ್ಯದಲ್ಲಿ ಅಂತರಂಗಕ್ರಿಯೆ ಮುಖ್ಯ, ಬಹಿರಂಗ ಘಟನೆ ಗೌಣ. ಒಂದಾನೊಂದು ಮನೋವ್ಯಾಪಾರದ ಪ್ರದರ್ಶನಕ್ಕೆ ಒಂದಾನೊಂದು ದೇಹಚೇಷ್ಟೆಯು ನಿಮಿತ್ತವನ್ನೊದಗಿಸುತ್ತದೆ. ಒಂದು ಮನೋವಿಕಾರವನ್ನು ಒಂದು ಅಂಗವಿಕಾರವು ಹೊರಪಡಿಸುತ್ತದೆ. ಹೀಗೆ ಹೊರಸಂಗತಿಯು ಕಾವ್ಯಪ್ರಪಂಚದಲ್ಲಿ ಪ್ರಾಸಂಗಿಕ ಮಾತ್ರ, ಮುಖ್ಯವಲ್ಲ.

ಹೀಗೆಂದಮೇಲೆ ಭಾಗವತದಲ್ಲಿಯ ಕೃಷ್ಣ ಗೋಪೀವಿಲಾಸ ವರ್ಣನೆಗಳೂ ಇತರ ಪ್ರಣಯಪ್ರಕರಣಗಳೂ ಮುಖ್ಯವಾಗಿ ತತ್ತ್ವಮನೋಧರ್ಮ ಸೂಚಕಗಳು. ಕೃಷ್ಣನ ಪ್ರೇಯಸಿಯರು ಎಂಟು ಮಂದಿಯೋ ಸಾವಿರ ಮಂದಿಯೋ ? ಎಷ್ಟು ಮಂದಿಯಾದರೆ ಏನು ? ಅವರು ಬಹುಮಂದಿ ಎಂಬುದನ್ನು ಅಂಗೀಕರಿಸೋಣ. ಕೃಷ್ಣನು ಸುಂದರರೂಪಿ ; ಮೋಹಕವಾದ ಅಂಗಭಂಗಿ-ವಾಗ್ಭಂಗಿಗಳುಳ್ಳವನು. ಅವನಲ್ಲಿ ಹತ್ತಾರು ಮಂದಿ ಮೋಹ ಪರವಶರಾಗಿ ಬಂದರು. ಹಾಗೆ ಕಾಮುಕರಾದವರ ವಿಷಯದಲ್ಲಿ ಆತ ಹೇಗೆ ನಡೆದುಕೊಂಡ ? ಒಂದೇ ಮಾತಿನಲ್ಲಿ ಹೇಳುವುದಾದರೆ, ಆತ್ಮಸಂಯಮಿಯಾದ ತತ್ತ್ವಜ್ಞನೊಬ್ಬನು ಕಾಮಿಗಳ ವಿಷಯದಲ್ಲಿ ಯಾವ ರೀತಿ ನಡೆದು ಕೊಳ್ಳುತ್ತಾನೆ ? ಇದು ಭಾಗವತಕಾರನು ಎತ್ತಿಕೊಂಡ ಪ್ರಶ್ನೆ. ಭಾರತ ಕಾರನು ಈ ಪ್ರಶ್ನೆಗೆ ಕೈಹಾಕಲಿಲ್ಲ ; ಅವನ ಇತಿಹಾಸಕ್ಕೆ ಈ ಪ್ರಶ್ನೆ ಬೇಕಾಗಿರಲಿಲ್ಲ. ಭಾಗವತಕಾರನು ಕೃಷ್ಣಸ್ವರೂಪವನ್ನು ಸಮಗ್ರವಾಗಿ ಚಿತ್ರಿಸಹೊರಟವನು. ಅವನಿಗೆ ಗೋಪಿಕಾದಿ ಪ್ರಣಯವಿಚಾರ ಅವಶ್ಯ ವಾಯಿತು.

ಭಾರತವು ಇತಿಹಾಸ. ಇತಿಹಾಸವೆಂದರೆ ಜನತೆಯು ಸಾಮಾನ್ಯವಾಗಿ "ಪೂರ್ವದಲ್ಲಿ ಹೀಗೆ ನಡೆಯಿತು, ಹೀಗೆ ಆಯಿತು" (ಇತಿ+ಹ+ಆಸ) ಎಂದು

ಹೇಳಿಕೊಳ್ಳುವ ಚರಿತ್ರಾಂಶ. ಮಹಾಭಾರತವನ್ನು ಅದರ ಮುಖ್ಯ ಮುಖ್ಯ ಪ್ರಕರಣಗಳಲ್ಲಾದರೂ ವಾಸ್ತವ ನಿರೂಪಣೆ ಎಂದು ನಾವು ಗ್ರಹಿಸಬಹುದು. ಹೀಗೆ ಕೃಷ್ಣನು ಚಾರಿತ್ರಿಕವ್ಯಕ್ತಿಯಾಗುತ್ತಾನೆ. ಮಹಾಭಾರತದಲ್ಲಿ ಹೆಚ್ಚಾಗಿ ಹೇಳದೆ ಇರುವ ಕೃಷ್ಣವಿಚಾರವನ್ನು ಭಾಗವತಕವಿ ವಿಸ್ತಾರಪಡಿಸಿ ಕೃಷ್ಣ ಚಿತ್ರವನ್ನು ಸಮಗ್ರಗೊಳಿಸಿದ್ದಾನೆ. ಕೃಷ್ಣನಲ್ಲಿ ಧೈರ್ಯ, ಶೌರ್ಯ, ರಾಜ-ನೀತಿ ಪಾಂಡಿತ್ಯ—ಇವು ಇದ್ದವೆಂಬುದು ಭಾರತದಿಂದ ಸ್ಪಷ್ಟಪಡುತ್ತದೆ. ಈ ಕ್ಷತ್ರಿಯಗುಣಸಂಪತ್ತಿನ ಜೊತೆಗೆ ತತ್ತ್ವಜ್ಞಾನವೂ ಆತನಲ್ಲಿ ಪರಿಪೂರ್ಣ ವಾಗಿತ್ತೆಂದು ಭಾರತದ ಭಗವದ್ಗೀತೆಯಿಂದ ಸ್ಪಷ್ಟಪಡುತ್ತದೆ. ಹೀಗೆ ರಾಜಗುಣ-ತತ್ತ್ವಜ್ಞಗುಣಗಳ ಜೊತೆಗೆ ಸಾಮಾನ್ಯ ಸಂಸಾರಿಗುಣವೂ ಆತನಲ್ಲಿ ಸೇರಿತ್ತೆಂದು ತೋರಿಸಲು ಹೊರಟವನು ಭಾಗವತಕವಿ.

ಹೀಗೆ ವಾಸ್ತವಿಕ, ಕಾಲ್ಪನಿಕ ಎಂಬೆರಡು ಜಾತಿಯ ಘಟನೆಗಳೂ ಕೃಷ್ಣಚರಿತ್ರೆಯಲ್ಲಿ ಸೇರಿಕೊಂಡಿವೆ. ಕೃಷ್ಣನು ಸಾಮಾನ್ಯನೂ ಹೌದು; ಅದ್ಭುತನೂ ಹೌದು. ಮನುಷ್ಯನಾದವನು ಏನೇನನ್ನು ಬಯಸಬಹುದೋ, ಏನೇನನ್ನು ಉತ್ತಮವೆಂದು ಭಾವಿಸಬಹುದೋ, ಮನುಷ್ಯನಿಗೆ ಯಾವ ಯಾವುದು ಶ್ರೇಯಸ್ಸೆಂದು ಅನ್ನಿಸುತ್ತದೆಯೋ ಆ ಎಲ್ಲ ಜಾತಿಯ ಭಾಗ್ಯಗಳ ಸಂಮೇಳನಮೂರ್ತಿಯೇ ಶ್ರೀಕೃಷ್ಣ.

ಶ್ರೀಕೃಷ್ಣನ ಪ್ರಣಯಪ್ರಸಂಗವನ್ನು ಕುರಿತು ವಿಚಾರಮಾಡುವಾಗ ಒಂದು ವಿಶೇಷಾಂಶವನ್ನು ನಮ್ಮ ಮನಸ್ಸುಗಳಿಗೆ ವಿಶದಪಡಿಸಿಕೊಳ್ಳಬೇಕು. ಪ್ರಣಯದಲ್ಲಿ ಎರಡು ಜಾತಿ: ಒಂದು ರಸಿಕಭಾವದ್ದು, ಇನ್ನೊಂದು ಪಶುಭಾವದ್ದು.

ಮನುಷ್ಯನ ಎಲ್ಲ ಕಾರ್ಯಗಳಲ್ಲಿಯೂ ಎರಡು ಅಂಗಗಳು ಕೂಡಿ ಕೊಂಡಿರುತ್ತವೆ: ಒಂದು ಅಂತರಂಗ, ಇನ್ನೊಂದು ಬಹಿರಂಗ. ಅಂತರಂಗ ವೆಂದರೆ ಮುಖ್ಯವಾಗಿ ಮನಸ್ಸು; ಬಹಿರಂಗವೆಂದರೆ ಮುಖ್ಯವಾಗಿ ದೇಹ. ನಾವು ಮಾಡುವ ಎಲ್ಲ ಕೆಲಸಗಳಲ್ಲಿಯೂ ಮನಸ್ಸೂ ದೇಹವೂ ಒಟ್ಟುಗೂಡಿ ಕೊಂಡೇ ಇರುತ್ತವೆ. ಆದರೆ ಕೆಲವು ಕೆಲಸಗಳಲ್ಲಿ ಮನಸ್ಸಿನ ಅಂಶ ದೊಡ್ಡ ದಾಗಿ ದೇಹದ ಅಂಶ ಕೊಂಚದ್ದಾಗಿ ಇರುತ್ತವೆ: ಉದಾಹರಣೆಗೆ ಗ್ರಂಥ

ವ್ಯಾಸಂಗ, ಸಂಗೀತಶ್ರವಣ. ಇನ್ನುಕೆಲವು ಕೆಲಸಗಳಲ್ಲಿ ದೇಹದ ಅಂಶ ಹೆಚ್ಚಿನದಾಗಿ ಮನಸ್ಸಿನ ಅಂಶ ಕಡಮೆಯದಾಗಿ ಇರುತ್ತವೆ : ಉದಾಹರಣೆಗೆ ಊಟ, ಆಟ ಮೊದಲಾದವು.

ಪ್ರಣಯದಲ್ಲಿ ಎರಡು ಜಾತಿಗಳು ಹೀಗೆ ನಿಶ್ಚಿತವಾಗಿವೆ. ಯಾವ ಬಗೆಯ ವಿಹಾರದಲ್ಲಿ ಮನೋವ್ಯಾಪಾರಗಳು ಮುಖ್ಯವೋ ಅದು ರಸಿಕತೆ. ಯಾವ ಬಗೆಯ ವಿಹಾರದಲ್ಲಿ ದೇಹವ್ಯಾಪಾರಗಳು ಮುಖ್ಯವೋ ಅದು ಮೃಗೀಯತೆ. ಮೃಗಚೇಷ್ಟಾ-ಮುಖ್ಯವಾದ ಪ್ರಣಯವು ಪರಿಣಾಮದಲ್ಲಿ ತಾತ್ಕಾಲಿಕಮಾತ್ರದ್ದು. ರಸಿಕಪ್ರಣಯವಾದರೋ ಮನಸ್ಸಿನಲ್ಲಿ ಚಿರಕಾಲ ನಿಂತು ಜೀವವನ್ನು ಸಂಸ್ಕಾರಕ್ಕೊಳಪಡಿಸುತ್ತದೆ. ಸಾತ್ತ್ವಿಕ ಪ್ರೇಮವು ಜೀವವನ್ನು ಪಕ್ವಪಡಿಸಿ, ಅದರ ಕಠಿಣತೆಗಳನ್ನು ನಯಪಡಿಸಿ, ಅದರ ವಿಶಾಲ ವ್ಯಾಪನೆಗೆ ಪ್ರೇರಕವಾಗುತ್ತದೆ. ಇಂಥ ಸಾತ್ತ್ವಿಕ ಪ್ರಣಯವು ಕೃಷ್ಣ ಗೋಪೀ ಪ್ರಸಂಗದಲ್ಲಿ ಸ್ಮರಣೆಗೆ ಬರಬೇಕಾದದ್ದು.

ಈ ದೃಷ್ಟಿಯಿಂದ ಕೃಷ್ಣಸ್ವರೂಪವನ್ನು ನೋಡಬಹುದೆಂದು ನನಗನ್ನಿಸುತ್ತದೆ. ಶ್ರೀಕೃಷ್ಣಾವತಾರವು ಮನಸ್ಸಿನ ದೃಷ್ಟಿಯಿಂದ ಸರ್ವಾಂಗ ಸಂಪೂರ್ಣವಾದ ಅವತಾರ. ಶ್ರೀರಾಮಾವತಾರವೂ ಒಂದು ಅಂಶದ ವಿನಾ ಪೂರ್ಣಾವತಾರವೇ. ರಾಮಾವತಾರದಲ್ಲಿ ಕಾಮಲೋಭಗಳ ಪ್ರಸಕ್ತಿಯಿಲ್ಲ. ಕಾಮಲೋಭಗಳೆರಡೂ ದೋಷಬೀಜಗಳೇ : ಎರಡೂ ಮನುಷ್ಯಸ್ವಭಾವಕ್ಕೆ ಪೂರ್ವಜನ್ಮಗಳಿಂದ ಬಂದ ದುರ್ವಾಸನೆಗಳೇ. ಅವುಗಳ ಪ್ರಶ್ನೆಗೆ ರಾಮ ಚರಿತ್ರೆಯಲ್ಲಿ ಸ್ಥಾನವಿಲ್ಲದೆಹೋಯಿತು. ಭಾಗವತಕಾರನು ಆ ಎರಡು ದೋಷಬೀಜಗಳ ಸಮಕ್ಷದಲ್ಲಿ ಅವತಾರಪುರುಷನೊಬ್ಬನು ಹೇಗೆ ನಡೆದು ಕೊಂಡಾನು ಎಂಬುದನ್ನು ಚಿತ್ರಿಸಲು ಪ್ರಯತ್ನಿಸಿದ್ದಾನೆ. ಹೀಗೆ ಶ್ರೀಕೃಷ್ಣ ಕಥೆಯು ವಿಷ್ಣುವಿನ ಮಿಕ್ಕ ಒಂಭತ್ತು ಅವತಾರಗಳಿಂದ ವಿಲಕ್ಷಣವಾಗಿದೆ. ಮೊದಲೇ ಹೇಳಿದಂತೆ ಮತ್ಸ್ಯ, ಕೂರ್ಮ, ವರಾಹ—ಈ ಮೂರು ಅವತಾರ ಗಳಲ್ಲಿ ಮಾನುಷ ಪ್ರಸಂಗವೇ ಇಲ್ಲ. ನಾರಸಿಂಹ ವಾಮನಗಳಲ್ಲಿ ಮಾನುಷ ಪ್ರಸಕ್ತಿಯು ಸ್ವಲ್ಪಾಂಶವಾಗಿದೆ. ಪರಶುರಾಮನಲ್ಲಿ ಮಾನುಷವು ಏಕದೇಶೀ ಯವಾಗಿದೆ. ಶ್ರೀರಾಮನಲ್ಲಿ ಕಿಂಚಿನ್ನ್ಯೂನವಾಗಿದೆ. ಶ್ರೀಕೃಷ್ಣನ ಸಂದರ್ಭಲ್ಲಿ ಮಾನುಷದ ಗುಣದೋಷಗಳೆರಡೂ ಪರಾಕಾಷ್ಠೆಗೆ ಬಂದು ಉಭಯಾತೀತ

ವಾದ ಅಧಿಧರ್ಮ ದಶೆಯು ಪ್ರತ್ಯಕ್ಷೀಕೃತವಾಗಿದೆ. ಇನ್ನುಳಿದ ಬುದ್ಧ, ಕಲ್ಕಿ ಅವತಾರಗಳಲ್ಲಿ ಮಾನುಷಾಂಶವು ಮತ್ತೆ ಸ್ವಲ್ಪ ಸ್ವಲ್ಪವಾಗುತ್ತದೆ. ಮಾನುಷದ ಪ್ರಶ್ನೆಗಳನ್ನು ಮೇಲಕ್ಕೆತ್ತಿ ತೋರಿಸುವುದು ಕೃಷ್ಣಕಥೆಯಿಂದ ನಮಗಾಗುವ ವಿಶೇಷ ಉಪಕಾರ.

ಬಂಕಿಮಚಂದ್ರರು ಯಾವ ಪ್ರಶ್ನೆಯನ್ನು ಎತ್ತಿ ಬಹುದೂರ ಸಾಗಿಸಿ ಉತ್ತರ ತೋರಿಸಿದರೋ ಅದನ್ನು ಇನ್ನು ಕೊಂಚ ದೂರ ಮುಂದಕ್ಕೆ ತೆಗೆದುಕೊಂಡುಹೋಗಿ ಬಂಕಿಮಚಂದ್ರರ ಅಭಿಪ್ರಾಯಕ್ಕೆ ವಿರೋಧ ತೋರದಂತಿರುವ ಇನ್ನೊಂದು ಉತ್ತರದ ಸಾಧ್ಯತೆಯನ್ನು ವಾಚಕರ ಮುಂದೆ ಇರಿಸಲು ಇಲ್ಲಿ ನಾನು ಪ್ರಯತ್ನಮಾಡಿದ್ದೇನೆ. ಈ ಪ್ರಯತ್ನದ ಗ್ರಾಹ್ಯತೆಯ ವಿಚಾರ ವಾಚಕರ ತೀರ್ಮಾನಕ್ಕೆ ಸೇರಿದ್ದು. ನನ್ನ ಮನಸ್ಸಿನ ಕೆಲವು ಅಭಿಪ್ರಾಯಗಳು ಸ್ಪಷ್ಟಪಟ್ಟು ಸುಸಂಬದ್ಧವಾಗಲು ಈ ಪ್ರಯತ್ನ ನನಗೆ ಪ್ರಯೋಜಕವಾಗಿದೆ.

ಅದು ಹೇಗಾದರಿರಲಿ. ಬಂಕಿಮಚಂದ್ರರು, ವ್ಯಾಸರಾಯರು—ಇಂಥ ಮಹನೀಯರ ಗ್ರಂಥದಲ್ಲಿ ಸೇರಿಕೊಳ್ಳಲು ನನಗೆ ಅವಕಾಶ ದೊರೆತಿರುವುದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಮಹಾಜನರು ಈ ಗ್ರಂಥವನ್ನು ಪಾರಾಮರ್ಶಿಸುವುದು ಸರ್ವಹಿತಕರವೆಂದು ನಾನು ನಂಬಿದ್ದೇನೆ.

ಗತಿ ಸರ್ವರ್ಗಂ ಕೃಷ್ಣಂ ।
ಯತಿಗಂ ಕಾಮಿಗನುಸಂಸ್ಕೃತಂಗಂ ವ್ರತಿಗಂ ॥
ಪತಿತಂಗಂ ಕೃತಮತಿಗಂ ।
ಹಿತಪಥಮಂ ತತ್ತದುಚಿತನಯದಿಂ ತೋರ್ಪನ್ ॥

ಡಿ. ವಿ. ಜಿ.

18-7-1965
ಗೋಖಲೆ ಸಾರ್ವಜನಿಕ
ವಿಚಾರ ಸಂಸ್ಥೆ
ಬೆಂಗಳೂರು.

ನಾಲ್ಕನೇ ಮುದ್ರಣ

ದಿವಂಗತ ಶ್ರೀಮಾನ್ ಆರ್. ವ್ಯಾಸರಾಯರಿಂದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟ ಶ್ರೀ ಬಂಕಿಮಚಂದ್ರರ ಬಂಗಾಳಿ ಶ್ರೀಕೃಷ್ಣ ಚರಿತ್ರೆಯ ನಾಲ್ಕನೆಯ ಮುದ್ರಣ ಇದು. ಮೊದಲನೆಯ ಮುದ್ರಣವು ಅಕ್ಷರಕೃಪಾ ಶ್ರೀಕಂಠಯ್ಯನವರಿಂದ ಮುದ್ರಿಸಲ್ಪಟ್ಟಿತು. ಎರಡು ಮತ್ತು ಮೂರನೇ ಮುದ್ರಣಗಳು ಶ್ರೀ ವ್ಯಾಸರಾಯರಿಂದಲೇ ಅಚ್ಚು ಮಾಡಿಸಲಾಗಿ ಈಗ ಒಂದು ಪ್ರತಿಯೂ ಸಿಗಲಾರದಾಗಿದೆ. ಕನ್ನಡದಲ್ಲಿ ಅದೂ ಈ ಕೃಷ್ಣಜೀವಿನಯ ಚರಿತ್ರೆಯಂಥಾ ವಿಮರ್ಶನೆಯನ್ನು ಪ್ರಕಟಿಸುವುದು ಸಾಹಸೋದ್ಯೋಗವೇ ಸರಿ. ಈಚೀಚೆಗೆ ಕನ್ನಡದಲ್ಲಿ ಕಥೆ, ಕಾದಂಬರಿಗಳಿಗೆ ಪ್ರೋತ್ಸಾಹವಿದ್ದರೂ, ವಿಮರ್ಶನೆ, ತರ್ಕ ಮುಂತಾದುವುಗಳಿಗೆ ಪ್ರೋತ್ಸಾಹವು ವಿರಳವೇ ಸರಿ. ಈ ಸಾಹಸಕ್ಕೆ ಅದೂ ನಮ್ಮ ತಂದೆಯವರು ಗತಿಸಿದ ಮೇಲೆ ಪ್ರಯತ್ನಿಸುವುದು ಒಂದು ರೀತಿಯ ಹುಚ್ಚುತನವೇ ಎಂದು ಭಾವನೆ ಇತ್ತು. ನಮ್ಮ ತಂದೆಯವರಂತೂ ೭-೮ ಪುಸ್ತಕಗಳನ್ನು ಪ್ರಕಟಿಸಿದರೂ ಖರ್ಚಾದ ಹಣ ಹುಟ್ಟಿದ್ದಿರಲಿ, ಹೇರಳವಾಗಿ, ಹಣ ವ್ಯಯವಾಗದೇ ಇಲ್ಲವೇ ಇಲ್ಲ. ಹಣವನ್ನು ಕಳೆದುಕೊಳ್ಳುವುದರಲ್ಲಿ ಅವರದೇ ಒಂದು ಸಾಮರ್ಥ್ಯ ಮತ್ತು ಧೈರ್ಯ. ನಮಗಂತೂ ಸಾಮರ್ಥ್ಯದ ಮಾತಿರಲಿ, ಧೈರ್ಯವೂ ಯಾವಾಗಲೂ ಬಂದದ್ದಿಲ್ಲ. ನಮ್ಮ ತಂದೆಯವರು ಶ್ರೀಕೃಷ್ಣ ಚರಿತ್ರೆಯನ್ನು ಬಂಗಾಳಿಯಲ್ಲಿ ಓದಿ ಆನಂದಿಸಿದ ಮೇಲೆ ಇಂಥಾ ಶ್ರೇಷ್ಠ ವಿಮರ್ಶನೆಯನ್ನು ಎಲ್ಲಾ ಕನ್ನಡಿಗರೂ ಓದಿ ತಮ್ಮಂತೆಯೇ ಆನಂದಪಡಬೇಕೆಂಬ ಒಂದೇ ದೃಷ್ಟಿ ಹೊರತು, ಅದರಿಂದ ತಮಗಾಗುವ ಖರ್ಚು, ನಷ್ಟ, ಕಷ್ಟಗಳಿಗೆ ಅವರ ಮನಸ್ಸು ಯಾವಾಗಲೂ ತಿರಿಗಿರಲಿಲ್ಲ.

ನಾವು, ಅವರ ಮಕ್ಕಳು ಈ ವಿಮರ್ಶನೆಯನ್ನು ಕೆಲವು ಬಾರಿ ಓದಿ ಸಂತೋಷಪಟ್ಟಿದ್ದರೂ ಅದರ ಮರುಪ್ರಕಟನೆಗೆ ಧೈರ್ಯೋತ್ಸಾಹ ಸಾಮರ್ಥ್ಯಗಳಿಲ್ಲದೆ, ಎಂದೂ ಗಮನವೇ ಕೊಟ್ಟಿರಲಿಲ್ಲ. ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಡಾ|| ಡಿ. ವಿ. ಜಿ. ಯವರು ಸುಮಾರು ಮೂರು ವರ್ಷಗಳ ಕಾಲ ಭಗವದ್ಗೀತೆಯನ್ನು ರಸವತ್ತಾಗಿಯೂ ಸಾಂಗೋಪಾಂಗವಾಗಿಯೂ ಮತ್ತು ಈಚಿನ ಯುವಕರ ಮನಸ್ಸಿಗೆ ಒಪ್ಪುವಂತೆಯೂ, ಹಿಡಿಯುವಂತೆಯೂ ಉಪದೇಶ ಮಾಡಿ ಕೊನೆಗೆ ಶ್ರೀಕೃಷ್ಣನ ಜನ್ಮ, ಕಾರ್ಯ, ಅವತಾರ,

ಹಿರಿಮೆಯನ್ನು ಐತಿಹಾಸಿಕವಾಗಿ ತಿಳಿಯಬೇಕಾದರೆ, ಅದಕ್ಕೆ ಕನ್ನಡದಲ್ಲಿ ಸಹಾಯಕವಾದವು ಎರಡು ಗ್ರಂಥಗಳು ಎಂದು ಆದೇಶ ಕೊಟ್ಟರು. (೧) ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಯವರ ವಚನ ಭಾರತ ಮತ್ತು (೨) ಶ್ರೀಮಾನ್ ಆರ್. ವ್ಯಾಸರಾಯರಿಂದ ಪರಿವರ್ತಿಸಲ್ಪಟ್ಟ ಶ್ರೀಕೃಷ್ಣ ಚರಿತ್ರೆ. ಈ ಭಗವದ್ಗೀತೆಯ ವ್ಯಾಸಂಗಗೋಷ್ಠಿಯಲ್ಲಿ ಶಿಷ್ಯನಾಗಿರುವ ಭಾಗ್ಯ ನನಗೂ ಇತ್ತು. ಶ್ರೀಮಾನ್ ಡಿ. ವಿ. ಜಿ. ಯವರು ಕೃಷ್ಣ ಚರಿತ್ರೆಯ ಪ್ರತಿಗಳು ಈಚೆಗೆ ಇಲ್ಲದಂತಾಗಿದೆ, ಆದರ ಪ್ರತಿ ಮುದ್ರಣಕ್ಕೆ ನೀನು ಉತ್ಸಾಹಪಡಬೇಕೆಂದು ಆದೇಶ ಕೊಟ್ಟರು. ಅಷ್ಟಲ್ಲದೆ ಈಗ ಕನ್ನಡದಲ್ಲಿ ಈ ವಿಧವಾದ ಪ್ರತಿಗಳಿಗೆ ಮಾರಾಟಕ್ಕಿರುವ ಕಷ್ಟವನ್ನು ಅರಿತು, ಅವರು ಈ ಗ್ರಂಥಕ್ಕೆ ತಮ್ಮದೇ ಆದ ಮುನ್ನುಡಿಯನ್ನು ಬರೆದುಕೊಟ್ಟು ಈ ಮುದ್ರಣಕ್ಕೆ ಸಹಾಯ ಮಾಡಲು ಉತ್ಸಾಹದಿಂದಲೂ, ಸಂತೋಷದಿಂದಲೂ ಒಪ್ಪಿದರು. ಕೃಷ್ಣಜೀವಿನಿಯ ಚರಿತಾತ್ಮಕವಾದ ವಿಮರ್ಶನಾ ಗ್ರಂಥವು ಪುನಃ ದೊರಕಲಿ ಎಂಬ ಒಂದು ಉದ್ದೇಶ ಮಾತ್ರವೇ ಅವರು ತಮ್ಮ ಅಮೂಲ್ಯವಾದ ಮತ್ತು ಅತ್ಯಂತ ಸಹಕಾರಿಯಾದ ಮುನ್ನುಡಿಯನ್ನುಕೊಡ ಲೊಪ್ಪಿದ್ದು ಕಾರಣ ಎಂದು ನನಗೆ ತೋರುತ್ತೆ. ಮತ್ತು ಅವರ ಮುನ್ನುಡಿ ಮತ್ತು ಪ್ರೋತ್ಸಾಹವಿಲ್ಲದೆ ನಾನು ಈ ಕಾರ್ಯಕ್ಕೆ ಸಾಹಸ ಮಾಡುತ್ತಲೇ ಇರಲಿಲ್ಲ.

ಈ ಸಂದರ್ಭದಲ್ಲಿ ಪೂಜ್ಯರಾದ ನಮ್ಮ ತಂದೆಯವರ ಜೀವನ ವಿಷಯ ವನ್ನು ಹೇಳುವುದು ಉಚಿತ. ಇವರ ಜನ್ಮ, ವಿದ್ಯಾಭ್ಯಾಸವು ಕಡುಬಡತನ ದಲ್ಲಿಯೇ ಸಾಗಿತು. ಸುಮಾರು ಸಾವಿರದ ಒಂಬೈನೂರರಲ್ಲಿ ತಂದೆಯನ್ನು ಕಳೆದುಕೊಂಡು, ಬೆಂಗಳೂರಿಗೆ ಬಂದು, ಇತರರ ಆಶ್ರಯವಿಲ್ಲದೆಯೇ Geology ಯಲ್ಲಿ ಪಧವೀಧರರಾಗಿದ್ದು, ಇವರ ಸಾಮರ್ಥ್ಯ ಮತ್ತು ಸ್ಥೈರ್ಯ ಗಳಿಲ್ಲದ ಮತ್ತೊಬ್ಬನಿಗೆ ಅಸಾಧ್ಯವಾಗಿತ್ತು. ತದನಂತರ ಕೆಲವು ವರ್ಷ ಗಳು Peninsular Company ಯಲ್ಲಿ ಜಿಯಾಲಜಿಸ್ಟ್ ಆಗಿದ್ದು ಆಮೇಲೆ ಬಿಹಾರ್‌ನಲ್ಲಿ Tata Steel Company ಪ್ರಾರಂಭವಾದಾಗ Geologist ಆಗಿ ಉದ್ಯೋಗ ಪಡೆದರು. ಈ ಬೃಹತ್ ಕಾರ್ಖಾನೆಗೆ ಬೇಕಾದ ಕಬ್ಬಿಣದ ಅದಿರು, ಕಲ್ಲಿದ್ದಲು, ಸುಣ್ಣದಕಲ್ಲು ಗಣಿಗಳನ್ನು ಪತ್ತೆ ಹಚ್ಚುವುದೇ ಇವರ ಕಾರ್ಯವಾಗಿತ್ತು. ಈ ಕಾರ್ಯದಲ್ಲಿ ಪ್ರತಿ ವರ್ಷವೂ ಏಳೆಂಟು ತಿಂಗಳು

ಗುಡ್ಡಕಾಡುಗಳಲ್ಲಿ ಅಲೆದಾಡುವುದು ಅವಶ್ಯಕವಾಗಿತ್ತು. ಬೇರಿನ್ನೇನೂ ಹವ್ಯಾಸವಿಲ್ಲದೆ, ತಮ್ಮ ಸಹೋದ್ಯೋಗಿಗಳಿಂದ ಬಂಗಾಳಿಯನ್ನು, ಹಿಂದಿಯನ್ನು ಚೆನ್ನಾಗಿ ಅಭ್ಯಾಸ ಮಾಡಿ, ಆ ಭಾಷೆಗಳ ಸಾಹಿತ್ಯಕ್ಕೆ ಮಾರುಹೋಗಿ ಈ ಸಾಹಿತ್ಯರತ್ನಗಳನ್ನು ಕನ್ನಡಿಗರೂ ಓದಿ ಆನಂದಿಸಲೆಂಬ ಉದ್ದೇಶದಿಂದ ಈ ಭಾಷೆಗಳಲ್ಲಿ ಸಾಕಷ್ಟು ಪಾಂಡಿತ್ಯವನ್ನು ಗಳಿಸಿದರು. ಈಗಲೂ ಜಂಶೆಡ್‌ಪುರದ Tata Companyಯ ಮಹಾದ್ವಾರದಲ್ಲಿ ಇವರ Life size ತೈಲಚಿತ್ರವನ್ನು Early Poineers ಎಂಬ ಶಿರೋನಾಮೆಯಲ್ಲಿ ತೂಗುಹಾಕಿದೆ.

ಹೀಗೆ ಎಂಟು ವರ್ಷಗಳ ನಂತರ, ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಆದೇಶದಂತೆ Tata Companyಯನ್ನು ಬಿಟ್ಟು ಭದ್ರಾವತಿ ಕಬ್ಬಿಣ ಕಾರ್ಖಾನೆಗೆ ಬೇಕಾದ ಅದಿರು, ಸುಣ್ಣಕಲ್ಲನ್ನು ಪತ್ತೆಹಚ್ಚುವುದಕ್ಕಾಗಿ ಮೈಸೂರು ಸರ್ಕಾರದಲ್ಲಿ Geologist on Special duty ಆಗಿದ್ದರು. ಭದ್ರಾವತಿ ಕಾರ್ಖಾನೆಗೆ ಬೇಕಾದ ಖಚ್ಚಾ ಮಾಲುಗಳನ್ನು ಹುಡುಕುವ ಕೆಲಸ ಮುಗಿದ ನಂತರ, ಇವರು ಆಗಿನ ಮಹಾರಾಜರ ಆದೇಶದಂತೆ ಬೆಂಗಳೂರಿನಲ್ಲಿ ಬಂದು ಪಿಂಗಾಣಿ ಕಾರ್ಖಾನೆಯ ಯೋಜನೆಯನ್ನು ಅದಕ್ಕೆ ಬೇಕಾದ ಖಚ್ಚಾ ಮಾಲುಗಳನ್ನು ಹುಡುಕುವುದರಲ್ಲೂ ಒಂದೆರಡು ವರ್ಷಗಳನ್ನು ಅದೇ ಇಲಾಖೆಯಲ್ಲಿ ಕಳೆದರು. ಅವರು ತಯಾರಿಸಿದ ಯೋಜನೆಯಿಂದಲೇ ಈಗ ಬೆಂಗಳೂರಿನಲ್ಲಿರುವ Government Porcelain Factoryಯು ಪ್ರಾರಂಭವಾಯಿತು. ಮೈಸೂರಿನ ಸರ್ಕಾರದಲ್ಲಿ ತಮ್ಮ ಕಾರ್ಯವು ಮುಗಿದನಂತರ ಪುನಃ ಅವರು ಬಂಗಾಳಕ್ಕೆ ತೆರಳಿ ಒಂದು ದೊಡ್ಡ ವ್ಯಾಪಾರಿ ಸಂಸ್ಥೆಯಲ್ಲಿ Industrial Geologist ಆಗಿ ಸೇರಿ ಆ ಸಂಸ್ಥೆಗೆ ಅನೇಕ ಅಮೂಲ್ಯವಾದ ಕಲ್ಲಿದ್ದಲು ಗಣಿಗಳನ್ನು ಮಧ್ಯಪ್ರಾಂತದಲ್ಲಿ ಪತ್ತೆ ಹಚ್ಚಿ ಕೊಟ್ಟರು. ಈ ಗಣಿಗಳು ಈಗಲೂ ಭಾರಿ ಕೈಗಾರಿಕೆಗಳಾಗಿ ಮುಂದುವರೆಯುತ್ತಿವೆ.

ಹೀಗೆ ಇವರು ನಿವೃತ್ತರಾದ ಮೇಲೆ ಪುನಃ ಬೆಂಗಳೂರಿನಲ್ಲಿ ನೆಲಸಿದರು. ಆಗ ತಮ್ಮ ಸಹಪಾಠಿಯೂ, ಸ್ನೇಹಿತರೂ ಆದ ಸರ್. ಮಿರ್ಜಾ ಇಸ್ಮೇಯಿಲ್‌ರವರ ಸಲಹೆ ಮತ್ತು ಸಹಾಯದಿಂದ Mysore Stoneware Pipes ಎಂಬ ದೊಡ್ಡ ಕಾರ್ಖಾನೆಯನ್ನು ಸ್ಥಾಪಿಸಿದರು. ಮುಂದೆ ಕೆಲವು ವರ್ಷಗಳ

ನಂತರ Mysore Electro Chemical Works ಎಂಬ ಮತ್ತೊಂದು ದೊಡ್ಡ ಕೈಗಾರಿಕೆಯು ಬೆಂಗಳೂರಿನಲ್ಲಿ ಸ್ಥಾಪಿತವಾಗುವುದಕ್ಕೆ ಪ್ರಮುಖ ಕರ್ತರಾದರು. ಈ ಎಲ್ಲಾ ಕೈಗಾರಿಕೆಗಳು ಈಗಲೂ ಚೆನ್ನಾಗಿ ಮುಂದು ವರೆಯುತ್ತಿವೆ.

ಹೀಗೆ Industrial Geologist ಆಗಿ ಹಿಂದೂಸ್ಥಾನದಲ್ಲೆಲ್ಲಾ ಖ್ಯಾತಿ ಪಡೆದರೂ, ಅವರು ಕನ್ನಡ, ಇಂಗ್ಲೀಷ್, ಹಿಂದಿ, ಸಂಸ್ಕೃತ, ಬಂಗಾಳಿ ಈ ಭಾಷೆಗಳಲ್ಲಿ ಸಾಕಷ್ಟು ಪಾಂಡಿತ್ಯವನ್ನು ಯಾವಾಗಲೂ ಹೊಂದೇ ಇದ್ದರು. ಮತ್ತು ಅದರ ವ್ಯವಸಾಯವು ಸದಾ ಸಾಗುತ್ತಲೇ ಇತ್ತು. ಅವರು ಉದ್ಯೋಗದಲ್ಲಿ Industrial Geologist ಆದರೂ ಅವರ ಕೆಲವು ಹಳೆಯ ಮಿತ್ರರಿಗೆ ಸಾಹಿತಿ ಎಂದೇ ಹೆಚ್ಚು ಪರಿಚಯ. ಇವರು ೧೯೫೪ರಲ್ಲಿ ೭೬ ವರ್ಷಗಳ ತುಂಬು ಜೀವನವನ್ನು ಸಾಗಿಸಿ, ಕಾಲವನ್ನೈದಿದರು.

ಈ ನಾಲ್ಕನೇ ಮುದ್ರಣವನ್ನು ಪ್ರಕಟಿಸುವುದಕ್ಕೆ ಮೇಲಿನ ಮುಖ್ಯ ಪ್ರಚೋದನೆಯಲ್ಲದೆ, ನನ್ನ ಅಣ್ಣತಮ್ಮಂದಿರ ಮತ್ತು ಶ್ರೀ ವ್ಯಾಸರಾಯರ ಸಮೀಪ ಬಂಧುಗಳಿಂದ ಬೇಕಾದ ಸಹಾಯವೆಲ್ಲಾ ದೊರಕಿದೆ. ಈ ಕೆಳ ಕಂಡವುಗಳು ನಮ್ಮ ತಂದೆಯವರಿಂದ ಅವರು ಜೀವಿಸಿದ್ದಾಗಲೇ ಪ್ರಕಟಿಸಲ್ಪಟ್ಟವು. ಅವುಗಳ ಪ್ರತಿಯು ಯಾವುದೂ ಈಗ ದೊರೆಯಲಾರದಾಗಿದೆ.

೧. ವಿವಾಹ ಮಂಗಳ
೨. ದುರ್ಗಾದಾಸ
೩. ಪ್ರತಾಪಸಿಂಹ
೪. ಬ್ರಾಹ್ಮಣರ ಹುಡುಗಿ
೫. ಗುಲ್ಛಗುಚ್ಛ
೬. ಶ್ರೀಕೃಷ್ಣ ಚರಿತ್ರೆ

ಶ್ರೀಕೃಷ್ಣ ಚರಿತ್ರೆಯ ಈ ನಾಲ್ಕನೇ ಮುದ್ರಣಕ್ಕೆ ಓದುಗರಿಂದ ಸಾಕಷ್ಟು ಪ್ರೋತ್ಸಾಹ ದೊರಕಿದಲ್ಲಿ ಮಿಕ್ಕವುಗಳನ್ನು ಕಾಲಕ್ರಮದಲ್ಲಿ ಪ್ರಕಟಿಸಬೇಕೆಂಬ ಅಭಿಲಾಶೆ ಇದೆ.

೩೧-೭-೬೫ **ಆರ್. ವಿ. ಪ್ರಭಾಕರ್ ರಾವ್**

'ವ್ಯಾಸಕೃಪ'
೬೫೬, ೧೧ನೇ ಮೇನ್ ರಸ್ತೆ,
ಜಯನಗರ, ೪ನೇ ಬ್ಲಾಕ್, ಬೆಂಗಳೂರು-೧೧.

ವಿಷಯ ಸೂಚಿಕೆ

ಪರಿಚ್ಛೇದ		ಪುಟ
	ಪ್ರಥಮ ಖಂಡ	
೧	ಗ್ರಂಥದ ಉದ್ದೇಶ	೧
೨	ಕೃಷ್ಣ ಚರಿತ್ರೆಯು ಹೇಗಿತ್ತೆಂಬುದನ್ನು ತಿಳಿಯಲು ಉಪಾಯವೇನು?	೬
೩	ಮಹಾಭಾರತದ ಐತಿಹಾಸಿಕತೆ	೧೧
೪	ಮಹಾಭಾರತದ ಐತಿಹಾಸಿಕತೆಯ ವಿಷಯದಲ್ಲಿ ಯೂರೋಪಿಯನ್ನರ ಮತ	೧೪
೫	ಕುರುಕ್ಷೇತ್ರದ ಯುದ್ಧವು ನಡೆದದ್ದು ಯಾವಾಗ ...	೧೮
೬	ಪಾಂಡವರ ಐತಿಹಾಸಿಕತೆ	೨೬
೭	,, ,, ...	೩೭
೮	ಕೃಷ್ಣನ ಐತಿಹಾಸಿಕತೆ	೪೦
೯	ಮಹಾಭಾರತದಲ್ಲಿ ಈಚಿಗೆ ಸೇರಿಸಲ್ಪಟ್ಟಿರುವವುಗಳ ವಿಷಯ ...	೪೫
೧೦	ಮಹಾಭಾರತದಲ್ಲಿ ಪ್ರಕ್ಷಿಪ್ತಗಳು	೫೦
೧೧	ಗುರ್ತಿಸುವುದರ ಫಲವು	೫೩
೧೨	ಅನೈಸರ್ಗಿಕವೂ, ಅತಿಪ್ರಕೃತಿಯೂ	೫೬
೧೩	ಈಶ್ವರನು ಪೃಥ್ವಿಯಲ್ಲವತರಿಸಬಹುದೇ? ...	೬೧
೧೪	ಪುರಾಣ	೭೧
೧೫	,, ...	೮೧
೧೬	ಹರಿವಂಶ	೮೬
೧೭	ಐತಿಹಾಸಿಕ ಪೌರ್ವಾಪರ್ಯ	೮೮
	ದ್ವಿತೀಯ ಖಂಡ	
೧	ಯದುವಂಶ	೯೭
೨	ಕೃಷ್ಣನ ಜನ್ಮ	೧೦೦
೩	ಶೈಶವ	೧೦೨
೪	ಕೈಶೋರ ಲೀಲೆ	೧೦೭
೫	ವ್ರಜಗೋಪೀ—ವಿಷ್ಣುಪುರಾಣ	೧೧೬

ಪರಿಚ್ಛೇದ		ಪುಟ
೬	ವ್ರಜಗೋಪಿಯರು (ಹರಿವಂಶ)	೧೨೯
೭	ವ್ರಜಗೋಪಿ (ಭಾಗವತ)	೧೩೫
೮	,, (ಭಾಗವತ)	೧೪೩
೯	,, (ಭಾಗವತ)	೧೪೪
೧೦	ಶ್ರೀ ರಾಧೆ	೧೪೯
೧೧	ಬೃಂದಾವನ ಲೀಲೆಯು ಪರಿಸಮಾಪ್ತಿ	೧೬೭
	ತೃತೀಯ ಖಂಡ	
೧	ಕಂಸವಧೆ	೧೭೧
೨	ಶಿಕ್ಷಣ	೧೭೫
೩	ಜರಾಸಂಧ	೧೭೮
೪	ಕೃಷ್ಣನ ಮದುವೆ	೧೮೪
೫	ನರಕ ವಧೆ, ಮೊದಲಾದವು	೧೮೯
೬	ದ್ವಾರಕಾವಾಸ–ಸ್ಯಮಂತಕ	೧೯೨
೭	ಕೃಷ್ಣನ ಬಹು ವಿವಾಹ	೧೯೭
	ಚತುರ್ಥ ಖಂಡ	
೧	ದ್ರೌಪದೀ ಸ್ವಯಂವರ	೨೧೦
೨	ಕೃಷ್ಣ ಯುಧಿಷ್ಠಿರ ಸಂವಾದ	೨೧೪
೩	ಸುಭದ್ರಾಹರಣ	೨೨೧
೪	ಖಾಂಡವ ದಹನ	೨೩೭
೫	ಕೃಷ್ಣನ ಮನುಷ್ಯತೆ	೨೪೪
೬	ಜರಾಸಂಧ ವಧೆಯ ಪರಾಮರ್ಶೆ	೨೪೯
೭	ಕೃಷ್ಣ ಜರಾಸಂಧರ ಸಂವಾದ	೨೬೦
೮	ಭೀಮ ಜರಾಸಂಧರ ಯುದ್ಧ	೨೭೩
೯	ಅರ್ಘ್ಯಾಭಿಹರಣ	೨೭೯
೧೦	ಶಿಶುಪಾಲ ವಧೆ	೨೮೯
೧೧	ಪಾಂಡವರ ವನವಾಸ	೨೯೮
	ಪಂಚಮ ಖಂಡ	
೧	ಮಹಾಭಾರತ ಯುದ್ಧಕ್ಕೆ ಸೈನ್ಯವನ್ನೊದಗಿಸುವಿಕೆ ...	೩೦೧
೨	ಸಂಜಯನ ಪ್ರಯಾಣ	೩೦೯
೩	ಯಾನ ಸಂಧಿ	೩೧೮
೪	ಶ್ರೀ ಕೃಷ್ಣನ ಹಸ್ತಿನಾ ಯಾತ್ರೆಯ ಪ್ರಸ್ತಾಪ ...	೩೨೧

ವಿಷಯ ಸೂಚಿಕೆ

ಪರಿಚ್ಛೇದ				ಪುಟ
೫	ಪ್ರಯಾಣ	...	...	೩೨೫
೬	ಹಸ್ತಿನೆಯಲ್ಲಿ ಮೊದಲನೆಯ ದಿನ	...	...	೩೨೮
೭	ಹಸ್ತಿನೆಯಲ್ಲಿ ಎರಡನೆಯ ದಿನ	...	...	೩೩೪
೮	ಕೃಷ್ಣ ಕರ್ಣರ ಸಂವಾದ	...	...	೩೪೦
೯	ಉಪಸಂಹಾರ	...	...	೩೪೩
	ಷಷ್ಠ ಖಂಡ			
೧	ಭೀಷ್ಮನ ಯುದ್ಧ	...	...	೩೪೬
೨	ಜಯದ್ರಥನ ವಧೆ	...	...	೩೫೧
೩	ಎರಡನೇ ಸ್ತರದ ಕವಿ	...	...	೩೫೭
೪	ಘಟೋತ್ಕಚ ವಧೆ	...	...	೩೬೩
೫	ದ್ರೋಣ ವಧೆ	...	...	೩೬೭
೬	ಕೃಷ್ಣನು ಹೇಳಿದ ಧರ್ಮತತ್ವ	...	...	೩೮೨
೭	ಕರ್ಣ ವಧೆ	...	...	೩೯೮
೮	ದುರ್ಯೋಧನನ ವಧೆ	...	...	೪೦೨
೯	ಯುದ್ಧ ಪರಿಸಮಾಪ್ತಿ	...	...	೪೧೨
೧೦	ವಿಧಿ ಸಂಸ್ಥಾಪನೆ	...	...	೪೧೫
೧೧	ಕಾಮಗೀತೆ	...	...	೪೧೮
೧೨	ಕೃಷ್ಣನ ಪ್ರಯಾಣ	...	...	೪೨೨
	ಸಪ್ತಮ ಖಂಡ			
೧	ಯದುವಂಶ ನಾಶ	...	...	೪೨೬
೨	ಉಪಸಂಹಾರ	...	...	೪೩೨
	ಅಕ್ಷರಾನುಕ್ರಮಣಿಕೆ	...	...	೪೩೯

ಶ್ರೀ ಕೃಷ್ಣ ಚರಿತ್ರೆ

ಪ್ರಥಮ ಖಂಡ

ಉಪಕ್ರಮಣಿಕೆ

ಮಹತಸ್ತಮಸಃಪಾರೇ ಪೂರುಷಂ ಹ್ಯತಿತೇಜಸಂ ।
ಜ್ಞಾತ್ವಾ ತಂ ಮೃತ್ಯುಮತ್ಯೇತಿ ತಸ್ಮೈ ಜ್ಞೇಯಾತ್ಮನೇ ನಮಃ ॥
"ಮಹಾಭಾರತ, ಶಾಂತಿಪರ್ವ," ೪೭ನೆಯ ಅಧ್ಯಾಯ

ಪ್ರಥಮ ಪರಿಚ್ಛೇದ

ಗ್ರಂಥದ ಉದ್ದೇಶ

ಭಾರತವರ್ಷದಲ್ಲಿ ಅಧಿಕಾಂಶ ಹಿಂದುಗಳು ಶ್ರೀಕೃಷ್ಣನು ಈಶ್ವರಾವತಾರವೆಂದು ನಂಬಿರುವರು. ತತ್ರಾಪಿ ವಂಗದೇಶದ ಸಮಸ್ತ ಹಿಂದುಗಳೂ ಕೃಷ್ಣನು ಸ್ವಯಂ ಭಗವಂತನೆಂದು ದೃಢವಿಶ್ವಾಸದಿಂದಿರುವರು. ವಂಗ ದೇಶದಲ್ಲಿ ಕೃಷ್ಣೋಪಾಸನವು ಸರ್ವವ್ಯಾಪಕವೆಂದೇ ಹೇಳಬಹುದು. ಹಳ್ಳಿ ಹಳ್ಳಿಯಲ್ಲಿಯೂ ಕೃಷ್ಣಮಂದಿರಗಳೂ, ಮನೆ ಮನೆಯಲ್ಲಿಯೂ ಕೃಷ್ಣ ಪೂಜೆಯೂ, ಸುಮಾರು ಪ್ರತಿ ತಿಂಗಳಲ್ಲಿಯೂ ಕೃಷ್ಣೋತ್ಸವವೂ, ಉತ್ಸವ ಉತ್ಸವದಲ್ಲಿಯೂ ಕೃಷ್ಣ ನಾಟ್ಯವೂ, ಪ್ರತಿ ಕಂಠದಲ್ಲಿಯೂ ಕೃಷ್ಣ ಗೀತವೂ, ಸಕಲರ ಬಾಯಿಯಲ್ಲಿಯೂ ಕೃಷ್ಣನಾಮವೂ ಬೆಳಗುತ್ತಿರುವುದು. ಕೆಲವರು ಉಡುವ ವಸ್ತ್ರದಲ್ಲಿ ಕೃಷ್ಣನಾಮಾವಳಿಯನ್ನು ನೇಯಿಸುವರು; ಕೆಲವರು ಕೃಷ್ಣನಾಮಗಳ ಮುದ್ರೆಯನ್ನು ಮೈಗೆಲ್ಲಾ ಹಾಕುವರು. ಕೆಲವರು ಮೊದಲು ಕೃಷ್ಣನಾಮವನ್ನು ಬರೆಯದೆ ಓದುವುದನ್ನಾಗಲಿ ಬರೆಯುವುದನ್ನಾಗಲಿ ಆರಂಭಿಸರು. ಭಿಕಾರಿಯೂ ಕೂಡ ಜಯ ರಾಧೇ ಕೃಷ್ಣ

ಎಂದೆನ್ನದೆ ಭಿಕ್ಷವನ್ನು ಬೇಡನು. ಅಸಹ್ಯವಾದ ಮಾತನ್ನು ಕೇಳಿದಾಗ ಕೃಷ್ಣ ಕೃಷ್ಣ, ರಾಧೇ ಕೃಷ್ಣ ಎಂದು ತಮ್ಮ ಅಸಹ್ಯತೆಯನ್ನು ಹೊರ ಪಡಿಸುವರು. ತಾವು ಸಾಕುವ ಹಕ್ಕಿಗೆ ಕೂಡ ರಾಧೇ ಕೃಷ್ಣನೆಂದು ನುಡಿಯಲು ಮೊದಲು ಕಲಿಸುವರು. ಹೀಗೆ ಕೃಷ್ಣನು ಈ ದೇಶದಲ್ಲಿ ಸರ್ವ ವ್ಯಾಪಿಯಾಗಿರುವನು.

ಕೃಷ್ಣನು ಸ್ವಯಂ ಭಗವಂತನು, ಇದನ್ನು ಬಂಗಾಳಿಗಳೆಲ್ಲರೂ ನಂಬುವುದಾದರೆ ಸರ್ವ ಸಮಯದಲ್ಲೂ ಕೃಷ್ಣಾರಾಧನೆ, ಕೃಷ್ಣನಾಮ, ಕೃಷ್ಣಕಥೆ—ಇವು ಧರ್ಮದ ಏಳಿಗೆಗೆ ಸಾಧಕಗಳೇ ಸರಿ. ಸಕಲ ಸಮಯ ಗಳಲ್ಲಿಯೂ ಈಶ್ವರನ ಸ್ಮರಣೆಗಿಂತಲೂ ಮಂಗಳಕರವಾದದ್ದು ಮನುಷ್ಯ ನಿಗೇನಿದೆ ? ಆದರೆ ಇವರು ಭಗವಂತನೆಂಥವನೆಂದು ಭಾವಿಸಿರುವರು ? ಇವನು ಬಾಲ್ಯದಲ್ಲಿ ಕಳ್ಳನು—ಬೆಣ್ಣೆ ಹಾಲುಗಳನ್ನು ಕದ್ದುಣ್ಣುತ್ತಿದ್ದನು ; ಪಾರ ದಾರಿಕನು—ಲೆಕ್ಕವಿಲ್ಲದಷ್ಟು ಗೋಪಸ್ತ್ರೀಯರನ್ನು ಪಾತಿವ್ರತ್ಯಧರ್ಮ ದಿಂದ ಕಿಶೋರ ವಯಸ್ಸಿನಲ್ಲಿ ಭ್ರಷ್ಟರನ್ನಾಗಿ ಮಾಡಿದ್ದನು ; ಪರಿಣತ ವಯಸ್ಸಿನಲ್ಲಿ ವಂಚಕ, ಶಠ ; ವಂಚನೆಮಾಡಿ ದ್ರೋಣಾದಿಗಳನ್ನು ಕೊಲ್ಲಿಸಿ ದನು ; ಭಗವಂತನ ಚರಿತ್ರೆಯು ಈ ತೆರದ್ದೆ ? ಯಾರು ಕೇವಲ ಶುದ್ಧ ಸತ್ತ್ವನೋ, ಯಾರಿಂದ ಸರ್ವ ಪ್ರಕಾರವಾದ ಶುದ್ಧಿಯು ಹುಟ್ಟುವುದೋ ಯಾರ ಹೆಸರೆತ್ತುವುದರಿಂದಲೇ ಅಶುದ್ಧಿಯೂ ಅಪುಣ್ಯಗಳೂ ಸಂಪೂರ್ಣ ವಾಗಿ ದೂರ ಸಾಗುವುವೋ ಆ ಭಗವಂತನು ಮನುಷ್ಯದೇಹವನ್ನು ಧಾರಣ ಮಾಡಿ ಸಮಸ್ತ ಪಾಪಾಚರಣೆಯನ್ನೂ ಮಾಡಿದನೆಂಬುದು ಆ ಭಗವ ಚ್ಚರಿತ್ರೆಗೆ ಸಂಗತವೆ ?

ಭಗವಂತನ ಚರಿತ್ರೆಯನ್ನು ಈ ಪ್ರಕಾರವಾಗಿ ಕಲ್ಪಿಸಿದ್ದರಿಂದ ಭಾರತ ವರ್ಷದಲ್ಲಿ ಪಾಪಪ್ರವಾಹವು ಹೆಚ್ಚುತಬಂತೆಂಬ ಮಾತನ್ನು ಪ್ರತಿಭಟಿಸಿ ಜಯಸಂಪತ್ತನ್ನು ಹೊಂದಿದವರಾರನ್ನೂ ಕಾಣೆವೆಂದು ಸನಾತನ ಧರ್ಮ ವನ್ನು ದ್ವೇಷಿಸುವಂಥವರು ಹೇಳಿರಬಹುದು. ನಾನು ಕೂಡ ಕೃಷ್ಣನು ಭಗವಂತನೆಂದು ದೃಢವಾಗಿ ನಂಬಿರುತ್ತೇನೆ. ಪಾಶ್ಚಾತ್ಯ ಶಿಕ್ಷಣದ ಪ್ರಭಾವ ಪರಿಣಾಮವು ಕೂಡ ನನ್ನಲ್ಲಿದ್ದ ಈ ವಿಶ್ವಾಸವನ್ನು ಇನ್ನಷ್ಟು ದೃಢವಾಗಿ ಮಾಡಿದೆ. ಭಗವಾನ್ ಶ್ರೀಕೃಷ್ಣನ ಚರಿತ್ರೆಯು ಯಥಾರ್ಥವಾಗಿ

ಪುರಾಣೇತಿಹಾಸಗಳಲ್ಲಿ ಹೇಗೆ ವರ್ಣಿಸಲ್ಪಟ್ಟಿದೆಯೆನ್ನುವುದನ್ನು ತಿಳಿದು ಕೊಳ್ಳುವುದಕ್ಕೋಸ್ಕರ ನನಗೆ ಸಾಧ್ಯವಾದಮಟ್ಟಿಗೂ ಈ ಪುರಾಣೇತಿಹಾಸ ಗಳನ್ನು ಕುರಿತು ಆಲೋಚಿಸಿರುತ್ತೇನೆ. ಇದರ ಫಲವಾಗಿ ಕೃಷ್ಣನ ಸಂಬಂಧ ವಾಗಿ ಜನಸಮೂಹದಲ್ಲಿ ಹರಡಿರುವ ದುಷ್ಟ ಕಥೆಗಳೆಲ್ಲವೂ ಆಧಾರವಿಲ್ಲದವು ಗಳೆಂದು ತಿಳಿಸಬಲ್ಲವನಾಗಿರುತ್ತೇನೆ. ಉಪನ್ಯಾಸಕಾರರು ಬರೆದು ಬೆರ ಸಿರುವ ಕೃಷ್ಣ ಸಂಬಂಧವಾದ ಉಪನ್ಯಾಸಗಳೆಲ್ಲವನ್ನೂ ತೆಗೆದುಹಾಕಿದರೆ ವಿಶುದ್ಧವೂ, ಪರಮ ಪವಿತ್ರವೂ, ಅತಿಶಯ ಮಹತ್ತರವೂ ಆದದ್ದು ಉಳಿಯುತ್ತದೆ. ಇಂಥಾ ಸರ್ವಗುಣಗಳಿಂದ ಕೂಡಿದ ಯಾವ ಪಾಪಗಳ ಸೋಂಕೂ ಇಲ್ಲದ ಆದರ್ಶ* ಚರಿತ್ರೆಯು ಯಾವ ದೇಶದ ಚರಿತ್ರೆಯಲ್ಲಿಯೂ ಇಲ್ಲ; ಯಾವ ದೇಶದ ಕಾವ್ಯದಲ್ಲಿಯೂ ಇಲ್ಲ.

ಯಾವ ತೆರನ ವಿಚಾರದಿಂದ ಈ ರೀತಿಯಾದ ಸಿದ್ಧಾಂತಕ್ಕೆ ಬಂದಿರು ವೆಂಬುದನ್ನು ತಿಳಿಸುವುದು ಈ ಗ್ರಂಥದ ಒಂದು ಮುಖ್ಯೋದ್ದೇಶ. ಇದೂ ಅಲ್ಲದೆ ಈ ಗ್ರಂಥಕ್ಕೆ ಇನ್ನೊಂದು ವಿಶೇಷ ಪ್ರಯೋಜನವೂ ಉಂಟು. ನನ್ನ ಸ್ವಂತ ನಂಬಿಕೆಯನ್ನು ಪಾಠಕರು ಗ್ರಹಿಸಬೇಕಾದದ್ದಿಲ್ಲ. ಅಲ್ಲದೆ ಕೃಷ್ಣನ ಈಶ್ವರತ್ವವನ್ನು ಸ್ಥಾಪಿಸುವುದೂ ನನ್ನ ಉದ್ದೇಶವಲ್ಲ. ಈ ಗ್ರಂಥ ದಲ್ಲಿ ಅವನು ಮನುಷ್ಯನಾಗಿ ಮಾಡಿದ ಕೆಲಸಗಳನ್ನು ಮಾತ್ರವೇ ಸಮಾಲೋಚಿಸುತ್ತೇನೆ. ಹಿಂದೂ ಮತವು ಈಚೀಚೆಗೆ ಸ್ವಲ್ಪ ಪ್ರಬಲಿಸು ತ್ತಿದೆ. ಧರ್ಮದೇಳಿಗೆಯ ಈ ಕಾಲದಲ್ಲಿ ಕೃಷ್ಣ ಚರಿತ್ರೆಯ ಸವಿಸ್ತಾರ ಸಮಾಲೋಚನೆಯು ಪ್ರಯೋಜನೀಯ. ಪುರಾತನವನ್ನು ಉಳಿಸಿ ಕೊಳ್ಳಲು ಅದರಲ್ಲಿ ಉಳಿಸಿಕೊಳ್ಳಲು ಯೋಗ್ಯವಾದುದೇನಾದರೂ ಇದೆಯೋ ಇಲ್ಲವೋ ನೋಡಬೇಕು. ಹಾಗಲ್ಲದೆ ಪುರಾತನವನ್ನು ಎಬ್ಬಿಸಿ ಹಾರಿಸುವು ದಾದರೂ ಕೃಷ್ಣ ಚರಿತ್ರೆಯ ಸಮಾಲೋಚನೆಯು ಆವಶ್ಯಕ. ಏಕೆಂದರೆ, ಕೃಷ್ಣನನ್ನು ಹಾರಿಸಿದ ಹೊರತು ಪುರಾತನ ಎದ್ದೋಡದು.

ಇವಲ್ಲದೆ ಗುರುತರವಾದ ಬೇರೆಯೊಂದು ಉದ್ದೇಶವುಂಟು. ಇದಕ್ಕೆ ಮುಂಚೆ "ಧರ್ಮತತ್ತ್ವ" ಎಂಬ ಹೆಸರಿನ ಒಂದು ಗ್ರಂಥವನ್ನು ಪ್ರಕಾಶಿ

*ಆದರ್ಶ—ಮಾದರಿಯ ಮನುಷ್ಯ ಎಂದರೆ ಮೇಲು ಪಂಕ್ತಿಯಂತೆ ಇರುವವನು.

ಸಿರುವೆನು. ಅದರಲ್ಲಿ ನಾನು ತಿಳಿಯಪಡಿಸಲು ಉದ್ದೇಶಿಸಿರುವ ಅಂಶಗಳು ಸಂಕ್ಷೇಪವಾಗಿ ಈ ಕೆಳಗಿನವುಗಳೇ :—

೧. ಮನುಷ್ಯನಿಗೆ ಕೆಲವು ಶಕ್ತಿಗಳುಂಟು. ಅವುಗಳಿಗೆ ನಾನು "ವೃತ್ತಿ" ಎಂದು ಕರೆದಿದ್ದೇನೆ. ಅವುಗಳ ಅನುಶೀಲನ, ಪ್ರಸ್ಫುರಣ ಮತ್ತು ಚರಿತಾರ್ಥತೆಯೇ ಮನುಷ್ಯತ್ವ.

೨. ಅದೇ ಮನುಷ್ಯ ಧರ್ಮ.

೩. ಪರಸ್ಪರವಾಗಿ ವೃತ್ತಿಗಳ ಸಾಮಂಜಸ್ಯವು ಈ ಅನುಶೀಲನದ ಕೊನೆಯು (Harmonious development).

೪. ಇದೇ ಸುಖ.

ಸಮಸ್ತ ವೃತಿಗಳ ಸಂಪೂರ್ಣ ಅನುಶೀಲನವೂ,* ಪ್ರಸ್ಫುರಣವೂ,† ಚರಿತಾರ್ಥತೆಯೂ‡ ಮತ್ತು ಸಾಮಂಜಸ್ಯವೂ ಒಂದೇ ಆಧಾರದಲ್ಲಿ ದುರ್ಲಭ ವೆಂದು ಈಗ ಒಪ್ಪಿಕೊಳ್ಳುತ್ತೇನೆ. ಈ ಸಂಬಂಧದಲ್ಲಿ ಈ ಗ್ರಂಥದಲ್ಲಿ ಹೇಳಿರುವುದನ್ನು ಈ ಕೆಳಗೆ ಎತ್ತಿರುವೆನು :

ಶಿಷ್ಯ.—ಜ್ಞಾನದಲ್ಲಿ ಪಾಂಡಿತ್ಯ, ವಿಚಾರದಲ್ಲಿ ದಕ್ಷತೆ, ಕಾರ್‍ಯದಲ್ಲಿ ತತ್ಪರತೆ, ಚಿತ್ತದಲ್ಲಿ ಧರ್ಮಾತ್ಮತೆ, ಸುರಸದಲ್ಲಿ ರಸಿಕತೆ—ಈ ಸಮಸ್ತವೂ ಉಂಟಾದರೆ ಮಾನಸಿಕ ಸರ್ವಾಂಗೀಣ ಪರಿಣತಿಯಾಗುವುದು ; ಇನ್ನೂ ಇದರ ಮೇಲೆ ಶಾರೀರಕ ಸರ್ವಾಂಗೀಣ ಪರಿಣತಿಯೂ ಇದೆ. ಅಂದರೆ ಶರೀರವು ಬಲಿಷ್ಠವೂ, ಸ್ವಸ್ಥವೂ, ಸರ್ವ ವಿಧವಾದ ಶಾರೀರಕ ಕ್ರಿಯೆಗಳಲ್ಲಿ ಪಟುವೂ ಆಗಿರಬೇಕು.

* * *

ಇಂಥಾ ಆದರ್ಶವನ್ನು ಹೊಂದುವುದೆಲ್ಲಿ? ಇಂಥಾ ಮನುಷ್ಯ ನನ್ನೇನೋ ಕಂಡಿಲ್ಲ.

---

* ಆವೃತ್ತಿ, ಅಭ್ಯಾಸ (Exercise).

† ಪ್ರಕಟವಾಗುವಿಕೆ, ಅರಳುವಿಕೆ (Development).

‡ ಸಾರ್ಥಕತೆ, ಉಪಯೋಗಿತ್ವ (Fulfilment).

ಗುರು.--ಮನುಷ್ಯನಿಲ್ಲದಿರಬಹುದು. ಈಶ್ವರನಿರುವನಷ್ಟೆ? ಸರ್ವಾಂಗೀಣ ಸ್ಫೂರ್ತಿ(ದೇಹ ಮತ್ತು ಮನಸ್ಸಿನ ಶಕ್ತಿಗಳ ಪ್ರಸಾರಿಕೆ)ಯ ಚರಮ ಪರಿಣತಿಯ ಉದಾಹರಣೆಯೂ ಈಶ್ವರನೊಬ್ಬನೇ.

ಇನ್ನೂ ಉಪಾಸಕನ ಮೊದಮೊದಲಿನ ರೀತಿಯಲ್ಲಿ ಅನಂತ ಪ್ರಕೃತಿಯಾದ ಈಶ್ವರನು ಆದರ್ಶನಾಗಲಾರನೆಂಬುದೇನೋ ಸತ್ಯವೇ. ಆದರೆ ಈಶ್ವರನನ್ನು ಅನುಕರಿಸುವ ಮನುಷ್ಯರು ಅಂದರೆ ಗುಣಾಧಿಕತೆಯಿಂದ ಈಶ್ವರಾಂಶರೆಂದು ಹೇಳಿಸಿಕೊಳ್ಳುವವರು, ಅಥವಾ ಮನುಷ್ಯದೇಹದಲ್ಲಿ ಈಶ್ವರನೇ ತಾನೆಂಬುದಾಗಿ ಎಂದು ಮನಸ್ಸಿಗೆ ತೋಚುವುದೋ ಆ ಅವಸ್ಥೆಯಲ್ಲಿ ಅವರು ಆದರ್ಶರು. ಆದುದರಿಂದಲೇ ಏಸುಕ್ರಿಸ್ತನು ಕ್ರಿಶ್ಚಿಯನರಿಗೆ ಆದರ್ಶನು. ಶಾಕ್ಯಸಿಂಹನು ಬೌದ್ಧರಿಗೆ ಆದರ್ಶನು. ಆದರೆ ಇಂಥಾ ಧರ್ಮವನ್ನು ಬೆಳೆಯಿಸುವ ಆದರ್ಶವು ಹಿಂದೂ ಶಾಸ್ತ್ರದಲ್ಲಿ ಇದ್ದಂತೆ ಪೃಥ್ವಿಯ ಮತ್ತಾವ ಧರ್ಮಶಾಸ್ತ್ರದಲ್ಲಿಯೇ ಆಗಲಿ, ಜಾತಿಯಲ್ಲಿಯೇ ಆಗಲಿ ಇರುವುದಿಲ್ಲ. ಜನಕಾದಿ ರಾಜರ್ಷಿಗಳೂ, ನಾರದಾದಿ ದೇವರ್ಷಿಗಳೂ, ವಸಿಷ್ಠಾದಿ ಬ್ರಹ್ಮರ್ಷಿಗಳೂ, ಸಕಲರೂ ಅನುಶೀಲನದ* ಚರಮಾದರ್ಶಗಳು. ಇದರ ಮೇಲೆ ರಾಮಚಂದ್ರ, ಯುಧಿಷ್ಠಿರ, ಅರ್ಜುನ, ಲಕ್ಷ್ಮಣ, ದೇವವ್ರತ ಭೀಷ್ಮ ಮೊದಲಾದ ಕ್ಷತ್ರಿಯರು ಇನ್ನೂ ಸಂಪೂರ್ಣತೆಯನ್ನು ಹೊಂದಿದ ಆದರ್ಶಗಳು. ಕ್ರಿಸ್ತನೂ, ಶಾಕ್ಯಸಿಂಹನೂ ಕೇವಲ ಉದಾಸೀನ ಕೌಪೀನಧಾರೀ ನಿರ್ಮಮ ಧರ್ಮವೇತ್ತರು. ಆದರೆ ಮೇಲೆ ಹೇಳಿದವರು ಹಾಗಲ್ಲ. ಇವರು ಸರ್ವಗುಣಸಂಪನ್ನರು. ಇವರಲ್ಲಿ ಸರ್ವವೃತ್ತಿಗಳೂ ಸರ್ವಾಂಗೀ ಸ್ಫೂರ್ತಿಯನ್ನು ಹೊಂದಿದ್ದುವು. ಇವರು ಸಿಂಹಾಸನದ ಮೇಲೆ ಕುಳಿತಿದ್ದರೂ ಉದಾಸೀನರು. ಕಾರ್ಮುಕವನ್ನು ಹಿಡಿದಿದ್ದರೂ ಧರ್ಮವನ್ನು ತಿಳಿದವರು. ರಾಜರಾದರೂ ಪಂಡಿತರು. ಶಕ್ತಿವಂತರಾದರೂ ಸರ್ವಜನರಲ್ಲಿಯೂ ಪ್ರೇಮಮಯರು. ಇಷ್ಟಾದರೂ ಹಿಂದುಗಳಲ್ಲಿ ಈ ಸಕಲ ಆದರ್ಶಗಳಿಗಿಂತ ಮಿಗಿಲಾದ ಇನ್ನೂ ಒಂದು ಆದರ್ಶವುಂಟು. ಇದರ ಮುಂದೆ ಮೇಲೆ ಹೇಳಿದ ಆದರ್ಶಗಳು ಕೂಡ ಸಪ್ಪೆಯಾಗಿ ತೋರುವುವು. ಯುಧಿಷ್ಠಿರನು

---

*ಅಭ್ಯಾಸದಿಂದ ಉತ್ಕೃಷ್ಟತೆಯ ಕೊನೆಯ ಮೆಟ್ಟಲನ್ನೇರಿ ನಿದರ್ಶನ ಸ್ವರೂಪವಾಗಿ ನಿಂತಂಥವರು.

ಯಾರಲ್ಲಿ ಧರ್ಮವನ್ನು ಕಲಿತರೋ, ಅರ್ಜುನನು ಸ್ವಯಂ ಯಾರ ಶಿಷ್ಯನೋ, ರಾಮಲಕ್ಷ್ಮಣರು ಯಾರ ಅಂಶ ಮಾತ್ರರೋ, ಯಾರ ಸಮಾನ ಮಹಿಮಾಮಯ ಚರಿತ್ರನು ಯಾವ ಮನುಷ್ಯ ಭಾಷೆಯಲ್ಲಿಯೂ ಎಂದೂ ಕೀರ್ತಿತನಾಗಲಿಲ್ಲವೋ ಅವನು.

ಈ ತತ್ತ್ವವನ್ನು ಪ್ರಮಾಣಗಳ ದ್ವಾರಾ ಪ್ರತಿಪಾದನ ಮಾಡುವುದಕ್ಕೋಸ್ಕರ ನಾನು ಶ್ರೀಕೃಷ್ಣ ಚರಿತ್ರೆಯ ವ್ಯಾಖ್ಯೆಯಲ್ಲಿ ಕೈಹಾಕಿರುವೆನು.

ದ್ವಿತೀಯ ಪರಿಚ್ಛೇದ

ಕೃಷ್ಣ ಚರಿತ್ರೆಯು ಹೇಗಿತ್ತೆಂಬುದನ್ನು ತಿಳಿಯಲು ಉಪಾಯವೇನು?

ಈ ವಿಷಯದಲ್ಲಿ ಮೊದಲೇ ಎರಡು ತೆರನ ದೊಡ್ಡ ತೊಂದರೆಗಳು ಒದಗಬಹುದು. ಕೃಷ್ಣನು ಭೂಮಂಡಲದಲ್ಲಿ ಅವತರಿಸಿದ್ದನು ಎಂದು ದೃಢವಾಗಿ ನಂಬಿರುವವರ ಮಾತನ್ನು ಇಲ್ಲಿ ಬಿಟ್ಟಿರುವೆವು. ನನ್ನ ಪಾಠಕರೆಲ್ಲ ಅಂಥಾ ನಂಬಿಕೆಯುಳ್ಳವರಲ್ಲ. ನಂಬಿಕೆಯಿಲ್ಲದವರು ಕೃಷ್ಣ ಚರಿತ್ರೆಯ ಮೂಲವೇನೆಂದು ಕೇಳುವರು. ಕೃಷ್ಣನೆಂಬ ವ್ಯಕ್ತಿಯು ಪೃಥ್ವಿಯಲ್ಲಿ ಇದ್ದನೆಂಬುದಕ್ಕೆ ಪ್ರಮಾಣವೇನಿದೆ? ಒಂದು ವೇಳೆ ಇದ್ದರೂ ಅವನ ಚರಿತ್ರೆಯು ಹೇಗಿತ್ತೆನ್ನುವುದನ್ನು ತಿಳಿಯಲು ಉಪಾಯಗಳೇನಾದರೂ ಇವೆಯೋ?

ಮೊಟ್ಟಮೊದಲು ನಾವು ಇವೆರಡು ಸಂದೇಹಗಳ ಮೀಮಾಂಸೆಗೆ ತೊಡಗೋಣ.

ಕೃಷ್ಣನ ವೃತ್ತಾಂತವು ಈ ಕೆಳಗೆ ಬರೆದ ಪ್ರಾಚೀನ ಗ್ರಂಥಗಳಲ್ಲಿ ದೊರೆಯುವುದು :—

(೧) ಮಹಾಭಾರತ, (೨) ಹರಿವಂಶ, (೩) ಪುರಾಣ.

ಪುರಾಣಗಳು ಹದಿನೆಂಟವೆ. ಇವುಗಳಲ್ಲೆಲ್ಲಾ ಕೃಷ್ಣನ ವೃತ್ತಾಂತವಿಲ್ಲ. ಈ ಕೆಳಗಿನವುಗಳಲ್ಲಿವೆ :—

(೧) ಬ್ರಹ್ಮಪುರಾಣ, (೨) ಪದ್ಮಪುರಾಣ, (೩) ವಿಷ್ಣುಪುರಾಣ, (೪) ವಾಯುಪುರಾಣ, (೫) ಶ್ರೀಮದ್ಭಾಗವತ, (೬) ಬ್ರಹ್ಮವೈವರ್ತ ಪುರಾಣ, (೭) ಸ್ಕಾಂದಪುರಾಣ, (೮) ವಾಮನಪುರಾಣ, (೯) ಕೂರ್ಮ ಪುರಾಣ.

ಮಹಾಭಾರತಕ್ಕೂ ಮತ್ತು ಮೇಲೆ ಬರೆದ ಇತರ ಗ್ರಂಥಗಳಿಗೂ ಕೃಷ್ಣಜೀವಿತದ ಸಂಬಂಧದಲ್ಲಿ ಒಂದು ವಿಶೇಷ ಪ್ರಭೇದವುಂಟು. ಮಹಾಭಾರತದಲ್ಲಿರುವುದು ಹರಿವಂಶ ಮತ್ತು ಪುರಾಣಗಳಲ್ಲಿ ಕಂಡುಬರುವುದಿಲ್ಲ. ಯಾವುದು ಹರಿವಂಶ ಮತ್ತು ಪುರಾಣಗಳಲ್ಲಿದೆಯೋ ಅದು ಮಹಾಭಾರತದಲ್ಲಿಲ್ಲ.

ಮಹಾಭಾರತವು ಪಾಂಡವರ ಇತಿಹಾಸವಾಗಿರುವುದೇ ಇದರ ಒಂದು ಕಾರಣ. ಕೃಷ್ಣನು ಪಾಂಡವರ ಸಖ ಮತ್ತು ಸಹಾಯಕ. ಇವನು ಪಾಂಡವರ ಸಹಾಯಕ್ಕಾಗಲಿ ಅಥವಾ ಅವರೊಡಗೂಡಿಯಾಗಲಿ ಮಾಡಿದ ಕಾರ್ಯಗಳೆಲ್ಲವೂ ಮಹಾಭಾರತದಲ್ಲಿರುವುವು. ಇದು ಸರಿಯೆ. ಪ್ರಸಂಗ ಕ್ರಮವಾಗಿ ಇನ್ನೊಂದೆರಡು ಮಾತುಗಳೂ ಇವೆ. ಅಷ್ಟೇ.

ಇವನ ಜೀವನದ ಮಿಕ್ಕ ಅಂಶವು ಮಹಾಭಾರತದಲ್ಲಿಲ್ಲವೆಂದೇ ಹರಿವಂಶವು ರಚಿತವಾಯಿತು. ಹೀಗೆಂದೇ ಹರಿವಂಶದಲ್ಲಿದೆ. ಭಾಗವತ ದಲ್ಲಿಯೂ ಕೂಡ ಹೀಗೆಯೇ ಹೇಳಿದೆ. ವ್ಯಾಸರು ನಾರದರಿಗೆ ಮಹಾಭಾರತದ ಅಸಂಪೂರ್ಣತೆಯನ್ನು ಎಂದರೆ ಕೃಷ್ಣನ ವಿಷಯಗಳೆಲ್ಲವೂ ಭಾರತ ದಲ್ಲಿಲ್ಲದಿರುವುದನ್ನು ತಿಳಿಸಲು, ನಾರದರು ಕೃಷ್ಣ ಚರಿತ್ರೆಯನ್ನು ರಚಿಸು ವುದಕ್ಕೆ ಉಪದೇಶವನ್ನಿತ್ತರು. ಆದುದರಿಂದ ಮಹಾಭಾರತದಲ್ಲಿರುವುದು ಭಾಗವತದಲ್ಲಾಗಲಿ, ಹರಿವಂಶದಲ್ಲಾಗಲಿ, ಇತರ ಪುರಾಣಗಳಲ್ಲಾಗಲಿ ಇಲ್ಲ. ಮಹಾಭಾರತದಲ್ಲಿ ಇಲ್ಲದ್ದು, ಅಂದರೆ ಬಿಡಲ್ಪಟ್ಟದ್ದು, ಇದೆ.

ಆದ್ದರಿಂದ ಮಹಾಭಾರತವು ಸರ್ವಕ್ಕೂ ಮೊದಲಿನದು. ಹರಿವಂಶಾದಿಗಳು ಇದರ ಅಭಾವವನ್ನು ಪೂರ್ಣಮಾಡಲಿಕ್ಕೆ ಮಾತ್ರ ಹುಟ್ಟಿದವು ಗಳು. ಮೊದಲು ರಚಿಸಿದ್ದು ಇತರ ಎಲ್ಲವುಗಳಿಗಿಂತಲೂ ಮೌಲಿಕವು; ಸಂಭವವೂ ಹೀಗೆಯೇ ಇದೆ. ಮಹಾಭಾರತ, ಹರಿವಂಶ ಮತ್ತು ಅಷ್ಟಾದಶ ಪುರಾಣಗಳು ಇವುಗಳೆಲ್ಲಾ ಒಬ್ಬರಿಂದಲೇ ರಚಿಸಲ್ಪಟ್ಟವೆಂದು ಹೇಳಿದೆ.

ಇವೆಲ್ಲವೂ ವೇದವ್ಯಾಸ ಮಹರ್ಷಿಗಳಿಂದಾದವುಗಳು. ಈ ಮಾತು ಸತ್ಯವೇ ಅಲ್ಲವೇ? ಅದರ ವಿವೇಚನೆಯಿಂದ ಈಗ ಪ್ರಯೋಜನವಿಲ್ಲ. ಮಹಾ ಭಾರತದಲ್ಲಿ ಏನಾದರೂ ಐತಿಹಾಸಕತೆಯುಂಟೇ ಇಲ್ಲವೇ ಎನ್ನುವುದನ್ನು ಮೊದಲು ನೋಡೋಣ. ಒಂದು ವೇಳೆ ಇಲ್ಲದಿದ್ದರೆ ಹರಿವಂಶ ಮತ್ತು ಪುರಾಣಗಳಲ್ಲಿ ಐತಿಹಾಸಿಕ ತತ್ತ್ವವನ್ನು ಹುಡುಕುವುದು ವ್ಯರ್ಥ.

ಈಗ ತೊಡಗುವ ವಿಚಾರಕ್ಕೆ ಎರಡು ಕಡೆ ಎರಡು ಘೋರ ವಿಪತ್ತುಗಳಿರುವುವು: ಇವುಗಳಲ್ಲಿ ಒಂದು ದೇಶೀಯ ಪ್ರಾಚೀನ ಸಂಸ್ಕಾರ. ಈ ಸಂಸ್ಕಾರದವರ ಸಂಸ್ಕೃತ ಭಾಷೆಯ ಜ್ಞಾನ ಒಂದು ಅನುಸ್ವಾರದ ಮಟ್ಟಗಿದ್ದರೂ—ಇವೆಲ್ಲಾ ಅಭ್ರಾಂತರಾದ ಋಷಿಗಳಿಂದಾದವುಗಳು: ಇವೆಲ್ಲಾ ಸಂದೇಹ ಮತ್ತು ಪ್ರತಿವಾದಗಳಿಗೆ ಮೀರಿದವುಗಳು ಮತ್ತು ಸತ್ಯಗಳೆಂದು ನಮ್ಮ ಎದುರಿಗೆ ನಿಲ್ಲುವವು; ವೇದವಿಭಾಗಗಳೂ, ಲಕ್ಷ ಶ್ಲೋಕಾತ್ಮಕವಾದ ಮಹಾಭಾರತ, ಹರಿವಂಶ, ಅಷ್ಟಾದಶಪುರಾಣಗಳು—ಇವೆಲ್ಲವನ್ನೂ ಒಬ್ಬನೇ ಮಾಡಿರುವನು; ಇವೆಲ್ಲಾ ಕಲಿಯುಗದ ಆರಂಭದಲ್ಲಿ ಆದವುಗಳು; ಈಗ ಇವಾಗಿ ೫೦೦೦ ವರ್ಷಗಳ ಮೇಲಾದುವು; ಮತ್ತು (ಅನ್ಯರಚನೆಗಳು ಸೇರದೆ) ಇವೆಲ್ಲಾ ವೇದವ್ಯಾಸರು ಹೇಗೆ ಬರೆದಿದ್ದರೋ ಠೀಕಾಗಿ ಹಾಗೆಯೇ ಇವೆ—ಎಂದು ಹೇಳುವರು. ಇವರಲ್ಲಿ ಅನೇಕರು ಈ ಸಂಸ್ಕಾರಕ್ಕೆ ಎದುರು ಮಾತನ್ನು ಕಿವಿಗೆ ಹಾಕಿಕೊಳ್ಳುವುದಂತಿರಲಿ, ಎದುರು ಮಾತಾಡುವವನು ಮಹಾಪಾತಕನು, ನರಕಕ್ಕೆ ಯೋಗ್ಯನು ಮತ್ತು ದೇಶದ ಸರ್ವನಾಶಕ್ಕೂ ತೊಡಗಿರುವವನು ಎಂದು ಭಾವಿಸುವರು.

ಇನ್ನೊಂದು ದಿಕ್ಕಿನ ಗುರುತರವಾದ ವಿಪತ್ತು ವಿಲಾಯತಿಯ ಪಾಂಡಿತ್ಯ. ಯೂರೋಪಿನ ಮತ್ತು ಅಮೇರಿಕದ ಕೆಲವು ಪಂಡಿತರು ಸಂಸ್ಕೃತವನ್ನು ಕಲಿತಿರುವರು. ಇವರು ಪ್ರಾಚೀನ ಗ್ರಂಥಗಳಿಂದ ಐತಿಹಾಸಿಕ ತತ್ತ್ವವನ್ನು ಎತ್ತಲು ನಿಯುಕ್ತರಾಗಿರುವರು. ಪರಾಧೀನದಲ್ಲಿ ಬಿದ್ದು ಬಲವಿಲ್ಲದೆ ತೊಳಲುತ್ತಿರುವ ಹಿಂದೂ ಜಾತಿಯು ಯಾವುದೋ ಕಾಲದಲ್ಲಿ ಸಭ್ಯವಾಗಿದ್ದಿತು; ಆ ಕಾಲವು ಬಹು ಪ್ರಾಚೀನ ಎಂಬ ಮಾತನ್ನು ಅವರು ಸಹಿಸರು. ಆದುದರಿಂದ ಮೂವರು ನಾಲ್ವರು ವಿನಾ ಇವರೆಲ್ಲರೂ ಪ್ರಾಚೀನ ಭಾರತವರ್ಷದ ಗೌರವವನ್ನು ಹಾಳುಮಾಡಲು

ಉದ್ಯುಕ್ತರಾಗಿರುವರು. ಇವರುಗಳು ಹಿಂದೂ ಧರ್ಮ ವಿರುದ್ಧವಾದ ಬೌದ್ಧ ಗ್ರಂಥಗಳನ್ನು ಬಿಟ್ಟರೆ ಉಳಿದ ಪ್ರಾಚೀನ ಭಾರತವರ್ಷ ಗ್ರಂಥಗಳಲ್ಲಿರುವುದೆಲ್ಲಾ ನಿನ್ನೆ ಮೊನ್ನೆಯವುಗಳು ; ಮತ್ತು ಹಿಂದೂ ಗ್ರಂಥಗಳಲ್ಲಿರುವುದೆಲ್ಲಾ ಸಂಪೂರ್ಣವಾಗಿ ಸುಳ್ಳು. ಇಲ್ಲವೇ ಇತರ ದೇಶಗಳಿಂದ ಕದ್ದವುಗಳು ಎಂದು ಸಾಧಿಸಲು ಒದ್ದಾಡುತ್ತಿರುವರು. ರಾಮಾಯಣವು ಹೋಮರ್ ಕಾವ್ಯದ ಅನುಕರಣವೆಂದು ಒಬ್ಬ ಮಹಾತ್ಮನೂ, ಭಗವದ್ಗೀತೆಯು ಬೈಬಲಿನ ಛಾಯಾ ಮಾತ್ರವೆಂದು ಮತ್ತೊಬ್ಬನೂ, ಹಿಂದುಗಳ ಜ್ಯೋತಿಷವು ಚೀನಾದೇಶದ್ದು ಇಲ್ಲವೆ ಯವನರಿಂದಲೋ ಕಾಲ್ಡಿಯಾ ದೇಶದಿಂದಲೋ ಪ್ರಾಪ್ತವಾದುದು ; ಹಿಂದುಗಳ ಗಣಿತವೂ ಕೂಡ ಪರರಿಂದ ಸಂಪಾದಿಸಿದುದು ; ಬರೆಯುವ ಅಕ್ಷರಗಳೂ ಕೂಡ ಯಾವದೋ ಸಿಮಿಯಾ ಜಾತಿಯಿಂದ ಪಡೆದುದು ಎಂದು ಮೊಗದೊಬ್ಬನೂ ಕೂಗುತ್ತಿರುವನು. ಇವನ್ನೆಲ್ಲಾ ನಿರ್ಧರಿಸಲು ಮೂಲ ಸೂತ್ರವು ಏನೆಂದರೆ :—

ಭರತಖಂಡ ಸಂಬಂಧವಾದ ಗ್ರಂಥಗಳಲ್ಲಿ ಭಾರತ ಪಕ್ಷವಾಗಿ ಸಿಕ್ಕುವದೆಲ್ಲಾ ಸುಳ್ಳು ಅಥವಾ ಪ್ರಕ್ಷಿಪ್ತವು*; ಭಾರತ ವಿಪಕ್ಷವಾಗಿ ಸಿಕ್ಕುವುದೇ ಸತ್ಯ. ಪಾಂಡವರಂಥ ವೀರರ ಚರಿತ್ರೆಯು ಭಾರತವರ್ಷದ ಪುರುಷರ ವಿಷಯದಲ್ಲಿ ಸುಳ್ಳು. ಪಾಂಡವರು ಕವಿಕಲ್ಪಿತರು. ಆದರೆ ದ್ರೌಪದಿಗೆ ಐದು ಮಂದಿ ಗಂಡಂದಿರಿದ್ದುದೇನೋ ಸತ್ಯವು. ಏಕೆಂದರೆ, ಇದರಿಂದ ಪೂರ್ವಕಾಲದ ಭಾರತೀಯರು ಬೆಟ್ಟಗುಡ್ಡ ಪ್ರದೇಶಗಳ ಅಸಭ್ಯಜಾತಿಯವರಾಗಿದ್ದರಬೇಕು. ಅವರಂತೆಯೇ ಇವರಲ್ಲಿ ಒಬ್ಬೊಬ್ಬ ಹೆಂಗಸಿಗೆ ಎಷ್ಟೆಷ್ಟೋ ಮಂದಿ ಗಂಡಸರನ್ನು ಮದುವೆ ಮಾಡುವ ಪದ್ಧತಿಯಿತ್ತು. ಫರ್ಗೂಸನ್ ಸಾಹೇಬರು ಪೂರ್ವಕಾಲದ ಯಾವುದೋ ಅರಮನೆಯ ಪಾಳುಗೋಡೆಗಳ ಮೇಲಿನ ಚಿತ್ತಲಿಯ ಹೆಣ್ಣು ಬೊಂಬೆಗಳನ್ನು ನೋಡಿ ಪೂರ್ವದ ಭಾರತವರ್ಷದಲ್ಲಿ ಹೆಂಗಸರು ಬಟ್ಟೆಯನ್ನು ಉಡುತ್ತಿರಲಿಲ್ಲವೆಂದು ಸಿದ್ಧಾಂತ ಮಾಡಿದರು. ಇತ್ತ ಕಡೆ ಮಥುರಾ ಮುಂತಾದ ಸ್ಥಳಗಳಲ್ಲಿನ ಅಪೂರ್ವ ಭಾಸ್ಕರ್ಯವನ್ನು ನೋಡಿ ವಿಲಾಯತೀ ಪಂಡಿತರುಗಳು ಶಿಲ್ಪವು ಗ್ರೀಕ್ ಮೇಸ್ತ್ರಿಗಳದಿರಬೇಕೆಂದು ಗೊತ್ತುಮಾಡಿದರು. ವೇಬರ್ (Weber)

*ಇತರರಾರೋ ಕವನಮಾಡಿ ಬೆರಸಿದ್ದು.

ಸಾಹೇಬರು ಹಿಂದುಗಳ ಜ್ಯೋತಿಷದ ಪ್ರಾಚೀನತೆಯನ್ನು ಹಾರಿಸಲು ಸಾಗದೆ ಹಿಂದುಗಳು ಚಾಂದ್ರನಕ್ಷತ್ರ ಮಂಡಲಿಯನ್ನು ಬಾಬಿಲೋನಿಯರಿಂದ ಹೊಂದಿದರೆಂದು ಸಿದ್ಧಾಂತಿಸಿದರು. ಬಾಬಿಲೋನಿಯರಲ್ಲಿ ಮೊದಲು ಯಾವಾಗಲೂ ಚಾಂದ್ರನಕ್ಷತ್ರ ಮಂಡಲವು ರೂಢಿಯಲ್ಲಿರಲಿಲ್ಲವೆಂಬುದನ್ನು ಮರೆಮಾಚಿದರು. ಪ್ರಮಾಣಗಳು ದೊರೆಯದಿರಲು ವ್ಹಿಟ್ನಿ (Whitney) ಸಾಹೇಬರು ಹಾಗೆಯೇ ಇರಬಹುದೆಂದು ಒಪ್ಪಿದರು. ಏಕೆಂದರೆ, ಹಿಂದುಗಳ ಮಾನಸಿನ ಸ್ವಭಾವಕ್ಕೆ ನಿಜಬುದ್ಧಿಯಿಂದ ಇಷ್ಟರವರೆಗೂ ಅಭಿವೃದ್ಧಿಯುಂಟಾಗಲು ಬೇಕಾದಷ್ಟು ತೇಜಸ್ಸು ಎಲ್ಲಿಯದು ?

ಈ ಸಮಸ್ತ ಮಹಾಪುರುಷರುಗಳ ಮತಗಳ ಸಮಾಲೋಚನೆಯಿಂದ ನನಗೇನೂ ಪ್ರಯೋಜನವಿಲ್ಲ. ಏಕೆಂದರೆ ನಾನು ನಮ್ಮ ದೇಶದ ಪಾಠಕರಿಗೋಸ್ಕರಲೇ ಬರೆಯುತ್ತಿದ್ದೇನೆ; ಹಿಂದೂ ದ್ವೇಷಿಗಳಿಗಾಗಿ ಬರೆಯುತ್ತಿಲ್ಲ. ಆದರೆ ಶೋಚನೀಯವಾದ ವಿಷಯವೇನೆಂದರೆ ನಮ್ಮ ಸ್ವದೇಶೀಯ ಶಿಕ್ಷಿತ ಸಂಪ್ರದಾಯದವರ ಮಧ್ಯದಲ್ಲಿ ಅನೇಕರು ವಿಲಾಯತಿಯವರುಗಳ ಮತಾನುವರ್ತಿಗಳು. ಅನೇಕರು ತಾವಾಗಿಯೇ ಯಾವ ವಿಚಾರವನ್ನೂ ಮಾಡದೆ ಕೇವಲ ಯುರೋಪ್ ದೇಶದ ಪಂಡಿತರ ಮತವೆಂದ ಮಾತ್ರಕ್ಕೇನೆ ಆ ಮತಾನುವರ್ತಿಗಳಾಗುವರು. ಶಿಕ್ಷಿತ ಸಂಪ್ರದಾಯದ ಮಧ್ಯದಲ್ಲಿ ಉಳಿದ ಹಲವರಾದರೂ ಈ ಪುಸ್ತಕವನ್ನು ಓದಬಹುದೆಂಬುದೊಂದು ನನ್ನ ದೂರಾಕಾಂಕ್ಷೆ. ಆದುದರಿಂದಲೇ ನಾನು ಯುರೋಪೀಯ ಮತಗಳ ಪ್ರತಿವಾದಕ್ಕೆ ಕೈಹಾಕಿರುವೆನು. ವಿಲಾಯತಿಯ ಸಮಸ್ತವೂ ಯಾರಿಗೆ ಬಲು ಒಳ್ಳೆಯದೋ, ಯಾರಿಗೆ ವಿಲಾಯತಿಯ ಪಂಡಿತರೇ ಪ್ರಮಾಣದ ಕೊಟ್ಟಕೊನೆಯೋ, ಯಾರು ವಿಲಾಯತಿಯ ನಾಯಿಯೊಂದರಿಂದ ಹಿಡಿದು ಸಮಸ್ತರ ಸೇವೆಯನ್ನೂ ಮಾಡುತ್ತಿರುವರೋ, ದೇಶೀಯ ಗ್ರಂಥಗಳನ್ನೋದುವುದಂತಿರಲಿ, ದೇಶೀಯ ಭಿಕಾರಿಗೆ ಕೂಡ ಭಿಕ್ಷವನ್ನು ನೀಡರೋ ಅವರುಗಳಿಗೆ ನಾನೇನೂ ಮಾಡಲಾರೆ. ಆದರೆ ಶಿಕ್ಷಿತ ಸಂಪ್ರದಾಯಸ್ಥರಲ್ಲಿಯೂ ಅನೇಕರು ಸತ್ಯಪ್ರಿಯರು ಮತ್ತು ದೇಶವತ್ಸಲರು. ಅವರಿಗಾಗಿಯೇ ಬರೆಯುತ್ತಿದ್ದೇನೆ.

ತೃತೀಯ ಪರಿಚ್ಛೇದ

ಮಹಾಭಾರತದ ಐತಿಹಾಸಿಕತೆ

ಕೃಷ್ಣ ಚರಿತ್ರೆಯು ದೊರೆಯುವ ಗ್ರಂಥಗಳಲ್ಲೆಲ್ಲಾ ಮಹಾಭಾರತವೇ ಮೊದಲನೆಯದೆಂದು ಹೇಳಿರುವೆನಷ್ಟೆ. ಆದರೇನು? ಮಹಾಭಾರತದ ಮೇಲೇನೇ ಭಾರವನ್ನು ಬಿಟ್ಟವರುಂಟೆ? ಮಹಾಭಾರತದಲ್ಲಿ ಐತಿಹಾಸಿಕತೆ ಏನಾದರೂ ಇದೆಯೆ? ಮಹಾಭಾರತವನ್ನೇನೋ ಇತಿಹಾಸವೆಂದರೂ ಹಿಸ್ಟ್ರಿ (History)ಆಯಿತೆ? ಯಾವುದನ್ನು ಇತಿಹಾಸವೆಂದು ಹೇಳುವದು? ಈಗಿನ ಕಾಲದಲ್ಲಿ ನಾಯಿನರಿಗಳ ಕಥೆಗಳನ್ನು ಬರೆದರೂ ಅದಕ್ಕೂ ಕೂಡ ಇತಿಹಾಸವೆಂದು ಹೇಳಿರಬಹುದು. ಆದರೆ ವಸ್ತುತಃ ಯಾವುದರಲ್ಲಿ ಪೂರ್ವ ವೃತ್ತ ಅಂದರೆ ಪೂರ್ವದಲ್ಲಿ ನಡೆದಿರುವದರ ಆವೃತ್ತಿಯಿದೆಯೋ ಅದನ್ನು ಬಿಟ್ಟು ಇನ್ನಾವುದಕ್ಕೂ ಇತಿಹಾಸವೆಂದು ಹೇಳಕೂಡದು.

> ಧರ್ಮಾರ್ಥಕಾಮಮೋಕ್ಷಾಣಾಮುಪದೇಶಸಮನ್ವಿತಂ ।
> ಪೂರ್ವವೃತ್ತಕಥಾಯುಕ್ತಮಿತಿಹಾಸಂ ಪ್ರಚಕ್ಷತೇ ॥

ಈಗ ಭಾರತವರ್ಷದ ಸಕಲ ಪ್ರಾಚೀನ ಗ್ರಂಥಗಳ ಮಧ್ಯದಲ್ಲಿ ಕೇವಲ ಮಹಾಭಾರತ ಅಥವಾ ಮಹಾಭಾರತ ರಾಮಾಯಣಗಳು ಇತಿಹಾಸಗಳೆಂಬ ಹೆಸರನ್ನು ಹೊಂದಿವೆ. ಎಲ್ಲಿ ಮಹಾಭಾರತವೂ ಇತಿಹಾಸ ಪದದಿಂದ ಕರೆಯಲ್ಪಟ್ಟದೆಯೋ ಮತ್ತು ರಾಮಾಯಣ ಭಿನ್ನ ಇತರ ಗ್ರಂಥಗಳಾವುವೂ ಈ ಹೆಸರನ್ನು ಪಡೆದಿಲ್ಲವೋ ಅಲ್ಲಿ ವಿಶೇಷವಾಗಿ ಐತಿಹಾಸಿಕತೆಯಿದೆಯೆಂದೇ ಹೀಗೆ ಹೇಳಿರಬೇಕು.

ಸ್ಪಷ್ಟವಾಗಿ ಅನೃತ, ಅಸಂಭವ, ಅನೈತಿಹಾಸಿಕವಾದ ಕಥೆಗಳು ವಿಸ್ತಾರವಾಗಿ ಮಹಾಭಾರತದಲ್ಲಿ ಇರುವದೇನೋ ಉಂಟು. ಈ ಕಥೆಗಳೆಲ್ಲವನ್ನೂ ಅನೃತಗಳು ಮತ್ತು ಅನೈತಿಹಾಸಿಕಗಳೆಂದು ಪರಿತ್ಯಾಗ ಮಾಡಬಹುದು. ಆದರೆ ಯಾವ ಅಂಶದಲ್ಲಿ ಹೀಗೆ ಅನೃತ ಮತ್ತು ಅನೈತಿಹಾಸಿಕಗಳೆಂದು ಹೇಳಲು ಕಾರಣಗಳೇನೂ ಇಲ್ಲವೋ ಆ ಅಂಶಗಳನ್ನು ಅನೈತಿಹಾಸಿಕಗಳೆಂದು ಏಕೆ ಬಿಡಬೇಕು?

ಸಮಸ್ತ ಜಾತಿಗಳ ಪುರಾತನ ಇತಿಹಾಸಗಳಲ್ಲಿಯೂ ಹೀಗೆಯೇ ಐತಿಹಾಸಿಕ ಮತ್ತು ಅನೈತಿಹಾಸಿಕಗಳೂ, ಸತ್ಯ ಮತ್ತು ಮಿಥ್ಯಗಳೂ ಬೆರೆದುಹೋಗಿವೆ. ರೋಮಕ ಇತಿಹಾಸವೇತ್ತನಾದ ಲಿವಿ ಮೊದಲಾದವರೂ, ಯವನ ಇತಿಹಾಸವೇತ್ತನಾದ ಹೆರಾಡಟಸನೇ ಮೊದಲಾದವರೂ, ಮುಸಲ್ಮಾನ ಇತಿಹಾಸವೇತ್ತನಾದ ಫೆರಸ್ತಾ ಮೊದಲಾದವರೂ ಹೀಗೆಯೇ ಇತಿಹಾಸದ ಜೊತೆಯಲ್ಲಿ—ಅನೈಸರ್ಗಿಕವೂ ಅನೈತಿಹಾಸಿಕವೂ ಆದ ವಿಷಯಗಳನ್ನು ಬೆರಸಿರುತ್ತಾರೆ. ಇವರುಗಳ ಗ್ರಂಥಗಳೆಲ್ಲವೂ ಇತಿಹಾಸಗಳೆಂದು ಸ್ವೀಕರಿಸಲ್ಪಟ್ಟಿರಲು ಮಹಾಭಾರತ ಮಟ್ಟಿಗೆ ಅನೈತಿಹಾಸಿಕವೆಂದು ಒಂದೇ ಏಟಿಗೆ ಪರಿತ್ಯಾಗಮಾಡಲೇಕೆ ?

ಈಗ ಇತರ ದೇಶಗಳ ಐತಿಹಾಸಿಕ ಗ್ರಂಥಗಳಿಗಿಂತ ಮಹಾಭಾರತದಲ್ಲಿ ಹೆಚ್ಚಾಗಿ ಅನೈಸರ್ಗಿಕ ಘಟನೆಗಳಿರುವುದೇ ಒಪ್ಪಿದರೂ ಇದರಲ್ಲಿಯೂ ಎಷ್ಟರಮಟ್ಟಿಗೆ ನೈಸರ್ಗಿಕವಾದ ಮತ್ತು ಸಂಭವನೀಯವಾದ ಇತಿವೃತ್ತಗಳುಂಟೋ ಅವುಗಳನ್ನು ಸ್ವೀಕರಿಸಲು ಪ್ರತಿಬಂಧಕಗಳನ್ನು ಕಾಣೆವು. ಅನ್ಯದೇಶೀಯ ಪ್ರಾಚೀನೇತಿಹಾಸಗಳಿಗಿಂತ ಮಹಾಭಾರತದಲ್ಲಿ ಕಾಲ್ಪನಿಕ ವ್ಯಾಪಾರಗಳು ಹೆಚ್ಚಾಗಿರಲು ವಿಶೇಷ ಕಾರಣವೂ ಉಂಟು. ಇತಿಹಾಸಗಳಲ್ಲಿ ಅನೈಸರ್ಗಿಕಗಳೂ ಸುಳ್ಳು ಘಟನೆಗಳೂ ಸಕಲ ಸ್ಥಾನಗಳಲ್ಲಿಯೂ ಸಿಕ್ಕಲು ಕಾರಣಗಳೆರಡುಂಟು.

೧. ಲೇಖಕನು ಲೋಕವಾರ್ತೆಯನ್ನು ನಿಜವೆಂದು ನಂಬಿ ಗ್ರಂಥಕ್ಕೆ ಬರೆದು ಸೇರಿಸುವುದು.

೨. ಗ್ರಂಥವು ಪ್ರಚಾರಕ್ಕೆ ಬಂದಮೇಲೆ ಈಚಿನ ಲೇಖಕರು ತಮ್ಮ ರಚನೆಗಳನ್ನು ಪೂರ್ವರಚನೆಗಳ ಮಧ್ಯದಲ್ಲಿ ಬೆರಸುವುದು.

ಮೊದಲನೆಯ ಕಾರಣದಿಂದ ಸಕಲ ದೇಶಗಳ ಪ್ರಾಚೀನೇತಿಹಾಸಗಳೂ ಕಟ್ಟುಕಥೆಗಳಿಂದ ಸಂಪೂರ್ಣವಾಗಿ ದೂಷಿತವಾಗಿವೆ. ಮಹಾಭಾರತದಲ್ಲಿಯೂ ಕೂಡ ಹೀಗೆ ಆಗಿರಬೇಕು.

ಎರಡನೆಯ ಕಾರಣವು ಅನ್ಯದೇಶಗಳ ಇತಿಹಾಸ ಗ್ರಂಥಗಳಲ್ಲಿ ಅಷ್ಟು ಹೆಚ್ಚಿಗೆಯನ್ನು ಹೊಂದಿಲ್ಲ; ಆದರೆ ಇದು ಮಹಾಭಾರತದಲ್ಲಿ

ವಿಶೇಷವಾಗಿ ಅಧಿಕಾರಮಾಡಿಕೊಂಡಿದೆ. ಇದಕ್ಕೆ ಕಾರಣಗಳು ಮೂರು ಇವೆ.

೧. ಅನ್ಯದೇಶಗಳಲ್ಲಿ ಪ್ರಣೀತವಾದ ಇತಿಹಾಸ ಗ್ರಂಥಗಳನ್ನು ಪ್ರಾಚೀನ ಕಾಲದಲ್ಲಿ ಗ್ರಂಥಗಳನ್ನು ಬರೆದಿಡುವ ಪದ್ಧತಿಯು ರೂಢಿಗೆ ಬಂದಿತ್ತೆಂದು ಹೇಳಬಹುದು. ಬರೆಯಲ್ಪಟ್ಟ ಗ್ರಂಥದ ಜೊತೆಗೆ ಈಚಿನ ಲೇಖಕರು ತಮ್ಮ ರಚನೆಗಳನ್ನು ಬೆರಸಿಡಲು ಅನುಕೂಲ ಕಡಮೆ. ಪ್ರಾಚೀನವಾದ ಒಂದು ಮಾತೃಕೆಯ ಮೂಲಕ ಇತರ ಪ್ರತಿಗಳ ಶುದ್ಧಾಶುದ್ಧತೆಯು ನಿಶ್ಚಿತವಾಗುತ್ತಿತ್ತು. ಪ್ರಾಚೀನ ಭಾರತವರ್ಷದಲ್ಲಿ ರಚಿಸಲ್ಪಟ್ಟ ಸಮಸ್ತ ಗ್ರಂಥಗಳೂ ಬಾಯಿಂದ ಬಾಯಿಗೆ ಪ್ರಚಾರವಾಗುತ್ತಿದ್ದವು. ಲಿಪಿ ವಿದ್ಯೆಯು ರೂಢಿಯಾದಮೇಲೂ ಇವು ಪೂರ್ವ ಪದ್ಧತಿಯನ್ನೇ ಅನುಸರಿಸಿ ಗುರುಶಿಷ್ಯ ಪರಂಪರೆಯಾಗಿ ಬಾಂಯಿಂದಲೇ ಪ್ರಚಾರ ಹೊಂದುತ್ತಿದ್ದವು. ಆದುದರಿಂದ ಹೊರಗಣ ರಚನೆಗಳನ್ನು ಇವುಗಳಲ್ಲಿ ನುಗ್ಗಿಸಲು ವಿಶೇಷ ಅನುಕೂಲವು ದೊರೆತಿತ್ತು.

೨. ರೋಮ್, ಗ್ರೀಸ್ ಮತ್ತು ಇತರ ದೇಶಗಳ ಯಾವ ಚರಿತ್ರೆಗಳೂ ಮಹಾಭಾರತದಂತೆ ಜನಸಮುದಾಯದಲ್ಲಿ ಆದರವನ್ನೇ ಆಗಲಿ ಗೌರವವನ್ನೇ ಆಗಲಿ ಹೊಂದಿರಲಿಲ್ಲ. ಭಾರತೀಯರಿಗೆ ಮಹಾಭಾರತದಲ್ಲಿ ತಮ್ಮ ಸ್ವಂತ ರಚನೆಯನ್ನು ಸೇರಿಸಲು ಉಂಟಾದಷ್ಟು ಲೋಭವು ಇತರ ಯಾವ ದೇಶದ ಲೇಖಕರಿಗೂ ಉಂಟಾಗಲಿಲ್ಲ.

೩. ಪರದೇಶದ ಲೇಖಕರು ತಮ್ಮ ಯಶಸ್ಸಿಗೋ ಅಥವಾ ಆ ಬಗೆಯ ಬೇರೆಯ ಬಯಕೆಗೋ ಸಿಲುಕಿ ಗ್ರಂಥಗಳನ್ನು ಮಾಡುತ್ತಿದ್ದರು. ಆದುದರಿಂದ ತಮ್ಮ ಹೆಸರಿನ ಮೇಲೆಯೇ ತಮ್ಮ ಕವನಗಳನ್ನು ಪ್ರಚುರಪಡಿಸುವುದು ಅವರ ಮುಖ್ಯೋದ್ದೇಶ. ಇತರ ರಚನೆಗಳ ಮಧ್ಯದಲ್ಲಿ ತಮ್ಮ ರಚನೆಗಳನ್ನು ಮುಳುಗಿಸಿ ಸ್ವಂತ ಹೆಸರುವಾಸಿಯನ್ನು ಕಳೆದುಕೊಳ್ಳುವ ಅಭಿಪ್ರಾಯವು ಅವರಿಗೆ ಎಂದೂ ಉಂಟಾಗುತ್ತಿರಲಿಲ್ಲ. ಆದರೆ ಭಾರತಭೂಮಿಯ ಬ್ರಾಹ್ಮಣರು ನಿಃಸ್ವಾರ್ಥರೂ ಮತ್ತು ನಿಷ್ಕಾಮರೂ ಆಗಿ ರಚನೆಗಳನ್ನು ಮಾಡುತ್ತಿದ್ದರು. ಲೋಕಹಿತ ಒಂದು ವಿನಾ ಕೀರ್ತಿಯನ್ನು ಗಳಿಸ

ಬೇಕೆಂಬುದು ಅವರ ಉದ್ದೇಶವಲ್ಲ! ಬರೆದವರ ಹೆಸರೂ ಕೂಡ ಇಲ್ಲದ ಅನೇಕ ಗ್ರಂಥಗಳು ನಮ್ಮಲ್ಲಿವೆ. ಬರೆದವರಾರೆಂಬುದು ಇದುವರೆಗೂ ಯಾರೊಬ್ಬರಿಗೂ ತಿಳಿಯದಿರುವ ಅನೇಕ ಶ್ರೇಷ್ಠ ಗ್ರಂಥಗಳು ದೊರಕುತ್ತವೆ.

ಇಂಥ ನಿಷ್ಕಾಮರಾದ ಲೇಖಕರು ಮಹಾಭಾರತದಂತಹ ವಿಖ್ಯಾತವಾದ ಗ್ರಂಥದ ಸಹಾಯದಿಂದ ತಮ್ಮಗಳ ರಚನೆಗಳು ವಿಶೇಷವಾಗಿ ಹರಡಿ ಲೋಕಕ್ಕೆ ಹಿತವಾಗಲೆಂದು ಅವನ್ನು ಅಂಥಾ ಗ್ರಂಥದಲ್ಲಿ ಸೇರಿಸುತ್ತಿದ್ದರು. ಇದರಿಂದ ಮಹಾಭಾರತದಲ್ಲಿ ಕಲ್ಪನೆಯ ವಿಷಯಗಳು ಹೆಚ್ಚಾಗಿ ಸೇರಿರುವುವು. ಇಷ್ಟು ಮಾತ್ರದಿಂದಲೇ ಈ ಪ್ರಸಿದ್ಧವಾದ ಇತಿಹಾಸ ಗ್ರಂಥದಲ್ಲಿ ಐತಿಹಾಸಿಕ ವಿಷಯವು ಏನೂ ಇಲ್ಲವೆಂಬುದು ಅತ್ಯಂತ ಅಸಂಗತ.

ಚತುರ್ಥ ಪರಿಚ್ಛೇದ

ಮಹಾಭಾರತದ ಐತಿಹಾಸಿಕತೆಯ ವಿಷಯದಲ್ಲಿ ಯೂರೋಪಿಯನ್ನರ ಮತ

ಸಂಗತವೇ ಆಗಲಿ ಅಸಂಗತವೇ ಆಗಲಿ ಮಹಾಭಾರತದ ಐತಿಹಾಸಿಕತೆಯನ್ನು ಸ್ವೀಕರಿಸದವರನೇಕರುಂಟು. ಇವರು ಯೂರೋಪೀಯ ಪಂಡಿತರು ಅಥವಾ ಅವರ ಶಿಷ್ಯರು, ಎಂದು ಬೇರೆ ಹೇಳಬೇಕೇ? ಇವರ ಮತವನ್ನು ಸಂಕ್ಷೇಪವಾಗಿ ಉಲ್ಲೇಖಿಸುವೆನು.

ಅವರ ಸ್ವದೇಶದ ಅನುಭವವು ಹೇಗೋ, ವಿದೇಶದ ಅನುಭವವೂ ಕೂಡ ಸರಿಯಾಗಿ ಹಾಗೆಯೇ ಇರುವುದೆಂದು ತಿಳಿಯುವುದು ವಿಲಾಯತೀ ವಿದ್ಯೆಯ ಒಂದು ಲಕ್ಷಣ. ಮೂರ (Moor)ರನ್ನು ಬಿಟ್ಟು ಅಗೌರ ವರ್ಣರಾದ ಇತರರಾರನ್ನೂ ಕಾಣದ ವಿಲಾಯತಿಯವರು ಈ ದೇಶಕ್ಕೆ ಬಂದು ಹಿಂದೂಗಳನ್ನೂ ಮೂರರೆಂದೇ ಕರೆಯತೊಡಗಿದರು. ಹಾಗೆಯೇ ತಮ್ಮ ದೇಶದಲ್ಲಿ ಎಪಿಕ್ (Epic) ಕಾವ್ಯವನ್ನು ಬಿಟ್ಟರೆ ಪದ್ಯದಲ್ಲಿ ಬರೆದ ಆಖ್ಯಾನ ಗ್ರಂಥಗಳನ್ನೇ ಕಾಣದ ಯೂರೋಪಿನ ಪಂಡಿತರು ಮಹಾಭಾರತ

ಮತ್ತು ರಾಮಾಯಣದ ನೈಜ ಸ್ವರೂಪವನ್ನು ತಿಳಿಯದೆ ಈ ಎರಡು ಗ್ರಂಥಗಳನ್ನೂ ಮಹಾ ಕಾವ್ಯ (Epic) ವೆಂದು ಸಿದ್ಧಾಂತಮಾಡಿದರು. ಹೀಗೆ ಕಾವ್ಯವಾಗಲು ಐತಿಹಾಸಿಕತೆಯೆಲ್ಲಿಯದು ? ಎಲ್ಲವೂ ಒಂದೇ ಮಾತಿನಲ್ಲಿ ಹಾರಿ ಹೋಯಿತು.

ಯೂರೋಪಿನ ಪಂಡಿತರು ಈ ಮಾತನ್ನು ಎಲ್ಲಿಯವರೆಗೆ ಬಿಟ್ಟರೊ ದೇಶೀಯ ಶಿಷ್ಯರುಗಳು ಅಲ್ಲಿಯವರೆಗೆ ಬಿಟ್ಟಿಲ್ಲ.

ಸಾಹೇಬರು ಮಹಾಭಾರತವನ್ನು ಕಾವ್ಯ ಗ್ರಂಥವೆಂದು ಹೇಳುವುದೇಕೆನ್ನುವುದು ಶಿಷ್ಯರಿಗೆ ಚೆನ್ನಾಗಿ ತಿಳಿದಿಲ್ಲ. ಇದನ್ನು ಪದ್ಯದಲ್ಲಿ ಬರೆದಿರುವುದರಿಂದ ಕಾವ್ಯವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಸರ್ವ ಪ್ರಕಾರವಾದ ಸಂಸ್ಕೃತ ಗ್ರಂಥಗಳೂ ಪದ್ಯದಲ್ಲಿಯೇ ಬರೆಯಲ್ಪಟ್ಟವೆ. ವಿಜ್ಞಾನ, ದರ್ಶನ, ನಿಘಂಟು, ಜ್ಯೋತಿಷ, ಚಿಕಿತ್ಸಾಶಾಸ್ತ್ರ ಮುಂತಾದುವೆಲ್ಲವೂ ಪದ್ಯವಾಗಿಯೇ ರಚಿಸಲ್ಪಟ್ಟವೆ. ಆದರೆ ಮಹಾಭಾರತದಲ್ಲಿ ಕಾವ್ಯಾಂಶವು ಬಹು ಸುಂದರವೆಂದು ಹೀಗೆ ಹೇಳಿರಬಹುದೆ? ಯೂರೋಪೀಯರು ಯಾವ ಸೌಂದರ್ಯವು (Epic) ಕಾವ್ಯದ ಲಕ್ಷಣವೆಂದು ಹೀಗೆ ನಿರ್ದೇಶಮಾಡುವರೋ ಆ ಜಾತಿಯ ಸೌಂದರ್ಯವು ಇದರಲ್ಲಿ ಬಹಳ ಪರಿಮಾಣದಲ್ಲಿ ಸೇರಿದೆಯೆಂದು ಇದಕ್ಕೆ ಕಾವ್ಯವೆನ್ನುವರೋ? ಆದರೆ ವಿವೇಚನೆಮಾಡಿ ನೋಡಲು ಈ ತೆರದ ಸೌಂದರ್ಯವು ಅನೇಕ ಯೂರೋಪಿನ ಮೂಲ ಇತಿಹಾಸಗಳಲ್ಲಿಯೂ, ಇಂಗ್ಲೀಷಿನವರೇ ಆದ ಮೆಕಾಲೆ, ಕಾರ್ಲೈಲ್ ಮತ್ತು ಇತರ ಪ್ರೌಢರ ಗ್ರಂಥಗಳಲ್ಲಿಯೂ, ಫರಾಸಿಯರಾದ ಲಾಮರ್ತೀನ್ ಮತ್ತು ಮಿಶಾಲಾರನ ಗ್ರಂಥಗಳಲ್ಲಿಯೂ, ಗ್ರೀಕರ ಥುಸಿಡಿಡಿಸ್‌ನ ಗ್ರಂಥದಲ್ಲಿಯೂ ಮತ್ತು ಇತರ ಇತಿಹಾಸ ಗ್ರಂಥಗಳಲ್ಲಿಯೂ ಇದೆ. ಕಾವ್ಯದ ಶ್ರೇಷ್ಠ ಉಪಾದಾನವು ಮಾನವ ಚರಿತ್ರೆಯೇ. ಇತಿಹಾಸವೇತ್ತನೂ ಕೂಡ ಮನುಷ್ಯ ಚರಿತ್ರೆಯನ್ನೇ ವರ್ಣನಮಾಡುವನು. ತನ್ನ ಕೆಲಸವನ್ನು ಚೆನ್ನಾಗಿ ನಡಸಲು ಶಕ್ತನಾದರೆ ಅವನ ಇತಿಹಾಸದಲ್ಲಿ ಕಾವ್ಯದ ಸೌಂದರ್ಯವು ತಾನಾಗಿಯೇ ಒಂದುಗೂಡುವುದು. ಸೌಂದರ್ಯವೇ ಕಾರಣವೆಂದು ಈ ಸಕಲ ಗ್ರಂಥಗಳೂ ಅನೈತಿಹಾಸಿಕಗಳೆಂದು ಪರಿತ್ಯಕ್ತವಾಗಲಿಲ್ಲ. ಹೀಗಿರಲು ಮಹಾಭಾರತವನ್ನು ಕೂಡ ಹೀಗೆ ಬಿಡಲಾಗದು.

ಮಹಾಭಾರತದಲ್ಲಿ ಈ ಸೌಂದರ್ಯವು ಅಧಿಕ ಪ್ರಮಾಣದಲ್ಲಿ ಉಂಟಾಗಲು ವಿಶೇಷ ಕಾರಣವುಂಟು.

ಮೂರ್ಖರ ಮತವನ್ನು ಬಹುವಾಗಿ ಹಿಡಿದು ಕಡೆದರೆ ಪ್ರಯೋಜನ ವಿಲ್ಲ. ಆದರೆ ಮುರ್ಖರಂತೆ ಪಂಡಿತರು ಕೂಡ ಹರಟುತ್ತಿರುವಾಗ ನಾವೇನು ಮಾಡಬೇಕು! ಪ್ರಸಿದ್ಧರಾದ ವೇಬರ್ ಸಾಹೇಬರು ಪಂಡಿತರೇ ಹೌದು. ಆದರೆ ನಮ್ಮ ವಿವೇಚನೆಯಲ್ಲಿ ಇವರು ಸಂಸ್ಕೃತವನ್ನು ಕಲಿ ಯಲು ಆರಂಭಿಸಿದ ಮುಹೂರ್ತವು ಭಾರತವರ್ಷದ ಪಕ್ಷದಲ್ಲಿ ಅಶುಭ ಕ್ಷಣ. ಭಾರತವರ್ಷದ ಪ್ರಾಚೀನ ಗೌರವವು ಅದೇ ಕಾಲದ ಜರ್ಮನೀ ಅರಣ್ಯವಾಸಿ ಬರ್ಬರವಂಶಧರನ ಪಕ್ಷದಲ್ಲಿ ಅಸಹ್ಯ. ಆದುದರಿಂದ ಪ್ರಾಚೀನ ಭಾರತವರ್ಷದ ಸಭ್ಯತೆಯು ಬಲು ಈಚಿನದು ಎಂದು ಪ್ರಮಾಣ ಮಾಡಲು ಆತನು ಸರ್ವದಾ ಯತ್ನಶೀಲನಾಗಿರುವನು. ಇವನ ವಿವೇಚನೆ ಯಲ್ಲಿ ಏಸುಕ್ರಿಸ್ತನು ಹುಟ್ಟುವುದಕ್ಕೆ ಮುಂಚೆ ಮಹಾಭಾರತವಿತ್ತೆನ್ನು ವುದಕ್ಕೆ ಮುಖ್ಯ ಪ್ರಮಾಣಗಳೇನೂ ಇಲ್ಲವು. ಇಷ್ಟು ಪ್ರಾಚೀನತೆಯನ್ನು ಕೂಡ ಒಪ್ಪಲು ಒಂದೇ ಕಾರಣವು ದೊರೆತಿರುವದು. ಕ್ರಿಸೋಸ್ಟಂ (Chrysostom) ಎಂಬ ಒಬ್ಬ ಯೂರೋಪಿನವನು ಭಾರತವರ್ಷಕ್ಕೆ ಬಂದು ದೋಣಿ ನಡಸುವ ಒಬ್ಬ ಬೆಸ್ತನಿಂದ ಮಹಾಭಾರತದ ಕಥೆಯನ್ನು ಕೇಳಿ ಹೋಗುತ್ತಿದ್ದನು. ಪಾಣಿನಿಯ ಸೂತ್ರದಲ್ಲಿ ಮಹಾಭಾರತದ ಶಬ್ದವಿದೆ. ಯುಧಿಷ್ಠಿರಾದಿಗಳ ಹೆಸರುಗಳಿವೆ. ಆದರೆ ಅದರಲ್ಲಿ ಅವರಿಗೆ ನಂಬಿಕೆ ಹುಟ್ಟ ಲಿಲ್ಲ. ಅವರ ಮತದಲ್ಲಿ ಪಾಣಿನಿಯೂ ಕೂಡ ನಿನ್ನೆಯ ಹುಡುಗನು. ಆದರೆ ಯೂರೋಪಿನವನೊಬ್ಬನ ಪವಿತ್ರವಾದ ಕರ್ಣರಂಧ್ರವನ್ನು ಪ್ರವೇಶಿಸಿದ ಬೆಸ್ತನ ವಾಕ್ಯವನ್ನು ಯಾವ ಪ್ರಕಾರದಲ್ಲೂ ತಿರಸ್ಕರಿಸುವುದಕ್ಕೆ ಆತನಿಗೆ ಸಾಮರ್ಥ್ಯವಿಲ್ಲದೆ ಹೋಯಿತು. ಆದುದರಿಂದ ಮಹಾಭಾರತವು ಕ್ರೈಸ್ತನ ಮೊದಲನೆಯ ಶತಮಾನದಲ್ಲಿತ್ತೆಂದು ಆತನು ಬಹು ಬಲವಂತಕ್ಕೆ ಬಿದ್ದು ಒಪ್ಪಿಕೊಂಡಿರುವನು. ಹೀಗೆಯೇ ಇನ್ನೊಬ್ಬ ಯೂರೋಪ್ ಲೇಖಕ ಮೆಗಾಸ್ತನೀಸ್ (Megasthenes)ನು (ಕ್ರಿ. ಪೂ. ಮೂರು ಅಥವಾ ನಾಲ್ಕನೇಯ ಶತಮಾನದಲ್ಲಿದ್ದವನು) ಭಾರತವರ್ಷಕ್ಕೆ ಬಂದು ಚಂದ್ರಗುಪ್ತನ ರಾಜಧಾನಿಯಲ್ಲಿ ವಾಸಮಾಡುತ್ತಿದ್ದಾಗ ಬರೆದ ಗ್ರಂಥದಲ್ಲಿ ಮಹಾಭಾರತದ

ವಿಷಯುವನ್ನು ಪ್ರಸ್ತಾಪಿಸಿಲ್ಲ, ಈ ಕಾರಣದಿಂದ ವೇಬರ್ ಸಾಹೇಬರ ವಿವೇಚನೆಯುಲ್ಲಿ ಅವನ ಕಾಲದಲ್ಲಿ ಮಹಾಭಾರತವಿರಲಿಲ್ಲ.*

ಇಲ್ಲಿ ಜರ್ಮನ್ ಪಂಡಿತನು ಕೇಳಿಯೂ ತಿಳಿದೂ ಬೇಕೆಂತ ಕಳ್ಳವಿದ್ಯೆಯನ್ನು ಹೂಡಿದ್ದಾನೆ. ಮೆಗಾಸ್ತನೀಸನಿಂದ ಬರೆಯಲ್ಪಟ್ಟ ಭಾರತ ವರ್ಷೀಯವಾದ ಯಾವ ಗ್ರಂಥವು ಇಲ್ಲವೆಂಬುದನ್ನು ಇವನು ಚೆನ್ನಾಗಿ ಬಲ್ಲನು. ಕೇವಲ ಇತರ ಗ್ರಂಥಕಾರರು ತಮ್ಮ ಸ್ವಂತ ಪುಸ್ತಕಗಳಲ್ಲಿ ಅವನ ದೆಂದು ಯಾವ ಅಂಶಗಳನ್ನು ಎತ್ತಿ ಬರೆದುಕೊಂಡಿದ್ದರೋ ಅವುಗಳನ್ನೆಲ್ಲಾ ಕೂಡಿಸಿ "ಡಾಕ್ಟರ್‌ಸ್ವಾನ್‌ಬೇಕ್" (Dr. Schwan Beck) ಎಂಬ ಈಗಿನ ಪಂಡಿತನೊಬ್ಬನು ಒಂದು ಗ್ರಂಥವನ್ನು ರಚಿಸಿರುವನು. ಅದೇ ಈಗೀಗ ಮೆಗಾಸ್ತನೀಸನಿಂದ ಬರೆದ ಭಾರತ ವೃತ್ತಾಂತವೆಂದು ಹೆಸರುಗೊಂಡಿದೆ. ಆ ಗ್ರಂಥದ ಅಧಿಕಾಂಶವು ಲೋಪವಾಗಿದೆ. ಅವನು ಮಹಾಭಾರತದ ಕಥೆಯನ್ನು ಸ್ವಲ್ಪವಾದರೂ ಹೇಳಿದ್ದನೋ ಇಲ್ಲವೋ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಇದನ್ನು ತಿಳಿದೂ ಕೇಳಿಯೂ ಕೇವಲ ಭಾರತ ವರ್ಷದಮೇಲೆ ದ್ವೇಷಬುದ್ಧಿಯಿಂದ ವೇಬರ್ ಸಾಹೇಬರು ಹೀಗೆ ಬರೆದಿದ್ದಾರೆ. ಅವರಿಂದ ಬರೆಯಲ್ಪಟ್ಟ "ಭಾರತ ಸಾಹಿತ್ಯ ಇತಿವೃತ್ತ" ವಿಷಯುಕವಾದ ಗ್ರಂಥದಲ್ಲಿ ಮೊದಲಿನಿಂದ ಕಡೆಯುವರೆಗೂ ಭಾರತವರ್ಷದ ಗೌರವವನ್ನು ಹಗುರಮಾಡುವ ಚೇಷ್ಟೆ ವಿನಾ ಇನ್ನಾವ ಉದ್ದೇಶವೂ ಕಾಣಬರಲಿಲ್ಲ. ಹೀಗಾದಮೇಲೆ ಮೆಗಾಸ್ತನೀಸನು ಮಹಾಭಾರತದ ಹೆಸರನ್ನು ಎತ್ತಲಿಲ್ಲವೆಂದರೆ, ಅವನ ಕಾಲದಲ್ಲಿ ಮಹಾಭಾರತವೇ ಇರಲಿಲ್ಲವೆಂದು ತಿಳಿಯಬೇಕೆ ? ಜರ್ಮನಿಯಲ್ಲಿ ಅಲೆದು ಬಂದಿರುವ ಅನೇಕ ಹಿಂದುಗಳು ಗ್ರಂಥಗಳನ್ನು ರಚಿಸಿರುವರು. ಅವರ ಯಾವ ಗ್ರಂಥದಲ್ಲಿಯೂ ವೇಬರ್ ಸಾಹೇಬರ ಹೆಸರಿಲ್ಲ. ಇದರಿಂದ ವೇಬರ್ ಸಾಹೇಬರು ಇರಲಿಲ್ಲವೆಂದು ಸಿದ್ಧಾಂತವಾಯಿತೇ ?

---

*Since Megasthenes says nothing of this Epic, it is not an improbable hypothesis that its origin is to be placed in the interval between his time and that of Chrysostom, for, what ignorant sailers took note of, would hardly have escaped his observation—*History of Sanskrit Literature, English Translation*, p, *186* (*Trubner & Co., 1882*).

ಬೇರೆ ಪಂಡಿತರುಗಳು ವೇಬರ್ ಸಾಹೇಬರಂತೆ ಎಲ್ಲವನ್ನೂ ಎಬ್ಬಿಸಿ ಬಿಡಲೊಲ್ಲರು. ಅವರು ಎರಡು ವಿಧವಾದ ವಿಪತ್ತುಗಳನ್ನೊಡ್ಡುವರು.

೧. ಮಹಾಭಾರತವು ಪ್ರಾಚೀನ ಗ್ರಂಥವೇನೋ ಹೌದು. ಆದರೆ ಕ್ರಿ. ಪೂ. ನಾಲ್ಕು ಅಥವಾ ಐದನೆಯ ಶತಮಾನದಲ್ಲಿ ಪ್ರಣೀತವಾಗಿರಬೇಕು; ಅದಕ್ಕೆ ಮುಂಚೆ ಇಂಥಾ ಗ್ರಂಥವಿರಲಿಲ್ಲ.

೨. ಆದಿ ಮಹಾಭಾರತದಲ್ಲಿ ಪಾಂಡವರ ಕಥೆ ಇರಲಿಲ್ಲ. ಪಾಂಡವರೂ ಮತ್ತು ಕೃಷ್ಣ ಮುಂತಾದವರೂ ಕವಿಕಲ್ಪಿತರು.

ದೇಶೀಯ ಮತವು ಇದಕ್ಕೆ ವಿಪರೀತ ಸೀಮಾಂತಕ್ಕೆ ಹೋಗಿದೆ. ಕಲಿಯ ಆರಂಭಕ್ಕೆ ಸರಿಯಾಗಿ ಕುರುಕ್ಷೇತ್ರದ ಯುದ್ಧವಾಯಿತು. ಆಗ ವೇದವ್ಯಾಸರು ಜೀವಿಸಿದ್ದರು. ಕಲಿಯುಂಟಾದ ಕೂಡಲೆ ಪಾಂಡವರು ಸ್ವರ್ಗಾರೋಹಣವನ್ನು ಮಾಡಿದರು. ಆದ್ದರಿಂದ ಕಲಿಯ ಆರಂಭದಲ್ಲಿಯೇ, ಅಂದರೆ ಈಗ್ಗೆ ೪೯೯೨ ವರ್ಷಗಳಿಗೆ ಮುಂಚೆ, ಮಹಾಭಾರತವು ಪ್ರಣೀತವಾಯಿತು ಎಂದು ಇವರು ಹೇಳುವದು.

ಈ ಎರಡು ಮತಗಳೂ ಘೋರತರವಾದ ಭ್ರಮೆಯಿಂದ ತುಂಬಿವೆ. ಆದಕಾರಣ ಎರಡು ಪಕ್ಷದವರ ಮತಗಳನ್ನೂ ಖಂಡಿಸಬೇಕಾಗಿದೆ. ಅದಕ್ಕೋಸ್ಕರ ಕುರುಕ್ಷೇತ್ರದ ಯುದ್ಧವು ಯಾವಾಗ ನಡೆಯಿತೆಂಬುದನ್ನು ನಿಷ್ಕರ್ಷಿಸುವುದು ಮೊದಲನೆಯ ಕೆಲಸ. ಇದನ್ನು ನಿರ್ಣಯಿಸಲು ಮಹಾಭಾರತವು ನಡೆದುದು ಯಾವಾಗ? ಪಾಂಡವರು ಕವಿಕಲ್ಪಿತರೇ ಅಥವಾ ಅಲ್ಲವೇ? ಎಂಬ ಅನೇಕ ವಿಷಯಗಳನ್ನು ತಿಳಿಯಬೇಕಾಗುವುದು. ಇದು ತಿಳಿದರೇನೆ ಮಹಾಭಾರತದ ಮೇಲೆ ನಂಬಿಕೆಯನ್ನು ಹಾಕಬಹುದೇ, ಇಲ್ಲವೇ ಎನ್ನುವುದು ಗೊತ್ತಾಗುವುದು.

ಪಂಚಮ ಪರಿಚ್ಛೇದ

ಕುರುಕ್ಷೇತ್ರದ ಯುದ್ಧವು ನಡೆದದ್ದು ಯಾವಾಗ

ಮೊದಲು ದೇಶೀಯ ಮತವನ್ನು ಸಮಾಲೋಚಿಸುವದು ಅವಶ್ಯ. ೪೯೯೨ ವರ್ಷಗಳ ಮುಂಚೆ ಕುರುಕ್ಷೇತ್ರದ ಯುದವು ನಡೆಯಿತೆಂಬುದ್ಧು

ಸುಳ್ಳು ಮಾತು. ಇದಕ್ಕೆ ನಾನು ದೇಶೀಯ ಗ್ರಂಥಗಳಿಂದಲೇ ಪ್ರಮಾಣವನ್ನು ಕೊಡುವೆನು. ರಾಜತರಂಗಿಣಿಕಾರನು ಕಲಿಯುಗದ ೬೫೩ ನೆಯ ವರ್ಷವಾದ ಮೇಲೆ ಗೋನರ್ಧನು ಕಾಶ್ಮೀರಕ್ಕೆ ರಾಜನಾಗಿದ್ದನೆಂತಲೂ ಮತ್ತು ಗೋನರ್ಧನು ಯುಧಿಷ್ಠಿರನ ಸಮಕಾಲವರ್ತಿಯೆಂತಲೂ ಹೇಳಿದ್ದಾನೆ. ಅವನು ೩೫ ವರ್ಷಗಳು ರಾಜ್ಯವನ್ನು ಅನುಭವಿಸಿದನು. ಆದುದರಿಂದ ಸುಮಾರು ಕಲಿಯುಗದ ೭೦೦ ವರ್ಷಗಳಾದುವು. ಹೀಗಾದರೆ ಕ್ರಿ. ಪೂ. ೨೪೦೦ ವರ್ಷಕ್ಕೆ ಬಂತು.

ಆದರೆ ವಿಷ್ಣು ಪುರಾಣದಲ್ಲಿ ಹೀಗೆ ಹೇಳಿದೆ :—

ಸಪ್ತರ್ಷೀಣಾಂ ಚ ಯೌ ಪೂರ್ವೌ ದೃಶ್ಯತೇ ಉದಿತೌ ದಿವಿ ।
ತಯೋಸ್ತು ಮಧ್ಯ ನಕ್ಷತ್ರಂ ದೃಶ್ಯತೇ ಯತ್ಸಮಂ ನಿಶಿ ॥
ತೇನ ಸಪ್ತರ್ಷಯೋ ಯುಕ್ತಾಸ್ತಿಷ್ಠಂತ್ಯಬ್ದಶತಂ ನೃಣಾಂ ।
ತೇತು ಪಾರಿಕ್ಷಿತೇ ಕಾಲೇ ಮಹಾಶ್ವಾಸ‍ನ್ ದ್ವಿಜೋತ್ತಮ ॥
ತದಾ ಪ್ರವೃತ್ತಶ್ಚ ಕಲಿಃ ದ್ವಾದಶಾಬ್ದ ಶತಾತ್ಮಕಃ ॥

ನಾಲ್ಕನೆಯ ಅಂಶ, ೨೪ ಅ., ೩೩-೩೪ನೆಯ ಶ್ಲೋಕ

ಅರ್ಥ :—ಸಪ್ತರ್ಷಿ ಮಂಡಲದ ಮಧ್ಯದಲ್ಲಿ ಪೂರ್ವ ದಿಕ್ಕಿನಲ್ಲಿ ಹುಟ್ಟುವ ಎರಡು ನಕ್ಷತ್ರಗಳ ಸಮಸೂತ್ರದಲ್ಲಿ ನಡುವೆ ಕಾಣುವ ನಕ್ಷತ್ರದಲ್ಲಿ* ಸಪ್ತರ್ಷಿಗಳು ನೂರು ವರ್ಷಗಳಿರುವರು. ಸಪ್ತರ್ಷಿಗಳು ಪರೀಕ್ಷಿತನ ಕಾಲದಲ್ಲಿ ಮಘಾನಕ್ಷತ್ರದಲ್ಲಿದ್ದರು. ಆಗ ಕಲಿಯ ೧೨೦೦ನೆಯ ವರ್ಷವು ನಡೆಯುತ್ತಿತ್ತು.

ಆದುದರಿಂದ ಈ ಮಾತಿನ ಪ್ರಕಾರ ಕಲಿಯ ಹನ್ನೆರಡುನೂರು ವರ್ಷಗಳಾದ ಮೇಲೆ ಪರೀಕ್ಷಿತನ ಕಾಲವು. ಹೀಗಾದಮೇಲೆ, ಮೇಲೆ ಬರೆದಿರುವ ೩೪ ನೆಯ ಶ್ಲೋಕಕ್ಕನುಸಾರವಾಗಿ ಕ್ರಿ. ಪೂ. ೧೯೦೦ರಲ್ಲಿ ಕುರುಕ್ಷೇತ್ರದ ಯುದ್ಧವು ನಡೆಯಿತು.

ಆದರೆ, ೩೩ ನೆಯ ಶ್ಲೋಕದಲ್ಲಿ ಹೇಳಿರುವುದರ ಸಂಗಡ ಈ ಗಣನೆಯು ಸರಿಹೋಲುವುದಿಲ್ಲ. ಈ ೩೩ನೆಯ ಶ್ಲೋಕದ ತಾತ್ಪರ್ಯವು ಬಹು ದುರ್ಗಮವು—ಆದುದರಿಂದ ಸವಿಸ್ತಾರವಾಗಿ ತಿಳಿದುಕೊಳ್ಳುವುದವಶ್ಯ.

*ಇಲ್ಲಿ ನಕ್ಷತ್ರವೆಂದರೆ ಅಶ್ವಿನ್ಯಾದಿ ನಕ್ಷತ್ರಗಳ ಪೈಕಿ ಒಂದು.

ಸಪ್ತರ್ಷಿಮಂಡಲವೆಂದರೆ ಕೆಲವು ಸ್ಥಿರನಕ್ಷತ್ರಗಳು. ಇವಕ್ಕೆ ವಿಲಾಯತಿಯ ಹೆಸರು ಗ್ರೇಟ್ ಬೇರ್ (Great Bear) ಅಥವಾ ಉರ್ಸಾ ಮೇಜರ್ (Ursa Major) ಎಂದು. ಮಘಾನಕ್ಷತ್ರವೂ ಕೂಡ ಸ್ಥಿರನಕ್ಷತ್ರವು. ಸ್ಥಿರತಾರೆಗಳಿಗೆ ಗಮನವಿಲ್ಲವೆಂದು ಎಲ್ಲರೂ ಬಲ್ಲರು. ಆದರೆ ವಿಷುವೆಂಬ ಸಾಮಾನ್ಯ ಗತಿಯೊಂದುಂಟು. ಇದಕ್ಕೆ ಇಂಗ್ಲಿಷ್ ಜ್ಯೋತಿಷ್ಕರು 'ಪ್ರಿಸೆಷನ್ ಆಫ್ ದಿ ಈಕ್ವಿನಾಕ್ಸಸ್' (Precession of the equinoxes) ಎಂದೆನ್ನುತ್ತಾರೆ. ಈ ಗತಿಯು ಹಿಂದೂಮತಾನುಸಾರವಾಗಿ ವರ್ಷವೊಂದಕ್ಕೆ ೫೪ ವಿಕಲೆಗಳು ಮಾತ್ರ. ಒಂದು ನಕ್ಷತ್ರಕ್ಕೆ ೧೩.⅓ ಅಂಶಗಳು .ಆದುದರಿಂದ ಈ ಲೆಕ್ಕಾಚಾರದಮೇಲೆ ಒಂದು ಸ್ಥಿರತಾರೆಯು ಒಂದು ನಕ್ಷತ್ರವನ್ನು ಸುತ್ತಬೇಕಾದರೆ ೧೦೦೦ ವರ್ಷಗಳಾಗುವವು. ನೂರು ವರ್ಷಗಳಲ್ಲ. ಅಲ್ಲದೆ ಸಪ್ತರ್ಷಿಮಂಡಲವು ಎಂದಿಗೂ ಮಘಾನಕ್ಷತ್ರದಲ್ಲಿರದು. ಏಕೆಂದರೆ ಮಘಾನಕ್ಷತ್ರವು ಸಿಂಹರಾಶಿಗೆ ಸೇರಿದ್ದು. ಹನ್ನೆರಡು ರಾಶಿಗಳೂ ರಾಶಿ ಚಕ್ರದಲ್ಲಿರುವುವು. ಸಪ್ತರ್ಷಿಮಂಡಲವು ರಾಶಿಚಕ್ರದ ಹೊರಗೆ. ಇಂಗ್ಲೆಂಡು ಭಾರತವರ್ಷದಲ್ಲಿ ಎಂತು ಇರಲಾರದೋ ಹಾಗೆಯೇ ಸಪ್ತರ್ಷಿ ಮಂಡಲವೂ ಮಘಾನಕ್ಷತ್ರದಲ್ಲಿರಲಾರದು.

ಹಾಗಾದರೇನು ಪುರಾಣಕಾರನು ಗಾಂಜಾ ಕುಡಿದು ಈ ಶ್ಲೋಕವನ್ನು ಬರೆದನೇ ಎಂದು ಪಾಠಕರು ಕೇಳಬಹುದು. ನಾವಂತೂ ಹೀಗೆ ಹೇಳುವುದಿಲ್ಲ. ಆದರೆ ಈ ಪ್ರಾಚೀನ ವಾಕ್ಕಿನ ಅರ್ಥವು ನನ್ನ ಬುದ್ಧಿಗೆ ಅಸಾಧ್ಯವಾಗಿದೆ. ಯಾವ ಅಭಿಪ್ರಾಯದಿಂದ ಹೀಗೆ ಹೇಳಿದರೋ ನಮಗೆ ತಿಳಿಯಲು ಸಾಗದಿದೆ. ಪಾಶ್ಚಾತ್ಯ ಪಂಡಿತ ವೆಂಟ್ಲೆ ಸಾಹೇಬರು ಇದನ್ನು ಹೀಗೆ ತಿಳಿಸಿದರು :—

The notion originated in a contrivance of the astronomers to show the quantity of the precession of the equinoxes; this was by assuming an imaginary line or great circle passing through the poles of the ecliptic and the beginning of the fixed Magha, which circle was supposed to cut some of the stars in the Great Bear.

* * * * * *

The seven stars in the Great Bear being called the Rishis, the circle assumed was called the line of the Rishis; and being invariably fixed to the beginning of the lunar asterism Magha the precession would be, noted stating the the degrees, etc., of any movable lunar mansion cut by that fixed line or circle as an index.

Historical View of the Hindu Astronomy, p. 95.

ಈ ಪ್ರಕಾರ ಗಣನೆಮಾಡಿ ವೆಂಟ್ರಿಯು ಯುಧಿಷ್ಠಿರನನ್ನು ಕ್ರಿ. ಪೂ. ೫೭೫ ವರ್ಷಕ್ಕೆ ತಂದುಬಿಟ್ಟಿದ್ದಾನೆ. ಅಂದರೆ ಅವನ ಮತದಲ್ಲಿ ಯುಧಿಷ್ಠಿರನು ಶಾಕ್ಯಸಿಂಹನಿಗಿಂತ ಸ್ವಲ್ಪ ಮುಂಚೆ ಇದ್ದವನು. ಅಮೇರಿಕದ ಪಂಡಿತನಾದ 'ವ್ಹಿಟ್ನೆ' (Whitney)ಯು ಹಿಂದುಗಳ ಜ್ಯೋತಿಷ ಗಣನೆಯಿಂದ ಯಾವ ಕಾಲವನ್ನೂ ಗೊತ್ತುಮಾಡುವುದು ವ್ಯರ್ಥವೆಂದೂ ಇದೆಲ್ಲಾ ಅಶುದ್ಧವೆಂದೂ ಹೇಳಿರುವನು. ಇದು ಹೇಗಾದರೂ ಇರಲಿ, ಕುರುಕ್ಷೇತ್ರದ ಯುದ್ಧದ ಕಾಲವನ್ನು ಗೊತ್ತುಮಾಡುವುದಕ್ಕಾಗುವುದೆಂಬುದನ್ನು ಇಲ್ಲಿ ತೋರಿಸುವೆನು.

ಮೊಟ್ಟಮೊದಲು ಪುರಾಣವನ್ನು ಬರೆದ ಋಷಿಯ ಅಭಿಪ್ರಾಯಾನುಸಾರ ಗಣನೆಮಾಡೋಣ. ಯುಧಿಷ್ಠಿರನ ಕಾಲದಲ್ಲಿ ಸಪ್ತರ್ಷಿಗಳು ಮಘಾ ನಕ್ಷತ್ರದಲ್ಲಿದ್ದರು, ನಂದಮಹಾಪದ್ಮನ ಕಾಲದಲ್ಲಿ ಪೂರ್ವಾಷಾಢಾ ನಕ್ಷತ್ರದಲ್ಲಿದ್ದರು.

ಪ್ರಯಾಸ್ಯಂತಿ ಯದಾಚೈತೇ ಪೂರ್ವಾಷಾಢಾಂ ಮಹರ್ಷಯಃ ।
ತದಾ ನಂದಾತ್ ಪ್ರಭೃತ್ಯೇಷ ಕಲಿರ್ವೃದ್ಧಿಂ ಗಮಿಷ್ಯತಿ ॥

೪, ೨೪, ೩೯

ಇದರ ಮೇಲೆ ಶ್ರೀಮದ್ಭಾಗವತದಲ್ಲಿಯೂ ಈ ಮಾತಿದೆ.

ಯದಾ ಮಘಾಭ್ಯೋ ಯಾಸ್ಯಂತಿ ಪೂರ್ವಾಷಾಢಾಂ ಮಹರ್ಷಯಃ ।
ತದಾ ನಂದಾತ್ ಪ್ರಭೃತ್ಯೇಷ ಕಲಿರ್ವೃದ್ಧಿಂ ಗಮಿಷ್ಯತಿ ॥

೧೨, ೨, ೩೨

ಮಘಾ ನಕ್ಷತ್ರದಿಂದ ಪೂರ್ವಾಷಾಢವು ಹತ್ತನೆಯ ನಕ್ಷತ್ರವು. ಹೇಗೆಂದರೆ—(ಪುಬ್ಬಾ, ಉತ್ತರ, ಹಸ್ತ, ಚಿತ್ತ, ಸ್ವಾತಿ, ವಿಶಾಖ, ಅನೂ

ರಾಧ, ಜ್ಯೇಷ್ಠ, ಮೂಲ, ಪೂರ್ವಾಷಾಢ) ಹೀಗೆ--ಯುಧಿಷ್ಠಿರನಿಗೂ ನಂದನಿಗೂ ೧೦×೧೦೦=ಸಹಸ್ರ ವರ್ಷಗಳ ಅಂತರವು.

ಈಗ ಎಲ್ಲರೂ ತಿಳಿದುಕೊಳ್ಳಬಹುದಾದಂತೆ ಇನ್ನೊಂದು ರೀತಿಯ ಗಣನೆಯಿಂದ ನೋಡೋಣ. ಮೇಲೆ ಎತ್ತಿ ಬರೆದಿರುವ ವಿಷ್ಣು ಪುರಾಣದ ಶ್ಲೋಕದ ಹಿಂದಿನ ಶ್ಲೋಕವು ಇದು :—

ಯಾವತ್ ಪರೀಕ್ಷಿತೋ ಜನ್ಮ ಯಾವನ್ನಂದಾಭಿಷೇಚನಂ ।
ಏತದ್ವರ್ಷ ಸಹಸ್ರಂ ತು ಜ್ಞೇಯಂ ಪಂಚದಶೋತ್ತರಮ್ ॥

೪, ೨೪, ೩೨

ನಂದನ ಹೆಸರು ನಂದಮಹಾಪದ್ಮನೆಂದು ವಿಷ್ಣು ಪುರಾಣದ ೪ನೆಯ ಅಂಶ ೨೪ ನೇಯ ಅಧ್ಯಾಯದಲ್ಲಿಯೇ ಹೀಗೆ ಹೇಳಿದೆ :—

"ಮಹಾಪದ್ಮಃ ತತ್ಪುತ್ರಾಶ್ಚ ಏಕವರ್ಷ ಶತಮವನೀಪತಯೋ ಭವಿಷ್ಯಂತಿ। ನವೈವ ತಾನ್ ನಂದಾನ್ ಕೌಟಿಲ್ಯೋ ಬ್ರಾಹ್ಮಣಃ ಸಮುದ್ಧರಿಷ್ಯತಿ. ತೇಷಾಮಭಾವೇ ಮೌರ್ಯಾಶ್ಚ ಪೃಥಿವೀಂ ಭೋಕ್ಷ್ಯಂತಿ। ಕೌಟಿಲ್ಯ ಏವ ಚಂದ್ರಗುಪ್ತಂ ರಾಜ್ಯೇಽಭ್ಯಭಿಷೇಕ್ಷ್ಯತಿ."

ಇದರ ಅರ್ಥವು—ಮಹಾಪದ್ಮನೂ ಮತ್ತೆ ಅವನ ಮಕ್ಕಳೂ ಒಂದು ನೂರು ವರ್ಷಗಳು ಪೃಥಿವಿಯನ್ನು ಆಳುವರು. *ಕೌಟಿಲ್ಯನೆಂಬ ಬ್ರಾಹ್ಮಣನು ನಂದವಂಶವನ್ನು ಉತ್ಪಾಟನ ಮಾಡುವನು. ಅವರ ಸಂತತಿ ಇಲ್ಲದಿರಲು ಮೌರ್ಯರು ಪೃಥಿವಿಯನ್ನನುಭವಿಸುವರು. ಕೌಟಿಲ್ಯನು ಚಂದ್ರಗುಪ್ತನಿಗೆ ರಾಜ್ಯ ಪಟ್ಟವನ್ನು ಕಟ್ಟುವನು.

ಹಾಗಾದರೆ ಯುಧಿಷ್ಠಿರನ ಕಾಲದಿಂದ ಚಂದ್ರಗುಪ್ತನವರೆಗೆ ೧೧೧೫ ವರ್ಷಗಳಾದವು. ಚಂದ್ರಗುಪ್ತನು ಬಹು ವಿಖ್ಯಾತನಾದ ಸಮ್ರಾಜನು. ಇವನೇ ಮಾಕದನೀಯ ಮತ್ತು ಯವನ ಸಿಕಂದರ ಮತ್ತು ಸೆಲ್ಯೂಕಸ ನೈಕಟರನ ಸಮಸಾಮಯಿಕನು. ಇವನೇ ತನ್ನ ಬಾಹುಬಲದಿಂದ ಮಾಕದನೀಯ ಯವನರನ್ನು ಭಾರತಭೂಮಿಯಿಂದ ಬಲು ದೂರ ಓಡಿಸಿದವನು; ಮತ್ತು ಪ್ರಬಲಪ್ರತಾಪ ಸೆಲ್ಯೂಕಸನನ್ನು ಸೋಲಿಸಿ ಅವನ ಮಗಳನ್ನು ಮದುವೆಯಾಗಿದ್ದನು. ಇವನಂತಹ ದೋರ್ದಂಡ ಪ್ರತಾಪಶಾಲಿಯು ಆಗ ಪೃಥಿವಿಯಲ್ಲಿ ಯಾರೂ ಇರಲಿಲ್ಲ. ಇವನು ಯಾರ

---

*ವಿಖ್ಯಾತ ಚಾಣಕ್ಯ.

ಭಯವೂ ಇಲ್ಲದೆ ಸಿಕಂದರನ ಪಾಳಯವನ್ನು ಹೊಕ್ಕಿದ್ದನೆಂದು ಹೇಳಿದೆ. ಸಿಕಂದರನು ಭಾರತವರ್ಷವನ್ನು ಕ್ರಿ. ಪೂ. ೩೨೫ರಲ್ಲಿ ಮುತ್ತಿದನು.

ಚಂದ್ರಗುಪ್ತನು ಕ್ರಿ. ಪೂ. ೩೧೫ರಲ್ಲಿ ರಾಜ್ಯಕ್ಕೆ ಬಂದನು. ಆದುದರಿಂದ ಈ ೩೧೫ ಅಂಕೆಯು ಸಮೇತ ಮೇಲೆ ಬರೆದ ೧೧೧೫ ಸೇರಲು ಯುಧಿಷ್ಠಿರನ ಕಾಲವು ದೊರೆಯುವುದು. ಹಾಗಾದರೆ ಮಹಾಭಾರತ ಯುದ್ಧ ಕಾಲವು ಕ್ರಿ. ಪೂ. ೧೪೩೦ ಎಂದಾಯಿತು.

ಇತರ ಪುರಾಣಗಳಲ್ಲಿಯೂ ಇಂತಹ ಮಾತಿರುವವು. ಮತ್ಸ್ಯ ಮತ್ತು ವಾಯು ಪುರಾಣಗಳಲ್ಲಿ ೧೧೧೫ ಎಂತಲೂ, ಕೆಲವೆಡೆಗಳಲ್ಲಿ ೧೧೫೦ ಎಂತಲೂ ಬರೆದಿದೆ. ಹಾಗಾದರೆ ಕ್ರಿ ಪೂ. ೧೪೬೫ ಎಂದು ಸಿಕ್ಕುವುದು.

ಕುರುಕ್ಷೇತ್ರದ ಯುದ್ಧವು ಇದಕ್ಕೆ ವಿಶೇಷ ಪೂರ್ವದಲ್ಲಿ ನಡೆಯಲಿಲ್ಲವು. ಅಲ್ಲದೆ ಇದರಿಂದೀಚೆಗೆ ನಡೆದಿರುವದೆಂದು ಖಂಡಿಸಲು ಸಾಧ್ಯವಲ್ಲವು. ಪ್ರಮಾಣವು ದೊರೆಯುತ್ತಿದೆ. ಇತರ ಎಲ್ಲಾ ಪ್ರಮಾಣಗಳನ್ನೂ ಖಂಡಿಸಬಹುದು. ಜ್ಯೋತಿಷದ ಗಣನೆಯನ್ನು ಖಂಡಿಸಲಾಗದು; "ಚಂದ್ರಾರ್ಕೌ ಯತ್ರ ಸಾಕ್ಷಿಣೌ."

ಪ್ರತಿವರ್ಷದಲ್ಲಿಯೂ ಸಮ ದಿವಾರಾತ್ರಿಗಳುಳ್ಳ ದಿನಗಳು ಎರಡು ಬರುವವೆಂಬುದನ್ನು ಎಲ್ಲರೂ ಬಲ್ಲರು. ಈ ದಿನಗಳು ಒಂದಾದಮೇಲೊಂದು ೬ ತಿಂಗಳಿಗೊಂದು ಸಾರಿ ಬರುವುವು. ಇದಕ್ಕೆ ವಿಷುವೆನ್ನುವರು. ಆಕಾಶದಲ್ಲಿ ಯಾವ ಯಾವ ಸ್ಥಾನಗಳಲ್ಲಿ ಈ ದಿನಗಳಲ್ಲಿ ಸೂರ್ಯನಿರುವನೋ ಆ ಸ್ಥಾನಗಳಿಗೆ ಕ್ರಾಂತಿಪಾತ ಅಥವಾ ಕ್ರಾಂತಿಬಿಂದು*ವೆನ್ನುವರು. ಇದಕ್ಕೆ ಸರಿಯಾಗಿ ೯೦ ಅಂಶಗಳ (90^0) ಮೇಲೆ ಅಯನವು ಬರುವುದು.† ಈ ೯೦ ಅಂಶಗಳನ್ನು (90^0) ಪಾರಾಗಲು ಸೂರ್ಯನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ ಅಥವಾ ಉತ್ತರಾಯಣದಿಂದ ದಕ್ಷಿಣಾಯನಕ್ಕೆ ಪ್ರವೇಶಿಸುವನು.

ಮಹಾಭಾರತನಲ್ಲಿ ಭೀಷ್ಮನಿಗೆ ಇಚ್ಛಾಮೃತ್ಯುವೆಂದು ಹೇಳಿದೆಯಷ್ಟೆ? ಅವನು ಶರಯ್ಯೆಯಲ್ಲಿ ಮಲಗಲು—ಮೃತನಾದರೆ ದಕ್ಷಿಣಾಯನವಾದುದರಿಂದ (ಸದ್ಗತಿಹಾನಿಯೆಂದು) ಉತ್ತರಾಯಣವನ್ನೇ ಎದುರು

---

*Equinoxial Point. †Solistice.

ನೋಡುತ್ತಾ ಬಾಣದ ಹಾಸಿಗೆಯಲ್ಲಿ ಪವಡಿಸಿದ್ದು, ಮಾಘಮಾಸದಲ್ಲಿ ಉತ್ತರಾಯಣವು ಬಂದನಂತರ ಪ್ರಾಣತ್ಯಾಗಮಾಡಿದನು. ಪ್ರಾಣ ಬಿಡುವುದಕ್ಕೆ ಮುಂಚೆ ಭೀಷ್ಮನು ಹೀಗೆ ಹೇಳಿದನು :

"ಮಾಘೋಽಯಂ ಸಮನುಪ್ರಾಪ್ತೋ ಮಾಸಸ್ಸೌಮ್ಯೋ ಯುಧಿಷ್ಠಿರ"

—ಎಂದರೆ ಭೀಷ್ಮನಿರ್ಯಾಣಕಾಲದಲ್ಲಿ ಮಾಘಮಾಸದಲ್ಲಿ ಉತ್ತರಾಯಣವು ಉಂಟಾಗಿತ್ತು. ಈಗಲೂ ಕೂಡ ಮಾಘಮಾಸದಲ್ಲಿಯೇ ಉತ್ತರಾಯಣವೆಂದು ಅನೇಕರು ತಿಳಿದುಕೊಂಡಿರುವರು. ಏಕೆಂದರೆ ೧ನೆಯ ಮಾಘಕ್ಕೆ (ಸೌರ) ಉತ್ತರಾಯಣ ದಿನವೆಂದೂ, ಇದರ ಹಿಂದಿನ ದಿವಸಕ್ಕೆ ಮಕರ ಸಂಕ್ರಾಂತಿಯೆಂದೂ ಈಗಲೂ ಎನ್ನುವರು. ಆದರೆ ಈಗ ಹೀಗಾಗಲಾರದು. ಅಶ್ವಿನೀ ನಕ್ಷತ್ರದ ಮೊದಲನೆಯ ಅಂಶದಲ್ಲಿ ಕ್ರಾಂತಿಪಾತವಾದಾಗ್ಗೆ ಅಶ್ವಿನಿಯುಮೊದಲಿನ ನಕ್ಷತ್ರವೆಂದೆಣಿಸಲ್ಪಟ್ಟಿತ್ತು. ಆಗ್ಗೆ ಸಂವತ್ಸರವು ಅಶ್ವಿನೀ ನಕ್ಷತ್ರದೊಡನೆ ಆರಂಭವಾಗುತ್ತಿತ್ತು. ಮತ್ತು ಆಗ್ಗೆ ಒಂದನೆಯ ಮಾಘದಲ್ಲಿ ಉತ್ತರಾಯಣವಾಗುತ್ತಿತ್ತು. ಈಗಲೂ ಗಣನೆಯು ಮೊದಲಿನ ರೀತಿಯಲ್ಲೇ ನಡೆದುಬರುತ್ತಿದೆ. ಈಗ ಫಸಲಿಯು ಸನ್ ೧ನೆಯ ಅಶ್ವಿನಿಯಲ್ಲಿ ಪ್ರಾರಂಭವಾಗುತ್ತಿದೆ. ಆದರೆ ಈಗ ಅಶ್ವಿನೀ ನಕ್ಷತ್ರದಲ್ಲಿ ಕ್ರಾಂತಿಪಾತವಿಲ್ಲ. ಈಗ ಮೊದಲಿನಂತೆ ಮಾಘದಲ್ಲಿ ಉತ್ತರಾಯಣವಾಗುವುದಿಲ್ಲ. ೭ನೆಯ ಪುಷ್ಯದಲ್ಲಿಯೋ ೮ನೆಯ ಪುಷ್ಯದಲ್ಲಿಯೋ (21 ನೆಯ ಡಿಸೆಂಬರು) ಈಗ ಉತ್ತರಾಯಣವು ಆರಂಭವಾಗುವುದು. ಇದರ ಕಾರಣವೇನೆಂದರೆ:—

ಕ್ರಾಂತಿಬಿಂದುವಿಗೆ ಒಂದು ಗತಿಯುಂಟು. ಈ ಗತಿಯಿಂದ ಕ್ರಾಂತಿಪಾತವೂ (ಅಯನಪರಿವರ್ತನ ಸ್ಥಾನವೂ), ಪ್ರತಿವರ್ಷದಲ್ಲಿಯೂ ಹಿಂದು ಹಿಂದಕ್ಕೆ ಹೋಗುವುದು. ಇದೇ ಮೊದಲು ಹೇಳಿದ ಅಯನಚಲನೆ.* ಎಷ್ಟು ದೂರ ಹಿಂದಕ್ಕೆ ಹೋಗುವುದೆಂಬುದು ಕೂಡ ಗೊತ್ತಾಗುವುದು. ವರ್ಷಕ್ಕೆ ೫೪ ವಿಕಲೆಗಳು ಹಿಂದಕ್ಕೆ ಸರಿಯುವುದೆಂದು ಹಿಂದುಗಳು ಹೇಳುವರು. ಇದನ್ನು ಮೊದಲೇ ಹೇಳಿದೆವು. ಆದರೆ ಇದರಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಕ್ರಿ. ಪೂ. ೧೭೨ರಲ್ಲಿ ಹಿಪಾರ್ಕಸನೆಂಬ ಗ್ರೀಕ್ ಜ್ಯೋತಿಷ್ಕನು ಕ್ರಾಂತಿಪಾತದಿಂದ ೧೭೪ ಅಂಶಗಳ ದೂರದಲ್ಲಿ ಚಿತ್ರಾ

*Precession of the equinoxes.

ನಕ್ಷತ್ರವನ್ನು ನೋಡಿದ್ದನು. ಮಾಸ್ಕಲಾಯನನು ಕ್ರಿ. ಶ. ೧೮೦೨ರಲ್ಲಿ ಚಿತ್ರಾವನ್ನು ೨೦೧ ಅಂಶ ೪ ಕಲೆ ೪ ವಿಕಲೆಗಳ ದೂರದಲ್ಲಿ ನೋಡಿದ್ದನು. ಇದರಿಂದ ಗುಣಿಸಿ ನೋಡಲು ಕ್ರಾಂತಿಪಾತದ ವಾರ್ಷಿಕ ಗತಿಯು ೫೦ ೩ ವಿಕಲೆಗಳೆಂದು ತಿಳಿಯುವುದು. ವಿಖ್ಯಾತ ಫರಾಸಿ ಜ್ಯೋತಿಷ್ಕನಾದ ಲವೀರಿಯರನು (Leverrier) ಈ ಗತಿಯನ್ನು ಬೇರೆ ಕಾರಣಗಳಿಂದ ೫೦·೨೪ ವಿಕಲೆಗಳೆಂದು ಗೊತ್ತುಮಾಡಿದನು. ಕೊನೆಗೆ ಸ್ಟಾಕ್‌ವೆಲ್ಲನು (Stockwell) ಗುಣಿಸಿ ೫೦·೪೩೮ ವಿಕಲೆಗಳನ್ನು ಕಂಡುಹಿಡಿದನು. ಈ ಗಣನೆಯು ಮೊದಲಿನ ಗಣನೆಯೊಂದಿಗೆ ಸರಿಹೋಲುವುದರಿಂದ ಸ್ವೀಕರಿಸೋಣ.

ಭೀಷ್ಮನ ಮರಣಕಾಲದಲ್ಲಿ ಮಾಘಮಾಸದಲ್ಲಿ ಉತ್ತರಾಯಣವಾಗಿತ್ತು. ಆದರೆ ಸೌರ ಮಾಘದ* ಯಾವ ದಿನವೋ ಅದನ್ನು ಬರೆಯಲಿಲ್ಲ. ಪುಷ್ಯ ಮಾಘಗಳಲ್ಲಿ ತಿಂಗಳಿಗೆ ೨೮ ಅಥವಾ ೨೯ ದಿನಗಳಿರುತ್ತವೆ. ಈ ಎರಡು ಮಾಸಗಳೂ ಸೇರಿ ೫೭ ದಿನಗಳಿಗಿಂತ ಹೆಚ್ಚಿರುವುದು ಅಪರೂಪ. ಆದರೆ ಮಾಘಮಾಸದ ಕೊನೆಯ ದಿನವು ಉತ್ತರಾಯಣವಾಗುವುದಿಲ್ಲ. ಹೀಗಾಗಿದ್ದರೆ "ಮಾಘೋಯಂ ಸಮನುಪ್ರಾಪ್ತಃ" ಎಂದು ಹೇಳುವುದಕ್ಕಾಗುತ್ತಿರಲಿಲ್ಲ. ೨೮ನೆಯ ಮಾಘದಲ್ಲಿ ಉತ್ತರಾಯಣವನ್ನಿಟ್ಟರೂ ಈಗಿಗಿಂತ ೪೮ ದಿನಗಳು ಹಿಂದಾಗುವುವು. ಈ ೪೮ ದಿನಗಳಲ್ಲಿ ಸೂರ್ಯನ ಗತಿಯು ೪೭ ಅಂಶಗಳೆಂದು ಹೇಳಬಹುದು. ಆದರೆ ಇದನ್ನು ಕೂಡ ಸರಿಯಾಗಿ ಹೇಳುವುದಕ್ಕಾಗುವುದಿಲ್ಲ, ಏಕೆಂದರೆ ಸೂರ್ಯನಿಗೆ ಶೀಘ್ರಗತಿಯೂ ಮಂದಗತಿಯೂ ಉಂಟು. ೨೭ನೆಯ ಪುಷ್ಯದಿಂದ ೨೯ನೆಯ ಮಾಘದವರೆಗೂ ರವಿಸ್ಫುಟವನ್ನು ಬಂಗಾಳೀ ಪಂಚಾಂಗ ರೀತಿಯಿಂದ ಗುಣಿಸಲು ೪೪ ಅಂಶ ೪ ಕಲೆಗಳು ಮಾತ್ರವಾಗುವುವು. ಪೂರ್ಣಾಂಕ ೪೪ ಅಂಶಗಳನ್ನು ತೆಗೆದುಕೊಳ್ಳಲು ಕ್ರಿ. ಪೂ. ೧೨೬೩ ವರ್ಷಗಳು ಬರುವುವು. †ಇದಕ್ಕಿಂತ

---

*ಆ ಕಾಲದಲ್ಲಿ ಸೌರದಿನಗಳೇ ರೂಢಿಯಲ್ಲಿದ್ದುವು. ಇದನ್ನು ನಾನು ಪ್ರಮಾಣ ಮಾಡುವೆನು. ಆರು ಋತುಗಳೆಂದು ಮಹಾಭಾರತದಲ್ಲಿ ಹೇಳಿದೆ. ಹನ್ನೆರಡು ತಿಂಗಳ ಗಳಿಲ್ಲದೆ ಆರು ಋತುಗಳಾಗವು.

†೪೮ ಅಂಶಗಳನ್ನು ಪುರಾ ತೆಗೆದುಕೊಂಡರೆ ಕ್ರಿ.ಪೂ. ೧೫೩೦ ವರ್ಷಗಳು ಸಿಗುತ್ತವೆ.

ಮೊದಲು ಕುರುಕ್ಷೇತ್ರದ ಯುದ್ಧವು ನಡೆಯಿತೆಂದು ಹೇಗೂ ಹೇಳುವುದಕ್ಕಾಗುವುದಿಲ್ಲ. ವಿಷ್ಣುಪುರಾಣದಿಂದ ಕ್ರಿ.ಪೂ. ೧೪೩೦ ಎಂದು ಗೊತ್ತಾಗಿದೆಯಷ್ಟೆ? ಇದೇ ಸರಿಯೆಂದು ತೋರುತ್ತದೆ. ಈ ಸಕಲ ಪ್ರಮಾಣಗಳನ್ನೂ ತೋರಿಸಿದ ಮೇಲೆ ಯಾರೂ ಮಹಾಭಾರತ ಯುದ್ಧವು ದ್ವಾಪರದ ಕೊನೆಯಲ್ಲಿ, ಎಂದರೆ ಈಗ್ಗೆ ೫೦೦೦ ವರ್ಷಗಳ ಹಿಂದೆ, ನಡೆಯಿತೆಂದು ಹೇಳಲಾರರೆಂಬುದಾಗಿ ನಂಬಿದ್ದೇನೆ. ಹಾಗೇನಾದರೂ ಇದ್ದರೆ ಸೌರ ಚೈತ್ರದಲ್ಲಿ ಉತ್ತರಾಯಣವಾಗುತ್ತಿತ್ತು. ಚಾಂದ್ರಮಾಘವೂ ಎಂದೂ ಸೌರ ಚೈತ್ರದಲ್ಲಿ ಬರಲಾರದು.

ಷಷ್ಠ ಪರಿಚ್ಛೇದ

ಪಾಂಡವರ ಐತಿಹಾಸಿಕತೆ

ಯುರೋಪೀಯರ ಮತ

ಮಹಾಭಾರತ ಯುದ್ಧಕಾಲ ವಿಷಯದಲ್ಲಿ ಯುರೋಪೀಯರೊಡನೆ ನಮಗೆ ಅಷ್ಟೇನೂ ಬಡಿದಾಡುವಷ್ಟು ಭೇದವಿಲ್ಲ. ಕೋಲ್ ಬ್ರೂಕ್ ಸಾಹೇಬರು ಗುಣಿಸಿ ಕ್ರಿ.ಪೂ. ೧೪ನೆಯ ಶತಮಾನದಲ್ಲಿಯೇ ಈ ಯುದ್ಧವು ನಡೆಯಿತೆಂದು ಹೇಳುವರು. ವಿಲ್ಸನ್ ಸಾಹೇಬರು ಅದೇ ಮತಾವಲಂಬಿಗಳು. ಎಲಿಫಿನ್‌ಸ್ಟನ್ ಸಾಹೇಬರು (Elphinstone) ಅದನ್ನೇ ಗ್ರಹಣ ಮಾಡಿರುವರು. ವಿಲ್‌ಫರ್ಡ್ ಸಾಹೇಬರು ಕ್ರಿ.ಪೂ. ೧೩೭೦ರಲ್ಲಿ ಈ ಯುದ್ಧವು ನಡೆಯಿತೆಂದು ಹೇಳುವರು. ಬುಕಾನೇರರ ಮತವು ೧೩ನೆಯ ಶತಮಾನವೆಂದು. ಫ್ರ್ಯಾಡ್ ಸಾಹೇಬರು ಕ್ರಿ.ಪೂ. ೧೨ನೆಯ ಶತಮಾನದ ಕೊನೆಯ ಭಾಗವೆಂದು ಗಣನೆಮಾಡಿರುವರು. ಇವಕ್ಕೆ ಪ್ರತಿಯಾಗಿ ವಾದಿಸುವುದರಿಂದ ಪ್ರಯೋಜನವೇನೂ ಇಲ್ಲ. ಆದರೆ ಮೊದಲೇ ಹೇಳಿದಂತೆ ಹಲವು ಯುರೋಪೀಯರ ಮತ ಮಹಾಭಾರತವು ೪ ಅಥವಾ ೫ನೆಯ ಶತಮಾನದಲ್ಲಿ

ಷರಾ.—ಭೀಷ್ಮನು ಮಾಘ ಶುದ್ಧ ಸಪ್ತಮಿಯ ದಿನ ಸ್ವರ್ಗಾರೋಹಣಮಾಡಿದನೆಂತಲೂ, ಅಂದೇ ಉತ್ತರಾಯಣ ದಿನವೆಂತಲೂ ನಾವು ರಥಸಪ್ತಮಿಯ ಹಬ್ಬವನ್ನು ನಡೆಸುತ್ತೇವೆ. ಇದು ಸೌರ ಮಾಘ ಶುದ್ಧ ಸಪ್ತಮಿಯೆಂದರೆ, ಈಗ್ಗೆ ನಲವತ್ತೆರಡು ದಿನಗಳ ಹಿಂದೆ ಉತ್ತರಾಯಣವಾಗಿರಬೇಕು. ಅಂದರೆ ೩೦೦೦ ವರ್ಷಗಳು ಅಥವಾ ಕ್ರಿ.ಪೂ. ೧೧೦೦ ವರ್ಷಗಳೆಂದು ಗೊತ್ತಾಗುವುದು.

ನಡೆಯಿತು, ಆದಿ ಮಹಾಭಾರತದಲ್ಲಿ ಪಾಂಡವರ ಮಾತೇ ಇರಲಿಲ್ಲ, ಪಾಂಡವರ ವಿಷಯವೆಲ್ಲಾ ಈಚಿನ ಕವಿಗಳ ಕಲ್ಪನೆ, ಇವೆಲ್ಲಾ ಮಹಾಭಾರತಕ್ಕೆ ಸೇರಿಸಲ್ಪಟ್ಟಿವೆ ಎಂಬುದಾಗಿರುವುದು.

ಈ ಎರಡನೆಯ ಮಾತು ನಿಜವಾಗಿದ್ದ ಪಕ್ಷದಲ್ಲಿ ಮಹಾಭಾರತವು ಯಾವಾಗ ನಡೆಯಿತೆನ್ನುವ ಮೀಮಾಂಸೆಯಿಂದ ಪ್ರಯೋಜನವೇನೂ ಇಲ್ಲ. ಮಹಾಭಾರತವು ಯಾವಾಗಲಾದರೂ ಬರೆಯಲ್ಪಟ್ಟಿರಲಿ. ಈಗಿನ ಮಹಾಭಾರತದಲ್ಲಿರುವ ಕೃಷ್ಣ ಘಟಿತವಾದ ಮಾತುಗಳೆಲ್ಲವೂ ಸುಳ್ಳಾಗಿರಬೇಕು. ಏಕೆಂದರೆ ಮಹಾಭಾರತದಲ್ಲಿರುವ ಕೃಷ್ಣ ಘಟಿತವಾದ ಮಾತುಗಳೆಲ್ಲವೂ ಪಾಂಡವರೊಡನೆ ಸೇರಿಸಲ್ಪಟ್ಟಿರುವುವು. ಆದುದರಿಂದ ಮೊದಲು ಯೂರೋಪೀಯರು ಹೇಳುವ ಈ ಕೊನೆಯ ಮಾತು ನ್ಯಾಯವಾಗಿದೆಯೋ ಇಲ್ಲವೋ ನೋಡಬೇಕು.

ಮೊದಲು ಲ್ಯಾಸನ್ ಸಾಹೇಬನ (Lassen) ಅಭಿಪ್ರಾಯವನ್ನು ವಿಚಾರಮಾಡೋಣ. ಇವನು ಲಬ್ಧಪ್ರತಿಷ್ಠನಾದ ಜರ್ಮನೀ ಪಂಡಿತನು. ಮಹಾಭಾರತವು ಯಾವಾಗಲಾದರೂ ಬರೆಯಲ್ಪಟ್ಟಿರಲಿ; ಇದರಲ್ಲಿ ಕೊಂಚ ಮಟ್ಟಿಗೆ ಐತಿಹಾಸಿಕತೆ ಇದೆಯೆಂದೊಪ್ಪುತ್ತಾನೆ. ಆದರೆ ಇವನೊಪ್ಪುವುದು ಇಷ್ಟು ಮಾತ್ರ. ಮಹಾಭಾರತದಲ್ಲಿ ವರ್ಣಿಸಲ್ಪಟ್ಟಿರುವ ಯುದ್ಧ ಕುರು ಪಾಂಚಾಲರಿಗೆ ನಡೆದದ್ದು ಎಂದು ಹೇಳಿ ಪಾಂಡವರನ್ನು ಅನೈತಿಹಾಸಿಕ ಕವಿಕಲ್ಪನೆಯೆಂದು ಹಾರಿಸಿಬಿಟ್ಟಿದ್ದಾನೆ. ವೇಬರ್ ಸಾಹೇಬರು ಇದೇ ಮತವನ್ನು ಗ್ರಹಣಮಾಡಿರುತ್ತಾರೆ. ಸರ್ ಮಾನಿಯರ್ ವಿಲಿಯಮ್ಸ್, ಬಾಬೂ ರಮೇಶಚಂದ್ರ ದತ್ತ ಮುಂತಾದ ಅನೇಕರು ಈ ಮತಾವಲಂಬಿಗಳು. ಇವರ ಮತವೇನೆಂಬುದನ್ನು ಸಂಕ್ಷೇಪವಾಗಿ ಇಲ್ಲಿ ಸೂಚಿಸುವೆನು.

ಕುರುವೆಂಬ ರಾಜನೊಬ್ಬನಿದ್ದನು. ಅವನ ವಂಶದ ರಾಜರುಗಳಿಗೆ ಕುರುಗಳು ಅಥವಾ ಕೌರವರೆಂದು ನಾವು ಪುರಾಣೇತಿಹಾಸಗಳಲ್ಲಿ ಕೇಳುತ್ತೇವೆ. ಇವರು ಆಳುತ್ತಿದ್ದ ದೇಶವಾಸಿಗಳಿಗೂ ಕೌರವರೆಂದು ಹೆಸರುಂಟು. ಆದುದರಿಂದ ಕುರು ಎಂಬ ಶಬ್ದದಿಂದ ಕೌರವರಿಂದಾಳಲ್ಪಟ್ಟ ದೇಶದ ಜನರೆಂದು ಅರ್ಥವಾಯಿತು. ಪಾಂಚಾಲರು ಇನ್ನೊಂದು ದೇಶದ ಜನರು.

ಈ ಅರ್ಥದಲ್ಲಿಯೇ ಪಾಂಚಾಲ ಎಂಬ ಶಬ್ದವು ಮಹಾಭಾರತದಲ್ಲಿ ಬಳಸಲ್ಪಟ್ಟಿರುವುದು. ಈ ಕುರು ಪಾಂಚಾಲ ದೇಶಗಳು ನೆರೆಹೊರೆಯ ರಾಜ್ಯಗಳು. ಈ ಎರಡು ದೇಶಗಳೂ ಮಹಾಭಾರತ ಯುದ್ಧಕ್ಕೆ ಮುಂಚೆ ಇತರ ಉತ್ತರ ಪಶ್ಚಿಮದ ಎಲ್ಲಾ ರಾಜ್ಯಗಳಿಗಿಂತಲೂ ಹೆಚ್ಚಿಗೆಯನ್ನು ಹೊಂದಿದ್ದುವು. ಒಂದು ಕಾಲದಲ್ಲಿ ಈ ಎರಡು ನಾಡಿನವರೂ ಪರಸ್ಪರ ಬೆರೆಯುತ್ತಿದ್ದರೆಂದು ತೋರುವುದು. ಕುರು ಪಾಂಚಾಲ ಪದಗಳು ವೈದಿಕ ಗ್ರಂಥಗಳಲ್ಲಿಯೂ ಸಿಕ್ಕುವುವು. ಆಮೇಲೆ ಇವೆರಡು ರಾಜ್ಯಗಳಿಗೂ ವಿರೋಧವು ಹುಟ್ಟಿತ್ತು. ಇದರ ಪರಿಣಾಮವೇ ಮಹಾಭಾರತದ ಯುದ್ಧವೆಂಬುದು. ಈ ಯುದ್ಧದಲ್ಲಿ ಕೌರವರನ್ನು ಪಾಂಚಾಲರು ಸೋಲಿಸಿದರು.

ಇಲ್ಲಿಯವರೆಗೂ ನಮ್ಮ ಆಕ್ಷೇಪವಷ್ಟೇನೂ ಇಲ್ಲ. ಈ ಮಾತಿಗೆ ನಮ್ಮ ಒಪ್ಪಿಗೆಯೂ ಇದೆ. ವಸ್ತುತಃ ಕೌರವರ ವಿಪಕ್ಷದವರು ಪಾಂಚಾಲರೇ ಹೌದು. ಯುದ್ಧದಲ್ಲಿ ಕೌರವರನ್ನು ಎದುರಿಸಿ ನಿಂತದ್ದು ಪಾಂಚಾಲ ಸೈನ್ಯವೇ ಅಥವಾ ಕೌರವ ವಿರೋಧಿಗಳನ್ನು ಪಾಂಚಾಲರು ಮತ್ತು ಸೃಂಜಯರು ಎಂದು ವರ್ಣಿಸಲಾಗಿದೆ.* ಪಾಂಚಾಲ ರಾಜಪುತ್ರ ಧೃಷ್ಟದ್ಯುಮ್ನನೇ ಆ ಸೇನೆಯ ಅಧ್ಯಕ್ಷನು. ಪಾಂಚಾಲ ರಾಜಪುತ್ರನಾದ ಶಿಖಂಡಿಯೇ ಕೌರವ ಮುಖಂಡ ಭೀಷ್ಮನನ್ನು ಕೆಡಹಿದವನು. ಧೃಷ್ಟದ್ಯುಮ್ನನೇ ಕೌರವಾಚಾರ್ಯ ದ್ರೋಣನನ್ನು ಉರುಳಿಸಿದವನು. ಈ ಯುದ್ಧವು ಧೃತರಾಷ್ಟ್ರ ಪುತ್ರರಿಗೂ ಪಾಂಡು ಪುತ್ರರಿಗೂ ಆದದ್ದಾಗಿದ್ದರೆ ಇದಕ್ಕೆ ಕುರುಪಾಂಚಾಲ ಯುದ್ಧವೆಂದು ಹೇಳುವುದಕ್ಕಾಗುತ್ತಿರಲಿಲ್ಲ. ಏಕೆಂದರೆ ಪಾಂಡವರೂ ಕುರುಗಳೇ. ಆದುದರಿಂದ ಇದಕ್ಕೆ ಧಾರ್ತರಾಷ್ಟ್ರ ಪಾಂಡವರ ಯುದ್ಧವೆಂದು ಹೇಳಬೇಕಾಗಿತ್ತು. ಭೀಷ್ಮ, ದ್ರೋಣ, ಕೃಪರುಗಳಿಗೆ ಧಾರ್ತರಾಷ್ಟ್ರರೊಡನೆ ಎಷ್ಟು ಸಂಬಂಧವೋ ಅಷ್ಟೇ ಸಂಬಂಧವೂ ಸ್ನೇಹವೂ ಪಾಂಡವರೊಡನೆಯೂ ಇರುವುದು. ಆದುದರಿಂದ ಭೀಷ್ಮ ಮೊದಲಾದವರು ದುರ್ಯೋಧನನ ಪಕ್ಷವನ್ನು ವಹಿಸಿ ಪಾಂಡವರೊಡನೆ ಯುದ್ಧಮಾಡುತ್ತಿರಲಿಲ್ಲ. ಏಕೆಂದರೆ ಅವರು ಧರ್ಮಾತ್ಮರು ಮತ್ತು ನ್ಯಾಯಪರರು. ದ್ರೋಣಾಚಾರ್ಯರ ರಕ್ಷಣೆಯಲ್ಲಿ ಪಾಂಡವರೂ ಮತ್ತು

*ಸೃಂಜಯರು ಪಾಂಚಾಲರಲ್ಲೇ ಸೇರಿದವರು, ಎಂದರೆ ಪಾಂಚಾಲರ ಜ್ಞಾತಿಗಳು.

ಧಾರ್ತರಾಷ್ಟ್ರರೂ ಚಿಕ್ಕಂದಿನಲ್ಲಿ ಬೆಳೆಯುತ್ತಿದ್ದ ಕಾಲದಲ್ಲಿಯೇ ಕೌರವರು (ಧಾರ್ತರಾಷ್ಟ್ರ-ಪಾಂಡವರು) ಪಾಂಚಾಲ ರಾಜ್ಯವನ್ನು ಹಿಡಿದು ಪಾಂಚಾಲ ರಾಜನನ್ನು ಸೋಲಿಸಿ, ಅವನಿಗೆ ಬಹಳ ಅವಮಾನಮಾಡಿದ್ದ ರೆಂದು ಮಹಾಭಾರತದಲ್ಲಿ ಹೇಳಿದೆ.

ಆದುದರಿಂದ ಈ ಯುದ್ಧವು ಮುಖ್ಯವಾಗಿ ಕುರುಪಾಂಚಾಲ ಯುದ್ಧ ವೆಂಬುದೇ ಮೇಲಿನವರ ಮತವು. ಇದನ್ನೇ ನಾವೂ ಒಪ್ಪುವೆವು. ಈ ಮತ ವನ್ನು ಮೆಚ್ಚಿಕೊಂಡು ಮೇಲಿನ ಪಂಡಿತರು ಮುಂದೆ ಯಾವ ಸಿದ್ಧಾಂತಕ್ಕೆ ಇಳಿದಿರುವರೋ ನೋಡೋಣ.

ಇವರು ಹೇಳುವುದೇನೆಂದರೆ:—ಈ ಯುದ್ಧವು ಕುರುಪಾಂಚಾಲರದು. ಪಾಂಡು ಮತ್ತು ಪಾಂಡವರೆಂಬವರಾರೋ? ಇವರು ಸುಳ್ಳು ಎಂಬೀ ಸಿದ್ಧಾಂತಕ್ಕೆ ಬೇರೆ ಕಾರಣಗಳನ್ನು ಕೂಡ ತೋರಿಸಿರುವರು. ಇವಷ್ಟನ್ನೂ ನಾನು ಮುಂದಕ್ಕೆ ಸಮಾಲೋಚಿಸುವೆನು. ಇಲ್ಲಿ ತಿಳಿದುಕೊಳ್ಳ ಬೇಕಾದುದೇನೆಂದರೆ—ಕುರುಪಾಂಚಾಲರ ಯುದ್ಧವೆಂದು ಪಾಂಡವರ ಇರುವಿಕೆಯನ್ನು ಒಪ್ಪದಿರುವುದು ಸಂಗತವಲ್ಲ. ಪಾಂಚಾಲರಾಜನು ಪಾಂಡವರ ಮಾವನಾದುದರಿಂದ ಇವರು ಈ ಯುದ್ಧದಲ್ಲಿ ಪಾಂಚಾಲ ರಾಜನ ಸಹಾಯಕರಾಗಿ ಯುದ್ಧಮಾಡುವುದು ಸ್ವಭಾವವೇ.

ಪಾಂಡವರ ಜೀವಿತ ವೃತ್ತಾಂತವೇನೆಂದರೆ:—

ಕೌರವಾಧಿಪತಿ ವಿಚಿತ್ರವೀರ್ಯನಿಗೆ ಧೃತರಾಷ್ಟ್ರ, ಪಾಂಡು ಎಂಬಿ ಬ್ಬರು ಮಕ್ಕಳಿದ್ದರು.* ಧೃತರಾಷ್ಟ್ರನು ಹಿರಿಯವನು ಆದರೆ ಕುರುಡನು. ಆದುದರಿಂದ ರಾಜ್ಯಾಧಿಕಾರವು ಪಾಂಡುವಿನ ಕೈಸೇರಿತು. ಕೊನೆಗೆ ಪಾಂಡುವು ರಾಜ್ಯಚ್ಯುತನಾಗಿ ಅರಣ್ಯವನ್ನು ಸೇರಲು ಧೃತರಾಷ್ಟ್ರನಿಗೆ ದೊರೆತನವಾಯಿತು. ಹೀಗಿರಲು ಪಾಂಡುರಾಜನ ಮಕ್ಕಳಾದ ಪಾಂಡವರು ದೊಡ್ಡವರಾಗಿ ರಾಜತ್ವವನ್ನು ಬಯಸಲು ಧೃತರಾಷ್ಟ್ರನ ಮಕ್ಕಳು ಪಾಂಡ ವರನ್ನು ದೇಶದಿಂದ ಹೊರಕ್ಕೆ ಕಳುಹಿಸಿದರು. ಪಾಂಡವರು ಬಳಿಕ ಅರಣ್ಯ ಗಳಲ್ಲಿ ಅಲೆದಲೆದು ಪಾಂಚಾಲನ ಮಗಳನ್ನು ಮದುವೆಯಾಗಿ ಅವನೊಡನೆ ಸ್ನೇಹವನ್ನು ಬಳೆಯಿಸಿ ಪಾಂಚಾಲನ ಮತ್ತು ಸೋದರತ್ತೆಯ ಮಗನಾದ

*ವಿದುರನು ವೈಶ್ಯಜಾತನು.

ಯಾದವನಾಯಕ ಪ್ರಬಲ ಪ್ರತಾಪ ಕೃಷ್ಣನ ಸಹಾಯದಿಂದ ಇಂದ್ರಪ್ರಸ್ಥದಲ್ಲಿ ಹೊಸ ರಾಜ್ಯವನ್ನು ಕಟ್ಟಿದರು. ಆ ರಾಜ್ಯವನ್ನೂ ಕೂಡ ಧಾರ್ತರಾಷ್ಟ್ರರು ನುಂಗಿಕೊಂಡರು.

ಪಾಂಡವರು ಮತ್ತೆ ಕಾಡುಪಾಲಾದರು. ಈ ದಶೆಯಲ್ಲಿ ವಿರಾಟನೊಡನೆ ಸ್ನೇಹ ಮತ್ತು ಸಂಬಂಧವನ್ನು ಮಾಡಿಕೊಂಡರು. ಆಮೇಲೆ ಪಾಂಚಾಲರು ಕೌರವರನ್ನು ಮುತ್ತಲು ಪೂರ್ವವೈರದ ತೀರುವೆಗೆ ಈ ಯುದ್ಧವನ್ನು ಮಾಡಿದರು. ಪಾಂಡವರ ರಾಜ್ಯಾಧಿಕಾರವು ನೆಪಮಾತ್ರ ಹೌದೋ ಅಲ್ಲವೋ ಹೇಳುವುದಕ್ಕಾಗುವುದಿಲ್ಲ. ಹೇಗಾದರೂ ಆಗಲಿ, ಪಾಂಚಾಲರೊಡನೆ ಕೂಡಿ ಪಾಂಡವರು ಈ ಯುದ್ಧವನ್ನು ಮಾಡಿದರು. ಇದೇ ಸಂಭವ.

ಆಗಿನ ಕಾಲದ ಯಾವ ಗ್ರಂಥದಲ್ಲಿಯೂ ಪಾಂಡವರ ಹೆಸರಿಲ್ಲವಾದುದರಿಂದ ಪಾಂಡವರೆಂಬವರೇ ಸುಳ್ಳೆಂದು ಮೇಲಿನ ಪಂಡಿತರು ಹೇಳುತ್ತಾರೆ. ಇದಕ್ಕುತ್ತರವೇನೆಂದರೆ :—

ಮಹಾಭಾರತವು ಅದೇ ಕಾಲದಲ್ಲಿ ಬರೆದ ಗ್ರಂಥವು. ಅದರಲ್ಲಿ ಪಾಂಡವರ ಹೆಸರು ಇದ್ದೇ ಇದೆ. ಇದಕ್ಕಿಂತ ಬೇರೆ ಇನ್ನೇನು ಬೇಕು? ಆ ಕಾಲದಲ್ಲಿ ಇತಿಹಾಸವನ್ನು ಬರೆದಿಡುವ ಸಂಪ್ರದಾಯವಿರಲಿಲ್ಲ. ಮತ್ತು ಕೆಲವು ಗ್ರಂಥಗಳಲ್ಲಿ ಪಾಂಡವರ ಹೆಸರುಗಳಿರುವುವು. ಈ ವಿಷಯದಲ್ಲಿ ಯೂರೋಪಿನವರು ಹೇಳುವದೇನೆಂದರೆ:—ಶತಪಥ ಬ್ರಾಹ್ಮಣವು ಆ ಕಾಲದ ಕೆಲವು ದಿನಗಳಾದಮೇಲೆ ಬರೆದ ಗ್ರಂಥವು. ಅದರಲ್ಲಿ ಧೃತರಾಷ್ಟ್ರ, ಪರೀಕ್ಷಿತ್ ಮತ್ತು ಜನಮೇಜಯರ ಹೆಸರುಗಳಿವೆ. ಆದರೆ ಪಾಂಡವರ ಹೆಸರಿನ ವಾಸನೆಯೂ ಕೂಡ ಇಲ್ಲ. ಆದುದರಿಂದ ಪಾಂಡವರಿರಲಿಲ್ಲ.

ಭಾರತವರ್ಷೀಯ ಪ್ರಾಚೀನ ರಾಜರ ವಿಷಯದಲ್ಲಿ ಹೀಗೆ ಸಿದ್ಧಾಂತ ಮಾಡಲಾಗದು. ಭಾರತವರ್ಷೀಯ ಗ್ರಂಥವಾವುದರಲ್ಲಿಯೂ ಮಾಕದನಿನ, ಸಿಕಂದರನ ಹೆಸರಿನ ವಾಸನೆಯೂ ಇಲ್ಲ. ಆದುದರಿಂದ ಅವನು ಭಾರತವರ್ಷಕ್ಕೆ ಬಂದು ಮಾಡಿದ ಕೆಲಸಗಳೆಲ್ಲವೂ ಸುಳ್ಳು; ಸಿಕಂದರನು ಗ್ರೀಕ್ ಕವಿಕಲ್ಪಿತನು ಎನ್ನಬಹುದೇ? ಹೀಗೆಯೇ ಘಸ್ನೀ ಮಹಮ್ಮೂದನ ಹೆಸರಿನ ವಾಸನೆಯೂ ಭಾರತ ಗ್ರಂಥದಲ್ಲಿಲ್ಲವಾದ

ಮಾತ್ರಕ್ಕೇ ಇವನು ಮುಸಲ್ಮಾನ್ ಕವಿಗಳ ಕಲ್ಪನಾಸೂತ್ರಕ್ಕೆ ಸೇರಿದವನೆನ್ನಬಹುದೇ? ಬಂಗಾಳಾ ಸಾಹಿತ್ಯದಲ್ಲಿ ಭಕ್ತ್ಯಾರ್ ಖಿಲ್ಜಿಯ ಹೆಸರು ಕೂಡಾ ಇಲ್ಲವಾದುದರಿಂದ ಇವನು ಮಿನ್ಹಾಜ್‌ದೀನನ ಕಲ್ಪನಾಮಾತ್ರನೆನ್ನಬಹುದೇ? ಹೀಗಲ್ಲವಾದರೆ ಅವನೊಬ್ಬನ ಮಾತೇ ವಿಶ್ವಾಸ ಯೋಗ್ಯವಾಗಲು ಕಾರಣವೇನು? ಮತ್ತು ಮಹಾಭಾರತದ ಮಾತುಗಳೆಲ್ಲವೂ ಅವಿಶ್ವಾಸಕ್ಕೆ ಯೋಗ್ಯವೆಂದು ಹೇಳುವುದು ಹೇಗೆ?

ಶತಪಥ ಬ್ರಾಹ್ಮಣದಲ್ಲೇನೋ ಅರ್ಜುನ ಶಬ್ದವಿದೆ. ಆದರೆ ಇದಕ್ಕೆ ಅರ್ಥವು ಇಂದ್ರನೆಂದು ವ್ಯವಹೃತವಾಗಿದೆ. ಪಾಂಡವನೆಂದರ್ಥವಾಗುವುದಿಲ್ಲವಾದುದರಿಂದ ಪಾಂಡವರ ಅರ್ಜುನನು ಕವಿಕಲ್ಪಿತನೆಂದು ವೇಬರ್ ಸಾಹೇಬರು ಹೇಳುತ್ತಾರೆ. ಈ ಬುದ್ಧಿಯನ್ನು ಒಳಹೊಗಲು ನಮಗೆ ಶಕ್ತಿ ಸಾಲದು. ಇಂದ್ರಾರ್ಥದಲ್ಲಿ ಅರ್ಜುನ ಶಬ್ದವು ವ್ಯವಹೃತವಾಗಲು ಈ ಹೆಸರಿನ ಯಾವ ಮನುಷ್ಯನೂ ಇರಲಿಲ್ಲವೆಂದು ಸಿದ್ಧಾಂತವಾಯಿತು. ಇದನ್ನು ತಿಳಿಯಲು ನನಗೆ ಶಕ್ತಿ ಸಾಲದು.

ಈ ಮಾತುಗಳನ್ನು ಹಾಸ್ಯಮಾಡಿ ತಳ್ಳಿಬಿಡಬಹುದಾಗಿತ್ತು. ಆದರೆ ವೇಬರ್ ಸಾಹೇಬರು ಮಹಾಮಹೋಪಾಧ್ಯಾಯ ಪಂಡಿತರು. ವೇದಗಳನ್ನು ಅಚ್ಚುಹಾಕಿಸಿದವರು. ಅಲ್ಲದೆ ನಾನೊಬ್ಬ ಹಿಂದೂ, ಅದರಲ್ಲೂ ಮೂರ್ಖನು. ಅವರನ್ನು ಹಾಸ್ಯಮಾಡುವುದು ಬಹು ಕೆಟ್ಟಕೆಲಸವು. ಆದರೂ ಇದೊಂದು ಮಾತನ್ನು ತಿಳಿಸುವೆನು. ಶತಪಥ ಬ್ರಾಹ್ಮಣದಲ್ಲಿ ಅರ್ಜುನನ ಹೆಸರಿದೆ, ಫಲ್ಗುಣನೆಂಬ ಹೆಸರೂ ಇದೆ. ಫಲ್ಗುಣನು ಮಧ್ಯಮ ಪಾಂಡವನು. ಅರ್ಜುನನೆಂದರೆ ಇಂದ್ರನೆಂದು ಹೇಗೆ ಅರ್ಥವಾಗುವುದೋ ಹಾಗೆಯೇ ಫಲ್ಗುಣನೆಂಬುದು ಇಂದ್ರಾರ್ಜುನರಿಬ್ಬರಿಗೂ ಅನ್ವಯಿಸುವುದು. ಇಂದ್ರನು ಫಲ್ಗುನೀ ನಕ್ಷತ್ರಕ್ಕೆ ಅಧಿದೈವನಾದುದರಿಂದ ಫಲ್ಗುಣವೆನಿಸಿಕೊಳ್ಳುವನು.*

*ಈಗಿನ ಕಾಲದ ದೈವಜ್ಞರು ಹೀಗೆ ಹೇಳಲಾರರು. ಆದರೆ ಶತಪಥ ಬ್ರಾಹ್ಮಣದಲ್ಲೇನೋ ಹೀಗುಂಟು. (೨ನೆಯ ಕಾಂಡ ೧ನೆಯ ಅಧ್ಯಾಯ, ೨ನೆಯ ಬ್ರಾಹ್ಮಣ, ೧೧ನೆಯ ಶ್ಲೋಕವನ್ನು ನೋಡಿ.)

ಅರ್ಜುನನು ಫಲ್ಗುನೀ ನಕ್ಷತ್ರದಲ್ಲಿ ಹುಟ್ಟಿದುದರಿಂದ ಇವನನ್ನು ಫಲ್ಗುಣನೆಂದು ಕರೆಯುತ್ತಿದ್ದರು. ಮತ್ತು ಇದು ಇಂದ್ರಾಧಿಷ್ಠಿತ ನಕ್ಷತ್ರವಾದುದರಿಂದ ಅರ್ಜುನನೂ ಇಂದ್ರಪುತ್ರನೆಂದು ಪ್ರಖ್ಯಾತನಾಗಿದ್ದನು. ಇಂದ್ರನ ಔರಸಪುತ್ರನಲ್ಲವೆಂಬುದನ್ನು ಶಿಕ್ಷಿತ ಪಾಠಕರೆಲ್ಲಾ ತಿಳಿದಿದ್ದಾರೆ. ಮತ್ತು ಅರ್ಜುನ ಶಬ್ದಕ್ಕೆ ಬಿಳುಪು ಎಂದರ್ಥವಾಗುತ್ತದೆ. ಮೇಘ ದೇವತೆಯಾದ ಇಂದ್ರನು ಬಿಳುಪಲ್ಲ. ಇವರಿಬ್ಬರೂ ನಿರ್ಮಲ ಕರ್ಮಕಾರಿಗಳು. ಶುದ್ಧರು. ಪವಿತ್ರರು. ಆದುದರಿಂದ ಉಭಯರನ್ನೂ ಹೀಗೆ ಸಂಬೋಧಿಸಿದೆ. ಇಂದ್ರನ ಹೆಸರು ಆರ್ಜುನನೆಂಬ ವಿಷಯವು ಶತಪಥ ಬ್ರಾಹ್ಮಣದಲ್ಲಿ ಈ ಪ್ರಕಾರ ಹೇಳಿದೆ:--"ಆರ್ಜುನೋ ವೈ ಇಂದ್ರೋ ಯದಸ್ಯ ಗುಹ್ಯಂ ನಾಮ—ಅರ್ಜುನನೇ ಇಂದ್ರನು, ಇದು ಅವನ ಗೂಢವಾದ ಹೆಸರು." ಅರ್ಜುನನೆಂಬೊಬ್ಬ ಮನುಷ್ಯನಿದ್ದನು. ಅವನ ಮಹಿಮೆಯನ್ನು ಹೆಚ್ಚಿಸುವುದಕ್ಕೋಸ್ಕರ ಅವನನ್ನು ಇಂದ್ರನೊಡನೆ ಐಕ್ಯಸ್ಥಾಪನೆಮಾಡಿದರು. ಇಂದ್ರನ ಒಂದು ಗುಟ್ಟಿನ ಹೆಸರಿನ ಪ್ರಚಾರ ಪ್ರಯತ್ನವೆಂದು ಅರ್ಥಮಾಡುವುದಕ್ಕಾಗುವುದಿಲ್ಲವೇ? ವೇಬರ್ ಸಾಹೇಬರು ಮೇಲಿರುವ ಗುಹ್ಯ ಎಂಬ ಪದಕ್ಕೆ ಮಿಸ್ಟಿಕ್ (Mystic) ಎಂದರ್ಥ ಮಾಡಿಕೊಂಡು ಲೋಕಕ್ಕೆ ತಮ್ಮ ಐಲುತನವನ್ನು ತೋರ್ಪಡಿಸಿಕೊಂಡಿದ್ದಾರೆ.

ಇನ್ನೊಂದು ರಹಸ್ಯವುಂಟು. ಕೆಂಪು ಮತ್ತಿಗಿಡಕ್ಕೆ ಅರ್ಜುನ ಎಂದು ಹೆಸರು. ಮತ್ತು ಫಾಲ್ಗುಣಮಾಸದಲ್ಲೇ ಇದು ಹೂ ಬಿಡುವುದರಿಂದ ಇದಕ್ಕೆ ಫಲ್ಗುಣವೆಂಬ ಹೆಸರೂ ಉಂಟು. ಇದರ ಹೂ ಬಿಳುಪು. ಈಗ ನಮ್ಮ ವಿನೀತ ನಿವೇದನವೇನೆಂದರೆ?—ಇಂದ್ರನ ಹೆಸರು ಅರ್ಜುನ ಮತ್ತು ಫಲ್ಗುಣನೆಂದಿರುವಾಗ್ಗೆ ಆ ಹೆಸರು ಮತ್ತಿಗಿಡಕ್ಕಲ್ಲವು. ಆದುದರಿಂದ ಮತ್ತಿಗಿಡವೆಂಬುದೇ ಇಲ್ಲವೆಂದು ಹೇಳಬಹುದೇ? ಪಾಠಕರು ಹೀಗೆ ಅನುಮತಿಕೊಡುವುದಾದರೆ ನಾನು ಮಹಾಮಹೋಪಾಧ್ಯಾಯ ವೇಬರ್ ಸಾಹೇಬರ ಜಯಗಾನವನ್ನು ಹಿಡಿಯುವೆನು.

ಈ ಸಕಲ ಪಂಡಿತರೂ, ಕೇವಲ ಲಲಿತವಿಸ್ತರದಲ್ಲಿ ಪಾಂಡವರ ಹೆಸರೇನೋ ಸಿಕ್ಕುವುದು, ಆದರೆ ಆ ಪಾಂಡವರು ಪರ್ವತವಾಸಿಗಳಾದ

ಕಳ್ಳರೆಂದು ಹೇಳುವರು.* ಇದರಿಂದ ನಮ್ಮ ವಿವೇಚನೆಯಲ್ಲಿ ಪಾಂಡವರು ಯಾವಾಗಲೂ ಇರಲಿಲ್ಲವೆಂದರ್ಥವಾಗುವುದಿಲ್ಲ. ಹಿಂದೂ ಸಾಹಿತ್ಯದಲ್ಲಿ "ಪರಂಗಿ" ಶಬ್ದವು ಒಂದೆರಡು ಗ್ರಂಥಗಳಲ್ಲಿ ಸಿಕ್ಕುವುದು. ಇದರ ಅರ್ಥವು ಯೂರೋಪೀಯ ಅಥವಾ ಯೂರೇಷೀಯ ಎಂದು. "ಫ್ರಾಂಕ್" ಶಬ್ದವು ಎಲ್ಲಿಯೂ ಸಿಕ್ಕುವುದಿಲ್ಲ ಮತ್ತು ಪರಂಗಿ ಶಬ್ದವು ಈ ಅರ್ಥದಲ್ಲೆಲ್ಲಿಯೂ ಉಪಯೋಗಕ್ಕೆ ಬಂದಿಲ್ಲ. ಇದರಿಂದ ಫ್ರಾಂಕ್ ಜಾತಿಯು ಯಾವಾಗಲೂ ಇರಲಿಲ್ಲವೆಂದು ಸಿದ್ಧಾಂತಮಾಡಬಹುದೇ? ಹೀಗೆ ಮಾಡಿದರೆ ಯೂರೋಪೀಯ ಪಂಡಿತರೂ ಅವರ ಶಿಷ್ಯರೂ ಬಿದ್ದು ಒದ್ದಾಡುತ್ತಿರುವ ಬಾವಿಯಲ್ಲಿ ನಾವೂ ಬೀಳಬೇಕಾಗುವುದು.

---

*ಬೌದ್ಧ ಗ್ರಂಥಕಾರರು ಪಾಂಡವ ಎಂಬ ಹೆಸರಿನಲ್ಲಿ ಪರ್ವತವಾಸಿಗಳಾದ ಒಂದು ಜಾತಿಯ ಜನರನ್ನು ವರ್ಣಿಸುವರು. ಅವರು ಉಜ್ಜಯಿನಿ ಮತ್ತು ಕೋಸಲವಾಸಿಗಳ ಶತ್ರುಗಳು (*Weber's H. I. Lit., 1878, p. 185*) ನೋಡಿ. ಮಹಾಭಾರತದಲ್ಲಿ ಪಾಂಡವರು ಹಸ್ತಿನಾಪುರವಾಸಿಗಳೆಂದು ವರ್ಣಿಸಲ್ಪಟ್ಟಿದ್ದಾರಷ್ಟೆ? ಆದರೆ ಈ ಗ್ರಂಥದ ಬೇರೆ ಕಡೆಯಲ್ಲಿ ಇವರೂ ಕೂಡ ಮೊದಲು ಹಿಮಾಲಯದಲ್ಲಿದ್ದು ಬೆಳೆದವರೆಂದು ಬರೆದಿದೆ:—

ಏವಂ ಪಾಂಡೋಃ ಸುತಾಃ ಪಂಚ ದೇವದತ್ತಾ ಮಹಾಬಲಾಃ ।
ವಿವರ್ಧಮಾನಾಸ್ತೇ ತತ್ರ ಪುಣ್ಯೇ ಹೈಮವತೇ ಗಿರೌ ॥

ಹೀಗೆ ಪಾಂಡವರು ದೇವದತ್ತರಾದ ಐದು ಮಂದಿ ಮಹಾಬಲಿಷ್ಠ ಪುತ್ರರು. ಇವರು ಹಿಮಾಲಯ ಪರ್ವತದಲ್ಲಿ ಬೆಳೆದವರು.

ಆದಿಪರ್ವದ ೧೨೪ ಅ., ೨೭-೩೯

ಪ್ಲಿನಿ ಮತ್ತು (ಸ)ಲಿನಿಸ್ ಎಂಬ ಹೆಸರಿನ ಗ್ರೀಕ್ ಗ್ರಂಥಕಾರರು ಭಾರತವರ್ಷದ ವಾಯುವ್ಯ ಮೂಲೆಯಲ್ಲಿರುವ ಮತ್ತು ಬಾಹ್ಲೀಕ ದೇಶದ ಉತ್ತರದಿಕ್ಕಿನಲ್ಲಿರುವ ಸೋಗ್ರಿಯಾನಾ ದೇಶದಲ್ಲಿನ ಒಂದೂರಿನ ಹೆಸರು ಪಾಂಡು ಎಂದೂ, ಸಿಂಧೂ ನದಿಯ ಮುಖದ ಸಮೀಪದಲ್ಲಿ ವಾಸಮಾಡುತ್ತಿರುವ ಒಂದು ಜಾತಿಗೆ ಪಾಂಡ್ಯರು ಎಂದೂ ಬರೆದಿರುತ್ತಾರೆ. ಭೂಗೋಳವೇತ್ತನಾದ ಟಾಲ್ಮಿಯು ಪಾಂಡ್ಯವೆಂಬ ಹೆಸರಿನ ದೇಶವು ವಿತಸ್ತಾ (Jhelum) ನದೀ ಸಮೀಪದಲ್ಲಿದೆ ಎಂದು ಬರೆಯುತ್ತಾನೆ. ಕಾತ್ಯಾಯನನು ಪಾಣಿನೀಯ ಸೂತ್ರವೊಂದರ ವಾರ್ತಿಕೆಯಲ್ಲಿ ಪಾಂಡು ಶಬ್ದದ ನಿಷ್ಪತ್ತಿಮಾಡಿರುತ್ತಾನೆ. (ಪಾಂಡ್ಯೋಂಡ್ಯಣ್ ವಕ್ತವ್ಯಃ—ವಾರ್ತಿಕ)

ಲಕ್ಷ್ಮೀಧರನು ತಾನು ಮಾಡಿದ ಷಡ್ಭಾಷಾ ಚಂದ್ರಿಕೆಯಲ್ಲಿ ಕೇಕಯ, ಬಾಹ್ಲೀಕ ಮುಂತಾದ ಕೆಲವು ಉತ್ತರ ದಿಕ್ಕಿನ ಜನಪದಗಳೊಡನೆ ಪಾಂಡ್ಯದೇಶದ ಹೆಸರನ್ನು ಬರೆದಿರುತ್ತಾನೆ ಮತ್ತು ಸಮುದಾಯಕ್ಕೆ ಪಿಶಾಚ ಎಂದರೆ ಅಸಭ್ಯದೇಶ ವಿಶೇಷವೆಂದು ಕೀರ್ತಿಸಿರುತ್ತಾನೆ.

"ಪಾಂಡ್ಯ ಕೇಕಯ ಬಾಹ್ಲೀಕ * * * ಏತೇ ಪೈಶಾಚ ದೇಶಾಃ ಸ್ಮೃಃ"

ಇನ್ನು ಲಾಸನ್ (Lassen) ಸಾಹೇಬರ ಮತವನ್ನು ಸಮಾಲೋಚಿಸುವುದುಳಿಯಿತು. ಇವರ ಅಭಿಪ್ರಾಯದಂತೆ ಕುರು ಪಾಂಚಾಲರ ಯುದ್ಧವು ಐತಿಹಾಸಿಕ ವ್ಯಾಪಾರವೇನೋ ಹೌದೆಂದೊಪ್ಪಿದರೂ—ಪಾಂಡವರೇ ಮೊದಲಾದ ನಾಯಕ ನಾಯಕಿಯರ ವಿಷಯವನ್ನೊಪ್ಪುವುದಿಲ್ಲ. ಈತನು ಹೇಳುವುದೇನೆಂದರೆ—ಅರ್ಜುನ ಮೊದಲಾದವರು ರೂಪಕ ಮಾತ್ರರು. ಹೇಗೆಂದರೆ—ಅರ್ಜುನ ಎಂದರೆ ಬಿಳುಪು ಎಂದು. ಯಾವುದು ಬೆಳಕಿನಿಂದ ಕೂಡಿದುದೋ ಅದು ಅರ್ಜುನ. ಯಾವನು ಅಂಧಕಾರಮಯನೋ ಅವನೇ ಕೃಷ್ಣ. ಪಾಂಡವರ ಗೈರುಹಾಜರಿನಲ್ಲಿ ರಾಷ್ಟ್ರವನ್ನು ವಹಿಸಿದ್ದವನೇ ಧೃತರಾಷ್ಟ್ರನು. ಪಾಂಡವರು ಪಾಂಚಾಲರ ಐದು ಪಂಗಡಗಳು. ಇವರೊಡನೆ ಪಾಂಚಾಲಿಯ ವಿವಾಹವು ಐದು ಪಂಗಡಗಳ ಐಕ್ಯ. ಯಾವಳು ಮಂಗಳವನ್ನು ತರುವಳೋ ಅವಳೇ ಸುಭದ್ರೆ; ಅರ್ಜುನನೊಡನೆ ಯಾದವರ ಸೌಹಾರ್ದವೇ ಸುಭದ್ರೆ...........ಇತ್ಯಾದಿ.

ಹರಿವಂಶದಲ್ಲಿ ದಕ್ಷಿಣ ದೇಶದಲ್ಲಿನ ಚೋಳ ಕೇರಳಾದಿಗಳ ಪಾಂಡ್ಯ ದೇಶದ ಹೆಸರೂ ಉಲ್ಲೇಖಿಸಲ್ಪಟ್ಟಿದೆ (ಹರಿವಂಶ, ೩೨ ಅ., ೧೨೪ ಶ್ಲೋಕ). ಆದುದರಿಂದ ಅದು ದಕ್ಷಿಣ ದೇಶದ (ಮಧುರೆ) ರಾಜ್ಯವು.

ಶ್ರೀಮಾನ್ ವಿಲ್ಸನ್ ಸಾಹೇಬರು ಮೊದಲು ಈ ಜಾತಿಯ ಜನರು ಸೋಗ್ರಿಯಾನಾ ದೇಶದಲ್ಲಿದ್ದರು. ಅನಂತರ ಭಾರತವರ್ಷಕ್ಕೆ ಬಂದು ಅಲ್ಲಲ್ಲಿ ವಾಸವಾಗಿರುತ್ತಿದ್ದರು. ಆಮೇಲೆ ಹಸ್ತಿನಾಪುರವಾಸಿಗಳಾದರು. ಕೊನೆಗೆ ದಾಕ್ಷಿಣಾತ್ಯಕ್ಕೆ ಹೋಗಿ ಪಾಂಡ್ಯರಾಜ್ಯವನ್ನು ಸ್ಥಾಪಿಸಿದರು ಎಂದು ವಿವೇಚಿಸಿರುತ್ತಾರೆ. *(Asiatic Researches, Vol. XV, pp. 95-96)*

ರಾಜತರಂಗಿಣಿಯ ಮತದಲ್ಲಿ ಕಾಶ್ಮೀರದ ಮೊದಲಿನ ರಾಜರು ಕುರುವಂಶೀಯರು. ಇವರು ಅಲ್ಲಿಂದ ಹಸ್ತಿನಾಪುರಕ್ಕೆ ಬಂದು ನಿಂತರು. ಇವರು ಮಧ್ಯದೇಶದಲ್ಲಿ ವಾಸವಾಗಿ ಪಾಂಡವರೆಂದು ಹೇಗೆ ಪರಿಚಿತರಾದರು ? ಈ ಸಮಸ್ಯಾ ಪೂರಣಾರ್ಥವಾಗಿಯೇ ಇವರ ಜನ್ಮವಿಷಯದಲ್ಲುಂಟಾಗಿರುವ ಗಲಾಟೆಯು ಪ್ರಸಿದ್ಧವಾಗಿಯೇ ಇದೆ. ಲೋಕವೂ ಕೂಡ ಈ ವಿಷಯದಲ್ಲಿ ಸಂಶಯಪಟ್ಟಿತ್ತೆಂಬುದಕ್ಕೆ ನಿದರ್ಶನವೂ ದೊರೆಯುವುದು.

ಯದಾ ಚಿರಮೃತಃ ಪಾಂಡುಃ ಕಥಂ ತಸ್ಯೇತಿ ಚಾಪರೇ ॥ (ಆದಿ ೧, ೧೧೭)

ಪಾಂಡುವು ಪ್ರಾಣತ್ಯಾಗಮಾಡಿ ಬಹುಕಾಲ ಕಳೆದುಹೋಗಿರುವುದರಿಂದ ಇವರು ಹೇಗೆ ಅವನ ಮಕ್ಕಳಾದರೆಂದು ಬೇರೆ ಕೆಲವರು ಕೇಳಿದರು.

(ಭಾರತವರ್ಷೀಯ ಉಪಾಸಕ ಸಂಪ್ರದಾಯ ಅಕ್ಷಯಕುಮಾರದತ್ತ ಪ್ರಣೀತ ದ್ವಿತೀಯ ಭಾಗ ಉಪಕ್ರಮಣಿಕಾ, ೧೦೫ ಪುಟ, ಅಕ್ಷಯ ಬಾಬುವು ವಿಶೇಷ ಯೂರೋಪೀಯರ ಮತಾವಲಂಬಿ.)

ಹಿಂದುಗಳ ಶಾಸ್ತ್ರಗ್ರಂಥಗಳಲ್ಲಿಲ್ಲ ಎಂದರೆ ವೇದದಲ್ಲಿಯೂ. ಇತಿಹಾಸದಲ್ಲಿಯೂ, ಪುರಾಣದಲ್ಲಿಯೂ, ಕಾವ್ಯದಲ್ಲಿಯೂ ರೂಪಕದ ಅತಿಶಯ ಪ್ರಾಬಲ್ಯವನ್ನೇನೋ ನಾನೂ ಒಪ್ಪುವೆನು. ಅನೇಕ ರೂಪಕಗಳುಂಟು: ಈ ಗ್ರಂಥದಲ್ಲಿಯೂ ಅನೇಕ ರೂಪಕಗಳ ಪ್ರಸಂಗವನ್ನೇನೋ ಎತ್ತಲೇಬೇಕಾಗುತ್ತದೆ. ಆದರೆ ಹಿಂದೂ ಶಾಸ್ತ್ರಗಳಿಲ್ಲಿರುವುದೆಲ್ಲಾ ಬರೀ ರೂಪಕಗಳೆಂದೇ ಹೇಳಿಬಿಡುವುದು ಹೇಗೆ? ಇದು ಅಸಂತಗವು. ಈ ರೂಪಕಗಳನ್ನು ಬಿಟ್ಟರೆ ಶಾಸ್ತ್ರಗ್ರಂಥಗಳಲ್ಲೇನೂ ಇಲ್ಲವೆಂದು ಹೇಳಬಹುದೆ?

ಸಂಸ್ಕೃತ ಸಾಹಿತ್ಯದಲ್ಲಿಯೂ ಶಾಸ್ತ್ರದಲ್ಲಿಯೂ ಇರುವುದೆಲ್ಲ—ರೂಪಕವಾಗಲಿ, ಆಗದಿರಲಿ—ರೂಪಕವೆಂದು ಹಾರಿಸಲು ಅನೇಕರು ಇಷ್ಟಪಡುವರೆಂಬುದನ್ನು ಬಲ್ಲೆವು. ರಾಮನ ಹೆಸರಿನಲ್ಲಿ "ರಮ್" ಧಾತುವು ಕಾಣುವುದು; ಸೀತೆಯು ಹೆಸರಿನಲ್ಲಿ "ಸಿ" ಧಾತುವಿದೆ; ಆದುದರಿಂದ ರಾಮಾಯಣವು ಬೇಸಾಯದ ರೂಪಕವೊಂದು ಎಂದು ಮುಕ್ತಾಯವಾಯಿತು. ಜರ್ಮನ್ ಪಂಡಿತರು ಹೀಗೆಯೇ ಮೂರು ನಾಲ್ಕು ಧಾತುಗಳ ಮರೆಬಿದ್ದು—ಋಗ್ವೇದದ ಸೂತ್ರಗಳಿಗೆಲ್ಲಾ ಸೂರ್ಯ ಅಥವಾ ಮೋಡದ ರೂಪಕಗಳೆಂದು ಉಡಾಯಿಸಿರುತ್ತಾರೆ. ನನಗೆ ಜ್ಞಾಪಕಕ್ಕೆ ಬರುತಲಿದೆ; ನಾನೂ—ಒಂದು ವೇಳೆ—ತಮಾಷಿಯ ಹಟವಿಡಿದು ಪ್ರಖ್ಯಾತವಾದ ನವದ್ವೀಪದ ಕೃಷ್ಣಚಂದ್ರನ ಮೇಲೆ ಹೀಗೆಯೇ ರೂಪಕವನ್ನು ಮಾಡಿಬಿಟ್ಟಿದ್ದೆನು. ಅವನು ಆಗಿನ ಕಾಲದವನು—ಅವನ ರಾಜಧಾನಿಯೂ, ರಾಜಪುರಿಯೂ, ರಾಜವಂಶವೂ ಈಗಲೂ ಇವೆ. ಅವನು ಕೂಡ ಇತಿಹಾಸದಲ್ಲಿ ಕೀರ್ತಿಸಲ್ಪಟ್ಟಿದ್ದಾನೆ ಎಂದು ಹೇಳುವಿರೇನೋ? ಅದಕ್ಕೆ ಉತ್ತರವಾಗಿ ಹೀಗೆ ಹೇಳಬಹುದು: ಅವ ಕೃಷ್ಣನು ಅಂದರೆ ಕತ್ತಲು, ತಮೋರೂಪಿ; ಕೃಷ್ಣನಗರದಲ್ಲಿ ಅಂದರೆ ಅಂಧಕಾರಪೂರ್ಣವಾದ ಸ್ಥಾನದಲ್ಲಿ ಅವನ ರಾಜಧಾನಿಯು (ಕೃಷ್ಣನಗರವು, ಪಶ್ಚಿಮ ಬಂಗಾಳದ ಒಂದು ಜಿಲ್ಲೆ ಮತ್ತು ಆ ಜಿಲ್ಲೆಯ ಮುಖ್ಯಪಟ್ಟಣ). ಅವನ ಆರು ಮಕ್ಕಳು ಅಂದರೆ ತಮೋಗುಣದಿಂದ ಹುಟ್ಟುವ ಆರು ಶತ್ರುಗಳು. ಪಲಾಸಿ ಯುದ್ಧದ ವಿಷಯದಲ್ಲಿ ಒಬ್ಬ ಹುಡುಗನು ಹೀಗೆ ರೂಪಕವೊಂದನ್ನು ಮಾಡಿದ್ದನು. ಪಲ (ಹೊದಿಕೆ, ಚೀಲ) ಮಾತ್ರವೇ ಕಂಡ ಅಸಿ (ಕತ್ತಿ); ಅಲ್ಲಿ ಕ್ಲೀಬ (ನಪುಂಸಕ)

ಗುಣದಿಂದ ಕೂಡಿದವನೇ ಕ್ಲೈಬ (Clive). ಅವನಿಂದ ಸುರಾಜಾ ಅಂದರೆ ಉತ್ತಮ ರಾಜನು ಸೋಲಿಸಲ್ಪಟ್ಟನು. ಹೀಗೆ ರೂಪಕಕ್ಕೆ ಕೊನೆಯೇ ಇಲ್ಲ—ಈ ಹುಡುಗನಿಂದಾದ ರೂಪಕಕ್ಕೂ ಲಾಸನ್ ಸಾಹೇಬರ ರೂಪಕಕ್ಕೂ ವಿಶೇಷ ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಬೇಕಾದರೆ " ಲಸ್ " ಧಾತುವನ್ನು ಅಗಿದು ಲಾಸನ್ ಸಾಹೇಬರ ಹೆಸರಿಗೆ ವ್ಯುತ್ಪತ್ತಿಯನ್ನು ಮಾಡಿ; ಅವರ ಐತಿಹಾಸಿಕ ಗವೇಷಣೆ ಬರಿಯ ಆಟ, ತಮಾಷೆಯೆಂದು ಹಾರಿಸಬಹುದು.

ಭಾರತವರ್ಷದ ಇತಿಹಾಸವನ್ನು ಬರೆದ ಟಾಲ್ಬಾಯ್ಸ್ ವೀಲರ್ ಸಾಹೇಬರದೂ ಒಂದು ಮತವುಂಟು. ಆನೆ ಕದುರೆಗಳೇ ಮುಳುಗಿ ಹೋಗುತ್ತಿರುವಲ್ಲಿ ಮೇಕೆಯು ನೀರಿನ ಆಳವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನಿಸಲು ಶ್ರದ್ಧೆಯಿಂದ ನೋಡುವರಾರು? ಇವರು ಹೇಳಿರುವುದೇನೆಂದರೆ—ಸರಿಯೆ, ಇದರಲ್ಲಿ ಐತಿಹಾಸಿಕದ ಕಟ್ಟೇನೋ ಉಂಟು. ಆದರೆ ಅದು ಬಹು ಸಾಮಾನ್ಯ.

" The adventures of the Pandavas in the jungle and their encounters with Asuras and Rakshasas are all palpable fictions. Still they are valuable as traces which have been left in the minds of the people of the primitive wars of the Aryans against the aborigines."

ಈ ಸಾಹೇಬರಿಗೆ ಸಂಸ್ಕೃತವು ತಿಳಿಯದು. ಮಹಾಭಾರತವನ್ನು ಎಂದೂ ಓದಿದವರಲ್ಲ. ಅವಿನಾಶಚಂದ್ರ ಘೋಷನೆಂಬವನು ಇವರ ಅವಲಂಬನ. ಮೂಲ ಮಹಾಭಾರತವನ್ನು ತರ್ಜುಮೆ ಮಾಡಿಕೊಡಬೇಕೆಂದಿವರು ಅವಿನಾಶ ಬಾಬುವನ್ನು ಕೇಳಿಕೊಂಡರು. ಇವನು ರಹಸ್ಯಪ್ರಿಯನಾಗಿರಬೇಕು. ಕಾಶೀದಾಸನ ಮಹಾಭಾರತದಿಂದ ಎಷ್ಟರಮಟ್ಟಿಗೆ ತರ್ಜುಮೆ ಮಾಡಿದ್ದನೆಂದು ಹೇಳಲಾಗದು. ಆದರೆ ವೀಲರ್ ಸಾಹೇಬರು ಚಂದ್ರಹಾಸ ಮತ್ತು ವಿಷಯೋಪಾಖ್ಯಾನ ಮುಂತಾದುವುಗಳನ್ನೆಲ್ಲ ಮೂಲ ಮಹಾಭಾರತದ ಅಂಶಗಳೆಂದು ಪ್ರಚಾರಮಾಡಿರುವರು. ಮಾಣಿಕ ಪೀರನ ಗಾನವನ್ನು ಕೇಳಿ ರಾಮಾಯಣದ ಭ್ರಾಂತಿಯಿಂದ ಕಂಬನಿಗರೆದ ಅಡುಗೂಲಜ್ಜಿಯು ಈ ಪಂಡಿತರಿಗಿಂತ ಹೆಚ್ಚು ಹಾಸ್ಯಾಸ್ಪದಳಲ್ಲವೆಂದು ತೋರುವುದು. ಈ ಬಗೆಯ ಲೇಖಕರ ಮಾತುಗಳನ್ನು ಪ್ರತಿಪಾದಿಸುವುದ

ರಿಂದ ಪಾಠಕರ ಸಮಯವನ್ನು ವ್ಯರ್ಥವಾಗಿ ಕಳೆದಂತಾಗುವುದೆಂದು ಭಾವಿಸು ವೆವು. ಅಂತು ಮಹಾಭಾರತದಲ್ಲಿನ ಮೌಲಿಕವಾದ ಅಂಶವಾವುದೋ ಅದರಲ್ಲಿ ಬರೆದಿರುವ ವೃತ್ತಾಂತ ಮತ್ತು ಪಾಂಡವಾದಿ ನಾಯಕರು ಇವೆಲ್ಲವೂ ಕಲ್ಪನೆಯಿಂದುಂಟಾದವುಗಳೆಂದು ವಿವೇಚಿಸಲು ಯಾವ ಉಪಯುಕ್ತವಾದ ಕಾರಣವೂ ಇದುವರೆಗೂ ನಿರ್ದಿಷ್ಟವಾಗಲಿಲ್ಲ. ದೊರೆತ ಕಾರಣಗಳೆಲ್ಲವೂ ಮೇಲಿನವುಗಳಂತೆ ಕಿಂಚಿತ್ಕರಗಳು. ಎಲ್ಲವನ್ನೂ ಪ್ರತಿವಾದಮಾಡಲು ಈ ಗ್ರಂಥದಲ್ಲವಕಾಶವಿಲ್ಲ. ಮಹಾಭಾರತದ ಅನೇಕ ಭಾಗವು ಪ್ರಕ್ಷಿಪ್ತವೆಂದು ಮೊದಲೇ ನಾನು ಒಪ್ಪಿರುವೆನು. ಆದರೆ ಪಾಂಡವಾದಿಗಳ ಸಕಲ ವೃತ್ತಾಂತ ಗಳೂ ಪ್ರಕ್ಷಿಪ್ತವಲ್ಲ. ಇವು ಪ್ರಕ್ಷಿಪ್ತವೆಂದು ಹೇಳಲು ಯಾವ ಕಾರಣಗಳೂ ಇಲ್ಲ. ಇವರು ಐತಿಹಾಸಿಕ ಪುರುಷರು. ಹೀಗೆಂದು ವಿವೇಚಿಸಲು ಮೇಲೆ ಹೇಳಿರುವ ಕಾರಣಗಳು ಸಾಲದೆ ಹೋದರೆ ಮುಂದಿನ ಪರಿಚ್ಛೇದದಲ್ಲಿ ಇನ್ನೂ ಹೇಳುವೆನು.

ಸಪ್ತಮ ಪರಿಚ್ಛೇದ

ಪಾಂಡವರ ಐತಿಹಾಸಿಕತೆ

ಪಾಣಿನಿಯು ಸೂತ್ರ ಮಾಡಿರುವನು.

"ಮಹಾನ್ ವ್ರೀಹ್ಯಪರಾಹ್ಣ ಗೃಷ್ಟೀಷ್ವಾಸಜಾಬಾಲ ಭಾರಭಾರತ ಹೈಲಿಹಿಲ ರೌರವ ಪ್ರವೃದ್ಧೇಷು" ॥೬ । ೨ । ೩೮ ॥

ಎಂದರೆ ವ್ರೀಹಿ ಮುಂತಾದ ಪದಗಳ ಪೂರ್ವದಲ್ಲಿ ಮಹತ್ ಶಬ್ದವನ್ನು ಪ್ರಯೋಗಿಸುವರು. ಅವುಗಳಲ್ಲಿ "ಭಾರತ" ಶಬ್ದವೊಂದು. ಆದುದರಿಂದ ಪಾಣಿನಿಯಲ್ಲಿ ಮಹಾಭಾರತ ಶಬ್ದವು ಸಿಕ್ಕಿತಷ್ಟೆ. ಪ್ರಸಿದ್ಧವಾದ ಇತಿಹಾಸ ವಿನಾ ಮತ್ತೆ ಬೇರೆ ಯಾವುದಕ್ಕೂ ಮಹಾಭಾರತವೆಂದು ಹೆಸರಾಗಿತ್ತೆಂಬು ದಕ್ಕೆ ಪ್ರಮಾಣಗಳೇನೂ ಇಲ್ಲ.

ವೇಬರ್ ಸಾಹೇಬರು ಮಹಾಭಾರತವೆಂದರೆ ಭರತವಂಶವೆಂದು ಬರೆ ದಿರುವದು ಇವರ ಬಾಯಿ ಜೋರೇ ವಿನಾ ಪ್ರಯೋಗವೆಲ್ಲೂ ಇಲ್ಲ. ಮತ್ತೆ ಪಾಣಿನಿಯ ಸೂತ್ರ—

"ಗವಿಯುಧಿಭ್ಯಾಂ ಸ್ಥಿರಃ" ॥ ೮ । ೩ । ೯೫ ॥

ಗವಿ, ಯುಧಿ ಶಬ್ದಗಳ ಮುಂದಿನ ಸ್ಥಿರ ಶಬ್ದದ ಸಕಾರವು ಷಕಾರವಾಗುವುದು. ಉದಾಹರಣೆ—ಗವಿಷ್ಠಿರಃ, ಯುಧಿಷ್ಠಿರಃ.

ಪುನಃ—"ಬ್ರಹ್ವಚ ಇಞ ಪ್ರಾಚ್ಯ ಭರತೇಷು" ॥ ೨ । ೪ । ೬೬ ॥ ಭರತಗೋತ್ರದ ಉದಾಹರಣೆ—ಯುಧಿಷ್ಠಿರಾಃ.*

ಪುನಃ—"ಸ್ತ್ರಿಯಾಮವಂತಿಕುಂತಿಕುರುಭ್ಯಶ್ಚ" ॥ ೪ । ೧ । ೧೭೬ ॥ ಇಲ್ಲಿ ಕುಂತಿ ಸಿಕ್ಕಿತಷ್ಟೆ.

ಮತ್ತು—"ವಾಸುದೇವಾರ್ಜುನಾಭ್ಯಾಂ ವುನ್" ॥ ೪ । ೩ । ೯೮ ॥ ವಾಸುದೇವ ಮತ್ತು ಅರ್ಜುನ ಪದಗಳ ಪರದಲ್ಲಿ ಷಷ್ಠ್ಯರ್ಥದಲ್ಲಿ ವುನ್ ಆಗುವುದು.

ಮತ್ತು—"ನಭ್ರಾಣ್ ನಪಾನ್ನವೇದಾನಾಸತ್ಯಾನಮುಚಿನಕುಲನಖ ನಪುಂಸಕ ನಕ್ಷತ್ರನಕ್ರನಾಕೇಷು" ॥ ೬ । ೩ । ೭೫ ॥

ಇಲ್ಲಿ ನಕುಲ ಸಿಕ್ಕಿತಷ್ಟೆ.

"ದ್ರೋಣಪರ್ವತಜೀವನ್ತಾದನ್ಯತರಸ್ಯಾಮ್" ॥ ೪ । ೧ । ೧೦೩ ॥

ದ್ರೋಣಾಯನ ಶಬ್ದವು ಸಿಕ್ಕಿತಲ್ಲವೆ. ಇದರಿಂದ ಅಶ್ವತ್ಥಾಮನ ಹೊರತು ಇನ್ನೇನೂ ಅರ್ಥವಾಗುವುದಿಲ್ಲ. ಹೀಗೆ ಪಂಚಪಾಂಡವರ ಹೆಸರುಗಳೂ, ಕುಂತಿ, ದ್ರೋಣ, ಅಶ್ವತ್ಥಾಮ ಮುಂತಾದವರ ಹೆಸರುಗಳೂ ಪಾಣಿನಿಯ ಸೂತ್ರದಲ್ಲಿ ದೊರಕಿದುವು. ಆದುದರಿಂದ ಪಾಣಿನಿಯ ಕಾಲದಲ್ಲಿಯೂ ಮಹಾಭಾರತ ಪಾಂಡವಳ ಇತಿಹಾಸ.

ಈಗ ಪಾಣಿನಿ ಯಾವಾಗಿನವನೆಂಬುದನ್ನು ನೋಡಬೇಕಾಗಿದೆ. ಭಾರತದ್ವೇಷಿ ವೇಬರನು ಪಾಣಿನಿ ಕೂಡ ಈಚಿನವನೆಂದು ಸ್ಥಾಪಿಸಲು ಕೈಹಾಕಿರುವನು. ಆದರೆ ಈ ವಿಷಯದಲ್ಲಿ ಅವನ ಮತ ಸಾಗದು. ಗೋಲ್ಡ್‌ಸ್ಟಕ್ಕರು ಸ್ವಂತವಾಗಿ ಪಾಣಿನಿಯ ಅಭ್ಯುದಯ ಕಾಲವನ್ನು ನಿರ್ಣಯ ಮಾಡಿರುವರು. ಅದನ್ನು ವಿಸ್ತರಿಸಲು ಇಲ್ಲಿ ಸ್ಥಳ ಸಾಲದು. ಬಾಬು ರಜನೀಕಾಂತ ಗುಪ್ತರು ಅವರ ಮತವನ್ನು ಕೂಡಿಸಿ ಸಾರಾಂಶವನ್ನು ದೇಶಭಾಷೆಯಲ್ಲಿ ಬರೆದಿರುವರು. ದೇಶಭಾಷೆಯನ್ನು ಕಡೆಗಣ್ಣಿಂದ ಕೂಡ

*ಸಿದ್ಧಾಂತ ಕೌಮುದೀಕಾರನ ಉದಾಹರಣೆ.

ನೋಡದವರು ಗೋಲ್ಡ್‌ಸ್ಟಕ್ಕರಿನ ಇಂಗ್ಲೀಷು ಗ್ರಂಥವನ್ನೇ ನೋಡಲಿ; ಇವರ ವಿಚಾರದಲ್ಲಿ ಪಾಣಿನಿಯು ಬಹು ಪ್ರಾಚೀನನೆಂದು ಪ್ರತಿಪನ್ನವಾಗಿರುವುದು. ಇದರಿಂದ ವೇಬರ್ ಸಾಹೇಬರು ಬಹು ನೊಂದುಕೊಂಡು ಅವರ ಎದುರುಬಿದ್ದು ಹರಟೆ ನಾಚಿಕೆಯಿಲ್ಲದೆ ತಾನೇ ಜಯಪತಾಕೆಯನ್ನು ಉಡಾಯಿಸಿದೇವೆಂದು ಹೇಳಿರುವರು. ಆದರೆ ಇತರರಾರೂ ಹೀಗೆ ಹೇಳುವುದಕ್ಕಾಗುವುದಿಲ್ಲ.

ಪಾಣಿಯ ಸೂತ್ರಗಳಾದಾಗ ಬುದ್ಧದೇವನ* ಆವಿರ್ಭಾವ ಉಂಟಾಗಿರಲಿಲ್ಲವೆಂದು ಗೋಲ್ಡ್‌ಸ್ಟಕ್ಕರು ಪ್ರಮಾಣಮಾಡಿರುವರು. ಆದುದರಿಂದ ಕಡೆಗೆ ಕ್ರಿ. ಪೂ. ಆರನೆಯ ಶತಮಾನದವನು ಪಾಣಿನಿಯು. ಇಷ್ಟೇ ಅಲ್ಲ; ಆಗ್ಗೆ ಬ್ರಾಹ್ಮಣ, ಆರಣ್ಯಕ, ಉಪನಿಷತ್ತು ಮುಂತಾದ ವೇದಾಂಗಗಳಿರಲಿಲ್ಲ. ಋಗ್ಯಜುಸ್ಸಾಮ ವಿನಾ ಮತ್ತಾವುದೂ ಇರಲಿಲ್ಲ. ಆಶ್ವಲಾಯನ ಸಾಂಖ್ಯಾಯನ ಮುಂತಾದುವೂ ಈಚಿನವು. ಬ್ರಾಹ್ಮಣಗಳು ಕ್ರಿಸ್ತಪೂರ್ವ ಒಂದು ಸಾವಿರ ವರ್ಷಗಳಿಗಿಂತಲೂ ಮುಂಚೆ ಆರಂಭವಾದುವುಗಳು ಎಂದು "ಮೋಕ್ಷ ಮುಲ್ಲರು" (Max Muller) ಹೇಳಿರುವರು. ಕ್ರಿ ಪೂ. ೧೪ನೆಯ ಶತಮಾನದ ಕೊನೆಯಿಂದ ಇವು ಆರಂಭವಾದುವುಗಳೆಂದು ಡಾ|| ಮಾರ್ಟಿನ್ ಹೋಗ್‌ರವರು ಹೇಳುವರು. ಆದುದರಿಂದ ಪಾಣಿನಿಯ ಸಮಯವು ಕ್ರಿ. ಪೂ. ೧೦ ಅಥವಾ ೧೧ನೆಯ ಶತಮಾನವೆಂದು ಹೇಳಬಹುದು.

ಮೋಕ್ಷಮುಲ್ಲರು, ವೇಬರ್ ಮೊದಲಾದನೇಕರು ಈ ವಿಚಾರದಲ್ಲಿ ಪ್ರವೃತ್ತರಾಗಿರುವರು. ಆದರೆ ಯಾರ ಮಾತಿನಿಂದಲೂ—ಗೋಲ್ಡ್‌ಸ್ಟಕ್ಕರಿನ ಮತವು ಖಂಡಿಸಲ್ಪಡಲಿಲ್ಲ. ಆದುದರಿಂದ ಅವರ ಮತವು ಒಪ್ಪತಕ್ಕುದು. ಕ್ರಿ. ಪೂ. ಸಾವಿರಾರು ವರ್ಷಗಳ ಮುಂಚೆ ಯುಧಿಷ್ಠಿರಾದಿಗಳ ಸಂಯುಕ್ತ ಮಹಾಭಾರತ ಗ್ರಂಥವಿತ್ತೆಂಬುದೇನೋ ಸ್ಥಿರ. ಯುಧಿಷ್ಠಿರ, ವಾಸುದೇವ, ಅರ್ಜುನ ಮುಂತಾದ ಹೆಸರುಗಳನ್ನು ಪಾಣಿನಿಯು ರೂಪನಿಷ್ಪತ್ತಿ ಮಾಡಿದ್ದಾನೆ. ವಾಸುದೇವೋಪಾಸಕನು, ಅರ್ಜುನೋಪಾಸಕನು ಎಂಬುದಾಗಿರು

*ಮಹಾಭಾರತದಲ್ಲಿ ಬೌದ್ಧ ಶಬ್ದವೇನೋ ಸಿಕ್ಕುವುದು. ಆದರೆ ಇದು ಪ್ರಕ್ಷಿಪ್ತವೆಂದು ಅನಾಯಾಸವಾಗಿಯೇ ಸಿದ್ಧಾಂತ ಮಾಡಬಹುದು.

ವುದರಿಂದ ಪಾಣಿನಿಯ ಕಾಲದಲ್ಲಿ ವಾಸುದೇವಾರ್ಜುನರು ದೇವತೆಗಳೆಂದು ಭಾವಿಸಲ್ಪಟ್ಟಿದ್ದರು. ಆದುದರಿಂದ ಯುದ್ಧವಾದ ಕೆಲವು ದಿನಗಳ ಮೇಲೆ ಮಹಾಭಾರತ ಬರೆಯಲ್ಪಟ್ಟಿತೆಂಬ ಪ್ರಸಿದ್ಧಿಯುಂಟಷ್ಟೆ. ಅದನ್ನು ಉಚ್ಛೇದಿಸಲು ಕಾರಣಗಳಾವುವೂ ಇಲ್ಲ.

ಪಾಣಿನಿಯ ಸೂತ್ರದಲ್ಲೂ ಆಶ್ವಲಾಯನ ಮತ್ತು ಸಾಂಖ್ಯಾಯನ ಗೃಹ್ಯಸೂತ್ರಗಳಲ್ಲಿಯೂ ಮಹಾಭಾರತದ ಪ್ರಸಂಗವಿದೆಯಾದುದರಿಂದ ಮಹಾಭಾರತದ ಪ್ರಾಚೀನತೆಯ ವಿಷಯದಲ್ಲಿ ದೊಡ್ಡ ಗಲಭೆಯನ್ನೆಬ್ಬಿಸಲು ಯಾರಿಗೂ ಅಧಿಕಾರಲಿಲ್ಲ.

ಅಷ್ಟಮ ಪರಿಚ್ಛೇದ

ಕೃಷ್ಣನ ಐತಿಹಾಸಿಕತೆ

ಕೃಷ್ಣನ ಹೆಸರು ಪಾಣಿನಿಯ ಸೂತ್ರಗಳಲ್ಲಿರಲಿ, ಇಲ್ಲದಿರಲಿ ಇದರಿಂದ ಪ್ರಯೋಜನವೇನೂ ಇಲ್ಲ. ಏಕೆಂದರೆ, ಋಗ್ವೇದ ಸಂಹಿತೆಯಲ್ಲಿಯೇ ಕೃಷ್ಣ ಶಬ್ದ* ಎಷ್ಟೋ ಸಲ ಸಿಕ್ಕುವುದು. ಇದು ಖಂಡಿತ. ಇದರಿಂದ ಪಾಠಕರೇ ತಿಳಿಯಬಹುದು. ಪಾಣಿನಿಯ ಸೂತ್ರದಲ್ಲಿ ಕೃಷ್ಣನ ಹೆಸರು ಸಿಕ್ಕಿದರೂ ವಾಸುದೇವ ಕೃಷ್ಣನ ಐತಿಹಾಸಿಕತೆಯ ಪ್ರಮಾಣವೆಂದು ಗಣಿಸಲಾಗುವುದಿಲ್ಲ. ಆದರೆ ವಾಸುದೇವನ ಹೆಸರು ಇದಕ್ಕೆ ಇರಬೇಕು. ಹಾಗೆಯೇ ಇದೆ. ೧ನೆಯ ಮಂಡಲದಲ್ಲಿ ೧೧೬ನೆಯ ಸೂಕ್ತದ ೨೩ನೆಯ ಋಕ್ಕಿನಲ್ಲಿಯೂ ೧೧೭ನೆಯ ಸೂಕ್ತದ ೭ನೆಯ ಋಕ್ಕಿನಲ್ಲಿಯೂ ಕೃಷ್ಣನ ಹೆಸರಿದೆ. ಇವನು ಯಾವ ಕೃಷ್ಣನೋ ತಿಳಿದು ಹೇಳುವುದಕ್ಕಾಗುವುದಿಲ್ಲ. ಇವನು ವಸುದೇವ ನಂದನನು ಎಂಬುವ ಸಂಭವವಿಲ್ಲ. ಇದಲ್ಲದೆ ಋಗ್ವೇದದ ಅನೇಕ

---

*ಕೃಷ್ಣ ಶಬ್ದವನ್ನು ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಹುಡುಕಿದೆನು. ನನಗೆ ಸಿಕ್ಕಲಿಲ್ಲ. ಇದೆಯೋ ಇಲ್ಲವೋ ಗೊತ್ತಾಗಲಿಲ್ಲ. ಕೃಷ್ಣಶಬ್ದ ಪಾಣಿನಿಗಿಂತ ಮುಂಚೆಯೇ ಇದ್ದಿತೆಂಬುದಕ್ಕೆ ಯಾವ ಸಂಶಯವೂ ಇಲ್ಲ. ಋಗ್ವೇದ ಸಂಹಿತೆಯಲ್ಲಿ ಕೃಷ್ಣಶಬ್ದ ಬಾರಿಬಾರಿಗೂ ಸಿಗುತ್ತದೆ. ಕೃಷ್ಣ ಹೆಸರಿನ ವೈದಿಕ ಋಷಿಯ ಮಾತನ್ನು ಮುಂದೆ ಹೇಳುವೆನು. ಇದಲ್ಲದೆ ಎಂಟನೆಯ ಮಂಡಲದ ೯೬ನೆಯ ಸೂಕ್ತದಲ್ಲಿ ಕೃಷ್ಣನೆಂಬೊಬ್ಬ ಅನಾರ್ಯ ರಾಜನ ಹೆಸರು ಸಿಕ್ಕುವುದು. ಈ ಅನಾರ್ಯ ಕೃಷ್ಣನು ಅಂಶುಮತೀ ನದೀತೀರದಲ್ಲಿದ್ದವನು. ಇವನು ವಾಸುವೇವ ಕೃಷ್ಣನಲ್ಲ.

ಸೂಕ್ತಗಳ ಋಷಿಗಳ ಹೆಸರು ಕೃಷ್ಣ ಎಂದಿದೆ. ಅಥರ್ವಣ ಸಂಹಿತೆಯಲ್ಲಿ ಅಸುರ ಕೃಷ್ಣಕೇಶಿಯನ್ನು ಕೊಂದ ಕೃಷ್ಣನ ಮಾತಿದೆ. ಕೊಂದವನು ವಸುದೇವನಂದನನು. ಇದು ಸ್ಪಷ್ಟ. ಈ ಕಥೆಯು ಮುಂದೆ ಬರುವುದು.

ಪಾಣಿನಿಯ ಸೂತ್ರದಲ್ಲಿ ವಾಸುದೇವನ ಹೆಸರಿದೆ. ಇದನ್ನು ಹಿಂದೆಯೇ ತಿಳಿಸಿದೆ. ಕೃಷ್ಣನು ವಾಸುದೇವನೆಂದು ಮಹಾಭಾರತದಲ್ಲಿ ಎಲ್ಲಾ ಕಾಲದಲ್ಲಿಯೂ ಕರೆಯಲ್ಪಟ್ಟಿದ್ದಾನೆ. ವಸುದೇವನ ಮಗನು ವಾಸುದೇವನೆಂದಲ್ಲ. ಇದನ್ನು ಮತ್ತೊಂದು ಕಡೆ ತಿಳಿಸುವೆನು. ವಸುದೇವ ಪುತ್ರನಲ್ಲವಾದರೂ ವಾಸುದೇವನೆಂದೇನೋ ಇದೆ. ಪುಂಡ್ರಾಧಿಪತಿಯ ಹೆಸರು ವಾಸುದೇವನೆಂದು ಮಹಾಭಾರತದಲ್ಲಿಯೇ ಇದೆ. ವಸುದೇವನು ಕವಿಕಲ್ಪಿತನೆಂದು ಹೇಳಿದರೂ ಹೇಳಿ; ಆದರೆ ವಾಸುದೇವನು ಕವಿಕಲ್ಪಿತನಲ್ಲ.

ಮೂಲ ಮಹಾಭಾರತದಲ್ಲಿ ಕೃಷ್ಣನ ಹೆಸರಿರಲಿಲ್ಲ. ಈಚಿಗೆ ಆ ಹೆಸರು ಸೇರಿಸಲ್ಪಟ್ಟಿದೆಯೆಂಬುದು ಯೂರೋಪೀಯರ ಮತ. ಹೀಗೆ ಹೇಳುವುದಕ್ಕೆ ಅವರು ಹೊಂದಿಸಿರುವ ಕಾರಣಗಳೆಲ್ಲವೂ ಬಹು ಹಗುರವಾದುವುಗಳು. ಕೃಷ್ಣನನ್ನು ಮಹಾಭಾರತದಿಂದ ಹೊರಗೆಡವಿದ ಮಾತ್ರಕ್ಕೇ ಮಹಾಭಾರತಕ್ಕೆ ತೊಂದರೆಯೇನೂ ಇಲ್ಲವೆಂದು ಕೆಲವರು ಹೇಳುವರು. ಇದು ಸರಿಯೇ. ಕಳೆದ ಫಾರಾಸಿ ಪ್ರಷ್ಯದ ಯುದ್ಧದಿಂದ ಮೋಲ್ಟಕಿಯನ್ನು ತೆಗೆದುಹಾಕಲು ಬಾಧಕವೇನೂ ಇಲ್ಲ. Gravelotle, Woerth, Metz, Sedan, Paris ಮುಂತಾದ ರಣಜಯಗಳೆಲ್ಲವೂ ಉಳಿಯುತ್ತವೆ. ಏಕೆಂದರೆ ಮೋಲ್ಟಕಿಯು ಕೈಯಲ್ಲಿ ಆಯುಧವನ್ನು ಹಿಡಿದು ಮೇಲಿನ ಜಯಗಳನ್ನು ಪಡೆಯಲಿಲ್ಲ. ಅವನ ಸೇನಾಪತಿತ್ವ ತಂತಿಗಳವೇಲೂ ಪತ್ರ ಪತ್ರಗಳಲ್ಲಿಯೂ ಸಾಗಿತು. ಮಹಾಭಾರತದಲ್ಲಿಯೂ ಕೃಷ್ಣನ ಹೆಸರನ್ನು ತೆಗೆದು ಹಾಕಿದರೆ ಈ ರೀತಿಯ ತೊಂದರೆಯೇನೂ ಇಲ್ಲ. ಆದರೆ ವಿಶೇಷ ತೊಂದರೆಯುಂಟೇ ಇಲ್ಲವೇ ಎಂಬುದನ್ನು ಈ ಗ್ರಂಥವನ್ನೋದುವ ಪಾಠಕರು ತಿಳಿಯುವರು.

ಈ ವಿಷಯದಲ್ಲಿ ವೀಲರ್ ಸಾಹೇಬರದೂ ಒಂದು ಮತವುಂಟು. ಇವರ ಪರಿಚಯವನ್ನು ಹಿಂದೆಯೇ ತಿಳಿಸಿರುವೆನು. ಇವರ ಮತವನ್ನು

ಖಂಡಿಸಿದ್ದರಿಂದ ವಿಶೇಷ ಪ್ರಯೋಜನವಿಲ್ಲ. ಆದರೂ ಮತವು ಎಷ್ಟರ ಮಟ್ಟಿಗೆ ಏರಿದೆಯೆಂಬುದನ್ನು ತೋರಿಸುವೆನು :—

"ದ್ವಾರಕೆಯು ಹಸ್ತಿನಾವತಿಯಿಂದ ೭೦೦ ಕ್ರೋಶಗಳ ದೂರದಲ್ಲಿರುವುದು. ಆದುದರಿಂದ ಮಹಾಭಾರತದಲ್ಲಿ ಹೇಳಿರುವ ಕೃಷ್ಣ ಪಾಂಡವರ ಕೂಡುವಿಕೆಯು ಸುಳ್ಳು" ಎಂಬುದೇ ಇವರ ಮತ. ಇದು ಹೇಗೆ ಸುಳ್ಳೋ ಅದನ್ನು ತಿಳಿಯಲು ನನಗೆ ಸಾಧ್ಯವಿಲ್ಲ. ಬಂಗಾಳಾ ಮುಸಲ್ಮಾನ್ ರಾಜರಿಗೂ, ಡಿಲ್ಲಿಯ ಪಠಾಣ ಮೊಗಲರಿಗೂ ಸಂಬಂಧವು ಯಾರ ಸ್ಮರಣೆಗೆ ಬರುತ್ತದೋ ಅವರು ವೀಲರ್ ಸಾಹೇಬರ ಕೇಳಬಾರದ ಈ ಮಾತನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ.

ವಿಖ್ಯಾತ ಪಾರಾಸಿ ಪಂಡಿತ ಬೌರನಾಫ್ (Bournouf) ರವರು ಕೃಷ್ಣನ ಹೆಸರು ಬೌದ್ಧಶಾಸ್ತ್ರಗಳಲ್ಲಿ ಸಿಕ್ಕದಿದ್ದರೆ ಈ ಗ್ರಂಥಗಳ ಪ್ರಚಾರಕ್ಕೆ ಉತ್ತರದಲ್ಲಿ ಕೃಷ್ಣೋಪಾಸನವುಂಟಾಯಿತೆಂದು ಹೇಳಬೇಕಾಗುವುದು ಎಂದಿರುವರು. ಆದರೆ ಬೌದ್ಧಶಾಸ್ತ್ರಗಳಲ್ಲಿ (ಲಲಿತವಿಸ್ತರದಲ್ಲಿ ಕೃಷ್ಣನ ಹೆಸರಿದೆ) ಸೂತ್ರಪಿಟಕವು ಮುಂಚಿನದು. ಅದರಲ್ಲಿಯೂ ಕೃಷ್ಣನ ಹೆಸರಿದೆ. ಈ ಗ್ರಂಥದಲ್ಲಿ ಕೃಷ್ಣನನ್ನು ಅಸುರನೆಂದು ಕರೆದಿದ್ದಾರೆ. ನಾಸ್ತಿಕರೂ ಹಿಂದೂ ಧರ್ಮ ವಿರೋಧಿಗಳೂ ಆದ ಬೌದ್ಧರು ಕೃಷ್ಣನನ್ನು ಅಸುರನೆಂದು ವಿವೇಚಿಸುವುದು ಅಚ್ಚರಿಯೇ ? ಅಲ್ಲದೆ ವೇದದಲ್ಲಿಯೂ, ಅಲ್ಲಲ್ಲಿ ಇಂದ್ರಾದಿ ದೇವತೆಗಳನ್ನು ಅಸುರರೆಂದು ಹೇಳಿರುವರು. ಕೃಷ್ಣನಿಂದ ಬೋಧಿಸಲ್ಪಟ್ಟ ನಿಷ್ಕಾಮ ಧರ್ಮವೂ, ಅವನಿಂದುಂಟಾದ ಸನಾತನ ಧರ್ಮದ ಅಪೂರ್ವ ಸಂಸ್ಕಾರವೂ ಕೃಷ್ಣೋಪಾಸನವೂ ಬೌದ್ಧ ಧರ್ಮ ಪ್ರಚಾರಕ್ಕೆ ಬಹಳ ವಿಘ್ನಕರಗಳಾಗಿದ್ದುದರಿಂದ ಅವರು ಕೃಷ್ಣನನ್ನು ಅನೇಕಾವರ್ತಿ ಮಾರನೆಂದು ಪ್ರತಿಪನ್ನ ಮಾಡಲು ಕೈಹಾಕಿದ್ದಾರೆ.

ಇದು ಹಾಗಿರಲಿ. ಛಾಂದೋಗ್ಯೋಪನಿಷತ್ತಿನಲ್ಲಿ ಈ ಕೆಳಗೆ ಬರೆದಿರುವ ಮಾತಿದೆ :—

ಅಥೈತದ್ಘೋರ ಆಂಗಿರಸಃ ಕೃಷ್ಣಾಯ ದೇವಕೀಪುತ್ರಾಯ ಉಕ್ತ್ವಾ ಉವಾಚ, ಅಪಿಪಾಸಯೇವ ಸಬಭೂವ—ಸೋಽಂತವೇಲಾಯಾಮೇತತ್ತ್ರಯಂ ಪ್ರತಿಪದ್ಯೇತ ಅಕ್ಷಿತಮಸಿ ಅಚ್ಯುತಮಸಿ ಪ್ರಾಣಸಂಶಿತಮಸೀತಿ.

ಅರ್ಥ :—ಆಂಗಿರಸ ವಂಶೀಯನಾದ ಘೋರನೆಂಬ ಋಷಿಯು ದೇವಕೀಪುತ್ರನಿಗೆ ಈ ಮಾತನ್ನು ಹೇಳಿದನು—"ಎಲೈ ಕೃಷ್ಣನೇ, ನಿನ್ನ ಈ ಮಾತುಗಳನ್ನು ಕೇಳಿ ನಾನೂ ಕೂಡ ಬಾಯಾರಿಕೆಯಿಲ್ಲದವನಾದೆನು." ಕೊನೆಗೆ ತನ್ನ ಮರಣಪರ್ಯಂತವಾಗಿಯೂ ಈ ಮೂರು ಮಾತುಗಳನ್ನೇ ಅವಲಂಬಿಸಿದನು : " ನೀನು ಅಕ್ಷಿತನು, ಅಚ್ಯುತನು, ಪ್ರಾಣಸಂಶಿತನು."

ಈ ಘೋರ ಋಷಿಯ ಪುತ್ರನೇ ಕಣ್ವನು.* ಇವನೇ ಋಗ್ವೇದದ ಕೆಲವು ಸೂಕ್ತಗಳ ಋಷಿ. ಮೊದಲನೆಯ ಮಂಡಲದ ೩೬ನೆಯ ಸೂಕ್ತದಿಂದ ೪೩ನೆಯ ಸೂಕ್ತದವರೆಗೂ ಇವನು ರಚಿಸಿರುವನು. ಕಣ್ವಪುತ್ರ ಮೇಧಾತಿಥಿಯು ಇದೇ ಮಂಡಲದ ೧೨ನೆಯ ಸೂಕ್ತದಿಂದ ೨೩ನೆಯ ಸೂಕ್ತ ಪರಿಯಂತ ರಚಿಸಿರುವನು. ಕಣ್ವನ ಇನ್ನೊಬ್ಬ ಮಗನು ಪ್ರಸ್ಕಣ್ವನು; ಇದೇ ಮಂಡಲದ ೪೪ನೆಯ ಸೂಕ್ತದಿಂದ ೫೦ನೆಯ ಸೂಕ್ತದವರೆಗೂ ರಚಿಸಿರುವನು. ನಿರುಕ್ತಿಯನ್ನು ಬರೆದ ಯಾಸ್ಕನು " ಯಸ್ಯ ವಾಕ್ಯಂ ಋಷಿಃ " ಎಂದು ಹೇಳಿದ್ದಾನೆ. ಆದುದರಿಂದ ಋಷಿಗಳು ಸೂಕ್ತವನ್ನು ಬರೆದವರಾಗಲಿ, ಆಗದೆ ಹೋಗಲಿ ಹೇಳಿದವರೇನೋ ಹೌದು. ಆದುದರಿಂದ ಘೋರಪುತ್ರ ಗೋತ್ರರು ಋಗ್ವೇದದ ಅನೇಕ ಸೂಕ್ತಗಳನ್ನು ಹೇಳಿದವರು. ಆದುದರಿಂದ ಘೋರ ಶಿಷ್ಯನಾದ ಕೃಷ್ಣನು ಅವರ ಸಮಕಾಲಿಕನು. ಈ ವಿಷಯದಲ್ಲಿ ಸಂದೇಹವಿಲ್ಲ. ಮೊದಲು ವೇದದ ಸೂಕ್ತಗಳು ಹೇಳಲ್ಪಟ್ಟುವು. ಆಮೇಲೆ ವೇದ ವಿಭಾಗವಾಯಿತು. ಇದು ಹೀಗಲ್ಲವೆಂದು ಹೇಳಲು ಆಗುವುದಿಲ್ಲ. ಆದುದರಿಂದ ಕೃಷ್ಣನು ವೇದ ವಿಭಾಗಮಾಡಿದ ವೇದವ್ಯಾಸನ ಸಮಕಾಲಿಕನು, ಕಲ್ಪಿತನೇನೂ ಅಲ್ಲ ಎಂಬ ವಿಷಯದಲ್ಲಿ ಸಂಶಯವು ಇರುವುದಿಲ್ಲ.

ಋಗ್ವೇದ ಸಂಹಿತೆಯ ಅಷ್ಟಮ ಮಂಡಲದ ೮೫, ೮೬, ೮೭ ಸೂಕ್ತಗಳನ್ನು ಮತ್ತು ೧೦ನೆಯ ಮಂಡಲದ ೪೨, ೪೩, ೪೪ನೆಯ ಸೂಕ್ತಗಳನ್ನು ಹೇಳಿದವನು ಕೃಷ್ಣನು. ಇವನು ದೇವಕೀಪುತ್ರ ಕೃಷ್ಣನು ಹೌದೋ ಅಲ್ಲವೋ ನಿರ್ಣಯಿಸುವುದು ಕಷ್ಟ. ಕೃಷ್ಣನು ಕ್ಷತ್ರಿಯನಾದುದರಿಂದ ಈ ಸೂಕ್ತಗಳ ಋಷಿಯಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ತ್ರಸದಸ್ಯು,

*ಈ ಕಣ್ವನು ಶಕುಂತಳೆಯ ಸಾಕುತಂದೆಯಲ್ಲ. ಅವನು ಕಾಶ್ಯಪ ಕಣ್ವನು. ಘೋರಪುತ್ರ ಕಣ್ವನು ಆಂಗಿರಸನೆಂಬ ಮತ್ತೊಂದು ಹೆಸರಿನಿಂದ ಕರೆಯಲ್ಪಟ್ಟಿರುವನು.

ತ್ರ್ಯಖುಣ, ಪುರುಮೀಢ, ಅಜಮೀಢ, ಸಿಂಧುದ್ವೀಪ, ಸುದಾಸ, ಮಾಂಧಾತ, ಶಿಬಿ, ಪ್ರತರ್ದನ, ಕಕ್ಷಿವಾನ್ ಮೊದಲಾದವರು ಕ್ಷತ್ರಿಯರಲ್ಲಿ ಪ್ರಖ್ಯಾತರಾದ ರಾಜರುಗಳು ಋಗ್ವೇದದ ಸೂಕ್ತಗಳ ಋಷಿಗಳು. ಕಬಷನೆಂಬೊಬ್ಬ ಶೂದ್ರನೂ ೧೦ನೆಯ ಮಂಡಲದ ಋಷಿಯು. ಆದುದರಿಂದ ಕ್ಷತ್ರಿಯನೆಂದು ಕೃಷ್ಣನ ಋಷಿತ್ವಕ್ಕೆ ಆಪತ್ತಿಯನ್ನೂ ತರಕೂಡದು. ಋಗ್ವೇದ ಸಂಹಿತೆಯ ಅನುಕ್ರಮಣಿಕೆಯಲ್ಲಿ ಶೌನಕ ಕೃಷ್ಣನು ಆಂಗಿರಸ ಋಷಿಯೆಂದು ಪರಿಚಿತನಾಗಿದ್ದಾನೆ.

ಉಪನಿಷತ್ತುಗಳೆಲ್ಲಾ ವೇದಗಳ ಕೊನೆಯ ಭಾಗಗಳು. ಆದುದರಿಂದ ಇವುಗಳಿಗೆ ವೇದಾಂತಗಳೆಂದು ಹೆಸರು. ಬ್ರಾಹ್ಮಣವು ಉಪನಿಷತ್ತುಗಳಿಗಿಂತಲೂ ಪ್ರಾಚೀನವೆಂದು ತೋರುವುದು. ಛಾಂದೋಗ್ಯೋಪನಿಷತ್ತಾದರೋ, ಕೌಷೀತಕೀ ಬ್ರಾಹ್ಮಣಕ್ಕಿಂತ ಪ್ರಾಚೀನವೆಂದು ತೋರುವುದು. ಅದರಲ್ಲಿಯೂ ಈ ಆಂಗಿರಸ ಘೋರನ ಹೆಸರಿದೆ. ಕೃಷ್ಣನನ್ನು ಅಲ್ಲಿ ದೇವಕೀಪುತ್ರನೆಂದು ವರ್ಣಿತನಾಗಿಲ್ಲ. ಅಲ್ಲಿ ಕೃಷ್ಣನನ್ನು ಆಂಗಿರಸನೆಂದು ವರ್ಣಿಸಿದ್ದಾರೆ. ಆದರೆ ಎಷ್ಟೋ ಜನ ಕ್ಷತ್ರಿಯರೂ ಆಂಗಿರಸನೆಂದು ಪ್ರಸಿದ್ಧರಾಗಿದ್ದರು. ಈ ವಿಷಯದಲ್ಲಿ ವಿಷ್ಣುಪುರಾಣದ ಶ್ಲೋಕವೊಂದು ಸಿಕ್ಕಿದೆ:—

> ಏತೇ ಕ್ಷತ್ರಪ್ರಸೂತಾ ವೈ ಪುನಶ್ಚಾಂಗಿರಸ ಸ್ಮೃತಾಃ ।
> ರಥೀತರಾಣಾಂ ಪ್ರವರಾಂ ಕ್ಷತ್ರೋಪೇತಾ ದ್ವಿಜಾತಯಃ ॥
>
> ೪ನೆಯ ಅಂಶ, ೨ । ೨

ಈ ರಥೀತರ ರಾಜನು ಸೂರ್ಯವಂಶದವನು. ಕೃಷ್ಣನ ಪೂರ್ವಪುರುಷನಾದ ಯಾದವನು ಯಯಾತಿಯ ಪುತ್ರನು; ಆದುದರಿಂದ ಚಂದ್ರವಂಶದವನು. ಈ ಮಾತೇ ಸಕಲ ಪುರಾಣೇತಿಹಾಸಾದಿಗಳಲ್ಲಿಯೂ ಬರೆಯಲ್ಪಟ್ಟಿರುವುದು; ಆದರೆ ಹರಿವಂಶದ ವಿಷ್ಣುಪರ್ವದಲ್ಲಿ ಮಥುರೆಯಲ್ಲಿದ್ದ ಯಾದವದು ಇಕ್ಷ್ವಾಕುವಂಶದವರೆಂದು ಬರೆದಿದೆ:

> "ಏವಂ ಇಕ್ಷ್ವಾಕುವಂಶಾದ್ಧಿ ಯದುವಂಶೋ ವಿನಿಸ್ಸೃತಃ"
>
> ೯೫ನೆಯ ಅಧ್ಯಾಯ, ೫೪ನೆಯ ಶ್ಲೋಕ

ಈ ಮಾತು ವಿಶೇಷ ಸಂಭವನೀಯ. ರಾಮಾಯಣದಲ್ಲಿ ಇಕ್ಷ್ವಾಕು ವಂಶದ ರಾಮನ ಚಿಕ್ಕ ತಮ್ಮನಾದ ಶತ್ರುಘ್ನನು ಮಧುರೆಯನ್ನು ಜಯಿಸಿದ್ದನೆಂದು ಹೇಳಿದೆ.

ಇದು ಹೇಗಾದರೂ ಇರಲಿ. "ವಾಸುದೇವಾರ್ಜುನಾಭ್ಯಾಂ ವುನ್" ಈ ಸೂತ್ರವನ್ನು ನಮ್ಮ ಪಾಣಿನಿಯ ಸೂತ್ರದಿಂದೆತ್ತಿದೆಯಷ್ಟೆ. ಕೃಷ್ಣನು ಪಾಣಿನಿಯ ಕಾಲದಲ್ಲಿ ಪೂಜಾಯೋಗ್ಯನಾಗಿ ಸ್ವೀಕರಿಸಲ್ಪಟ್ಟಿದ್ದನು ಅಥವಾ ಸ್ವೀಕರಿಸಲ್ಪಟ್ಟಿರುವಷ್ಟು ಪ್ರಾಚೀನತೆಯನ್ನು ಹೊಂದಿದ್ದನೆಂಬುದು ಸ್ಪಷ್ಟ.

ನವಮ ಪರಿಚ್ಛೇದ

ಮಹಾಭಾರತದಲ್ಲಿ ಈಚೆಗೆ ಸೇರಿರುವವುಗಳ ವಿಷಯ

ನಾವು ಇದುವರೆಗೂ ಹೇಳಿದುದರ ಸ್ಥೂಲಮರ್ಮವು—ಮಹಾಭಾರತದಲ್ಲಿ ಐತಿಹಾಸಿಕತೆಯುಂಟು ಮತ್ತು ಕೃಷ್ಣ ಪಾಂಡವರ ಸಂಬಂಧವಾದ ಐತಿಹಾಸಿಕ ವೃತ್ತಾಂತ ಇದರಲ್ಲಿರುವುದೆಂಬುದೇ.

ಆದರೆ ಇವರ ವಿಷಯವಾಗಿ ಇರುವವುಗಳೆಲ್ಲಾ ಐತಿಹಾಸಿಕ ತತ್ತ್ವವೇ ಎಂದು ವಿಚಾರಮಾಡಬೇಕಾಗಿದೆ. ಮಹಾಭಾರತದ ಐತಿಹಾಸಿಕತೆ ಮತ್ತು ಕೃಷ್ಣ ಪಾಂಡವರ ವೃತ್ತಾಂತದ ಐತಿಹಾಸಿಕತೆ ಇವುಗಳ ವಿಷಯದಲ್ಲಿ ಯೂರೋಪೀಯರ ಪ್ರತಿಕೂಲ ಭಾವನೆಯುಂಟಷ್ಟೆ. ಆದರೆ ಅವರು ಮಹಾಭಾರತವೇನೋ ಪೂರ್ವದಲ್ಲಿದ್ದಿತಾದರೂ ಈಗಿರುವುದು ಆ ಮಹಾಭಾರತವಲ್ಲ. ಈಗ ರೂಢಿಯಲ್ಲಿರುವುದರಲ್ಲಿ ಪೂರ್ವಕಾಲದ ಮಹಾಭಾರತದ ಸ್ವಲ್ಪ ಭಾಗವೂ ಸೇರಿಲ್ಲವೆಂದು ಹೇಳುವುದಾದರೆ ಇವರ ಮಾತು ನಿಜವೆಂದೊಪ್ಪುವುದಕ್ಕಾಗುವುದಿಲ್ಲ. ಇದಕ್ಕಾಗಿಯೇ ಇಷ್ಟು ವಾದಮಾಡಬೇಕಾಯಿತು. ಈಚಿನ ಅನೇಕ ಪ್ರಕ್ಷಿಪ್ತ ಉಪನ್ಯಾಸಗಳ ಮಧ್ಯದಲ್ಲಿ ಪ್ರಾಚೀನ ಭಾರತ ಮುಳುಗಿಸಲ್ಪಟ್ಟಿದೆಯೆಂಬುದೇ ಯೂರೋಪಿನವರ ಮರ್ಮಾರ್ಥವಾದರೆ ನನಗೂ ಅವರಿಗೂ ಮತಭೇದವೇನೂ ಇಲ್ಲ.

ಇದನ್ನೇ ನಾವು ಬಾರಿಬಾರಿಗೂ ಹೇಳಿದ್ದೇವೆ. ಐತಿಹಾಸಿಕವೆಲ್ಲಾ ಪೂರ್ವದ ಮಹಾಭಾರತದಲ್ಲಿದೆ. ಆದುದರಿಂದ ಈಚೆಗೆ ಯಾವಯಾವಂಶಗಳು ಸೇರಿಸಲ್ಪಟ್ಟವೆ ಎಂಬುದನ್ನು ಹುಡುಕಿ ತೆಗೆದುಹಾಕಿ ಉಳಿದುದರಲ್ಲಿ ಕೃಷ್ಣನ ಕಥೆಯು ಸಿಕ್ಕಿದರೆ ಅದಕ್ಕೆ ಐತಿಹಾಸಿಕದ ಬೆಲೆಯನ್ನು ಕೊಡಬಹುದು. ಈ ಮೂಲಭಾರತದಲ್ಲಿಲ್ಲದ್ದು ಮತ್ತೆಲ್ಲಿ ದೊರೆತರೂ ಅದಕ್ಕೆ ಬೆಲೆ ಕಡಮೆ. ಏಕೆಂದರೆ, ಮಹಾಭಾರತವು ಸರ್ವ ಗ್ರಂಥಗಳಿಗಿಂತಲೂ ಪ್ರಾಚೀನ.

ಪ್ರಾಚೀನ ಸಂಪ್ರದಾಯದವರು ಮಹಾಭಾರತದಲ್ಲಿ ಬಹು ಭಾಗ ಈಚೆಗೆ ಸೇರಿದೆಯೆಂಬುದಕ್ಕೆ ಆಧಾರವೇನೆಂದು ಕೇಳುವರು. ಈ ಪರಿಚ್ಛೇದ ದಲ್ಲಿ ಆ ಪ್ರಮಾಣಗಳನ್ನು ಸ್ವಲ್ಪಮಟ್ಟಿಗೆ ವಿವರಿಸುತ್ತೇವೆ.

ಮಹಾಭಾರತದಲ್ಲಿ ವಿವರಿಸಿರುವ ವಿಷಯಗಳನ್ನೆಲ್ಲಾ ಆದಿಪರ್ವದ ೨ನೆಯ ಅಧ್ಯಾಯವಾದ ಪರ್ವಸಂಗ್ರಹಾಧ್ಯಾಯದಲ್ಲಿ ಎಣಿಕೆ ಹಾಕಿದ್ದಾರೆ. ಇದು ಈ ಕಾಲದ ಗ್ರಂಥದ ಸೂಚೀ ಪತ್ರ (Table of Contents) ಕ್ಕೆ ಸಮನಾದುದು. ಅತಿ ಸಣ್ಣ ವಿಷಯಗಳೂ ಕೂಡ ಎಣಿಸಲ್ಪಟ್ಟವೆ. ಆದುದ ರಿಂದ ಯಾವ ದೊಡ್ಡ ವಿಷಯವು ಈ ಪರ್ವಸಂಗ್ರಹಾಧ್ಯಾಯದಲ್ಲಿ ಸೇರಿ ಲ್ಲವೋ ಅದು ಖಂಡಿತವಾಗಿಯೂ ಪ್ರಕ್ಷಿಪ್ತವೆಂದು ಹೇಳಬಹುದು. ಇದಕ್ಕೆ ತಕ್ಕ ಉದಾಹರಣೆಗಳನ್ನು ಕೊಡುವೆನು.

೧ನೆಯ ಉದಾಹರಣೆ.—ಆಶ್ವಮೇಧಿಕ ಪರ್ವದಲ್ಲಿ ೩೬ ಅಧ್ಯಾಯ ಗಳುಳ್ಳ ಅನುಗೀತ ಮತ್ತು ಬ್ರಾಹ್ಮಣಗೀತಗಳಿವೆ. ಇದು ಸಣ್ಣ ವಿಷಯ ವೇನೂ ಅಲ್ಲ. ಇದರ ಹೆಸರು ಪರ್ವಸಂಗ್ರಹಾಧ್ಯಾಯದಲ್ಲಿಲ್ಲ. ಆದುದ ರಿಂದ ಅನುಗೀತ ಮತ್ತು ಬ್ರಾಹ್ಮಣಗೀತಗಳು ಪ್ರಕ್ಷಿಪ್ತ.

೨ನೆಯ ಉದಾಹರಣೆ.—ಅನುಕ್ರಮಣಿಕಾಧ್ಯಾಯದಲ್ಲಿ ಮಹಾ ಭಾರತವು ಒಂದು ಲಕ್ಷ ಶ್ಲೋಕಗಳನ್ನುಳ್ಳದ್ದೆಂದು ಹೇಳಿದೆ. ಪರ್ವಸಂಗ್ರ ಹಾಧ್ಯಾಯದಲ್ಲಿ—ಯಾವ ಯಾವ ಪರ್ವದಲ್ಲಿ ಎಷ್ಟೆಷ್ಟು ಶ್ಲೋಕಗಳಿರುವು ವೆಂಬುದನ್ನು ಹೀಗೆ ಲೆಕ್ಕಹಾಕಿದ್ದಾರೆ :—

ಆದಿಪರ್ವ	....	೮,೮೮೪	ವಿರಾಟಪರ್ವ	....	೨,೦೫೦
ಸಭಾಪರ್ವ	....	೨,೫೧೧	ಉದ್ಯೋಗಪರ್ವ	....	೬,೬೯೮
ವನಪರ್ವ	....	೧೧,೬೬೪	ಭೀಷ್ಮಪರ್ವ	....	೫,೮೮೪

ದ್ರೋಣಪರ್ವ	.... ೮,೯೦೯	ಅನುಶಾಸನಿಕಪರ್ವ	.... ೮,೦೦೦
ಕರ್ಣಪರ್ವ	.... ೪,೯೬೪	ಆಶ್ವಮೇಧಿಕಪರ್ವ	.... ೩,೩೨೦
ಶಲ್ಯಪರ್ವ	.... ೩,೨೨೦	ಆಶ್ರಮವಾಸಿಕಪರ್ವ	.... ೧,೫೦೬
ಸೌಪ್ತಿಕಪರ್ವ	.... ೮೭೦	ಮೌಸಲಪರ್ವ	.... ೩೨೦
ಸ್ತ್ರೀಪರ್ವ	.... ೭೭೫	ಮಹಾಪ್ರಸ್ಥಾನರ್ವ	.... ೩೨೦
ಶಾಂತಿಪರ್ವ	.... ೧೪,೭೩೨	ಸ್ವರ್ಗಾರೋಹಣಪರ್ವ	.... ೨೦೯

ಅಂತೂ, ಒಟ್ಟು ೮೪,೯೩೬ ಶ್ಲೋಕಗಳಾಗುವುವು. ಲಕ್ಷ ಶ್ಲೋಕಗಳನ್ನು ಪೂರೈಸುವುದಕ್ಕಾಗಿ ಪರ್ವಸಂಗ್ರಹಾಧ್ಯಾಯಕಾರನು ಹೀಗೆ ಬರೆದಿರುತ್ತಾನೆ:—

ಅಷ್ಟಾದಶೈವಮುಕ್ತಾನಿ ಪರ್ವಾಣ್ಯೇತಾನ್ಯಶೇಷತಃ ।
ಖಿಲೇಷು ಹರಿವಂಶಂ ಚ ಭವಿಷ್ಯಂ ಚ ಪ್ರಕೀರ್ತಿತಂ ॥

ದಶ ಶ್ಲೋಕ ಸಹಸ್ರಾಣಿ ವಿಂಶ ಶ್ಲೋಕ ಶತಾನಿ ಚ ।
ಖಿಲೇಷು ಹರಿವಂಶೇ ಚ ಸಂಖ್ಯಾ ತಾನಿ ಮಹರ್ಷಿಣಾ ॥

"ಹೀಗೆ ಅಷ್ಟಾದಶಪರ್ವವು ಸವಿಸ್ತಾರವಾಗಿ ಹೇಳಲ್ಪಟ್ಟಿತು. ಇದರ ಮೇಲೆ ಹರಿವಂಶ ಭವಿಷ್ಯತ್ಪರ್ವ. ಮಹರ್ಷಿಯು ಹರಿವಂಶದಲ್ಲಿ ೧೨ ಸಾವಿರ ಶ್ಲೋಕಗಳನ್ನು ಬರೆದಿರುತ್ತಾನೆ." ಪರ್ವಸಂಗ್ರಹಾಧ್ಯಾಯದಲ್ಲಿ ಈ ಸಾಸಿವೆಯಷ್ಟನ್ನು ಬಿಟ್ಟರೆ ಹರಿವಂಶದ ಪ್ರಸಂಗವು ಇನ್ನೆಲ್ಲಿಯೂ ಇಲ್ಲ. ಇದರಿಂದ ೯೬,೯೩೬ ಶ್ಲೋಕಗಳಾಗುವವು. ಈಗ ರೂಢಿಯಲ್ಲಿರುವ ಮಹಾಭಾರತದ ಶ್ಲೋಕಗಳನ್ನು ಎಣಿಸಿದರೆ ಹೀಗೆ ಸಿಗುತ್ತವೆ:—

ಆದಿಪರ್ವ	.... ೮,೪೮೯	ಸ್ತ್ರೀಪರ್ವ	.... ೮೨೭ತ್ತಿ
ಸಭಾಪರ್ವ	.... ೨,೭೦೯	ಶಾಂತಿಪರ್ವ	.... ೧೩,೯೪೩
ವನಪರ್ವ	.... ೧೭,೪೭೮	ಅನುಶಾಸನಿಕಪರ್ವ	.... ೭,೭೯೬
ವಿರಾಟಪರ್ವ	.... ೨,೩೭೬	ಆಶ್ವಮೇಧಿಪರ್ವ	.... ೨,೯೦೦
ಉದ್ಯೋಗಪರ್ವ	.... ೭,೬೫೬ತ್ತಿ	ಆಶ್ರಮವಾಸಿಕವರ್ಪ	.... ೧,೧೦೫
ಭೀಷ್ಮಪರ್ವ	.... ೫,೮೫೬	ಮೌಸಲಪರ್ವ	.... ೨೯೨
ದ್ರೋಣಪರ್ವ	.... ೯,೬೪೯	ಮಹಾಪ್ರಸ್ಥಾನಪರ್ವ	.... ೧೦೯
ಕರ್ಣಪರ್ವ	.... ೫,೦೪೯	ಸ್ವರ್ಗಾರೋಹಣಪರ್ವ	೩೧೨
ಶಲ್ಯಪರ್ವ	.... ೩,೬೭೧	ಹರಿವಂಶ	.... ೧೬,೩೭೪
ಸೌಪ್ತಿಕಪರ್ವ	.... ೮೧೧		

ಅಂತೂ, ಒಟ್ಟು ೧,೦೭,೩೯೩ ಶ್ಲೋಕಗಳಾವುವು. ಇದರಿಂದ ಮೊದಲು ಮಹಾಭಾರತದಲ್ಲಿ ಒಂದು ಲಕ್ಷ ಶ್ಲೋಕಗಳಿರಲಿಲ್ಲವೆಂದು ಗೊತ್ತಾಗುವುದು. ಪರ್ವಸಂಗ್ರಹವಾದಮೇಲೆ ಹರಿವಂಶವೂ ಸೇರಿ ಒಟ್ಟು ಸುಮಾರು ೧೧ ಸಾವಿರ ಶ್ಲೋಕಗಳು ಮೊದಲಿಗಿಂತ ಹೆಚ್ಚಾಗಿವೆ; ಅಂದರೆ ಪ್ರಕ್ಷಿಪ್ತವಾಗಿವೆ.

೩ನೆಯ ಉದಾಹರಣೆ.—ಹೀಗೆ ಹೆಚ್ಚು ಕಡಮೆಯಾಗುವುದಕ್ಕೆ ಕಾರಣವು ಅನುಕ್ರಮಣಿಕಾಧ್ಯಾಯದಲ್ಲಿಯೇ ಸಿಗುವುದು. ಈ ಅಧ್ಯಾಯದ ೧೦೨ನೆಯ ಶ್ಲೋಕದಲ್ಲಿ ವ್ಯಾಸದೇವನು ಸಾರ್ಧಶತ (೧೫೦) ಶ್ಲೋಕಮಯಿಯಾದ ಅನುಕ್ರಮಣಿಕೆಯನ್ನು ಬರೆದನೆಂದು ಹೇಳಿದೆ.

ತತೋಽಹ್ಯರ್ಧಶತಂ ಭೂಯಃ ಸಂಕ್ಷೇಪಂ ಕೃತವಾನ್ ಋಷಿಃ ।
ಅನುಕ್ರಮಣಿಕಾಧ್ಯಾಯಂ ವೃತ್ತಾಂತಾನಾಂ ಸಪರ್ವಣಾಂ ॥

ಈಗಿನ ಅನುಕ್ರಮಣಿಕಾಧ್ಯಾಯದಲ್ಲಿ ೨೭೨ ಶ್ಲೋಕಗಳಿವೆ. ಆದುದರಿಂದ ಪರ್ವಸಂಗ್ರಹಾಧ್ಯಾಯವನ್ನು ಬರೆದಮೇಲೆ ಈ ಅನುಕ್ರಮಣಿಕಾಧ್ಯಾಯಕ್ಕೆ (೧೨೨) ಶ್ಲೋಕಗಳು ಹೆಚ್ಚು ಬೆರೆತಿವೆ.

೪ನೆಯ ಉದಾಹರಣೆ.—ಈಗಿನ ಮಹಾಭಾರತದ ಅನುಕ್ರಮಣಿಕಾಧ್ಯಾಯದಲ್ಲಿ ೮೪,೯೩೬ ಶ್ಲೋಕಗಳು ಮಹಾಭಾರತದಲ್ಲಿರುವುದೆಂದು ಹೇಳಿದೆ. ಆದರೆ ಈ ಪರ್ವಸಂಗ್ರಹಾಧ್ಯಾಯವೂ ಕೂಡ ಪ್ರಕ್ಷಿಪ್ತವೆಂದು ಹೇಳಬಹುದು. ಮಹಾಭಾರತವನ್ನು ವೈಶಂಪಾಯನನು ಜನಮೇಜಯನಿಗೆ ಹೇಳಿದನೆಂದು ಮಹಾಭಾರತದಲ್ಲಿದೆ. ಹೀಗೆಂದು ಉಗ್ರಶ್ರವನು ನೈಮಿಶಾರಣ್ಯದಲ್ಲಿ ಶೌನಕಾದಿ ಋಷಿಗಳಿಗೆ ಹೇಳಿದ್ದಾನೆ. ಪರ್ವಸಂಗ್ರಹಾಧ್ಯಾಯಕಾರನು ಈ ಸಂಗ್ರಹವು ಉಗ್ರಶ್ರವನ ಹೇಳಿಕೆಯೆಂದು ವರ್ಣಿಸಿದ್ದಾನೆ. ವೈಶಂಪಾಯನನ ಹೇಳಿಕೆಯಲ್ಲವಾದುದರಿಂದ ಮೊದಲಿನ ವೈಶಂಪಾಯನ ಮಹಾಭಾರತದಲ್ಲಿನ ಅಂಶವಲ್ಲ. ಕೆಲವರು ಮನುವಿನಿಂದಲೂ, ಕೆಲವರು ಆಸ್ತಿಕಪರ್ವದಿಂದಲೂ, ಕೆಲವರು ಉಪರಿಚರರಾಜನ ಉಪಾಖ್ಯಾನದಿಂದಲೂ ಮಹಾಭಾರತವು ಆರಂಭವಾಗುವುದೆಂದೆಣಿಸುವರೆಂಬುದಾಗಿ ಅನುಕ್ರಮಣಿಕಾಧ್ಯಾಯದಲ್ಲಿ ಹೇಳಿದೆ.

ಮಹಾಭಾರತವನ್ನು ಉಗ್ರಶ್ರವನು ಋಷಿಗಳಿಗೆ ಹೇಳುವಾಗಲೇ ಪರ್ವಸಂಗ್ರಹಾಧ್ಯಾಯವು ಒಂದಲ್ಲದೆ ಮೊದಲಿನ ಅರವತ್ತೆರಡಧ್ಯಾಯಗಳೂ ಪ್ರಕ್ಷಿಪ್ತವೆಂಬ ಪ್ರವಾದವಿತ್ತು. ಅವಶ್ಯವಾಗಿ ಅನುಕ್ರಮಣಿಕಾಧ್ಯಾಯದ ೧೫೦ ಶ್ಲೋಕಗಳನ್ನು ಬಿಟ್ಟು ಈ ಪರ್ವಸಂಗ್ರಹಾಧ್ಯಾಯವನ್ನೋದಿದರೆ ಇದು ಗೊತ್ತಾಗುವುದು. ಹೇಗೆಂದರೆ—ಪ್ರಕ್ಷಿಪ್ತಾಂಶವು ಕ್ರಮವಾಗಿ ಹೆಚ್ಚುತ್ತಿರಲು ಮುಂದಕ್ಕೆ ಅದನ್ನು ತಡೆಯಬೇಕೆಂದು—ಎಣಿಕೆಯಿಂದ ಕೂಡಿದ ಪರ್ವಸಂಗ್ರಹವು ಅನುಕ್ರಮಣಿಕಾಧ್ಯಾಯದ ಮೇಲೆ ಸಂಸ್ಥಾಪಿಸಲ್ಪಟ್ಟಿತು. ಆದುದರಿಂದ ಪರ್ವಸಂಗ್ರಹಾಧ್ಯಾಯವನ್ನು ಗುಣಿಸುವುದಕ್ಕೆ ಮುಂಚೆಯೇ ಅನೇಕಾಂಶಗಳು ಪ್ರಕ್ಷಿಪ್ತವಾಗಿದ್ದವೆಂದು ಅನುಮಾನಿಸಬೇಕಾಗಿದೆ.

೫ನೆಯ ಉದಾಹರಣೆ.—ಮಹಾಭಾರತದಲ್ಲಿ ಮೊದಲು ಉಪಾಖ್ಯಾನಗಳನ್ನು ಬಿಟ್ಟರೆ ೨೪ ಸಾವಿರ ಶ್ಲೋಕಗಳೆಂದು ಅನುಕ್ರಮಣಿಕಾಧ್ಯಾಯದಲ್ಲಿಯೇ ಹೇಳಿದೆ; ಮತ್ತು ವೇದವ್ಯಾಸರು ತಮ್ಮ ಪುತ್ರ ಶುಕದೇವನಿಗೆ ಇದನ್ನು ಅಧ್ಯಯನ ಮಾಡಿಸಿದ್ದರು.

ಚತುರ್ವಿಂಶತಿ ಸಾಹಸ್ರೀಂ ಚಕ್ರೇ ಭಾರತಸಂಹಿತಾಂ ।
ಉಪಾಖ್ಯಾನೈರ್ವಿನಾ ತಾವದ್ಭಾರತಂ ಪ್ರೋಚ್ಯತೇ ಬುಧೈಃ ॥

ತತೋ ಹ್ಯರ್ಧಶತಂ ಭೂಯಃ ಸಂಕ್ಷೇಪಂ ಕೃತವಾನ್ ಋಷಿಃ ।
ಅನುಕ್ರಮಣಿಕಾಧ್ಯಾಯಂ ವೃತ್ತಾಂತಾನಾಂ ಸಪರ್ವಣಾಂ ॥

ಇದಂ ದ್ವೈಪಾಯನಃ ಪೂರ್ವಂ ಪುತ್ರಮಧ್ಯಾಪಯತ್ ಶುಕಂ ।
ತತೋಽನ್ಯೇಭ್ಯೋಽನುರೂಪೇಭ್ಯಃ ಶಿಷ್ಯೇಭ್ಯಃ ಪ್ರದದೌ ವಿಭುಃ ॥

ಆದಿಪರ್ವ, ೧೦೧-೧೦೩

ಶುಕದೇವನಿಂದ ವೈಶಂಪಾಯನನು ಮಹಾಭಾರತವನ್ನು ಕಲಿತನು. ಮಹಾಭಾರತದಲ್ಲಿ ೨೪ ಸಾವಿರ ಶ್ಲೋಕಗಳಿದ್ದು ಇದನ್ನು ಜನಮೇಜಯನಿಗೋಸ್ಕರ ಹೇಳಿದನು. ಈಚೆಗೆ ಅನ್ಯ ಜನಗಳ ರಚನೆಗಳು ಇದರಲಿ ಬೆರೆತುದರಿಂದ ಮಹಾಭಾರತವು ನಾಲ್ಕರಷ್ಟು ಹೆಚ್ಚಿತು. ಇದಲ್ಲದೆ, ಈ ಅನುಕ್ರಮಣಿಕಾಧ್ಯಾಯದಲ್ಲಿ ವೇದವ್ಯಾಸರು ಆರುಲಕ್ಷ ಶ್ಲೋಕಗಳಿಂದ ಕೂಡಿದ ಮಹಾಭಾರತವನ್ನು ಬರೆದಿದ್ದರು; ಅದರ ಕೆಲವಂಶಗಳು ದೇವಲೋಕ

ದಲ್ಲಿಯೂ, ಕೆಲವು ಪಿತೃಲೋಕದಲ್ಲಿಯೂ, ಇನ್ನೂ ಕೆಲವು ಗಂಧರ್ವ ಲೋಕ ದಲ್ಲಿಯೂ ಉಳಿದುಕೊಂಡು ಒಂದು ಲಕ್ಷ ಶ್ಲೋಕವು ಮಾತ್ರ ಮನುಷ್ಯಲೋಕ ದಲ್ಲುಳಿದುಕೊಂಡಿದೆಯೆಂದು ಹೇಳಿದೆ. ವೇದವ್ಯಾಸರೇ ಆಗಲಿ, ಮತ್ತೆ ಯಾರೇ ಆಗಲಿ ಆರು ಲಕ್ಷ ಶ್ಲೋಕಗಳು ಒಬ್ಬನಿಂದಲೇ ಆದವೆಂಬುದನ್ನು ನಾವು ಸಹಜವಾಗಿ ನಂಬಲು ಕಷ್ಟ. ಈ ಅನೈಸರ್ಗಿಕವಾದ ಮಾತನ್ನು ಮೊದಲಿನ ಅನುಕ್ರಮಣಿಕಾಧ್ಯಾಯದಲ್ಲಿ ನಿಸ್ಸಂದೇಹವಾಗಿ ಬೆರಸಿರುವರು. ೨೭೬ ಶ್ಲೋಕಗಳಲ್ಲಿ ೧೨೨ ಶ್ಲೋಕಗಳು ಪ್ರಕ್ಷಿಪ್ತವೆಂದು ಮೊದಲೇ ಹೇಳಿದ್ದೇವೆ. ಈ ಆರು ಲಕ್ಷ ಶ್ಲೋಕದ ಮತ್ತು ಒಂದು ಲಕ್ಷ ಶ್ಲೋಕದ ಮಾತು ಪ್ರಕ್ಷಿಪ್ತದಲ್ಲಿ ಸೇರಿದವೆಂದು ಹೇಳುವುದರಲ್ಲಾವ ಸಂಶಯವೂ ಇಲ್ಲ.

ದಶಮ ಪರಿಚ್ಛೇದ

ಮಹಾಭಾರತದಲ್ಲಿ ಬೆರೆತಿರುವ ಅನ್ಯರಚನೆಗಳನ್ನು ಕಂಡುಹಿಡಿಯುವ ದಾರಿ

ಹಿಂದಿನ ಪರಿಚ್ಛೇದದಲ್ಲಿ ಮಹಾಭಾರತದಲ್ಲಿ ಯಾವ ಯಾವ ಅಂಶಗಳು ಪ್ರಕ್ಷಿಪ್ತಗಳೆಂಬುದನ್ನು ವಿಚಾರ ಮಾಡಬೇಕೆಂದೆವಷ್ಟೆ? ಇದನ್ನು ಕಂಡು ಹಿಡಿಯಲು ಏನಾದರೂ ಗುರುತುಗಳಿವೆಯೇ? ನೋಡೋಣ.

ಮಾನವ ಜೀವನದಲ್ಲಿ ನಡೆಯುವ ಕಾರ್ಯಗಳೆಲ್ಲವನ್ನೂ ಪ್ರಮಾಣ ಗಳ ಮೇಲೆ ಭಾರವನ್ನಿಟ್ಟು ನಿರ್ವಹಿಸುವರು. ಆದುದರಿಂದ ವಿಷಯ ಭೇದ ವುಂಟಾದರೆ ಇದಕ್ಕೆ ಪ್ರಮಾಣಗಳ ಬಲಾಬಲವೇನು ಎಂಬುದು ಪ್ರಯೋಜನ ಕರ. ಯಾವ ಪ್ರಮಾಣವನ್ನು ನಂಬಿ ನಾವುಗಳು ಜೀವನ ಯಾತ್ರೆಯ ಕಾರ್ಯಗಳನ್ನು ನಿರ್ವಹಿಸುವೆವೋ ಅದಕ್ಕಿಂತಲೂ ಗುರುತರವಾದ ಪ್ರಮಾಣ ಗಳಿಲ್ಲದಿದ್ದರೆ ಮೊಕದ್ದಮೆಯನ್ನು ನ್ಯಾಯಸ್ಥಾನದಲ್ಲಿ ರುಜುವಾತು ಪಡಿಸು ವುದಕ್ಕಾಗುವುದಿಲ್ಲ. ಇದಕ್ಕಿಂತಲೂ ಬಲವತ್ತರವಾದ ಪ್ರಮಾಣಗಳಿಲ್ಲದಿದ್ದರೆ ವಿಜ್ಞಾನ ಸಂಬಂಧವಾದ ಯಾವ ಸಿದ್ಧಾಂತವನ್ನೂ ವೈಜ್ಞಾನಿಕನು ತಿಳಿಯ ಲಾರನು. ಆದುದರಿಂದ ಬೇರೆ ಬೇರೆ ವಿಷಯಕ್ಕೆ ಬೇರೆ ಬೇರೆ ಪ್ರಮಾಣ ಗಳುಂಟಾಗಿರುವುವು.

ಹೇಗೆಂದರೆ :—ನ್ಯಾಯಸ್ಥಾನಕ್ಕೋಸ್ಕರ (Law of Evidence) ಪ್ರಮಾಣಸಂಬಂಧವಾದ ಐನು, ವಿಜ್ಞಾನಕ್ಕೋಸ್ಕರ (Logic or Inductive Philosophy) ಅನುಮಾನತತ್ತ್ವವು ತಯಾರಾಗಿವೆ.

ಹೀಗೆ ಐತಿಹಾಸಿಕ ತತ್ತ್ವವನ್ನು ನಿರೂಪಣೆ ಮಾಡುವುದಕ್ಕೂ ಒಂದು ಪ್ರಮಾಣಶಾಸ್ತ್ರವಿದೆ. ಇದರ ತತ್ತ್ವವನ್ನು ಗೊತ್ತುಮಾಡುವುದಕ್ಕೋಸ್ಕರ ಮೇಲಿನವುಗಳಂತೆಯೇ ಕೆಲವು ಪ್ರಮಾಣಗಳ ನಿಯಮಗಳನ್ನು ಸಂಸ್ಥಾಪನೆ ಮಾಡಬಹುದು.

ಅವಾವುವೆಂದರೆ :—

(೧) ಪರ್ವಸಂಗ್ರಹಾಧ್ಯಾಯದ ವಿಷಯದಲ್ಲಿ ನಾವು ಮೊದಲೇ ತಿಳಿಸಿರುವ ಪ್ರಕಾರ ಯಾವ ಪ್ರಸಂಗವು ಆ ಪರ್ವಸಂಗ್ರಹಾಧ್ಯಾಯದಲ್ಲಿಲ್ಲವೋ ಅದು ಖಂಡಿತವಾಗಿಯೂ ಪ್ರಕ್ಷಿಪ್ತ. ಇದು ಮೊದಲನೆಯ ಸೂತ್ರ.

(೨) ಅನುಕ್ರಮಣಿಕಾಧ್ಯಾಯದಲ್ಲಿ—ಮಹಾಭಾರತಕಾರನು ವ್ಯಾಸರೇ ಆಗಲಿ, ಇನ್ನಾರೇ ಆಗಲಿ,—ಸಾರ್ಧಶತ ಶ್ಲೋಕಮಯವಾದ ಅನುಕ್ರಮಣಿಕೆಯಲ್ಲಿ ಭಾರತದ ಸಮಸ್ತ ಸಾರಾಂಶವನ್ನೂ ಕೂಡಿಸಿ ಬರೆದನೆಂದಿದೆ. ಈ ಅಧ್ಯಾಯದ ೯೩ನೆಯ ಶ್ಲೋಕದಿಂದ ೨೫೧ನೆಯ ಶ್ಲೋಕದವರೆಗೂ ಈ ರೂಪವಾದೊಂದು ರೀತಿಯ ಸಾರ ಸಂಕಲನೆಯುಂಟು. ಇದರಲ್ಲಿಯೂ ೧೫೦ಕ್ಕಿಂತ ಹೆಚ್ಚಾಗಿ ೯ ಶ್ಲೋಕಗಳಿವೆ. ಈ ಹೆಚ್ಚಿನ ಶ್ಲೋಕಗಳಾವುವೆಂಬುದನ್ನು ಕಂಡುಹಿಡಿಯದೇ ಹೋದರೂ ಚಿಂತೆಯಿಲ್ಲ. ಈ ೧೫೯ ಶ್ಲೋಕಗಳಲ್ಲಿ ೯ ಶ್ಲೋಕಗಳು ಪ್ರಕ್ಷಿಪ್ತವಾಗಿರಬಹುದು. ಈ ೧೫೯ ಶ್ಲೋಕಗಳಿಂದ ಮಹಾಭಾರತದ ಯಾವ ಪ್ರಸಂಗವು ಸಿಕ್ಕುವುದಿಲ್ಲವೋ ಅದು ಪ್ರಕ್ಷಿಪ್ತವೆಂದು ವಿವೇಚಿಸುವುದಕ್ಕೆ ನಮಗೆ ಬಾಧ್ಯತೆಯುಂಟು.

(೩) ಎಲ್ಲಿ ಪರಸ್ಪರ ವಿರೋಧವುಂಟಾಗುತ್ತದೋ ಅವುಗಳಲ್ಲೊಂದು ಪ್ರಕ್ಷಿಪ್ತ. ಒಂದೇ ಘಟನೆಯನ್ನು ಎರಡು ಅಥವಾ ಹೆಚ್ಚು ಸಲ ವಿವರಿಸಲು ಅಥವಾ ಒಂದಕ್ಕೊಂದು ವಿರೋಧವಾಗಿರಲು ಅವುಗಳಲ್ಲೊಂದು ಪ್ರಕ್ಷಿಪ್ತ. ಯಾವ ಲೇಖಕನೂ ಅರ್ಥವಿಲ್ಲದ ಪುನರುಕ್ತಿಯನ್ನು ನುಡಿದೇ ಆಗಲಿ ಇಲ್ಲವೇ ಅನರ್ಥ ಪುನರುಕ್ತಿಯಿಂದ ಆಗಲಿ ಆತ್ಮವಿರೋಧವನ್ನೇ ಪಡೆದುಕೊಳ್ಳುವುದಿಲ್ಲ. ಅಜಾಗರೂಕತೆಯಿಂದಲಾಗಲಿ, ಅಶಕ್ತತೆಯಿಂದ

ಲಾಗಲಿ ಪುನರುಕ್ತಿ ದೋಷವುಂಟಾಗುವುದು. ಇದು ಬೇರೆ ಮಾತು. ಇದನ್ನು ಸುಲಭವಾಗಿ ಕಂಡುಹಿಡಿಯಬಹುದು.

(೪) ಸುಕವಿಗಳ ರಚನಾಪ್ರಣಾಳಿಯಲ್ಲಿ ಪ್ರಾಯಿಕವಾಗಿ ಕೆಲವು ವಿಶೇಷ ಲಕ್ಷಣಗಳುಂಟು. ಮಹಾಭಾರತದ ಅನೇಕಾಂಶಗಳ ಮೌಲಿಕ ವಿಷಯದಲ್ಲಿ ಸಂಶಯವುಂಟಾಗುವುದಿಲ್ಲ. ಏಕೆಂದರೆ, ಆ ಅಂಶಗಳಿಲ್ಲದಿದ್ದರೆ ಮಹಾಭಾರತದ ತತ್ತ್ವವೇ ಹೋಗಿಬಿಡುವುದು. ಇಂಥ ಅಂಶಗಳ ರಚನಾ ಪ್ರಣಾಳಿಯು ಸರ್ವತ್ರ ಒಂದೇ ರೀತಿಯ ಲಕ್ಷಣಗಳಿಂದ ಕೂಡಿವೆ ಯೆಂಬುದು ಮುಂದೆ ಕಾಣುವುದು. ಯಾವ ಅಂಶಗಳ ರಚನೆಯಲ್ಲಿ ಈ ಬಗೆಯ ಲಕ್ಷಣವಿರುವುದಿಲ್ಲವೋ ಮತ್ತು ಮೊದಲು ಸೂಚಿಸಿದಂಥಾ ಲಕ್ಷಣವು ಅಸಂಗತವಾಗಿರುವುದೋ ಅಂಥಾ ರಚನೆ ಪ್ರಕ್ಷಿಪ್ತ.

(೫) ಮಹಾಭಾರತವನ್ನು ರಚಿಸಿದವನು ಒಬ್ಬ ಶ್ರೇಷ್ಠ ಕವಿಯೆಂಬ ವಿಷಯದಲ್ಲಿ ಸಂಶಯವಿಲ್ಲ. ಶ್ರೇಷ್ಠ ಕವಿ ವರ್ಣಿಸುವ ಚರಿತ್ರೆಗಳಲ್ಲಿ ಸರ್ವಾಂಶವೂ ಸುಸಂಗತವಾಗಿರುತ್ತದೆ. ಆದುದರಿಂದ ಇದಕ್ಕೆ ವ್ಯತಿರೇಕ ವಾಗಿರುವ ಅಂಶಗಳೆಲ್ಲವೂ ಪ್ರಕ್ಷಿಪ್ತಗಳು. ಯಾವುದೋ ಒಂದು ಕೈಬರಹದ ಮಹಾಭಾರತದ ನಕಲಿನಲ್ಲಿ ಒಂದು ಸ್ಥಾನದಲ್ಲಿ ಭೀಷ್ಮನ ಪರದಾರ ಪರಾಯಣತೆಯಾಗಲಿ, ಭೀಮನ ಹೇಡಿತನವಾಗಲಿ ವರ್ಣಿಸಲ್ಪಟ್ಟಿದ್ದರೆ ಅದು ಪ್ರಕ್ಷಿಪ್ತವೆಂದು ತಿಳಿಯುವುದಿಲ್ಲವೇ ?

(೬) ಯಾವುದು ಪ್ರಸಂಗ ಕ್ರಮಕ್ಕೆ ತಕ್ಕುದಲ್ಲವೋ ಅದು ಪ್ರಕ್ಷಿಪ್ತ ವಾಗಬಹುದು. ಆದರೆ ಆ ಪ್ರಾಸಂಗಿಕ ವಿಷಯದಲ್ಲಿ ಮೇಲೆ ಹೇಳಿದ ಐದು ಲಕ್ಷಣಗಳ ಪೈಕಿ ಯಾವುದೊಂದು ಲಕ್ಷಣವಿದ್ದರೂ ಅದು ಖಂಡಿತ ವಾಗಿಯೂ ಪ್ರಕ್ಷಿಪ್ತ.

(೭) ಎರಡು ಭಿನ್ನ ಭಿನ್ನ ವಿವರಣೆಗಳಲ್ಲೊಂದು, ಮೂರನೆಯ ಪುನ ರುಕ್ತಿ ದೋಷದ ಗುರುತಿನಿಂದ ಪ್ರಕ್ಷಿಪ್ತವೆಂದು ತೋರಿದರೆ ಮತ್ತು ಬೇರೇ ಯಾವುದೋ ಒಂದು ಅನ್ಯ ಲಕ್ಷಣದಿಂದ ಕೂಡಿದ್ದರೆ ಅದು ಪ್ರಕ್ಷಿಪ್ತ.

ಇನ್ನು ಮುಂದೆ ಹೆಗ್ಗುರುತುಗಳನ್ನು ಕ್ರಮವಾಗಿ ಸ್ಪಷ್ಟ ಪಡಿಸುವೆವು.

ಏಕಾದಶ ಪರಿಚ್ಛೇದ

ಗುರುತಿಸುವುದರ ಫಲ

ಮಹಾಭಾರತವನ್ನು ಬಾರಿಬಾರಿಗೂ ಓದಿ, ಮೇಲೆ ಬರೆದ ಪ್ರಣಾಳಿಯನ್ನನುಸರಿಸಿ ವಿಚಾರಪೂರ್ವಕವಾಗಿ ನಾನು ಈ ಗ್ರಂಥದಲ್ಲಿ ಮೂರು ಬೇರೆ ಬೇರೆ ಬಗೆಯ ಸ್ತರಗಳು ಇವೆಯೆಂದು ತಿಳಿದುಕೊಂಡೆನು. ಮೊದಲನೆಯದು—ಪುರಾತನವಾದೊಂದು ಅಸ್ಥಿಪಂಜರ. ಇದರಲ್ಲಿ ಪಾಂಡವರ ಜೀವನದ ವೃತ್ತ ಮತ್ತು ಅದರ ಸಂಗಡ ಸೇರಿದ ಕೃಷ್ಣ ಕಥೆ ಇವನ್ನು ಬಿಟ್ಟನ್ನೇನೂ ಇಲ್ಲ. ಇದು ಬಹು ಸಂಕ್ಷಿಪ್ತವಾದುದು. ಇದೇ ಆ ೨೪ ಸಹಸ್ರ ಗ್ರಂಥಗಳಿಂದ ಕೂಡಿದ ಭಾರತ ಸಂಹಿತೆಯೆಂದು ತೋರುವುದು. ಇದರ ಮೇಲೆ ಇನ್ನೊಂದು ಸ್ತರವುಂಟು; ಅದು ಮೊದಲಿನ ಸ್ತರಕ್ಕೆ ವ್ಯತಿರಿಕ್ತವಾದ ಲಕ್ಷಣವುಳ್ಳದು. ಇದರಂಶಗಳೆಲ್ಲವೂ ಒಂದೇ ಲಕ್ಷಣವುಳ್ಳವು. ಮಹಾಭಾರತದ ಕೆಲವಂಶಗಳ ರಚನೆಯು ಅತಿ ಉದಾರ, ವಿಕೃತಶೂನ್ಯ, ಅತ್ಯುಚ್ಚಕವಿತೆಯಿಂದ ತುಂಬಿದುದು ಎಂದು ನಮಗೆ ತೋರುವುದು. ಇನ್ನು ಕೆಲವಂಶಗಳು ಅನುದಾರ, ಆದರೂ ಪಾರಮಾರ್ಥಿಕ, ದಾರ್ಶನಿಕ ತತ್ತ್ವದೊಡನೆ ಬಲವಾದ ಸಂಬಂಧವುಳ್ಳದ್ದು. ಸುತರಾಂ ಕಾವ್ಯಾಂಶವು ಮಾತ್ರ ವಿಕೃತಿಯನ್ನು ಹೊಂದಿದೆ. ಕವಿತ್ವಶೂನ್ಯವಲ್ಲವಾದರೂ ಅಘಟನಘಟನಾ ಕೌಶಲದಿಂದ ಸೃಷ್ಟಿಚಾತುರ್ಯವನ್ನು ತೋರಿಸುವುದೇ ಮುಖ್ಯಾಂಶವುಳ್ಳ ಕವನವಾಗಿದೆ. ಮೊದಲನೆಯ ಶ್ರೇಣಿಯ ಲಕ್ಷಣಗಳಿಂದ ಕೂಡಿದಂಶಗಳೆಲ್ಲವೂ ಒಬ್ಬನ ರಚನೆ ; ಎರಡನೆಯ ಶ್ರೇಣಿಯ ಲಕ್ಷಣದಿಂದ ಕೂಡಿದಂಶಗಳೆಲ್ಲವೂ ಮತ್ತೊಬ್ಬನ ರಚನೆಯೆಂದು ತೋರುವುದು. ಮೊದಲನೆಯ ಶ್ರೇಣಿಯಿಂದ ಕೂಡಿದಂಶ ಮಾತ್ರವೇ ಮೊದಲನೆಯ ಅಥವಾ ಆದಿ ಮಹಾಭಾರತ. ಎರಡನೆಯ ರೀತಿಯ ಲಕ್ಷಣದಿಂದ ಕೂಡಿದವುಗಳು ಆಮೇಲೆ ರಚಿಸಲ್ಪಟ್ಟು ಬೆರಸಿದಂಶಗಳೆಂದು ವಿವೇಚಿಸಲಾಸೆವು. ಏಕೆಂದರೆ—ಮೊದಲನೆಯ ರಚನೆಗಳನ್ನು ತೆಗೆದುಹಾಕಿದರೆ ಮಹಾಭಾರತವೇ ಉಳಿಯುವುದಿಲ್ಲ. ಉಳಿಯುವುದು ಅಸ್ಥಿಪಂಜರ ರಹಿತವಾದ ಮಾಂಸದ ಮುದ್ದೆಯಂತೆ (ಕಟ್ಟಿಲ್ಲದ್ದು, ಪ್ರಯೋಜನವಿಲ್ಲದ್ದು,

ನಿರರ್ಥಕವಾದುದು. ಎರಡನೆಯ ಲಕ್ಷಣದಿಂದ ಕೂಡಿದುದನ್ನು ತೆಗೆದು ಬಿಟ್ಟರೆ ಮಹಾಭಾರತಕ್ಕೆ ತೊಂದರೆಯೇನೂ ಬರುವುದಿಲ್ಲ. ಕೇವಲ ನಿಷ್ಪ್ರಯೋಜಕಗಳಾದ ಅಲಂಕಾರಗಳನ್ನು ಮಾತ್ರ ಬಿಟ್ಟಂತಾಗುವುದು; ಹೀಗಾದರೆ ಪಾಂಡವರ ಜೀವನವೃತ್ತಾಂತವು ಮಾತ್ರ ಅಖಂಡವಾಗಿ ಉಳಿದುಕೊಳ್ಳುವುದು. ಆದುದರಿಂದಲೇ ನಾನು ಮೊದಲನೆಯ ಶ್ರೇಣಿಯ ಲಕ್ಷಣಗಳನ್ನುಳ್ಳವನ್ನೇ ಮೊದಲನೆಯ ಸ್ತರವೆಂದೂ, ಎರಡನೆಯ ಬಗೆಯ ಲಕ್ಷಣಗಳನ್ನುಳ್ಳವನ್ನು ಎರಡನೆಯ ಸ್ತರವೆಂದೂ ಗೊತ್ತುಮಾಡಿರುವೆನು. ಇವೆರಡು ಸ್ತರಕ್ಕೂ ಇನ್ನೊಂದು ದೊಡ್ಡ ಭೇದವುಂಟು. ಮೊದಲನೆಯ ಸ್ತರದಲ್ಲಿ ಕೃಷ್ಣನು ಈಶ್ವರಾವತಾರ ಅಥವಾ ವಿಷ್ಣುವಿನ ಅವತಾರವೆಂದು ಪರಿಚಿತನಾಗಿಲ್ಲ; ತಾನೇ ತಾನಾಗಿ ತನ್ನ ದೇವತ್ವವನ್ನು ಸ್ವೀಕರಿಸಿಲ್ಲ; ಮತ್ತು ಮನುಷ್ಯಶಕ್ತಿ ವಿನಾ ದೈವೀಶಕ್ತಿಯ ಮೂಲಕ ಆವ ಕೆಲಸವನ್ನೂ ಪೂರಯಿಸಿಲ್ಲ. ಎರಡನೆಯ ಸ್ತರದಲ್ಲಾದರೋ ಅವನು ಸ್ಪಷ್ಟವಾಗಿ ವಿಷ್ಣುವಿನ ಅಥವಾ ನಾರಾಯಣನ ಅವತಾರವೆಂದು ಪರಿಚಿತನು ಮತ್ತು ಅರ್ಚಿತನು. ತಾನೇ ತಾನಾಗಿ ತನ್ನ ಈಶ್ವರತ್ವವನ್ನು ಘೋಷಿಸುತ್ತಾನೆ; ಕವಿಯೂ ಕೂಡ ಅವನ ಈಶ್ವರತ್ವವನ್ನು ಪ್ರತಿಪನ್ನಮಾಡಲು ಬಹು ಯತ್ನಶೀಲನು.

ಇವಲ್ಲದೆ ಬೇರೆಯೊಂದು ಸ್ತರವು ಮಹಾಭಾರತದಲ್ಲಿ ಕಂಡು ಬರುತ್ತದೆ. ಇದನ್ನು ಮೂರನೆಯ ಸ್ತರವೆಂದು ಗೊತ್ತುಮಾಡಿದ್ದೇನೆ. ಈ ಮೂರನೆಯ ಸ್ತರವೂ ನೂರಾರು ವರ್ಷಗಳಿಂದಲೂ ಬೆರೆತುಕೊಂಡು ಬಂದಿದೆ. ಬೇಕು ಬೇಕಾದ ರಚನೆಗಳನ್ನು ಮಾಡಿ ಅದು ಚೆನ್ನಾಗಿದೆಯೆಂದು ಮನಸ್ಸಿಗೆ ತೋರಲು ಮಹಾಭಾರತಕ್ಕೆ ಸೇರಿಸಿಬಿಟ್ಟಿರುವರು. ಮಹಾಭಾರತವು ಐದನೆಯ ವೇದವೆಂದು ಹೇಳುವರಷ್ಟೆ. ಇದರಲ್ಲಿ ಒಂದು ಗೂಢಾಭಿಪ್ರಾಯವುಂಟು. ನಾಲ್ಕು ವೇದಗಳ ಓದಿಗೆ ಸ್ತ್ರೀಯರಿಗೂ ಶೂದ್ರರಿಗೂ ಅಧಿಕಾರವಿಲ್ಲವಷ್ಟೆ. ಆದರೆ ಈಗ ಹೊಸದಾಗಿ ಇಂಗ್ಲೀಷರ ಅಧಿಕಾರದಲ್ಲಿ ಜನಶಿಕ್ಷೆಯ Mass Education ವಿಷಯವಾಗಿ ತರ್ಕವಿತರ್ಕ ನಡೆಯುತ್ತಿರುವುದು ಮಾತ್ರವೆಂದಂದುಕೊಂಡಿರುವಿರೇನೋ; ಅಸಾಧಾರಣ ಪ್ರತಿಭಾಶಾಲಿಗಳಾದ ಭಾರತವರ್ಷದ ಪ್ರಾಚೀನ ಋಷಿಗಳು ವಿದ್ಯೆಕ್ಕೂ, ಜ್ಞಾನಕ್ಕೂ

ಸ್ತ್ರೀಯರಿಗೂ, ಇತರರಿಗೂ ತಮ್ಮಂತೆಯೆ ಸಮಾನಾಧಿಕಾರವಿರುವುದೆಂದು ಬೇಕಾದಹಾಗೆ ತಿಳಿದಿದ್ದರು. ಪಾಮರರು ಮೊದಲ್ಗೊಂಡು ಸಕಲರಿಗೂ ಶಿಕ್ಷೆಯಿಲ್ಲದೆ ಸಮಾಜವು ಉನ್ನತಿಯನ್ನು ಹೊಂದಲಾರದೆಂದು ಚೆನ್ನಾಗಿ ತಿಳಿದುಕೊಂಡಿದ್ದರು. ಆದರೆ ಅವರು ಈಗಿನ ಹಿಂದೂಗಳಂತೆ ತಮ್ಮ ಪ್ರತಿಭಾಶಾಲಿಗಳಾದ ಪೂರ್ವ ಪುರುಷರನ್ನು ತಿರಸ್ಕರಿಸುತ್ತಿರಲಿಲ್ಲ. ಅವರು "ಕಳೆದುಹೋದುದರೊಡನೆ ವರ್ತಮಾನದ ವಿಚ್ಛೇದಕ್ಕೆ" ಬಹು ಭಯಪಡು ತ್ತಿದ್ದರು. ಪೂರ್ವಪುರುಷರು ಸ್ತ್ರೀಯರಿಗೂ ಶೂದ್ರರಿಗೂ ವೇದಾಧಿಕಾರ ವಿಲ್ಲವೆಂದು ಹೇಳಿ ಹೋದರಷ್ಟೆ. ಒಳ್ಳೇದು, ಆ ಮಾತು ಹಾಗಿರಲಿ. ಸ್ತ್ರೀಯರೂ ಶೂದ್ರರೂ ಕಲಿಯಬೇಕಾದುದನ್ನು ವೇದವನ್ನು ಓದದೆಯೇ ಬೇರೊಂದೆಡೆಯಲ್ಲಿ ತೆಗೆದಿಟ್ಟರೆ ಆ ಮಾತನ್ನುಳಿಸಿದಂತೆಯೇ ಆಯಿತು. ಸರ್ವರಿಗೂ ಮನೋಹರವಾದುದರ ಸಂಗಡ ಈ ವಿಷಯವನ್ನು ಬೆರಸಿಟ್ಟಾಗ ಸಮಸ್ತರಲ್ಲಿಯೂ ಈ ಶಿಕ್ಷೆಯು ಆದರಣೀಯವಾಗುವುದು. ಈಗ ನಾವು ಓದುವ ಮಹಾಭಾರತದ ಮೂರನೆಯ ಸಂಪುಟವು ಲೋಕಶಿಕ್ಷೆಗಾಗಿ ಬ್ರಾಹ್ಮಣರು ಮಾಡಿಟ್ಟ ಅಕ್ಷಯ ಕೀರ್ತಿ.*

ಈ ಕಾರಣಗಳಿಂದ ಒಳ್ಳೆಯದು, ಕೆಟ್ಟದು ಮುಂತಾಗಿ ಅನೇಕ ಮಾತುಗಳು ಇದರಲ್ಲಿ ಬಂದು ಬಿದ್ದಿರುತ್ತವೆ. ಶಾಂತಿಪರ್ವ ಮತ್ತು ಅನು ಶಾಸನಿಕಪರ್ವದ ಅಧಿಕಾಂಶವೂ, ಭೀಷ್ಮಪರ್ವದ ಶ್ರೀಮದ್ಭಗವದ್ಗೀತಾ ಪರ್ವಾಧ್ಯಾಯವೂ, ವನಪರ್ವದ ಮಾರ್ಕಂಡೇಯ ಸಮಸ್ಯಾಪರ್ವಾ ಧ್ಯಾಯವೂ, ಉದ್ಯೋಗಪರ್ವದ ಪ್ರಜಾಗರಪರ್ವಾಧ್ಯಾಯವೂ ಈ ಮೂರನೆಯ ರೀತಿಯ ಸ್ತರವನ್ನು ಬೆರಸಿದಾಗ ಸೇರಿದುವೆಂದು ತೋರುವುದು. ಪಕ್ಷಾಂತರವಾಗಿ ಆದಿಪರ್ವದಲ್ಲಿ ಶಕುಂತಲೋಪಾಖ್ಯಾನಕ್ಕಿಂತ ಹಿಂದಿನ ಭಾಗಗಳೂ, ವನಪರ್ವದಲ್ಲಿನ ತೀರ್ಥಯಾತ್ರಾಪರ್ವಾಧ್ಯಾಯ ಮುಂತಾ ದವುಗಳೂ ಇಂಥ ಕೀಳ್ತರದ ಅಂಶಗಳು ಈ ಸ್ತರಕ್ಕೆ ಸೇರಿದವುಗಳು.

---

*ಸ್ತ್ರೀಶೂದ್ರದ್ವಿಜಬಂಧೂನಾಂ ತ್ರಯೀ ನಶ್ರುತಿಗೋಚರಾ ।
ಕರ್ಮಶ್ರೇಯಸಿ ಮೂಢಾನಾಂ ಶ್ರೇಯ ಏವಂ ಭವೇದಿಹ ॥
ಇತಿ ಭಾರತಮಾಖ್ಯಾನಂ ಕೃಪಯಾ ಮುನಿನಾ ಕೃತಂ ॥

ಶ್ರೀಮದ್ಭಾಗವತ: ೧ನೆಯ ಸ್ಕಂಧ, ೪ ಅ। ೨೫

ಈ ಮೂರು ಸ್ತರಗಳೊಳಗೆ ಮೊದಲನೆಯ ಸ್ತರವೇ ಪ್ರಾಚೀನ. ಆದುದರಿಂದಲೇ ಮೌಲಿಕವೆಂದು ಗ್ರಹಿಸತಕ್ಕುದು. ಇದರಲ್ಲಿಲ್ಲದುದು ಎರಡು ಮೂರನೆಯ ಸ್ತರಗಳಲ್ಲಿ ಕಾಣಬಂದರೂ ಕವಿಕಲ್ಪಿತ ಅನೈತಿಹಾಸಿಕ ವೃತ್ತಾಂತವೆಂದು ಪರಿತ್ಯಜಿಸುವುದು ಉಚಿತ.

ದ್ವಾದಶ ಪರಿಚ್ಛೇದ

ಅನೈಸರ್ಗಿಕವೂ, ಅತಿಪ್ರಕೃತಿಯೂ

ಇಷ್ಟು ದೂರ ಆಲೋಚಿಸಿದುದರಿಂದ ಕೃಷ್ಣವೃತ್ತಾಂತವಿರುವಂಥ ಗ್ರಂಥಗಳೆಲ್ಲಕ್ಕಿಂತಲೂ ಮೊದಲನೆಯದು ಮಹಾಭಾರತವೆಂದು ಸ್ಥೂಲವಾಗಿ ಗೊತ್ತುಮಾಡಿದಂತಾಯಿತು. ಆದರೆ ನಮ್ಮಲ್ಲಿ ಬಳಕೆಯಾಗಿರುವ ಮಹಾಭಾರತದ ಮುಕ್ಕಾಲು ಭಾಗವು ಹೊರಗಣದು. ಉಳಿದ ಕಾಲು ಭಾಗ ಮಾತ್ರವೇ ಮೌಲಿಕ. ಇದರಲ್ಲಿ ಕೊಂಚಮಟ್ಟಿಗೆ ಐತಿಹಾಸಿಕವಿದ್ದರೂ ಅದು ಎಷ್ಟುಮಟ್ಟಿಗೆ?

ಈ ಪ್ರಶ್ನೆಗೆ ಉತ್ತರವಾಗಿ "ಈ ವಿಚಾರದಿಂದ ಪ್ರಯೋಜನವಿಲ್ಲ. ಮಹಾಭಾರತದ ಯುದ್ಧದ ಕಾಲದಲ್ಲಿಯೇ ಇದ್ದ ವ್ಯಾಸರಿಂದ ಇದು ಬರೆಯಲ್ಪಟ್ಟುದು, ಆದುದರಿಂದ ಇದು ಸಮಸಾಮಯಿಕ ಆಖ್ಯಾನ (Contemporary History). ಇದರ ಮೌಲಿಕಾಂಶವನ್ನು ಅವಶ್ಯವಾಗಿ ನಂಬತಕ್ಕುದು" ಎಂದು ಅನೇಕರು ಹೇಳುವರು.

ಈಗ ಬಳಕೆಯಾಗಿರುವ ಮಹಾಭಾರತವನ್ನು ಸಮಸಾಮಯಿಕ ಗ್ರಂಥವೆನ್ನುವುದಕ್ಕಾಗುವುದಿಲ್ಲ. ಆದಿಯಲ್ಲಿ ಮಹಾಭಾರತವನ್ನು ವ್ಯಾಸರು ಮಾಡಿರಬಹುದು,* ಈಗ ಅದು ಎಲ್ಲಿದೆ? ಪ್ರಕ್ಷಿಪ್ತವನ್ನು ಒಂದು ಕಡೆಗೆ

---

*ವ್ಯಾಸರು 'ಜಯಮ್' ಎಂಬ ಗ್ರಂಥವನ್ನು ಬರೆದರು, ವಂಶ ವಿಷಯಗಳನ್ನು ಬೆರೆಯಿಸಿ ವೈಶಂಪಾಯನರು 'ಜಯ'ದ ಆಧಾರದ ಮೇಲೆ ಭಾರತವನ್ನು ಜನಮೇಜಯನ ಆಸ್ಥಾನದಲ್ಲಿ ಹೇಳಿದರು. ಇದನ್ನೆ ಲಂಬಿಸಿ ಉಗ್ರಶ್ರವರು ಮಹಾಭಾರತವನ್ನು ನೈಮಿಶಾರಣ್ಯ ನಿವಾಸಿಗಳಿಗೆ ಕೇಳಿಸಿದರು ಎಂಬುದಕ್ಕೆ ಆಧಾರಗಳಿವೆ. ಇದರ ಮೇಲೆಯೂ ಪ್ರಕ್ಷಿಪ್ತಗಳು ಗ್ರಂಥವನ್ನು ಲಂಬಿಸಿವೆ. *The Mahabharata—A Criticism,* Chapt. I, by C.V. Vaidya. (ರಾ. ವ್ಯಾ.)

ತೆಗೆದುಹಾಕಲು ಉಳಿಯುವುದೇ ವ್ಯಾಸರ ರಚನೆಯೆ? ಈಗ ಪ್ರಚಾರವಾಗಿರುವ ಮಹಾಭಾರತವನ್ನು ಉಗ್ರಶ್ರವನೆಂಬ ಶೌತಿಯು ನೈಮಿಶಾರಣ್ಯದ ಶೌನಕಾದಿ ಋಷಿಗಳಿಗೆ ಹೇಳುವ ಕಾಲದಲ್ಲಿ, ತಾನು ಜನಮೇಜಯನ ಸರ್ಪಯಾಗದ ಸಮಯದಲ್ಲಿ ವೈಶಂಪಾಯನನು ಹೇಳಿದ ಮಹಾಭಾರತವನ್ನು ಹೇಳುತಲಿದ್ದೇನೆ ಎಂದೂ, ಬೇರೆ ಕಡೆಯಲ್ಲಿ ಉಗ್ರಶ್ರವಶೌತಿಯು ವೈಶಂಪಾಯನ ಸಂಹಿತೆಯನ್ನು ತನ್ನ ತಂದೆಯಿಂದಲೇ ಕಲಿತಿದ್ದನೆಂದೂ ಹೇಳಿದೆ. ಈಗ ಮಹಾಭಾರತದಲ್ಲಿ ವ್ಯಾಸರ ಜನ್ಮಕಥನವಾದ ಮೇಲೆ ೬೩ನೆಯ ಅಧ್ಯಾಯದಲ್ಲಿ ವೈಶಂಪಾಯನರಿಂದಲೇ ಹೀಗೆ ಹೇಳಲ್ಪಟ್ಟಿರುವುದು:

> ವೇದಾನಧ್ಯಾಪಯಾಮಾಸ ಮಹಾಭಾರತಪಂಚಮಾನ್ ।
> ಸುಮಂತಂ ಜೈಮಿನಿಂ ಪೈಲಂ ಶುಕಂ ಚೈವ ಸ್ವಮಾತ್ಮಜಂ ॥
> ಪ್ರಭುರ್ವರಿಷ್ಠೋ ವರದೋ ವೈಶಂಪಾಯನಮೇವ ಚ ।
> ಸಂಹಿತಾಸ್ತೈಃ ಪೃಥಕ್ತ್ವೇನ ಭಾರತಸ್ಯ ಪ್ರಕಾಶಿತಾಃ ॥
>
> ಆದಿಪರ್ವ ॥ ೬೩ ಅ। ೯೫-೯೬ ॥

ವ್ಯಾಸರು ವೇದಗಳನ್ನೂ ಮತ್ತು ಪಂಚಮ ವೇದವಾದ ಮಹಾಭಾರತವನ್ನೂ ಸುಮಂತ, ಜೈಮಿನಿ, ಪೈಲ, ತಮ್ಮ ಮಗ ಶುಕ ಮತ್ತು ವೈಶಂಪಾಯನರಿಗೆ ಕಲಿಸಿದರು. ಇವರು ಭಾರತ ಸಂಹಿತೆಯನ್ನು ಬೇರೆ ಬೇರೆಯಾಗಿ ಹರಡಿದರು.*

ಹಾಗಾದರೆ ರೂಢಿಯಲ್ಲಿರುವ ಮಹಾಭಾರತವು ವೈಶಂಪಾಯನನಿಂದ ಪ್ರಣೀತವಾದ ಭಾರತ ಸಂಹಿತೆಯಾಗಿರಬೇಕು. ಇದು ಜನಮೇಜಯನ ಸಭೆಯಲ್ಲಿ ಮೊಟ್ಟಮೊದಲು ಪ್ರಚಾರವಾಯಿತು. ಜನಮೇಜಯನು ಪಾಂಡವರ ಮೊಮ್ಮಗ.

---

*ಜೈಮಿನಿ ಭಾರತದ ಹೆಸರನ್ನು (ಕನ್ನಡದಲ್ಲಿ ಪ್ರಖ್ಯಾತವಾದ ಲಕ್ಷ್ಮೀಶನ ಜೈಮಿನಿ ಭಾರತವು ಇದರ ತರ್ಜುಮೆಯೆ?) ಮಟ್ಟಿಗೆ ಕೇಳಿರುವೆವು. ಇದರ ಅಶ್ವಮೇಧ ಪರ್ವವನ್ನು ವೇಬರು ಸಾಹೇಬರು ನೋಡಿರುವರು. ಮಿಕ್ಕ ಭಾಗ ಲೋಪವಾಗಿರುವುದು.

ಆಶ್ವಲಾಯನ ಗೃಹ್ಯಸೂತ್ರದಲ್ಲಿ:—

"ಸುಮಂತ--ಜೈಮಿನಿ—ವೈಶಂಪಾಯನ—ಪೈಲ ಸೂತ್ರ-ಭಾರತ-ಮಹಾಭಾರತ ಧರ್ಮಾಚಾರ್ಯಾಃ" ಎಂದಿರುವುದು. ಹೀಗಾದರೆ ಸುಮಂತನು ಸೂತ್ರಕಾರ, ಜೈಮಿನಿಯು ಭಾರತಕಾರ, ವೈಶಂಪಾಯನನು ಮಹಾಭಾರತಕಾರ, ಪೈಲನು ಧರ್ಮಶಾಸ್ತ್ರಕಾರ.

ಮಹಾಭಾರತವು ವೈಶಂಪಾಯನನಿಂದಲೇ ಆಗಿರಲಿ ಇದು ನಮ್ಮಲ್ಲಿಗೆ ಬಂದಿಲ್ಲ. ಉಗ್ರಶ್ರವನು ವೈಶಂಪಾಯನನಿಂದ ಇದನ್ನು ಪಡೆದನೆಂದು ಹೇಳುತ್ತಾನೆ. ಅಥವಾ ತನ್ನ ತಂದೆಯು ವೈಶಂಪಾಯನನಿಂದ ಪಡೆಯಲು ತಂದೆಯಿಂದ ತಾನು ಹೊಂದಿದನು. ಹೀಗೆ ಉಗ್ರಶ್ರವನು ಹೇಳಿದುದನ್ನು ನಾವು ಮತ್ತೊಬ್ಬನಿಂದ ಕೇಳುತ್ತಲಿದ್ದೇವೆ. ಈ ಮತ್ತೊಬ್ಬನೇ ಈಗಿನ ಮಹಾಭಾರತದ ಮೊದಲನೆಯ ಅಧ್ಯಾಯುವನ್ನು ಮಾಡಿದವನು. ಅಲ್ಲದೆ ಈತನೇ ಮಹಾಭಾರತದ ಅನೇಕ ಸ್ಥಳಗಳಲ್ಲಿ ಮಾತನಾಡುವನು.

ನೈಮಿಶಾರಣ್ಯದಲ್ಲಿ ಶೌನಕಾದಿ ಋಷಿಗಳು ಇದ್ದರು. ಅಲ್ಲಿಗೆ ಉಗ್ರಶ್ರವನು ಬಂದನು. ಆಗ ಋಷಿಗಳೊಡನೆ ಉಗ್ರಶ್ರವನಿಗೆ ಈ ಭಾರತ ಸಂಬಂಧವಾಗಿಯೂ, ಇನ್ನೂ ಇತರ ವಿಷಯುಗಳ ಸಂಬಂಧವಾಗಿಯೂ ಮಾತುಕಥೆಗಳು ನಡೆದವು. ಅವುಗಳನ್ನೂ ಈತನೇ ಹೇಳುತಲಿದಾನೆ.

ಹೀಗಿರಲು ಇಷ್ಟು ಸ್ಥಿರವಾಯಿತು :—

(೧) ಈಗಿರುವ ಮಹಾಭಾರತವು ಮೊದಲಿನ ವ್ಯಾಸರಿಂದಾದ ವೈಯಾಸಕೀ ಸಂಹಿತೆಯಲ್ಲ.

(೨) ಇದು ವೈಶಂಪಾಯನ ಸಂಹಿತೆಯೆಂದು ಪ್ರಚಾರವಾದುದು. ಆದರೆ ಈಗಿರುವುದು ವೈಶಂಪಾಯನ ಸಂಹಿತೆಯೋ ಅಲ್ಲವೋ ಹೇಳುವುದಕ್ಕಾಗುವುದಿಲ್ಲ.

(೩) ಇದರಲ್ಲೂ ಮೂರುಪಾಲು ಹೊರಗಿನದು.

ಆದುದರಿಂದ ಕೃಷ್ಣ ಚರಿತ್ರೆಯನ್ನು ಮಹಾಭಾರತದಿಂದ ಕಟ್ಟಬೇಕಾದರೆ ಬಲು ಸಾವಧಾನತೆಯಿಂದ ಗ್ರಂಥವ್ಯವಹಾರವನ್ನು ಮಾಡಬೇಕಾದುದು ಆವಶ್ಯಕ.

ಈ ಸಾವಧಾನತೆಗೋಸ್ಕರವೇ ನಾವು ಅತಿಪ್ರಕೃತಿಯನ್ನೂ, ಅನೈಸರ್ಗಿಕವನ್ನೂ ನಂಬಲಾರೆವು.

ಅನೈಸರ್ಗಿಕವೆನ್ನುವುದನ್ನು ನಿಜವಾಗಿಯೂ ಸುಳ್ಳೆಂದು ನಾವೆನ್ನುವುದಿಲ್ಲ. ನಾವರಿಯದ ಅನೇಕ ನೈಸರ್ಗಿಕ ನಿಯಮಗಳುಂಟೆಂಬುದನ್ನು ಚೆನ್ನಾಗಿ ಬಲ್ಲೆವು. ಗಡಿಯಾರವನ್ನೇ ಆಗಲಿ, ತಂತೀ ಸಮಾಚಾರದ ಸಂಗತಿಯನ್ನಾಗಲಿ ಕೇಳಲು ಇದು ಅನೈಸರ್ಗಿಕವೆಂದೊಬ್ಬ ಕಾಡು ಮನುಷ್ಯನು ತಿಳಿದುಕೊಳ್ಳಬಹುದು. ನಾವು ಕೂಡಾ ಇದರಂತೆಯೇ

ಅನೇಕಾಂಶಗಳನ್ನು ಭಾವಿಸುವೆವು. ಇಂಥಾ ಅಜ್ಞತೆಯನ್ನು ತಿಳಿದೂ ಕೂಡ ಮುಖ್ಯ ರುಜುವಾತುಗಳಿಲ್ಲದೆ ಅನೈಸರ್ಗಿಕ ಘಟನೆ ಯಾವುದನ್ನೂ ನೀವು ನಂಬಲಾಗದು. ತಮ್ಮ ತಿಳಿವಳಿಕೆಗೆ ಮೀರಿದ ದೇವರ ನಿಯಮ ವಾವುದಕ್ಕೂ ಒಳಗಾಗದುವನ್ನು ಪ್ರಮಾಣವಿಲ್ಲದೆ ಸ್ವೀಕರಿಸುವುದು ಆರ ಕರ್ತವ್ಯವೂ ಅಲ್ಲ. ಮಾವಿನ ಮರದಲ್ಲಿ ತೆಂಗಿನಕಾಯಿ ಬಿಟ್ಟುದನ್ನು ನೋಡಿದನೆಂದರೆ ನಂಬುವುದು ನಮ್ಮ ಕರ್ತವ್ಯವಲ್ಲ. ಆಗ ಮಾವಿನ ಮರದಲ್ಲಿ ಬಿಟ್ಟ ತೆಂಗಿನಕಾಯನ್ನು ಮಾವಿನ ಮರದಲ್ಲಿ ತೋರಿಸಿಯೇ ಆಗಲಿ ಅಥವಾ ಮಾವಿನ ಮರದಲ್ಲಿ ತೆಂಗಿನಕಾಯಿ ಬಿಡುವ ರೀತಿಯನ್ನು ತಿಳಿಯ ಹೇಳಿಯೇ ಆಗಲಿ ನಮ್ಮ ಮನಸ್ಸಿಗೆ ಮುಂದಟ್ಟು ಮಾಡಿಕೊಟ್ಟ ಹೊರತು ಈ ಮಾತನ್ನು ನಂಬಲಾರೆವೆಂದು ಹೇಳುವುದು ನ್ಯಾಯಸಮ್ಮತವೇ. ಮಾವಿನ ಮರದಲ್ಲಿ ತೆಂಗಿನಕಾಯಿ ಬಿಟ್ಟುದನ್ನು ನಾನು ಕಂಡಿಲ್ಲ ಕೇಳಿ ದೆನು ಎಂದರೆ ಅವಿಶ್ವಾಸಕ್ಕೆ ಕಾರಣವು ಇನ್ನಷ್ಟು ಹೆಚ್ಚಿದಂತಾಯಿತು. ಇಲ್ಲಿ ಪ್ರತ್ಯಕ್ಷ ಪ್ರಮಾಣವೂ ಇಲ್ಲವಾಯಿತು. ಮಹಾಭಾರತದಲ್ಲಿಯೂ ಹೀಗೆಯೇ ಅತಿ ಪ್ರಕೃತಿಗೆ ಪ್ರತ್ಯಕ್ಷ ಪ್ರಮಾಣ ಕೂಡ ಇಲ್ಲ!

ಪ್ರತ್ಯಕ್ಷ ಪ್ರಮಾಣ ಸಿಕ್ಕಿದಾಗ್ಯೂ ಥಟ್ಟನೆ ನಂಬುವುದಕ್ಕಾದೀತೆ! ಕಣ್ಣಾರಕಂಡರೂ ಥಟ್ಟನೆ ನಂಬಲಾರೆವು. ಏಕೆಂದರೆ ಜ್ಞಾನೇಂದ್ರಿಯವು ಮೋಸಕ್ಕೆ ಸಿಲುಕಬಹುದು. ಪ್ರಕೃತಿಯ ನಿಯಮಗಳನ್ನು ಮೀರುವುದ ಕ್ಕಾಗುವುದಿಲ್ಲ. ಅತಿ ಪ್ರಕೃತಿಯು ಪ್ರಕೃತಿ ನಿಯಮಕ್ಕೆ ಒಳಗಾಗಿರು ವುದನ್ನು ತೋರಿಸಿದ ಹೊರತು ಅದನ್ನು ನಂಬುವುದಕ್ಕೆ ಆಗದು. ಕುರುಬನಿಗೆ ಗಡಿಯಾರವನ್ನೋ ಅಥವಾ ಎಲೆಕ್ಟ್ರಿಕ್ ತಂತಿಯನ್ನೋ ತಿಳಿಯ ಹೇಳಲು ಅವನು ಇದನ್ನು ಅನೈಸರ್ಗಿಕ ವ್ಯಾಪಾರವೆಂದು ನಂಬುವುದಿಲ್ಲ.

ಇದನ್ನು ಹೇಳುವುದವಶ್ಯ. ಶ್ರೀಕೃಷ್ಣನು ಈಶ್ವರಾವತಾರವೆಂದು ನಂಬಲು (ನಾನು ಹಾಗೆ ನಂಬಿರಬಹುದು), ಅವನ ಇಷ್ಟದಿಂದ ಅನೈಸ ರ್ಗಿಕ ವ್ಯಾಪಾರವಾವುದೂ ಉಂಟಾಗದೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಶ್ರೀಕೃಷ್ಣನು ಈಶ್ವರಾವತಾರವೆಂದೆಲ್ಲಿಯವರೆಗೂ ಪ್ರತಿಪನ್ನಮಾಡು ವುದಕ್ಕಾಗುವುದಿಲ್ಲವೋ, ಎಲ್ಲಿಯವರೆಗೂ ಅವನು ಮನುಷ್ಯ ದೇಹವನ್ನು ಧರಿಸಿ ಈಶ್ವರಶಕ್ತಿಯ ಮೂಲಕ ಅವನಿಗೆ ಬೇಕಾದ ಕಾರ್ಯಗಳನ್ನು

ಸಂಪಾದನೆ ಮಾಡುತಿದ್ದನೆಂದು ಹೇಳುವುದಕ್ಕಾಗುವುದಿಲ್ಲವೋ ಅಲ್ಲಿಯವರೆಗೂ ಅನೈಸರ್ಗಿಕ ಘಟನೆಗಳು ಅವನ ಇಚ್ಛಾಪೂರ್ವಕವಾಗಿ ಆದವುಗಳೆಂದು ತಿಳಿಸುವುದಕ್ಕೂ ನಂಬುವುದಕ್ಕೂ ಆಗುವುದಿಲ್ಲ. ಇಷ್ಟು ಮಾತ್ರವಲ್ಲ. ಕೃಷ್ಣನು ಈಶ್ವರಾವತಾರನು, ಅವನ ಇಚ್ಛಾಪೂರ್ವಕವಾಗಿ ಅತಿ ಪ್ರಕೃತಿಯು ಉಂಟಾಗಬಹುದು ಎಂದೊಪ್ಪಿಕೊಂಡರೂ ತೊಂದರೆ ತಪ್ಪುವುದಿಲ್ಲ. ಅವನಿಂದಾದುದು ಯಾವುದೋ ಅದನ್ನೇನೋ ನಂಬಿದರೂ ಅವನಿಂದ ಅಲ್ಲದ ಅನೈಸರ್ಗಿಕ ವ್ಯಾಪಾರಗಳನ್ನು ಏಕೆ ನಂಬಲಿ? ಸಾಲ್ವನೆಂಬ ಅಸುರನು ಅಂತರಿಕ್ಷದಲ್ಲಿ ಸೌಭನಗರವನ್ನು ಕಟ್ಟಿ ಯುದ್ಧಮಾಡಿದನು. ಬಾಣನಿಗೆ ಸಹಸ್ರ ಬಾಹುಗಳಿದ್ದುವು. ಅಶ್ವತ್ಥಾಮನು ಬ್ರಹ್ಮಾಸ್ತ್ರವನ್ನು ಬಿಡಲು ಅದು ಬ್ರಹ್ಮಾಂಡವನ್ನೇ ಸುಡತೊಡಗಿತು. ಅಶ್ವತ್ಥಾಮನ ಆಜ್ಞೆಯಿಂದೀ ಬ್ರಹ್ಮಾಸ್ತ್ರವು ಉತ್ತರೆಯ ಬಸುರಿನಲ್ಲಿದ್ದ ಮಗುವನ್ನು ಕೊಂದುಬಿಟ್ಟಿತು. ಇದನ್ನೆಲ್ಲಾ ನಂಬಲೇಬೇಕೆಂಬುದೇಕೆ?

ಕೃಷ್ಣನು ತಾನಾಗಿಯೇ ಮಾಡಿದ ಅನೈಸರ್ಗಿಕ ಕರ್ಮಗಳನ್ನು ನಾವು—ಅವನು ಈಶ್ವರಾವತಾರನೆಂದು ಒಪ್ಪಿದರೂ—ನಂಬದಿರಲು ಕಾರಣವುಂಟು. ಅವನು ಮಾನವ ಶರೀರವನ್ನು ಹೊಂದಿ ಅನೈಸರ್ಗಿಕ ಕರ್ಮವನ್ನು ಮಾಡಿರಲು ಅದು ಅವನ ದೈವೀ ಅಥವಾ ಈಶ್ವರ ಶಕ್ತಿಯಿಂದುಂಟಾದುದು. ಆದರೆ ದೈವೀ ಅಥವಾ ಈಶ್ವರ ಶಕ್ತಿಯಿಂದ ಕಾರ್ಯ ಸಂಪಾದನೆ ಮಾಡುವುದಕ್ಕೆ ಮನುಷ್ಯನಾಗಿ ಹುಟ್ಟಲೇಕೆ? ಸರ್ವಕರ್ತನೂ, ಸರ್ವಶಕ್ತಿಮಾನನೂ ಇಚ್ಛಾಮಯನೂ ಆರೋ, ಆರ ಇಷ್ಟದಿಂದ ಸಮಸ್ತ ಪ್ರಾಣಿಗಳ ಸೃಷ್ಟಿಸ್ಥಿತಿಲಯಗಳೂ ಆಗುವುವೋ ಅವನು ಮನುಷ್ಯಾವತಾರವನ್ನೆತ್ತಿಯೂ ಕೇವಲ ಅವನ ಈಶ್ವರ ಶಕ್ತಿಯ ಪ್ರಯೋಗದಿಂದಲೇ ರಾಕ್ಷಸರನ್ನೂ ಮನುಷ್ಯರನ್ನೂ ಕೊಲ್ಲುವದೋ ಅಥವಾ ಬೇಕಾದ ಬೇರೆ ಮತ್ತಾವ ಕಾರ್ಯಗಳನ್ನಾದರೂ ಮಾಡುವುದೋ ಆದರೆ ಮನುಷ್ಯ ಶರೀರವನ್ನೆತ್ತಿದುದರಿಂದ ಪ್ರಯೋಜನವಿರದು. ಇಚ್ಛಾಮಯನು ಇಚ್ಛಾಪೂರ್ವಕವಾಗಿ ಮನುಷ್ಯ ಶರೀರವನ್ನು ಧರಿಸುವನು. ಹಾಗಾದರೆ ದೈವೀ ಅಥವಾ ಈಶ್ವರ ಶಕ್ತಿಯ ಪ್ರಯೋಗವು ಅವನ ಉದ್ದೇಶ ಅಥವಾ ಅಭಿಪ್ರೇತವಾಗಲಾರದು.

ಅಲ್ಲವಾದರೆ ಶರೀರ ಧಾರಣೆಯಿಂದ ಪ್ರಯೋಜನವೇನು ? ಜಗದೀಶ್ವರನೂ ಶರೀರ ಧಾರಣೆಮಾಡಿದಲ್ಲದೆ ಸಿದ್ಧವಾಗದ ಕೆಲಸವಾವುದು ?

ಇದಕ್ಕುತ್ತರವನ್ನು ಕೊಡುವುದಕ್ಕೆ ಮುಂಚೆ ಜಗದೀಶ್ವರನು ಮಾನವ ಶರೀರವನ್ನು ಧರಿಸುವುದು ಸಂಭವವೇ ಎಂಬಾಪತ್ತಿಯೊದಗುವುದು. ಮೊದಲಿದನ್ನು ಗೊತ್ತುಮಾಡೋಣ.

ತ್ರಯೋದಶ ಪರಿಚ್ಛೇದ

ಈಶ್ವರನು ಪೃಥ್ವಿಯಲ್ಲವತರಿಸಬಹುದೇ ?

ವಸ್ತುತಃ ಕೃಷ್ಣಚರಿತ್ರೆಯನ್ನಾಲೋಚಿಸುವುದಕ್ಕಿಂತ ಮುಂಚೆಯೇ ಈಶ್ವರನು ಪೃಥ್ವಿಯಲ್ಲವತರಿಸಬಹುದೇ ? ಎಂಬ ಪ್ರಶ್ನೆಗೆ ಉತ್ತರವನ್ನು ಹಲವರಿಗೆ ಕೊಡಲೇಬೇಕಾಗುವುದು. ಕೃಷ್ಣನು ಈಶ್ವರಾವತಾರವೆಂಬುದು ಈ ದೇಶದ ಜನಗಳ ನಂಬಿಕೆಯಾದರೂ ಈ ಮಾತು ಅತಿಶಯವಾಗಿ ಅವೈಜ್ಞಾನಿಕವಾದುದೆಂದು ಶಿಕ್ಷಿತರು ಹೇಳುವರು. ನಮ್ಮಗಳ ಕಿರಸ್ತಾನ್ ಉಪದೇಶಕರ ಮತದಲ್ಲಿ ಇದು ಬಲು ಹಾಸ್ಯಾಸ್ಪದ.

ಈಗ ಇಲ್ಲೆರಡು ಪ್ರಶ್ನೆಗಳು ಹುಟ್ಟುವುವು:—

(೧) ಈಶ್ವರನು ಪೃಥ್ವಿಯಲ್ಲವತರಿಸುವುದು ಸಂಭವವೆ, ಅಲ್ಲವೆ ?

(೨) ಸಂಭವವಾದರೆ ಕೃಷ್ಣನು ಈಶ್ವರಾವತಾರವೆ ?

ಈ ಎರಡನೆಯ ಪ್ರಶ್ನೆಗೆ ಉತ್ತರವನ್ನು ನಾನು ಹೇಳೆನು. ಮೊದಲನೆಯ ಪ್ರಶ್ನೆಗೆ ಸ್ವಲ್ಪಮಟ್ಟಿಗೆ ಉತ್ತರವನ್ನು ಹೇಳಲು ಪ್ರಯತ್ನಿಸುವೆನು.

ನಮ್ಮ ಕಿರಸ್ತಾನ್ ಗುರುಗಳೊಡನೆ ಈ ಮೂಲವಿಚಾರದಲ್ಲಿ ಮತಭೇದಕ್ಕೆ ಮರ್ಯಾದೆಯಿಲ್ಲ ಇದು ನಮ್ಮ ಸೌಭಾಗ್ಯವೇ ! ಅವರೂ ಈಶ್ವರನವತರಿಸುವುದುಂಟೆಂದು ನಂಬಲೇ ಬೇಕು. ಇಲ್ಲವಾದರೆ ಏಸುವು ಬಾಳನು. ನಮ್ಮ ಮುಖ್ಯವಿವಾದವು ದಾರ್ಶನಿಕರೊಡನೆ ವೈಜ್ಞಾನಿಕರವಾದ.

ಇವರಲ್ಲಿ ಅನೇಕರು ಈಶ್ವರನುಂಟೆಂಬುದಕ್ಕೇ ಪ್ರಮಾಣಗಳು ಸಿಕ್ಕದಿರಲು ಅವನ ಅವತಾರವಿನ್ನೆಲ್ಲಿಯದೆಂದು ಮೊತ್ತಮೊದಲೇ ಅಡ್ಡಿಯನ್ನು

ಹಾಕುವರು. ಈಶ್ವರನ ಇರುವಿಕೆಯನ್ನೇ ನಂಬದವರೊಡನೆ ವಿಚಾರವಾವುದನ್ನೂ ಮಾಡೆವು. ಅವರನ್ನು ಹೀಯಾಳಿಸಿ ವಿಚಾರಮಾಡಲೊಲ್ಲೆವೆಂದಲ್ಲ. ಈ ವಿಚಾರದಿಂದ ಯಾವ ಪಕ್ಷಕ್ಕೂ ಉಪಕಾರವಿಲ್ಲ. ಇದರಿಂದ ಅವರು ನಮ್ಮನ್ನು ಹೀಯಾಳಿಸಿದರೂ ನಮಗಾವ ತೊಂದರೆಯೂ ಇರದು.

ಈಶ್ವರನುಂಟೆಂದು ನಂಬುವವರನೇಕರುಂಟಷ್ಟೆ ? ಅವರೆನ್ನುವುದೇನೆಂದರೆ—ಈಶ್ವರನು ನಿರ್ಗುಣನು. ಸಗುಣನಾಗಿದ್ದರೆ ತಾನೇ ಅವತಾರ; ಆದುದರಿಂದ ಅವನವತರಿಸುವುದೆಂದರೇನು ?

ಈ ಆಪತ್ತಿಯನ್ನೊಡ್ಡುವವರಿಗೆ ನಾವು ನೇರವಾದುತ್ತರವನ್ನು ಕೊಡಲೇಬೇಕು. ನಿರ್ಗುಣಬ್ರಹ್ಮನೆಂದರೇನೋ ನನಗೇ ತಿಳಿಯದು. ಇನ್ನೀ ತೊಂದರೆಯನ್ನು ನಾನು ಓರೆಮಾಡುವುದೆಂತು? ಅನೇಕ ಪಂಡಿತರು ಈಶ್ವರನು ನಿರ್ಗುಣನೆಂದೇ ಒಪ್ಪುವರು. ನಾನು ಪಂಡಿತನೂ ಅಲ್ಲ; ಬರೀ ಭಾವುಕನೂ ಅಲ್ಲ. ಈ ಭಾವುಕ ಪಂಡಿತರೀರ್ವರಿಗೂ ಕೂಡ ನಿರ್ಗುಣಬ್ರಹ್ಮನೆಂದರೇನೆಂಬುದು ನನ್ನಂತೆಯೇ ತಿಳಿಯದೆಂದು ನಾನು ನಂಬಿರುವೆನು. ನಿರ್ಗುಣ ಬ್ರಹ್ಮನನ್ನು ತಿಳಿಯಬಹುದಾದಂಥ ಚಿತ್ತಶಕ್ತಿಯು ಮನುಷ್ಯನಿಗಿಲ್ಲ. ಈಶ್ವರನು ನಿರ್ಗುಣನಾಗಬಹುದು. ನಿರ್ಗುಣವೇನೆಂಬುದನ್ನು ಮಾತ್ರ ತಿಳಿಯಲು ನಮ್ಮಿಂದಾಗದು. ಬಾಯಲ್ಲಿ ಹೇಳಬಹುದು. ಅಥವಾ ಈ ಮಾತಿನ ಮೇಲೆ ದರ್ಶನಶಾಸ್ತ್ರವೊಂದನ್ನು ತಯಾರಿಸಿ ಇಡಬಹುದು.

*ಆದರೆ ಮಾತಿನಲ್ಲಿ ಹೇಳಿದ್ದು ಮನಸ್ಸಿಗೆ ತಿಳಿಯಿತೆಂದು ಗೊತ್ತು ಮಾಡುವುದಕ್ಕೆ ಆಗುವುದಿಲ್ಲ. "ನಾಲ್ಕುಮೂಲೆಯ ಗುಂಡು" ಎಂದರೆ ನಮ್ಮ ಕಿವಿಗಳೇನೋ ಹರಿದುಹೋಗುವುದಿಲ್ಲ. ಆದರೆ "ನಾಲ್ಕು ಮೂಲೆಯ ಗುಂಡೆಂದರೇನೋ" ನಮ್ಮ ಮನಸ್ಸಿಗೆ ಬೇರೇ ಹತ್ತುವುದಿಲ್ಲ. ಆದುದರಿಂದಲೇ 'ಹರ್ಬರ್ಟ್ ಸ್ಪೆನ್ಸರು' ಇಷ್ಟುಕಾಲ ಕಳೆದಮೇಲೆ ನಿರ್ಗುಣಬ್ರಹ್ಮನನ್ನು ಬಿಟ್ಟು ಸಗುಣಗಳಿಗಿಂತ ಹೆಚ್ಚಿನ ಸಗುಣಬ್ರಹ್ಮನಿಗೆ "(Something higher than Personality)" ಬಂದಿಳಿದನು. ಸರಿಯೆ, ಬನ್ನಿ, ನಾವೂ ಈ ನಿರ್ಗುಣಬ್ರಹ್ಮನನ್ನು ಬಿಟ್ಟುಬಿಡೋಣ. ಈಶ್ವರನು

*"Our conception of the Deity is then bounded by the conditions which bound all human knowledge and therefore we cannot represent the Deity as He is, but as He appears to us."—*Mansel's Metaphysics*, p.384.

ನಿರ್ಗುಣನೆಂದರೆ—ಸೃಷ್ಟಿಕರ್ತನೂ, ವಿಧಾತನೂ, ಪಾಲಕನೂ, ತ್ರಾತನೂ ಇವರಾರೂ ಸಿಕ್ಕುವುದಿಲ್ಲ. ಈ ಬಗೆಯ ಶ್ಲೋಕಿನಿಂದೇನು ?

ಸಗುಣಬ್ರಹ್ಮನನ್ನೊಪ್ಪುವರೂ ಈಶ್ವರನು ಪೃಥ್ವಿಗೆ ಇಳಿದಿರಬಹುದೆಂಬುದಕ್ಕೆ ಅನೇಕ ಆಪತ್ತಿಗಳನ್ನೊಡ್ಡುವರು. ಈಶ್ವರನು ಸಗುಣನಾದರೂ ನಿರಾಕಾರನು, ಇಂಥವನು ಆಕಾರವನ್ನು ಧರಿಸುವುದು ಹೇಗೆಂಬುದೊಂದು ತೊಂದರೆ.

ಇಚ್ಛಾಮಯನಾದ, ಸರ್ವಶಕ್ತಿವಂತನಾದ ದೇವರು ನಿರಾಕಾರನಾದರೂ, ಬೇಕೆಂದರೆ ಆಕಾರವನ್ನು ಧರಿಸಲಾರನೆ ? ಅವನ ಸರ್ವಶಕ್ತಿಮತ್ತತೆಗೆ ಈ ಎಲ್ಲೆಯುನ್ನು ಕಟ್ಟುವುದೇಕೆ ? ಅವನನ್ನು ಸರ್ವಶಕ್ತನೆಂದು ಹೇಳಲೊಲ್ಲಿರೋ ? ಈ ಜಡಜಗತ್ತಿಗೆ ಆಕಾರವನ್ನು ಕೊಟ್ಟಿರುವಾತನು ತಾನೇ ಆಕಾರವನ್ನು ಧರಿಸಲು ಹರಿಯದವನೆ ?

ಈ ಆಪತ್ತಿಯನ್ನೊಡ್ಡದವರು ಸರ್ವಶಕ್ತನಾದವನು ತನ್ನ ಜಗತ್ತಿನ ಶಾಸನಕ್ಕಾಗಿ, ಜಗತ್ತಿನ ಹಿತಕ್ಕಾಗಿ, ಮನುಷ್ಯ ಕಳೇಬರವನ್ನು ಧಾರಣೆ ಮಾಡುವುದೇಕೆಂದು ಕೇಳಬಹುದು. ಇಚ್ಛಾಮಾತ್ರದಿಂದ ಕೋಟಿ ಕೋಟಿ ಪ್ರಪಂಚಗಳನ್ನು ಹುಟ್ಟಿಸಿ ಹಾಳುಮಾಡಬಲ್ಲವನು ರಾವಣ, ಕುಂಭಕರ್ಣ, ಕಂಸ, ಶಿಶುಪಾಲರ ವಧೆಗಾಗಿ ತಾನಾಗಿಯೇ ಜನ್ಮವೆತ್ತಬೇಕು, ಮಗುವಾಗಿ ತಾಯ ಮೊಲೆಯುನ್ನುಣಬೇಕು, ಕ ಖ ಗ ಘ.ಗಳನ್ನು ತಿದ್ದಬೇಕು, ಶಾಸ್ತ್ರಗಳನ್ನೊರಲಬೇಕು, ಬಳಿಕ ಬಲು ಕಾಲ ಮಾನವಜೀವನದ ಕೊನೆ ಮೊದಲಿಲ್ಲದ ದುಃಖಗಳನ್ನುಂಡು, ಕಡೆಗೆ ಕತ್ತೀ ಹಿಡಿದು, ಪೆಟ್ಟುತಿಂದು, ಕೆಲವುವೇಳೆ ಸೋತು, ಬಹು ಆಯಾಸದಿಂದ ದುರಾತ್ಮರನ್ನು ಕೊಲ್ಲಬೇಕು—ಎಂಬಿವೆಲ್ಲಾ ನಂಬಿಕೆಗೆ ಯೋಗ್ಯವಲ್ಲದವುಗಳೆನ್ನಬಹುದು.

ಈ ಬಗೆಯ ತೊಂದರೆಯನ್ನೊಡ್ಡುವರ ಮನಸ್ಸಿನಲ್ಲಿ ಈ ಕೆಳಗೆ ಬರೆದಿರುವಂತಹ ಭಾವವು ಕಂಡುಬರುವುದು. ಬಸಿರಲ್ಲಿರುವಿಕೆ, ಹುಟ್ಟುವಿಕೆ, ಸ್ತನ್ಯಪಾನ, ಬಾಲಶಿಕ್ಷೆ, ಜಯ, ಪರಾಜಯ, ಮುಪ್ಪು, ಮರಣ ಮುಂತಾದ ಮನುಷ್ಯಜನ್ಮದ ಸಮಸ್ತ ದುಃಖಗಳನ್ನೂ ನಾವೆಲ್ಲ ಹೇಗೆ ಕಡುಕಷ್ಟವೆಂದು ತಿಳಿಯುವೆವೋ ಹಾಗೆಯೇ ಈಶ್ವರನೂ ಅನುಭವಿಸುವನೆಂದೇ ನಮ್ಮ ಸ್ಥೂಲ ಬುದ್ಧಿಯಿಂದೆಣಿಸಿ ಅವನು ಸುಖದುಃಖಾದಿಗಳಿಗೆ ಮೀರಿದವನೆಂಬ ಸಣ್ಣ

ವಿಷಯವನ್ನು ಎಣಿಸದಂತಿದೆ. ಅವನಿಗೆ ದುಃಖವೆಂದರೇನು, ಕಷ್ಟವೆಂದ ರೇನು? ಜಗತ್ತನ್ನು ಹುಟ್ಟಿಸುವುದೂ, ಪಾಲಿಸುವುದೂ, ಹಾಳುಮಾಡು ವುದೂ ಹೇಗೆ ಅವನಿಗೆ ಲೀಲೆಯೋ (Sport) ಇವೆಲ್ಲಾ ಹಾಗೆಯೇ ಅವನ ಲೀಲೆ ಮಾತ್ರವಾಗಬಹುದಷ್ಟೆ? ಕ್ಷಣಕಾಲದಲ್ಲಿ ಇಚ್ಛಾಮಾತ್ರ ದಿಂದಲೇ ಸಂಹಾರಮಾಡಬಲ್ಲವನು, ಕೆಲವರ ಸಂಹಾರಕ್ಕೋಸ್ಕರವೇ ಮನುಷ್ಯಜನ್ಮದ ಪರಿಮಿತಿಯ ಕಾಲದಲ್ಲಿ ವ್ಯಾಪಿಸಿ ಆಯಾಸಪಡಬೇಕಾದು ದೇಕೆಂದು ಕೇಳುವಿರೋ? ಅನಂತಕಾಲವೂ ಕೂಡ ಯಾರಿಗೆ ರೆಪ್ಪೆಬಡಿಯು ವಷ್ಟರದೋ ಅವನಿಗೆ ಮುಹೂರ್ತಕ್ಕೂ ಮನುಷ್ಯಜನ್ಮದ ಪರಿಮಿತಿಗೂ ಹೆಚ್ಚುಕಡಿಮೆಯೆಂತಹುದು?

ಆದರೆ ವಿಷ್ಣುವಿನ ಅವತಾರದೊಡನೆ ಅಸುರವಧೆಯನ್ನು ಬಹುದಿನ ಗಳಿಂದ ಪುರಾಣಾದಿಗಳಲ್ಲಿ ಕೇಳಿಕೇಳಿ ಅನೇಕರಿಗೆ ಅವತಾರದ ವಿಷಯದಲ್ಲಿ ಅಪನಂಬುಗೆಯುಂಟಾಗಬಹುದು. ಕಂಸನನ್ನೂ ಶಿಶುಪಾಲನನ್ನೂ ಕೊಲ್ಲು ವುದಕ್ಕೋಸ್ಕರವೇ ಭೂಮಿಯಮೇಲೆ ಈಶ್ವರನು ತಾನಾಗಿ ಮನುಷ್ಯಜನ್ಮ ವನ್ನು ಎತ್ತಬೇಕೆಂದರೆ ಅದು ಅಸಂಭವವಾದ ಮಾತೇ ಸರಿ. ಅನಂತ ಶಕ್ತಿವಂತ ನಾದ ಅವನಿಗೆ ಕಂಸ ಶಿಶುಪಾಲರೂ, ಸಣ್ಣ ಪತಂಗದ ಹುಳುವೂ ಒಂದೇ ತೂಕದವರು. ನಿಜವಾದ ಮಾತೇನೆಂದರೆ:—ಹಿಂದೂ ಧರ್ಮದ ಇಲ್ಲಿನ ಮರ್ಮವನ್ನು ತಿಳಿಯಲಾರದವರು ಅವತಾರದ ಉದ್ದೇಶವು,—ದೈತ್ಯರ ಮತ್ತು ಹೆಚ್ಚಿನ ದುರಾತ್ಮರ ನಿಧನವೆಂದೆಣಿಸುವರು. ಅಸಲು ಮಾತನ್ನು ಬಹು ಸಂಕ್ಷೇಪವಾಗಿ ಭಗವದ್ಗೀತೆಯಲ್ಲಿ ಹೀಗೆ ಹೇಳಿದೆ:—

"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂರಕ್ಷಣಾರ್ಥಾಯ ಸಂಭವಾಮಿ ಯುಗೇ ಯುಗೇ ॥"

"ಧರ್ಮ ಸಂರಕ್ಷಣ" ಎಂದರೇನು? ಈ ಮಾತು ಬಹು ಸಂಕ್ಷೇಪ ವಾದುದು. ಒಬ್ಬಿಬ್ಬರು ದುರಾತ್ಮರನ್ನು ಕೊಂದ ಮಾತ್ರಕ್ಕೇ ಧರ್ಮ ಸಂರಕ್ಷಣವಾದಂತಾಯಿತೆ? ಧರ್ಮವೆಂದರೇನು? ಅದರ ಸಂರಕ್ಷಣವು ಹೇಗಾಗಬಹುದು?

ನಮ್ಮ ಶಾರೀರಕ ಮತ್ತು ಮಾನಸಿಕ ಸಮಸ್ತ ವೃತ್ತಿಗಳ ಸರ್ವಾಂಗೀಣ ಸ್ಫೂರ್ತಿ ಮತ್ತು ಪರಿಣತೆ, ಸಾಮಂಜಸ್ಯ ಮತ್ತು

ಚರಿತಾರ್ಥತೆ—ಇವೇ ಧರ್ಮ. ಈ ಧರ್ಮವು ಅನುಶೀಲನ ಸಾಪೇಕ್ಷ ವಾದುದು: ಅನುಶೀಲನವು ಕರ್ಮ ಸಾಪೇಕ್ಷವಾದುದು; ಈ ಕರ್ಮಕ್ಕೆ ಸ್ವಧರ್ಮಪಾಲನೆ (Duty) ಎಂದು ಹೇಳುವರು.

ಮನುಷ್ಯನು ತನ್ನ ಸ್ವಂತ ರಕ್ಷಣೆಯ ಸಲುವಾಗಿ ವೃತ್ತಿಗಳಿಗೆಲ್ಲ ಸಿಕ್ಕಿಕೊಂಡು ತಾನಾಗಿಯೇ ಕರ್ಮದಲ್ಲಿ ಪ್ರವೃತ್ತನಾಗುತ್ತಾನೆ. ಆದರೆ ಸಕಲ ವೃತ್ತಿಗಳ ಸರ್ವಾಂಗೀಣ ಸ್ಫೂರ್ತಿ ಮತ್ತು ಪರಿಣತೆ, ಸಾಮಂಜಸ್ಯ ಮತ್ತು ಚರಿತಾರ್ಥತೆ—ಇವು ಉಂಟಾಗುವಂತಹ ಕರ್ಮಗಳು ಬಹು ಕಷ್ಟ. ಕಷ್ಟತರವಾದುವುಗಳ ಶಿಕ್ಷಣೆಯು ಬರೀ ಉಪದೇಶದಿಂದಾಗುವುದಿಲ್ಲ. ಮೇಲು ಪಂಕ್ತಿಗಳು ಬೇಕು. ಸಂಪೂರ್ಣ ಧರ್ಮದ ಸಂಪೂರ್ಣವಾದ ಆದರ್ಶವು ಈಶ್ವರನೇ ವಿನಾ ಮತ್ತಾರೂ ಇಲ್ಲ. ನಿರಾಕಾರನಾದ ಈಶ್ವರನಂತೂ ನಮಗೆ ಆದರ್ಶನಾಗಲಾರನು. ನಾವು ಶರೀರಿಗಳು, ನಮ್ಮ ಧರ್ಮಕ್ಕೆ ದೊಡ್ಡ ಅಡಚಣೆಯೇ ಶಾರೀರಕ ವೃತ್ತಿಗಳು. ಇದರ ಮೇಲೆ ಅವನು ಅನಂತನು. ನಾವು ಸಾಂತರು ಮತ್ತು ಅತಿ ಸಣ್ಣವರು. ಆದುದರಿಂದ ಈಶ್ವರನೂ ಕೂಡ ಸಾಂತನಾಗಿ ಲೋಕಾಲಯದಲ್ಲಿ ದರ್ಶನವನ್ನಿತ್ತರೆ ಆ ಆದರ್ಶದ ಆಲೋಚನೆಯಿಂದ ಯಥಾರ್ಥ ಧರ್ಮದ ಏಳಿಗೆಯುಂಟಾಗಬಹುದು. ಈಶ್ವರಾವತಾರವು ಇದಕ್ಕೋಸ್ಕರ ಪ್ರಯೋಜನಕರವಾದುದು. ಮನುಷ್ಯನಿಗೆ ಕರ್ಮವು ತಿಳಿಯದು. ಹೇಗೆ ಮಾಡಿದರೆ ಕರ್ಮವು ಧರ್ಮದಲ್ಲಿ ಪರಿಣಮಿಸುವುದೆಂಬುದನ್ನು ತಿಳಿಯನು. ಈಶ್ವರನು ತಾನಾಗಿಯೇ ಅವತಾರಮಾಡಲು ಈ ಶಿಕ್ಷಣೆಯು ಮನುಷ್ಯನಿಗೆ ದೊರೆಯಬಹುದಾದ ಸಂಭವವು ಹೆಚ್ಚು; ಹೀಗಿರಲು ಈಶ್ವರನು ಜೀವಿಗಳ ಮೇಲಿನ ಕರುಣೆಯಿಂದ ಶರೀರವನ್ನು ಧರಿಸುವನು ಎಂಬುವರಲ್ಲಿ ಆಗಬಾರದುದೇನು?

ಈ ಮಾತನ್ನು ನಾನು ಹುಟ್ಟಿಹಾಕಿ ಹೇಳುತ್ತಲಿಲ್ಲ. ಭಗವದ್ಗೀತೆಯೊಳಗಣ ಭಗವದುಕ್ತಿಯ ತಾತ್ಪರ್ಯವೂ ಈ ಬಗೆಯೇ ಆಗಿರುವುದು.

ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮಸಮಾಚರ।
ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ ॥ ೧೯ ॥

ಕರ್ಮಣೈವ ಹಿ ಸಂಸಿದ್ಧಿಂ ಆಸ್ಥಿತಾ ಜನಕಾದಯಃ।
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥ ೨೦ ॥

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥೨೧॥
ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥೨೨॥
ಯದಿ ಹ್ಯಹಂ ನ ವರ್ತೇಯಂ ಜಾತುಕರ್ಮಣ್ಯತಂದ್ರಿತಃ ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥೨೩॥
ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಂ ।
ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥೨೪॥

ಗೀತಾ ೩ ಅ ।

ಮನುಷ್ಯನು ಆಸಕ್ತಿಯನ್ನು ತೊರೆದು ಕರ್ಮಾನುಷ್ಠಾನವನ್ನು ಮಾಡಿದರೇನೇ ಮೋಕ್ಷವನ್ನು ಪಡೆಯುವನು. ಆದುದರಿಂದ ನೀನು ಆಸಕ್ತಿಯನ್ನು ಬಿಟ್ಟು ಕರ್ಮವನ್ನು ಮಾಡು. ಜನಕನೇ ಮೊದಲಾದ ಮಹಾತ್ಮರು ಕರ್ಮದಿಂದಲೇ ಸಿದ್ಧಿಯನ್ನು ಪಡೆದರು. ಉತ್ತಮರು ಹೇಗೆ ನಡೆದುಕೊಳ್ಳುವರೋ ಹಾಗೆಯೇ ಇತರರೂ ಆಚರಿಸುವರು. ಅಲ್ಲದೆ ಉತ್ತಮರಾವುದನ್ನು ಮಾನ್ಯವೆಂದೆಣಿಸುವರೋ ಅದನ್ನೇ ಲೋಕವು ಅನುವರ್ತಿಸುವುದು. ಆದುದರಿಂದ ನೀನು ಜನಗಳ ಧರ್ಮರಕ್ಷಣೆಗೋಸ್ಕರ ಕರ್ಮವನ್ನು ಮಾಡು. ಇಲ್ಲಿ ನೋಡು—ಮೂರು ಲೋಕದಲ್ಲಿಯೂ ನನಗೆ ಸಿಕ್ಕದೇ ಇರುವುದೆಂಬುದಿಲ್ಲ, ಸುತರಾಂ ನನಗಾವ ಕೆಲಸವೂ ಇಲ್ಲ, ಆದರೂ ನಾನು ಕರ್ಮವನ್ನು ಮಾಡುತಿದ್ದೇನೆ.*

ಆಸ್ತಿಕ ವೈಜ್ಞಾನಿಕರ ಕೊನೆಯ ಮತ್ತು ಮುಖ್ಯವಾದ ಆಪತ್ತಿಯ ವಿಷಯವನ್ನಿಲ್ಲಿ ಹೇಳುವೆನು. ಅವರು ಹೇಳುವುದೇನೆಂದರೆ:—

"ಈಶ್ವರನುಂಟು, ಅವನು ಶ್ರೇಷ್ಠನು ಮತ್ತು ನಿಯಾಮಕನು. ಇವೆಲ್ಲವೂ ನಿಜವೇ, ಆದರೆ ಇಂಥವನು ಕೋಚಮಾನನಂತೆ ತನ್ನ ಕೈಗಳಿಂದಲೇ ಲಗಾಮುಗಳನ್ನು ಹಿಡಿದೂ, ಕರ್ಣಧಾರನಂತೆ ತನ್ನ

---

*ಕೃಷ್ಣನು ಎಂದರೆ ಶರೀರಧಾರಿಯಾದ ಈಶ್ವರನು ಈ ಮಾತನ್ನು ಹೇಳುತ್ತಲಿದ್ದಾನೆ. ನಾನೇನಾದರೂ ಅಲಸನಾಗಿ ಯಾವಾಗಲಾದರೂ ಕರ್ಮಾನುಷ್ಠಾನವನ್ನು ಮಾಡದೇಹೋದರೆ ಸಮಸ್ತ ಪ್ರಪಂಚವೂ ನನ್ನನ್ನು ಅನುಸರಿಸುವಂಥಾದ್ದಾಗುವುದು. ಆದುದರಿಂದ ನಾನು ಕೆಲಸ ಮಾಡದಿರಲು ಈ ಸಮಸ್ತ ಲೋಕಗಳೂ ಕಟ್ಟು ಹರಿದು ಹಾಳಾಗುವುವು. ಮತ್ತು ನಾನು ವರ್ಣ ಸಂಕರಕ್ಕೂ ಪ್ರಜಾಗಣಗಳ ಮಲಿನತೆಗೂ ಕಾರಣನಾಗುತ್ತೇನೆ.—ಕಾಳೀಪ್ರಸನ್ನ ಸಿಂಹರ ಅನುವಾದ.

ಕೈಗಳಿಂದಲೇ ಹಡಗಿನ ಕರ್ಣವನ್ನು ಹಿಡಿದೂ, ಈ ವಿಶ್ವ ಸಂಸಾರವನ್ನು ನಡಸುವುದಿಲ್ಲ. ಆತನು ಕೆಲವು ಅಚಲವಾದ ನಿಯಮಗಳನ್ನು ಗೊತ್ತು ಮಾಡಲು ಈ ಜಗತ್ತು ಆ ನಿಯಮಗಳಿಗೊಳಪಟ್ಟು ನಡೆಯುತ್ತಲಿದೆ" ಎಂದು. ಈ ನಿಯಮಗಳು ಅಚಲವೂ ಹೌದು ಮತ್ತು ಜಗತ್ತಿನ ಪಕ್ಷದಲ್ಲಿ ಇವೇ ಸಾಕು. ಇದರಿಂದ ಈಶ್ವರನು ಇವುಗಳೊಳಗೆ ತನ್ನ ಸ್ವಂತ ಕೈಯನ್ನು ಹಾಕುವುದಕ್ಕವಕಾಶವೂ ಇಲ್ಲ; ಪ್ರಯೋಜನವೂ ಇಲ್ಲ. ಸಂಪೂರ್ಣ ವಾಗಿಯೂ ಈಶ್ವರನು ಮಾನವ ಧರ್ಮವನ್ನೆತ್ತಿ ಭೂಮಿಗಿಳಿಯುವ ನೆಂಬುದನ್ನು ನಂಬಲಿಕ್ಕಾಗುವುದಿಲ್ಲ.

ಈಶ್ವರನು ಕೆಲವು ಮೀರಲಾಗದ ನಿಯಮಗಳನ್ನು ಸಂಸ್ಥಾಪಿಸಿ ಜಗತ್ತನ್ನು ಅವುಗಳಿಗೆ ಒಳಪಡಿಸಿರುವನೆಂಬ ಮಾತನ್ನೇನೋ ನಂಬುವೆವು. ಇವೇ ಜಗತ್ತಿನ ರಕ್ಷಣಪಾಲನಗಳಿಗೆ ಸಾಕು. ಈ ಮಾತನ್ನೂ ನಂಬುವೆವು. ಆದರೆ ಇವುಗಳಿವೆಯೆಂದು ಈಶ್ವರನಿಗಾವ ಕೆಲಸಕ್ಕೂ ಸ್ಥಾನವೇ ಆಗಲಿ ಪ್ರಯೋಜನವೇ ಆಗಲಿ ಇಲ್ಲವೆಂಬುದು ಹೇಗೆ ರುಜುವಾತಾಗುವುದೋ ಅದು ನನಗೆ ತಿಳಿಯದು. ಜಗತ್ತಿನಲ್ಲಿರುವ ಯಾವ ವಸ್ತುವೂ ಕೂಡ ಇನ್ನೂ ಉತ್ತಮ ದಶೆಯನ್ನಪೇಕ್ಷಿಸದಷ್ಟು ಉನ್ನತಿಯಲ್ಲಿಲ್ಲ. ಮತ್ತು ಇಷ್ಟಪಟ್ಟರೆ ಇನ್ನೂ ಉನ್ನತಿಯನ್ನು ಹೊಂದುವುದಕ್ಕಾಗುವುದಿಲ್ಲವೆಂಬಂತೆಯೂ ಇಲ್ಲ. ಜಗತ್ತಿನ ವ್ಯಾಪಾರವನ್ನಾಲೋಚಿಸಿ ವಿಜ್ಞಾನಶಾಸ್ತ್ರದ ಸಹಾಯದಿಂದಲೇ ಈ ಜಗತ್ತು ಅಸಂಪೂರ್ಣ ಅಥವಾ ಅಪರಿಣತಾವಸ್ಥೆಯಿಂದ ಸಂಪೂರ್ಣ ಅಥವಾ ಪರಿಣತಾವಸ್ಥೆಗೆ ಬರುತ್ತಿದೆಯೆಂದು ಗೊತ್ತುಮಾಡಿದೆ. ಇದೇ ಜಗತ್ತಿನ ಗತಿ; ಮತ್ತು ಈ ಗತಿಯೇ ಜಗತ್ಕರ್ತನ ಇಷ್ಟವೆಂದು ತೋರುತ್ತದೆ. ಇದರಮೇಲೆ ಜಗತ್ತಿನ ಈಗಿನ ಅವಸ್ಥೆಯಲ್ಲಿ ತನ್ನ ಕೊನೆಯವಸ್ಥೆಯನ್ನು ಹೊಂದಿದೆಯೆಂದು ಹೇಳಿಸಿಕೊಳ್ಳುವಂತಹ ವಸ್ತುವಾವುದೂ ಇಲ್ಲ. ಈಗಲೂ ಜಗತ್ತಿನಲ್ಲಿ ಇನ್ನೂ ಸುಖವೆಷ್ಟೋ ಉಳಿದಿದೆ, ಉನ್ನತಿಯೂ ಇನ್ನೂ ಎಷ್ಟೋ ಉಳಿದಿದೆ. ಹೀಗೆ ಇನ್ನೂ ಎಷ್ಟೆಷ್ಟೋ ಉಳಿದಿರಲು ಈಶ್ವರನು ಕೈಹಾಕಲಿಕ್ಕೆ ಅವಕಾಶ ಅಥವಾ ಪ್ರಯೋಜನವಿಲ್ಲವೆ? ಸೃಷ್ಟಿ, ಸ್ಥಿತಿ, ಲಯಗಳಲ್ಲದೆ ಜಗತ್ತಿಗೆ ಸ್ವಾಭಾವಿಕವಾದ ಇನ್ನೊಂದು ಕಾರ್ಯವೂ ಉಂಟು. ಅದೇ ಉನ್ನತಿ.

ಮನುಷ್ಯನ ಉನ್ನತಿಯು ಮೂಲವೂ ಧರ್ಮದ ಉನ್ನತಿಯೂ ಕೂಡ ಈಶ್ವರನ ನಿಯಮಗಳಿಂದಲೇ ಸಾಧಿತವಾಗಬಹುದೆಂಬುದನ್ನೂ ಸ್ವೀಕರಿಸುತ್ತೇನೆ. ಆದರೆ ಕೇವಲ ನಿಯಮ ಫಲಗಳಿಂದಲೇ ಅದರ ಉನ್ನತಿಯು ಎಷ್ಟರವರೆಗೂ ಆಗಬಹುದೋ ಅದಕ್ಕಿತಲೂ ಹೆಚ್ಚಾದ ಉನ್ನತಿಯು ಯಾವುದಾದರೊಂದು ಕಾಲದಲ್ಲಿ ಈಶ್ವರನವತರಿಸುವುದರಿಂದಾಗದೆಂದು ತಿಳಿಯುವುದಕ್ಕಾಗುವುದಿಲ್ಲ. ಈ ರೀತಿಯ ಹೆಚ್ಚಿಗೇ ಉನ್ನತಿಯು ಅವನಿಗಭಿಮತವಲ್ಲವೆಂಬುದನ್ನು ತಾನೇ ತಿಳಿಯುವ ಬಗೆ ಹೇಗೆ?

ನೈಸರ್ಗಿಕವಾದ ಸಕಲ ನಿಯಮಗಳೂ ಈಶ್ವರನಿಂದಲೇ ಮಾಡಲ್ಪಟ್ಟವಾಗಿರಲು ಅವುಗಳನ್ನತಿಕ್ರಮಿಸಿ ಜಗತ್ತಿನಲ್ಲಿ ಯಾವ ಕೆಲಸವೂ ನಡೆದುದನ್ನೇ ಕಾಣೆವೆಂದು ಆಪತ್ತಿಕಾರರು ಹೇಳುವರು. ಆದುದರಿಂದ ಈ ಸಮಸ್ತ ಅತಿಪ್ರಕೃತಿಕ್ರಿಯೆ (Miracle)ಗಳನ್ನು ನಂಬಲಾಗದು. ಇದು ನ್ಯಾಯವೇ ಸರಿ.

ಇದಕ್ಕೆ ಕಾರಣಗಳನ್ನು ಪೂರ್ವ ಪರಿಚ್ಛೇದದಲ್ಲಿಯೇ ತೋರಿಸಿದ್ದೇನೆ. ಈ ರೀತಿಯಾದ ಅನೇಕ ಈಶ್ವರಾವತಾರಗಳ ಪ್ರವಾದವೇನೋ ಉಂಟು. ಅವತಾರಗಳು ಅತಿ ಪ್ರಕೃತಿಯ ಸಹಾಯದಿಂದಲೇ ಸ್ವಕಾರ್ಯವನ್ನು ನೆರವೇರಿಸಿವೆ. ಕ್ರಿಸ್ತನ ಅವತಾರದಲ್ಲಿಯೂ ಈ ರೀತಿಯಾದ ಅನೇಕಾಂಶಗಳುಂಟು. ಆದರೆ ಕ್ರಿಸ್ತನ ಪಕ್ಷದಲ್ಲಿ ಸಮರ್ಥನೆ ಮಾಡುವ ಭಾರವು ಕ್ರಿಸ್ತರಿಗೇ ಇರಲಿ. ಇನ್ನು ವಿಷ್ಣುವಿನ ಅವತಾರದಲ್ಲಿ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ ಮೊದಲಾದುವು ಈ ಬಗೆಯ ಕಾರ್ಯವೇ ವಿನಾ ಅವತಾರದ ಉಪಾದಾನವು ಮತ್ತಾವುದೂ ಇಲ್ಲ. ಬುದ್ಧಿವಂತರಾದ ಪಾಠಕರಿಗೆ ಮತ್ಸ್ಯ, ಕೂರ್ಮ, ವರಾಹ, ನೃಸಿಂಹಾದಿ ಉಪನ್ಯಾಸಗಳಿಗೊಳಗಾದ ಪಶುಗಳ ಈಶ್ವರಾವತಾರ ತತ್ತ್ವವಿಷಯದಲ್ಲಿ ಯಥಾರ್ಥವಾದೊಪ್ಪಿಗೆಯನ್ನು ಕೊಡಬೇಕಾದ ಆವಶ್ಯಕವಿಲ್ಲ. ಗ್ರಂಥದ ಕೊನೆಯಲ್ಲಿ ವಿಷ್ಣುವಿನ ದಶಾವತಾರದ ಮಾತು ಬಹಳ ಈಚಿನದು, ಸಂಪೂರ್ಣವಾಗಿ ಉಪನ್ಯಾಸ ಮೂಲಕವಾದುದು ಎಂಬುದನ್ನು ತೋರಿಸುವೆನು. ಅಲ್ಲದೆ ಈ ಉಪನ್ಯಾಸಗಳೆಲ್ಲಿಂದ ಬಂದುವೆಂಬುದನ್ನೂ ಉದಾಹರಿಸುವೆನು. ಈ ಸಕಲ ಅವತಾರಗಳಿಗೂ ಪುರಾಣಗಳಲ್ಲಿ ಸ್ಥಳವಿದೆ. ಆದರೆ ಪುರಾಣಗಳಲ್ಲನೇಕವಾದ ಉಪನ್ಯಾಸಗಳಿಗೆ ಸ್ಥಳವು ಕೊಡಲ್ಪಟ್ಟಿರುವು

ದೆಂಬುದನ್ನೂ ಹೇಳಬೇಕೆ ? ಈ ವಿಚಾರದಲ್ಲಿ ಶ್ರೀಕೃಷ್ಣನು ವಿನಾ ಮತ್ತಾರೂ ಈಶ್ವರನ ಅವತಾರವೆಂದು ನಿರ್ಧರಿಸುವುದಕ್ಕಾಗುವುದಿಲ್ಲ.

ಕೃಷ್ಣ ವೃತ್ತಾಂತದಲ್ಲಿಷ್ಟುಮಟ್ಟಿಗೆ ಮೌಲಿಕವಿರುವುದೋ ಅಷ್ಟು ಮಟ್ಟಿನದಕ್ಕೆ ಅತಿ ಪ್ರಕೃತಿಗಳಿಂದ ಸಹಾಯವೇನೂ ಇಲ್ಲ. ಇವು ಮಹಾಭಾರತ ಮತ್ತು ಇತರ ಸಕಲ ಪುರಾಣಗಳಲ್ಲಿಯೂ ಪ್ರಕ್ಷಿಪ್ತಗಳು. ಮತ್ತು ಈಗಿನ ಕೆಲಸಗಳ್ಳ ಬ್ರಾಹ್ಮಣರ ನಿರರ್ಥಕವಾದ ರಚನೆಗಳಿಂದ ತುಂಬಿದವುಗಳು. ಈ ಕಾರಣಗಳಿಂದ ಅನೇಕ ಸ್ಥಳಗಳಲ್ಲಿ ಕೃಷ್ಣನು ಅತಿ ಪ್ರಕೃತಿಯ ಸಹಾಯವನ್ನು ಪಡೆದನೆಂದು ಹೇಳಿದೆ. ಆದರೆ ವಿಚಾರ ಮಾಡಿ ನೋಡಲು ಇವುಗಳು ಮೂಲಗ್ರಂಥಕ್ಕೆ ಸೇರಿದವುಗಳಲ್ಲವೆಂಬುದು ತಿಳಿಯುವುದು. ನಾನು ಈ ವಿಚಾರವನ್ನು ಮುಂದೆ ಹೇಳುವೆನು. ಈಗ ಹೇಳಿದುದಕ್ಕೆ ಕೆಲವು ಪ್ರಮಾಣಗಳನ್ನು ಕೊಡುವೆನು. ಕೃಷ್ಣನು ಅತಿ ಪ್ರಕೃತಿಯ ಸಹಾಯದಿಂದ ಅಥವಾ ನೈಸರ್ಗಿಕ ನಿಯಮಗಳನ್ನು ಅಡ್ಡದಾಟಿ ಯಾವ ಕೆಲಸಗಳನ್ನೂ ಮಾಡಿಲ್ಲ. ಆದುದರಿಂದ ಈ ಆಪತ್ತಿಯನ್ನು ಕೃಷ್ಣನ ವಿಷಯದಲ್ಲಿ ಆರೋಪಿಸಲು ಸಾಗದು.

ಮೇಲೆ ಹೇಳಿರುವುದು ಕೇವಲ ನನ್ನ ಮತ ಮಾತ್ರವೇ ಅಲ್ಲ. ಪುರಾಣಗಳನ್ನು ಬರೆದ ಋಷಿಗಳೂ ಇದೇ ಮತದವರು. ಆದರೆ ಜನಪರಂಪರೆಯಾಗಿ ಬಂದ ಕಿಂವದಂತಿಗಳಲ್ಲಿ ಸತ್ಯ ಮಿಥ್ಯ ನಿರ್ವಚನ ಪದ್ಧತಿಯು ಆ ಕಾಲದಲ್ಲಿರಲಿಲ್ಲವಾದುದರಿಂದ ಅನೇಕ ಅನೈಸರ್ಗಿಕ ಘಟನೆಗಳು ಪುರಾಣೇತಿಹಾಸಗಳಲ್ಲಿ ಸೇರಿಸಲ್ಪಟ್ಟಿವೆ.

ವಿಷ್ಣುಪುರಾಣದಲ್ಲಿ :—

ಮನುಷ್ಯಧರ್ಮಶೀಲಸ್ಯ ಲೀಲಾ ಸಾ ಜಗತಃ ಪತೇಃ ।
ಅಸ್ತ್ರಾಣ್ಯನೇಕರೂಪಾಣಿ ಯದರಾತಿಷು ಮುಂಚತಿ ॥ ೧ ॥
ಮನಸೈವ ಜಗತ್ಸೃಷ್ಟಿಂ ಸಂಹಾರಂ ಚ ಕರೋತಿಯಃ ।
ತಸ್ಯಾರಿ ಪಕ್ಷಕ್ಷಪಣೇ ಕಿಯಾನುದ್ಯಮವಿಸ್ತರಃ ॥ ೨ ॥
ತಥಾಪಿ ಯೋ ಮನುಷ್ಯಾಣಾಂ ಧರ್ಮಸ್ತಮನುವರ್ತತೇ ।
ಕುರ್ವನ್ ಬಲವತಾ ಸಂಧಿಂ ಹೀನೈರ್ಯುದ್ಧಂ ಕರೋತ್ಯಸೌ ॥ ೩ ॥
ಸಾಮ ಚೋಪಪ್ರದಾನಂ ಚ ತಥಾ ಭೇದಂ ಪ್ರದರ್ಶಯನ್ ।
ಕರೋತಿ ದಂಡಪಾತಂ ಚ ಕ್ವಚಿಚ್ಚಿದೇವಪಲಾಯನಂ ॥ ೪ ॥
ಮನುಷ್ಯದೇಹಿನಾಂ ಚೇಷ್ಟಾಮಿತ್ಯೇವಮನುವರ್ತತೇ ।
ಲೀಲಾಜಗತ್ಪತೇಸ್ತಸ್ಯಚ್ಛಂದತಸ್ಸಂಪ್ರವರ್ತತೇ ॥ ೫ ॥

ಪಂಚಮಾಂಶ, ೨೨ನೆಯ ಅ. ಶ್ಲೋ॥ ೧೪ರಿಂದ ೧೮

ಜಗತ್ಪತಿಯಾಗಿಯೂ ಅವನು ಶತ್ರುಗಳ ಮೇಲೆ ಅನೇಕ ಅಸ್ತ್ರಗಳನ್ನೆಸೆದನು. ಇದು ಮನುಷ್ಯ ಧರ್ಮಶೀಲವು ಎಂದು ಅವನ ಲೀಲೆ ಹಾಗಿಲ್ಲವಾದರೆ ಮನಸ್ಸಿನಿಂದಲೇ ಜಗತ್ಸೃಷ್ಟಿಯನ್ನೂ ಮತ್ತು ಸಂಹಾರವನ್ನೂ ಮಾಡುವಂಥವನಿಗೆ ಹಗೆಗಳ ನಾಶಕ್ಕಾಗಿ ವಿಶೇಷ ವಿಸ್ತರವಾದ ಪ್ರಯಾಸವೇಕೆ? ಅವನು ಮನುಷ್ಯರ ಧರ್ಮವನ್ನನುವರ್ತಿಸುವವನಗಿ ಬಲವಂತರಲ್ಲಿ ಸಂಧಿಯನ್ನೂ ಹೀನರಲ್ಲಿ ಯುದ್ಧವನ್ನೂ ಮಾಡುವನು. ಸಾಮ ದಾನ ಭೇದಗಳನ್ನು ತೋರಿ, ದಂಡವನ್ನೆತ್ತುವನು. ಕೆಲವು ವೇಳೆ ಪಲಾಯನವನ್ನೂ ಮಾಡುವನು. ಮನುಷ್ಯದೇಹಿಗಳ ಕಾರ್ಯವನ್ನು ಅನುವರ್ತಿಸುವಂಥ ಆ ಜಗತ್ಪತಿಯ ಈ ಲೀಲೆಯು ಅವನ ಇಚ್ಛಾನುಸಾರವಾಗಿಯೇ ಉಂಟಾಗಿತ್ತು.

ನಾನೂ ಇದೇ ಮಾತನ್ನೇ ಹೇಳಿದೆನು. ಇನ್ನುಮೇಲಾದರೂ ಯಾವ ಪಾಠಕನೂ ಕೃಷ್ಣನು ಮನುಷ್ಯ ದೇಹದಲ್ಲಿ ಅತಿಮಾನುಷಶಕ್ತಿಯಿಂದ ಕೆಲಸಗಳೇನನ್ನಾದರೂ ಮಾಡಿದ್ದನೆಂದರೆ ನಂಬುವುದಿಲ್ಲವೆಂಬುದು ನನ್ನ ಭರವಸೆ.*

---

*It is true that, in the Epic Poems, Rama and Krishna apper as incarnations of Vishnu; but, they, at the same time, come before us as human heroes and these two characters (the divine and the human) are, so far from being inseperably blended together, that both of these heroes are, for the most part, exhibited in no other light than other highly gifted men acting according to human motives and taking no advantage of their divine superiority. It is only in certain section which have been added, for the purpose of enforcing their divine character, that they take the character of Vishnu. It is impossible to read either of these two poems with attention without being reminded of the later interpolation of such sections as ascribe a divine character to the heroes, and of the unskilful manner in which these passages are often introduced and without observing how loosely they are connected with the rest of the narrative and how unnecessary they are for its progress.

—Lassen's *Indian Antiquities*, quoted by Muir.

In other places (ಅಂದರೆ ಭಗವದ್ಗೀತಾ ಪರ್ವಾಧ್ಯಾಯ ಭಿನ್ನ) the divine nature of Krishna is less decidedly affirmed; in some it is disputed or denied; and in most of the sections, he is exhibited in action as a prince and warrior, not as a divinity. He exercises no super-human

ಆದುದರಿಂದ ವಿಚಾರದ ಮೂರನೆಯ ನಿಯಮವು ಸಂಸ್ಥಾಪಿತ ವಾಯಿತು. ಈ ಹಿಂದಿನ ವಿಚಾರದ ಮೂರು ನಿಯಮಗಳನ್ನೂ ಪುನಃ ಜ್ಞಾಪಿಸಿಕೊಳ್ಳೋಣ.

(೧) ಯಾವುದು ಪ್ರಕ್ಷಿಪ್ತವೆಂದು ಪ್ರಮಾಣವಾಗುವುದೋ ಅದನ್ನು ಬಿಟ್ಟುಬಿಡೋಣ.

(೨) ಅತಿಪ್ರಕೃತಿಯ ಅಂಶಗಳನ್ನು ತೆಗೆದುಬಿಡೋಣ.

(೩) ಅತಿ ಪ್ರಕೃತಿಯೂ ಪ್ರಕ್ಷಿಪ್ತವೂ ಅಲ್ಲವಾದರೂ ಇನ್ನು ಬೇರೆಯ ರೀತಿಯಿಂದ ಮಿಥ್ಯಾ ಲಕ್ಷಣವುಳ್ಳುದಾಗಿ ಕಂಡು ಬಂದರೆ ಅದನ್ನೂ ಬಿಟ್ಟು ಬಿಡೋಣ.

ಚತುರ್ದಶ ಪರಿಚ್ಛೇದ

ಪುರಾಣ

ಮಹಾಭಾರತದ ಐತಿಹಾಸಿಕತೆಯ ಸಂಬಂಧದಲ್ಲಿ ಹೇಳಬೇಕಾದುದನ್ನೇನೋ ಹೇಳಿದುದಾಯಿತು. ಈಗ ಪುರಾಣ ಸಂಬಂಧವಾಗಿ ಕೆಲವು ಮಾತುಗಳನ್ನು ಹೇಳುವೆವು.

ಪುರಾಣಗಳ ವಿಷಯದಲ್ಲಿಯೂ, ದೇಶೀಯ ಮತ್ತು ವಿಲಾಯತೀಯ ಎಂದೆರಡು ಬಗೆಯ ಭ್ರಮೆಗಳುಂಟು. ಪುರಾಣಗಳೆಲ್ಲವೂ ಒಬ್ಬನಿಂದಲೇ ಆದುವೆಂದು ದೇಶೀಯರೂ, ಒಂದೊಂದು ಪುರಾಣವು ಒಬ್ಬೊಬ್ಬನಿಂದಾದು ದೆಂದು ವಿಲಾಯತಿಯವರೂ ಭ್ರಮೆಗೊಳ್ಳುತ್ತಿರುವರು. ಮೊದಲು ದೇಶೀಯರ ಮಾತನ್ನೇ ಸಮಾಲೋಚಿಸೋಣ.

ಹದಿನೆಂಟು ಪುರಾಣಗಳೂ ಒಬ್ಬನಿಂದಲೇ ಆದುವಲ್ಲ. ಇದಕ್ಕೆ ಕೆಲವು ಪ್ರಮಾಣಗಳನ್ನುದಾಹರಿಸುವೆವು.

(೧) ಒಬ್ಬೊಬ್ಬನ ರಚನೆಯು ಒಂದೊಂದು ಬಗೆಯಾಗಿ ಮಾತ್ರವೇ ಇರುವುದು. ಒಬ್ಬನ ಹಸ್ತಾಕ್ಷರವು ಐದಾರು ಬಗೆಯಾಗಿ ಹೇಗೆ ಇರುವು

faculties in defence of himself or his friends, or in the defeat and destruction of his foes. The Mahabharatha however is the work of various periods, and requires to be read through carefully, critically, before its weight as an authority, can be accurately appreciated.

—Wilson's Preface to the *Vishnu Purana*

ದಿಲ್ಲವೋ ಹಾಗೆಯೇ ಒಬ್ಬನ ರಚನೆಯು ಕಟ್ಟೊ, ಹಲವು ಬಗೆಯಾಗಿರುವುದಿಲ್ಲ. ಈ ಹದಿನೆಂಟು ಪುರಾಣಗಳ ರಚನೆಗಳಂತೂ ಹದಿನೆಂಟು ಬಗೆಯಾಗಿಯೇ ಇರುವುವು. ಇವೆಲ್ಲವೂ ಒಬ್ಬನಿಂದ ಎಂದಿಗೂ ಆಗಿರವು. ವಿಷ್ಣುಪುರಾಣವನ್ನೂ, ಭಾಗವತಪುರಾಣವನ್ನೂ ಓದಿ ಎರಡೂ ಒಬ್ಬನಿಂದಲೇ ಆಗಿರಬಹುದೆಂದು ಹೇಳಬಲ್ಲವನೆದುರಿಗೆ ಬಗೆ ಬಗೆಯ ಪ್ರಮಾಣಗಳನ್ನು ಹರಡುವುದು ಬರಿಯ ವಿಡಂಬನ.

(೨) ಒಬ್ಬನು ಒಂದೇ ವಿಷಯವನ್ನು ಕುರಿತು ಹಲವು ಗ್ರಂಥಗಳನ್ನು ಬರೆಯನು. ಒಂದುವೇಳೆ ಹಲವು ಗ್ರಂಥಗಳನ್ನು ಬರೆಯುವವನು ಒಂದೇ ವಿಷಯವನ್ನು ಕುರಿತು ತಿರಿತಿರಿಗೂ ತನ್ನ ಪ್ರತಿಯೊಂದು ಗ್ರಂಥದಲ್ಲೂ ವರ್ಣಿಸುವುದಕ್ಕಾಗಲಿ ವಿಸ್ತರಿಸುವುದಕ್ಕಾಗಲಿ ಎಂದಿಗೂ ಬರೆಯನು. ಆದರೆ ಒಂದೇ ವಿಷಯವೇ ಬಾರಿ ಬಾರಿಗೂ ಬೇರೆ ಬೇರೆ ಪುರಾಣಗಳಾಗಿ ಸವಿಸ್ತಾರವಾಗಿ ಹೇಳಲ್ಪಟ್ಟಿರುವಂತೆ ಅಷ್ಟಾದಶ ಪುರಾಣಗಳು ಕಂಡುಬರುವುವು. ಈ ಕೃಷ್ಣ ಚರಿತ್ರೆಯೇ ಇದಕ್ಕೆ ಉದಾಹರಣೆಯಾಗಿದೆ. ಇದು ಬ್ರಹ್ಮಪುರಾಣದ ಪೂರ್ವಭಾಗದಲ್ಲಿಯೂ ಮತ್ತೆ ವಿಷ್ಣು ಪುರಾಣದ ೫ನೆಯ ಅಂಶದಲ್ಲಿಯೂ, ವಾಯುಪುರಾಣದಲ್ಲಿಯೂ, ಶ್ರೀಮದ್ಭಾಗವತ ೧೦ನೆಯ ಮತ್ತು ೧೧ನೆಯ ಸ್ಕಂದಗಳಲ್ಲಿಯೂ, ಬ್ರಹ್ಮವೈವರ್ತಪುರಾಣದ ೩ನೆಯ ಖಂಡದಲ್ಲಿಯೂ, ಮತ್ತು ಪದ್ಮಪುರಾಣ, ವಾಮನಪುರಾಣ, ಕೂರ್ಮ ಪುರಾಣಗಳಲ್ಲಿ ಸಂಕ್ಷೇಪವಾಗಿಯೂ, ಇದೇ ರೀತಿಯಾಗಿ ಮತ್ತೆ ಮತ್ತೆ ಒಂದೇ ವಿಷಯದ ವರ್ಣನೆ ಬೇರೆ ಬೇರೆ ಪುರಾಣಗಳಲ್ಲಿ ಅಲ್ಲಲ್ಲಿ ಇದೆ. ಒಬ್ಬನಿಂದಲೇ ಬರೆದ ಬೇರೆ ಬೇರೆ ಪುಸ್ತಕಗಳಲ್ಲಿ ಹೀಗಿರುವುದಿಲ್ಲ.

(೩) ಒಂದು ವೇಳೆ ಈ ಹದಿನೆಂಟು ಪುರಾಣಗಳನ್ನೂ ಒಬ್ಬನೇ ಬರೆದಿದ್ದರೆ ಇವುಗಳೊಳಗೆ ಬಲವಾದ ಪರಸ್ಪರ ವಿರೋಧಾಂಶಗಳು ಇರುತ್ತಿರಲಿಲ್ಲ. ಅಷ್ಟಾದಶಪುರಾಣಗಳಲ್ಲಾದರೋ ಅಲ್ಲಲ್ಲಿ ಬಲವಾದ ಪರಸ್ಪರ ವಿರೋಧ ಭಾವ ತೋರುತ್ತಲಿದೆ. ಈ ಕೃಷ್ಣ ಚರಿತ್ರೆ ಬೇರೆ ಬೇರೆ ಪುರಾಣಗಳಲ್ಲಿ ಬೇರೆ ಬೇರೆ ಬಗೆಯಾಗಿ ವರ್ಣಿಸಲ್ಪಟ್ಟಿರುವುದು. ಈ ವರ್ಣನೆಗಳೆಲ್ಲಾ ಒಂದಕ್ಕೊಂದು ಸಂಗತಗಳಲ್ಲ.

(೪) ವಿಷ್ಣು ಪುರಾಣದಲ್ಲಿ ಹೀಗಿರುವುದು :—

ಆಖ್ಯಾನೈಶ್ಚಾಪ್ಯುಪಾಖ್ಯಾನೈರ್ಗಾಥಾಭಿಃ ಕಲ್ಪಶುದ್ಧಿಭಿಃ ।
ಪುರಾಣಸಂಹಿತಾಂ ಚಕ್ರೇ ಪುರಾಣಾರ್ಥ ವಿಶಾರದಃ ॥
ಪ್ರಖ್ಯಾತೋ ವ್ಯಾಸಶಿಷ್ಯೋಽಭೂತ್ ಸೂತೋ ವೈ ಲೋಮಹರ್ಷಣಃ ।
ಪುರಾಣಸಂಹಿತಾಂ ತಸ್ಮೈ ದದೌ ವ್ಯಾಸೋ ಮಹಾಮುನಿಃ ॥
ಸುಮತಿಶ್ಚಾಗ್ನಿವರ್ಚಾಶ್ಚ ಮಿತ್ರಾಯುಶ್ಶಾಂಸಪಾಯನಃ ।
ಅಕೃತವ್ರಣಸಾವರ್ಣೀ ಷಟ್ ಶಿಷ್ಯಾಸ್ತಸ್ಯ ಚಾಭವನ್ ॥
ಕಶ್ಯಪಃ ಸಂಹಿತಾಕರ್ತಾ ಸಾವರ್ಣಿಃ ಶಾಂಸಪಾಯನಃ ।
ಲೋಮಹರ್ಷಣಿಕಾ ಽನ್ಯಾ ತಿಸ್ರಾಣಾಂ ಮೂಲಸಂಹಿತಾ ॥

ವಿಷ್ಣು ಪುರಾಣ, ೩ ಅಂಶ, ೬ ಅಧ್ಯಾಯ ೧೬—೧೯

ಪುರಾಣಾರ್ಥವೇತ್ತೃ (ವೇದವ್ಯಾಸ)ನು ಆಖ್ಯಾನ ಉಪಾಖ್ಯಾನ ಗಾಥಾ ಮತ್ತು ಕಲ್ಪಶುದ್ಧಿ ದ್ವಾರಾ ಪುರಾಣಸಂಹಿತೆಯನ್ನು ಮಾಡಿದನು. ಲೋಮಹರ್ಷಣನೆಂಬ ಸೂತನು ವ್ಯಾಸ ಶಿಷ್ಯರಲ್ಲಿ ಪ್ರಖ್ಯಾತಿಯನ್ನು ಹೊಂದಿದ್ದನು. ವ್ಯಾಸಮಹಾಮುನಿಯು ಅವನಿಗೆ ಪುರಾಣಸಂಹಿತೆಯನ್ನು ಕೊಟ್ಟನು. ಸುಮತಿ, ಅಗ್ನಿವರ್ಚ, ಮಿತ್ರಯು, ಶಾಂಸಪಾಯನ, ಅಕೃತವ್ರಣ, ಸಾವರ್ಣಿ ಎಂದು ಅವನಿಗಾರು ಮಂದಿ ಶಿಷ್ಯರು. ಅವರಲ್ಲಿ ಕಾಶ್ಯಪ, ಸಾವರ್ಣಿ ಮತ್ತು ಶಾಂಸಪಾಯನರು ಆ ಲೋಮಹರ್ಷಣಿಕವಾದ ಮೂಲಸಂಹಿತೆಯಿಂದ ಮೂರು ಸಂಹಿತೆಗಳನ್ನು ರಚಿಸಿದರು.

ಪುನಃ ಭಾಗವತದಲ್ಲಿ :—

ತ್ರೈಯಾರುಣಿಃ ಕಶ್ಯಪಶ್ಚ ಸಾವರ್ಣಿರಕೃತವ್ರಣಃ ।
ಶಿಂಶಪಾಯನ ಹಾರೀತೋ* ಷಡ್ವೈ ಪೌರಾಣಿಕಾ ಇಮೇ ॥
ಅಧೀಯಂತ ವ್ಯಾಸಶಿಷ್ಯಾತ್ ಸಂಹಿತಾಂ ಮತ್ಪಿತುರ್ಮುಖಾತ್ ।
ಏಕೈಕಾಮಹಮೇತೇಷಾಂ ಶಿಷ್ಯಃ ಸರ್ವಾಃ ಸಮಧ್ಯಗಾಂ ॥
ಕಶ್ಯಪೋಽಹಂ ಚ ಸಾವರ್ಣೀ ರಾಮ ಶಿಷ್ಯೋಽಕೃತವ್ರಣಃ ।
ಅಧೀಮಹಿ ವ್ಯಾಸಶಿಷ್ಯಾಚ್ಚತಸ್ರೋ ಮೂಲಸಂಹಿತಾಃ ॥

ಶ್ರೀಮದ್ಭಾಗವತ, ೧೨ನೆಯ ಸ್ಕಂದ, ೭ನೆಯ ಅಧ್ಯಾಯ, ೪—೬

ತ್ರೈಯಾರುಣಿ, ಕಶ್ಯಪ, ಸಾವರ್ಣಿ, ಅಕೃತವ್ರಣ, ಶಿಂಶಪಾಯನ, ಹಾರೀತ ಈ ಆರ್ವರೂ ಪೌರಾಣಿಕರು.

---

*ಭಾಗವತವನ್ನು ಹೇಳಿದವನು ವ್ಯಾಸರ ಮಗ ಶುಕದೇವನು. ವೈಶಂಪಾಯನ ಹಾರೀತೌ ಎಂದು ಪಾಠಾಂತರವೂ ಉಂಟು.

ವಾಯು ಪುರಾಣದಲ್ಲಿ ಹೆಸರುಗಳು ಕೊಂಚ ಬದಲಾಯಿಸಿವೆ:

ಆತ್ರೇಯಸ್ಸುಮತಿರ್ಧೀಮಾನ್ ಕಶ್ಯಪೋಽಹಂ ಕೃತವ್ರಣಃ ।

ಇನ್ನೂ ಅಗ್ನಿ ಪುರಾಣದಲ್ಲಿ :—

ಪ್ರಾಪ್ಯ ವ್ಯಾಸಾತ್ ಪುರಾಣಾದಿ ಸೂತೋ ವೈ ಲೋಮಹರ್ಷಣಃ ।
ಸುಮತಿಶ್ಚಾಗ್ನಿವರ್ಚಾಶ್ಚ ಮಿತ್ರಾಯುಃ ಶಾಂಸಪಾಯನಃ ।
ಕೃತವ್ರತೋಽಥ ಸಾವರ್ಣಿಃ ಶಿಷ್ಯಾಸ್ತಸ್ಯ ತು ಚಾಭವನ್ ।
ಶಾಂಸಪಾಯನಾದಯಶ್ಚಕ್ರುಃ ಪುರಾಣಾನಾಂ ತು ಸಂಹಿತಾಃ ॥

ಈ ವಚನಗಳಿಂದ ಈಗ ರೂಢಿಯಲ್ಲಿರುವ ಅಷ್ಟಾದಶಪುರಾಣಗಳು ವೇದವ್ಯಾಸರಿಂದಾದವುಗಳಲ್ಲವೆಂದು ತಿಳಿಯಬರುತ್ತದೆ. ಅವರ ಶಿಷ್ಯ ಪ್ರಶಿಷ್ಯರುಗಳು ಪುರಾಣಸಂಹಿತೆಗಳನ್ನು ಮಾಡಿದ್ದರು. ಈಗ ರೂಢಿಯಲ್ಲಿರುವವುಗಳು ಯಾರಿಂದ ಯಾವಾಗ ಆದವೋ ಗೊತ್ತೇ ಇಲ್ಲ.

ಈಗ ಯೂರೋಪೀಯರ ಸಾಧಾರಣಭ್ರಮೆಯ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳೋಣ:

ಒಂದೊಂದು ಪುರಾಣವನ್ನು ಒಬ್ಬೊಬ್ಬನು ಬರೆದಿರುವನೆಂದು ಯೂರೋಪೀಯ ಪಂಡಿತರು ತಿಳಿದು ಭ್ರಮೆಗೊಳ್ಳುತ್ತಿರುವರು. ಈ ಭ್ರಮೆಗೆ ಸಿಲುಕಿಯೇ ಅವರು ಸಮಸ್ತ ಪುರಾಣಗಳ ಪ್ರಣಯನ ಕಾಲವನ್ನೂ ನಿರೂಪಿಸತೊಡಗಿದರು. ವಸ್ತುತಃ ಯಾವ ಪುರಾಣದೊಳಗಣ ಸಮಸ್ತ ವಿಷಯುಗಳೂ ಒಬ್ಬನಿಂದಾದವುಗಳಲ್ಲ. ಈಗಿನ ಪುರಾಣಗಳೆಲ್ಲ ಬರೀ ಸಂಗ್ರಹಗಳು. ಸಂಗ್ರಹಿತವಾದವುಗಳು ಬೇರೆ ಬೇರೆ ಕಾಲದ ರಚನೆಗಳು. ಈ ಮಾತನ್ನು ಕೊಂಚ ಬಿಡಿಸಿ ಹೇಳುವೆವು.

ಮೊದಲು 'ಪುರಾಣ' ಎಂದರೆ ಪುರಾತನ ಎಂದು; ಆಮೇಲೆ ಪುರಾತನ ಘಟನೆಗಳ ವಿವರಣೆ. ಸಕಲ ಸಮಯುಗಳಲ್ಲಿಯೂ ಪುರಾತನ ಘಟನೆಗಳಿದ್ದುವು; ಆದುದರಿಂದ ಸಕಲ ಸಮಯುಗಳಲ್ಲಿಯೂ ಪುರಾಣವುಂಟು. ವೇದದಲ್ಲಿಯೂ ಪುರಾಣವಿದೆ. ಶತಪಥ ಗೋಪಥ ಬ್ರಾಹ್ಮಣಗಳಲ್ಲೂ, ಆಶ್ವಲಾಯನ ಸೂತ್ರಗಳಲ್ಲೂ, ಅಥರ್ವ ಸಂಹಿತೆಯಲ್ಲೂ, ಬೃಹದಾರಣ್ಯಕದಲ್ಲೂ, ಛಾಂದೋಗ್ಯೋಪನಿಷತ್ತಿನಲ್ಲೂ, ಮಹಾಭಾರತದಲ್ಲೂ, ರಾಮಾಯಣದಲ್ಲೂ, ಮಾನವ ಧರ್ಮಶಾಸ್ತ್ರದಲ್ಲೂ, ಇಷ್ಟೇಯೇನು, ಸರ್ವಕಡೆಗಳಲ್ಲೂ ಪುರಾಣವು ಪ್ರಚಲಿತವಾಗಿರುವ ಮಾತಿದೆ. ಆದರೆ

ಈ ಗ್ರಂಥಗಳಾವುದರಲ್ಲೂ ಈಗಿನ ಯಾವ ಪುರಾಣದ ಹೆಸರೂ ಇಲ್ಲ. ಅತಿ ಪ್ರಾಚೀನ ಕಾಲದಲ್ಲಿ ಭಾರತವರ್ಷದಲ್ಲಿ ಲಿಪಿ ವಿದ್ಯೆ ಎಂದರೆ ಬರೆಯುವ ಮತ್ತು ಓದುವ ರೂಢಿಯು ಇದ್ದರೂ ಗ್ರಂಥಗಳನ್ನು ಬರೆದಿಡುತ್ತಿರಲಿಲ್ಲ ವೆಂಬುದನ್ನು ವಾಚಕರು ಜ್ಞಾಪಕದಲ್ಲಿಡಬೇಕು. ಬಾಯಿ ಬಾಯಿಯಲ್ಲೇ, ರಚಿಸಲ್ಪಟ್ಟು, ಅಧೀತವಾಗುತ್ತಲೂ ಪ್ರಚಾರಿತವಾಗುತ್ತಲೂ ಇದ್ದುವು.

ಪ್ರಾಚೀನ ಪೌರಾಣಿಕ ವೃತ್ತಾಂತಗಳೆಲ್ಲವೂ ಹೀಗೆ ಬಾಯಿಂದ ಬಾಯಿಗೆ ಹರಡಿ ಬಹುವೇಳೆ ಬರೀ ಹೇಳಿಕೆಗಳಾಗಿ ಪರಿಣಾಮಗೊಂಡಿದ್ದವು. ಆಮೇಲೆ ಒಂದಾನೊಂದು ಕಾಲದಲ್ಲಿ ಹೇಳಿಕೆಗಳನ್ನೂ ಪ್ರಾಚೀನ ರಚನೆ ಗಳನ್ನೂ ಒಟ್ಟುಗೂಡಿಸಿದ ಪುರಾಣಗಳು ಒಂದೊಂದಾಗಿ ತಯಾರಾದುವು. ವೇದದ ಸೂಕ್ತಿಗಳೆಲ್ಲವೂ ಈ ರೀತಿಯಾಗಿ ಕೂಡಿಸಲ್ಪಟ್ಟು ಋಗ್ಯಜುಸ್ಸಾಮ ಗಳೆಂಬ ಮೂರು ಭಾಗಗಳಾಗಿ ವಿಂಗಡವಾದವು. ಹೀಗೆ ವೇದಗಳನ್ನು ವಿಂಗಡಿಸಿದವನು ವಿಭಾಗಮಾಡಿದುದಕ್ಕಾಗಿ ವ್ಯಾಸ (ವಿಂಗಡಿಕ)ನೆಂಬ ಹೆಸರನ್ನು ಪಡೆದನಲ್ಲದೆ ವ್ಯಾಸನೆಂಬುದು ಅವನ ಹುಟ್ಟು ಹೆಸರಲ್ಲ. ಇವನ ಹೆಸರು ಕೃಷ್ಣ ದ್ವೀಪದಲ್ಲಿ ಹುಟ್ಟಿದುದರಿಂದ ಕೃಷ್ಣದ್ವೈಪಾಯನ ನೆಂದು ಕರೆಯುತ್ತಿದ್ದರು. ಇಲ್ಲಿ ಪುರಾಣಗಳನ್ನು ವಿಂಗಡಿಸಿದವನ ವಿಷಯ ದಲ್ಲಿ ಎರಡು ಮತಗಳಿಗೆ ದಾರಿಯುಂಟು. ವೇದಗಳನ್ನು ವಿಂಗಡಿಸಿದ ಕೃಷ್ಣದ್ವೈಪಾಯನನೇ ಪುರಾಣಗಳನ್ನೂ ಕೂಡಿಸಿದನೆಂಬುದೊಂದು ಮತ. ಹೀಗಿಲ್ಲದಿರಬಹುದಾದರೂ ಪುರಾಣಗಳನ್ನು ಕೂಡಿಸಿದವನಿಗಂತೂ 'ವ್ಯಾಸ' ನೆಂಬ ಬಿರುದು ಬಂದೇಬರುವುದು ಸಂಭವ. ಈಗಿರುವ ಹದಿನೆಂಟು ಪುರಾಣಗಳೂ ಒಬ್ಬನಿಂದ ಅಥವಾ ಒಂದೇ ಕಾಲದಲ್ಲಿ ಕೂಡಿಸಿದವುಗಳು ಅಥವಾ ವಿಂಗಡವಾದುವುಗಳೆಂದು ಕಂಡುಬರುವುದಿಲ್ಲ. ಬೇರೆಬೇರೆ ಕಾಲಗಳಲ್ಲಿ ಇವು ಜೋಡಿಸಲ್ಪಟ್ಟುವೆಂಬುದಕ್ಕೆ ಈ ಪುರಾಣಗಳಲ್ಲಿಯೇ ಪ್ರಮಾಣಗಳಿರುವುವು. ಹಾಗಾದರೆ ಪುರಾಣ ವಿಷಯವನ್ನು ಭದ್ರಪಡಿಸಿ ಪುರಾಣ ಪುಸ್ತಕವೊಂದನ್ನು ತಯಾರುಮಾಡಿದವನೇ ವ್ಯಾಸನೆಂಬ ಹೆಸರಿಗೆ ಅಧಿಕಾರಿ. ಆದುದರಿಂದಲೇ ಅಷ್ಟಾದಶಪುರಾಣಗಳೂ—ವ್ಯಾಸನಿಂದಲೇ ಆದುವುಗಳೆಂಬ ಹೇಳಿಕೆಯು ಹುಟ್ಟಿರಬೇಕು. ಆದರೆ ವ್ಯಾಸರು ಒಬ್ಬನಲ್ಲ. ಹಲವರು ಈ ಬಿರುದನ್ನು ಪಡೆದಿದ್ದರೆಂಬುದಕ್ಕೆ ಅನೇಕ ಕಾರಣಗಳುಂಟು.

ವೇದಗಳನ್ನು ವಿಭಾಗಿಸಿದ ವ್ಯಾಸನು, ಮಹಾಭಾರತವನ್ನು ಬರೆದ ವ್ಯಾಸನು, ಅಷ್ಟಾದಶಪುರಾಣಗಳನ್ನು ಬರೆದ ವ್ಯಾಸನು, ವೇದಾಂತ ಸೂತ್ರಗಳನ್ನು ಬರೆದ ವ್ಯಾಸನು, ಇಷ್ಟೇಯೇಕೆ; ಪಾತಂಜಲದರ್ಶನಕ್ಕೆ ಟೀಕನ್ನು ಬರೆದ ವ್ಯಾಸನು ಇವರೆಲ್ಲರೂ ಒಬ್ಬನೇ ಆಗಲಾರರು. ಮೊನ್ನೆಯೊಂದು ಭಾರತೀಯರ ದೊಡ್ಡ ಸಭೆಯು ಕಾಶಿಯಲ್ಲಿ ಸೇರಿತ್ತು. ಅಲ್ಲಿಗೂ ವ್ಯಾಸರಿಬ್ಬರು ದಯಮಾಡಿದ್ದರೆಂದು ವರ್ತಮಾನ ಪತ್ರಿಕೆಯಲ್ಲಿ ಓದಿದೆನು ; ಒಬ್ಬನ ಹೆಸರು ಹರೀ ಕೃಷ್ಣ ವ್ಯಾಸ. ಇನ್ನೊಬ್ಬನು ಶ್ರೀಯುಕ್ತ ಅಂಬಿಕಾದತ್ತ ವ್ಯಾಸ. ಹಲವರು ವ್ಯಾಸನೆಂಬ ಹೆಸರನ್ನು ಧರಿಸಿದ್ದರೆಂಬುದಕ್ಕೆ ಸಂದೇಹವಿಲ್ಲ. ವೇದವಿಭಕ್ತ ವ್ಯಾಸನೂ, ಮಹಾಭಾರತ ಪ್ರಣೀತ ವ್ಯಾಸನೂ, ಅಷ್ಟಾದಶ ಪುರಾಣಗಳನ್ನು ಕೂಡಿಸಿದ ಹದಿನೆಂಟು ವ್ಯಾಸರೂ ಒಬ್ಬನೇ ಅಲ್ಲವೆಂಬುದೇ ಸರಿಯೆಂದು ತೋರುವುದು.

ಎರಡನೆಯ ಮತವು ಹೀಗಿರಬಹುದು. ಕೃಷ್ಣದ್ವೈಪಾಯನನೇ ಮೊಟ್ಟಮೊದಲು ಪುರಾಣವನ್ನು ಕೂಡಿಸಿದವನು. ಅವನು ವೇದದ ಸೂಕ್ತಿಗಳನ್ನು ಕೂಡಿಸಿದ್ದಂತೆಯೇ ಪುರಾಣ ಸಂಬಂಧವಾಗಿಯೂ ಒಂದು ಸಂಗ್ರಹವನ್ನು ಮಾಡಿದ್ದನು. ವಿಷ್ಣು, ಭಾಗವತ, ಅಗ್ನಿ ಮೊದಲಾದ ಪುರಾಣಗಳಿಂದ ಮೇಲೆ ಎತ್ತಿರುವ ಶ್ಲೋಕಗಳಿಂದಲೇ ಹೀಗೆಂದು ತೋರುವುದು. ಆದುದರಿಂದ ನಾವೂ ಅದೇ ಮತವನ್ನನುಸರಿಸಲು ಸಿದ್ಧರಾಗಿರುವೆವು ಆದರೆ ಇವುಗಳಿಂದ ವ್ಯಾಸನು ಒಂದು ಪುರಾಣವನ್ನು ಮಾತ್ರ ರಚಿಸಿದನೇ ಹೊರತು ಹದಿನೆಂಟನ್ನಲ್ಲವೆಂದು ಪ್ರಮಾಣವಾಗುವುದು. ಈಗ ಆ ಪುರಾಣವಿಲ್ಲ, ಅದನ್ನೊಡೆದು ಅವನ ಶಿಷ್ಯರು ಮೂರು ಪುರಾಣಗಳನ್ನು ಮಾಡಿದರು. ಅವೂ ಇಲ್ಲ. ಕಾಲಕ್ರಮವಾಗಿ ಅವು ಹಲವು ಜನಗಳ ಕೈಗೆ ಬಿದ್ದು ಹದಿನೆಂಟಾದುವು.

ಇವುಗಳಲ್ಲಾವ ಮತವನ್ನವಲಂಬಿಸಿದರೂ ಬೇರೆಬೇರೆ ಪುರಾಣಗಳ ಸಮಯವನ್ನು ಕಂಡುಹಿಡಿಯುವ ಪ್ರಯತ್ನದ ಫಲವು ಯಾವ ಕಾಲದಲ್ಲಿ ಯಾವ ಪುರಾಣವು ಸಂಕಲಿತವಾಯಿತು ಎಂಬುದನ್ನು ಗೊತ್ತುಮಾಡಬೇಕಾಗಿರುವುದು. ಆದರೆ ಹೀಗಾಗಿರಬಹುದೆಂಬ ನಂಬಿಕೆಯು ನಮಗುಂಟಾಗುವುದಿಲ್ಲ. ಗ್ರಂಥಗಳನ್ನು ಮಾಡಿದಮೇಲೋ ಅಥವಾ

ಕೂಡಿಸಿದನೋ‌ಲೋ ಹೊಸ ರಚನೆಗಳನ್ನು ಹಳೆಯದರ ಜೊತೆಗೆ ಕೂಡಿಸಿರ ಬೇಕು. ಪುರಾಣಗಳ ವಿಷಯದಲ್ಲಿ ಹೀಗಾಗಿಯೇ ಇದೆಯಲ್ಲವೆ? ಆದುದ ರಿಂದ ಯಾವ ಅಂಶವನ್ನು ಹಿಡಿದು ಸಂಕಲನ ಸಮಯವನ್ನು ಗೊತ್ತು ಮಾಡೋಣ? ಉದಾಹರಣೆಯೊಂದರಿಂದ ಈ ಕಷ್ಟವನ್ನು ವಿಶದ ಪಡಿಸುವೆವು.

ಮತ್ಸ್ಯಪುರಾಣದಲ್ಲಿ ಬ್ರಹ್ಮವೈವರ್ತ ಪುರಾಣದ ವಿಷಯವಾಗಿ ಈ ಕೆಳಗಿನ ಎರಡು ಶ್ಲೋಕಗಳುಂಟು:

"ರಥನ್ತರಸ್ಯ ಕಲ್ಪಸ್ಯ ವೃತ್ತಾಂತಮಧಿಕೃತ್ಯ ಯತ್ |
ಸಾವರ್ಣಿನಾ ನಾರದಾಯ ಕೃಷ್ಣಮಾಹಾತ್ಮ್ಯ ಸಂಯುತಮ್ ||
ಯತ್ರ ಬ್ರಹ್ಮವರಾಹಸ್ಯ ಚರಿತಂ ವರ್ಣ್ಯತೇ ಮುಹುಃ |
ತದಷ್ಟಾದಶ ಸಾಹಸ್ರಂ ಬ್ರಹ್ಮವೈವರ್ತಮುಚ್ಯತೇ || "

ಅಂದರೆ, ರಥಂತರಕಲ್ಪವೃತ್ತಾಂತವನ್ನು ಕುರಿತು ಕೃಷ್ಣಮಾಹಾತ್ಮೆ ಯಿಂದ ಕೂಡಿದ ಕಥೆಯನ್ನು ನಾರದನಿಗೆ ಸಾವರ್ಣಿ ಯಾವುದರಲ್ಲಿ ಹೇಳಿರುವನೋ ಮತ್ತು ಯಾವುದರಲ್ಲಿ ಬಾರಿಬಾರಿಗೂ ಬ್ರಹ್ಮವರಾಹ ಚರಿತೆಯು ಹೇಳಲ್ಪಟ್ಟಿರುವುದೋ ಆ ಹದಿನೆಂಟುಸಾವಿರ ಶ್ಲೋಕಗಳಿಂದ ಕೂಡಿದ ಪುರಾಣವೇ ಬ್ರಹ್ಮವೈವರ್ತ.

ಈಗ ಬ್ರಹ್ಮವೈವರ್ತವೆಂದು ಹೇಳಿಸಿಕೊಳ್ಳುತಲಿರುವ ಪುರಾಣವು ನಾರದನಿಗೆ ಸಾವರ್ಣಿ ಹೇಳಿದುದಲ್ಲ. ನಾರಾಯಣನೆಂಬ ಬೇರೆ ಯೊಬ್ಬನು ನಾರದನಿಗೆ ಹೇಳಿರುತ್ತಾನೆ. ಇದರಲ್ಲಿ ರಥಂತರಕಲ್ಪದ ಪ್ರಸಂಗವೇ ಇಲ್ಲ. ಮತ್ತು ಬ್ರಹ್ಮವರಾಹ ಚರಿತ್ರೆಯ ಹೆಸರೂ ಇಲ್ಲ. ಈಗಿನ ಬ್ರಹ್ಮವೈವರ್ತದಲ್ಲಿ ಪ್ರಕೃತಿಖಂಡ, ಗಣೇಶಖಂಡಗಳು ಇವೆ. ಇವುಗಳ ಹೆಸರೇ ಮೇಲಿನ ಶ್ಲೋಕಗಳಲ್ಲಿಲ್ಲ. ಆದುದರಿಂದ ಪ್ರಾಚೀನ ಬ್ರಹ್ಮವೈವರ್ತ ಪುರಾಣ ಈಗ ಇಲ್ಲವೇ ಇಲ್ಲ. ಈಗ ಬ್ರಹ್ಮವೈವರ್ತ ವೆಂದು ಹೇಳಿಸಿಕೊಳ್ಳುತಲಿರವುದು ಹೊಸದೊಂದು ಗ್ರಂಥ. ಹೀಗಿರಲು ಬ್ರಹ್ಮವೈವರ್ತ ಪುರಾಣ ಸಂಕಲನ ಕಾಲವನ್ನು ನಿರೂಪಿಸುವುದು ಅಪೂರ್ವ ರಹಸ್ಯವೆಂದೇ ತೋರುವುದು.

ವಿಲ್ಸನ್ ಸಾಹೇಬರು ಎಲ್ಲಾ ಪುರಾಣಗಳೂ ಆದ ಕಾಲಗಳನ್ನು ಹೀಗೆಂದು ಗೊತ್ತುಮಾಡಿದ್ದಾರೆ:—

೧. ಬ್ರಹ್ಮಪುರಾಣ	ಕ್ರಿಸ್ತಾಬ್ದ	ಹದಿಮೂರು ಅಥವಾ ಹದಿನಾಲ್ಕನೆಯ ಶತಮಾನದ್ದು.
೨. ಪದ್ಮಪುರಾಣ*	,,	ಹದಿಮೂರು ಮತ್ತು ಹದಿನಾರನೆಯ ಶತಮಾನಗಳ ನಡುವೆ.
೩. ವಿಷ್ಣುಪುರಾಣ	,,	ಹತ್ತನೆಯ ಶತಮಾನದ್ದು
೪. ವಾಯುಪುರಾಣ	,,	ಕಾಲವನ್ನು ಗೊತ್ತುಮಾಡಿಲ್ಲ—ಪ್ರಾಚೀನವೆಂದು ಬರೆದಿರುವನು.
೫. ಭಾಗವತಪುರಾಣ	,,	ಹದಿಮೂರನೆಯ ಶತಮಾನದ್ದು.
೬. ನಾರದಪುರಾಣ	,,	ಹದಿನಾರು ಅಥವಾ ಹದಿನೇಳನೆಯ ಶತಮಾನದ್ದು. ಅಂದರೆ ೨೦೦—೩೦೦ ವರ್ಷದ ಗ್ರಂಥ.
೭. ಮಾರ್ಕಂಡೇಯಪುರಾಣ	,,	ಒಂಬತ್ತು ಅಥವಾ ಹತ್ತನೆಯ ಶತಮಾನದ್ದು.
೮. ಅಗ್ನಿಪುರಾಣ	,,	ಅನಿಶ್ಚಿತ: ಬಹಳ ಹೊಸದು.
೯. ಭವಿಷ್ಯಪುರಾಣ	,,	ಸರಿಯಾಗಿ ಗೊತ್ತಾಗಿಲ್ಲ.
೧೦. ಲಿಂಗಪುರಾಣ	,,	ಎಂಟು ಅಥವಾ ಒಂಬತ್ತನೆಯ ಶತಮಾನದ ಅತ್ತ ಇತ್ತ.
೧೧. ವರಾಹಪುರಾಣ	,,	ಹನ್ನೆರಡನೆಯ ಶತಮಾನದ್ದು.
೧೨. ಸ್ಕಂದಪುರಾಣ	,,	ಬೇರೆಬೇರೆ ಕಾಲದಲ್ಲಿನ ಐದು ಪುರಾಣಗಳ ಸಂಗ್ರಹ.
೧೩. ವಾಮನಪುರಾಣ	,,	ಮುನ್ನೂರು ನಾನೂರು ವರ್ಷಗಳ ಹಿಂದಿನ ಗ್ರಂಥ.
೧೪. ಕೂರ್ಮಪುರಾಣ	,,	ಹಳೆಯದಲ್ಲ.
೧೫. ಮತ್ಸ್ಯಪುರಾಣ	,,	ಪದ್ಮಪುರಾಣಕ್ಕೂ ಈಚಿನದು.
೧೬. ಗರುಡಪುರಾಣ	}	ಪ್ರಾಚೀನ ಪುರಾಣಗಳಲ್ಲ, ಈಚಿನ ಗ್ರಂಥಗಳು, ಪುರಾಣಗಳೇ ಅಲ್ಲ.
೧೭. ಬ್ರಹ್ಮವೈವರ್ತಪುರಾಣ		
೧೮. ಬ್ರಹ್ಮಾಂಡಪುರಾಣ		

ಪಾಠಕರೆ, ನೋಡಿದಿರೋ, ಇವನ ಮತದಲ್ಲಿ (ಈ ಮತವೇ ರೂಢಿಗೆ ಬಂದಿರುವುದು) ಪುರಾಣವಾವುದೂ ಒಂದು ಸಾವಿರ ವರ್ಷಗಳಿಗಿಂತ ಹಳೆಯದಲ್ಲ. ಇಂಗ್ಲೀಷು ಓದಿಯೂ ಬುದ್ಧಿಗೆಟ್ಟವರನ್ನು ಬಿಟ್ಟರೆ ಈ ಸಮಯ

*ಹಾಗಾದರೆ ಇದೇನು ನೂರಿನ್ನೂರು ಅಥವಾ ಮುನ್ನೂರು ನಾನೂರು ವರ್ಷಗಳೊಳಗಿನ ಗ್ರಂಥವೆ !

ನಿರ್ಧಾರಣೆ ಸರಿಯಾದುದೆಂದು ಹಿಂದುವಾದ ಯಾರಿಗೂ ತೋರುವುದಿಲ್ಲ. ಇದರ ಹೆದ್ದಟ್ಟು ಒಂದೆರಡು ಮಾತುಗಳಿಂದಲೇ ಪ್ರಮಾಣವಾಗುವುದು.

ಕಾಳಿದಾಸನು ವಿಕ್ರಮಾದಿತ್ಯನ ಕಾಲದಲ್ಲಿದ್ದನೆಂದೂ, ವಿಕ್ರಮಾರ್ಕನು ಕ್ರಿ.ಪೂ. ೫೬ನೆಯ ವರ್ಷದಲ್ಲಿ ಬದುಕಿದ್ದನೆಂದೂ ಈ ದೇಶದ ಜನಗಳ ನಂಬುಗೆ ಇರುವುದಷ್ಟೆ. ಆದರೆ ಈಗ ಆ ಮಾತೆಲ್ಲಾ ಹಾರಿಹೋಗಿರುವುದು. ಕಾಳಿದಾಸನು ಕ್ರಿ.ಶ. ಆರನೆಯ ಶತಮಾನದವನೆಂದು ಡಾಕ್ಟರ್ ಭಾಯಿದಾಜಿ ಯವರು ಗೊತ್ತುಮಾಡಿದ್ದಾರೆ. ಈಗ ಯೂರೋಪೆಲ್ಲ ಮಾತ್ರವೇ ಏನು, ಯೂರೋಪೀಯರ ದೇಶೀಯ ಶಿಷ್ಯರೂ ಕೂಡ ಇದೇ ಸರಿಯೆಂದು ಬಲವಾಗಿ ಕೂಗುತ್ತಿದ್ದಾರೆ. ನಾವೂ ಈ ಮಾತನ್ನು ತಳ್ಳಿಹಾಕಿಲ್ಲ.* ಸರಿ, ಕಾಳಿದಾಸನು ಆರನೆಯ ಶತಮಾನದವನೇ ಆಗಲಿ. ಪುರಾಣಗಳೆಲ್ಲವೂ ಅವನ ಅನಂತರ ಬಹಳ ಕಾಲವಾದಮೇಲೆ ಆದುವು; ಹೀಗೆಂದೇ ಮೇಲೆ ಎತ್ತಿದ ವಿಲ್ಸನ್ ಸಾಹೇಬರ ವಿಚಾರದಿಂದ ಸ್ಥಿರವಾಗಿದೆಯಷ್ಟೆ. ಕಾಳಿದಾಸ ನಾದರೋ ಮೇಘದೂತದಲ್ಲಿ ಹೀಗೆಂದು ಬರೆದಿರುವನು :—

"ಯೇನ ಶ್ಯಾಮಾಂ ವಪುರತಿತರಾಂ ಕಾಂತಿಮಾಪತ್ಸ್ಯತೇ ತೇ ।
ಬರ್ಹೇಣೇವ ಸ್ಫುರಿತ ರುಚಿನಾ ಗೋಪವೇಷಸ್ಯ ವಿಷ್ಣೋಃ ॥"

೧೫ನೆಯ ಶ್ಲೋಕ

ನವಿಲುಗರಿಯ ತುರಾಯಿಯನ್ನಿಟ್ಟುಕೊಂಡು ಬೆಳಗುತ್ತಿರುವ ಗೊಲ್ಲ ವೇಷದ ವಿಷ್ಣುವಿನೊಡನೆ ಕಾಮನಬಿಲ್ಲಿನಿಂದ ಕೂಡಿದ ಮೇಘಕ್ಕೆ ಹೋಲಿಕೆ ಯನ್ನು ಮಾಡಿದೆ. ವಿಷ್ಣುವಿಗೆ ಗೊಲ್ಲವೇಷವಿಲ್ಲ! ವಿಷ್ಣುವಿನ ಅವತಾರ ವಾದ ಕೃಷ್ಣನು ಗೊಲ್ಲವೇಷವನ್ನು ಹಾಕಿಕೊಂಡಿದ್ದವನು. ಕಾಮನಬಿಲ್ಲಿ ನೊಡನೆ ಕೃಷ್ಣನ ತಲೆಯಮೇಲಿನ ತುರಾಯಿಯಾದ ನವಿಲುಗರಿ ಕಣ್ಣು ಉಪಮೆಯು. ಆರನೆಯ ಶತಮಾನಕ್ಕೆ ಮುಂಚೆ ಪುರಾಣಗಳಾವುವೂ

---

*ಈಚೆಗೆ ಮುಂದೇಸರದ (ಪೂರ್ವದ ದಶಪುರ) ಶಿಲಾಶಾಸನದಿಂದ ಫರ್ಗುಸನ್ Ferguson)ರ Karur Theory ಯು ಧ್ವಂಸವಾಗಿ ಕಾಳಿದಾಸನಿಷ್ಟು ಈಚಿನವ ನಲ್ಲವೆಂದು ಗೊತ್ತಾಗಿದೆ. 'ರ.ನಾ. ಆಪ್ತೆ'ಯವರು ಬಹಳ ಶೋಧಿಸಿ ಇವನು ಕ್ರಿಸ್ತಶಕಾರಂಭದಲ್ಲಿದ್ದವನೆಂದು ಗೊತ್ತುಹಿಡಿದಿದ್ದಾರೆ. ಡಾ॥ ಪೀಟರ್‌ಸನ್ ಸಾಹೇ ಬರು (Dr. Peterson) "Kalidasa stands near the beginning of the Christian Era if indeed he does not overtop it" ಎಂದು ಹೇಳಿದ್ದಾರೆ. ರಾ. ವ್ಯಾ.

ಇಲ್ಲದಿರಲು ಕೃಷ್ಣನ ನವಿಲುಗರಿ ಕಣ್ಣಿನ ತುರಾಯಿಯ ವಿಷಯವು ದೊರೆತು ದೆಲ್ಲಿಂದಲೆಂದು ಯೂರೋಪೀಯ ಮಹಾಮಹೋಪಾಧ್ಯಾಯರಲ್ಲಿ ವಿನಯ ದಿಂದ ಬೇಡುತ್ತಿದ್ದೇನೆ. ಈ ಮಾತೇನು ವೇದದಲ್ಲಿಯೋ, ಮಹಾಭಾರತ ದಲ್ಲೋ ಅಥವಾ ರಾಮಾಯಣದಲ್ಲೋ? ಎಲ್ಲೂ ಇಲ್ಲವಲ್ಲ. ಪುರಾಣ ಅಥವಾ ಅವನ್ನನುಸರಿಸಿದ ಗೀತಗೋವಿಂದ ಮುಂತಾದ ಕಾವ್ಯಗಳನ್ನು ಬಿಟ್ಟರೆ ಮತ್ತೆ ಲ್ಲಿಯೂ ಇಲ್ಲ. ಹರಿವಂಶದಲ್ಲೇನೋ ಇದೆ; ಆದರೆ ವಿಲ್ಸನ್ ಸಾಹೇಬರ ಅಭಿ ಪ್ರಾಯದಲ್ಲಿ ಹರಿವಂಶವು ವಿಷ್ಣು ಪುರಾಣಕ್ಕೂ ಈಚಿನದು. ಅಂತೂ ಕಾಳಿದಾಸ ನಿಗೆ ಮುಂಚೆ ಎಂದರೆ ಆರನೆಯ ಶತಮಾನಕ್ಕೆ ಪೂರ್ವ ಹರಿವಂಶವೋ ಮತ್ತಾವ ವೈಷ್ಣವ ಪುರಾಣವೋ ಪ್ರಚಾರವಾಗಿದ್ದಿರಬೇಕೆಂಬುದೇನೊ ಖಂಡಿತ.

ಇನ್ನೊಂದು ಮಾತನ್ನು ಹೇಳಿ ಇದನ್ನು ಮುಗಿಸುತ್ತೇನು. ಈಗ ಬ್ರಹ್ಮವೈವರ್ತ ಪುರಾಣವೆಂದು ಪ್ರಚಾರದಲ್ಲಿರುವುದು ಪ್ರಾಚೀನ ಬ್ರಹ್ಮ ವೈವರ್ತವಲ್ಲವಾದರೂ ಹನ್ನೊಂದನೆಯ ಶತಮಾನಕ್ಕಿಂತ ಹಳೆಯದು. ಏಕೆಂದರೆ ಗೀತಗೋವಿಂದವನ್ನು ಬರೆದ ಜಯದೇವ ಗೋಸ್ವಾಮಿ ಗೌಡ ದೇಶಕ್ಕೆ ಒಡೆಯನಾದ ಲಕ್ಷ್ಮಣಸೇನನ ಸಭಾ ಪಂಡಿತನು. ಲಕ್ಷ್ಮಣ ಸೇನನು ಹನ್ನೆರಡನೆಯ ಶತಮಾನದ ಆದಿಯಲ್ಲಿದ್ದವನು. ಈ ಅಂಶವು ಬಾಬು ರಾಜಕೃಷ್ಣ ಮುಖ್ಯೋಪಾಧ್ಯಾಯನಿಂದ ನಿರ್ಧರಿಸಲ್ಪಟ್ಟು ಇಂಗ್ಲಿಷಿನವರಿಂದಲೂ ಸ್ವೀಕರಿಸಲ್ಪಟ್ಟಿರುತ್ತದೆ. ಈಗಿನ ಬ್ರಹ್ಮವೈವರ್ತ ಪುರಾಣ ಆಗ ಪ್ರಚಲಿತವಾಗಿಯೂ ವಿಶೇಷವಾದ ಸನ್ಮಾನಕ್ಕೆ ಆಕರ ವಾಗಿಯೂ ಇಲ್ಲದಿದ್ದಲ್ಲಿ ಗೀತಗೋವಿಂದ ರಚಿಸಲ್ಪಡುತ್ತಿರಲಿಲ್ಲವೆಂಬು ದನ್ನು ನಾವು ಮುಂದೆ ತೋರಿಸುವೆವು, ಮತ್ತು ಈ ಬ್ರಹ್ಮವೈವರ್ತ ಪುರಾಣದಲ್ಲಿನ ಶ್ರೀಕೃಷ್ಣ ಜನ್ಮಖಂಡದ ಹದಿನೈದನೆಯ ಅಧ್ಯಾಯ ಆಗ್ಗೆ ರೂಢಿಯಲ್ಲಿಲ್ಲದಿದ್ದರೆ ಗೀತಗೋವಿಂದದ ಮೊದಲನೆಯ ಶ್ಲೋಕವಾದ "ಮೇಘೈರ್ಮೇದುರಮಂಬರಂ" ಮುಂತಾದುದನ್ನೆಂದಿಗೂ ಬರೆಯುವುದ ಕ್ಕಾಗುತ್ತಿರಲಿಲ್ಲ. ಆದುದರಿಂದ ಈ ಭ್ರಷ್ಟ ಬ್ರಹ್ಮವರ್ತವೂ ಕೂಡ ಹನ್ನೊಂದನೆಯ ಶತಮಾನಕ್ಕಿಂತಲೂ ಮುಂಚಿನದು. ಆದಿಮ ಬ್ರಹ್ಮ ವೈವರ್ತವು ಯಾವ ಕಾಲದ್ದೋ ನಾವು ಕಾಣೆವು. ಆದರೂ ವಿಲ್ಸನ್ ಸಾಹೇಬರ ಅಭಿಪ್ರಾಯದಲ್ಲಿ ಅದು ಇನ್ನೂರು ವರ್ಷದ್ದು ಆಯಿತು!

ಪಂಚದಶ ಪರಿಚ್ಛೇದ

ಪು ರಾ ಣ

ಹದಿನೆಂಟು ಪುರಾಣಗಳನ್ನೂ ಒಟ್ಟುಗೂಡಿಸಿ ನೋಡಲು ಅನೇಕ ಶ್ಲೋಕಗಳು ಎಲ್ಲವುಗಳಲ್ಲಿಯೂ ಒಂದೇಯಾಗಿವೆ. ಒಂದೊಂದು ಕಡೆ ಕೊಂಚ ಪಾಠಾಂತರವುಂಟು, ಇನ್ನು ಕೆಲವೆಡೆಗಳಲ್ಲಿ ಅದೂ ಇಲ್ಲ. ಈ ಪರಿಚ್ಛೇದದಲ್ಲಿ ಇಂತಹ ಕೆಲವು ಶ್ಲೋಕಗಳನ್ನು ಎತ್ತಿದೇವೆ, ಇನ್ನೂ ಎತ್ತುವೆವು. ನಂದ ಮಹಾಪದ್ಮನ ಸಮಯವನ್ನು ನಿರ್ಣಯಿಸಲು ಎತ್ತಿದ ಕೆಲವು ಶ್ಲೋಕಗಳನ್ನು ಇದಕ್ಕೆ ಉದಾಹರಣೆಯಾಗಿ ಹೇಳಬಹುದು. ಇದಕ್ಕಿಂತ ಬಲುದೊಡ್ಡದಾದಿನ್ನೊಂದು ಉದಾಹರಣೆಯನ್ನು ಕೊಡುವೆವು. ಬ್ರಹ್ಮಪುರಾಣದ ಉತ್ತರಭಾಗದಲ್ಲಿ ಶ್ರೀ ಕೃಷ್ಣಚರಿತ್ರೆ ವಿಸ್ತಾರವಾಗಿ ಹೇಳಲ್ಪಟ್ಟಿದೆ ಮತ್ತು ವಿಷ್ಣುಪುರಾಣದ ಐದನೆಯ ಅಂಶದಲ್ಲೂ ಇದೇ ಚರಿತ್ರೆ ಇದೆ; ಎರಡಕ್ಕೂ ಏನೂ ವ್ಯತ್ಯಾಸವಿಲ್ಲ. ಅಕ್ಷರಕ್ಷರವೂ ಒಂದೇ. ಈ ಐದನೆಯ ಅಂಶದಲ್ಲಿರುವುದು ಇಪ್ಪತ್ತೆಂಟು ಅಧ್ಯಾಯಗಳು. ವಿಷ್ಣುಪುರಾಣದ ಇಪ್ಪತ್ತೆಂಟು ಅಧ್ಯಾಯಗಳಲ್ಲಿರುವ ಶ್ಲೋಕಗಳೆಲ್ಲವೂ ಬ್ರಹ್ಮಪುರಾಣದಲ್ಲಿಯೂ ಇರುವವು ಮತ್ತು ಬ್ರಹ್ಮಪುರಾಣದ ಕೃಷ್ಣ ಚರಿತ್ರೆಯಲ್ಲಿನ ಶ್ಲೋಕಗಳೆಲ್ಲವೂ ವಿಷ್ಣುಪುರಾಣದಲ್ಲಿಯೂ ಉಂಟು. ಈ ಎರಡು ಪುರಾಣಗಳಿಗೂ ಈ ಸಂಬಂಧದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಈ ಕೆಳಗೆ ಬರೆದಿರುವ ಮೂರು ಕಾರಣಗಳಲ್ಲಿ ಯಾವುದೋ ಒಂದು ಕಾರಣ ದಿಂದ ಹೀಗಾಗಿರಬೇಕು :

(೧) ಬ್ರಹ್ಮಪುರಾಣದಿಂದ ಕದ್ದು ಈ ಭಾಗವನ್ನು ವಿಷ್ಣುಪುರಾಣಕ್ಕೆ ಸೇರಿಸಿರಬೇಕು.

(೨) ವಿಷ್ಣುಪುರಾಣದಿಂದ ಕದ್ದು ಬ್ರಹ್ಮಪುರಾಣಕ್ಕೆ ಇದನ್ನು ಸೇರಿಸಿರಬೇಕು.

(೩) ಇದು ಯಾರೂ ಕದ್ದುದಲ್ಲ. ಈ ಕೃಷ್ಣಚರಿತ್ರೆಯು ಆದಿಮ ವೈಯಾಸಕೀ ಪುರಾಣಸಂಹಿತೆಯ ಅಂಶ, ಬ್ರಹ್ಮ ಮತ್ತು ವಿಷ್ಣುಪುರಾಣ ಗಳೆರಡರಲ್ಲೂ ಜೋಪಾನಮಾಡಲ್ಪಟ್ಟಿದೆ.

ಮೊದಲಿನೆರಡು ಕಾರಣಗಳು ಯಥಾರ್ಥವೆಂದು ನಂಬುವುದಕ್ಕಾಗುವುದಿಲ್ಲ. ಏಕೆಂದರೆ, ಹೀಗೆ ಪ್ರಸಿದ್ಧವಾದ ಗ್ರಂಥದಿಂದ ಇಪ್ಪತ್ತೆಂಟು ಅಧ್ಯಾಯಗಳನ್ನೂ ಕದಿಯುವುದು ಅಸಂಭವ; ಅಲ್ಲದೆ ಹೀಗೆ ಬೇರೆ ಇನ್ನೆಲ್ಲಿಯೂ ಕಂಡುಬರುವುದಿಲ್ಲ. ಕದಿಯುವವನು ಕೊಂಚ ಹೆಚ್ಚು ಕಡಿಮೆ ಮಾಡಿಯೇ ಮಾಡುವನು, ಅಲ್ಲದೆ ರಚನೆಯೂ ಕೂಡ ಕೊಂಚ ಬದಲಾಯಿಸುವುದಕ್ಕಾಗದೆ ಇರುವುದೇನೂ ಅಲ್ಲ. ಮತ್ತು ಈ ಇಪ್ಪತ್ತೆಂಟು ಅಧ್ಯಾಯಗಳು ಎರಡು ಪುರಾಣಗಳಲ್ಲಿಯೂ ಒಂದೇ ರೀತಿಯಾಗಿದ್ದರೂ ಕದ್ದವುಗಳೆಂದು ತಿಳಿದುಕೊಳ್ಳಲಾಗದು. ಏಕೆಂದರೆ ಬೇರೆಬೇರೆ ಪುರಾಣಗಳ ಅನೇಕ ಶ್ಲೋಕಗಳು ಹೀಗೆ ಪರಸ್ಪರ ಒಂದೇಯಾಗಿರುವುವು. ಹಲವು ಘಟನೆಗಳ ಸಂಬಂಧದಲ್ಲಿ ಪುರಾಣ ಪುರಾಣಕ್ಕೂ ವಿರೋಧವಿದ್ದರೂ ಇತರ ಹಲವು ಘಟನೆಗಳ ವಿಷಯದಲ್ಲಿ ಮಟ್ಟಿಗೆ ಐಕ್ಯವಿದ್ದು ಮೊದಲು ಹೇಳಿದ ಆದಿಮ ಪುರಾಣಸಂಹಿತೆಯಿತ್ತೆಂಬುದನ್ನು ಪ್ರಮಾಣಪಡಿಸುತ್ತಲಿವೆ. ಆ ಆದಿ ಸಂಹಿತೆಯು ಕೃಷ್ಣದ್ವೈಪಾಯನ ವ್ಯಾಸನಿಂದ ರಚಿಸಿದುದಲ್ಲವಾದರೂ ಆಗಬಹುದು. ಇದು ಬಹು ಪ್ರಾಚೀನವಾದುದೆಂತಲೇನೋ ಒಪ್ಪಲೇ ಬೇಕಾಗುವುದು. ಹೇಗೆಂದರೆ ಪುರಾಣಗಳಲ್ಲಿ ಹೇಳಲ್ಪಟ್ಟ ಹಲವು ಘಟನೆಗಳಿಗೆ ಖಂಡಿಸುವುದಕ್ಕಾಗದ ಅನೇಕ ಪ್ರಮಾಣಗಳು ಮಹಾಭಾರತದಲ್ಲೇ ಸಿಕ್ಕುವುದಾದರೂ ಅಲ್ಲಿ ವಿಶದವಾಗಿ ವರ್ಣಿಸಲ್ಪಟ್ಟಿಲ್ಲ; ಸುತರಾಂ ಇವುಗಳನ್ನು ಪುರಾಣಕಾರರು ಮಹಾಭಾರತದಿಂದಲೇ ಎತ್ತಿದರೆಂದೂ ಹೇಳುವುದಕ್ಕಾಗುವುದಿಲ್ಲ. ಇದನ್ನು ನಾವು ಮುಂದೆ ತೋರಿಸುವೆವು.

ವಿಲಾಯತೀ ರೀತಿಯಲ್ಲಿ ಎಲ್ಲಾ ಪುರಾಣಗಳ ಸಂಗ್ರಹ ಸಮಯವನ್ನೂ ಗೊತ್ತುಮಾಡಹೋಗಲು ಫಲಿತಾಂಶವೇನಾಗುವುದೆಂಬುದನ್ನು ನೋಡೋಣ. ವಿಷ್ಣುಪುರಾಣದ ನಾಲ್ಕನೆಯ ಅಂಶದ ಇಪ್ಪತ್ತನಾಲ್ಕನೆಯ ಅಧ್ಯಾಯದಲ್ಲಿ ಮಗಧದೇಶದ ರಾಜರ ವಂಶಾವಳಿಯನ್ನು ಹೇಳಿದ್ದಾರೆ. ವಿಷ್ಣುಪುರಾಣದಲ್ಲಿ ಹೇಳಿರುವ ವಂಶಾವಳಿಗಳೆಲ್ಲಾ ಭವಿಷ್ಯದ್ವಾಣಿಯ ಆಕಾರವನ್ನು ಪಡೆದಿದೆ. ಎಂದರೆ ವೇದವ್ಯಾಸರ ತಂದೆ ಪರಾಶರರು ಕಲಿಯ ಆದಿಯಲ್ಲಿ ವಿಷ್ಣುಪುರಾಣವನ್ನು ಹೇಳಿದರೆಂದು ಪುರಾಣಕಾರನು ಭೂಮಿಕೆಯನ್ನು ಹಾಕಿದಾನೆ. ಆಗ ನಂದವಂಶದ ಈಚಿನ ಕಾಲದ ರಾಜರು

ಇನ್ನೂ ಉತ್ಪನ್ನರಾಗಿರಲಿಲ್ಲ. ಆದರೆ ಈ ರಾಜರ ಸಮಕಾಲವರ್ತಿಯೋ ಅಥವಾ ಇವರ ಪರಕಾಲವರ್ತಿಯೋ ಆದ ಪ್ರಕ್ಷೇಪಕಾರನಿಗೆ ಈ ರಾಜರುಗಳ ಹೆಸರುಗಳು ಪುರಾಣದಲ್ಲಿರಬೇಕೆಂಬ ಕೋರಿಕೆ. ಇವನು ಭವಿಷ್ಯದ್ವಾಣಿಯ ಹೊದಿಕೆಯನ್ನು ಹೊದಿಸದಿದ್ದರೆ ಪರಾಶರರು ಹೇಳಿದ್ದೆಂದು ಪ್ರಚಾರಗೊಳಿಸ ಲಾಗುವುದಿಲ್ಲ. ಆದುದರಿಂದ ಸಂಗ್ರಹಕಾರನೋ ಪ್ರಕ್ಷೇಪಕಾರನೋ ಈ ರಾಜರ ಚರಿತ್ರೆಯನ್ನು ಬರೆಯಹೋಗಿ ಈ ರಾಜನಾದ ಮೇಲೆ ಈ ರಾಜನು ಬರುವನು; ಇವನಾದ ಮೇಲೆ ಅವನು ಪಟ್ಟಕ್ಕೆ ಬರುವನು ಎಂದು ಬರೆದಿದ್ದಾನೆ. ಇವರಲ್ಲಿ ಹಲವು ರಾಜರು ಇತಿಹಾಸಕ್ಕೆ ತಿಳಿದವರು, ಇವರಿದ್ದುದಕ್ಕೆ ಶಿಲಾಶಾಸನಗಳಲ್ಲೂ, ಬುದ್ಧಗ್ರಂಥ ಮತ್ತು ಯವನಗ್ರಂಥ ಗಳಲ್ಲೂ ಸಂಸ್ಕೃತ ಗ್ರಂಥಗಳಲ್ಲೂ ಅನೇಕ ಪ್ರಮಾಣಗಳು ದೊರೆತಿವೆ.

ಹೇಗೆಂದರೆ ನಂದ, ಮಹಾಪದ್ಮ, ಮೌರ್ಯ, ಚಂದ್ರಗುಪ್ತ, ಬಿಂದುಸಾರ, ಅಶೋಕ, ಪುಷ್ಪಮಿತ್ರ, ಪುಲಿಮಾನ, ಶಕರಾಜರು, ಅಂಧರಾಜರು, ಇತ್ಯಾದಿ ಇತ್ಯಾದಿ; ಆಮೇಲೆ ಹೀಗೆಂದು ಬರೆದಿರುವುದು, “ನವನಾಗಾಃ ಪದ್ಮಾವತ್ಯಾಂ ಕಾಂತಿಪುರ್ಯಾಂ ಮಥುರಾಯಾಮನು ಗಂಗಾಪ್ರಯಾಗಂ ಮಾಗಧಾಃ ಗುಪ್ತಾಶ್ಚ ಭೋಕ್ಷ್ಯನ್ತಿ.” * ಈ ಗುಪ್ತ ವಂಶೀಕರ ಕಾಲವು ಫ್ಲೀಟ್ (Fleet) ಸಾಹೇಬರ ಕಲ್ಯಾಣದಲ್ಲಿ ನಿರೂಪಿಸ ಲ್ಪಟ್ಟಿರುವುದು. ಈ ವಂಶದ ಮೊದಲನೆಯ ರಾಜನನ್ನು ಮಹಾರಾಜ ಗುಪ್ತನೆನ್ನುತ್ತಿದ್ದರು. ಇವನ ಅನಂತರ ಘಟೋತ್ಕಚ ಅಥವಾ ಚಂದ್ರಗುಪ್ತ ವಿಕ್ರಮಾದಿತ್ಯನು. ಆಮೇಲೆ ಸಮುದ್ರಗುಪ್ತನು. ಇವರು ಕ್ರಿ. ಶ. ನಾಲ್ಕನೆಯ ಶತಮಾನದವರು. ಆಮೇಲೆ ಇಮ್ಮಡಿ ಚಂದ್ರಗುಪ್ತ ವಿಕ್ರಮಾದಿತ್ಯನು, ಕುಮಾರಗುಪ್ತ, ಸ್ಕಂದಗುಪ್ತ, ಬುದ್ಧಗುಪ್ತರು— ಇವರು ಕ್ರಿ. ಶ. ಐದನೆಯ ಶತಮಾನದವರು. ಈ ಸಕಲ ಗುಪ್ತರೂ ರಾಜತ್ವ ಮಾಡಿದ್ದರು; ಇಲ್ಲವೇ ಮಾಡುತ್ತಿದ್ದರು. ಇದನ್ನರಿಯದೆ ಪುರಾಣಸಂಗ್ರಹ ಕಾರನು ಎಂದಿಗೂ ಮೇಲೆ ಹೇಳಿದಂತೆ ಬರೆಯುವುದಕ್ಕಾಗುತ್ತಿರಲಿಲ್ಲ. ಆದುದರಿಂದ ಇವನು ಗುಪ್ತರ ಕಾಲದಲ್ಲಿದ್ದವನೋ ಅಥವಾ ಅವರ ಕಾಲ ದಿಂದೀಚಿನವನೋ ಆಗಿರಬೇಕು. ಹಾಗಾದರೆ ಈ ಪುರಾಣವು ಕ್ರಿಸ್ತಾಬ್ದ

* ವಿಷ್ಣುಪುರಾಣ, ೪ನೆಯ ಅಂಶ, ೩೩ನೆಯ ಅಧ್ಯಾಯ, ೧೮

ನಾಲ್ಕನೆಯ ಅಥವಾ ಐದನೆಯ ಶತಮಾನದಲ್ಲಿ ರಚಿತವೋ ಪ್ರಚಾರವೋ ಆಗಿರಬೇಕು. ಈ ಗುಪ್ತವಂಶೀಕರ ವಿಷಯ ವಿಷ್ಣುಪುರಾಣದ ನಾಲ್ಕನೆಯ ಅಂಶದಲ್ಲಿ ಈಚೆಗೆ ಬೆರಸಿಯಾದರೂ ಇರಬಹುದು; ಇಲ್ಲವೇ ಈ ನಾಲ್ಕನೆಯ ಅಂಶದ ಒಂದು ಕಾಲದ ರಚನೆ ಮತ್ತು ಇತರ ಅಂಶಗಳು ಬೇರೇಕಾಲದವಾದರೂ ಆಗಬಹುದು; ಇವೆಲ್ಲವೂ ಗೊತ್ತಿಲ್ಲದ ಯಾವುದೋ ಒಂದು ಕಾಲದಲ್ಲಿ ಒಟ್ಟುಗೂಡಿಸಲ್ಪಟ್ಟು ವಿಷ್ಣುಪುರಾಣವೆಂಬ ಹೆಸರಾಗಿರಬಹುದು. ಈಗಲೂ ಯೂರೋಪು, ಭಾರತವರ್ಷ ಮತ್ತು ಇತರ ಎಲ್ಲಾ ಕಡೆಗಳಲ್ಲಿಯೂ ಬೇರೆಬೇರೇ ಕಾಲದ ರಚನೆಗಳನ್ನು ಒಟ್ಟುಗೂಡಿಸಿ ಒಂದು ಸಂಗ್ರಹ ಗ್ರಂಥ ಆಗಿಂದಾಗ ತಯಾರಾಗಿ ಅದಕ್ಕೊಂದು ವಿಶೇಷವಾದ ಹೆಸರನ್ನು ಕೊಡುವುದುಂಟು. "Percy's Reliques" ಅಥವಾ ರಸಿಕ ಮೋಹನ ಚಟ್ಟೋಪಾಧ್ಯಾಯರ ಸಂಕಲಿತ "ಫಲಿತ ಜ್ಯೋತಿಷ." ಹೀಗೆಯೇ ಪುರಾಣಗಳೆಲ್ಲವೂ ನಮ್ಮ ವಿವೇಚನೆಯಲ್ಲಿ ಸಂಗ್ರಹಗಳು; ಆದರೆ ಸಂಗ್ರಹಿಸಿರುವ ವಿಷಯಗಳು ಮಟ್ಟಿಗೆ ಪ್ರಾಚೀನವಾದುವು. ಸಂಗ್ರಹ ಈಚಿನದಾದ ಮಾತ್ರಕ್ಕೇನೇ ಅವೂ ಈಚಿನವಾಗಲಿಲ್ಲ.

ಆದರೆ ಹಲವುವೇಳೆ ಹೀಗೂ ಆಗುವುದುಂಟು. ಸಂಗ್ರಹಕಾರನು ತಾನೇ ಹಲವು ವಿಷಯಗಳನ್ನು ಹೊಸದಾಗಿ ರಚಿಸಿ ಸಂಗ್ರಹದೊಡನೆ ಪ್ರಕಾಶಿಸುವನು; ಅಥವಾ ಪ್ರಾಚೀನ ವಿಷಯವನ್ನು ಹೊಸ ಕಲ್ಪನೆಗಳೊಡನೆ ಕೂಡಿಸಿ ಅತ್ಯುಕ್ತಿ ಅಲಂಕಾರಗಳಿಂದ ಬಣ್ಣಗಟ್ಟಿ ಬರೆಯುವುದೂ ಉಂಟು. ವಿಷ್ಣುಪುರಾಣದ ವಿಷಯದಲ್ಲಿ ಈ ಮಾತನ್ನು ಹೇಳಲಾಗದಾದರೂ ಭಾಗವತ ವಿಚಾರದಲ್ಲಿ ಎತ್ತಿ ಹೇಳಬಹುದು.

ಭಾಗವತ ಪುರಾಣವು ವೋಪದೇವನು ಮಾಡಿದುದೆಂಬೊಂದು ನಾಣ್ಣುಡಿಯುಂಟು. ಇವನು ದೇವಗಿರಿಯ ರಾಜನಾದ ಹೇಮಾದ್ರಿಯ ಸಭಾಸದನು. ವೋಪದೇವನು ಹದಿಮೂರನೆಯ ಶತಮಾನದವನು. ಆದರೆ ಅನೇಕ ಹಿಂದೂಗಳೂ ಇದನ್ನು ವೋಪದೇವನ ರಚನೆಯೆಂದೊಪ್ಪುವುದಿಲ್ಲ. ಭಾಗವತ ದ್ವೇಷಿಗಳಾದ ಶಾಕ್ತರು ಈ ವದಂತಿಯನ್ನು ಹರಡಿರುವರೆಂದು ವೈಷ್ಣವರು ಹೇಳುವರು.

ನಿಜವಾಗಿಯೂ ಭಾಗವತದ ಪುರಾಣತ್ವದ ವಿಚಾರವಾಗಿ ವಿತಂಡವಾದಗಳುಂಟಾಗಿದ್ದುವು. ಇದು ಪುರಾಣವೇ ಅಲ್ಲ, ದೇವೀಭಾಗವತವೇ ಪುರಾಣ: "ಭಗವತ ಇದಂ ಭಾಗವತಮ್" ಎಂದರ್ಥಮಾಡದೆ "ಭಗವತ್ಯಾ ಇದಂ ಭಾಗವತಮ್" ಎಂದರ್ಥಮಾಡಬೇಕೆಂದು ಶಾಕ್ತರು ಹೇಳುವರು.

ಕೆಲವರು ಹೀಗೆ ಸಂದೇಹಪಡುವರೆಂದೇ ಶ್ರೀಧರಸ್ವಾಮಿ ಇದರ ಮೊದಲನೆಯ ಶ್ಲೋಕದ ಟೀಕಿನಲ್ಲಿ—"ಭಾಗವತಂ ನಾಮಾನ್ಯದಿತ್ಯಪಿ ನಾಶಂಕನೀಯಮ್" ಎಂದು ಬರೆದಿದಾನೆ. ಇದರಿಂದ ದೇವೀಭಾಗವತವೇ ಪ್ರಕೃತ ಪುರಾಣವೆಂತಲೂ ಭಾಗವತವು ಪುರಾಣವಲ್ಲವೆಂತಲೂ ಶ್ರೀಧರಸ್ವಾಮಿಗಿಂತ ಮುಂಚೆಯೇ ಸಂಶಯ ಉಂಟಾಗಿತ್ತೆಂದು ತಿಳಿಯಬರುತ್ತದೆ; ಇದೇ ವಿಚಾರವಾಗಿ ವಿವಾದವೂ ನಡೆಯುತ್ತಿತ್ತು. ವಿವಾದ ಕಾಲದಲ್ಲಿ ಎರಡು ಕಕ್ಷಿಗಳವರೂ ಬರೆದ ಪುಸ್ತಕಗಳಿಗೆ ಒಳ್ಳೇ ಚೆನ್ನಾಗಿ ತಿಕ್ಕಿ ತೊಳೆದು ಮೆರುಗುವ ಹೆಸರುಗಳನ್ನೇ ಇಟ್ಟಿರುವರು. ಒಂದರ ಹೆಸರು "ದುರ್ಜನ ಮುಖಚಪೇಟಿಕಾ"; ಇದಕ್ಕುತ್ತರ "ದುರ್ಜನಮುಖ ಮಹಾಚಪೇಟಿಕಾ"; ಮತ್ತು ಬೇರೊಂದು ಉತ್ತರದ ಹೆಸರು "ದುರ್ಜನ ಮುಖಪದ್ಮ ಪಾದುಕಾ"; ಆಮೇಲೆ "ಭಾಗವತಸ್ವರೂಪ ವಿಷಯ ಶಂಕಾನಿರಾಸ ತ್ರಯೋದಶಃ" ಇತ್ಯಾದಿ ಅನೇಕ ಪುಸ್ತಕಗಳು ಈ ವಿಷಯವನ್ನು ಕುರಿತು ತಯಾರಾಗಿವೆ. ನಾನೀ ಪುಸ್ತಕಗಳನ್ನೆಲ್ಲಾ ನೋಡಿಲ್ಲ. ಯೂರೋಪೀಯ ಪಂಡಿತರು ಇವುಗಳನ್ನು ಬಲ್ಲರು. (Bournouf) ಬೌರನಾಫ್ ಸಾಹೇಬರು "ಚಪೇಟಿಕ, ಮಹಾಚಪೇಟಿಕ" ಮತ್ತು "ಪಾದುಕ"ಗಳಿಗೆ ತರ್ಜುಮೆಯನ್ನೂ ಮಾಡಿದ್ದಾರೆ. ವಿಲ್ಸನ್ (Wilson) ಸಾಹೇಬರು ತಮ್ಮ ವಿಷ್ಣು ಪುರಾಣದ ಅನುವಾದದ ಭೂಮಿಕೆಯಲ್ಲಿ ಈ ವಿವಾದದ ಸಾರಸಂಗ್ರಹವನ್ನು ಬರೆದಿದ್ದಾರೆ. ನಮಗೆ ಈ ಸಮಸ್ತ ವಿಷಯಗಳಿಂದಾಗುವ ಪ್ರಯೋಜನವೇನೂ ಇಲ್ಲ. ಕುತೂಹಲವಿರುವವರು ವಿಲ್ಸನ್ (Wilson) ಸಾಹೇಬರ ಗ್ರಂಥವನ್ನು ನೋಡಬಹುದು. ನಮ್ಮ ಮತವೇನೆಂದರೆ ಬಹು ಪ್ರಾಚೀನವಾದ ವಾಕ್ಯಗಳು ಭಾಗತದಲ್ಲಿಯೂ ಅನೇಕವಾಗಿವೆ; ಆದರೆ ಇವುಗಳಿಗೆಲ್ಲಾ ಹೇರಳವಾಗಿ ಅಲಂಕಾರಮಾಡಿ ಅತ್ಯುಕ್ತಿಯಿಂದ ಹೆಚ್ಚಾಗಿ ಬಣ್ಣಗಟ್ಟಿದ್ದಾರೆ.

ಇತರ ಹಲವು ಪುರಾಣಗಳಿಗಿಂತ ಈ ಪುರಾಣವು ಈಚಿನದು. ಹಾಗಲ್ಲದಿದ್ದರೆ ಇದರ ಪುರಾಣತ್ವದ ವಿಚಾರವಾಗಿ ಇಷ್ಟು ಜಗಳವೇಕೆ ಹುಟ್ಟಬೇಕು?

ಕೃಷ್ಣ ಚರಿತ್ರೆಯಿಲ್ಲದ ಪುರಾಣಗಳನ್ನು ಸಮಾಲೋಚಿಸುವುದರಿಂದ ನಮಗೆ ಪ್ರಯೋಜನವಿಲ್ಲ. ಈ ಚರಿತ್ರೆಯಿರುವ ಪುರಾಣಗಳಲ್ಲಿ ಬ್ರಹ್ಮ, ವಿಷ್ಣು, ಭಾಗವತ ಮತ್ತು ಬ್ರಹ್ಮವೈವರ್ತ ಪುರಾಣಗಳಲ್ಲಿಯೇ ಇದನ್ನು ವಿಸ್ತಾರವಾಗಿ ಹೇಳಿರುವುದು. ಇವುಗಳ ಪೈಕಿ ಬ್ರಹ್ಮ ವಿಷ್ಣುಪುರಾಣಗಳಲ್ಲಿ ಇದನ್ನು ಒಂದೇ ರೀತಿಯಾಗಿ ಹೇಳಿದ್ದಾರೆ. ಆದುದರಿಂದ ವಿಷ್ಣು, ಭಾಗವತ ಮತ್ತು ಬ್ರಹ್ಮ ವೈವರ್ತಗಳಲ್ಲದೆ ಇತರ ಪುರಾಣಗಳ ವ್ಯವಹಾರ ಈ ಗ್ರಂಥಕ್ಕೆ ಬೇಕಿಲ್ಲ. ಈ ಮೂರು ಪುರಾಣಗಳ ವಿಚಾರವಾಗಿಯೂ ನಮ್ಮ ಅಭಿಪ್ರಾಯವನ್ನು ತಿಳಿಸಿಯೇ ಇದ್ದೇವೆ. ಬ್ರಹ್ಮವೈವರ್ತಪುರಾಣವನ್ನು ಕುರಿತು ಮುಂದೆ ಇನ್ನೂ ಕೆಲವು ಸಂಗತಿಗಳನ್ನು ತಿಳಿಸುವೆವು. ಈಗ ಹರಿವಂಶದ ವಿಷಯವಾಗಿ ನಮ್ಮಭಿಪ್ರಾಯವನ್ನು ತಿಳಿಯಪಡಿಸುವುದು ಉಳಿದಿದೆ.

ಷೋಡಶ ಪರಿಚ್ಛೇದ

ಹರಿವಂಶ

ಮಹಾಭಾರತವನ್ನು ಹೇಳಿದ ಮೇಲೆ ಶೌನಕಾದಿ ಋಷಿಗಳು ಪ್ರಾರ್ಥಿಸಲು ಉಗ್ರಶ್ರವ ಶ್ರೌತಿಯು ಹರಿವಂಶವನ್ನು ಕೀರ್ತಿಸಿದನೆಂದು ಹರಿವಂಶದಲ್ಲೇ ಬರೆದಿರುವುದು. ಹಾಗಾದರೆ ಮಹಾಭಾರತವಾದಮೇಲೆ ಈ ಗ್ರಂಥವು ತಯಾರಾಯಿತು. ಮಹಾಭಾರತದನಂತರ ಎಷ್ಟು ಕಾಲದ ಮೇಲೆ ಇದಾದುದೆಂಬುದನ್ನು ಗೊತ್ತುಮಾಡುವುದವಶ್ಯ. ಮಹಾಭಾರತದ ಪರ್ವಸಂಗ್ರಹಾಧ್ಯಾಯದ ಕೇವಲ ಕೊನೆಯ ಶ್ಲೋಕದಲ್ಲಿ ಹರಿವಂಶದ ಮಾತಿದೆ. ಈ ಶ್ಲೋಕವನ್ನು ಹಿಂದೆ ಉದಾಹರಿಸಿದೆ. ಈ ಅಧ್ಯಾಯದಲ್ಲಿ ಹದಿನೆಂಟು ಪರ್ವಗಳ ವಿಷಯಗಳೆಲ್ಲವೂ ಸಂಕ್ಷೇಪವಾಗಿ ಹೇಳಲ್ಪಟ್ಟಿದ್ದರೂ ಹರಿವಂಶದೊಳಗಿನ ವಿಷಯಗಳ ವಿಚಾರವಾಗಿ ಹೀಗೇನೂ ಹೇಳಿಲ್ಲ. ಈ ಶ್ಲೋಕವನ್ನು ನೋಡಿದರೆ ಪರ್ವಸಂಗ್ರಹಾಧ್ಯಾಯವನ್ನು ಜೋಡಿಸಿದಾಗ ಹರಿವಂಶದ ಪ್ರಸಂಗವೇ ಇರಲಿಲ್ಲವೆಂದು ತೋರುತ್ತದೆ

ಲಕ್ಷ ಶ್ಲೋಕದ ಲೆಕ್ಕವನ್ನು ಕೂಡಿಸುವುದಕ್ಕಾಗಿ ಯಾರೋ ಕೊನೆಗೀ ಶ್ಲೋಕವನ್ನು ಬೆರಸಿದ್ದಾರೆ. ಈಗ ಹರಿವಂಶಪರ್ವ, ವಿಷ್ಣುಪರ್ವ, ಮತ್ತು ಭವಿಷ್ಯಪರ್ವವೆಂದು ಹರಿವಂಶದಲ್ಲಿ ಮೂರು ಪರ್ವಗಳಿವೆ. ಮೇಲೆ ಎತ್ತಿದ ಶ್ಲೋಕದಲ್ಲಿ ಹರಿವಂಶಪರ್ವ ಮತ್ತು ಭವಿಷ್ಯಪರ್ವಗಳ ಹೆಸರು ಮಾತ್ರ ಇವೆ. ವಿಷ್ಣುಪರ್ವದ ಹೆಸರೇ ಇಲ್ಲ. ಹರಿವಂಶ ಮತ್ತು ಭವಿಷ್ಯಪರ್ವಗಳಲ್ಲಿ ೧೨,೦೦೦ ಶ್ಲೋಕಗಳೆಂದು ಬರೆದಿದ್ದಾರೆ. ಈಗಲಾದರೋ ಮೂರು ಪರ್ವಗಳಿಂದ ೧೬,೦೦೦ ಶ್ಲೋಕಗಳಿಗಿಂತಲೂ ಹೆಚ್ಚಾಗಿಯೇ ದೊರೆಯುತ್ತವೆ. ಮಹಾಭಾರತಕ್ಕೆ ಈ ಶ್ಲೋಕವನ್ನು ಬೆರಸಿದ ಮೇಲೆಯೇ ಖಂಡಿತವಾಗಿಯೂ ವಿಷ್ಣುಪರ್ವವನ್ನು ಹರಿವಂಶಕ್ಕೆ ಸೇರಿಸಿರಬೇಕು.

ಕಾಳೀಪ್ರಸನ್ನಸಿಂಹ ಮಹೋದಯರು ಮಹಾಭಾರತದ ಹದಿನೆಂಟು ಪರ್ವಗಳನ್ನು ದೇಶಭಾಷೆಗೆ ತರ್ಜುಮೆ ಮಾಡಿ ಹರಿವಂಶವನ್ನು ಅದರ ಸಂಗಡ ಪ್ರಕಟಿಸದಿದ್ದುದಕ್ಕೆ ಈ ಕಾರಣವನ್ನು ತೋರಿಸಿರುವರು :—

"ಮಹಾಭಾರತದ ಹದಿನೆಂಟು ಪರ್ವಗಳಿಗೂ ಮೀರಿದ ಹರಿವಂಶವೆಂಬ ಗ್ರಂಥವೊಂದನ್ನು ಆಶ್ಚರ್ಯಪರ್ವ ಅಥವಾ ಹತ್ತೊಂಭತ್ತನೆಯ ಪರ್ವವೆಂಬ ಹೆಸರಿನಮೇಲೆ ಮಹಾಭಾರತದ ಸಂಗಡ ಎಣಿಸುವುದುಂಟು. ಆದರೆ ವಸ್ತುತಃ ಇದು ಮಹಾಭಾರತಕ್ಕೆ ಸೇರಿದುದಲ್ಲ. ಮೂಲ ಮಹಾಭಾರತವಾದ ಬಹುಕಾಲದಮೇಲೆ ಅದರ ಜೊತೆಗೆ ಹೆಚ್ಚಿಗೆ ಉಳಿದುದೆಂದಿದನ್ನು ಸೇರಿಸಿದ್ದಾರೆ. ಹರಿವಂಶದ ರಚನೆಯ ಪದ್ಧತಿಯನ್ನೂ ತಾತ್ಪರ್ಯವನ್ನೂ ಪರ್ಯಾಲೋಚಿಸಿ ನೋಡುವ ವಿಚಕ್ಷಣನಿಗೆ ಇದು ಈಚಿನದೆಂದು ಸುಲಭವಾಗಿಯೇ ಮಂದಟ್ಟಾಗುವುದು. ಮೂಲ ಮಹಾಭಾರತದ ಸ್ವರ್ಗಾರೋಹಣ ಪರ್ವದಲ್ಲಿ ಹರಿವಂಶವನ್ನು ಕೇಳಿದರೆ ಉಂಟಾಗುವ ಫಲವನ್ನು ಬರೆದಿದ್ದರೂ ಇದರಿಂದ ಹರಿವಂಶದ ಪ್ರಾಚೀನತ್ವವು ಪ್ರಮಾಣವಾಗುವುದಕ್ಕೆ ಬದಲಾಗಿ ಫಲವರ್ಣನೆಯ ಆಧುನಿಕತ್ವವೇ ರುಜುವಾತಾಗುವುದು. ಮೂಲ ಮಹಾಭಾರತದೊಡನೆ ಹರಿವಂಶವನ್ನು ಬರೆದರೆ ಮೇಲೆ ಹೇಳಿದ ಭ್ರಮೆಯು ರಟ್ಟಾದೀತೆಂದು ಹೆದರಿ ಈ ಕೆಲಸಕ್ಕೆ ಕೈತಡೆದೆನು."

ಹೊರೆಸ್ ಹೇಮನ್ ವಿಲ್ಸನ್ ಸಾಹೇಬರು ಹರಿವಂಶದ ವಿಚಾರವಾಗಿ ಹೀಗೆ ಬರೆದಿದ್ದಾರೆ :—

"Internal evidence is strongly indicative of a date considerably subsequent to that of the major portion of the Mahabharata."*

---

*Horace Hayman Wilson's Essays,—Analytical, Critical and Philosophical—on subjects connected with Sanskrit Literature. Vol. I, Dr. Reinhold Rost's Edition.

ನಮ್ಮ ವಿವೇಚನೆಗೂ ಹೀಗೆಂದೇ ತೋರುವುದು. ಹರಿವಂಶವು ಮಹಾಭಾರತದ ಹದಿನೆಂಟು ಪರ್ವಗಳಾದಮೇಲೆ ಅಷ್ಟೇನೂ ವಿಶೇಷ ಸಾವಕಾಶವಿಲ್ಲದೆ ಆದುದೆಂಬ ಪಕ್ಷದಲ್ಲೂ ವಿಷ್ಣುಪರ್ವವನ್ನೇನೋ ಬಹು ಕಾಲವಾದಮೇಲೆ ಸೇರಿಸಿದಾರೆ ಎನ್ನುವುದಕ್ಕೆ ಕಾರಣಗಳಿವೆ. ಈ ವಿಷಯ ಗಳ ನಿಜಾಂಶವನ್ನು ಗೊತ್ತುಮಾಡುವುದು ಬಹುಕಷ್ಟಸಾಧ್ಯವಾದುದು.

ಸುಬಂಧುವಿನಿಂದ ರಚಿತವಾದ ವಾಸವದತ್ತದಲ್ಲಿ ಹರಿವಂಶದಲ್ಲಿ ಹೇಳಿರುವ ಪುಷ್ಕರ ಪ್ರಾದುರ್ಭಾವವನ್ನು ಎತ್ತಿ ಬರೆದಿದೆ. ಕ್ರಿಸ್ತಾಬ್ದ ಏಳನೆಯ ಶತಮಾನದಲ್ಲಿ ಸುಬಂಧು ಇದ್ದನೆಂದು ಯುರೋಪೀಯರ ವಿವೇಚನೆಯಲ್ಲಿ ಸ್ಥಿರವಾಗಿದೆ. ಆದುದರಿಂದ ಆಗ್ಗೆ ಈ ಗ್ರಂಥವು ಪ್ರಚಾರದಲ್ಲಿದ್ದಿರಬೇಕು. ಆದರೆ ಇದಾದದ್ದು ಯಾವಾಗ ? ಇದನ್ನು ಗೊತ್ತುಮಾಡುವುದಕ್ಕೆ ಆಗುವುದಿಲ್ಲ. ಆದರೆ ಇದು ಮಹಾಭಾರತ ಮತ್ತು ವಿಷ್ಣುಪುರಾಣಗಳಾದಮೇಲೆಯೂ ಭಾಗವತ ಮತ್ತು ಬ್ರಹ್ಮವೈವರ್ತ ಪುರಾಣಗಳಿಗಿಂತ ಮುಂಚೆಯೂ ತಯಾರಾದದ್ದು.

ಯಾವ ಪ್ರಮಾಣದಮೇಲೆ ಭಾರಹಾಕಿ ಈ ಮಾತನ್ನು ಹೇಳಲು ಸಾಹಸಪಟ್ಟೆವೆಂಬುದನ್ನು ತಿಳಿಸುವುದು ಬಹುಕಷ್ಟ; ಕೃಷ್ಣ ಚರಿತ್ರೆಯ ವಿಚಾರದ ಮೂಲಸೂತ್ರವೇ ಈ ತೆರದ್ದು. ಮುಂದಿನ ಪರಿಚ್ಛೇದದಲ್ಲಿ ಇದನ್ನು ತಿಳಿಸುವೆವು.

ಸಪ್ತದಶ ಪರಿಚ್ಛೇದ

ಐತಿಹಾಸಿಕ ಪೌರ್ವಾಪರ್ಯ

ಸೃಷ್ಟಿಯ ವಿಚಾರದಲ್ಲಿ ಉಪನಿಷತ್ತಿನಲ್ಲಿ, ಮೊದಲು ಜಗದೀಶ್ವರ ನೊಬ್ಬನೇ ಇದ್ದನೆಂತಲೂ, ಆಮೇಲೆ ಹಲವಾಗಲು ಇಷ್ಟಪಟ್ಟು ಈ ಜಗತ್ತನ್ನು ಸೃಷ್ಟಿಸಿದನೆಂತಲೂ ಹೇಳಿರುವರು.* ಪ್ರಸಿದ್ಧ ಅದ್ವೈತ ವಾದಿಗಳ ಒಟ್ಟುಮಾತೇ ಇದು. ಈ ಅದ್ವೈತವಾದದ ಹತ್ತಿರಹತ್ತಿರಕ್ಕೇನೇ

* ಸೋಽಕಾಮಯತ । ಬಹುಸ್ಯಾಂ ಪ್ರಜಾಯೇಯೇತಿ ॥

—ತೈತ್ತಿರೀಯೋಪನಿಷತ್, ೨ನೆಯ ವಲ್ಲಿ, ೬ನೆಯ ಅನುವಾಕ.

ಯೂರೋಪೀಯ ವೈಜ್ಞಾನಿಕರೂ, ದಾರ್ಶನಿಕರೂ ಬಹಳ ಹುಡುಕಾಡಿ ಕೊಂಡು ಬರುತಲಿದಾರೆ. ಮೊದಲು ಜಗತ್ತಿನ ಸಮಸ್ತವೂ ಏಕವಾಗಿದ್ದು ಬರುತ ಬರುತ ಹಲವಾದುದೆಂದು ಇವರು ಹೇಳುವರು. ಇದೇ ಪ್ರಸಿದ್ಧ Evolution ವಾದದ ಗುಟ್ಟು. ಒಂದರಿಂದ ಹಲವೆಂದರೆ ಬರೀ ಸಂಖ್ಯೆ ಯಲ್ಲೆಂದಲ್ಲ. ಒಂದು ಅಂಗದಿಂದ ಹಲವಂಗಗಳೆಂದು ತಿಳಿದುಕೊಳ್ಳಬೇಕು. ಮೊದಲು ಒಟ್ಟಗಿದ್ದುದು ಆಮೇಲೆ ಬೇರೆ ಬೇರೆಯಾಗಿ ಒಡೆದು ಬೇರೆ ಬೇರೆ ಅಂಗಗಳಾಗಿ ಪರಿಣಮಿಸಿತು. Homogeneous ಆಗಿದ್ದುದು Heterogeneous ಆಯಿತು. Uniform ಆಗಿದ್ದುದು Multiform ಆಯಿತು. ಬರೀ ಜಡಜಗತ್ತಿನ ವಿಷಯದಲ್ಲಿ ಮಾತ್ರವೇ ಹೀಗೆಂದಲ್ಲ; ಜೀವ ಜಗತ್ತಿನಲ್ಲೂ, ಮಾನಸ ಜಗತ್ತಿನಲ್ಲೂ, ಸರ್ವತ್ರ ಹೀಗೆಯೇ ಆಗಿರುವುದು. ಸಮಾಜ ಪ್ರಪಂಚದೊಳಗಿನ ವಿಷಯಗಳೂ ಹೀಗೆಯೇ ನಡೆದುಬರುವುವು. ಉಪನ್ಯಾಸ ಅಥವಾ ಆಖ್ಯಾಯಿಕೆಯು ಸಾಹಿತ್ಯದಲ್ಲಿನ ವಿಷಯವಾದುದರಿಂದ ಇದಕ್ಕೂ ಈ ಮಾತು ಸರಿಹೋಲುವುದು. ಅಷ್ಟೇ ಏಕೆ, ಬೀದಿಯ ಹರಟೆಯಲ್ಲಿಯೂ ಈ ಮಾತು ನಿಜ. ರಾಮನು ಶಾಮನ ಸಂಗಡ "ನಾನು ನಿನ್ನೆ ರಾತ್ರಿ ಕತ್ತಲಿನಲ್ಲಿ ನಮ್ಮ ಮನೆಯೊಳಗೆ ನಿದ್ರಿಸುತ್ತಿರುವಾಗ ಏನೋ ಗದ್ದಲ ವಾದಂತಾಗಿ ನನಗೆ ಬಹಳ ಹೆದರಿಕೆಯಾಯಿತು" ಎಂದು ಹೇಳಲು ಶ್ಯಾಮನು ಭೀಮನ ಸಂಗಡ "ನಿನ್ನೆ ರಾತ್ರಿ ರಾಮನ ಮನೆಯಲ್ಲಿ ದೆವ್ವ ಕುಣಿಯು ತ್ತಿತ್ತು" ಎಂದು ಹೇಳುವುದು ಸ್ವಭಾವ. ಆಮೇಲೆ ಭೀಮನು ಸೋಮನ ಸಂಗಡ "ರಾಮನು ತಮ್ಮ ಮನೆಯಲ್ಲಿ ದೆವ್ವವನ್ನು ನೋಡಿದ್ದನೆಂದು" ಹೇಳುವುದುಂಟು. ಸೋಮನು ದಾಸನ ಸಂಗಡ "ರಾಮನ ಮನೆಯಲ್ಲಿ ದೆವ್ವಗಳ ಕಾಟ ಬಹಳವೆಂದು" ಹೇಳಿಬಿಡುವನು. ಕೊನೆಗೆ ಬೀದಿ ಬೀದಿ ಯಲ್ಲೂ ರಾಮನ ಮನೆಯಲ್ಲಿ ದೆವ್ವಗಳು ಹಗಲುಹೊತ್ತೇ ಕುಣಿಯುತ್ತಲಿವೆ, ಅವನ ಸಂಸಾರವು ಇದರ ಕೋಟಲೆಗೆ ಸಿಕ್ಕಿ ಪೇಚಾಡುತ್ತಿದೆಯೆಂದು ರಟ್ಟಾಗಿ ಹೋಗಿಬಿಡುವುದು.

ಇದಂತೂ ಬೀದಿಯ ಹರಟೆ. ಪ್ರಾಚೀನವಾದ ಉಪಾಖ್ಯಾನ ವಿಷಯ ದಲ್ಲೂ ಇದೇ ರೀತಿಯಾದ ಪರಿಣಾಮದ ಕಟ್ಟಲೆಯಿರುವಂತೆ ಕಂಡು ಬರುವುದು. ಮೊದಲು ನಾಮಕರಣಃ ವಿಷ್ (ಪಸರಿಸು, ಹರಡು) ಧಾತುವಿ

ನಿಂದ 'ವಿಷ್ಣು' ಎಂದಾಯಿತು. ಇದು ಎರಡನೆಯ ಸಲ ರೂಪಕವಾಗಿ ವಿಷ್ಣುವಿಗೆ ಮೂರು ಪಾದಗಳಾದುವು. ಸೂರ್ಯನ ಪ್ರಾತಃಕಾಲ ಮಧ್ಯಾಹ್ನ ಮತ್ತು ಸಾಯಂಕಾಲದ ಸ್ಥಿತಿಗಳೇ ಇವು ಎಂದು ಕೆಲವರೂ, ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಲೋಕಗಳಲ್ಲಿಯೂ ಹರಡಿರುವ ದೇವರ ಮಹಿಮೆಯೇ ಇದೆಂದು ಮತ್ತೆ ಕೆಲವರೂ, ಭೂತಭವಿಷ್ಯದ್ವರ್ತ ಮಾನಗಳೇ ಇದೆಂದು ಇನ್ನು ಕೆಲವರೂ ಹೇಳುವರು. ಇದಾದಮೇಲೆ ಮೂರನೆಯ ಅವಸ್ಥೆಯಲ್ಲಿ 'ಬಲಿ ಮತ್ತು ವಾಮನ' ಎಂಬ ಇತಿಹಾಸವುಂಟಾ ಯಿತು. ನಾಲ್ಕನೆಯ ಅವಸ್ಥೆಯಲ್ಲಿ ಇದು ಬಹಳವಾಗಿ ಬಣ್ಣಗಟ್ಟಲ್ಪಟ್ಟಿತು. ಪುರಾಣಾದಿಗಳಲ್ಲಿದು ಕಂಡುಬರುವುದು.

ಉದಾಹರಣೆಗಾಗಿ : "ಊರ್ವಶೀ ಮತ್ತು ಪುರೂರವ ಎಂಬ ಉಪಾ ಖ್ಯಾನವನ್ನು ತೆಗೆದುಕೊಳ್ಳೋಣ. ಇದರ ಮೊದಲನೆಯ ಅವಸ್ಥೆ ಯಜುರ್ವೇದ ಸಂಹಿತೆಯಲ್ಲಿ ದೊರಕುವುದು. ಅಲ್ಲಿ ಊರ್ವಶಿ, ಪುರೂರವ ಇಬ್ಬರೂ ಅರಣಿಕಾಷ್ಠಗಳು ಮಾತ್ರವೇ. ವೇದದ ಕಾಲದಲ್ಲಿ ದೀಪದ ಕಡ್ಡಿ ಇರಲಿಲ್ಲ; ಚಕಮುಕಿಯೂ ಇರಲಿಲ್ಲ; ಮುಖ್ಯವಾಗಿ ಇದೊಂದನ್ನೂ ಯಜ್ಞದ ಬೆಂಕಿಗಾಗಿ ಉಪಯೋಗಿಸುತ್ತಿರಲಿಲ್ಲ. ಕಟ್ಟಿಗೆಯಿಂದ ಕಟ್ಟಿಗೆ ಯನ್ನು ತಿಕ್ಕಿ ಯಜ್ಞದ ಬೆಂಕಿಯನ್ನುತ್ಪತ್ತಿಮಾಡುತ್ತಿದ್ದರು. "ಇದಕೆ ಅಗ್ನಿ ಚಯನ" ಎನ್ನುವರು. ಅಗ್ನಿ ಚಯನಕ್ಕೆ ಮಂತ್ರವುಂಟು. ಯಜುರ್ವೇದ ಸಂಹಿತೆಯ ಮಾಧ್ಯಂದಿನೀ ಶಾಖೆಯ ಪಂಚಮಾಧ್ಯಾಯದ ಎರಡನೆಯ ಕಾಂಡಿಕೆಯಲ್ಲಿ ಈ ಮಂತ್ರವಿರುವುದು. ಇಲ್ಲಿನ ಮೂರನೆಯ ಮಂತ್ರ ದಿಂದ ಒಂದು ಅರಣಿಕಡ್ಡಿಯನ್ನೂ, ಐದನೆಯ ಮಂತ್ರದಿಂದ ಇನ್ನೊಂದು ಕಡ್ಡಿಯನ್ನೂ ಪೂಜೆಮಾಡಬೇಕು. ಈ ಮಂತ್ರಗಳನ್ನು ಕನ್ನಡಿಸಿ ಕೆಳಗೆ ಬರೆದಿದೆ :—

"ಎಲೈ ಅರಣಿಯೇ ! ಅಗ್ನಿಯನ್ನುತ್ಪತ್ತಿಮಾಡುವುದಕ್ಕಾಗಿ ನಾವು ನಿನ್ನನ್ನು ಸ್ತ್ರೀರೂಪವಾಗಿ ಕಲ್ಪಿಸಿಕೊಂಡೆವು. ಇಂದಿನಿಂದ ನಿನ್ನ ಹೆಸರು ಊರ್ವಶೀ" ॥ ೩ ॥

ಉತ್ಪತ್ತಿಗಾಗಿ ಹೆಂಗಸೊಬ್ಬಳೇ ಸಾಲದು, ಗಂಡಸೂ ಬೇಕು. ಆದುದರಿಂದ ಮೇಲೆ ಹೇಳಿದ ಸ್ತ್ರೀರೂಪವನ್ನು ಕಲ್ಪಿಸಿದ ಅರಣಿಯಮೇಲೆ ಇನ್ನೊಂದರಣಿಯನ್ನಿಟ್ಟು ಹೀಗೆ ಹೇಳಬೇಕು:

"ಹೇ ಅರಣಿ! ಅಗ್ನಿಯನ್ನುತ್ಪತ್ತಿಮಾಡುವುದಕ್ಕಾಗಿ ನಿನ್ನನ್ನು ಪುರುಷರೂಪವಾಗಿ ಕಲ್ಪಿಸಿದೆವು. ಇಂದಿನಿಂದ ನಿನ್ನ ಹೆಸರು ಪುರೂರವ." ॥ ೫ ॥*

ನಾಲ್ಕನೆಯ ಮಂತ್ರದಲ್ಲಿ ಅರಣಿಗೆ ತೊಡೆಯುವ ತುಪ್ಪಕ್ಕೆ 'ಆಯೂ' ಎಂಬ ಹೆಸರನ್ನಿಟ್ಟಿರುವರು.

ಇದಂತೂ ಮೊದಲನೆಯ ಸ್ಥಿತಿ. ಇದರ ಎರಡನೆಯ ಸ್ಥಿತಿ ಋಗ್ವೇದ ಸಂಹಿತೆಯ ೧೦ನೆಯ ಮಂಡಲದ ೯೫ನೆಯ ಸೂಕ್ತಿಯಲ್ಲಿರುವುದು. ಅಲ್ಲಿ** ಊರ್ವಶೀ ಪುರೂರವರು ಅರಣಿಕಡ್ಡಿಗಳಲ್ಲ. ನಾಯಕೀ ನಾಯಕರಾಗಿರುವರು. ಪುರೂರವನು ಊರ್ವಶಿಯ ಮೇಲಿನ ವಿರಹದಿಂದ ತವಕಪಡುತ್ತಿದ್ದಾನೆ. ಇದೇ ರೂಪಕಾವಸ್ಥೆ. ಈ ರೂಪಕದಲ್ಲಿ ಊರ್ವಶಿ ೫ನೆಯ ಋಕ್ಕಿನಲ್ಲಿ ಹೀಗೆ ಹೇಳಿದಾಳೆ: "ಎಲೈ ಪುರೂರವನೆ, ನೀನು ದಿನಂಪ್ರತಿ ನನ್ನನ್ನು ಮೂರು ಸಾರಿ ರಮಿಸುವೆ."£ ಇದರಿಂದ ಯಜ್ಞದ ಮೂರು ಅಗ್ನಿಗಳು ಸೂಚಿಸಲ್ಪಟ್ಟಿರುವುವು.

---

* ಸತ್ಯವ್ರತ ಸಾಮಾಶ್ರಮಿಯವರು ಬಂಗಾಳಿಯಲ್ಲಿ ಮಾಡಿರುವ ತರ್ಜುಮೆಯಿಂದ ಕನ್ನಡಿಸಿದೆ.

** ಋಗ್ವೇದ ಸಂಹಿತೆಯು ಇತರ ಸಂಹಿತೆಗಳಿಗಿಂತ ಪ್ರಾಚೀನವೆಂದು ಪರಂಗಿಯವರು ಹೇಳುವರು. ಋಕ್ಸಂಹಿತೆಯ ಸೂಕ್ತಿಗಳೆಲ್ಲವೂ ಸಾಮ ಮತ್ತು ಯಜುಸ್ಸಂಹಿತೆಗಳ ಮಂತ್ರಗಳಿಗಿಂತ ಪ್ರಾಚೀನವೆಂದು ಈ ಹೇಳಿಕೆಗೆ ಅರ್ಥವಲ್ಲ. ಒಂದುವೇಳೆ ಇದಕ್ಕೆ ಹೀಗೆಯೇ ಅರ್ಥವೆಂದು ಹೇಳಿಯಾಗಲಿ ತಿಳಿದಾಗಲಿ ಇರುವ ಪಕ್ಷಕ್ಕೆ ಇಂಥವರು ಬಹಳ ಭ್ರಾಂತಿಗೆ ಬಿದ್ದಿರುವರೆನ್ನಬೇಕು. ಋಕ್ಸಂಹಿತೆಯಲ್ಲಿರುವ ಮಂತ್ರಗಳ ಪೈಕಿ ಕೆಲವು ವೇದಮಂತ್ರಗಳೊಳಗೆಲ್ಲ ಬಹು ಪ್ರಾಚೀನವಾದುವೆಂದು ಅಭಿಪ್ರಾಯವಿರಬೇಕು. ಹಾಗಲ್ಲವಾದರೆ ಋಕ್ಸಂಹಿತೆಯಲ್ಲಿಯೇ ಸ್ಪಷ್ಟವಾಗಿಯೂ ಈಚಿನವೆಂದು ಪರಂಗಿಯವರೇ ಒಪ್ಪಿಕೊಳ್ಳುವಂತಹ ಸೂಕ್ತಿಗಳು ಹೇರಳವಾಗಿ ದೊರೆಯುವುವು. ಅನೇಕ ಋಕ್ಕುಗಳು ಸಾಮವೇದದಲ್ಲೂ ಉಂಟು. ಋಕ್ಸಂಹಿತೆಯಲ್ಲೂ ಉಂಟು. ಸಂಹಿತೆ ಯಾವುದೂ ಮತ್ತಾವ ಸಂಹಿತೆಗಿಂತಲೂ ಹಳೆಯದಲ್ಲ. ಒಂದು ಮಂತ್ರವು ಮತ್ತೊಂದು ಮಂತ್ರಕ್ಕಿಂತ ಹಳೆಯದು ಅಷ್ಟೆ. ಇಂತಹ ಪ್ರಾಚೀನ ಮಂತ್ರಗಳು ಋಕ್ಸಂಹಿತೆಯಲ್ಲಿ ಹೆಚ್ಚಾಗಿಯೇ ಇದ್ದರೂ ಯಜುಸ್ಸು ಮತ್ತು ಸಾಮಮಂತ್ರಗಳಿಗಿಂತ ಈಚಿನವಾದ ಮಂತ್ರಗಳೂ ಹೇರಳವಾಗಿವೆ. ೧೦ನೆಯ ಮಂಡಲದ ೯೫ನೆಯ ಸೂಕ್ತಿ ಇದಕ್ಕೊಂದು ಉದಾಹರಣೆಯಾಗಿದೆ.

£ ಮೋಕ್ಷಮುಲ್ಲರು ಮೊದಲಾದವರು ಈ ರೂಪಕದ ಊರ್ವಶಿಗೆ ಉಷಾ ಎಂದೂ, ಪುರೂರವನು ಸೂರ್ಯನೆಂದೂ ಅರ್ಥ ಮಾಡಿರುವರು. Solar myth (ಸೂರ್ಯ ಗುಹ್ಯವ)ನ್ನು ಈ ಪಂಡಿತರು ಏತರಿಂದಲೂ ಬಿಡಲೊಲ್ಲರು. ಮೇಲೆ ಎತ್ತಿರುವ ಯಜುರ್ಮಂತ್ರದಿಂದಲೂ ಮೂರು ಸಲದ ಸಂಸರ್ಗದ ಮಾತಿನಿಂದಲೂ ಈ ರೂಪಕದ ನೇರವಾದ ಅರ್ಥವನ್ನು ಮೇಲೆ ಸೂಚಿಸಿದೆ.

ಪುರೂರವನನ್ನು ಊರ್ವಶಿ "ಇಳಾಪುತ್ರ"ನೆಂದು ಸಂಬೋಧಿಸುವಳು. ಇಳಾ** ಎಂದರೆ ಭೂಮಿ ಎಂದರ್ಥ. ಭೂಮಿಯ ಮಗನೇ ಅರಣಿಕಡ್ಡಿ.

ಮಹಾಭಾರತದ ಪುರೂರವನು ಐತಿಹಾಸಿಕ ಚಂದ್ರವಂಶದ ರಾಜನು. ಚಂದ್ರನ ಮಗನು ಬುಧನು. ಇವನ ಪುತ್ರನು ಇಲಾ, ಇಲಾವಿನ ಮಗನು ಪುರೂರವನು, ಊರ್ವಶೀ ಗರ್ಭದಲ್ಲಿ ಇವನಿಗೆ *ಆಯೂ ಎಂಬ ಪುತ್ರನಾದನು. ಮೇಲೆ ಎತ್ತಿರುವ ಯಜುರ್ಮಂತ್ರವನ್ನು ನೋಡಲು ಈ ಆಯುವು ಅರಣಿಗೆ ಮುಟ್ಟಿಸುವ ಆಜ್ಯವೆಂಬುದು ತಿಳಿಯುವುದು. ಮಹಾಭಾರತದ ಈ ಆಯುವಿನ ಮಗನೇ ಪ್ರಖ್ಯಾತನಾದ ನಹುಷ ಮಹಾರಾಜನು. ನಹುಷನ ಮಗನೇ ಯಯಾತಿ. ಯಯಾತಿಗೆ ಯದು, ಪುರು ಎಂಬ ಇಬ್ಬರು ಮಕ್ಕಳು. ಪುರುವು ಕುರುಪಾಂಡವರ ಮೂಲಪುರುಷನು. ಯದುವು ಯಾದವರಿಗೆ ಮೂಲ ಪುರುಷನು; ಹೀಗೆ ಮೂರನೆಯ ಸ್ಥಿತಿಯಲ್ಲಿ ಅರಣಿಕಡ್ಡಿ ಚರಿತ್ರೆಗೆ ಸೇರಿದ ಪ್ರಖ್ಯಾತವಾದ ಚಕ್ರವರ್ತಿಯಾಯಿತು.

ಇದರ ನಾಲ್ಕನೆಯ ಸ್ಥಿತಿಯು ವಿಷ್ಣು ಪದ್ಮ ಮುಂತಾದ ಪುರಾಣಗಳಲ್ಲಿ ಸಿಕ್ಕುವುದು.

ಪುರಾಣಗಳಲ್ಲೆಲ್ಲಾ ಮೂರನೆಯ ಸ್ಥಿತಿಯ ಇತಿಹಾಸ ಹೊಸ ಹೊಸ ಉಪನ್ಯಾಸಗಳಿಂದ ಕಳೆಗಟ್ಟಿ ರಂಜಿತವಾಗಿದೆ. ಮಾದರಿಗಾಗಿ ಈ ಕೆಳಗೆ ಎರಡು ಉದಾಹರಣೆಗಳನ್ನು ಎತ್ತುವೆನು.

೧ನೆಯದು :—

"ಊರ್ವಶಿಯು ಇಂದ್ರನ ಸಭೆಯಲ್ಲಿ ನರ್ತನ ಮಾಡುತ್ತಿರುವಾಗ ಪುರೂರವ ಮಹಾರಾಜನನ್ನು ನೋಡಿ ಮೋಹಗೊಂಡಳು; ನರ್ತನದ ಲಯವು ತಬ್ಬಿಬ್ಬಾಯಿತು. ಇದನ್ನು ತಿಳಿದು ಇಂದ್ರನು ಶಪಿಸಲು ಸ್ವರ್ಗಭ್ರಷ್ಟಳಾಗಿ ೫೦೫ ವರ್ಷಗಳು ಪುರೂರವ ನೊಡನೆ ಕಳೆದಳು."

೨ನೆಯದು :—

"ಹಿಂದೊಂದು ಸಮಯದಲ್ಲಿ ಭಗವಂತನಾದ ವಿಷ್ಣುವು ಧರ್ಮಪುತ್ರನಾಗಿ ಗಂಧಮಾದನ ಗಿರಿಯಲ್ಲಿ ಘೋರವಾಗಿ ತಪಸ್ಸನ್ನು ಮಾಡುತ್ತಿದ್ದನು. ಇಂದ್ರನು ಅವನ ಉಗ್ರತಪಸ್ಸಿಗೆ ಹೆದರಿ ಅದರ ವಿಘ್ನಕ್ಕಾಗಿ ಅಪ್ಸರೆಯರೊಡನೆ ವಸಂತನನ್ನೂ ಕಾಮ ದೇವನನ್ನೂ ಕಳುಹಿಸಿದನು. ಅಪ್ಸರೆಯರಾರೂ ಅವನ ಧ್ಯಾನವನ್ನು ಭಂಗಮಾಡಲಾರ ದಿರಲು ಕಾಮದೇವನು ಅವರೆಲ್ಲರ ತೊಡೆಗಳಿಂದ ಊರ್ವಶಿಯನ್ನು ಸೃಷ್ಟಿಸಿದನು.

**ಗೋ ಭೂ ವಾಚಸ್ತ್ವಿಡಾ ಇಲಾ ಇತ್ಯಮರಃ.

* ಕೆಲವೆಡೆಗಳಲ್ಲಿ ಈ ಹೆಸರನ್ನು 'ಆಯೂಃ' ಎಂದೂ ಬರೆದಿದಾರೆ.

ಇವಳು ಅವನ ತಪಸ್ಸನ್ನು ಭಂಗಪಡಿಸಿದಳು. ಇದರಿಂದ ಇಂದ್ರನು ಬಹಳ ಸಂತೋಷ ಪಟ್ಟು ಇವಳ ರೂಪಕ್ಕೆ ಮೋಹಿಸಿ ಸ್ವೀಕರಿಸಲಿಚ್ಛಿಸಲು ಊರ್ವಶಿಯೂ ಅನುಮತಿ ಸಿದಳು. ಬಳಿಕ ಮಿತ್ರಾವರುಣರು ಇವಳ ಮೇಲೆ ಮೋಹಗೊಳ್ಳಲು ಇವಳು ಅವರನ್ನು ಹೀನಗರೆದಳು. ಇದಕ್ಕಾಗಿ ಅವರ ಶಾಪದಿಂದ ಮನುಷ್ಯಭೋಗ್ಯಳಾದಳು ಎಂದರೆ ಪುರೂರವನ ಹೆಂಡತಿಯಾದಳು.''

ಇವುಗಳನ್ನೆಲ್ಲ ಆಲೋಚಿಸಿ ನೋಡಲು ಯಜುರ್ವೇದ ಸಂಹಿತೆಯ ೫ನೆಯ ಅಧ್ಯಾಯದ ಆ ಮಂತ್ರಗಳು ಎಲ್ಲಕ್ಕಿಂತಲೂ ಪ್ರಾಚೀನವೆಂದೂ, ಆಮೇಲೆ ಋಗ್ವೇದ ಸಂಹಿತೆಯ ದಶಮಮಂಡಲದ ೯೫ನೆಯ ಸೂಕ್ತವೂ, ಇದಾದಮೇಲೆ ಮಹಾಭಾರತವೂ, ಇದರಿಂದೀಚಿನದು ಪದ್ಮಪುರಾಣ ಎಂದೂ ಸ್ಪಷ್ಟವಾಗಿಯೇ ತಿಳಿದುಬರುವುದು.

ನಾವು ಕೃಷ್ಣ ಚರಿತ್ರೆಯನ್ನು ಎತ್ತಲು ನಂಬಿಕೊಂಡಿರುವ ಗ್ರಂಥಗಳ ಪೌರ್ವಾಪರ್ಯವನ್ನು ಮೇಲೆ ತೋರಿಸಿದ ನಿಯಮವನ್ನೇ ಅನುಸರಿಸಿ ನಿರ್ಧರಿಸುವೆವು. ಒಂದೆರಡು ಉದಾಹರಣೆಗಳಿಂದ ಇದನ್ನು ತಿಳಿಯಪಡಿಸುವೆವು.

ಪೂತನಿಯ ವೃತ್ತಾಂತವನ್ನು ಮೊದಲನೆಯ ಉದಾಹರಣೆಯಾಗಿ ತೆಗೆದುಕೊಳ್ಳೋಣ.

ಇದರ ಮೊದಲನೆಯ ಸ್ಥಿತಿಯು ಯಾವ ಗ್ರಂಥದಲ್ಲಿಯೂ ಇಲ್ಲ. ನಿಘಂಟನ್ನು ಹುಡುಕಲು ವಿಷ್ ಧಾತುವಿನಿಂದ ವಿಷ್ಣು ಸಿಕ್ಕಿದಂತೆ ಇದಕ್ಕೂ ಆಧಾರ ಸಿಕ್ಕುವುದು. ಆಮೇಲೆ ನೋಡಲು 'ಪೂತನಾ' ಎಂಬುದು ಹೊಲೆಮನೆಯ ಅದೊಂದು ಬಗೆಯ ರೋಗ. ಮತ್ತು ಪೂತನವೆಂದು ಹಕ್ಕಿಗೂ ಹೇಳುವರು ; ಆದುದರಿಂದ ಮಹಾಭಾರತದಲ್ಲಿ ಪೂತನವೆಂಬುದೊಂದು ಹಕ್ಕಿ. ವಿಷ್ಣುಪುರಾಣದಲ್ಲಿದು ಇನ್ನೊಂದು ಮೆಟ್ಟಲೇರಿ ರೂಪಕವಾಯಿತು. ಪೂತನಿಯು "ಬಾಲಘಾತಿನಿ". ಎಂದರೆ ಮಕ್ಕಳನ್ನು ಕೊಲ್ಲುವ ಕಸಬಿನ ಭಯಂಕರಿಯೊಬ್ಬಳು. ಅವಳ ಕಳೇಬರ ದೊಡ್ಡದು ; ನಂದನು ನೋಡಿ ಹೆದರಿ ಆಶ್ಚರ್ಯಯುಕ್ತನಾದನು. ಆದರೂ ಇವಳಿನ್ನೂ ಮನುಷ್ಯಳೆ.* ಹರಿವಂಶದಲ್ಲಿ ಎರಡು ಮಾತುಗಳೂ ಬೆರೆತಿವೆ. ಪೂತನಿಯು ಮನುಷ್ಯಳೇ ಹೌದು ;

* ಯಾರೋ ಅನುವಾದಕಾರರು ತಮ್ಮ ಅನುವಾದದಲ್ಲಿ 'ರಾಕ್ಷಸಿ' ಎಂಬ ಶಬ್ದವನ್ನು ಕೂಡಿಸಿರುವರು. ವಿಷ್ಣುಪುರಾಣದ ಮೂಲದಲ್ಲಿ ಈ ಮಾತು ಇಲ್ಲ.

ಅವಳು ಕಂಸನ ಧಾತ್ರಿ. ಕಾಮರೂಪಿಣಿಯಾದಿವಳು ಪಕ್ಷಿಯಾಗಿ ಗೋಕುಲಕ್ಕೆ ಬಂದಿದ್ದಳು. ಇದಕ್ಕಿಂತ ಹೆಚ್ಚಿಗೆ ರೂಪಕವಿಲ್ಲ. ಮಿಕ್ಕುದು ಆಖ್ಯಾನ ಅಥವಾ ಇತಿಹಾಸ. ಮೂರನೆಯ ಸ್ಥಿತಿ ಇಲ್ಲಿಯೆ ಪ್ರವೇಶಮಾಡಿತು. ಕೊನೆಗೆ ಭಾಗವತದಲ್ಲಿ ಇದು ತಲೆ ಮೀರಿ ಹೋಯಿತು. ಪೂತನಿಯು ರೋಗವೂ ಅಲ್ಲ, ಪಕ್ಷಿಯೂ ಅಲ್ಲ, ಮನುಷ್ಯಳೂ ಅಲ್ಲ. ಅವಳು ಘೋರ ರೂಪಿನ ರಕ್ಕಸಿ. ಅವಳ ಮೈ ಆರು ಕ್ರೋಶ (೧೨ ಮೈಲಿ)ಗಳವರೆಗೂ ಹರಡಿತು. ಪ್ರತಿಯೊಂದು ಹಲ್ಲೂ ಒಂದೊಂದು ನೇಗಿಲಿನಷ್ಟು, ಮೂಗು ಬೆಟ್ಟದ ಗುಹೆಯಂತೆಯೂ, ಸ್ತನಗಳು ಗಂಡಶೈಲಗಳಂತೆ ಎಂದರೆ ಗುಡ್ಡಗಳಂತೆಯೂ, ಕಣ್ಣುಗಳು ಹುಲ್ಲು ಕವಿದ ಬಾವಿಯಂತೆಯೂ, ಹೊಟ್ಟೆಯು ಬತ್ತಿದ ಕೆರೆಯಂತೆಯೂ, ಇತ್ಯಾದಿ ಇತ್ಯಾದಿ.

ಒಂದು ಖಾಯಿಲೆಯು ಬರುತ ಬರುತ ಘೋರ ರಕ್ಕಸಿಯೊಬ್ಬಳಾಗಿ ಪರಿಣಮಿಸಿದುದನ್ನು ನೋಡಿ ಪಾಠಕರು ಆನಂದಪಡದಿರಲಾರರೆಂದು ನಂಬಿದ್ದೇನೆ. ಆದರೆ ಇದು ನಾಲ್ಕನೆಯ ಅವಸ್ಥೆಯೆಂಬುದನ್ನು ಮನಸ್ಸಿನಲ್ಲಿಡಬೇಕು.

ಇದರಲ್ಲಿ ಮೊದಲು ಮಹಾಭಾರತ, ಆಮೇಲೆ ವಿಷ್ಣುಪುರಾಣದ ಪಂಚಮ ಅಂಶ, ಅದರ ಮೇಲೆ ಹರಿವಂಶ, ಕೊನೆಗೆ ಭಾಗವತ ಎಂದು ತಿಳಿಯ ಬರುವುದು.

ಎರಡನೆಯ ಉದಾಹರಣೆಯನ್ನು ನೋಡೋಣ :—

ಕಾಲ ಎಂಬ ಪದಕ್ಕೆ ಪರದಲ್ಲಿ ಇಯಾ ಪ್ರತ್ಯಯವನ್ನು ಸೇರಿಸಲು "ಕಾಲೀಯ" * ಎಂಬ ಪದವು ಸಿಕ್ಕುವುದು. ಕಾಲೀಯನ ಹೆಸರು ಮಹಾಭಾರತದಲ್ಲಿಲ್ಲ. ವಿಷ್ಣುಪುರಾಣದಲ್ಲಿ ಇವನ ವೃತ್ತಾಂತವಿದೆ. ಓದಿ ನೋಡಲು ಇದು ಕಾಲ ಮತ್ತು ಕಾಲಭಯನಿವಾರಕವಾದ ಕೃಷ್ಣಪಾದ ಪದ್ಮ ಸಂಬಂಧೀಯವಾದೊಂದು ರೂಪಕವೆಂದು ತಿಳಿದು ಬರುವುದು. ಹಾವಿಗೆ ಇರುವುದೊಂದೇ ಹೆಡೆ, ವಿಷ್ಣುಪುರಾಣದಲ್ಲಿ ಮಧ್ಯಮವೆಂದರೆ ಅತ್ತ ಇತ್ತ ಇವೆರಡೂ ಸೇರಿ ಮೂರು ಹೆಡೆಗಳಾದುವು. ಭೂತ ಭವಿಷ್ಯದ್ವರ್ತಮಾನಗಳೆಂಬ ಮೂರು ಹೆಡೆಗಳು ಕಾಳೀಯನಿಗುಂಟಾದುವೆಂದು

* ಕನ್ನಡದಲ್ಲಿ ಕಾಳಿಂಗ ಎಂದಾಗಿದೆ.

ತಿಳಿದೆನು. ಹರಿವಂಶದವನಾದರೋ ರೂಪಕದ ಅರ್ಥವನ್ನು ತಿಳಿಯದೆಯೋ ಅಥವಾ ಮತ್ತೆ ಬೇರೆ ಅಭಿಪ್ರಾಯದಿಂದಲೋ ಇನ್ನೆರಡು ಹೆಡೆಗಳನ್ನು ಹೆಚ್ಚಿಸಿರುವನು. ಭಾಗವತಕಾರನು ಇಷ್ಟಕ್ಕೆ ಸಂತುಷ್ಟನಾಗದೆ ಒಂದೇ ಸಲಕ್ಕೆ ಸಾವಿರ ಹೆಡೆಗಳನ್ನು ಮಾಡಿದನು.

ಮೊದಲು ಮಹಾಭಾರತ, ಆಮೇಲೆ ವಿಷ್ಣುಪುರಾಣದ ಐದನೆಯ ಅಂಶ, ಬಳಿಕ ಹರಿವಂಶ, ಕಡೆಗೆ ಭಾಗವತ ಎಂದೀಗಲಾದರೂ ಹೇಳಲೇಬೇಕಲ್ಲವೆ ?

ಇಲ್ಲಿ ಇನ್ನೂ ಉದಾಹರಣೆಗಳನ್ನು ಹೆಚ್ಚಿಸುವುದರಿಂದ ಪ್ರಯೋಜನವಿಲ್ಲ. ಕೃಷ್ಣ ಚರಿತ್ರೆಯನ್ನು ಬರೆಯುತ್ತ ಹೋಗಲು ಅನೇಕ ಉದಾಹರಣೆಗಳು ತಾವಾಗಿಯೇ ಸಿಗುವುವು. ಅಮೌಲಿಕವೂ, ಅನೈಸರ್ಗಿಕವೂ, ಉಪನ್ಯಾಸ ಭಾಗವೂ ಹೆಚ್ಚು ಹೆಚ್ಚಾದ ಹಾಗೆಲ್ಲ ಗ್ರಂಥ ಅಷ್ಟಷ್ಟೂ ಈಚಿನದೆಂಬುದೇ ನಮ್ಮ ಒಟ್ಟಿನಮೇಲಿನ ಅಭಿಪ್ರಾಯ. ಈ ಪದ್ಧತಿಯನ್ನು ಹಿಡಿದು ಆಲೋಚಿಸಿ ನೋಡಲು ಗ್ರಂಥಗಳ ಪೌರ್ವಾಪರ್ಯವನ್ನು ಈ ರೀತಿಯಾಗಿ ಗೊತ್ತುಮಾಡಲಾಗಿರುವುದು.

ಮೊದಲನೆಯದು—ಮಹಾಭಾರತದ ಪ್ರಥಮ ಸ್ತರ.

ಎರಡನೆಯದು—ವಿಷ್ಣುಪುರಾಣದ ಪಂಚಮ ಅಂಶ.

ಮೂರನೆಯದು—ಹರಿವಂಶ.

ನಾಲ್ಕನೆಯದು—ಶ್ರೀಮದ್ಭಾಗವತ.

ಇವುಗಳಲ್ಲದೆ ಮತ್ತಾವ ಗ್ರಂಥಗಳ ವ್ಯವಹಾರವೂ ಆಗಲೇಬೇಕೆಂಬುದಿಲ್ಲ. ಮಹಾಭಾರತದ ಎರಡು ಮೂರನೆಯ ಸ್ತರಗಳು ಅಮೌಲಿಕಗಳಾದುದರಿಂದ ಅವ್ಯವಹಾರಗಳಾದರೂ ಇವುಗಳ ಅಮೌಲಿಕತೆಯನ್ನು ಪ್ರಮಾಣಪಡಿಸುವುದಕ್ಕಾಗಿ ಈ ಅಂಶಗಳನ್ನೆಲ್ಲಾ ಅಲ್ಲಲ್ಲಿ ಸಮಾಲೋಚಿಸುವೆನು. ಬ್ರಹ್ಮಪುರಾಣವು ವ್ಯವಹಾರಕ್ಕೆ ಪ್ರಯೋಜನವಿಲ್ಲ. ಏಕೆಂದರೆ ಇದರಲ್ಲಿರುವುದೇ ವಿಷ್ಣುಪುರಾಣದಲ್ಲಿಯೂ ಇದೆ. ಮೌಲಿಕ ಬ್ರಹ್ಮವೈವರ್ತವು ಲೋಪವಾಗಿರುವುದರಿಂದ ಅದನ್ನು ಬಿಟ್ಟುಬಿಡಬೇಕಾದರೂ ಶ್ರೀರಾಧೆಯ ವೃತ್ತಾಂತಕ್ಕಾಗಿ ಅದನ್ನೊಂದುಸಲ ವ್ಯವಹರಿಸಬೇಕಾಗುವುದು. ಇತರ ಪುರಾಣಗಳಲ್ಲಿ ಕೃಷ್ಣ ಚರಿತ್ರೆಯು ಬಹು ಸಂಕ್ಷೇಪವಾದುದರಿಂದ

ಅವುಗಳ ವ್ಯವಹಾರವು ಪ್ರಯೋಜನವಿಲ್ಲ. ವಿಷ್ಣುಪುರಾಣದ ಪಂಚಮಾಂಶ ವಲ್ಲದೆ ಈ ಚತುರ್ಥಾಂಶವನ್ನೂ ಸ್ಯಮಂತಕಮಣಿ, ಸತ್ಯಭಾಮ ಮತ್ತು ಜಾಂಬವತೀ ವಿಷಯವಾಗಿ ಆಲೋಚಿಸಬೇಕಾಗುವುದು.

ಪುರಾಣಗಳೆಲ್ಲದರೊಳಗಿನ ಪ್ರಕ್ಷಿಪ್ತ ವಿಚಾರವು ದುರ್ಘಟ. ಮಹಾ ಭಾರತದಲ್ಲಿ ದೊರಕಿರುವ ಲಕ್ಷಣಗಳನ್ನೆಲ್ಲ ಹರಿವಂಶದಲ್ಲೂ, ಇತರ ಪುರಾಣ ಗಳಲ್ಲಿಯೂ ಪಡೆಯುವುದು ಕಷ್ಟ. ಆದರೆ ಮಹಾಭಾರತದ ವಿಚಾರವಾಗಿ ಅನೈಸರ್ಗಿಕವಾದುದಾವುದೋ ಅದು ಅನೈತಿಹಾಸಿಕ ಮತ್ತು ಅತಿಪ್ರಕೃತಿ ಯೆಂದು ಪರಿತ್ಯಜಿಸುವುದೊಂದು ; ನೈಸರ್ಗಿಕದಲ್ಲಿಯೂ ಸುಳ್ಳಿನ ಲಕ್ಷಣಗಳು ಕಂಡುಬಂದರೆ ಅದನ್ನು ಪರಿತ್ಯಜಿಸುವುದು ಮತ್ತೊಂದು ಎಂದು ಎರಡು ನಿಯಮಗಳನ್ನು ಗೊತ್ತುಮಾಡಿಕೊಂಡೆವಲ್ಲವೆ? ಅವು ಪುರಾಣವಿಚಾರ ದಲ್ಲಿಯೂ ನಡೆಯುವುವು.

ಈಗ ಕೃಷ್ಣ ಚರಿತ್ರೆಯನ್ನು ಹೇಳುವೆವು.

ಪ್ರಥಮ ಖಂಡ ಸಂಪೂರ್ಣ

ದ್ವಿತೀಯ ಖಂಡ

ಬೃಂದಾವನ

ಯೋ ಮೋಹಯತಿ ಭೂತಾನಿ ಸ್ನೇಹಪಾಶಾನುಬಂಧನೇ ।
ಸರ್ಗಸ್ಯ ರಕ್ಷಣಾರ್ಥಾಯ ತಸ್ಮೈ ಮೋಹಾತ್ಮನೇ ನಮಃ ॥
"ಮಹಾಭಾರತ, ಶಾಂತಿಪರ್ವ," ೪೭ನೆಯ ಅಧ್ಯಾಯ

ಪ್ರಥಮ ಪರಿಚ್ಛೇದ

ಯದುವಂಶ

ಪುರೂರವನ ಪುತ್ರನಾದ ಆಯುವಿನ ವಿಚಾರವನ್ನು ಪ್ರಥಮ ಖಂಡದಲ್ಲಿಯೇ ತಿಳಿಸಿರುವೆವು. ಆಯುವು ಯಜುರ್ವೇದದಲ್ಲಿ ಯಜ್ಞದ ಆಜ್ಯ. ಋಗ್ವೇದ ಸಂಹಿತೆಯ ೧೦ನೆಯ ಮಂಡಲದಲ್ಲಿ ಇವನು ಐತಿಹಾಸದ ರಾಜನೊಬ್ಬನು. ೧೦ನೆಯ ಮಂಡಲದ ೪೯ನೆಯ ಸೂಕ್ತಿಯ ಋಷಿಯಾದ ವೈಕುಂಠ ಇಂದ್ರನು, "ನಾನು ದೇಶವನ್ನು ಆಯುವಿನ ಅಧಿಕಾರಕ್ಕೆ ಒಳಪಡಿಸಿರುವೆ"ನೆಂದು ಹೇಳಿದ್ದಾನೆ.

ಆಯುವಿನ ಪುತ್ರನು ನಹುಷ, ನಹುಷನ ಮಗನು ಯಯಾತಿ. ಈ ನಹುಷನ ಮತ್ತು ಯಯಾತಿಯ ಹೆಸರುಗಳು ಋಗ್ವೇದ ಸಂಹಿತೆಯಲ್ಲಿವೆ. ಯಯಾತಿಯ ಐದು ಮಂದಿ ಮಕ್ಕಳ ವಿಷಯವನ್ನು ಪುರಾಣೇತಿಹಾಸಗಳಲ್ಲಿ ವರ್ಣಿಸಿದೆ. ಜ್ಯೇಷ್ಠನು ಯದು, ಕನಿಷ್ಠನು ಪುರು; ಮಿಕ್ಕ ಮೂವರು—ತುರ್ವಸು, ದ್ರುಹ್ಯ ಮತ್ತು ಅಣು. ಇವರುಗಳಲ್ಲಿ ಪುರು, ಯದು ಮತ್ತು ತುರ್ವಸುಗಳ ಹೆಸರು ಋಗ್ವೇದ ಸಂಹಿತೆಯ ೧೦ನೆಯ ಮಂಡಲ, ೪೮-೪೯ನೆಯ ಸೂಕ್ತಗಳಲ್ಲಿ ದೊರಕುವುವಾದರೂ ಇವರು ಯಯಾತಿಪುತ್ರರು ಅಥವಾ ಅಣ್ಣತಮ್ಮಂದಿರೆಂಬ ಮಾತು ಅಲ್ಲಿಲ್ಲ.

ಯಯಾತಿಯ ಐದು ಮಂದಿ ಮಕ್ಕಳುಗಳಲ್ಲಿ ಹಿರಿಯ ನಾಲ್ಕು ಮಂದಿ ಮಕ್ಕಳೂ ತಂದೆಯ ಮಾತನ್ನು ನಡೆಯಿಸದಿರಲು ತಾನೇ ಇವರನ್ನು ಶಪಿಸಿ

ಕಿರಿಯನಾದ ಪುರುವಿಗೆ ರಾಜ್ಯಪಟ್ಟವನ್ನು ಕಟ್ಟಿದನೆಂದು ಹೇಳಿದೆ. ಈ ಪುರುವಿನ ವಂಶದಲ್ಲಿಯೇ ದುಷ್ಯಂತ, ಭರತ, ಕುರು ಮತ್ತು ಅಜಮಿಳರು ಜನ್ಮವೆತ್ತಿದರು. ದುರ್ಯೋಧನ, ಯುಧಿಷ್ಠಿರ ಮುಂತಾದ ಕೌರವರು ಈ ಪುರುವಂಶದವರು ; ಮತ್ತು ಕೃಷ್ಣನೇ ಮೊದಲಾದವರು ಯದುವಂಶದವರು. ಅಂತೂ ಪುರಾಣಗಳು, ಇತಿಹಾಸಗಳು ಮುಂತಾದ ಸಕಲ ಕಡೆಗಳಲ್ಲಿಯೂ ಯಯಾತಿಪುತ್ರನಾದ ಯದುವಿನಿಂದ ಮಥುರಾವಾಸಿಗಳಾದ ಯಾದವರುಂಟಾದರೆಂದು ಹೇಳಿರುವುದು.

ಹರಿವಂಶದಲ್ಲಿಯಾದರೋ ಇನ್ನೊಂದು ರೀತಿಯ ಮಾತು ಸಿಕ್ಕುವುದು. ಹರಿವಂಶದ ಹರಿವಂಶ ಪರ್ವದಲ್ಲಿ ಮಧುವಂಶ ಕಥನವಿರುವುದಷ್ಟೆ. ಅಲ್ಲಿ ಯಯಾತಿಪುತ್ರ ಯದುವಂಶವೇ ಹೇಳಿರುವುದಾದರೂ ವಿಷ್ಣುಪರ್ವದಲ್ಲಿ ಬೇರೆ ರೀತಿಯಾಗಿರುವುದು. ಹರ್ಯಶ್ವನೆಂಬ ಇಕ್ಷ್ವಾಕುಕುಲದವನೊಬ್ಬನು ಆಯೋಧ್ಯೆಯಲ್ಲಿ ರಾಜನಾಗಿದ್ದನು. ಇವನು ಮಧುವನಾಧಿಪತಿಯಾದ ಮಧುರನ ಮಗಳಾದ ಮಧುಮತಿಯನ್ನು ಮದುವೆಯಾದನು. ಈ ಮಧುವನವೇ ಮಥುರೆಯು. ಹರ್ಯಶ್ವನು ಕಾರಣಾಂತರದಿಂದ, ಅಯೋಧ್ಯೆಯಿಂದ ರಾಜ್ಯಚ್ಯುತನಾಗಿ ಮಾವನ ಮನೆಯಲ್ಲಿ ವಾಸಮಾಡುತ್ತಿದ್ದನು. ಇವನ ಮಗನೇ ಯದುವು. ಹರ್ಯಶ್ವನು ಲೋಕಾಂತರವನ್ನು ಹೊಂದಿದಮೇಲೆ ಯದುವು ರಾಜ್ಯಕ್ಕೆ ಬಂದನು. ಯದುವಿನ ಮಗನು ಮಾಧವನು ; ಮಾಧವನ ಮಗನು ಸತ್ವತನು ; ಸತ್ವತನ ಮಗನು ಭೀಮನು. ಮಧುರನ ಮಗನಾದ ಲವಣನನ್ನು ಶ್ರೀರಾಮನ ತಮ್ಮನಾದ ಶತ್ರುಘ್ನನು ಸಮರದಲ್ಲಿ ಸದೆದು ಅವನ ರಾಜ್ಯವನ್ನು ವಶಪಡಿಸಿಕೊಂಡು ಮಥುರಾ ನಗರವನ್ನು ಕಟ್ಟಿದನು. ರಾಘವನು ಮಥುರೆಯನ್ನು ಬಿಟ್ಟುಹೋಗಲು ಭೀಮನು ಪುನಃ ಅದನ್ನು ಸ್ವಾಧೀನಮಾಡಿಕೊಂಡನು. ಈ ಯದುಸಂಭೂತ ವಂಶವೇ ಮಥುರಾವಾಸಿಗಳಾದ ಯಾದವರದೆಂದು ಹರಿವಂಶದಲ್ಲಿ ಹೇಳಿರುವುದು.

ಋಗ್ವೇದ ಸಂಹಿತೆಯ ದಶಮ ಮಂಡಲದ ೬೨ನೆಯ ಸೂಕ್ತಿಯಲ್ಲಿ ಯದು ಮತ್ತು ತುರ್ವಸು ಎಂಬಿಬ್ಬರ ಹೆಸರುಗಳಿವೆಯಾದರೂ ಇವರು ದಾಸಜಾತಿಯ ರಾಜರೆಂದು ಹೇಳಿದೆ. (೧೦ನೆಯ ಋಕ್ಕು.)

ಆದರೆ ಈ ಮಂಡಲದ ೪೯ನೆಯ ಸೂಕ್ತಿಯಲ್ಲಿ ಇಂದ್ರನು ಹೀಗೆ ಹೇಳುವನು :—"ತುರ್ವಸು ಮತ್ತು ಯದು ಇವರಿಬ್ಬರೂ ಬಲವಂತರೆಂದು ಖ್ಯಾತಿಗೊಳ್ಳುವಂತೆ ಮಾಡಿರುವೆನು" (೮ನೆಯ ಋಕ್ಕು). ಇದೇ ಸೂಕ್ತಿಯ ೩ನೆಯ ಋಕ್ಕಿನಲ್ಲಿ "ನಾನು ದಸ್ಯುಜಾತಿಯುವರನ್ನು ಆರ್ಯರೆಂಬ ಹೆಸರಿನಿಂದ ವಂಚಿತರನ್ನಾಗಿ ಮಾಡಿರುವೆನು"* ಎಂದಿದೆ. ದಾಸಜಾತಿಯ ರಾಜರನ್ನು ಇವನು ಖ್ಯಾತಿವಂತರನ್ನಾಗಿ ಮಾಡಿದ್ದನೆಂದು ಇದರಿಂದ ತಿಳಿಯಬೇಕಾಯಿತು. ಈ ಯದುವು ಆರ್ಯನೋ ಅನಾರ್ಯನೋ ತಿಳಿಯುವುದಕ್ಕಾಗುವುದಿಲ್ಲ. ಪ್ರಥಮ ಮಂಡಲ ೩೬ನೆಯ ಸೂಕ್ತಿಯ ೧೮ನೆಯ ಋಕ್ಕಿನಲ್ಲಿ ಹೀಗೆ ಹೇಳಿರುವುದು :—"ಅಗ್ನಿಯ ಮೂಲಕವಾಗಿ ತುರ್ವಸು, ಯದು ಮತ್ತು ಉಗ್ರದೇವರನ್ನು ನಾವು ದೂರದಿಂದ ಕರೆಯುತಲಿದ್ದೇವೆ" ಎಂದು.

ಅನಾರ್ಯ ರಾಜನ ವಿಷಯವಾಗಿ ಆರ್ಯಋಷಿಗಳು ಹೀಗೆ ಹೇಳಿರುವುದುಂಟೆ ?

ಅಂತೂ ಮೂವರು ಯದುಗಳ ಮಾತು ಸಿಕ್ಕುವುದು :

೧. ಯಯಾತಿ ಪುತ್ರನು.
೨. ಇಕ್ಷ್ವಾಕು ವಂಶದವನು.
೩. ಅನಾರ್ಯ ರಾಜನೊಬ್ಬನು.

ಇವರಲ್ಲಿ ಯಾವ ಯದುವಿನ ವಂಶದಲ್ಲಿ ಶ್ರೀಕೃಷ್ಣನು ಜನ್ಮವೆತ್ತಿದನೆಂಬುದನ್ನು ಗೊತ್ತುಮಾಡುವುದಕ್ಕಾಗುವುದಿಲ್ಲ. ಇವರುಗಳಲ್ಲಾರೂ ಮಥುರೆಯಲ್ಲಲ್ಲದೆ ಬೇರೆ ಕಡೆಯಲ್ಲೆಲ್ಲೂ ಇಲ್ಲದಿರಲು ಮತ್ತು ಈ ಮಥುರೆಯು ಇಕ್ಷ್ವಾಕುವಂಶೀಯರಿಂದಲೇ ನಿರ್ಮಿತವಾಗಿರಲು ಯಾದವರು ಇಕ್ಷ್ವಾಕು ವಂಶದವರಲ್ಲವೆಂದು ಬಲವಂತವಾಗಿ ಹೇಳುವುಕ್ಕಾಗುವುದಿಲ್ಲ.

ಅದಾವ ಯದುವಂಶದಲ್ಲಿ ಕೃಷ್ಣನು ಹುಟ್ಟಿದ್ದನೋ ಅದೇ ವಂಶದವರೇ ಮಧು, ಸತ್ವತ, ವೃಷ್ಣಿ, ಅಂಧಕ, ಕುಕುರ ಮತ್ತು ಭೋಜ ಮೊದಲಾದವರೂ ಆಗಿದ್ದರು. ಮತ್ತು ಈ ಸಂತತಿಯವರೆಲ್ಲರೂ ಒಟ್ಟಿಗೆ ಮಥುರೆಯಲ್ಲಿ

*ರಮೇಶಚಂದ್ರ ದನತ್ತನ ಅನುವಾದದಿಂದ ಎತ್ತಿದುದು.

ವಾಸಿಸುತ್ತಿದ್ದರು. ಕೃಷ್ಣನು ವೃಷ್ಣಿ ಸಂತತಿಯವನು; ಕಂಸ ಮತ್ತು ದೇವಕಿಯು ಭೋಜ ಸಂತತಿಯವರು; ಮತ್ತು ಒಬ್ಬನೇ ತಾತನ ಮೊಮ್ಮಕ್ಕಳು.

ದ್ವಿತೀಯ ಪರಿಚ್ಛೇದ

ಕೃಷ್ಣನ ಜನ್ಮ

ಕಂಸನ ತಂದೆ ಉಗ್ರಸೇನನು ಯಾದವರ ಅರಸನೆಂದು ವರ್ಣಿಸಿರುವುದು. ಕೃಷ್ಣನ ತಂದೆ ವಸುದೇವನು ದೇವಕಿಯ ಗಂಡ.

ವಸುದೇವನು ದೇವಕಿಯನ್ನು ಮದುವೆಯಾಗಿ ಮನೆಗೆ ಕರೆದುಕೊಂಡು ಬರುವಾಗ ಕಂಸನು ಎಷ್ಟೋ ಅಂತಃಕರಣದಿಂದ ಅವರ ರಥವನ್ನು ತಾನೇ ಸಾರಥಿಯಾಗಿ ನಡಸಿಕೊಂಡು ಹೋಗುತ್ತಿರಲು—ಇದೇ ದೇವಕಿಯ ಎಂಟನೆಯ ಗರ್ಭದಲ್ಲಿ ಹುಟ್ಟುವ ಮಗನು ಕಂಸನನ್ನು ಕೊಲ್ಲುವನೆಂದು ಆಕಾಶವಾಣಿಯಾಯಿತು. ಕಂಸನು ಈ ವಿಪತ್ತನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ದೇವಕಿಯನ್ನು ಕೊಲ್ಲಲೆತ್ನಿಸುತ್ತಿರುವಾಗ, ವಸುದೇವನು ಕಂಸನಿಗೆಷ್ಟೋ ಸಮಾಧಾನಗಳನ್ನು ಹೇಳಿ—"ನಮಗೆ ಹುಟ್ಟಿದ ಮಕ್ಕಳನ್ನೆಲ್ಲ ನಾನೇ ನಿನ್ನ ವಶಕ್ಕೆ ಒಪ್ಪಿಸುವೆನೆಂದು" ಮಾತು ಕೊಟ್ಟನು. ಇದರಿಂದ ದೇವಕಿಯನ್ನೇನೋ ಪ್ರಾಣದೊರಸೆ ಉಳಿಸಿಕೊಂಡಹಾಗಾಯಿತು. ಕಂಸನು ವಸುದೇವ ದೇವಕಿಯರನ್ನು ಸೆರೆಮನೆಯಲ್ಲಿರಿಸಿ ಇವರಿಗೆ ಹುಟ್ಟಿದ ಆರು ಮಕ್ಕಳನ್ನೂ ಕ್ರಮವಾಗಿ ಕೊಲ್ಲುತ್ತಬಂದನು. ಏಳನೆಯ ಶಿಶು ಗರ್ಭದಲ್ಲೇ ನಷ್ಟವಾಯಿತು. ವಿಷ್ಣುವಿನ ಆಜ್ಞಾನುಸಾರವಾಗಿ ಯೋಗನಿದ್ರೆ ಶಿಶುವನ್ನೆಳೆತಂದು ವಸುದೇವನ ಇನ್ನೊಬ್ಬ ಹೆಂಡತಿಯ ಗರ್ಭದಲ್ಲಿಟ್ಟಿತೆಂದು ಪುರಾಣದಲ್ಲಿ ಹೇಳಿದೆ.

ವಸುದೇವನ ಎರಡನೆಯ ಹೆಂಡತಿಯೇ ರೋಹಿಣಿ ಎಂಬವಳು. ಮಥುರೆಗೆ ಬಹಳ ದೂರವಲ್ಲದ ಗೊಲ್ಲರಹಟ್ಟಿಯಲ್ಲಿ ನಂದನೆಂಬ ಗೊಲ್ಲನಿದ್ದನು. ಅವನು ವಸುದೇವನಿಗೆ ಬೇಕಾದವನು. ರೋಹಿಣಿಯನ್ನು ವಸುದೇವನು ಆ ನಂದನ ಮನೆಯಲ್ಲಿರಿಸಿದ್ದನು. ಅಲ್ಲಿ ಇವಳು ಬಲರಾಮನನ್ನು ಹೆತ್ತಳು.

ದೇವಕಿಯ ಎಂಟನೆಯ ಗರ್ಭವನ್ನು ಶ್ರೀಕೃಷ್ಣನು ಪ್ರವೇಶಿಸಿ ಕಾಲ ಕ್ರಮವಾಗಿ ರಾತ್ರಿಯಲ್ಲಿ ಜನನವಾಗಲು, ವಸುದೇವನು ಈ ಮಗುವನ್ನು ನಂದನ ಮನೆಗೆ ತೆಗೆದುಕೊಂಡುಹೋದನು. ಅಲ್ಲಿ ಅದೇ ರಾತ್ರಿಯಲ್ಲಿ ನಂದನ ಹೆಂಡತಿ ಯಶೋದೆ ಒಂದು ಹೆಣ್ಣುಮಗುವನ್ನು ಹೆತ್ತಿದ್ದಳು. ಈ ಕನ್ಯೆಯೇ ಆ ವೈಷ್ಣವೀಶಕ್ತಿಯಾದ ಯೋಗನಿದ್ರೆ. ಈ ಶಕ್ತಿ ಯಶೋದೆಯನ್ನು ಮಂಕುಮಾಡಿರಲು ವಸುದೇವನು ಮಗನನ್ನು ಹೆರಿಗೆಯ ಮನೆಯಲ್ಲಿಟ್ಟು ಕನ್ಯೆಯನ್ನು ಎತ್ತಿಕೊಂಡು ಬಂದನು. ಇದನ್ನೇ ತನ್ನ ಮಗಳೆಂದು ಕಂಸನಿಗೆ ಒಪ್ಪಿಸಿದನು. ಕಂಸನು ಅದನ್ನು ಕೊಲ್ಲಲಾರದೆಹೋದನು. ಯೋಗನಿದ್ರೆಯು ಆಕಾಶಮಾರ್ಗವಾಗಿ ಹೊರಟು ಕಂಸನನ್ನು ಕೊಲ್ಲುವವನು ಬೇರೆಕಡೆಯಲ್ಲಿ ಬೆಳೆಯುತ್ತಿದ್ದಾನೆಂದು ಹೇಳಿ ಮರೆಯಾಯಿತು. ಇಷ್ಟಾದ ಮೇಲೆ ಕಂಸನು ತಂಗಿಯನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದನು. ಕೃಷ್ಣನು ನಂದಾಲಯದಲ್ಲೇ ಇದ್ದನು.

ಇದಷ್ಟೂ ಅನೈಸರ್ಗಿಕ; ನಾವು ಮೊದಲು ಗೊತ್ತುಮಾಡಿದ ನಿಯಮಾನುಸಾರವಾಗಿ ಬಿಡತಕ್ಕವು. ಆದರೆ ಇದರೊಳಗೆ ಐತಿಹಾಸಿಕ ತತ್ತ್ವವೂ ದೊರೆಯುತ್ತಿದೆ. ಕೃಷ್ಣನು ಮಥುರೆಯಲ್ಲಿ ದೇವಕಿಯ ಗರ್ಭದಲ್ಲಿ ವಸುದೇವನ ಔರಸಪುತ್ರನಾಗಿ ಹುಟ್ಟಿದವನು. ಅತಿಬಾಲ್ಯದಲ್ಲಿಯೇ ಅವನನ್ನು ತಂದೆ ನಂದಾಲಯದಲ್ಲಿಟ್ಟಿದ್ದನು.* ನಂದಾಲಯದಲ್ಲಿ ಪುತ್ರನನ್ನು ಮುಚ್ಚಿಡಲು ಕಂಸನಾಶ ವಿಷಯವಾದ ಆಕಾಶವಾಣಿಯಾಗಲಿ, ಕಂಸನ ಪ್ರಾಣಭಯವಾಗಲಿ ಕಾರಣವಲ್ಲ. ಭಾಗವತ ಪುರಾಣದಲ್ಲಿಯೂ ಮಹಾಭಾರತದಲ್ಲಿಯೂ ಇರುವ ಕೃಷ್ಣನ ಮಾತಿನಿಂದಲೇ ಕಂಸನು ಈ ಸಮಯದಲ್ಲಿ ಹುಚ್ಚು ಹುಚ್ಚು ದುರಾಚಾರವುಳ್ಳವನಾಗಿ ಔರಂಗ್‌ಜೇಬನಂತೆ ತನ್ನ ತಂದೆಯನ್ನೇ ಸಿಂಹಾಸನದಿಂದ ತಳ್ಳಿ ತಾನೇ ರಾಜ್ಯಪಟ್ಟವನ್ನು ಕಟ್ಟಿಕೊಂಡು

---

*ಕೃಷ್ಣ ಚರಿತ್ರೆಯ ಮೊದಲನೆಯ ಸಂಸ್ಕರಣದಲ್ಲಿ ಕೃಷ್ಣನು ನಂದಾಲಯದಲ್ಲಿದ್ದುದನ್ನೇ ನಂಬದೆ ತಳ್ಳಿಬಿಟ್ಟಿದ್ದೇನಲ್ಲದೆ ಇದನ್ನು ಸಾಧಿಸಲು ಮಹಾಭಾರತದಿಂದ ಕಾರಣಗಳನ್ನೂ ಎತ್ತಿದ್ದೆನು. ಅವನ್ನೆಲ್ಲಾ ಉಪಯುಕ್ತ ಸ್ಥಾನದಲ್ಲಿ ಪುನಃ ಎತ್ತುವೆನು. ಆದರೆ ಈಗ ಹೇಳುವುದೇನೆಂದರೆ—ವಿಶೇಷ ವಿಚಾರಮಾಡಿ ನೋಡುವಲ್ಲಿ ಮೊದಲಿನ ಮತದ ಕೆಲವು ಭಾಗವನ್ನು ತಿದ್ದಬೇಕಾಯಿತು. ನನ್ನ ತಪ್ಪನ್ನು ಒಪ್ಪಿಕೊಳ್ಳಲು ಹಿಂಜರಿಯೆನು. ಅಲ್ಪಬುದ್ಧಿ ಅನೇಕವೇಳೆ ಭ್ರಾಂತಿಗೊಳ್ಳುವುದು.

ಆಳಲಾರಂಭಿಸಿ ಯಾದವರನ್ನು ಹಿಂಸಿಸುತ್ತಿರಲು ಇವನ ಕಾಟಕ್ಕೆ ಹೆದರಿ ಹಲವರು ಮಥುರೆಯನ್ನೇ ತೊರೆದು ಅನ್ಯದೇಶಗಳಲ್ಲಿ ವಾಸಮಾಡುತ್ತಿದ್ದರೆಂದು ತಿಳಿದುಬರುವುದು. ವಸುದೇವನೂ ಕೂಡ ತನ್ನ ಎರಡನೆಯ ಹೆಂಡತಿ ರೋಹಿಣಿಯನ್ನೂ ಮಗ ಕೃಷ್ಣನನ್ನೂ ನಂದಾಲಯದಲ್ಲಿರಿಸಿದ್ದನು. ಕಂಸನ ಭಯದಿಂದಲೇ ನಂದನ ಮನೆಯಲ್ಲಿ ಕೃಷ್ಣನನ್ನು ಗೋಪ್ಯವಾಗಿ ಇಟ್ಟದ್ದನೆಂಬುದೇ ಸಂಭವ ಮತ್ತು ಐತಿಹಾಸಿಕವೆಂದು ಸ್ವೀಕರಿಸಬಹುದು.

ತೃತೀಯ ಪರಿಚ್ಛೇದ

ಶೈಶವ

ಕೃಷ್ಣನ ಬಾಲ್ಯದ ವಿಷಯವಾಗಿ ಅನೈಸರ್ಗಿಕವಾದ ಹಲವು ಹುಚ್ಚು ಕಥೆಗಳು ಪುರಾಣದಲ್ಲಿರುವುವಷ್ಟೆ. ಅವುಗಳನ್ನು ಒಂದೊಂದಾಗಿ ನೋಡೋಣ :—

೧. **ಪೂತನಿಯ ವಧೆ.**—ಪೂತನಿಯು ಕಂಸನು ಕಳುಹಿದ ರಕ್ಕಸಿ. ಇವಳು ಪರಮ ರೂಪವತಿಯ ವೇಷವನ್ನು ಹಾಕಿಕೊಂಡು ನಂದಾಲಯಕ್ಕೆ ಬಂದಳು. ಅವಳ ಸ್ತನಗಳಿಗೆ ವಿಷ ಬಳಿದಿತ್ತು. ಅವಳು ಶ್ರೀ ಕೃಷ್ಣನಿಗೆ ಸ್ತನ್ಯವನ್ನು ಕೊಡಲು ಕೃಷ್ಣನು ಆ ಸ್ತನವನ್ನು ಬಲವಾಗಿ ಕಚ್ಚಿ ಹಿಂಸಿಸಲು, ಈ ಹಿಂಸೆಯನ್ನು ತಾಳಲಾರದೆ ಅವಳು ಪ್ರಾಣವನ್ನೇ ಬಿಟ್ಟಳು. ಆ ಬಳಿಕ ಅವಳು ತನ್ನ ನಿಜರೂಪವನ್ನು ಧರಿಸಿ ಆರು ಹರದಾರಿಯ ಭೂಮಿಯನ್ನು ಆವರಿಸಿ ಬಿದ್ದಳು.

ಮಹಾಭಾರತದಲ್ಲಿ ಶಿಶುಪಾಲವಧ ಪರ್ವಾಧ್ಯಾಯದಲ್ಲಿ ಪೂತನಾ ವಧೆಯ ಪ್ರಸಂಗವಿರುವುದು. ಶಿಶುಪಾಲನು ಪೂತನಿಯನ್ನು 'ಶಕುನಿ' ಎಂದು ಸಂಬೋಧಿಸಿದ್ದಾನೆ. ಶಕುನಿ ಎಂದರೆ ಹದ್ದು, ಡೇಗೆ, ಗರುಡ ಇವುಗಳಿಗನ್ವಯಿಸುವುದು. ಬಲಿಷ್ಠವಾದ ಮಗು ಹಕ್ಕಿಯೊಂದನ್ನು ಕೊಲ್ಲುವುದೇನಾಶ್ಚರ್ಯ !

ಅಲ್ಲದೆ ಪೂತನಿ ಎನ್ನುವುದಕ್ಕೆ ಇನ್ನೊಂದು ಅರ್ಥವುಂಟು. ಇದಕ್ಕೆ 'ಸನ್ನಿ' ಎನ್ನುವರು. ಹೆರಿಗೆಯ ಮನೆಯ ಮಗುವಿಗೆ ಬರುವ ಸನ್ನಿಗೆ ಈ ಹೆಸರು. ಮಗುವು ಬಲವಾಗಿ ಮೊಲೆಯುಂಡರೆ ಈ ರೋಗವು ಹೋಗುವುದು. ಇದೇ ಪೂತನಿಯ ವಧೆ.

೨. ಶಕಟ ವಿಪರ್ಯಯ.—ಯಶೋದೆಯು ಕೃಷ್ಣನನ್ನು ಒಂದು ಬಂಡಿಯ ಕೆಳಗೆ ಮಲಗಿಸಿರಲು ಕೃಷ್ಣನ ಒದೆತದಿಂದ ಗಾಡಿ ತಲೆಕೆಳಗಾಯಿತು. ಋಗ್ವೇದ ಸಂಹಿತೆಯಲ್ಲಿ ಇಂದ್ರನಿಂದ ಮಾಡಲ್ಪಟ್ಟ ಉಷೆಯ (ಅರುಣೋದಯದ) ಶಕಟಭಂಜನವೆಂಬ ಪೂರ್ವಿಕವಾದ ರೂಪಕದ ಹೊಸ ಸಂಸ್ಕರಣವಿದೆಂದು ತೋರುವುದು. ಹಲವು ವೈಧಿಕ ಉಪಾಖ್ಯಾನಗಳು ಕೃಷ್ಣಲೀಲೆಯಲ್ಲಿ ಅಡಕವಾಗಿವೆಯೆಂದು ವಿವೇಚಿಸಲು ಕಾರಣವುಂಟು.

೩. ಕೃಷ್ಣನು ಒಂದು ದಿನ ಮಣ್ಣನ್ನು ತಿಂದನು. ಯಶೋದೆಯು ಕೇಳಲು ಇಲ್ಲವೆಂದು ಹೇಳಿದನು. ಆಗ ಯಶೋದೆಯು ಕೃಷ್ಣನನ್ನು ತನ್ನ ತೊಡೆಯಮೇಲೆ ಕೂರಿಸಿಕೊಂಡು ಅವನ ಬಾಯನ್ನು ಬಿಡಿಸಿ ಒಳಗೆ ನೋಡಲು ಕೃಷ್ಣನು ವಿಶ್ವಬ್ರಹ್ಮಾಂಡವನ್ನೇ ತೋರಿಸಿದನು. ಇದು ಮೊಟ್ಟ ಮೊದಲು ಭಾಗವತದಲ್ಲಿ ಸಿಕ್ಕುವುದು. ಭಾಗವತಕಾರನಿಂದಲೇ ಆದ ಉಪನ್ಯಾಸವಾಗಿರಬೇಕು.

೪. ತೃಣಾವರ್ತ.—ತೃಣಾವರ್ತನೆಂಬ ರಾಕ್ಷಸನು ಒಂದು ದಿನ ಕೃಷ್ಣನನ್ನು ಆಕಾಶಮಾರ್ಗಕ್ಕೆ ಎತ್ತಿಕೊಂಡು ಹೋಗಿದ್ದನು. ಇವನ ವರ್ಣನೆಯನ್ನು ನೋಡಿದರೆ ಇದು ಸುಂಟರಗಾಳಿ ಮಾತ್ರವೇ ಎಂದು ತೋರುವುದು. ಭಾಗವತದಲ್ಲಿ ಈ ಅಸುರನು ಸುಂಟರಗಾಳಿಯ ರೂಪದಿಂದಲೇ ಬಂದಿದ್ದನೆಂದು ಹೇಳಿದೆ. ಈ ಎರಡು ಅಭಿಪ್ರಾಯಗಳೂ ಭಾಗವತದಲ್ಲಿಯೇ ಇರುವುವು. ತೃಣಾವರ್ತನು ರಾಕ್ಷಸನೇ ಎಂಬುದಕ್ಕೆ ಇನ್ನಾವ ಆಧಾರವೂ ಇರುವುದಿಲ್ಲ. ಸುಂಟರಗಾಳಿಯಲ್ಲಿ ಮಗುವು ಹಾರಿಸಲ್ಪಡುವುದು ವಿಚಿತ್ರವೇನೂ ಅಲ್ಲ.

೫. ಹಾಲು ಬೆಣ್ಣೆಗಳನ್ನು ಕದಿಯುವುದು.—ಈ ಕೃಷ್ಣಶಿಶುವಿಗೆ ಕಾಲು ಬಂದು ನಡಿಗೆಯನ್ನು ಕಲಿಯುತ್ತಿರುವಾಗ ಗೋಪಿಗಳ ಮನೆಗಳಲ್ಲಿ ಬಲು ತುಂಟತನ ಮಾಡುತ್ತಿದ್ದನು. ಇತರ ತುಂಟತನಗಳ ಜತೆಯಲ್ಲಿ

ಹಾಲು ಬೆಣ್ಣೆಗಳನ್ನು ಕದ್ದು ಉಣ್ಣುತ್ತಿದ್ದನು. ಇದು ಭಾಗವತಕಾರನ ಮಾತೇ ಹೊರತು, ವಿಷ್ಣುಪುರಾಣದಲ್ಲೇ ಆಗಲಿ ಮಹಾಭಾರತದಲ್ಲೇ ಆಗಲಿ ಯಾವ ಆಧಾರವೂ ಸಿಕ್ಕುವುದಿಲ್ಲ.

ಪ್ರಸಂಗ ಕ್ರಮವಾಗಿ ಹರಿವಂಶದಲ್ಲಿ ಬೆಣ್ಣೆಯನ್ನು ಕದ್ದ ಮಾತುಂಟು. ಭಾಗವತದಲ್ಲಿ ಇದನ್ನು ಬಹಳವಾಗಿ ಹೆಚ್ಚಿಸಿಬಿಟ್ಟಿರುತ್ತಾರೆ. ಶಿಶುವು ಧರ್ಮಾಧರ್ಮಜ್ಞಾನವುಂಟಾಗುವ ಕಾಲಕ್ಕೆ ಮುಂಚೆ ತಿಂಡಿಯನ್ನು ಕದ್ದರೆ ಅದು ದೋಷವೆನಿಸುವುದಿಲ್ಲ. ಕೃಷ್ಣನು ಈಶ್ವರಾವತಾರಿ. ಅವನಿಗೆ ಯಾವ ವಯಸ್ಸಿನಲ್ಲಿಯೂ ಜ್ಞಾನದ ಅಭಾವವಿರಕೂಡದು ಎನ್ನುವಿರಾದರೆ, ಅದಕ್ಕೆ ಉತ್ತರವಾಗಿ—ಕೃಷ್ಣಭಕ್ತರು ಈಶ್ವರನು ಕದಿಯುವುದೆಂದರೇನು, ಎಂದು ಕೇಳಬಹುದಷ್ಟೆ? ಈ ಜಗತ್ತೆಲ್ಲವೂ ಯಾರದೋ; ತುಪ್ಪ, ಮೊಸರು, ಹಾಲು ಮುಂತಾದುವೆಲ್ಲವೂ ಯಾರ ಸೃಷ್ಟಿಯೋ, ಅವನು ಯಾರ ದ್ರವ್ಯವನ್ನು ಕದ್ದು ಕಳ್ಳನಾದಾನು? ಸರ್ವವೂ ಅವನದೇಯಷ್ಟೆ; ಹಾಗಲ್ಲ. ಅವನು ಮಾನವ ಧರ್ಮವನ್ನವಲಂಬಿಸಿದ್ದವನು. ಮನುಷ್ಯ ಧರ್ಮದಲ್ಲಿ ಕಳವು ಪಾಪವೇ ಹೌದು ಎನ್ನುವಿರಾದರೆ ಶಿಶುವಿಗೆ ಧರ್ಮಾಧರ್ಮ ಜ್ಞಾನವಿರುವುದಿಲ್ಲವಾದಕಾರಣ ಮಾನವ ಧರ್ಮಾವಲಂಬಿಯಾದ ಶಿಶುವಿಗೆ ಪಾಪವಿಲ್ಲ. ಆದರೆ ಈ ಮಾತೇ ನಿರಾಧಾರವಾದುದರಿಂದ ನಮಗೆ ಇದರಿಂದ ಪ್ರಯೋಜನವಿರುವುದಿಲ್ಲ. ಇದಕ್ಕೆ ಆಧಾರವು ಮತ್ತೇನಾದರೂ ಇದ್ದರೆ, ಭಾಗವತಕಾರನು ಇದನ್ನು ಹೇಳಿದ ಭಾವವು ಬಹು ಮನೋಹರವಾದುದು.

ಭಾಗವತಕಾರನು ಹೇಳಿರುವುದೇನೆಂದರೆ:—

"ಕೃಷ್ಣ ಭಗವಂತನು ಮೊಸರು ಬೆಣ್ಣೆಗಳನ್ನು ತನಗೋಸ್ಕರವೆಂದು ಅಷ್ಟು ಹೆಚ್ಚಾಗಿ ಕದಿಯುತ್ತಿರಲಿಲ್ಲ. ಕೋತಿಗಳಿಗೆ ಇವನ್ನು ತಿನ್ನಿಸುತ್ತಿದ್ದನು. ಕೋತಿಗಳಿಗೆ ಕೊಡಲಿಕ್ಕೆ ಸಿಕ್ಕದೇಹೋದರೆ ಉರುಳಿಬಿದ್ದು ಅಳುತ್ತಿದ್ದನು. ಕೃಷ್ಣನು ಸರ್ವಭೂತಗಳಲ್ಲಿಯೂ ಸಮದರ್ಶಿಯೆಂಬುದನ್ನು ಭಾಗವತಕಾರನು ತೋರಿಸಿರುವನು. ಗೋಪಿಗಳು ಯಥೇಷ್ಟವಾಗಿ ಹಾಲು ಮೊಸರುಗಳನ್ನುಣ್ಣುತ್ತಿದ್ದರು. ಕೋತಿಗಳಿಗೆ ಸಿಕ್ಕುತ್ತಲಿರಲಿಲ್ಲ. ಆದುದರಿಂದಿವನು ಇವನ್ನು ಗೋಪಿಗಳಿಂದ ಕಿತ್ತುಕೊಂಡು ಕೋತಿಗಳಿಗೆ ಕೊಡು

ತ್ತಿದ್ದನು." ಸರ್ವಭೂತಗಳಿಗೂ ಸ್ವಾಮಿಯಾದ ಈತನಿಗೆ ಹಾಲು ಮೊಸರುಗಳ ವಿಷಯದಲ್ಲಿ ಗೋಪಿಗಳಿಗೂ ಕೋತಿಗಳಿಗೂ ಸಮಾನವಾದ ಅಧಿಕಾರವುಂಟೆಂದು ತೋರುತ್ತಿತ್ತು.

ಈ ಮಗು ಎಲ್ಲರಿಗೂ ಬೇಕಾದುದು, ಎಲ್ಲರ ದುಃಖವನ್ನೂ ತೊಡೆಯಲುದ್ಯುಕ್ತಪಡುವುದು. ತಿರ್ಯಗ್ಜಾತಿಯ ಕೋತಿಗಳ ವಿಷಯದಲ್ಲಿ ಈ ಮಗುವಿಗೆ ಇಂಥ ಕಾತರತೆಯ ಪರಿಚಯವನ್ನು ಕೊಟ್ಟಿರುವನು. ಅಲ್ಲದೆ ದೀನಳಾದ ಹಣ್ಣು ಮಾರುವವಳೊರ್ವಳು ಕೊಟ್ಟ ಒಂದು ಹಣ್ಣಿಗೆ ಪ್ರತಿಯಾಗಿ ಕೃಷ್ಣನು ಒಂದು ಬೊಗಸೆಯ ತುಂಬಾ ರತ್ನಗಳನ್ನು ಅವಳಿಗೆ ಕೊಟ್ಟನು. ಇಂತಹ ದೃಷ್ಟಾಂತಗಳಿಗೆ ಭಾಗವತವನ್ನು ಬಿಟ್ಟರೆ ಮತ್ತಾವ ಪ್ರಮಾಣವೂ ಸಿಕ್ಕುವುದಿಲ್ಲ. ಆದರೆ ಕೃಷ್ಣನ ಜೀವನವ್ರತ ಪರಹಿತವೆಂಬುದು ಮುಂದೆ ಕಾಣುವುದು.

೬. **ಯಮಳಾರ್ಜುನ ಭಂಗ.**—ಒಂದು ದಿನ ಕೃಷ್ಣನು ಬಹಳ ಹಾವಳಿ ಮಾಡಿದನೆಂದು ಯಶೋದೆ ಅವನ ಸೊಂಟಕ್ಕೆ ಹಗ್ಗವನ್ನು ಬಿಗಿದು, ಒಂದು ಒರಳುಮರಕ್ಕೆ ಅವನನ್ನು ಕಟ್ಟಿಹಾಕಿರಲು, ಕೃಷ್ಣನು ಅದನ್ನೆಳೆದುಕೊಂಡು ಹೋಗಿ ಯಮಳಾರ್ಜುನವೆಂಬ ಹೆಸರಿನ ಎರಡು ಮರಗಳ ಮಧ್ಯದಿಂದ ಹೊರಹೊರಡಲು ಒರಳುಮರವು ಆ ಮರಗಳ ನಡುವೆ ಸಿಕ್ಕಿಕೊಂಡಿದ್ದಿತು. ಆದರೂ ಶ್ರೀ ಕೃಷ್ಣನು ನಿಲ್ಲದೆ ಮುಂದಕ್ಕೆ ಹೋಗಲು ಅವೆರಡು ಮರಗಳೂ ಬುಡಕಿತ್ತು ಒರಗಿದುವು. ಈ ಮಾತು ವಿಷ್ಣುಪುರಾಣದಲ್ಲಿಯೂ, ಮಹಾಭಾರತದಲ್ಲಿ ಶಿಶುಪಾಲ ತಿರಸ್ಕಾರವಾಕ್ಯಗಳಲ್ಲಿಯೂ ಸಿಕ್ಕುವುದು. ಆದರೆ ಈ ವಿಷಯವೇನು? ಅರ್ಜುನವೆಂದರೆ ಕುರ್ಚಿಯಗಿಡ. ಇದು ಅಷ್ಟೇನೂ ದೊಡ್ಡದಲ್ಲ. ಸಾಮಾನ್ಯವಾಗಿ ಬಲು ಸಣ್ಣಗೆ ಇರುವುದು. ಇಂತಹ ನಾಲ್ಕು ಗಿಡಗಳ್ನಾದರೂ ಬಲವಾದೊಂದು ಮಗುವು ಇಂಥಾ ಸ್ಥಿತಿಯಲ್ಲಿ ಮುರಿದುಬಿಡಬಹುದು. ಆದರೆ ಭಾಗವತಕಾರನಾದರೋ ಇದಕ್ಕೆ ಬಹಳ ಬಣ್ಣವನ್ನು ಕಟ್ಟುವುದರಲ್ಲಿ ಸ್ವಲ್ಪವೂ ಹಿಂಜರಿದಿಲ್ಲ. ಮರಗಳೆರಡೂ ಕುಬೇರಪುತ್ರರು. ಶಾಪದಿಂದ ಮರವಾಗಿದ್ದರು. ಕೃಷ್ಣ ಸ್ಪರ್ಶದಿಂದ ಮುಕ್ತರಾಗಿ ಸ್ವಧಾಮಕ್ಕೆ ಹೋದರು. ಕೃಷ್ಣನನ್ನು ಕಟ್ಟುವಾಗ ಗೋಕುಲದಲ್ಲಿದ್ದಂಥಾ ಹಗ್ಗಗಳನ್ನೆಲ್ಲಾ ಒಟ್ಟುಗೂಡಿಸಿದರೂ ಕೂಡ ಎಳೆಯ ಮಗುವಿನ

ಸೊಂಟಕ್ಕೆ ಸಾಕಾಗಲಿಲ್ಲ. ಕೊನೆಗೆ ಕೃಷ್ಣನೇ ದಯಮಾಡಿ ಕಟ್ಟಿಸಿ ಕೊಂಡನು.

ವಿಷ್ಣುವಿಗೆ ದಾಮೋದರನೆಂದು ಹೆಸರುಂಟು. ಹೊರಗಣ ಇಂದ್ರಿಯ ಗಳ ನಿಗ್ರಹಕ್ಕೆ ದಮವೆನ್ನುವರು. ಉದ್ ಎಂದರೆ ಮೇಲೆ 'ಋ' ಎಂದರೆ ಗಮನ. ಆದ್ದರಿಂದ ಉದರ ಎಂದರೆ ಉತ್ಕೃಷ್ಟ ಗತಿ. ದಮದಿಂದ ಯಾವನು ಉಚ್ಚಸ್ಥಾನವನ್ನು ಹೊಂದುವನೋ ಅವನು ದಾಮೋದರ. ವೇದದಲ್ಲಿ ವಿಷ್ಣುವು ತಪಸ್ಸುಮಾಡಿ ವಿಷ್ಣುತ್ವವನ್ನು ಪಡೆದುಕೊಂಡನೆಂತಲೂ, ಅದಕ್ಕೆ ಮುಂಚೆ ಇಂದ್ರನಿಗೂ ಕನಿಷ್ಠನೆಂತಲೂ ಹೇಳಿದೆ. ಶಂಕರಾಚಾರ್ಯರು ದಾಮೋದರನೆಂಬ ಶಬ್ದಕ್ಕೆ ಇದೇ ಅರ್ಥವನ್ನು ಒಪ್ಪಿಕೊಂಡಿರುವರು. "ದಮಾದಿ ಸಾಧನೇನ ಉದರ ಉತ್ಕೃಷ್ಟಾಗತಿ ರ್ಯಾ ತಯಾ ಗಮ್ಯತ ಇತಿ ದಾಮೋದರಃ." ಮಹಾಭಾರತದಲ್ಲಿಯೂ "ದಮಾದ್ದಾಮೋದರಂ ವಿದುಃ" ಎಂದಿದೆ.

ಆದರೆ ದಾಮವೆಂಬ ಶಬ್ದಕ್ಕೆ ಹಸುವನ್ನು ಕಟ್ಟುವ ಹಗ್ಗವೆಂದೂ ಅರ್ಥವಾಗುತ್ತದೆ. ಯಾರ ಹೊಟ್ಟೆ ಹಸುವಿನ ಹಗ್ಗದಿಂದ ಕಟ್ಟಲ್ಪಟ್ಟಿತ್ತೋ ಅವನು ದಾಮೋದರನು. ಹಸುವಿನ ಹಗ್ಗದ ಮಾತನ್ನು ಎತ್ತುವುದಕ್ಕೆ ಮುಂಚೆ ದಾಮೋದರ ಶಬ್ದ ರೂಢಿಯಲ್ಲಿತ್ತು. ಈ ಹೆಸರುಗಳನ್ನು ತೆಗೆದು ಕೊಂಡು ಭಾಗವತಕಾರನು ಹಗ್ಗ ಕಟ್ಟಿದ ಕಥೆಯನ್ನು ಹುಟ್ಟಿಹಾಕಿರ ಬೇಕೆಂದು ತೋರುವುದಿಲ್ಲವೇ ?

ಇಷ್ಟರಲ್ಲಿಯೇ ನಂದಾದಿ ಗೊಲ್ಲರು ತಮ್ಮ ಮೊದಲಿನ ಆವಾಸಸ್ಥಾನ ವನ್ನು ತೊರೆದು ಬೃಂದಾವನಕ್ಕೆ ಹೊರಟರು. ಕೃಷ್ಣನಿಗೆ ಹಲವು ತೆರನಾದ ವಿಪತ್ತುಗಳು ಉಂಟಾದುವೆಂದು ಅವರು ವಿವೇಚಿಸಿ, ಆ ಸ್ಥಳವನ್ನು ಬಿಟ್ಟು ಬೃಂದಾವನಕ್ಕೆ ಹೋದರೆಂದು ಪುರಾಣದಲ್ಲಿ ಬರೆದಿದೆ. ಬೃಂದಾವನ ಬಹಳ ಒಳ್ಳೆಯ ಸೌಖ್ಯವಾದ ಪ್ರದೇಶ. ಇದಕ್ಕಾದರೂ ಆಗಿರಬಹುದು. ಹರಿವಂಶ ದಲ್ಲಿ ಈ ಸಮಯದಲ್ಲಿ ಗೊಲ್ಲರ ಪಾಳ್ಯದಲ್ಲಿ ತೋಳಗಳ ಭಯವುಂಟಾಗಿತ್ತು. ಆದುದರಿಂದ ಅವರು ಆ ಸ್ಥಳವನ್ನು ಪರಿತ್ಯಾಗ ಮಾಡಿದರೆಂದು ಹೇಳಿದೆ.

ಚತುರ್ಥ ಪರಿಚ್ಛೇದ

ಕೈಶೋರ ಲೀಲೆ

ಈ ಬೃಂದಾವನವನ್ನು ಕಾವ್ಯಪ್ರಪಂಚದಲ್ಲಿ ಅನುಪಮವಾದ ಸೃಷ್ಟನೆಯಿಂದ ಅಲಂಕರಿಸಿರುತ್ತಾರೆ. ಹಚ್ಚನೆಯ ಹೂಗಳಿಂದ ಬೆಳಗುತ್ತಿರುವ, ಮರಳುದಿಬ್ಬಗಳಿಂದ ಕೂಡಿದ, ಕಲನಾದಿನಿಯಾದ ಕಾಳಿಂದೀದಡದಲ್ಲಿ ಕೋಕಿಲೆ ನವಿಲುಗಳಿಂದ ದನಿಗಟ್ಟಿದ, ಕುಂಜಗಳಿಂದ ತುಂಬಿದ, ಗೋಪ ಬಾಲಕ ಸಮೂಹಗಳ ಕೊಂಬು ಕೊಳಲುಗಳ ಮಧುರನಾದದಿಂದ ಶಬ್ದಾಯಮಾನವಾದ, ಲೆಕ್ಕವಿಲ್ಲದ ಹೂಗಳ ಆಮೋದ ಸುವಾಸನೆಯಿಂದಲೂ, ವಿವಿಧಾಭರಣಗಳಿಂದ ಅಲಂಕರಿಸಲ್ಪಟ್ಟ ವಿಶಾಲವಾದ ನೀಳವಾದ ಲೋಚನಗಳುಳ್ಳ ಗೋಪಸ್ತ್ರೀಯರಿಂದಲೂ ಚೆನ್ನಾಗಿ ಶೋಭಿಸುತ್ತಿರುವ ಬೃಂದಾವನ ಸ್ಥಲಿಯನ್ನು ನೆನೆದುಕೊಂಡಮಟ್ಟಿಗೇನೇ ಹೃದಯವು ಉಬ್ಬಿ ಅರಳುವುದು. ಆದರೆ ಕಾವ್ಯರಸದ ರುಚಿಯನ್ನು ನೋಡಲು ನಮಗೆ ಕಾಲ ವಿಳಂಬವಾಗುವುದು. ನಾವು ಇನ್ನೂ ಭಾರವಾದ ತತ್ತ್ವವನ್ನು ಹುಡುಕುವುದರಲ್ಲಿ ಆಸಕ್ತರಾಗಿರುವೆವು.

ಬೃಂದಾವನಕ್ಕೆ ಬಂದಮೇಲೆ ಕೃಷ್ಣನು ಮೂರು ಜನ ಅಸುರರನ್ನು ಕೊಂದನೆಂದು ಭಾಗವತಕಾರನು ಹೇಳಿರುತ್ತಾನೆ: (೧) ವತ್ಸಾಸುರ, (೨) ಬಕಾಸುರ, (೩) ಅಘಾಸುರ. ಮೊದಲನೆಯವನು ಕರುವಿನ ಆಕಾರದವನು; ಎರಡನೆಯವನು ಹಕ್ಕಿಯ ರೂಪಿನವನು; ಮೂರನೆಯವನು ಹಾವಿನ ರೂಪಿನವನು. ಇವುಗಳು ಗೋಪಾಲರಿಗೆ ತೊಂದರೆಯನ್ನು ಕೊಡಲು ಶ್ರೀ ಕೃಷ್ಣನು ಅವನ್ನು ಕೊಲ್ಲುವುದು ವಿಚಿತ್ರವೇನೂ ಅಲ್ಲ. ಆದರೆ ಇವುಗಳಲ್ಲಿ ಒಂದರ ಮಾತೂ ಕೂಡ ವಿಷ್ಣುಪುರಾಣದಲ್ಲಿಯೇ ಆಗಲಿ, ಮಹಾಭಾರತದಲ್ಲಿಯೇ ಆಗಲಿ, ಹರಿವಂಶದಲ್ಲಿಯೇ ಆಗಲಿ ಸಿಕ್ಕುವುದಿಲ್ಲ. ಶುದ್ಧಾಂಗವಾಗಿಯೂ ಆಧಾರವಿಲ್ಲದವುಗಳೆಂದು ಈ ಮೂವರ ಕಥೆಗಳನ್ನೂ ನಾವು ಬಿಟ್ಟುಬಿಡಬೇಕಾದುದು ಅವಶ್ಯ.

ಈ ವತ್ಸಾಸುರ, ಬಕಾಸುರ, ಅಘಾಸುರ ಇವರುಗಳ ವಧೋಪಾಖ್ಯಾನಗಳಲ್ಲಿ ಹುಡುಕಿದರಂತೂ ಹಿಂದಿನಂಥ ತತ್ತ್ವಗಳು ಸಿಕ್ಕದೇ ಇಲ್ಲ.

ಬನಕ್ ಧಾತುವಿನಿಂದ ಬಕ, ಅಘ್ ಧಾತುವಿನಿಂದ ಅಘ ಎಂದಾಗಿವೆ. ವದ್ ಧಾತುವು ಪ್ರಕಾಶದಲ್ಲಿಯೂ, ಬುನಕ್ ಕೌಟಿಲ್ಯದಲ್ಲಿಯೂ, ಅಘ್ ಪದ ದಲ್ಲಿಯೂ ಉಪಯೋಗಿಸಲ್ಪಡುತ್ತವೆ. ಯಾರು ಎದುರಿಗೆ ಬಂದು ನಿಂದಿಸು ವರೋ ಅಂಥವರು ವತ್ಸ, ಕುಟಿಲ ಶತ್ರುಪಕ್ಷದ ಬಕವು, ಪಾಪಿಯಾದ ಹಾವು— ಈ ಮೂರು ಬಗೆಯ ಶತ್ರುಗಳನ್ನೂ ಕೃಷ್ಣನು ತನಗಿನ್ನೂ ವಯಸ್ಸು ಬರುವು ದಕ್ಕೆ ಮುಂಚೆಯೇ ಜಯಿಸಿದನು. ಯಜುರ್ವೇದದ ಮಾಧ್ಯಂದಿನೀ ಶಾಖೆಯ ಹನ್ನೊಂದನೆಯ ಅಧ್ಯಾಯದ(ಅಗ್ನಿ ಚಯನ ಮಂತ್ರ ಎಂಬತ್ತನೆಯ ಕಾಂಡಿಕೆ ಯಲ್ಲಿ ಈ ರೀತಿಯಾದ ಶತ್ರು ವಿಪಾತನ ಪ್ರಾರ್ಥನೆ ಯಿರುವುದು.*

ಎಲೇ ಅಗ್ನಿಯೇ! ಯಾರು ನಮ್ಮ ಅರಾತಿಗಳೋ, ಯಾರು ನಮ್ಮನ್ನು ದ್ವೇಷಿಸುವರೋ, ಯಾರು ನಿಂದಿಸುವರೋ, ಮತ್ತಾರು ನಮ್ಮನ್ನು ಕೊಲ್ಲಲುಳ್ಳ ವರೋ—ಈ ನಾಲ್ಕು ಬಗೆಯ ಪ್ರಕಾಶ ಶತ್ರುಗಳನ್ನೂ ಬೂದಿಮಾಡಿಬಿಡು.

ಈ ಮಂತ್ರದಲ್ಲಿ ವಿಶೇಷವಾಗಿ ಅರಾತಿ (ದ್ರವ್ಯ ಕೊಡುವಂತೆ ಹೇಳಿ ಕೊಡದೆ ವಂಚಿಸುವಂಥವರು)ಗಳ ನಾಶದ ಮಾತುಂಟು. ಭಾಗವತಕಾರನು ಈ ರೂಪಕವನ್ನು ರಚನೆಮಾಡುವ ಕಾಲದಲ್ಲಿ ಮೇಲೆ ಹೇಳಿದ ಮಂತ್ರವನ್ನು ಜ್ಞಾಪಕಕ್ಕೆ ತಂದುಕೊಂಡಂತೆ ತೋರುವುದು. ಅಥವಾ ಈ ರೂಪಕಕ್ಕೆ ಮೇಲೆ ಉದಹರಿಸಿದ ಮಂತ್ರದ ಆಧಾರವಿದೆ ಎಂದರೆ ಸಾಕಾಗಿದೆ.

ಇದಾದಮೇಲೆ ಭಾಗವತದಲ್ಲಿ—ಬ್ರಹ್ಮನು ಕೃಷ್ಣನನ್ನು ಪರೀಕ್ಷಿಸು ವುದಕ್ಕಾಗಿ ಬಂದು ಸಮಸ್ತ ಗೋಪಾಲಕರನ್ನೂ ದನಕರುಗಳನ್ನೂ ಮಾಯೆ ಯಿಂದ ಹರಣಮಾಡಿದನು. ಆಗ ಕೃಷ್ಣನು ಇನ್ನೊಂದು ಸೆಟ್ಟು (Set) ಗೋವುಗಳನ್ನೂ ಗೋಪಾಲಕರುಗಳನ್ನೂ ಸೃಷ್ಟಿಸಿ ವಿಹಾರ ಮಾಡತೊಡಗಿ ದನು. ಇದರ ತಾತ್ಪರ್ಯವು ಬ್ರಹ್ಮನೂ ಕೂಡ ಕೃಷ್ಣನ ಮಹಿಮೆಯನ್ನು ತಿಳಿಯಲು ಅಶಕ್ತನೆಂದು.

ಇನ್ನೊಂದು ದಿನ ಕೃಷ್ಣನು ಕಾಡುಬೇಗೆಯ ಬೆಂಕಿಯನ್ನೆಲ್ಲಾ ನುಂಗಿದನು. ಶೈವರಲ್ಲಿ ನೀಲಕಂಠನು ವಿಷಪಾನಮಾಡಿದ ವಾರ್ತೆಯುಂಟಷ್ಟೆ.

---

*ಸಾಮಾಶ್ರಮಿಯವರ ತರ್ಜುಮೆ.

ಇದಕ್ಕೆ ಉತ್ತರವಾಗಿ ವೈಷ್ಣವಶಿಖಾಮಣಿ ಕೃಷ್ಣನು ಬೆಂಕಿಯನ್ನೇ ನುಂಗಿದನೆಂದು ಬರೆದುಬಿಟ್ಟನು.

ಇನ್ನು ಪ್ರಖ್ಯಾತವಾದ ಕಾಲೀಯದಮನ ವಿಚಾರವನ್ನು ನೋಡೋಣ. ಈ ಪ್ರಸಂಗ ಲೇಶವೂ ಮಹಾಭಾರತದಲ್ಲಿಲ್ಲ. ಹರಿವಂಶ ಮತ್ತು ವಿಷ್ಣು ಪುರಾಣದಲ್ಲಿಯುಂಟು. ಭಾಗವತದಲ್ಲಿ ಇದು ವಿಶಿಷ್ಟರೂಪವಾಗಿ ಸಂಪ್ರಸಾರಿತವಾಗಿದೆ. ಈ ಉಪನ್ಯಾಸವು ಅನೈಸರ್ಗಿಕಗಳಿಂದ ತುಂಬಿದೆ. ಕಥೆ ಮಾತ್ರವೇ ಅಲ್ಲ, ಬರೀ ರೂಪಕವೇ ಅದರೂ ಅತಿ ಮನೋಹರವಾದುದು.

ಕಥೆಯೆಷ್ಟೆಂದರೆ—ಯಮುನಾನದಿಯ ಒಂದು ಮಡುವಿನಲ್ಲಿ ಕಾಲೀಯನೆಂಬ ಸರ್ಪವು ಸಪರಿವಾರವಾಗಿ ವಾಸಿಸುತ್ತಿತ್ತು. ಇದಕ್ಕೆ ಅನೇಕ ಹೆಡೆಗಳಿದ್ದುವು. ವಿಷ್ಣುಪುರಾಣ ರೀತ್ಯಾ ಮೂರು (ಮಧ್ಯದ ಹೆಡೆ ಎಂದಿರುವುದರಿಂದ) ಹೆಡೆಗಳೆಂದು ತೋರುವುದು. ಹರಿವಂಶದಲ್ಲಿ ಐದು ಹೆಡೆಗಳು. ಭಾಗವತದಲ್ಲಿಯಾದರೊ ಒಂದು ಸಾವಿರ! ಇದಕ್ಕೆ ಅನೇಕ ಹೆಂಡಿರು ಮಕ್ಕಳು ಬೇರೆ ಉಂಟು. ಇವರೆಲ್ಲರುಗಳ ವಿಷದಿಂದ ಆ ಮಡುವಿನ ನೀರು ವಿಷಮಯವಾಗಿ ಅದರ ಹತ್ತಿರ ಒಬ್ಬರೂ ನಿಲ್ಲದಂತೆ ಆಗಿತ್ತು. ಅನೇಕ ಗೊಲ್ಲ ಹುಡುಗರೂ ದನಕರುಗಳೂ ಆ ಮಡುವಿನ ನೀರನ್ನು ಕುಡಿದು ಪ್ರಾಣವನ್ನೇ ಕಳೆದುಕೊಂಡಿದ್ದರು. ಆ ವಿಷದ ಜ್ವಾಲೆಯಿಂದ ದಡದಲ್ಲಿ ಹುಲ್ಲು, ಬಳ್ಳಿ, ಗಿಡ ಮುಂತಾದುವೊಂದೂ ಬೆಳೆಯಲಾರದಿದ್ದುವು. ಹಕ್ಕಿಗಳೂ ಕೂಡ ಹಾರಿಕೊಂಡು ಈ ಮಡುವಿನಮೇಲೇನಾದರೂ ಬಂದರೆ ವಿಷಜ್ವಾಲೆಯಿಂದವು ಜರ್ಝರಿತವಾಗಿ ತಲೆತಿರುಗಿ ಬಿದ್ದು ಸಾಯುತ್ತಿದ್ದುವು. ಈ ಮಹಾಸರ್ಪವನ್ನು ದಮನಮಾಡಿ ಬೃಂದಾವನ ಜೀವಿಗಳನ್ನು ಕಾಪಾಡಬೇಕೆಂದು ಕೃಷ್ಣನ ಮನಸ್ಸಿಗೆ ಹತ್ತಿತ್ತು. ಅವನು ಹಾರಿ ಆ ಮಡುವಿನಲ್ಲಿ ಧುಮುಕಿದನು. ಕಾಲೀಯನು ಕೃಷ್ಣನನ್ನು ಆಕ್ರಮಿಸಲು ಕೃಷ್ಣನು ಅವನ ಹೆಡೆಗಳ ಮೇಲೆ ಹತ್ತಿ ಕೊಳಲನ್ನೂದುತ್ತಾ ಕುಣಿಯತೊಡಗಿದನು. ಭುಜಂಗನು ಈ ನೃತ್ಯದ ತುಳಿತವನ್ನು ತಡೆಯಲಾರದೆ ರಕ್ತವನ್ನು ಕಾರುತ್ತಾ ಸಾಯುವವನಾದನು. ಆಗ ಇವನ ಹೆಂಡಿರು ಕೃಷ್ಣನನ್ನು ಮನುಷ್ಯ ಭಾಷೆಯಲ್ಲಿ ಪ್ರಾರ್ಥಿಸಿದರು. ಭಾಗವತಕಾರನು ಇವರ ಮುಖದಲ್ಲಿ ಸ್ಥಾಪಿಸಿರುವ ಸ್ತುತಿಯನ್ನೋದಿ ನೋಡಿದರೆ ಭುಜಂಗಮಾಂಗನೆಯರು ದರ್ಶನಶಾಸ್ತ್ರದಲ್ಲಿ

ಒಳ್ಳೆಯ ಪಂಡಿತರಾಗಿದ್ದಿರಬೇಕು. ವಿಷ್ಣುಪುರಾಣದಲ್ಲಿ ಇವರ ಬಾಯಿಂದ ಬಂದಿರುವ ಸ್ತುತಿ ಬಹಳ ಮಧುರವಾದುದು. ಇದನ್ನೋದಿ ಮನುಷ್ಯ ಪತ್ನಿಯರು ವಿಷವನ್ನು ಕಾರುವವರೆಂದಾರಾದರೂ ತಿಳಿಯುವುದಾದರೆ ಆಗ ಬಹುದು. ಹಾವಿನ ಹೆಂಡಿರಂತೂ ಅಮೃತವನ್ನಂತೂ ಕರೆದರು. ಕೊನೆಗೆ ಕಾಲೀಯನೂ ಕೂಡ ಕೃಷ್ಣನನ್ನು ಸ್ತುತಿಸಲಾರಂಭಿಸಲು, ಶ್ರೀಕೃಷ್ಣನು ಸಂತುಷ್ಟನಾಗಿ ಅವನನ್ನು ಬಿಟ್ಟು, ಇನ್ನೀ ಮನೆಯನ್ನು ಪರಿತ್ಯಾಗಮಾಡಿ ಸಮುದ್ರಕ್ಕೆ ಹೋಗಿ ವಾಸಿಸುವಂತೆ ಅವನಿಗೆ ಅಪ್ಪಣೆಯನ್ನಿತ್ತನು. ಕಾಲೀಯನು ಸಪರಿವಾರವಾಗಿ ಪಲಾಯನಮಾಡಿದನು. ಯಮುನೆಯ ನೀರು ಚೊಕ್ಕಟವಾಯಿತು.

ಕಥೆಯೇನೋ ಇಷ್ಟಾಯಿತು. ಇದರೊಳಗೆ ರೂಪಕವೂ ಉಂಟು. ಕಾಳಿಂದಿಯು ಅಂಧಕಾರಮಯವಾದ ಘೋರನಾದಿನಿಯಾದ ಕಪ್ಪು ಹೊಳೆ. ಇದರೊಳಗೆ ಭಯಂಕರವಾದ ಸುಳಿಗಳುಂಟು. ನಾವೆಲ್ಲರೂ ದುಃಖ ಸಮಯ ಅಥವಾ ವಿಪತ್ಕಾಲವೆಂದು ಮನಸ್ಸಿನಲ್ಲಿ ಮಾಡಿಕೊಳ್ಳುವುದೇ ಕಪ್ಪು ಹೊಳೆಯ ಸುಳಿಗಳು.

ಬಹು ಭೀಷಣವಾದ ವಿಷಮಯವಾದ ಶತ್ರುಗಳೆಲ್ಲರೂ ಅಂಥ ಸ್ಥಳಗಳಲ್ಲಿ ಮರೆಯಾಗಿ ವಾಸಮಾಡುತ್ತಿರುವರು. ಹಾವಿನಂತೆ ಅವರ ವಾಸವೂ ಕೂಡ ಗುಟ್ಟಿನಲ್ಲಿಯೇ, ಹಾವಿನಂತೆಯೇ ಅವರ ನಡವಳಿಕೆಯೂಕೂಡ ಕುಟಿಲ. ಹಾವಿನಂತೆಯೇ ಅವರಲ್ಲಿ ಬಹು ಅಮೋಘವಾದ ವಿಷವುಂಟು. ಆಧಿಭೌತಿಕ, ಆಧ್ಯಾತ್ಮಿಕ ಮತ್ತು ಆಧಿದೈವಿಕವೆಂಬ ಈ ಮೂರು ವಿಧವಾದ ತಾಪಗಳೇ ಈ ಹಾವಿನ ಮೂರುತಲೆಗಳು ಮತ್ತು ನಮ್ಮ ಇಂದ್ರಿಯ ರತಿಯೇ ಸಕಲಾನರ್ಥಗಳಿಗೂ ಮೂಲವೆಂದು ತಿಳಿಯುವುದಾದರೆ ಪಂಚೇಂದ್ರಿಯ ಭೇದದಿಂದ ಈ ಹಾವಿಗೆ ಐದು ಹೆಡೆಗಳು. ಮತ್ತು ನಮ್ಮ ಅಮಂಗಳಕ್ಕೆ ಕಾರಣಗಳು ಹಲವೆಂದು ತಿಳಿದರೆ ಇದಕ್ಕೆ ಸಹಸ್ರಾರು ಹೆಡೆಗಳಾದುವು. ನಾವು ಘೋರವಾದ ವಿಪತ್ತಿನಲ್ಲಿ ಈ ಭುಜಂಗನ ಕೈಗೆ ಸಿಕ್ಕಿಕೊಂಡರೆ ಜಗದೀಶ್ವರನ ಪಾದಪದ್ಮ ವಿನಾ ಹೊರತು ನಮಗೆ ಉದ್ಧಾರಕ್ಕೆ ದಾರಿ ಬೇರೆ ಇಲ್ಲ. ಕೃಪಾಪರವಶನಾಗಲು ಅವನು ಈ ವಿಷಧರನನ್ನು ಕಾಲಿನಿಂದ ತುಳಿದು ತನ್ನ ಮನೋಹರ ಮೂರ್ತಿಯನ್ನು ತೋರಿ ಅಭಯದ ಕೊಳಲನಾದವನ್ನು

ಬಾಜಿಸುವನು. ಅದು ಕಿವಿಗೆ ಬಿದ್ದರೆ ಜೀವವು ಆಶೆಯಿಂದ ತುಂಬಿ ಸುಖದಲ್ಲಿ ಸಂಸಾರಯಾತ್ರೆಯನ್ನು ನಿರ್ವಾಹಮಾಡುವುದು. ಕರಾಳನಾದಿನಿಯಾದ ಕಾಲತರಂಗಿಣಿಯು ಪ್ರಸನ್ನ ಸಲಿಲೆಯಾಗುವಳು. ಈ ಕೃಷ್ಣ ಸಲಿಲ ಭೀಮ ನಾದಿನಿ ಕಾಲಸ್ರೋತಸ್ವತಿ ಆವರ್ತದ ಮಧ್ಯೆ ಅಮಂಗಳ ಭುಜಂಗಮದ ಮಸ್ತಕಾರೂಢವೂ ಮತ್ತು ಅಭಯವಂಶೀಧರ ಮೂರ್ತಿಯೂ ಪುರಾಣ ಕಾರನ ಅಪೂರ್ವವಾದ ಸೃಷ್ಟಿ! ಇದನ್ನು ಅಚ್ಚುಮಾಡಿ ಪೂಜಿಸುವವರನ್ನು ಪುತ್ಥಳೀಪೂಜೆ ಮಾಡುವವರೆಂದು ಪರಿಹಾಸಮಾಡುವುದು ಆರಿಂದಲಾದೀತು!

ಧೇನುಕಾಸುರ (ಕತ್ತೆ) ಮತ್ತು ಪ್ರಲಂಬಾಸುರನ ವಿಷಯವನ್ನು ಇಲ್ಲಿ ಹೇಳಲೊಲ್ಲೆವು. ಇವು ಬಲರಾಮನಿಂದಾದವು, ಕೃಷ್ಣನಿಂದಲ್ಲ. ವಸ್ತ್ರಹರಣ ವಿಚಾರವನ್ನು ಬೇರೇ ಪರಿಚ್ಛೇದಲ್ಲಿ ತಿಳಿಯಪಡಿಸುವೆವು. ಇಲ್ಲಿ ಗಿರಿಯಜ್ಞ ವೃತ್ತಾಂತವನ್ನು ಹೇಳಿ ಈ ಪರಿಚ್ಛೇದವನ್ನು ಮುಗಿಸುವೆವು.

ಬೃಂದಾವನದಲ್ಲಿ ಗೋವರ್ಧನವೆಂಬ ಗಿರಿಯೊಂದುಂಟು. ಈ ಬೆಟ್ಟ ಈಗಲೂ ಕಾಣುತ್ತಿದೆ. ಗೋಸಾಯಿಗಳು ಬೃಂದಾವನವನ್ನು ಬೇರೇ ಅದೊಂದೆಡೆಯಲ್ಲಿ ಸ್ಥಾಪಿಸಿರುತ್ತಾರೆ. ಗೋವರ್ಧನಗಿರಿ ಮತ್ತೊಂದೆಡೆ ಯಲ್ಲಿರುವುದು. ಪುರಾಣಾದಿಗಳಿಂದ ಈ ಬೆಟ್ಟವು ಬೃಂದಾವನದ ಹತ್ತಿರ ವಿತ್ತೆಂದು ತಿಳಿದುಬರುತ್ತೆ. ಈ ಬೆಟ್ಟವು ಈಗಿರುವ ರೀತಿಯನ್ನು ನೋಡಿದರೆ ಯಾವುದೋ ಕಾಲದಲ್ಲಿ ಇದು ಸ್ವಭಾವವಾದ ವಿಪ್ಲವಕ್ಕೆ* ಸಿಕ್ಕಿಬಿದ್ದು ಉದ್ಧರಿಸಿ ಇಟ್ಟಂತೆ ಕಾಣಬರುವುದು. ಸಹಸ್ರಾರು ವರ್ಷಗಳಿಂದ ಈ ಸಣ್ಣ ಬೆಟ್ಟ ಇದೇ ರೀತಿಯಲ್ಲೇ ಇದ್ದು, ಅದರ ಆಧಾರದ ಮೇಲೆ ಉಪನ್ಯಾಸ ವೊಂದನ್ನು ಕಟ್ಟಿರುತ್ತಾರೆ. ಕೃಷ್ಣನು ಈ ಬೆಟ್ಟವನ್ನು ಏಳು ದಿನಗಳು ಎತ್ತಿ ಹಿಡಿದು ಆಮೇಲೆ ಅಲ್ಲೇ ಇಟ್ಟುಬಿಟ್ಟನು.

ಉಪನ್ಯಾಸವೇನೆಂದರೆ—ವರ್ಷವರ್ಷದ ಕೊನೆಯಲ್ಲಿ ನಂದ ಮುಂತಾದ ಗೊಲ್ಲರು ಇಂದ್ರಯಜ್ಞವೊಂದನ್ನು ಮಾಡುವ ಪದ್ಧತಿಯಿತ್ತು. ಇದಕ್ಕಾಗಿ

*ಗಂಗಾ ನದಿಯ ಕಣಿವೆಯಲ್ಲಿ ಆಗಾಗ್ಗೆ ಇಂತಹ ವಿಪ್ಲವಗಳು ಆಗುವುದು ಸ್ವಭಾವವೆಂದು ಮೊನ್ನೆ ತಾನೇ ಪ್ರಕಟವಾದ ಸರ್ಕಾರೀ ಭೂವೇತ್ತರ (Geologists) ವರದಿಯಿಂದ ತಿಳಿಯುವುದು. ಈ ವರದಿ ಸಧ್ಯದಲ್ಲಿ ಆದ ಭೂಕಂಪದ ವಿಷಯವಾಗಿ ಹೊರಟಿದ್ದುದು (ಬೀಹಾರ್ ಭೂಕಂಪ).

ಬಲು ಸಡಗರಪಡುತ್ತಿರಲು ಶ್ರೀಕೃಷ್ಣನು ಇದೇನು ಸಡಗರವೆಂದು ಕೇಳಿದನು. ಇಂದ್ರನು ಮಳೆಯನ್ನು ಕೊಡತಕ್ಕವನು; ಮಳೆಯಿಂದ ಸಸ್ಯಗಳಾಗುವುವು; ಸಸ್ಯಗಳಿಂದಲೇ ನಾವೆಲ್ಲರೂ ಜೀವಿಸುವೆವು; ದನಕರುಗಳೂ ಹಾಲುಕರೆಯುವುವು; ಆದುದರಿಂದ ಇಂದ್ರನನ್ನು ಪೂಜಿಸುವುದು ನಮ್ಮೆಲ್ಲರ ಕರ್ತವ್ಯವೆಂದು ನಂದನು ಹೇಳಿದನು. ಇದಕ್ಕೆ ಕೃಷ್ಣನು—"ನಾವು ಬೇಸಾಯಗಾರರಲ್ಲ, ದನಕರುಗಳೇ ನಮ್ಮ ಆಧಾರವು. ಆದುದರಿಂದ ನಮ್ಮ ಕರ್ತವ್ಯವು ಹಸುಗಳನ್ನು ಪೂಜಿಸುವುದು ಎಂದರೆ ಅವುಗಳಿಗೆ ಒಳ್ಳೇ ತಿಂಡಿಯನ್ನು ತಿನ್ನಿಸಿ ನಮಗಾಶ್ರಯವಾದ ಈ ಗೋವರ್ಧನಗಿರಿಯನ್ನು ಪೂಜಿಸೋಣ. ಬ್ರಾಹ್ಮಣರಿಗೂ ಹಸಿದವರಿಗೂ ಒಳ್ಳೆಯ ಭೋಜನವನ್ನು ಮಾಡಿಸೋಣ" ಎಂದು ಹೇಳಿದನು. ಇದರಂತೆಯೇ ನಡೆಯಿತು. ಬಡಬಗ್ಗರೂ ಹಸಿದವರೂ ಬ್ರಾಹ್ಮಣರೂ (ಇವರು ದರಿದ್ರರಲ್ಲಿಯೇ ಎಣಿಸಲ್ಪಡುತ್ತಿದ್ದರು) ಒಳ್ಳೆಯ ಊಟವನ್ನುಂಡು ತೇಗಿದರು. ದನಕರುಗಳೂ ಒಳ್ಳೆಯ ತೀನಿಯನ್ನು ಮೆದ್ದು ಗುಟ್ರೆಯನ್ನು ಹಾಕಿದುವು. ಗೋವರ್ಧನಗಿರಿಯೂ ಮನುಷ್ಯರೂಪವನ್ನು ಧರಿಸಿ ರಾಶಿ ರಾಶಿ ಅನ್ನವನ್ನೂ ವ್ಯಂಜನಗಳನ್ನೂ ಉಂಡಿತು. ಕೃಷ್ಣನು ತಾನೇ ಬೆಟ್ಟದ ವೇಷವನ್ನು ಹಾಕಿಕೊಂಡು ತಿಂಡಿತೀರ್ಥಗಳನ್ನೆಲ್ಲ ಮೆದ್ದನೆಂದು ಹೇಳಿದ್ದಾರೆ.

ಹೀಗೆ ಇಂದ್ರಯಜ್ಞವು ನಿಂತುಹೋಯಿತು. ನಮ್ಮ ಪುರಾಣೇತಿಹಾಸಗಳಲ್ಲಿ ಹೊಗಳಿರುವ ದೇವತೆಗಳಿಗೂ ಬ್ರಾಹ್ಮಣರಿಗೂ ಇದರಿಂದ ಬಹು ಕೋಪವುಂಟಾಗಿರಬೇಕೆಂದು ನಮ್ಮ ಪಾಠಕರೆಲ್ಲರೂ ಸುಲಭವಾಗಿ ತಿಳಿದುಕೊಳ್ಳಬಹುದು. ಇದರಿಂದ ಇಂದ್ರನಿಗೂ ಬಹಳ ಕೋಪವುಂಟಾಗಿ ಮಳೆಗರೆದು ಬೃಂದಾವನವನ್ನು ತೇಲಿಸಿಬಿಡುವಂತೆ ಮೇಘಗಳಿಗೆ ಅಪ್ಪಣೆ ಮಾಡಿದನು. ಮೋಡಗಳು ಹಾಗೆಯೇ ಮಾಡಿದುವು. ಬೃಂದಾವನವು ತೇಲಿಹೋಗುವಂತಾಯಿತು. ದನಕರುಗಳ ಮತ್ತು ಗೊಲ್ಲರ ದುಃಖಕ್ಕೆ ಪಾರವೇ ಇಲ್ಲದಂತಾಯಿತು. ಆಗ ಶ್ರೀಕೃಷ್ಣನು ಗೋವರ್ಧನಗಿರಿಯನ್ನು ಕಿತ್ತು ಬೃಂದಾವನದ ಮೇಲುಗಡೆಗೆ ಎತ್ತಿಹಿಡಿದನು. ಏಳು ದಿನಗಳ ಪರಿಯಂತ ಕಲ್ಲುಮಳೆಗರೆಯಿತು. ಆ ಏಳು ದಿನಗಳೂ ಕೃಷ್ಣನು ಪರ್ವತವನ್ನು ಒಂದೇ ಕೈಯಿಂದೆತ್ತಿ ಹಿಡಿದಿದ್ದನು. ಬೃಂದಾವನವು ಉಳಿದು

ಕೊಂಡಿತು. ಇಂದ್ರನು ತನಗೆ ಸೋಲಾಯಿತೆಂಬುದನ್ನೊಪ್ಪಿಕೊಂಡು ಕೃಷ್ಣ ನೊಡನೆ ಸಂಬಂಧವನ್ನೂ ಸಂಧಿಯನ್ನೂ ಮಾಡಿಕೊಂಡನು.

ಮಹಾಭಾರತದೊಳಗಿನ ಶಿಶುಪಾಲ ವಾಕ್ಯದಲ್ಲಿ ಈ ಗಿರಿಯಜ್ಞದ ವಿಷಯವಾಗಿ ಕೊಂಚ ಪ್ರಸಂಗವುಂಟು. " ಹುತ್ತದಂತಿರುವುದೊಂದು ಗುಡ್ಡ ವನ್ನು ಎತ್ತಿ ಹಿಡಿದುದೊಂದು ವಿಚಿತ್ರವೋ ! " ಎಂದು ಶಿಶುಪಾಲನು ಕೇಳಿರು ವನು. ಕೃಷ್ಣನ ಅತ್ಯಧಿಕವಾದ ಊಟದ ವಿಚಾರವಾಗಿಯೂ ಕೊಂಚ ಪರಿಹಾಸವುಂಟು--ಕೃಷ್ಣನು ಈಗಲೂ ಗೋವರ್ಧನನಾಗಿರುವನು, ಅದು ಹುತ್ತವಲ್ಲ ಪರ್ವತವೇ ಸರಿ ಎಂದು ಶಿಶುಪಾಲನು ನಕ್ಕನು. ಆದರೇನು, ಈ ಪರ್ವತವನ್ನು ಒಂದೇ ಒಂದು ಕೈಯಲ್ಲಿ ಎತ್ತಿ ಹಿಡಿದಿದ್ದನೆ ? ಕೃಷ್ಣನು ಈಶ್ವರಾವತಾರನು ಎನ್ನುವವರು ಈಶ್ವರನಿಗೆ ಅಸಾಧ್ಯವಾದುದಾವುದೆಂದು ಕೇಳಬಹುದು. ಒಳ್ಳೆಯದು, ನಾವೂ ಒಪ್ಪಿದೆವು. ಆದರೆ ಈಶ್ವರಾವತಾರಿಗೆ ಪರ್ವತಧಾರಣೆಯ ಪ್ರಯೋಜನವೇನು ? ಯಾರ ಇಷ್ಟವನ್ನು ಮೀರಿ ಮೋಡವು ಒಂದು ತೊಟ್ಟು ನೀರನ್ನೂ ಕರೆಯಲಾರದೋ ಅಂಥವನು ಬೆಟ್ಟ ವನ್ನೆತ್ತಿ ಹಿಡಿದು ಬೃಂದಾವನವನ್ನು ಕಾಪಾಡಿದುದರಿಂದ ಅವನಿಗಾದ ಪ್ರಯೋಜನವೇನು ? ಯಾರ ಇಚ್ಛಾಮಾತ್ರದಿಂದಲೇ ಮೋಡಗಳು ಚದರಿ ಮಳೆಯು ಹೋಗಿ ಮುಗಿಲು ಚೊಕ್ಕಟವಾಗಿ ಬಿಡುವುದೋ, ಅಂಥವನು ಬೆಟ್ಟವನ್ನೆತ್ತಿ ಹಿಡಿದು ಒಂದೇ ಸ್ಥಳದಲ್ಲಿ ಏಳು ದಿನಗಳ ಪರಿಯಂತ ಅಲು ಗಾಡದೆ ನಿಲ್ಲುವುದೇಕೆ ?

ಇದು ಭಗವಂತನ ಲೀಲೆಯೆಂದು ಕೆಲವರು ಹೇಳಬಹುದು. ಇಚ್ಛಾ ಮಯನ ಇಚ್ಛೆಯ ಕಾರಣವನ್ನು ನಮ್ಮ ಕ್ಷುದ್ರಬುದ್ಧಿಯಿಂದ ತಿಳಿಯುವುದು ಹೇಗೆ ? ಇದು ಸರಿಯೆ ! ಆದರೆ ಇವನು ಭಗವಂತನೆಂದು ಮೊದಲು ತಿಳಿದು ಆಮೇಲೆ ಗಿರಿಧಾರಣವು ಇವನ ಲೀಲೆಯ ವಿಸ್ತಾರವೆಂದು ಸ್ವೀಕರಿಸ ಬೇಕಲ್ಲವೆ ! ಆದರೆ ಮೊಟ್ಟಮೊದಲು ಇವನು ಭಗವಂತನೆಂದು ತಿಳಿಯುವ ಬಗೆ ಹೇಗೆ ? ಇವನ ಕಾರ್ಯಗಳನ್ನು ನೋಡಿತಾನೆ ! ಯಾವ ಕಾರ್ಯಗಳ ಅಭಿಪ್ರಾಯವಾಗಲಿ, ಸುಸಂಗತಿಯಾಗಲಿ ತಿಳಿಯಲು ಆಗುವುದಿಲ್ಲವೋ ಅವುಗಳ ಕರ್ತನು ಈಶ್ವರನೆಂದು ಸಿದ್ಧಾಂತ ಮಾಡುವುದಕ್ಕಾದೀತೆ ! ತಿಳಿಯದೆ ಗೊತ್ತುಗುರಿ ಯಾವುದನ್ನಾದರೂ ಮಾಡುವುದು ಹೇಗೆ ! ಹೀಗಿಲ್ಲವಾದರೆ

ನಾವು ಮೊದಲು ಗೊತ್ತುಮಾಡಿಕೊಂಡಿರುವ ನಿಯಮವನ್ನನುಸರಿಸಿ ಅನೈಸರ್ಗಿಕ ಪರಿತ್ಯಾಗಪೂರ್ವಕವಾಗಿ ಇದನ್ನು ಬರೀ ಉಪನ್ಯಾಸವೆಂದೊತ್ತ ಲಿಸಿಬಿಡಬೇಕಾದುದೇ ಸರಿ. ಹಾಗಾದರೆ ಇದರಲ್ಲಿ ಇಷ್ಟರ ಮಟ್ಟಿನ ಸತ್ಯವಿರ ಬಹುದು. ಕೃಷ್ಣನು ಗೊಲ್ಲರನ್ನು ಇಂದ್ರಯಜ್ಞದಿಂದ ತಪ್ಪಿಸಿ ಗಿರಿಯಜ್ಞವನ್ನು ಮಾಡುವಂತೆ ಮಾಡಿರಬಹುದು. ಇದರ ಮೇಲೆ ಮಿಕ್ಕ ಅನೈಸರ್ಗಿಕಗಳಾದ ಗೋವರ್ಧನವನ್ನು ಕಿತ್ತದ್ದು ಎತ್ತಿದ್ದು ಮತ್ತೆ ಹೂಡಿದ್ದು ಎಂಬಿವನ್ನು ಹುಟ್ಟಿಹಾಕಿರುತ್ತಾರೆ.

ಈ ಕೆಲಸದಲ್ಲಿ ಒಂದು ಗುಟ್ಟಾದ ಆಶಯವೂ ಇರುವಂತಿದೆ. ನನಗೆ ತೋರಿದಂತೆಯೇ ಇತರರಿಗೂ ತಿಳಿಸುತಲಿದೇನೆ.

ಈ ಜಗತ್ತಿಗೆ ಈಶ್ವರನೊಬ್ಬನೇ. ಇವನಲ್ಲದೆ ಬೇರೆ ದೇವರಾರೂ ಇಲ್ಲ. ಇಂದ್ರನೆಂಬ ದೇವರಾರೂ ಇಲ್ಲ. ಇಂದ್ (ಮಳೆಗರೆ) ಧಾತುವಿಗೆ ರಕ್ ಪ್ರತ್ಯಯವನ್ನು ಹತ್ತಿಸಿದರೆ, ಇಂದ್ರನೆಂಬ ಶಬ್ದವುಂಟಾಗುವುದು. ಆದುದ ರಿಂದ ಈ ಪದಕ್ಕೆ ಮಳೆಗರೆವವನು ಎಂದರ್ಥವಾಯಿತು. ಮಳೆಗರೆವವನಾರು? ಸರ್ವಕರ್ತನೂ ಸರ್ವವಿಧಾತನೂ ಆದವನೇ. ಮಳೆಗೋಸ್ಕರಲೇ ಒಬ್ಬ ಸೃಷ್ಟಿಕರ್ತನನ್ನು ಬೇರೆಯಾಗಿ ಕಲ್ಪಿಸಲಾಗದು. ಆದರೆ ಇಂದ್ರನಿಗಾಗಿ ಯಜ್ಞವೂ, ಸಾಧಾರಣ ಯಜ್ಞದಲ್ಲಿ ಇಂದ್ರನಿಗೆ ಭಾಗವೂ ರೂಢಿಯಾಗಿ ಯೇನೋ ಇತ್ತು. ಈ ರೀತಿಯಾದ ಇಂದ್ರಪೂಜೆಗೂ ಒಂದರ್ಥವುಂಟು. ಈಶ್ವರನು ಅನಂತ ಪ್ರಕೃತಿ, ಅವನ ಗುಣಗಳೆಲ್ಲವೂ ಪಾರವಿಲ್ಲದವು; ಕಾರ್ಯಗಳೂ ಅನಂತ. ಶಕ್ತಿಗಳನ್ನೂ ಗಣನೆಮಾಡುವುದಕ್ಕಾಗದು. ಇಂತಹ ಅನಂತನ ಉಪಾಸನೆಯನ್ನು ಮಾಡುವುದೆಂತು? ಅನಂತನನ್ನು ಧ್ಯಾನಮಾಡುವುದಕ್ಕಾದೀತೆ? ಯಾರಿಂದ ಹೀಗೆ ಮಾಡುವುದಕ್ಕಾಗುವು ದಿಲ್ಲವೋ ಅವರು ಅವನ ಹಲವು ಶಕ್ತಿಗಳನ್ನು ವಿಂಗಡಿಸಿ ಬೇರೆಬೇರೆ ಯಾಗಿ ಪೂಜೆಮಾಡುವರು. ಈ ಜಡ ಜಗತ್ತಿನಲ್ಲಿ ಈ ಬಗೆಯ ಶಕ್ತಿಗಳು ಬಗೆ ಬಗೆಯಾಗಿ ಪ್ರಜ್ವಲಿಸುತ್ತಲಿವೆ. ಸಮಸ್ತ ಜಡಪದಾರ್ಥಗಳಲ್ಲಿಯೂ ಈ ಶಕ್ತಿಯ ಪರಿಚಯ ಸಿಕ್ಕುವುದು. ಈ ಪದಾರ್ಥಗಳ ಸಹಾಯದಿಂದ ಅನಂತನ ಧ್ಯಾನವೂ ಸುಸಾಧ್ಯವಾಗುವುದು. ಇದಕ್ಕಾಗಿಯೇ ಪ್ರಾಚೀ ನಾರ್ಯರು ಅವನ ಜಗತ್ಪ್ರಸವಿತೃತ್ವವನ್ನು ಸೂರ್ಯನಲ್ಲಿಯೂ, ಸರ್ವಾವ

ರಣತೆಯನ್ನು ವರುಣನಲ್ಲಿಯೂ, ಸರ್ವತೇಜಸ್ಸಿಗೂ ಆಧಾರಭೂತವಾಗಿರುವಿಕೆಯನ್ನು ಅಗ್ನಿಯಲ್ಲಿಯೂ, ಜಗತ್ಪ್ರಾಣತೆಯನ್ನು ವಾಯುವಿನಲ್ಲಿಯೂ—ಹೀಗೆ ಇತರ ಜಡವಸ್ತುಗಳಲ್ಲಿ ಇತರವಾದ ಅವನ ಮಹಾಶಕ್ತಿಗಳನ್ನು ನೆನೆದು ಅವನನ್ನು ಈ ಮೂಲಕ ಆರಾಧಿಸುತ್ತಿದ್ದರು. *ಇಂದ್ರನಲ್ಲಿ ಈ ರೀತಿಯಾಗಿ ದೇವರ ಮಳೆಯನ್ನು ಕರೆಯುವ ಶಕ್ತಿಯನ್ನು ಪೂಜಿಸುತ್ತಿದ್ದರು. ಬರುಬರುತ್ತ ಜನರು ಪೂಜೆಯ ಮಾರ್ಗವನ್ನು ಮರೆತುಬಿಟ್ಟರೂ ಪೂಜೆಯ ಆಕಾರವು ಮಾತ್ರ ಬಲವತ್ತರವಾಗುತ್ತ ಬಂತು. ಕಾಲ ಕಾಲಕ್ಕೂ ಹೀಗೆಯೇ ಆಗುವುದುಂಟು; ಬ್ರಾಹ್ಮಣರ ತ್ರಿಕಾಲ ಸಂಧ್ಯಾವಂದನೆಯ ವಿಷಯವೂ ಹೀಗೆಯೇ ಆಗಿರುವುದು. ಭಗವದ್ಗೀತೆಯಲ್ಲಿಯೂ ಮಹಾಭಾರತದ ಇತರ ಕಡೆಗಳಲ್ಲಿಯೂ ಕೃಷ್ಣನು ಧರ್ಮದ ಈ ಮೃತದೇಹಕ್ಕೆ ಸಂಸ್ಕಾರವನ್ನು ಮಾಡಿ ಇದಕ್ಕೆ ಪ್ರತಿಯಾಗಿ ಅತ್ಯಂತ ಉಚ್ಚವಾದ ಈಶ್ವರೋಪಾಸನೆಯಲ್ಲಿ ಜನಗಳನ್ನು ಕಟ್ಟುಮಾಡಲು ಯತ್ನಶೀಲನಾಗಿರುವುದು ಕಂಡುಬರುವುದು. ಪರಿಣತ ವಯಸ್ಸಿನಲ್ಲಿ ಪ್ರಚಾರಮಾಡಲು ತೊಡಗಿದುದರ ಪ್ರಯತ್ನಕ್ಕೆ ಈ ಗೋವರ್ಧನ ಯಜ್ಞವು ಮೊಟ್ಟಮೊದಲಿನ ಉದ್ಯಮ. ಜಗದೀಶ್ವರನು ಸರ್ವಭೂತಗಳಲ್ಲಿಯೂ ಇರುವನು; ಮೋಡಗಳಲ್ಲಿ ಇವನಿರುವುದು ಹೇಗೋ ಹಾಗೆಯೇ ಪರ್ವತದಲ್ಲಿಯೂ ದನಕರುಗಳಲ್ಲಿಯೂ ಇರುವನು. ಮೋಡದ ಅಥವಾ ಮುಗಿಲಿನ ಪೂಜೆ ಮಾಡಿದರೆ ಹೇಗೆ ಅವನ ಪೂಜೆಯಾಗುವುದೋ, ಹಾಗೆಯೇ ಬೆಟ್ಟದ ಮತ್ತು ದನಕರುಗಳ ಪೂಜೆಯೂ ಅವನ ಪೂಜೆಯೇ ಆಗುವುದು. ಇದರಮೇಲೆ ಮುಗಿಲು ಮುಂತಾದ ಜಡವಸ್ತುಗಳ ಪೂಜೆಗಿಂತ ಬಡಬಗ್ಗರಿಗೂ ದನಕರುಗಳಿಗೂ ಹರ್ಷವನ್ನುಂಟುಮಾಡುವುದೇ ಉತ್ತಮ ಧರ್ಮ.

---

* ನಾನು ಪ್ರಚಾರವೆಂಬ ಪತ್ರಿಕೆಯಲ್ಲಿ ಈ ಮಾತನ್ನು ಮೊದಲು ಹೊರಪಡಿಸಿದಾಗ ಹಲವರು ಹಲವು ಪರಿಯಿಂದ ಹಲುಬಿ ನಾನು ಹೊಸದಾಗಿಯೇ ಒಂದು ಮತವನ್ನೇರ್ಪಡಿಸುತ್ತಿರುವೆನೆಂದು ದೂರಿದರು. ಇದು ನನ್ನ ಮಾತಲ್ಲ, ಸ್ವಯಂ ನಿರುಕ್ತಕಾರ ಯಾಸ್ಕನ ಮತವೆಂಬುದನ್ನು ಅವರರಿಯರು. ಯಾಸ್ಕನ ವಾಕ್ಯವನ್ನು ಇಲ್ಲಿ ಎತ್ತಿರುವೆನು.

ಮಾಹಾತ್ಮ್ಯಾದ್ದೇವತಾಯಾ ಏಕ ಆತ್ಮಾ ಬಹುಧಾ ಸ್ತೂಯತೇ । ಏಕಸ್ಯಾತ್ಮನೋಽನ್ಯೇ ದೇವಾಃ ಪ್ರತ್ಯಂಗಾನಿ ಭವಂತಿ ॥

ಆತ್ಮಾ ಏವ ಏಷಾಂ ರಥೋ ಭವತಿ ಆತ್ಮಾ ಅಶ್ವಾಃ ಆತ್ಮಾ ಆಯುಧಂ ಆತ್ಮಾ ಇಷವಃ ಆತ್ಮಾ ಸರ್ವದೇವಸ್ಯ ॥

ಗಿರಿಯಜ್ಞದ ತಾತ್ಪರ್ಯ ಹೀಗೆಯೇ ಇರಬೇಕೆಂದು ಕಂಡು ಬರುವುದು.

ಪಂಚಮ ಪರಿಚ್ಛೇದ

ವ್ರಜಗೋಪೀ—ವಿಷ್ಣುಪುರಾಣ

ಕೃಷ್ಣದ್ವೇಷಿಗಳ ಬಳಿಯಲ್ಲಿ ಕೃಷ್ಣ ಚರಿತ್ರೆಯೊಳಗಿನ ಅಸಲು ಕಳಂಕವೂ ಕೃಷ್ಣೋಪಾಸಕರ ಹತ್ತಿರ ಕೃಷ್ಣಭಕ್ತಿಯ ಕೇಂದ್ರಸ್ವರೂಪವೂ ಆದ ಈ ವ್ರಜಗೋಪೀ ತತ್ತ್ವದಲ್ಲಿ ನಾವೀಗಿಳಿದಿರುವೆವು. ಕೃಷ್ಣನೊಡನೆ ವ್ರಜ ಗೋಪೀಗಳ ಸಂಬಂಧದ ವಿಷಯವನ್ನು ನಿರೂಪಿಸುತ್ತಿರುವೆವು. ಕೃಷ್ಣ ಚರಿತ್ರೆಯ ಸಮಾಲೋಚನೆಯಲ್ಲಿ ಈ ವಿಷಯವು ಬಹಳ ಗುರುತರವಾದುದು. ಆದುದರಿಂದ ನಾವು ಈ ವಿಷಯವನ್ನು ಹೆಚ್ಚಾಗಿ ವಿವರಿಸಿ ಹೇಳಬೇಕು.

ಮಹಾಭಾರತದಲ್ಲಿ ಗೊಲ್ಲ ಗೋಪಿಗಳ ವಿಷಯವೇನೇನೋ ಇಲ್ಲ. ಸಭಾಪರ್ವದಲ್ಲಿನ "ಶಿಶುಪಾಲ ವಧ" ಪರ್ವಾಧ್ಯಾಯದಲ್ಲಿ ಶಿಶುಪಾಲನಿಂದಾದ ವಿಸ್ತಾರವಾದ ಕೃಷ್ಣನ ನಿಂದೆಯೂ ಇದೆ. ವಜ್ರಗೋಪೀಗಳಿಂದುಂಟಾದ ಕೃಷ್ಣನ ಕಳಂಕವು ಮಹಾಭಾರತವಾದಾಗ ಇದ್ದಿದ್ದೇ ಆದರೆ, ಶಿಶುಪಾಲನೇ ಆಗಲಿ ಅಥವಾ ಶಿಶುಪಾಲ ವಧೆಯ ವೃತ್ತಾಂತವನ್ನು ಬರೆದವನೇ ಆಗಲಿ ಕೃಷ್ಣನಿಂದೆಯ ಕಾಲದಲ್ಲಿ ಇದನ್ನು ಖಂಡಿತವಾಗಿಯೂ ಬಿಡುತ್ತಿರಲಿಲ್ಲ. ಆದುದರಿಂದ ಆದಿ ಮಹಾಭಾರತದ ಪ್ರಣಯನ ಕಾಲದಲ್ಲಿ ಈ ಮಾತೇ ಬಳಕೆಯಾಗಿರಲಿಲ್ಲ. ಈಚೆಗೆ ಈ ಮಾತು ಕಲ್ಪಿತವಾಗಿರಬೇಕೆಂಬುದು ನಿಶ್ಚಯವಾಗುವುದು.

ಮಹಾಭಾರತದಲ್ಲಿ ಇದೇ ಸಭಾಪರ್ವದಲ್ಲಿ ದ್ರೌಪದೀ ವಸ್ತ್ರಹರಣ ಕಾಲದಲ್ಲಿ ದ್ರೌಪದಿಯಿಂದಾದ ಕೃಷ್ಣಸ್ತೋತ್ರದಲ್ಲಿ 'ಗೋಪೀಜನಪ್ರಿಯ' ಎಂಬ ಮಾತು ಸಿಕ್ಕುವುದು. ಹೇಗೇಂದರೆ—

ಆಕೃಷ್ಯಮಾಣೇ ವಸನೇ ದ್ರೌಪದ್ಯಾ ಚಿಂತಿತೋ ಹರಿಃ ।
ಗೋವಿಂದ ದ್ವಾರಕಾವಾಸಿನ್ ಕೃಷ್ಣ ಗೋಪೀಜನಪ್ರಿಯ ॥

ಬೃಂದಾವನದಲ್ಲಿ ಗೋಪಿಗಳು ವಾಸಮಾಡುತ್ತಿದ್ದರು. ಗೊಲ್ಲನು ಇರುವೆಡೆಯಲ್ಲಿಯೇ ಗೊಲ್ಲತಿಯೂ ಇರುವರು. ಕೃಷ್ಣನು ಅತಿಶಯ ಸುಂದರನೂ, ಮಾಧುರ್ಯಮಯನೂ ಮತ್ತು ಆಟಪಾಟಗಳಲ್ಲಿ ಬಹಳ ಅಭಿರುಚಿಯುಳ್ಳ ಬಾಲಕನೂ ಆಗಿದ್ದನು. ಆದುದರಿಂದ ಇವನು ಗೊಲ್ಲ ಗೊಲ್ಲತಿಯರೆಲ್ಲರ ಪ್ರೀತಿಗೂ ಪಾತ್ರನಾಗಿದ್ದನು. ಹುಡುಗಿ, ಯುವತಿ, ಮುದುಕಿ ಮುಂತಾದ ಸರ್ವರಿಗೂ ಶ್ರೀಕೃಷ್ಣನು ಬೇಕಾದವನಾಗಿದ್ದನೆಂದು ಹರಿವಂಶದಲ್ಲಿಯೇ ಹೇಳಿದೆ: ಯಮಳಾರ್ಜುನ ಮೊದಲಾದ ಉತ್ಪಾತ ಕಾಲಗಳಲ್ಲಿ "ಕೃಷ್ಣನು ಸತ್ತುಹೋದನೇನೋ ಎಂದು ಬೆದರಿ ಗೊಲ್ಲತಿಯರೆಲ್ಲರೂ ಅಳುತ್ತಿದ್ದರು" ಎಂದು ಬರೆದಿರುತ್ತಾರೆ. ಆದುದರಿಂದ ಈ "ಗೋಪಿಜನಪ್ರಿಯ" ಎಂಬ ಶಬ್ದದಿಂದ ಸುಂದರ ಶಿಶುವಿನಮೇಲೆ ಸ್ತ್ರೀಜನ ಸುಲಭವಾದ ಸ್ನೇಹ ವಿನಾ ಮತ್ತೆ ಬೇರೆ ಏನೂ ತಿಳಿಯಲಾಗದು.

ಈಗ ನಾವು ಮೊದಲು ಗೊತ್ತುಮಾಡಿಕೊಂಡ ನಿಯಮಾನುಸಾರವಾಗಿ ಮಹಾಭಾರತವಾದಮೇಲೆ ವಿಷ್ಣುಪುರಾಣವನ್ನು ನೋಡತಕ್ಕದ್ದು. ಮೊದಲು ನೋಡಿರುವಂತೆಯೇ ಈ ವಿಷಯದಲ್ಲಿಯೂ ವಿಷ್ಣುಪುರಾಣ, ಹರಿವಂಶ ಮತ್ತು ಭಾಗವತ ಪುರಾಣಗಳಲ್ಲಿ ಕ್ರಮವಾಗಿ ಉಪನ್ಯಾಸ ಶ್ರೀಯು ಹೆಚ್ಚುತ್ತ ಬಂದಿರುವುದು. ಈ ವಜ್ರಗೋಪೀ ತತ್ತ್ವವು ಮಹಾಭಾರತದಲ್ಲಿಲ್ಲ. ವಿಷ್ಣುಪುರಾಣದಲ್ಲಿ ಪವಿತ್ರಭಾವದಲ್ಲಿರುವುದು. ಹರಿವಂಶದಲ್ಲಿ ಮೊದಲು ಕೊಂಚ ವಿಲಾಸತೆಯಂಕುರಿಸಿರುವುದು. ಆಮೇಲೆ ಭಾಗವತದಲ್ಲಿ ಆದಿರಸವು ಬೇಕಾದಷ್ಟು ವಿಸ್ತಾರವಾಗಿರುವುದು. ಕೊನೆಗೆ ಬ್ರಹ್ಮವೈವರ್ತ ಪುರಾಣದಲ್ಲಿ ಇದರ ಹೊಳೆ ಹರಿದಿರುವುದು.

ಇದನ್ನೆಲ್ಲಾ ವಿಸ್ತಾರವಾಗಿ ತಿಳಿಸುವುದಕ್ಕಾಗಿ ವಿಷ್ಣುಪುರಾಣದಲ್ಲಿ ಗೋಪಿಗಳ ವಿಷಯವು ಎಷ್ಟು ಸ್ವಲ್ಪವಾಗಿದೆಯೆಂಬುದನ್ನು ತೋರಿಸಲು ಆ ಭಾಗವನ್ನೇ ಇಲ್ಲಿ ಎತ್ತಿ ಬರೆದಿರುವೆನು. ಇವುಗಳಲ್ಲಿನ ಒಂದೆರಡು ಮಾತುಗಳಿಗೆ ಎರಡು ಬಗೆಯಾಗಿ ಅರ್ಥವಾಗಬಹುದಾದುದರಿಂದ ಮೂಲವನ್ನು ಮೊದಲು ಬರೆದು ಆಮೇಲೆ ಅದಕ್ಕೆ ತರ್ಜುಮೆಯನ್ನು ಮಾಡುವೆನು.

ಕೃಷ್ಣಸ್ತು ವಿಮಲಂ ವ್ಯೋಮ ಶರಚ್ಚಂದ್ರಸ್ಯ ಚಂದ್ರಿಕಾಮ್ ।
ತಥಾ ಕುಮುದಿನೀಂ ಫುಲ್ಲಾಮಾಮೋದಿತ ದಿಗಂತರಾಮ್ ॥ ೧೪ ॥

ವನರಾಜಿಂ ತಥಾ ಕೂಜದ್ಭೃಂಗಮಾಲಾ ಮನೋರಮಾಮ್ ।
ವಿಲೋಕ್ಯ ಸಹ ಗೋಪೀಭಿರ್ಮನಶ್ಚಕ್ರೇ ರತಿಂ ಪ್ರತಿ ॥ ೧೫ ॥

ಸಹ ರಾಮೇಣ ಮಧುರಮತೀವ ವನಿತಾಪ್ರಿಯಮ್ ।
ಜಗೌ ಕಲಪದಂ ಶೌರಿರ್ನಾನಾ ತಂತ್ರೀಕೃತವ್ರತಮ್ ॥ ೧೬ ॥

ರಮ್ಯಂ ಗೀತಧ್ವನಿಂ ಶ್ರುತ್ವಾ ಸಂತ್ಯಜ್ಯಾವಸಥಾಂಸ್ತದಾ ।
ಆಜಗ್ಮುಸ್ತ್ವರಿತಾ ಗೋಪ್ಯೋ ಯತ್ರಾಸ್ತೇ ಮಧುಸೂದನಃ ॥ ೧೭ ॥

ಶನೈಶ್ಶನೈರ್ಜಗೌ ಗೋಪೀ ಕಾಚಿತ್ತಸ್ಯ ಲಯಾನುಗಮ್ ।
ದತ್ತಾವಧಾನಾ ಕಾಚಿತ್ತು ತಮೇವ ಮನಸಾ ಸ್ಮರೇತ್ ॥ ೧೮ ॥

ಕಾಚಿತ್ಕೃಷ್ಣೇತಿ ಕೃಷ್ಣೇತಿ ಪ್ರೋಕ್ತ್ವಾ ಲಜ್ಜಾಮುಪಾಯಯೌ ।
ಯಯೌ ಚ ಕಾಚಿತ್ಪ್ರೇಮಾಂಧಾ ತತ್ಪಾರ್ಶ್ವಮವಿಲಜ್ಜಿತಮ್ ॥ ೧೯ ॥

ಕಾಚಿದಾವಸಥಸ್ಯಾಂತೇ ಸ್ಥಿತ್ವಾ ದೃಷ್ಟ್ವಾ ಬಹಿರ್ಗುರುಮ್ ।
ತನ್ಮಯತ್ವೇನ ಗೋವಿಂದಂ ದಧ್ಯೌ ಮೀಲಿತಲೋಚನಾ ॥ ೨೦ ॥

ತಚ್ಚಿಂತಾವಿಪುಲಾಹ್ಲಾದ ಕ್ಷೀಣಪುಣ್ಯಚಯಾ ತಥಾ ।
ತದಪ್ರಾಪ್ತಿ ಮಹಾದುಃಖ ವಿಲೀನಾಶೇಷಪಾತಕಾ ॥ ೨೧ ॥

ಚಿಂತಯಂತೀ ಜಗತ್ಸೂತಿಂ ಪರಬ್ರಹ್ಮಸ್ವರೂಪಿಣಮ್ ।
ನಿರುಚ್ಛ್ವಾಸತಯಾ ಮುಕ್ತಿ ಗತಾನ್ಯಾ ಗೋಪಕನ್ಯಕಾ ॥ ೨೨ ॥

ಗೋಪೀಪರಿವೃತೋ ರಾತ್ರಿಂ ಶರಚ್ಚಂದ್ರಮನೋರಮಾಮ್ ।
ಮಾನಯಾಮಾಸ ಗೋವಿಂದೋ ರಾಸಾರಂಭರಸೋತ್ಸುಕಃ ॥ ೨೩ ॥

ಗೋಪ್ಯಶ್ಚ ವೃಂದಶಃ ಕೃಷ್ಣಚೇಷ್ಟಾ ಸ್ವಾಯತ್ತ ಮೂರ್ತಯಃ ।
ಅನ್ಯದೇಶಂ ಗತೇ ಕೃಷ್ಣೇ ಚೇರುರ್ವೃಂದಾವನಾಂತರಮ್ ॥ ೨೪ ॥

ಕೃಷ್ಣೇ ನಿರುದ್ಧಹೃದಯಾ ಇದಮೂಚುಃ ಪರಸ್ಪರಮ್ ।
ಕೃಷ್ಣೋಽಹಮೇತಲ್ಲಲಿತಂ ವ್ರಜಾಮ್ಯಾಲೋಕ್ಯ ತಾಂ ಗತಿಃ ।
ಅನ್ಯಾ ಬ್ರವೀತಿ ಕೃಷ್ಣಸ್ಯ ಮಮ ಗೀತಿರ್ನಿಶಮ್ಯತಾಮ್ ॥ ೨೫ ॥

ದುಷ್ಟಕಾಲಿಯ! ತಿಷ್ಠಾತ್ರ! ಕೃಷ್ಣೋಽಹಮಿತಿ ಚಾಪರಾ ।
ಬಾಹುಮಾಸ್ಫೋಟ್ಯ ಕೃಷ್ಣಸ್ಯ ಲೀಲಾ ಸರ್ವಸ್ವಮಾದದೇ ॥ ೨೬ ॥

ಅನ್ಯಾ ಬ್ರವೀತಿ ಭೋ ಗೋಪಾ ನಿಶ್ಶಂಕೈಃ ಸ್ಥೀಯತಾಮಿಹ ।
ಅಲಂ ವೃಷ್ಟಿಭಯೇನಾತ್ರ ಧೃತೋ ಗೋವರ್ಧನೋ ಮಯಾ ॥ ೨೭ ॥

ಧೇನುಕೋಽಯಂ ಮಯಾ ಕ್ಷಿಪ್ತೋ ವಿಚರಂತು ಯಥೇಚ್ಛಯಾ ।
ಗೋಪೀ ಬ್ರವೀತಿ ವೈ ಚಾನ್ಯಾ ಕೃಷ್ಣಲೀಲಾನುಕಾರಿಣೀ ॥ ೨೮ ॥

ಏವಂ ನಾನಾಪ್ರಕಾರಾಸು ಕೃಷ್ಣಚೇಷ್ಟಾಸು ತಾಸ್ತದಾ ।
ಗೋಪ್ಯೋ ವ್ಯಗ್ರಾಃ ಸಮಂ ಚೇರೂ ರಮ್ಯಮ್ ವೃಂದಾವನಂ ವನಮ್ ॥ ೨೯ ॥

ವಿಲೋಕ್ಯೈಕಾ ಭುವಂ ಪ್ರಾಹ ಗೋಪೀ ಗೋಪವರಾಂಗನಾ ।
ಪುಲಕಾಂಚಿತ ಸರ್ವಾಂಗೀ ವಿಕಾಸಿ ನಯನೋತ್ಪಲಾ ॥ ೩೦ ॥

ಧ್ವಜವಜ್ರಾಂಕುಶಾಂಬ್ಜಾಂಕ ರೇಖಾವನ್ತ್ಯಾಲಿ! ಪಶ್ಯತ ।
ಪದಾನ್ಯೇತಾನಿ ಕೃಷ್ಣಸ್ಯ ಲೀಲಾಲಂಕೃತಗಾಮಿನಃ ॥ ೩೧ ॥

ಕಾಪಿ ತೇನ ಸಮಾಯಾತಾ ಕೃತಪುಣ್ಯಾ ಮದಾಲಸಾ ।
ಪದಾನಿ ತಸ್ಯಾಶ್ಚೈತಾನಿ ಘನಾನ್ಯಲ್ಪ ತನೂನಿ ಚ ॥ ೩೨ ॥

ಪುಷ್ಪಾಪಚಯಮತ್ರೋಚ್ಚೈಶ್ಚಕ್ರೇ ದಾಮೋದರೋ ಧ್ರುವಂ ।
ಯೇನಾಗ್ರಾಕ್ರಾಂತ ಮಾತ್ರಾಣಿ ಪದಾನ್ಯತ್ರ ಮಹಾತ್ಮನಃ ॥ ೩೩ ॥

ಅತ್ರೋಪವಿಶ್ಯ ಸಾ ತೇನ ಕಾಪಿ ಪುಷ್ಪೈರಲಂಕೃತಾ ।
ಅನ್ಯಜನ್ಮನಿ ಸರ್ವಾತ್ಮಾ ವಿಷ್ಣುರಭ್ಯರ್ಚಿತಸ್ತಯಾ ॥ ೩೪ ॥

ಪುಷ್ಪಬಂಧನ ಸನ್ಮಾನ ಕೃತಮಾನಾಮಪಾಸ್ಯ ತಾಮ್ ।
ನಂದಗೋಪ ಸುತೋ ಯಾತೋ ಮಾರ್ಗೇಣಾನೇನ ಪಶ್ಯತ ॥ ೩೫ ॥

ಅನುಯಾನೇಽಸಮರ್ಥಾನ್ಯಾ ನಿತಂಭರಮಂಥರಾ ।
ಯಾ ಗಂತವ್ಯೇ ದ್ರುತಂ ಯಾತಿ ನಿಮ್ನಪಾದಾಗ್ರ ಸಂಸ್ಥಿತಿಃ ॥ ೩೬ ॥

ಹಸ್ತನ್ಯಸ್ತಾಗ್ರ ಹಸ್ತೇಯಂ ತೇನ ಯಾತಿತಥಾ ಸಖೀ ।
ಅನಾಯತ್ತ ಪದನ್ಯಾಸಾ ಲಕ್ಷ್ಯತೇ ಪದಪದ್ಧತಿಃ ॥ ೩೭ ॥

ಹಸ್ತಸಂಸ್ಪರ್ಶಮಾತ್ರೇಣ ಧೂರ್ತೇನೈಷಾ ವಿಮಾನಿತಾ ।
ನೈರಾಶ್ಯಾನ್ಮಂದಗಾಮಿನ್ಯಾ ನಿವೃತ್ತಂ ಲಕ್ಷ್ಯತೇ ಪದಂ ॥ ೩೮ ॥

ನೂನಮುಕ್ತಾ ತ್ವರಾಮೀತಿ ಪುನರೇಷ್ಯಾಮಿ ತೇಽನ್ತಿಕಂ ।
ತೇನ ಕೃಷ್ಣೇನ ಯೇನೈಷಾ ತ್ವರಿತಾ ಪದಪದ್ಧತಿಃ ॥ ೩೯ ॥

ಪ್ರವಿಷ್ಟೋ ಗಹನಂ ಕೃಷ್ಣಃ ಪದಮತ್ರ ನ ಲಕ್ಷ್ಯತೇ ।
ನಿವರ್ತಧ್ವಂ ಶಶಾಂಕಸ್ಯ ನೈತದ್ದೀಧಿತಿಗೋಚರೇ ॥ ೪೦ ॥

ನಿವೃತ್ತಾಸ್ತಾಸ್ತತೋ ಗೋಪ್ಯೋ ನಿರಾಶಾಃ ಕೃಷ್ಣದರ್ಶನೇ ।
ಯಮುನಾತೀರಮಾಗತ್ಯ ಜಗುಸ್ತಚ್ಚರಿತಂ ತದಾ ॥ ೪೧ ॥

ತತೋ ದದೃಶುರಾಯಾಂತಂ ವಿಕಾಸಿಮುಖಪಂಕಜಮ್ ।
ಗೋಪ್ಯಸ್ತ್ರೈಲೋಕ್ಯ ಗೋಪ್ತಾರಂ ಕೃಷ್ಣಮಕ್ಲಿಷ್ಟಚೇಷ್ಟಿತಂ ॥ ೪೨ ॥

ಕಾಚಿದಾಲೋಕ್ಯ ಗೋವಿಂದಮಾಯಾಂತಮತಿಹರ್ಷಿತಾ ।
ಕೃಷ್ಣ ಕೃಷ್ಣೇತಿ ಕೃಷ್ಣೇತಿ ಪ್ರಾಹ ನಾನ್ಯದುದೀರಯತ್ ॥ ೪೩ ॥

ಕಾಚಿದ್ಭ್ರೂಭಂಗುರಂ ಕೃತ್ವಾ ಲಲಾಟ ಫಲಕಂ ಹರಿಮ್ ।
ವಿಲೋಕ್ಯ ನೇತ್ರ ಭೃಂಗಾಭ್ಯಾಂ ಪಪೌ ತನ್ಮುಖಪಂಕಜಮ್ ॥ ೪೪ ॥

ಕಾಚಿದಾಲೋಕ್ಯ ಗೋವಿಂದಂ ನಿಮೀಲಿತ ವಿಲೋಚನಾ ।
ತಸ್ಯೈವ ರೂಪಂ ಧ್ಯಾಯಂತೀ ಯೋಗಾರೂಢೇವ ಸಾ ಬಭೌ ॥ ೪೫ ॥

ತತಃ ಕಾಚ್ಚಿತ್ಪ್ರಿಯಾಲಾಪೈಃ ಕಾಶ್ಚಿದ್ಭ್ರೂಭಂಗವೀಕ್ಷಣೈಃ ।
ನಿನ್ಯೇಽನುನಯಮನ್ಯಾಂ ಚ ಕರಸ್ಪರ್ಶೇನ ಮಾಧವಃ ॥ ೪೬ ॥

ತಾಭಿಃ ಪ್ರಸನ್ನಚಿತ್ತಾಭಿರ್ಗೋಪೀಭಿಸ್ಸಹ ಸಾದರಮ್ ।
ರರಾಮ ರಾಸಗೋಷ್ಠೀಭಿರುದಾರಚರಿತೋ ಹರಿಃ ॥ ೪೭ ॥

ರಾಸಮಂಡಲಬಂಧೋಽಪಿ ಕೃಷ್ಣಪಾರ್ಶ್ವಮನುಜ್ಝತಾ ।
ಗೋಪೀಜನೇನ ನೈವಾಭೂದೇಕಸ್ಥಾನಸ್ಥಿರಾತ್ಮನಾ ॥ ೪೮ ॥

ಹಸ್ತೇಪ್ರಗೃಹ್ಯ ಚೈಕೈಕಾಂ ಗೋಪೀನಾಂ ರಾಸಮಂಡಲಮ್ ।
ಚಕಾರ ತತ್ಕರಸ್ಪರ್ಶ ನಿಮೀಲಿತದೃಶಂ ಹರಿಃ ॥ ೪೯ ॥

ತತಃಪ್ರವವೃತೇ ರಾಸಶ್ಚಲದ್ವಲಯನಿಸ್ವನಃ ।
ಅನುಯಾತ ಶರತ್ಕಾವ್ಯ ಗೇಯಗೀತಿರನುಕ್ರಮಾತ್ ॥ ೫೦ ॥

ಕೃಷ್ಣಶ್ಶರಚಂದ್ರಮಸಂ ಕೌಮುದೀಂ ಕುಮುದಾಕರಮ್ ।
ಜಗೌ ಗೋಪೀ ಜನಸ್ತ್ವೇಕಂ ಕೃಷ್ಣನಾಮ ಪುನಃಪುನಃ ॥ ೫೧ ॥

ಪರಿವೃತ್ತಿ ಶ್ರಮೇಣೈಕಾ ಚಲದ್ವಲಯಲಾಪಿನೀಮ್ ।
ದದೌ ಬಾಹುಲತಾಂ ಸ್ಕಂಧೇ ಗೋಪೀ ಮಧುನಿಘಾತಿನಃ ॥ ೫೨ ॥

ಕಾಚಿತ್ಪ್ರವಿಲಸದ್ಬಾಹುಃ ಪರಿರಭ್ಯ ಚುಚುಂಬ ತಮ್ ।
ಗೋಪೀಗೀತಸ್ತುತಿವ್ಯಾಜಾನ್ನಿಪುಣಾ ಮಧುಸೂದನಮ್ ॥ ೫೩ ॥

ಗೋಪೀಕಪೋಲ ಸಂಶ್ಲೇಷಮಭಿಪತ್ಯ ಹರೇರ್ಭುಜೌ ।
ಪುಲಕೋದ್ಗಮಸಸ್ಯಾಯ ಸ್ವೇದಾಂಬೂಘನತಾಂ ಗತೌ ॥ ೫೪ ॥

ರಾಸಗೇಯಂ ಜಗೌ ಕೃಷ್ಣೋ ಯಾವತ್ತಾರತರಧ್ವನಿಃ ।
ಸಾಧು ಕೃಷ್ಣೇತಿ ಕೃಷ್ಣೇತಿ ತಾವತ್ತಾದ್ವಿಗುಣಂ ॥ ೫೫ ॥

ಗತೇ ತು ಗಮನಂ ಚಕ್ರುರ್ವಲನೇ ಸಂಮುಖಂ ಯಯುಃ ।
ಪ್ರತಿಲೋಮಾನುಲೋಮಭ್ಯಾಂ ಭೇಜುರ್ಗೋಪಾಂಗನಾ ಹರಿಮ್ ॥ ೫೬ ॥

ಸ ತಥಾ ಸಹಗೋಪೀಭೀ ರರಾಮ ಮಧುಸೂದನಃ ।
ಯಥಾಬ್ದಕೋಟಿ ಪ್ರತಿಮಃ ಕ್ಷಣಸ್ತೇನ ವಿನಾಭವತ್ ॥ ೫೭ ॥

ತಾ ವಾರ್ಯಮಾಣಾಃ ಪತಿಭಿಃಪಿತೃಭಿರ್ಭ್ರಾತೃಭಿಸ್ತಥಾ ।
ಕೃಷ್ಣಂ ಗೋಪಾಂಗನಾ ರಾತ್ರೌ ರಮಯಂತಿ ರತಿಪ್ರಿಯಾಃ ॥ ೫೮ ॥

ಸೋಽಪಿ ಕೈಶೋರಕವಯೋ ಮಾನಯರ್ನ್ಮಧುಸೂದನಃ ।
ರೇಮೇ ತಾಭಿರಮೇಯಾತ್ಮಾ ಕ್ಷಪಾಸು ಕ್ಷಪಿತಾಹಿತಃ ॥ ೫೯ ॥

(ವಿಷ್ಣುಪುರಾಣ, ಪಂಚಮಾಂಶ, ೧೩ನೆಯ ಅಧ್ಯಾಯ)

ಶುಭ್ರವಾದ ಮುಗಿಲು, ಶರಚ್ಚಂದ್ರನ ಇಂಪಾದ ಬೆಳದಿಂಗಳು, ಅರಳಿದ ಬಿಳೀನೈದಿಲೆ, ಎಲ್ಲೆಡೆಯಿಂದಲೂ ಸುವಾಸನೆಯಾದ ತಂಗಾಳಿ, ಝೇಂಕರಿಸುತ್ತಿರುವ ಅಳಿಗಳ ಗುಂಪು—ಇವುಗಳಿಂದ ವನರಾಜಿಯು ಮನಸ್ಸಿಗೆ ರಮ್ಯವಾಗಿರುವುದನ್ನು ನೋಡಿ ಕೃಷ್ಣನು ಗೋಪಿಯರೊಡನೆ ಕ್ರೀಡಿಸಲು ಮನಸ್ಸು ಮಾಡಿದನು.

ಬಲರಾಮನೊಡನೆ ಶೌರಿಯು ಅತ್ಯಂತ ಮಧುರವಾದ ಸ್ತ್ರೀಯರುಗಳಿಗೆ ಆನಂದವನ್ನುಂಟುಮಾಡುವ ನಾನಾತಂತ್ರಿಗಳಿಂದ ಕೂಡಿದ ಅಸ್ಫುಟವಾದ ಪದಗಳುಳ್ಳ ಸಂಗೀತವನ್ನು ಹೇಳಿದನು. ರಮ್ಯವಾದ ಗೀತಧ್ವನಿಯನ್ನು ಕೇಳಿ ಮನೆಗಳನ್ನು ಬಿಟ್ಟು ಮಧುಸೂದನನಿದ್ದೆಡೆಗೆ ಗೋಪಿಯರು ಓಡಿಬಂದರು. ಗೋಪಿಯೊಬ್ಬಳು ಗೀತೆಯ ಲಯಕ್ಕನುಸಾರವಾಗಿ ಮೆಲ್ಲ ಮೆಲ್ಲಗೆ ನಡೆದಳು. ಮತ್ತೊಬ್ಬ ಗೋಪಿಯು ಕೃಷ್ಣನನ್ನು ಮನಸ್ಸಿನಲ್ಲಿ ಸ್ಮರಿಸುತ್ತಾ ಅವನ ಮನದೊಡನೆ ಐಕ್ಯವಾದಳು. ಇನ್ನೊಬ್ಬಳು ಕೃಷ್ಣಾ ಕೃಷ್ಣಾ ಎಂದು ನಾಚಿದಳು. ಮಗುದೊಬ್ಬಳು ನಾಚಿಕೆಯನ್ನು ತೊರೆದು ಪ್ರೇಮಾಂಧಳಾಗಿ ಅವನ ಪಕ್ಕವನ್ನು ಸೇರಿದಳು. ಮತ್ತೊಬ್ಬಳು ಮನೆಯ ಮುಂಗಡೆ ಹಿರಿಯರನ್ನು ಕಂಡು ಮನೆಯಲ್ಲಿಯೇ ನಿಂತು ಕಣ್ಣುಮುಚ್ಚಿಕೊಂಡು ಗೋವಿಂದನೊಡನೆ ತನ್ಮಯಳಾಗಿ ಧ್ಯಾನಮಾಡಿದಳು. ಇನ್ನೊಬ್ಬಳು ಕೃಷ್ಣಚಿಂತನೆಯಿಂದುಂಟಾದ ಅತ್ಯಧಿಕ ಸಂತೋಷದಿಂದ ಪುಣ್ಯವನ್ನು ಕಳೆದುಕೊಂಡಂಥವಳಾಗಿ, ಕೃಷ್ಣನನ್ನು ಇನ್ನೂ ಪಡೆಯದೇ ಹೋದ ಮಹಾದುಃಖ

ವೆಂಬ ಮಹಾಪಾತಕದಲ್ಲಿ ಮುಳುಗಿದಳು. ಪರಬ್ರಹ್ಮಸ್ವರೂಪನಾದ ಜಗತ್ಕಾರಣನನ್ನು ಚಿಂತಿಸಿ ಪರೋಕ್ಷಾರ್ಥ ಜ್ಞಾನಕ್ಕಾಗಿ ಮುಕ್ತಿಲಾಭವನ್ನು ಹೊಂದಿದಳು. ಗೋವಿಂದನು ಶರಚ್ಚಂದ್ರನಿಂದ ಮನೋಹರವಾದ ರಾತ್ರಿಯಲ್ಲಿ ಗೋಪೀಜನಗಳಿಂದ ಸುತ್ತುವರಿಯಲ್ಪಟ್ಟು *ರಸಾರಂಭರಸದಲ್ಲಿ ಉತ್ಸುಕನಾದನು.

ಕೃಷ್ಣನು ಇನ್ನೊಂದು ಕಡೆಗೆ ಹೊರಟುಹೋಗಲು ಗೋಪಿಯರೂ ಕೃಷ್ಣನ ನಡೆನುಡಿಗಳನ್ನನುಸರಿಸುತ್ತಾ ಪಂಗಡ ಪಂಗಡವಾಗಿ ಬೃಂದಾವನ ಮಧ್ಯದಲ್ಲಿ ಸುತ್ತಿಸುತ್ತಿ ಅಲೆದಾಡುತ್ತಿದ್ದರು. ಮತ್ತು ಕೃಷ್ಣನಲ್ಲಿಯೇ ಇಟ್ಟ ಮನಸ್ಸುಳ್ಳವರಾಗಿ ಒಬ್ಬೊಬ್ಬರಿಗೆ ಈ ತೆರನಾಗಿ ಹೇಳಿಕೊಳ್ಳುತ್ತಿದ್ದರು—" ನಾನು ಕೃಷ್ಣನು, ಇತ್ತ ನೋಡಿ ಈ ಲಲಿತಗತಿಯಿಂದ ಹೆಜ್ಜೆ ಹಾಕುತ್ತಲಿದ್ದೇನೆ. ನೀವೆಲ್ಲರೂ ನನ್ನ ಹೆಜ್ಜೆಯನ್ನು ನೋಡುವರಾಗಿ." ಇನ್ನೊಬ್ಬಳು " ನಾನು ಕೃಷ್ಣನು, ನನ್ನ ಹಾಡಿಕೆಯನ್ನು ಕೇಳಿ." ಮತ್ತೊಬ್ಬಳು, ದುಷ್ಟಕಾಳಿಂಗಾ ಇಲ್ಲಿಯೇ ನಿಲ್ಲು, ನಾನು ಕೃಷ್ಣನು." ಎಂದು ಭುಜವನ್ನು ಮೇಲಕ್ಕೆಸೆದು ಕೃಷ್ಣಲೀಲೆಯನ್ನು ಅನುಸರಿಸಿದಳು. ಇನ್ನೊಬ್ಬಳು " ಎಲೈ ಗೊಲ್ಲರುಗಳಿರಾ, ನೀವು ವ್ಯರ್ಥವಾಗಿ ಮಳೆಗೆ ಬೆದರಬೇಡಿ, ಇಲ್ಲಿಯೇ ಇರಿ, ನಾನು ಇಲ್ಲಿಯೇ ಗೋವರ್ಧನಗಿರಿಯನ್ನು ಎತ್ತಿಹಿಡಿದಿರುವೆನು."

ಇನ್ನೊಬ್ಬಳು ಕೃಷ್ಣಲೀಲೆಯನ್ನು ಅನುಸರಿಸುತ್ತಾ " ಈ ಧೇನುಕನನ್ನು ನಾನು ಬಡಿದೆನು. ನೀವು ನಿಮ್ಮ ಮನಸ್ಸು ಬಂದಲ್ಲಿ ತಿರುಗಾಡಬಹುದು " ಎಂದು ಕೂಗಿದಳು. ಹೀಗೆ ಗೋಪಿಗಳೆಲ್ಲರೂ ಹಲವು ಬಗೆಯಾಗಿ ಕೃಷ್ಣನ ನಡೆನುಡಿಗಳನ್ನು ಅನುವರ್ತಿಸುತ್ತಾ ಆತುರದಿಂದ ರಮ್ಯವಾದ ಬೃಂದಾವನದಲ್ಲಿ ಅಲೆದಾಡುತ್ತಿದ್ದರು. ಒಬ್ಬ ಗೋಪವರಾಂಗನೆಯು ಗೋಪೀ ಬಣ್ಣದ ನೆಲವನ್ನು ನೋಡಿ ಸರ್ವಾಂಗಪುಲಕ ರೋಮಾಂಚಿತಳಾಗಿ ನಯನೋತ್ಪಲಗಳನ್ನು ಅರಳಿಸಿಕೊಂಡು ಹೀಗೆಂದಳು :—ಎಲೈ

* ರಾಸವೆಂಬರೆ ಒಂದು ಬಗೆಯ ಕುಣಿತ: ಅನ್ಯೋನ್ಯ ವ್ಯತಿಷಕ್ತ ಹಸ್ತಾನಾಂ ಸ್ತ್ರೀಪುಂಸಾಂ ಗಾಯತಾಂ ಮಂಡಲೀರೂಪೇಣ ಭ್ರಮತಾಂ ನೃತ್ಯವಿನೋದೋ ರಾಸೋನಾಮ ಇತಿ ಶ್ರೀದರಃ ॥ ''

ಸಖಿಯೇ! ಇತ್ತ ನೋಡು ಧ್ವಜವಜ್ರಾಂಕುಶ ರೇಖೆಗಳಿಂದ ಬೆಳಗುತ್ತಿರುವ ಹೆಜ್ಜೆ ಕುರುಹುಗಳೆಲ್ಲವೂ ಆ ಲೀಲಾಲಂಕೃತಗಾಮಿಯಾದ ಕೃಷ್ಣನದು. ಪುಣ್ಯಾತ್ಮಳಾರೋ ಮದಿಸಿ ಮಂದಗಮನಳಾಗಿ ಅವನೊಡನೆ ನಡೆದಿರುವಳು. ಊರಿದ ಈ ಸಣ್ಣ ಹೆಜ್ಜೆಯ ಗುರುತುಗಳು ಅವಳದಾಗಿರಬೇಕು. ಆ ಮಹಾತ್ಮನ ಮುಂಗಾಲ ಹೆಜ್ಜೆಯ ಗುರುತುಗಳು ಮಾತ್ರ ಇಲ್ಲಿ ಕಾಣುತ್ತಿವೆ. ಆದುದರಿಂದ ದಾಮೋದರನು ಇಲ್ಲಿ ನಿಜವಾಗಿಯೂ ಮೇಲು ಮೇಲಿನ ಹೂಗಳನೆಲ್ಲಾ ಬಿಡಿಸಿದಾನೆ. ಅವನು ಕೂತು ಆವಳೋ ಗೋಪಿಗೆ ಹೂಗಳನ್ನು ಮುಡಿಸಿ ಸಿಂಗರಿಸಿರಬೇಕು. ಅವಳು ಹಿಂದಿನ ಜನ್ಮದಲ್ಲಿ ಸರ್ವಾತ್ಮ ವಿಷ್ಣುವನ್ನು ಪೂಜಿಸಿರಬೇಕು. ಹೂ ಮುಡಿದ ಸನ್ಮಾನದಿಂದ ಅವಳು ಬಿಂಕಗೊಂಡಿರಬಹುದು. ಆಗ ಅವಳನ್ನು ತೊರೆದು ನಂದಗೋಪಸುತನು ಈ ದಾರಿಯನ್ನು ಹತ್ತಿರುವನು. ಆಹಾ! ತಿಳಿಯಿತು. ನಿತಂಬ ಭಾರಮಂಥರೆಯಾದಾವಳೋ ಅವನ ಬೆನ್ನುಹತ್ತಿ ಹೋಗಲಾರದೆ ಓಡಲು ಯತ್ನಮಾಡಿರುವಳು. ಎಲೈ ಸಖಿಯೇ! ಇಲ್ಲಿನ ಆಳವಾದ ಮುಂಭಾಗದ ಹೆಜ್ಜೆ ಗುರುತುಗಳನ್ನು ಶೋಧಿಸಿ ನೋಡಲು ಅವನು ಈ ಹುಚ್ಚು ಹೆಜ್ಜೆಯ ಹೆಂಗಸನ್ನು ಕೈಹಿಡಿದೆಳೆದೊಯ್ದಿರಬೇಕು. ಅವನು ಅವಳ ಕೈಹಿಡಿದೊಡನೆಯೇ ಅವಳನ್ನು ಆ ಧೂರ್ತನು ಬಿಟ್ಟೋಡಿರಬೇಕು. ಈ ಪದಚಿಹ್ನೆಗಳ ಮೂಲಕ ಅವಳು ಮಂದಗಾಮಿನಿಯಾಗಿ ನಿರಾಶೆಯಿಂದ ಹಿಂದಿರುಗಿರುವುದು ಕಾಣುವುದಿಲ್ಲವೆ! ಅಲ್ಲದೆ ಕೃಷ್ಣನು ಅವಳಿಗೆ ನಿಜವಾಗಿಯೂ "ನಾನು ಇದೋ ನಿನ್ನೆಡೆಗೆ ಬಂದೆನು" ಎಂದು ಹೇಳಿ ಹೋಗಿರಬೇಕು. ಆದುದರಿಂದಲೇ ಅವಳ ಹೆಜ್ಜೆಗಳು ಇಲ್ಲಿ ಮತ್ತೆ ವೇಗವಾದ ಗಮನವನ್ನು ತೋರುತ್ತಿರುವುವು. ಈಗ ಕೃಷ್ಣನು ಒತ್ತಾದ ಕಾಡಿನೊಳಗೆ ಹೋಗಿರಬೇಕು. ಇಲ್ಲಿ ಇನ್ನು ಹೆಜ್ಜೆಗಳು ಕಾಣವು; "ಇಲ್ಲಿ ಇನ್ನು ಚಂದ್ರಕಿರಣಗಳು ಪ್ರವೇಶಿಸವು. ಬಾ, ಹಿಂತಿರುಗೋಣ."

ಅನಂತರ ಅರಳಿದ ಮುಖಕಮಲವುಳ್ಳವನಾದ, ಮೂರು ಲೋಕಗಳಿಗೂ ರಕ್ಷಕನಾದ, ಪರಿಶುದ್ಧನಾದ ಕೃಷ್ಣನು ಬರುವುದನ್ನು ಗೋಪಿಯರೆಲ್ಲರೂ ಕಂಡರು. ಗೋವಿಂದನು ಬಂದುದನ್ನು ನೋಡಿ ಒಬ್ಬ ಗೋಪಿಯು ಅತ್ಯಂತ ಹರ್ಷಿತಳಾಗಿ 'ಕೃಷ್ಣಾ ಕೃಷ್ಣಾ' ಎನ್ನತೊಡಗಿದಳು. ಇದನ್ನು ಬಿಟ್ಟು

ಅವಳ ಬಾಯಲ್ಲಿ ಮತ್ತಾವ ಮಾತೂ ಹೊರಡದು. ಮತ್ತೊಬ್ಬಳು ಹುಬ್ಬುಗಳನ್ನು ತಿರುವುತ್ತಾ ಹರಿಯನ್ನು ನೋಡಿ ಅವನ ಮುಖಕಮಲವನ್ನೂ ನೇತ್ರಗಳನ್ನೂ ಭಂಗಿಸಿ ನುಡಿಯುವಳಾದಳು. ಇನ್ನೊಬ್ಬಳು ಗೋವಿಂದನನ್ನು ನೋಡಿ ಕಂಗಳನ್ನು ಮುಚ್ಚಿ ಯೋಗಾರೂಢಳಂತೆ ಬೆಳಗುತ್ತಾ ಅವನ ರೂಪವನ್ನು ಧ್ಯಾನಿಸುತಲಿದ್ದಳು. ಆಮೇಲೆ ಮಾಧವನು ಅವರಲ್ಲಿ ಕೆಲವರನ್ನು ಅನುನಯ ವಿವೇಚನೆಗಳಿಂದಲೂ, ಕೆಲವರನ್ನು ಪ್ರಿಯವಾದ ನುಡಿಗಳಿಂದಲೂ, ಕೆಲವರನ್ನು ಕಣ್ಣು ಮಿಟಕಿಸಿ ನೋಡುವುದರಿಂದಲೂ, ಕೆಲವರನ್ನು ಕೈಯಿಂದ ಮುಟ್ಟಿಯೂ ಸಮುದಾಯಿಸಿದನು. ಅನಂತರ ಉದಾರಚಿತ್ತನಾದ ಹರಿಯು ಪ್ರಸನ್ನಚಿತ್ತರಾದ ಗೋಪಿಯರೊಡನೆ ಆದರದಿಂದ ರಾಸಮಂಡಲದ ಮಧ್ಯದಲ್ಲಿ ಕ್ರೀಡಿಸಲು ತೊಡಗಿದನು. ಗೋಪಿಯರು ಹೇಗೂ ಅವನ ಪಾರ್ಶ್ವವನ್ನು ಬಿಡಲೊಲ್ಲದೆ ನಿಂತೆಡೆಯಲ್ಲಿಯೇ ನಿಂತಿರಲು ರಾಸಮಂಡಲ ಬಂಧವು ಆಗಲಿಲ್ಲ. ಆಮೇಲೆ ಕೃಷ್ಣನು ಪ್ರತಿಯೊಬ್ಬರನ್ನೂ ಕೈಹಿಡಿದು ಅವರು ಅವನ ಕರಸ್ಪರ್ಶದಿಂದ ಕಣ್ಣು ಮುಚ್ಚಲು ರಾಸಮಂಡಲಿಯ ಸ್ಥಾನದಲ್ಲಿ ಅವರನ್ನು ನಿಲ್ಲಿಸಿದನು. ಅತಃಪರ ಗೋಪಿಯರ ಚಂಚಲ ಕಂಕಣಗಳ ಕಿಂಕಿಣಿ ಶಬ್ದವನ್ನೂ ಅವರು ಹಾಡುತ್ತಿರುವ ಶರತ್ಕಾವ್ಯಗೀತಿಯನ್ನೂ ಅನುಸರಿಸುವವನಾಗಿ ರಾಸಕ್ರೀಡೆಯಲ್ಲಿ ಪ್ರವೃತ್ತನಾದನು. ಕೃಷ್ಣನು ಶರಚ್ಚಂದ್ರ, ಕೌಮುದಿ, ಕುಮುದ ಸಂಬಂಧವಾದ ಗಾನಗಳನ್ನು ಪಾಡಿದನು. ಗೋಪಿಯರಾದರೆ ಬಾರಿಬಾರಿಗೂ ಕೃಷ್ಣನಾಮವೊಂದನ್ನೇ ಹಾಡುತ್ತಿದ್ದರು. ಗೋಪಿಯೊಬ್ಬಳು ನರ್ತನದಿಂದ ನೈಯಲಸಿ ಚಂಚಲವಾದ ಬಳೆಗಳ ಕಿಣಿ ಕಿಣಿರವದಿಂದ ಕೂಡಿದ ತೋಳನ್ನು ಕೃಷ್ಣನ ಭುಜದಮೇಲೆ ಹಾಕಿದಳು. ಕಪಟತೆಯಲ್ಲಿ ನಿಪುಣೆಯಾದಿನ್ನೊಬ್ಬಳು ಕೃಷ್ಣನ ಗೀತೆಯನ್ನು ಶ್ಲಾಘಿಸುವ ನೆಪದಿಂದ ಕೃಷ್ಣನನ್ನು ಎರಡು ಭುಜಗಳಿಂದಲೂ ಬಿಗಿದಪ್ಪಿ ಮಧುಸೂದನನನ್ನು ಮುತ್ತಿಟ್ಟುಕೊಂಡಳು. ಕೃಷ್ಣನ ತೋಳುಗಳೆರಡೂ ಆವಳೋ ಒಬ್ಬ ಗೋಪಿಯ ಕೆನ್ನೆಗೆ ತಗಲಲು ಅವಳು ಪುಲಕಾಂಕುರರೂಪವಾದ ಶಸ್ಯೋತ್ಪಾದನದ ಮೂಲಕ ಬೆವರು ಕಂಬನಿಗೂಡಿ ಮೇಘದಂತೆಯಾದಳು. ತಾರ ತಾರಧ್ವನಿಯಲ್ಲಿ ಕೃಷ್ಣನು ರಾಸಗೀತೆಯನ್ನು ಹಾಡುತ್ತಿರುವವರೆಗೂ " ಭಲಿರೇ ಕೃಷ್ಣ, ಭಲಿರೇ ಕೃಷ್ಣ" ಎನ್ನುತ್ತ ಎತ್ತಿ ಎತ್ತಿ ಗೋಪಿಯರು ಹಾಡಿದರು. ಕೃಷ್ಣನು

ಹೋದೆಡೆಗೆ ಹೋಗುತ್ತಾ ಗಿರಿಗಿರಿ ಸುತ್ತಿದರೆ ಮುಂದೆ ಬರುತ್ತಾ ಈ ರೀತಿಯಾಗಿ ಪ್ರತಿಲೋಮ ಅನುಲೋಮವಾಗಿ ಗೋಪಾಂಗನೆಯರು ಕೃಷ್ಣನನ್ನು ಭಜಿಸಲು ಅವನು ಅವರೊಡನೆ ಕ್ರೀಡಿಸಿದನು. ಅವರು ಅವನಿಲ್ಲದ ಕ್ಷಣವನ್ನು ಕೋಟಿವರ್ಷಗಳಂತೆ ಭಾವಿಸಿದರು. ಆಟದಲ್ಲಿ ಅನುರಾಗವಿಟ್ಟ ಆ ಗೋಪಿಯರು ಗಂಡಂದಿರಿಂದಲೂ, ತಂದೆ ಅಣ್ಣ ತಮ್ಮಂದಿರಿಂದಲೂ ಬಾರಿಬಾರಿಗೂ ಅಡ್ಡಗಿಸಲ್ಪಟ್ಟರೂ ರಾತ್ರಿವೇಳೆಯಲ್ಲಿ ಕೃಷ್ಣನೊಡನೆ ಕ್ರೀಡಿಸುತ್ತಿದ್ದರು. ಶತ್ರುಧ್ವಂಸಕಾರಿ ಅಮೇಯಾತ್ಮನಾದ ಮಧುಸೂದನನು ತಾನು ಕಿಶೋರ ವಯಸ್ಸಿನವನೆಂತ ತಿಳಿದು ರಾತ್ರಿಯಲ್ಲಿ ಕ್ರೀಡಿಸಿದನು.

ಈ ತರ್ಜುಮೆಯ ವಿಷಯದಲ್ಲಿ ಇದನ್ನು ಹೇಳುವ ಅಶ್ಯಕ. ಕ್ರೀಡಾರ್ಥದಲ್ಲಿ ರಮ್ ಧಾತುವನ್ನು ತಿಳಿದಿರುತ್ತೇನೆ. ಹೇಗೆಂದರೆ, ರತಿಪ್ರಿಯ ಅಂದರೆ ಕ್ರೀಡೆಯಲ್ಲಿ ಬಹಳ ಆಶೆಯುಳ್ಳವನು. ಮೊದಲು ರಮ್ ಧಾತುವು ಕ್ರೀಡಾರ್ಥದಲ್ಲಿಯೇ ವ್ಯವಹರಿಸಲ್ಪಟ್ಟಿರುವದು. ಇದರ ಬೇರೆಯೊಂದರ್ಥವು ಕ್ರೀಡಾರ್ಥದ ಮೇಲೆ ಹುಟ್ಟಿದ್ದು. "ರತಿ" ಮತ್ತು "ರತಿಪ್ರಿಯ" ಇದೇ ಅರ್ಥದಲ್ಲಿ ಸದಾ ಕೃಷ್ಣಲೀಲೆಯಲ್ಲಿ ವ್ಯವಹರಿಸಲ್ಪಟ್ಟಿರುವದು. ಇದಕ್ಕೆ ಕೆಲವು ಉದಾಹರಣೆಗಳಿರುವವು. ಹರಿವಂಶದ ೬೭ನೆಯ ಪುಸ್ತಕದಲ್ಲಿ ೬೮ನೆಯ ಅಧ್ಯಾಯದಲ್ಲಿ ತೆರನಾದ ಉಪಯೋಗವನ್ನು ಪಾಠಕರು ನೋಡಬಹುದು :

> ಸ ತತ್ರ ವಯಸಾ ತುಲ್ಯೈರ್ವತ್ಸಪಾಲೈಸ್ಸಹಾನಘಃ ।
> ರೇಮೇ ವೈ ದಿವಸಂ ಕೃಷ್ಣಃ ಪುರಾ ಸ್ವರ್ಗಗತೋ ಯಥಾ ॥
> ತಂ ಕ್ರೀಡಮಾನಂ ಗೋಪಾಲಾಃ ಕೃಷ್ಣಂ ಭಾಂಡೀರ ವಾಸಿನಮ್ ।
> ರಮಯಂತಿಸ್ಮ ಬಹವೋ ವನ್ಯೈಃ ಕ್ರೀಡನಕೈಸ್ತದಾ ॥
> ಅನ್ಯೇ ಸ್ಮಪರಿಗಾಯಂತಿ ಗೋಪಾಮುದಿತಮಾನಸಾಃ ।
> ಗೋಪಾಲಾಃ ಕೃಷ್ಣಮೇವಾನ್ಯೇ ಗಾಯಂತಿಸ್ಮ ರತಿಪ್ರಿಯಾಃ ॥

ಈ ಮೂರು ಶ್ಲೋಕಗಳಲ್ಲಿ ರಮ್ ಧಾತುವಿನಿಂದ ನಿಷ್ಪನ್ನವಾದ ಶಬ್ದವು ಮೂರುಸಲ ಉಪಯೋಗಿಸಲ್ಪಟ್ಟಿರುವುದು. "ರೇಮೇ, ರಮಯಂತಿ, ರತಿಪ್ರಿಯಾಃ." ಮೂರುಸಲವೂ ಕ್ರೀಡಾ (ಆಟದ)ರ್ಥದಲ್ಲಿ ಉಪಯೋಗಿ

ಸಲ್ಪಟ್ಟದೆ. ಬೇರೆ ಅರ್ಥವನ್ನು ಇಲ್ಲಿ ಹೂಡಲು ಆಗುವುದೇ ಇಲ್ಲ. ಗೊಲ್ಲ ಹುಡುಗರ ವಿಷಯವಾಗಿ ಮಾತು ನಡೆಯುತ್ತಿದೆ.*

ಆದುದರಿಂದ ಆಟವಾಡುವಂಥಾ ಗೋಪಾಲರನ್ನೂ "ರತಿಪ್ರಿಯ" ಗೋಪಾಲರೆಂದು ಹೇಳಿರುತ್ತಾರೆ. ಅಲ್ಲದೆ ಇದೇ ಅರ್ಥವೇ ಇಲ್ಲಿ ಸಂಗತ. ಏಕೆಂದರೆ, ರಾಸವೆಂಬುದೊಂದುತರದ ಆಟ. ಇನ್ನೂ ಇದುವರೆಗೂ ಭಾರತವರ್ಷದ ಕೆಲವೆಡೆಗಳಲ್ಲಿ ಈ ನೃತ್ಯವು ರೂಢಿಯಲ್ಲಿದೆ. ರಾಸವೆಂದರೆ ಏನೆಂಬದನ್ನು ಶ್ರೀಧರಸ್ವಾಮಿಯು ಹೀಗೆ ತಿಳಿಸಿರುವನು.

"ಅನ್ಯೋನ್ಯ ವ್ಯತಿಷಕ್ತಹಸ್ತಾನಾಂ ಸ್ತ್ರೀಪುಂಸಾಂ ಗಾಯತಾಂ ಮಂಡಲೀ ರೂಪೇಣ ಭ್ರಮತಾಂ ನೃತ್ಯವಿನೋದೋ ರಾಸೋನಾಮ."

ಅರ್ಥ—ಹೆಂಗಸರು ಗಂಡಸರು ಒಬ್ಬರ ಕೈಯನ್ನು ಮತ್ತೊಬ್ಬರು ಹಿಡಿದು ಹಾಡುತ್ತ, ಹಾಡುತ್ತ, ಗುಂಡಗೆ ತಿರುಗುತ್ತಾ ಮಾಡುವ ನೃತ್ಯಕ್ಕೆ ರಾಸವೆಂದು ಹೆಸರು. ಹುಡುಗ ಹುಡುಗಿಯರು ಈ ತೆರನಾಗಿ ಕುಣಿಯುವು ದನ್ನು ನಾವು ನೋಡಿರುವೆವು. ಅಲ್ಲದೆ ಬಾಲ್ಯವನ್ನು ಮೀರಿದವರೂ ಕೂಡ ಬೇರೇ ದೇಶಗಳಲ್ಲಿ ಹೀಗೆ ಕುಣಿಯುವರೆಂಬುದನ್ನೂ ಕೇಳಿರುವೆವು.†

ಇದರಲ್ಲಿ ಆದಿರಸದ ವಾಸನೆಯು ಹೆಸರೂ ಇಲ್ಲ. ರಾಸವೆಂಬುದೊಂದು ಆಟ. ಮತ್ತು ರತಿ ಶಬ್ದದಿಂದ ಆಟವೆಂದು ಅರ್ಥವಾಗುತ್ತದೆ. ಆದುದರಿಂದ ರತಿ ಶಬ್ದವು ವ್ಯವಹರಿಸಲ್ಪಡಲು ಅರ್ಥವನ್ನು ಬರೆಯುವ ಕಾಲದಲ್ಲಿ ಅದಕ್ಕೆ ಪರ್ಯಾಯ ಶಬ್ದರೂಪವಾಗಿ ಕ್ರೀಡೆ ಅಥವಾ ಆಟವೆಂಬ ಶಬ್ದವನ್ನು ವ್ಯವ ಹರಿಸಬೇಕು.

---

* ರಮ್ ದಾತುವಿನಿಂದ ಬರುವ ಶಬ್ದಗಳು ಗುಜರಾತಿಯಲ್ಲಿಯೂ, ರಾಜಾಸ್ತಾನಿಯಲ್ಲಿಯೂ, ಹಿಂದೂಸ್ತಾನಿನಲ್ಲಿಯೂ ಸಾಧಾರಣ, ಆಟ, ಮಕ್ಕಳ ಆಟ ಎನ್ನುವ ಅಭಿಪ್ರಾಯದಲ್ಲಿ ರೂಢಿಯಾಗಿ ಇವೆ. ಇವಕ್ಕೆ ಆದಿರಸವೆಂಬ ಬಲವಂತವಾದ ಅರ್ಥವೇನೂ ಇಲ್ಲ. 'ಮಗು ಆಡುತಲಿದೆ' ಎಂಬಲ್ಲಿಯೂ ಕೂಡ ಗುಜರಾತಿಯಲ್ಲಿ 'ರಂಥೆ,' ಹಿಂದೂಸ್ತಾನಿಯಲ್ಲಿ 'ರಮತಾ ಹೈ' ಎನ್ನುವರು. ಗುಜರಾತಿಯಲ್ಲಿ ಆಟದ ಸಾಮಾನಿಗೆ 'ರಮಣಿಕ್' ಎನ್ನುವರು.ಹೀಗೆಯೇ ಅನೇಕ ಶಬ್ದಗಳು ದೊರೆಯುವುವು.—ರಾ. ವಾ.

† ಮಧ್ಯಪ್ರಾಂತದ ಗೊಂಡಾರಣ್ಯದಲ್ಲಿ ಈಗಲೂ ಈ ರೀತಿಯ ಕುಣಿತವು (ಕರ್ಮಾ ನಾಚ್) ಅಹೀರರಲ್ಲಿಯೂ (ಅಭೀರ ಗೊಲ್ಲರು) ಗೊಂಡರಲ್ಲಿಯೂ ಮತ್ತು ಇತರರಲ್ಲಿಯೂ ರೂಢಿ ಇರುವುದನ್ನು ನಾನು ಬಲುವೇಳೆ ನೋಡಿದೇನೆ. ಈಚೀಚೆಗೆ ಈ ಗ್ರಾಮ್ಯ ಕುಣಿತಗಳ ಶ್ರೇಷ್ಠತ್ವವು ಪತ್ತೆಯಾಗಿ ಅಲ್ಲಲ್ಲಿ ಜೀರ್ಣೋದ್ಧಾರದ ಅಂಕುರವು ಕಾಣುತ್ತಲಿದೆ—ರಾ. ವ್ಯಾ.

ಈ ರಾಸಲೀಲೆಯ ವೃತ್ತಾಂತವು ಕೆಲವುಟ್ಟಿಗೆ ತಿಳಿದುಕೊಳ್ಳಲು ಕಷ್ಟವಾದುದು. ಇದರೊಳಗಿನ ಗೂಢಾಭಿಪ್ರಾಯವನ್ನು ಈ ಪುಸ್ತಕದ ಇನ್ನೊಂದೆಡೆಯಲ್ಲಿ ಬಿಚ್ಚಿ ಹೇಳಿರುವೆನು. ಆದರೂ ಇಲ್ಲಿ ಈ ತತ್ತ್ವವನ್ನು ಸಂಪೂರ್ಣವಾಗಿ ಮರೆಯಿಸುವದನುಚಿತ. ಆದುದರಿಂದ ಹೇಳಿದುದನ್ನೇ ತಿರುಗಿ ಹೇಳತೊಡಗಿರುವೆನು.

ಧರ್ಮ ತತ್ತ್ವವೆಂಬ ಗ್ರಂಥದಲ್ಲಿ ಮನುಷ್ಯತ್ವವೇ ಮನುಷ್ಯ ಧರ್ಮವೆಂದು ಹೇಳಿರುವೆನು. ಅಂಥ ಮನುಷ್ಯತ್ವ ಅಥವಾ ಧರ್ಮದ ಉಪಾದಾನ (ಭಾವನೆ) ನಮ್ಮ ವೃತ್ತಿಗಳ ಅನುಶೀಲನ, ಪ್ರಸ್ಫೂರಣ ಮತ್ತು ಚರಿತಾರ್ಥತೆಯೇ. ಈ ವೃತ್ತಿಗಳು ಶಾರೀರಕ, ಜ್ಞಾನಾರ್ಜನೀ, ಕಾರ್ಯಕಾರಿಣಿ ಮತ್ತು ಚಿತ್ತರಂಜನಿಗಳೆಂದು ನಾಲ್ಕು ಭಾಗಗಳಾಗಿರುವುವು. ಯಾವ ವೃತ್ತಿಗಳ ದ್ವಾರಾ ಸೌಂದರ್ಯಾದಿಗಳನ್ನು ಪರ್ಯಾಲೋಚಿಸಿ ನಿರ್ಮಲವಾದ ಅತುಲನೀಯವಾದ ಆನಂದವನ್ನು ಅನುಭವಿಸುವೆವೋ ಅವುಗಳೆಲ್ಲವೂ ಚಿತ್ತರಂಜನೀವೃತ್ತಿಗಳು. ಅವುಗಳ ಸಮ್ಯಗನುಶೀಲನದಿಂದ ಸಚ್ಚಿದಾನಂದಮಯನೂ ಜಗತ್ತೂ ಮತ್ತು ಜಗನ್ಮಯವೂ ಸಂಪೂರ್ಣವಾಗಿ ಅನುಭವಕ್ಕೆ ಬರುತ್ತವೆ. ಚಿತ್ತರಂಜನೀವೃತ್ತಿಗಳ ಅಭಾವದಿಂದ ಧರ್ಮವು ಹಾನಿಯಾಗುವುದು. ಆದರ್ಶ ಪುರುಷನಲ್ಲಿ ವೃತ್ತಿಗಳಾವುವೂ ಅನನುಶೀಲಿತಗಳಾಗಲಿ ಸ್ಫೂರ್ತಿಹೀನಗಳಾಗಲಿ ಆಗಲಾರವು. ಈ ರಾಸಲೀಲೆಯು ಕೃಷ್ಣ ಮತ್ತು ಗೋಪಿಯರಿಂದಾದ ಚಿತ್ತರಂಜನೀವೃತ್ತಿಯ ಅನುಶೀಲನದ ಉದಾಹರಣೆ.

ಇದು ಕೃಷ್ಣನಿಗೆ ಉಪಭೋಗ ಮಾತ್ರ, ಗೋಪಿಯರಿಗಾದರೋ ಇದು ಈಶ್ವರೋಪಾಸನ. ಒಂದು ದಿಕ್ಕಿನಲ್ಲಿ ಅನಂತ ಸುಂದರನ ಸೌಂದರ್ಯ ಅರಳಿರುವುದು. ಮತ್ತೊಂದೆಡೆ ಅನಂತ ಸುಂದರನ ಪೂಜೆ. ಚಿತ್ತರಂಜನೀ ವೃತ್ತಿಗಳ ಅನುಶೀಲನದ ಕೊನೆ ಅವುಗಳನ್ನು ಈಶ್ವರನ ಕಡೆಗೆ ತಿರುಗಿಸುವುದೇ. ಪ್ರಾಚೀನ ಭಾರತವರ್ಷದಲ್ಲಿ ಸ್ತ್ರೀಯರುಗಳಿಗೆ ಜ್ಞಾನಮಾರ್ಗ ನಿಷಿದ್ಧವಾಗಿದ್ದಿತು ; ಹೇಗೆಂದರೆ ಅವರುಗಳಿಗೆ ವೇದಾಧ್ಯಯನ ಅಡ್ಡಿಯಾದುದಾಗಿದ್ದಿತು. ಹೆಂಗಸರಿಗೆ ಕರ್ಮಮಾರ್ಗವು ಬಲು ಕಷ್ಟಸಾಧ್ಯ. ಭಕ್ತಿಯಲ್ಲಾದರೆ ಅವರಿಗೆ ವಿಶೇಷವಾದ ಅಧಿಕಾರವುಂಟು. "ಪರಾನುರಕ್ತಿ

ರೀಶ್ವರೇ" ಎಂಬುದೇ ಭಕ್ತಿ ಎಂದು ಹೇಳಿರುವುದು. ಅನುರಾಗ ಹಲವು ಕಾರಣಗಳಿಂದುಂಟಾಗುವುದಾದರೂ ಸೌಂದರ್ಯ ಮೋಹದಿಂದುಂಟಾದದ್ದು ಮನುಷ್ಯನಲ್ಲಿ ಎಲ್ಲಕ್ಕಿಂತಲೂ ಬಲವತ್ತರವಾದುದು. ಆದುದರಿಂದ ಅನಂತ ಸುಂದರನ ಸೌಂದರ್ಯದ ವಿಕಾಸ ಮತ್ತು ಅವನ ಆರಾಧನೆ ಸ್ತ್ರೀಜಾತಿಯ ಜೀವನಸಾರ್ಥಕತೆಗೆ ಮುಖ್ಯೋಪಾಯ. ಈ ತತ್ತ್ವಾತ್ಮಕವಾದುದೇ ರಾಸ ಲೀಲೆ. ಜಡ ಪ್ರಕೃತಿಯ ಸೌಂದರ್ಯವೆಲ್ಲಾ ಅಲ್ಲಿ ಸೇರಿರುವುದು. ಶರತ್ಕಾಲದ ಪೂರ್ಣಚಂದ್ರ, ಶ್ಯಾಮಸಲಿಲೆಯಾದ ಯಮುನೆ, ಪ್ರಸ್ಫುಟಿತ ಕುಸುಮವಾಸಿತ ಕುಂಜವಿಹಂಗಮ ಕೂಜಿತ ಬೃಂದಾವನ ವನಸ್ಥಲಿ, ಇವುಗಳ ಮಧ್ಯದಲ್ಲಿ ಅನಂತ ಸುಂದರನ ಶರೀರದ ವಿಕಾಸ, ಇದಕ್ಕೆ ಜೋಡಿಯಾಗಿ ವಿಶ್ವಮೋಹಿನಿಯಾದ ಕೃಷ್ಣಗೀತ—ಇಂತಹ ಸರ್ವಪ್ರಕಾರವಾದ ಚಿತ್ತರಂಜನ ದ್ವಾರಾ ಗೋಪೀಗಣಗಳ ಭಕ್ತಿ ಉದ್ರೇಕವಾಗಲು, ಅವರು ಕೃಷ್ಣಾನುರಾಗಿಣಿಗಳಾಗಿ ತಾವು ಕೂಡ ಕೃಷ್ಣನೆಂದು ತಿಳಿದುಕೊಂಡರು. ಕೃಷ್ಣನು ಹೇಳಬಹುದಾದ ಮಾತುಗಳನ್ನಾಡಿದರೂ ಗಮನಿಸದೆ ಕೇವಲ ಜಗದೀಶ್ವರನ ಸೌಂದರ್ಯದಲ್ಲಿ ಅನುರಾಗಿಣಿಗಳಾಗಿ ಜೀವಾತ್ಮ ಪರಮಾತ್ಮರುಗಳಲ್ಲಿ ಅಭೇದಜ್ಞಾನವನ್ನು ಅಂದರೆ ಯಾವುದು ಯೋಗಿಗಳ ಯೋಗದ, ಜ್ಞಾನಿಗಳ ಜ್ಞಾನದ, ಕೊಟ್ಟಕೊನೆಯ ಉದ್ದೇಶವೋ ಅಂಥಾದ್ದನ್ನು ಪಡೆದು, ಈಶ್ವರನಲ್ಲಿ ವಿಲೀನರಾದರು.

ಯುವಕ ಯುವತಿಯರು ಒಟ್ಟುಗೂಡಿ ಕುಣಿಯುವುದೂ ಹಾಡುವುದೂ ನಮ್ಮ ಈಗಿನ ಸಮಾಜದಲ್ಲಿ ನಿಂದನೀಯ. ಇತರ ಸಮಾಜಗಳಲ್ಲಿ ಅಂದರೆ ಯೂರೋಪು ಮುಂತಾದ ದೇಶದಲ್ಲಿ ನಿಂದನೀಯವಲ್ಲ. ವಿಷ್ಣು ಪುರಾಣವನ್ನು ರಚಿಸಿದ ಕಾಲದಲ್ಲಿ ಸಮಾಜ ಸ್ಥಿತಿ ಇದೇ ರೀತಿಯಲ್ಲಿದ್ದಂತೆ ತೋರುತ್ತದೆ. ಪುರಾಣಕಾರನು ಕಾರ್ಯವು ನಿಂದನೀಯವೆಂದು ಮನಸ್ಸಿನಲ್ಲಿ ನಂಬಿರಬೇಕು. ಆದುದರಿಂದಲೇ ಹೀಗೆಂದು ಬರೆದಿರುವನು :

ತಾ ವಾರ್ಯಮಾಣಾಃ ಪತಿಭಿಃ ಪಿತೃಭಿಃ ಭ್ರಾತೃಭಿಸ್ತಥಾ ।

ಮತ್ತು ಈ ದೋಷವನ್ನು ತೊಳೆಯುವದಕ್ಕೆಂತಲೇ ಅಧ್ಯಾಯದ ಕೊನೆಯಲ್ಲಿ ಹೀಗೆ ಬರೆದಿರುತ್ತಾನೆ:—

ತದ್ಭರ್ತೃಷು ತಥಾ ತಾಸು ಸರ್ವಭೂತೇಷು ಚೇಶ್ವರಃ ।
ಆತ್ಮಸ್ವರೂಪೋಽಸೌ ವ್ಯಾಪೀ ವಾಯುರಿವ ಸ್ಥಿತಃ ॥
ಯಥಾ ಸಮಸ್ತ ಭೂತೇಷು ನಭೋಽಗ್ನಿಪೃಥಿವೀಜಲಂ ।
ವಾಯುಶ್ಚಾತ್ಮಾ ತಥೈವಾಸೌ ವ್ಯಾಪ್ಯ ಸರ್ವಮವಸ್ಥಿತಃ ॥

ಅವನು ಅವರುಗಳ ಗಂಡಂದಿರಲ್ಲಿಯೂ ಅವರುಗಳಲ್ಲಿಯೂ ಸರ್ವ ಭೂತಗಳಲ್ಲಿಯೂ ಆತ್ಮಸ್ವರೂಪದಲ್ಲಿ ಸಮಸ್ತದರಲ್ಲಿಯೂ ವಾಯುವಿನಂತೆ ವ್ಯಾಪಿಸಿರುವನು. ಸಮಸ್ತ ಭೂತಗಳಲ್ಲಿಯೂ ಆಕಾಶ, ಅಗ್ನಿ, ಪೃಥ್ವಿ, ಜಲ, ವಾಯುಗಳಿರುವಂತೆಯೇ ಸರ್ವದರಲ್ಲಿಯೂ ಇರುವನು.

ಹೀಗೆ ದೋಷವನ್ನು ತೊಳೆಯಬೇಕಾದುದಕ್ಕೆ ಕಾರಣವೇನೂ ಇರಲಿಲ್ಲ. ಯುವಕ ಯುವತಿಯರು ಒಟ್ಟುಗೂಡಿ ಒಂದು ಕಡೆ ಕುಣಿಯುವುದರಲ್ಲಿ ಧರ್ಮತಃ ದೋಷವೇನೂ ಉಂಟಾಗುವುದಿಲ್ಲ. ಕೇವಲ ನಮ್ಮ ಸಮಾಜದಲ್ಲಿ ಸಮಾಜ ದೋಷ ಘಟಿಸುವುದು. ಕೃಷ್ಣನ ಸಮಯದಲ್ಲಿ ಆ ಸಾಮಾಜಿಕ ದೋಷವೂ ಇರಲಿಲ್ಲವೆಂದು ತೋರುವುದು.

ಷಷ್ಠ ಪರಿಚ್ಛೇದ

ವ್ರಜಗೋಪಿಯರು (ಹರಿವಂಶ)

ವಿಷ್ಣು ಪುರಾಣದಿಂದ ಪೂರ್ವ ಪರಿಚ್ಛೇದದಲ್ಲಿ ಎತ್ತಿದ ಅಂಶವು ಈ ಪುರಾಣದ ಪಂಚಮಾಂಶದ ಹದಿಮೂರನೆಯ ಅಧ್ಯಾಯದ್ದು. ಈ ಅಧ್ಯಾಯವನ್ನು ಬಿಟ್ಟರೆ ಮತ್ತೆಲ್ಲಿಯೂ ವಜ್ರಗೋಪಿಯರ ವಿಷಯವು ಈ ಪುರಾಣದಲ್ಲಿ ಸಿಕ್ಕುವುದಿಲ್ಲ. ಕೇವಲ ಕೃಷ್ಣನು ಮಥುರೆಗೆ ಹೋದಾಗ ಅವರು ದುಃಖಪಟ್ಟ ಮಾತಿರುವುದು.

ಇದೇ ರೀತಿಯಾಗಿ ಹರಿವಂಶದಲ್ಲಿಯೂ ವ್ರಜಗೋಪಿಯರ ಕಥೆಯು ವಿಷ್ಣುಪರ್ವದ ೭೭ನೆಯ ಅಧ್ಯಾಯ, ಕೆಲವು ಗ್ರಂಥಗಳಲ್ಲಿ ೭೬ನೆಯ ಅಧ್ಯಾಯವನ್ನು ಬಿಟ್ಟರೆ ಮತ್ತೆಲ್ಲಿಯೂ ಇಲ್ಲ. ಅಲ್ಲಿರುವುದನ್ನೆಲ್ಲಾ ಈ ಕೆಳಗೆ ಎತ್ತಿರುವೆನು. ಎತ್ತುವುದಕ್ಕೆ ಮುಂಚೆ ಹೇಳಬೇಕಾದುದೇನೆಂದರೆ :—

ಹರಿವಂಶದಲ್ಲಿ ರಾಸಶಬ್ದವನ್ನು ಉಪಯೋಗಿಸಿರುವುದಿಲ್ಲ. ಇದಕ್ಕೆ ಬದಲಾಗಿ "ಹಲ್ಲೀಷ" ಶಬ್ದವನ್ನು ಉಪಯೋಗಿಸಿರುತ್ತಾರೆ. ಈ ಅಧ್ಯಾಯದ ಹೆಸರು "ಹಲ್ಲೀಷ ಕ್ರೀಡಾ." ಹೇಗೆಂದರೆ :—

ಇತಿ ಶ್ರೀ ಮಹಾಭಾರತೇ ಖಿಲೇಷು ಹರಿವಂಶೇ ವಿಷ್ಣುಪರ್ವಣಿ ಹಲ್ಲೀಷ ಕ್ರೀಡನೇ ಸಪ್ತಸಪ್ತತಮೋಽಧ್ಯಾಯಃ ॥

ಹೇಮಿಚಂದ್ರನ ಅಭಿಧಾನದಲ್ಲಿ ಹಲ್ಲೀಷಕ್ಕೆ ಅರ್ಥವನ್ನು ಹೀಗೆ ಬರೆದಿರುತ್ತಾನೆ :—

ಮಂಡಲೇನ ತು ಯನ್ನೃತ್ತ್ಯಂ ಸ್ತ್ರೀಣಾಂ ಹಲ್ಲೀಷಂತು ತತ್

ವಾಚಸ್ಪತ್ಯದಲ್ಲಿ ತಾರಾನಾಥನು :—

"ಸ್ತ್ರೀಣಾಂ ಮಂಡಲಿಕಾಕಾರನೃತ್ಯೈ" ಎಂದು ಬರೆದಿರುವನು. ಆದುದರಿಂದ ಹಲ್ಲೀಷವೆಂದರೂ ರಾಸವೆಂದರೂ ಒಂದೇ, ಒಂದು ತೆರದ ನೃತ್ಯ.

ಈಗ ಹರಿವಂಶದ ಹೇಳಿಕೆಯನ್ನೆತ್ತುವೆವು :—

ಕೃಷ್ಣಸ್ತು ಯೌವನಂ ದೃಷ್ಟ್ವಾ ನಿಶಿ ಚಂದ್ರಮಸೋ ನವಮ್ ।
ಶಾರದೀಂ ಚ ನಿಶಾಂ ರಮ್ಯಾಂ ಮನಶ್ಚಕ್ರೇ ರತಿಂ ಪ್ರತಿ ॥

ಸ ಕರೀಷಾಂಗರಾಗಾಸು ವ್ರಜರಥ್ಯಾಸು ವೀರ್ಯವಾನ್ ।
ವೃಷಾಣಾಂ ಜಾತದರ್ಪಾಣಾಂ ಯುದ್ಧಾನಿ ಸಮಯೋಜಯತ್ ॥

ಗೋಪಾಲಾಂಶ್ಚ ಬಲೋದಗ್ರಾನ್ ಯೋಧಯಾಮಾಸ ವೀರ್ಯವಾನ್ ।
ವನೇ ಸ ವೀರೋ ಗಾಶ್ಚೈವ ಜಗ್ರಾಹ ಗ್ರಾಹವದ್ವಿಭೂಃ ॥

ಯುವತೀ ಗೋಪಕನ್ಯಾಶ್ಚ ರಾತ್ರೌ ಸಂಕಲ್ಯ ಕಾಲವಿತ್ ।
ಕೈಶೋರಕಂ ಮಾನಯನ್ ವೈ ಸಹತಾಭಿರ್ಮುಮೋದಹ ॥

ತಾಸ್ತಸ್ಯ ವದನಂ ಕಾಂತಂ ಕಾಂತಾ ಗೋಪಸ್ತ್ರೀಯೋ ನಿಶಿ ।
ಪಿಬಂತಿ ನಯನಾಕ್ಷೇಪೈರ್ಗಾಗತಂ ಶಶಿನಂ ಯಥಾ ॥
ಹರಿತಾಲಾರ್ದ್ರಪೀತೇನ ಸಕೌಶೇಯೇನ ವಾಸಸಾ ।
ವಸಾನೋ ಭದ್ರವಸನಂ ಕೃಷ್ಣಃ ಕಾಂತತರೋ ಭವತ್ ॥

ಸಬದ್ಧಾಂಗದ ನಿರ್ಯೂಹಶ್ಚಿತ್ರಯಾ ವನಮಾಲಯಾ ।
ಶೋಭಮಾನೋ ಹಿ ಗೋವಿಂದಶ್ಶೋಭಯಾಮಾಸ ತಂ ವ್ರಜಂ ॥

ನಾಮ ದಾಮೋದರೇತ್ಯೇವಂ ಗೋಪಕನ್ಯಾಸ್ತದಾ ಬ್ರುವನ್ ।
ವಿಚಿತ್ರ ಚರಿತ್ರಂ ಘೋಷೇ ದೃಷ್ಟ್ವಾ ತತ್ತಸ್ಯ ಭಾಸತಃ ॥

ತಾಸ್ತಂ ಪಯೋಧರೋತ್ತುಂಗೈರುರೋಭಿಸ್ಸಮಪೀಡಯನ್ ।
ಭ್ರಾಮಿತಾಕ್ಷೈಶ್ಚ ವದನೈರ್ನಿರೈಕ್ಷಂತ ವರಾಂಗನಾಃ ॥
ತಾವಾರ್ಯಮಾಣಾಃ ಪಿತೃಭಿರ್ಭ್ರಾತೃಭಿರ್ಮಾತೃಭಿಸ್ತಥಾ ।
ಕೃಷ್ಣಂ ಗೋಪಾಂಗನಾ ರಾತ್ರೌ ಮೃಗಯಂತೇ ರತಿಪ್ರಿಯಾಃ ॥
ತಾಸ್ತು ಪಂಕ್ತೀ ಕೃತಾಸ್ಸರ್ವಾ ರಮಯಂತಿ ಮನೋರಮಮ್ ।
ಗಾಯಂತಃ ಕೃಷ್ಣ ಚರಿತಂ ದ್ವಂದ್ವಶೋ ಗೋಪಕನ್ಯಕಾಃ ॥
ಕೃಷ್ಣಲೀಲಾನುಕಾರಿಣ್ಯಃ ಕೃಷ್ಣಪ್ರಣಿಹಿತೇಕ್ಷಣಾಃ ।
ಕೃಷ್ಣಸ್ಯ ಗತಿಗಾಮಿನ್ಯಸ್ತರುಣ್ಯಸ್ತಾ ವರಾಂಗನಾಃ ॥
ವನೇಷು ತಾಲಹಸ್ತಾಗ್ರೈಃ ಕುಟ್ಟಯಂತಸ್ತಥಾಪರಾಃ ।
ಚೇರುರ್ವೈ ಚರಿತಂ ತಸ್ಯ ಕೃಷ್ಣಸ್ಯ ವ್ರಜಯೋಷಿತಃ ॥
ತಾಸ್ತಸ್ಯ ನೃತ್ಯಂ ಗೀತಂ ಚ ವಿಲಾಸಸ್ಮಿತ ವೀಕ್ಷಿತಂ ।
ಮುದಿತಾಶ್ಚಾನುಕುರ್ವಂತ್ಯಃ ಕ್ರೀಡಂತ್ಯೋ ವ್ರಜಯೋಷಿತಃ ॥
ಭಾವನಿಸ್ಯಂದ ಮಧುರಂ ಗಾಯಂತ್ಯಸ್ತಾ ವರಾಂಗನಾಃ ।
ವ್ರಜಂಗತಾಃ ಸುಖಂಚೇರುರ್ದಾಮೋದರ ಪರಾಯಣಾಃ ॥
ಕರೀಷಪಾಂಶು ದಿಗ್ಧಾಂಗಾಸ್ತಾಃ ಕೃಷ್ಣಮನುವವ್ರಿರೆ ।
ರಮಯಂತ್ಯೋ ಯಥಾ ನಾಗಂ ಸಂಪ್ರಮತ್ತಂ ಕರೇಣವಃ ॥
ತಮನ್ಯಾ ಭಾವ ವಿಕಚೈರ್ನೇತ್ರೈಃ ಪ್ರಹಸಿತಾನನಾಃ ।
ಪಿಬನ್ತ್ಯತೃಪ್ತಾವನಿತಾಃ ಕೃಷ್ಣಂ ಕೃಷ್ಣಮೃಗೇಕ್ಷಣಾಃ ॥
ಮುಖಮಸ್ಯಾಬ್ಜ ಸಂಕಾಶಂ ತೃಷಿತಾ ಗೋಪಕನ್ಯಕಾಃ ।
ರತ್ಯಂತರಗತಾರಾತ್ರೌ ಪಿಬಂತಿ ರತಿಲಾಲಸಾಃ ॥
ಹಾಹೇತಿ ಕುರ್ವತಸ್ತಸ್ಯ ಪ್ರಹೃಷ್ಟಾತ್ಮಾ ವರಾಂಗನಾಃ ।
ಜಗೃಹುರ್ನಿಸ್ಸೃತಾಂ ವಾಣೀಂ ಸಾಮ್ನಾ ದಾಮೋದರೇರಿತಾಮ್ ॥
ತಾಸಾಂಗ್ರಥಿತ ಸೀಮಂತಾ ರತಿಶ್ರಾಂತ್ಯಾಕುಲೀಕೃತಾಃ ।
ಚಾರುವಿಸ್ರಂಸಿರೇ ಕೇಶಾಃ ಕುಚಾಗ್ರೇ ಗೋಪಯೋಷಿತಾಮ್ ॥
ಏವಂ ಸಕೃಷ್ಣೋ ಗೋಪಿನಾಂ ಚಕ್ರವಾಳೈರಲಂಕೃತಃ ।
ಶಾರದೀಷು ಸಚಂದ್ರಾಸು ನಿಶಾಸು ಮುಮುದೇ ಸುಖೀ ॥

ಹರಿವಂಶ, ೭೭ನೆಯ ಅಧ್ಯಾಯ

ರಾತ್ರಿಯಲ್ಲಿ ಕೃಷ್ಣನು ಚಂದ್ರಮನ ನವಯೌವ್ವನ (ವಿಕಾಸ)ವನ್ನು ನೋಡಿ ಮತ್ತು ಶಾರದೀಯ ರಮ್ಯವಾದ ನಿಶಿಯನ್ನು ತಿಳಿದು ಕ್ರೀಡೆಗೆ ಮನಸ್ಸುಮಾಡಿದನು. ಒಣಸಗಣಿಯಿಂದ ತುಂಬಿದ ವ್ರಜದ ರಾಜಪಥದಲ್ಲಿ

ಕೊಬ್ಬಿನಿಂದ ಗರ್ವಿತವಾದ ಹೋರಿಗಳನ್ನು ಜಗಳಕ್ಕೆ ಹುರಿಗಟ್ಟುತ್ತಾ ಕೆಲವು ವೇಳೆಗಳಲ್ಲಿ ಬಲಗರ್ವಿತರಾದ ಗೊಲ್ಲರಿಗೆ ಕುಸ್ತಿ ಮಾಡಿಸುತ್ತಲೂ ಮತ್ತು ಮೊಸಳೆಯಂತೆ ಗೋಗಣಗಳನ್ನು ವನಮಧ್ಯದಲ್ಲಿ ಹಿಡಿಯುತ್ತಲೂ ಇದ್ದನು. ಕಾಲಜ್ಞನಾದ ಕೃಷ್ಣನು ತನ್ನ ಕಿಶೋರ ವಯಸ್ಸಿನ ಸನ್ಮಾನಾರ್ಥವಾಗಿ ಯೌವನವತಿಯರಾದ ಗೋಪಕನ್ನಿಕೆಯರಿಗಾಗಿ ಕಾಲವನ್ನು ಗೊತ್ತುಮಾಡಿ ರಾತ್ರಿಯಲ್ಲಿ ಅವರೊಡಗೂಡಿ ಆನಂದಾನುಭವಮಾಡಿದನು. ಆ ಗೋಪ ಸುಂದರಿಯರು ಕಂಗಳನ್ನು ಮೇಲಕ್ಕೆತ್ತಿ ಭೂಮಿಗಿಳಿದ ಚಂದ್ರನನ್ನೊ ಎಂಬಂತೆ ಅವನ ಮುಖಮಂಡಲವನ್ನು ಪಾನಮಾಡಿದರು. ಒಳ್ಳೆಯ ಬಟ್ಟೆ ಗಳನ್ನುಟ್ಟ ಕೃಷ್ಣನು ಅರಿಸಿದ ಬಣ್ಣದ ಪೀತಾಂಬರವನ್ನುಟ್ಟು ಇನ್ನಷ್ಟು ಮನೋಹರನಾದನು. ಬಾಜೂಬಂದಿ, ವಡ್ಯಾಣ ಮುಂತಾದುವುಗಳನ್ನು ತೊಟ್ಟು ವಿಚಿತ್ರವಾದ ವನಮಾಲೆಯನ್ನು ಹಾಕಿಕೊಂಡು ಶೋಭಿಸುತ್ತಾ ಗೋವಿಂದನು ಆ ವ್ರಜವನ್ನು ಶೋಭಾಯಮಾನಮಾಡಿದ್ದನು. ಈ ವಾಚಾ ಳತೆಯ ಕೃಷ್ಣನ ವಿಚಿತ್ರವಾದ ಚರಿತ್ರೆಯನ್ನು ಕಂಡು ದೊಡ್ಡಿಯಲ್ಲಿ ಅವ ನನ್ನು ದಾಮೋದರನೆನ್ನುತ್ತಿದ್ದರು. ಪಯೋಧರಂಗಳ ಕಾರಣಗಳಿಂದ ಹೊರಹೊಮ್ಮಿದ ಹೃದಯದಿಂದ ಅವನನ್ನು ನಿಪೀಡನಮಾಡಿ ಆ ವರನಾರಿ ಯರು ಕಂಗಳನ್ನು ಗರಗರನೆ ತಿರುಗಿಸುತ್ತಾ ಅವನನ್ನು ನೋಡತೊಡಗಿದರು. ಆಟದಲ್ಲಿ ಅನುರಾಗಿಗಳಾದ ಆ ಗೋಪಾಂಗನೆಯರು ತಂದೆ ಅಣ್ಣ ಮತ್ತು ತಾಯಿಯರಿಂದ ಅಡ್ಡಗಿಸಲ್ಪಟ್ಟರೂ ರಾತ್ರಿಯ ಹೊತ್ತಿನಲ್ಲಿ ಕೃಷ್ಣ ನಿದ್ದೆಡೆಗೆ ಸಾರುತ್ತಿದ್ದರು. ಅವರೆಲ್ಲರೂ ಕೂಡಿ ಸಾಲುಗಟ್ಟಿಕೊಂಡು ಮನೋಹರ ವಾಗಿ ಆಟವಾಡುತ್ತಿದ್ದರು. ಮತ್ತು ಜೊತೆಯಾಗಿ ನಿಂದು ಕೃಷ್ಣ ಚರಿತ್ರೆ ಯನ್ನು ಪಾಡಿದರು. ವರಾಂಗಿನೆಯರಾದೀ ತರುಣಿಯರು ಕೃಷ್ಣಲೀಲೆ ಯನ್ನನುಕರಿಸುತ್ತಾ ಕೃಷ್ಣನಲ್ಲಿಡಲ್ಪಟ್ಟ ಕಂಗಳುಳ್ಳವರಾಗಿ ಕೃಷ್ಣನು ಹೋದೆ ಡೆಗೆಲ್ಲಾ ಹೋಗುವವರಾದರು. ಗೋಪಿಯೊರ್ವಳು ಹಸ್ತಾಗ್ರದಿಂದ ತಾಳ ವನ್ನು ತಟ್ಟುತ್ತಾ ಕೃಷ್ಣ ಚರಿತ್ರೆಯನ್ನು ಆಚರಿಸತೊಡಗಿದಳು. ಗೊಲ್ಲ ಯುವತಿಯರು ಕೃಷ್ಣನ ಕುಣಿತನನ್ನೂ, ಹಾಡಿಕೆಯನ್ನೂ, ವಿಲಾಸದ ಎಳೆ ನಗೆಯ ಕಡೆಗಣ್ಣೋಟವನ್ನೂ ಅನುಕರಿಸುತ್ತಾ ಆನಂದದಿಂದ ಕೂಡಿ ಆಟ ವಾಡಿದರು. ಕೃಷ್ಣ ಪರಾಯಣರಾದಾ ವರನಾರಿಯರು ಭಾವದುಂಬಿ

ಮಧುರವಾದ ಗಾನವನ್ನು ಪಾಡುತ್ತಾ ಗೊಲ್ಲದೊಡ್ಡಿಗೆ ಹೋಗಿ ಸುಖದಿಂದ ಅಲೆದಾಡುತ್ತಿದ್ದರು. ಚೆನ್ನಾಗಿ ಮದಿಸಿದಾನೆಯನ್ನು ಹೆಣ್ಣಾನೆಗಳು ಆಟ ವಾಡಿಸುವಂತೆ ಒಣಗೋಮಯದಿಂದು ದಿಗ್ಧಾಂಗರಾದಾ ಗೋಪಿಯರು ಅವ ನನ್ನು ಅನುವರ್ತನಮಾಡಿದರು. ನಗೆಮೊಗದ ಕೃಷ್ಣಸಾರಲೋಚನೆಯರಾದ ಮಿಕ್ಕ ವನಿತೆಯರೆಲ್ಲಾ ಭಾವೋತ್ಫುಲ್ಲನಯನಗಳಿಂದ ತೃಪ್ತಿಯಿಲ್ಲದವರಾಗಿ ಕೃಷ್ಣನ ಮುಖಮಂಡಲವನ್ನು ಪಾನಮಾಡುತ್ತಿದ್ದರು. ಮತ್ತೊಂದು ಕ್ರೀಡೆಯನ್ನೊಲ್ಲದೆ ರಾತ್ರಿಯೆಲ್ಲಾ ಆ ಕ್ರೀಡಾಲಾಲಸೆಗೆ ಬಾಯಾರಿದ ಗೋಪ ಕನ್ಯಕೆಯರು ಆ ಮುಖಕಮಲವನ್ನು ಪಾನಮಾಡಿದರು. ಕೃಷ್ಣನು ಹಾ ಹಾ ಎಂದು ಹಾಡಿದರೆ ಕೃಷ್ಣನ ಬಾಯಿಂದ ಹೊರಟ ವಾಕ್ಯವನ್ನೇ ಆ ವರಾಂಗನೆಯರು ಆಹ್ಲಾದಿತರಾಗಿ ಸ್ವೀಕರಿಸುವರು. ಕ್ರೀಡೆಯಿಂದ ಬಳಲಿ ಬಸವಳಿದ ಆ ಗೋಪಾಂಗನೆಯರ ಸೀಮಂತವಿಟ್ಟು ಕಟ್ಟಿದ್ದ ಮುಡಿಗಳು ಸಡಿಲವಾಗಿ ಕೂದಲುಗಳು ಕುಚಾಗ್ರಗಳ ಮೇಲುರುಳುತಿರಲು ಅವರು ಗಳಿಂದ ಸುತ್ತುವರಿಯಲ್ಪಟ್ಟು ಚಂದ್ರನಿಂದ ಬೆಳಗುತ್ತಿರುವ ಶರದ್ರಾತ್ರಿಗಳಲ್ಲಿ ಕೃಷ್ಣನು ಸಂತೋಷದಿಂದೊಪ್ಪುತ್ತಿದ್ದನು.

ವಿಷ್ಣುಪುರಾಣದ ರಾಸಲೀಲಾ ತತ್ವವನ್ನು ಅನುವಾದಿಸುವಾಗ "ರಮ್" ಧಾತುವಿನಿಂದ ನಿಷ್ಪನ್ನವಾದ ಶಬ್ದಗಳೆಲ್ಲಕ್ಕೂ ಹೇಗೆ ಕ್ರೀಡಾರ್ಥ ದಲ್ಲಿಯೇ ಅರ್ಥವನ್ನು ಮಾಡಿದೆವೋ, ಹಾಗೆಯೇ ಇಲ್ಲಿಯೂ ಅರ್ಥವನ್ನು ಮಾಡಿರುವೆವು. ಮತ್ತೆ ಬೇರೆ ರೀತಿಯಾಗಿ ಅರ್ಥಮಾಡಲಾಗದೆಂದು ಒತ್ತಿ ಹೇಳಲೂ ಬಹುದು. ಹೇಗೆಂದರೆ:—

ತಾಸ್ತುಪಂಕ್ತೀಕೃತಾಃ ಸರ್ವಾ ರಮಯಂತಿ ಮನೋರಮಮ್

ಇಲ್ಲಿ ಆಟವೆಂಬರ್ಥ ವಿನಾ ಬೇರೆ ಮತ್ತಾವರ್ಥದಲ್ಲೂ ರಮಯಂತಿ ಶಬ್ದ ಸಾಗುವುದಿಲ್ಲ. ಬೇರೆ ಬಗೆಯಾಗಿ ಅರ್ಥಮಾಡಿರುವವರು ಪೂರ್ವದಿಂದಲೂ ರೂಢಿಯಾದ ಕುಸಂಸ್ಕಾರಕ್ಕೆ ಸಿಕ್ಕಿಬಿದ್ದು ಹೀಗೆ ಮಾಡಿರಬೇಕು.

ಈ ಹಲ್ಲೀಷ ಕ್ರೀಡಾ ವರ್ಣನೆಯು ವಿಷ್ಣು ಪುರಾಣದಲ್ಲಿನ ರಾಸ ವರ್ಣನೆಯನ್ನು ಅನುಸರಿಸಿರುವದು ಮಾತ್ರವಲ್ಲದೆ ಒಂದೊಂದು ಶ್ಲೋಕವೂ

ಉಭಯ ಗ್ರಂಥಗಳಲ್ಲಿಯೂ ಒಂದೇಯಾಗಿರುವುದು. ಹೇಗೆಂದರೆ ವಿಷ್ಣು ಪುರಾಣದಲ್ಲಿ :—

ತಾವಾರ್ಯಮಾಣಾಃ ಪತಿಭಿರ್ಪಿತೃಭಿರ್ಭ್ರಾತೃಭಿಸ್ತಥಾ ।
ಕೃಷ್ಣಂ ಗೋಪಾಂಗನಾ ರಾತ್ರೌ ಮೃಗಯಂತಿ ರತಿಪ್ರಿಯಾಃ ॥

ಹರಿವಂಶದಲ್ಲಿ :—

ತಾವಾರ್ಯಮಾಣಾಃ ಪಿತೃಭಿರ್ಭ್ರಾತೃಭಿರ್ಮಾತೃಭಿಸ್ತಥಾ ।
ಕೃಷ್ಣಂ ಗೋಪಾಂಗನಾ ರಾತ್ರೌ ರಮಯಂತಿ ಪತಿಪ್ರಿಯಾಃ ॥

ಎಂದಿದೆ.

ಆದರೆ ವಿಷ್ಣು ಪುರಾಣಕ್ಕಿಂತಲೂ ಹರಿವಂಶದವನ ವರ್ಣನೆಯು ಸಂಕ್ಷಿಪ್ತವಾದುದು. ಇತರ ವಿಷಯಗಳಲ್ಲೆಲ್ಲ ಹೀಗೆಯೇ ಎಂದೇನೂ ಕಂಡು ಬರುವುದಿಲ್ಲ. ಇದಕ್ಕೆ ಬದಲು ವಿಷ್ಣುಪುರಾಣದಲ್ಲಿ ಸಂಕ್ಷೇಪವಾಗಿರುವುದು ಹರಿವಂಶದಲ್ಲಿ ಬಡಾಯಿಸಲ್ಪಟ್ಟು ಹಲವು ಬಗೆಯಾದ ಹೊಸ ಹೊಸ ಉಪ ನ್ಯಾಸ ಮತ್ತು ಅಲಂಕಾರಗಳಿಂದ ಬಣ್ಣಗಟ್ಟಿರುವುದು. ಹರಿವಂಶದಲ್ಲಿ ರಾಸಲೀಲೆಯ ವರ್ಣನೆಯು ಹೀಗೆ ಸಂಕ್ಷೇಪವಾಗಿರುವುದಕ್ಕೊಂದು ಕಾರಣವೂ ಉಂಟು. ಎರಡು ಗ್ರಂಥಗಳನ್ನೂ ವಿಸ್ತಾರವಾಗಿ ತೂಗಿ ನೋಡಲು ಕವಿತ್ವ ದಲ್ಲಿಯೂ, ಪಾಂಡಿತ್ಯದಲ್ಲಿಯೂ, ಔದಾರ್ಯದಲ್ಲಿಯೂ ಹರಿವಂಶಕಾರನು ವಿಷ್ಣುಪುರಾಣಕಾರನಿಗಿಂತ ಬಹಳ ಹಗುರನು ಎಂದು ತಿಳಿದುಬರುವುದು. ಇವನು ವಿಷ್ಣುಪುರಾಣದಲ್ಲಿನ ರಾಸವರ್ಣನೆಯ ಗುಟ್ಟರ್ಥವನ್ನು, ಎಂದರೆ ಗೋಪಿಯರು ಮಾಡಿದ ಭಕ್ತಿಯೋಗದ ದ್ವಾರಾ ಕೃಷ್ಣನಲ್ಲಿ ಏಕಾತ್ಮತೆ ಯನ್ನು ಪಡೆದುಕೊಳ್ಳುವುದೆಂಬುದನ್ನು ತಿಳಿಯಲಾರದೆ ಹೋದನು. ಆದುದ ರಿಂದಲೇ ವಿಷ್ಣುಪುರಾಣಕಾರನು :—

ಕಾಚಿತ್ಪ್ರವಿಲಸದ್ಬಾಹುಃ ಪರಿರಭ್ಯಚುಚುಂಬ ತಮ್ ।

ಎಂದು ಬರೆದೆಡೆಯಲ್ಲಿ ಹರಿವಂಶಕಾರನು

ತಾಸ್ತಂ ಪಯೋಧರೋತ್ತಾನೈರುರೋಭಿಃ ಸಮಪೀಡಯನ್ ॥

—ಇತ್ಯಾದಿ ಬರೆದಿರುವನು.

ಇವೆರಡಕ್ಕೂ ಭೇದವು ಸ್ವಲ್ಪವೇ ಆದರೂ ವಿಷ್ಣುಪುರಾಣದ ಚಪಲೆ ಯಾದ ಹುಡುಗಿಯು ಆನಂದದಿಂದ ಚಂಚಲಳು. ಹರಿವಂಶಕಾರನ

ಗೋಪಿಯರಾದರೋ ವಿಲಾಸಿನಿಯರ ಭಾವವನ್ನು ತೋರ್ಪಡಿಸುತ್ತಿರುವರು. ಹಲವೆಡೆಗಳಲ್ಲಿ ಹರಿವಂಶಕಾರನಿಗೆ ವಿಲಾಸದಲ್ಲಿ ಕೊಂಚ ಹೆಚ್ಚಿನ ಪ್ರೀತಿ ಯೆಂದು ಕಂಡುಬರುವುದು.

ಇನ್ನೂ ಇತರ ಮಾತುಗಳು ವಿಷ್ಣುಪುರಾಣದ ರಾಸಲೀಲೆಯ ಸಂಬಂಧ ದಲ್ಲಿ ಹೇಳಿಯುಂಟಷ್ಟೆ! ಅವೆಲ್ಲಾ ಹರಿವಂಶಕಾರನ ಹಲ್ಲೀಷ ಕ್ರೀಡಾ ಸಂಬಂಧವಾಗಿಯೂ ನಡೆಯುವುವು.

ಮೇಲೆ ಎತ್ತಿದ ಶ್ಲೋಕಗಳು ವಿನಾ ಹರಿವಂಶದಲ್ಲಿ ವಜ್ರಗೋಪಿಗಳ ಸಂಬಂಧವಾಗಿ ಮತ್ತೇನೂ ಇಲ್ಲ.

ಸಪ್ತಮ ಪರಿಚ್ಛೇದ

ವ್ರಜಗೋಪಿ (ಭಾಗವತ)

ವಸ್ತ್ರಾಪಹರಣ

ಶ್ರೀಮದ್ಭಾಗವತದಲ್ಲಿ ವ್ರಜಗೋಪಿಯರೊಡನೆ ಕೃಷ್ಣನು ರಾಸಲೀಲೆ ಯಾಡಿದ್ದು ಇಷ್ಟಕ್ಕೇ ಮುಗಿಯಲಿಲ್ಲ. ಭಾಗವತಕಾರನು ಗೋಪಿಯ ರೊಡನೆ ಕೃಷ್ಣಲೀಲೆಯನ್ನು ವಿಶೇಷವಾಗಿ ವಿಸ್ತರಿಸಿರುವನು. ಅದು ಕೆಲವೆಡೆ ಗಳಲ್ಲಿ ಈಗಿನ ರುಚಿಗೆ ವಿರುದ್ಧ. ಆ ವರ್ಣನೆಗಳ ಹೊರಗಣ ದೃಶ್ಯವು ಈಗಿನ ರುಚಿಗರ್ಹಿತವಾದದ್ದಾದರೂ ಒಳಗಿನ ತಿರುಳಲ್ಲಿ ಅತಿ ಪವಿತ್ರವಾದ ಭಕ್ತಿ ತತ್ತ್ವವು ಅಡಗಿರುವದು. ಹರಿವಂಶಕಾರನಂತೆ ಭಾಗವತಕಾರನು ವಿಲಾಸ ಪ್ರಿಯತೆಯಿಂದ ದೂಷಿತನಲ್ಲ. ಅವನ ಅಭಿಪ್ರಾಯವು ಬಹಳ ಗಂಭೀರ ವಾದುದು ಮತ್ತು ಅತಿಶಯ ವಿಶುದ್ಧ.

ದಶಮಸ್ಕಂಧದ ೨೧ನೆಯ ಅಧ್ಯಾಯದಲ್ಲಿ ಮೊಟ್ಟಮೊದಲು ಗೋಪಿ ಯರ ಪೂರ್ವರಾಗವು ವರ್ಣಿಸಿದೆ. ಅವರು ಶ್ರೀಕೃಷ್ಣನ ಪಿಳ್ಳಂಗೋವಿಯ ಶಬ್ದವನ್ನು ಕೇಳಿ ಮೋಹಿತರಾಗಿ ತಮ್ಮ ತಮ್ಮಲ್ಲಿಯೇ ಕೃಷ್ಣನ ಮೇಲೆ ತಮ ಗುಂಟಾದ ಪ್ರೀತಿಯನ್ನು ಹೇಳಿಕೊಳ್ಳುತ್ತಿದ್ದಾರೆ. ಈ ಪೂರ್ವಾನುರಾಗ ವನ್ನು ವರ್ಣಿಸುವುದರಲ್ಲಿ ಕವಿಯು ಅಸಾಧಾರಣ ಸಾಮರ್ಥ್ಯವನ್ನು

ತೋರಿಸಿರುವನು. ಆಮೇಲೆ ಅದನ್ನು ಸ್ಪಷ್ಟಮಾಡಲಿಕ್ಕಾಗಿ ಉಪನ್ಯಾಸ ವೊಂದನ್ನು ತಯಾರಿಸಿರುವನು. ಈ ಉಪನ್ಯಾಸವೇ "ವಸ್ತ್ರಾಹರಣ"ವೆಂದು ಪ್ರಸಿದ್ಧವಾದುದು. ವಸ್ತ್ರಾಹರಣ ವಿಷಯಕವಾದಾವ ಮಾತೂ ಮಹಾ ಭಾರತ, ವಿಷ್ಣುಪುರಾಣ, ಹರಿವಂಶಗಳಲ್ಲಿಲ್ಲ. ಇದು ಭಾಗವತಕಾರನ ಕಲ್ಪನೆ ಯಿಂದುಂಟಾದುದೆಂದು ವಿವೇಚಿಸಬೇಕಾಗಿದೆ. ವೃತ್ತಾಂತವು ಆಧುನಿಕ ರುಚಿಗೆ ವಿರುದ್ಧವಾದುದಾದರೂ ನಾವದನ್ನು ಬಿಡಲಾರದೆ ಇರುವೆವು. ಏಕೆಂದರೆ, ಭಾಗವತದಲ್ಲಿ ಹೇಳಿರುವ ರಾಸಲೀಲೆಯನ್ನು ತಿಳಿಸುವುದರಲ್ಲಿ ನಾವು ಕೈಹಾಕಿರುವೆವು. ಮತ್ತು ಆ ರಾಸಲೀಲೆಯೊಡನೆ ಇದಕ್ಕೆ ವಿಶೇಷ ಸಂಬಂಧವೂ ಇರುವದು.

ಕೃಷ್ಣಾನುರಾಗವಿವಶರಾದ ವ್ರಜಗೋಪಿಯರು ಕೃಷ್ಣನನ್ನು ಪತಿ ಭಾವದಲ್ಲಿ ಪಡೆಯಲೆಳಸಿ ಕಾತ್ಯಾಯನೀ ವ್ರತವನ್ನು ಕೈಗೊಂಡರು. ಈ ವ್ರತವು ಒಂದು ತಿಂಗಳತನಕ ಮಾಡತಕ್ಕದ್ದು. ಈ ಒಂದು ತಿಂಗಳು ಪ್ರತಿ ಪ್ರಾತಃಕಾಲವೂ ಗುಂಪುಕೂಡಿಕೊಂಡು ಅವರು ಯಮುನಾನದಿಯಲ್ಲಿ ಸ್ನಾನ ಮಾಡುತ್ತಿದ್ದರು. ಹೆಂಗಸರು ಸ್ನಾನಮಾಡುವಾಗ ಅದೊಂದು ಕೆಟ್ಟ ಪದ್ಧತಿಯು ಈಗಲೂ ಭಾರತವರ್ಷದ ಹಲವೆಡೆಗಳಲ್ಲಿ ರೂಢಿಯಲ್ಲಿದೆ. ಹೆಂಗಸರು ಸ್ನಾನಮಾಡುವಾಗ ನದೀತೀರದಲ್ಲಿ ಉಡಿಗೆಗಳನ್ನು ಬಿಚ್ಚಿಟ್ಟು ಬೆತ್ತಲೆಯಾಗಿ ನೀರಿನಲ್ಲಿಳಿಯುವರು. ಈ ಪದ್ಧತಿಯಂತೆ ಈ ವ್ರಜಾಂಗನೆ ಯರು ದಡದಮೇಲೆ ಉಡಿಗೆಗಳನ್ನು ಭದ್ರಪಡಿಸಿ ವಿವಸ್ತ್ರರಾಗಿ ಸ್ನಾನ ಮಾಡು ತ್ತಿದ್ದರು. ತಿಂಗಳ ಕೊನೆಗೆ ವ್ರತವು ಮುಗಿಯುವ ದಿನ ಒದಗಲು ಆ ದಿನವೂ ಅವರು ದಿನಚರಿಯಂತೆ ನಡೆಯಿಸಿದರು. ಅವರ ಕರ್ಮಕ್ಕೆ ತಕ್ಕ ಫಲವನ್ನು (ಉಭಯಾರ್ಥದಲ್ಲಿಯೂ) ಕೊಡುವದಕ್ಕಾಗಿ ಅಂದು ಕೃಷ್ಣನು ಅಲ್ಲಿಗೆ ಬಂದನು. ಅಲ್ಲಿ ಬಿಸುಟಿದ್ದ ಉಡಿಗೆಗಳನ್ನು ತೆಗೆದುಕೊಂಡು ಅವನು ದಡದಲ್ಲಿದ್ದ ಕದಂಬಮರದ ಮೇಲಕ್ಕೆ ಹತ್ತಿದನು.

ಗೋಪಿಯರು ಬಹಳ ಸಂಕಟಕ್ಕೆ ಸಿಕ್ಕಿಬಿದ್ದರು. ಬಟ್ಟೆಯಿಲ್ಲದೆ ಮೇಲಕ್ಕೇಳಲಾರದವರಾದರು. ಇತ್ತಕಡೆ ಬೆಳಗಿನ ಛಳಿಗಾಳಿಯಿಂದ ನೀರಿ ನೊಳಗೆ ಪ್ರಾಣಹೋಗುವಂತಿದೆ. ಕಂಠದವರೆಗೂ ನೀರಿನಲ್ಲಿ ಮುಳುಗಿ ಛಳಿಯಿಂದ ಗಡಗಡನೆ ನಡುಗುತ್ತಾ ಕೃಷ್ಣನನ್ನು ಬೇಡಿಕೊಂಡರು. ಕೃಷ್ಣನು

ವಸ್ತ್ರಗಳನ್ನು ಸಹಜವಾಗಿ ಕೊಡಲೊಲ್ಲನು. ಗೋಪಿಯರ ಕೆಲಸಕ್ಕೆ ತಕ್ಕ ಫಲವನ್ನು ಕೊಡಲುಳ್ಳವನಾಗಿದ್ದಾನೆ. ಆಮೇಲೆ ಏನಾಯಿತೆಂಬುದನ್ನು ಹೆಂಗಸರಿಗೂ ಮಕ್ಕಳಿಗೂ ತಿಳಿಯುವಂತಹ ಕನ್ನಡದಲ್ಲಿ ಬರೆಯಲು ಖಂಡಿತ ವಾಗಿಯೂ ನಮ್ಮಿಂದಾಗದು. ಆದುದರಿಂದ ಮೂಲಸಂಸ್ಕೃತವನ್ನೇ ಎತ್ತಿ ದೇವೆ. ವ್ರಜಗೋಪಿಯರು ಕೃಷ್ಣನನ್ನು ಕುರಿತು ಇಂತೆಂದರು :—

ಮಾನಯಂ ಭೋಃ ಕೃಥಾಸ್ತ್ವಾಂ ತು ನಂದಗೋಪಸುತಂ ಪ್ರಿಯಂ ।
ಜಾನೀಮೋಽಂಗವ್ರಜಶ್ಲಾಘ್ಯಂ ದೇಹಿ ವಾಸಾಂಸಿ ವೇಪಿತಾಃ ॥

ಶ್ಯಾಮಸುಂದರ ತೇ ದಾಸ್ಯಃ ಕರವಾಮ ತವೋದಿತಂ ।
ದೇಹಿ ವಾಸಾಂಸಿ ಧರ್ಮಜ್ಞ ನೋ ಚೇದ್ರಾಜ್ಞೇ ಬ್ರುವಾಮಹೇ ॥

ಶ್ರೀ ಭಗವಾನುವಾಚ :—

ಭವತ್ಯೋ ಯದಿಮೇ ದಾಸ್ಯೋ ಮಯೋಕ್ತಂ ವಾ ಕರಿಷ್ಯಥ ।
ಅತ್ರಾಗತ್ಯ ಸ್ವವಾಸಾಂಸಿ ಪ್ರತೀಚ್ಛಂತು ಶುಚಿಸ್ಮಿತಾಃ ॥

ನೋ ಚೇನ್ನಾಹಂ ಪ್ರದಾಸ್ಯೇ ಕಿಂ ಕ್ರುದ್ಧೋ ರಾಜಾ ಕರಿಷ್ಯತಿ ।
ತತೋ ಜಲಾಶಯಾತ್ಸರ್ವಾ ದಾರಿಕಾಃ ಶೀತವೇಪಿತಾಃ ॥

ಪಾಣಿಭ್ಯಾಮ್ ಯೋನಿಂಆಚ್ಛಾದ್ಯ ಪ್ರೋತ್ತೇರುಃ ಶೀತಕರ್ಶಿತಾಃ ।
ಭಗವಾನಾಹತಾ ವೀಕ್ಷ್ಯ ಶುದ್ಧಭಾವಪ್ರಸಾದಿತಃ ॥

ಸ್ಕಂಧೇ ನಿಧಾಯ ವಾಸಾಂಸಿ ಪ್ರೀತಃ ಪ್ರೋವಾಚ ಸಸ್ಮಿತಂ ।
ಯೂಯಂ ವಿವಸ್ತ್ರಾ ಯದಪೋ ಧೃತವ್ರತಾ ವ್ಯಗಾಹತೈ ತತ್ತದು
ದೇವಹೇಳನಂ ॥

ಬದ್ಧ್ವಾಂಜಲಿಂ ಮೂರ್ಧ್ನ್ಯಪನುತ್ತಯೇಽಂಹಸಃ !
ಕೃತ್ವಾನಮೋಽಧೋ ವಸನಂ ಪ್ರಗೃಹ್ಯತಾಂ ॥
ಇತ್ಯಚ್ಯುತೇನಾಭಿಹಿತಾ ವ್ರಜಾಬಲಾ ಮತ್ವಾ ವಿವಸ್ತ್ರಾಪ್ಲವನಂ ವ್ರತಚ್ಯುತಿಮ್ ।
ತತ್ಪೂರ್ತಿ ಕಾಮಾಸ್ತದಶೇಷ ಕರ್ಮಣಾಂ ಸಾಕ್ಷಾತ್ಕೃತಂ ನೇಮು
ರವದ್ಯಮೃಗ್ಯತಃ ॥

ತಾಸ್ತಥಾವನತಾ ದೃಷ್ಟ್ವಾ ಭಗವಾನ್ ದೇವಕೀಸುತಃ ।
ವಾಸಾಂಸಿ ತಾಭ್ಯಃ ಪ್ರಾಯಚ್ಛತ್ ಕರುಣಸ್ತೇನ ತೋಷಿತಃ ॥

ಶ್ರೀಮದ್ಭಾಗವತ, ೧೦ನೆಯ ಸ್ಕಂಧ, ೨೨ನೆಯ ಅಧ್ಯಾಯ

ಇಲ್ಲಿ ಅಂತರ್ನಿಹಿತವಾದ ಭಕ್ತಿತತ್ತ್ವವು ಭಗವಂತನನ್ನು ಭಕ್ತಿಯಿಂದ ಪಡೆಯಲು ಮೂಲಸಾಧನವು ಭಗವಂತನಲ್ಲಿ ಸಮಸ್ತವನ್ನೂ ಅರ್ಪಣ ಮಾಡುವುದೇ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಹೇಳಿರುವುದೇನೆಂದರೆ:—

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ ॥

ಗೋಪಿಯರು ಶ್ರೀಕೃಷ್ಣನಲ್ಲಿ ಸರ್ವಾರ್ಪಣಮಾಡಿದರು. ಹೆಂಗಸರು ಸಮಸ್ತವನ್ನೂ ತ್ಯಾಗಮಾಡಲಾಪರು; ನಾಚಿಕೆಯನ್ನು ಮಾತ್ರ ಬಿಡಲಾರರು. ಧನ, ಧರ್ಮ, ಕರ್ಮ, ಭಾಗ್ಯ ಎಲ್ಲವೂ ಹೋಗುವವು. ಅಷ್ಟಾದರೂ ಹೆಂಗಸರ ನಾಚಿಕೆ ಮಾತ್ರ ಹೋಗುವದಿಲ್ಲ. ನಾಚಿಕೆಯೇ ಹೆಣ್ಣುಗಳ ಅಸಲು ರತ್ನವು. ಹೆಂಗಸು ಆರಿಗೋಸ್ಕರ ಲಜ್ಜೆಯನ್ನೇ ಬಿಡುವಳೋ ಅಂಥವನಿಗೆ ಆಕೆಯು ತನ್ನೆಲ್ಲವನ್ನೂ ಕೊಡುವಳು. ಈ ಹೆಂಗಳು ಶ್ರೀ ಕೃಷ್ಣನಿಗೆ ಲಜ್ಜೆಯನ್ನು ಅರ್ಪಿಸಿದರು. ಇದು ಕಾಮಾತುರರ ಲಜ್ಜಾರ್ಪಣವಲ್ಲ—ನಾಚಿಕೆಗೆ ಸೋತವರ ಲಜ್ಜಾರ್ಪಣೆಯು. ಆದುದರಿಂದಲೇ ಇವರು ಭಗವಂತನಿಗೆ ಸರ್ವಾರ್ಪಣಮಾಡಿದರು. ಕೃಷ್ಣನೂ ಅದನ್ನು ಭಕ್ತಿಯ ಅರ್ಪಣವೆಂತಲೇ ಸ್ವೀಕರಿಸಿದನು. ಅವನು ಹೀಗೆ ಹೇಳಿದನು: "ನನ್ನಲ್ಲಿ ಸಿಕ್ಕಿಸಲ್ಪಟ್ಟ ಬುದ್ಧಿಯುಳ್ಳವರ ಆಶೆಯು ಕಾಮಾರ್ಥಗಳಲ್ಲಿ ಸೇರುವುದಿಲ್ಲ. ಹುರಿದು ಕುಟ್ಟಿದಮೇಲೆ ಆಶೆಯ ಬೀಜವು ಮೊಳೆತೀತೆ?" ಅಂದರೆ, ಕೃಷ್ಣನಲ್ಲಿ ಕಾಮುವನ್ನಿಟ್ಟವರಿಗೆ ಕಾಮುವು ನಿಶ್ಶೇಷವಾಯಿತು. ಇನ್ನೂ ಹೀಗೆಂದನು: "ನೀವು ಮಾಡಿದ ವ್ರತಕ್ಕೆ ಫಲವನ್ನು ನಾನು ರಾತ್ರಿಯಲ್ಲಿ ನಿಮಗೆ ಸಿದ್ಧಿಸುವಂತೆ ಮಾಡುವೆನು."

ಗೋಪಿಯರು ಕೃಷ್ಣನನ್ನು ಪತಿಯಾಗಿ ಪಡೆಯಬೇಕೆಂದೇ ವ್ರತವನ್ನು ಮಾಡಿದ್ದರು. ಕೃಷ್ಣನು ಅವರ ಬಯಕೆಯನ್ನು ನಡೆಯಿಸುವುದಾಗಿ ಒಪ್ಪಿದನಾದುದರಿಂದ ಅವರುಗಳಿಗೆ ಗಂಡನಾದನು. ಅಂದರೆ ಇದು ನೀತಿಗೆ ವಿರೋಧವಾಯಿತು. ಈ ಗೋಪಸ್ತ್ರೀಯರು ಇತರರ ಹೆಂಡತಿಯರು. ಅವರಿಗೆ ಗಂಡನಾಗಿ ಪರದಾರಾಭಿಮರ್ಷಣವನ್ನು ಒಪ್ಪಿಕೊಂಡಂತೆಯಾಯಿತು. ಕೃಷ್ಣನಲ್ಲಿ ಈ ಪಾಪಾರೋಪಣ ಮಾಡುವುದೇಕೆ?

ಇದರ ಉತ್ತರವು ನಮಗೆ ಬಹಳ ಸರಾಗವು. ನಾನು ರಾಶಿ ರಾಶಿಯಾಗಿ ಪ್ರಮಾಣಗಳನ್ನು ತೋರಿಸಿ, ಇವೆಲ್ಲವೂ ಪುರಾಣಕಾರರಿಂದಾದ ಉಪನ್ಯಾಸಗಳಲ್ಲದೆ ಇವುಗಳಲ್ಲಿ ರಾಗಿಯಷ್ಟೂ ನಿಜವಿಲ್ಲವೆಂದು ತಿಳಿಯಪಡಿಸಿರುವೆನು. ಪುರಾಣಕಾರನ ಪಕ್ಷದಲ್ಲಿ ಇದಕ್ಕೆ ಉತ್ತರವು ಅಷ್ಟು ಸಹಜವಲ್ಲ. ಆತನೂ ಪರೀಕ್ಷಿತನ ಪ್ರಶ್ನೆಗೆ ಉತ್ತರವಾಗಿ ಶುಕನ ಬಾಯಿಯಲ್ಲಿ ಉತ್ತರವೊಂದನ್ನಿತ್ತಿರುವನು. ಯಥಾ ಸ್ಥಾನದಲ್ಲಿ ಅದರ ವಿಷಯವನ್ನು ಹೇಳುವೆವು. ಹಿಂದೂ ಭಕ್ತಿತತ್ತ್ವಾನುಸಾರವಾಗಿ ಕೃಷ್ಣನು ಈ ಗೋಪಿಯರ ಪತಿತ್ವವನ್ನೂ ಅವಶ್ಯವಾಗಿ ಸ್ವೀಕರಿಸಬೇಕೆಂದು ನಾವೂ ಹೇಳಬೇಕಾಗಿರುವುದು. ಭಗವದ್ಗೀತೆಯಲ್ಲಿ ತಾನೇ ಹೀಗೆಂದಿರುವನು :—

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ ।

"ಆರು ಆವ ಭಾವದಲ್ಲಿ ಎನ್ನನ್ನು ಭಜಿಸುವರೋ ಅದೇ ಭಾವದಲ್ಲಿ ನಾನವರನ್ನೂ ಅನುಗ್ರಹಿಸುವೆನು." (ಅಂದರೆ ನನ್ನಲ್ಲಿ ವಿಷಯಭೋಗವನ್ನು ಕಾಮಿಸಿದವರಿಗೆ ವಿಷಯಭೋಗವನ್ನೇ ಈಯುವೆನು. ಮೋಕ್ಷವನ್ನು ಅಪೇಕ್ಷಿಸಿದರೆ ಮೋಕ್ಷವನ್ನೇ ಕೊಡುವೆನು.) ದೇವಮಾತೃವಾದ ದಿತಿಯು ಕೃಷ್ಣನನ್ನು (ವಿಷ್ಣುವನ್ನು) ಕುರಿತು ವಿಷ್ಣುಪುರಾಣದಲ್ಲಿ ಹೀಗೆ ಹೇಳಿದಾಳೆ : "ನಾನು ನಿನ್ನನ್ನು ಪುತ್ರಭಾವದಲ್ಲಿ ಬಯಸಿರಲು ನಿನ್ನನ್ನು ಪುತ್ರನನ್ನಾಗಿಯೇ ಪಡೆದೆನು." ಇದೇ ಭಾಗವತದಲ್ಲಿಯೇ ವಸುದೇವ ದೇವಕಿಯರು ಜಗದೀಶ್ವರನನ್ನು ಪುತ್ರನನ್ನಾಗಿ ಆಶಿಸಿದ್ದುದರಿಂದಲೇ ಅವನನ್ನು ಪುತ್ರನನ್ನಾಗಿ ಪಡೆದರು ಎಂದು ಹೇಳಿದೆ. ಗೋಪಿಯರು ಅವನು ಪತಿಯಾಗಲು ಅವಶ್ಯವಾದ ಸಾಧನೆಗಳನ್ನು ಮಾಡಿದ್ದರಿಂದಲೇ ಕೃಷ್ಣನನ್ನು ಪತಿಯನ್ನಾಗಿ ಪಡೆದರು.

ಒಂದು ವೇಳೆ ಹೀಗಾದುದರಿಂದ ಅವರಲ್ಲಿ ಅಧರ್ಮವೆಲ್ಲಿಯದು. ಭಗವಂತನನ್ನು ಪಡೆದುದರಲ್ಲಿ ಪಾಪವೆಂಥದು. ಪುಣ್ಯಮಯನಾದ, ಪುಣ್ಯಕ್ಕೆಲ್ಲಾ ಮೂಲ ಭೂತಸ್ವರೂಪನಾದ, ಜಗದೀಶ್ವರನನ್ನು ಪಾಪದಿಂದ ಪಡೆಯಲಾದೀತೆ? ಪಾಪ ಪುಣ್ಯಗಳಾವುವು? ಯಾವುದರ ಮೂಲಕ ಜಗದೀಶ್ವರನ ಸಾನ್ನಿಧ್ಯವನ್ನು ಹೊಂದಬಹುದೋ ಅದೇ ಪುಣ್ಯ—ಅದೇ

ಧರ್ಮ; ಇದಕ್ಕೆ ವ್ಯತಿರಿಕ್ತವಾದುದಾವುದೋ ಅದೇ ಪಾಪ—ಅದೇ ಅಧರ್ಮ.

ಪುರಾಣಕಾರನು ಈ ತತ್ತ್ವವನ್ನು ವಿಶದಪಡಿಸಲೋಸುಗ ಪಾಪ ಸಂಸ್ಪರ್ಶಕ್ಕೆ ದಾರಿಯೊಂದನ್ನೂ ಬಿಟ್ಟಿಲ್ಲ. ಅವನು ೨೯ನೆಯ ಅಧ್ಯಾಯದಲ್ಲಿ ಹೀಗೆ ಹೇಳಿದಾನೆ: ಪತಿಭಾವದಲ್ಲಿ ಬಯಸದೆ ಉಪಪತಿಭಾವದಲ್ಲಿ ಕೃಷ್ಣನನ್ನು ಬಯಸಿದವರು ಅವನನ್ನು ಸಶರೀರದಲ್ಲಿ ಪಡೆಯಲಿಲ್ಲ. ಅವರ ಗಂಡಂದಿರು ಅವರನ್ನು ಕೃಷ್ಣನಲ್ಲಿಗೆ ಬರಗೊಡಲಿಲ್ಲ; ಕೃಷ್ಣನ ಚಿಂತೆಯಲ್ಲಿ ಅವರು ಪ್ರಾಣವನ್ನು ತ್ಯಜಿಸಿದರು.

ತಮೇವ ಪರಮಾತ್ಮನಮ್ ಜಾರಬುದ್ಧ್ಯಾಽಪಿ ಸಂಗತಾಃ ।
ಜಹುರ್ಗುಣಮಯಂ ದೇಹಂ ಸದ್ಯಃ ಪ್ರಕ್ಷೀಣಬಂಧನಾಃ ॥

೧೦ । ೨೯ । ೧೦ ॥

ಕೃಷ್ಣನನ್ನಲ್ಲದೆ ಅನ್ಯಪತಿಯು ಸ್ಮರಣೆಯಲ್ಲಿ ಇದ್ದಷ್ಟಕ್ಕೇನೇ ಕೃಷ್ಣನನ್ನು ಉಪಪತಿಯೆಂದು ಭಾವಿಸಿದಂತಾಯಿತು. ಅನ್ಯಪತಿಯು ನೆನಪು ಉಳಿದಿರಲು ಕೃಷ್ಣನಲ್ಲಿ ಅನನ್ಯಚಿಂತನೆಯೆಂತಾದೀತು? ಆದುದರಿಂದ ಅವರು ಸಿದ್ಧರಲ್ಲ ಅಥವಾ ಭಗವತ್ಪ್ರಾಪ್ತಿಗೆ ಅಧಿಕಾರಿಗಳಾಗಲಿಲ್ಲ. ಜಾರಬುದ್ಧಿಯಿರುವವರೆಗೂ ಕೃಷ್ಣನಲ್ಲಿ ಈಶ್ವರ ಜ್ಞಾನವುಂಟಾಗುವುದಿಲ್ಲ—ಕೃಷ್ಣನ ಮೇಲಿನ ಬಯಕೆಯು ಅದುವರೆಗೂ ಬರಿಯಾಸೆಯ ಬಯಕೆ. ಇಂಥಾ ಗೋಪಿಯು ಕೃಷ್ಣಪರಾಯಣಳಾದರೂ ಸಶರೀರವಾಗಿ ಕೃಷ್ಣನನ್ನು ಪಡೆಯಲು ಅಯೋಗ್ಯಳು.

ಹೀಗಾದುದರಿಂದಲೇ ಪತಿಭಾವದಲ್ಲಿ ಜಗದೀಶ್ವರನನ್ನು ಪಡೆಯುವ ಬಯಕೆಯಲ್ಲಿ ಗೋಪಿಯರಿಗೆ ಪಾಪಲೇಶವೂ ಇರಲಿಲ್ಲ. ಗೋಪಿಯರಿಗೆ ಇಲ್ಲದಿರಬಹುದು ಕೃಷ್ಣನಿಗಾದರೋ? ಇದಕ್ಕುತ್ತರವಾಗಿ ವಿಷ್ಣುಪುರಾಣಕಾರನು ಹೇಳಿರುವುದನ್ನೇ ಭಾಗವತಕಾರನೂ ಹೇಳಿರುವನು. ಭಗವಂತನಿಗೆ ಪಾಪ ಪುಣ್ಯಗಳೆಂದರೇನು? ಅವನು ನಮ್ಮಂತೆ ಶರೀರಿಯಲ್ಲ, ಶರೀರಿಗಲ್ಲದೆ ಇಂದ್ರಿಯಪರತೆ ಅಥವಾ ಅದರಿಂದುಂಟಾದ ದೋಷ ಘಟಿಸದು. ಅವನು ಸರ್ವಭೂತಗಳಲ್ಲಿಯೂ ಇರುವನು, ಗೋಪಿಯರಲ್ಲಿಯೂ ಇರು

ಇರುವನು, ಗೋಪಿಯರ ಪತಿಯರಲ್ಲಿಯೂ ಇರುವನು. ಅವನ ಮೂಲಕ ಪರದಾರಾಭಿಮರ್ಷಣವು ಉಂಟಾಗದು.

ಇದಕ್ಕೆ ನಮ್ಮದೊಂದು ಆಕ್ಷೇಪಣೆಯುಂಟು. ಈಶ್ವರನು ಈಗ ಶರೀರಿಯು ಮತ್ತು ಇಂದ್ರಿಯ ವಿಶಿಷ್ಟನು. ಈಶ್ವರನು ತನ್ನ ಇಷ್ಟಾನುಸಾರ ವಾಗಿಯೇ ಶರೀರವನ್ನು ಧರಿಸಿದನು. ಮಾನವಧರ್ಮಿಯ ದೃಷ್ಟಿಯಿಂದ ನೋಡಿದರೆ ಗೋಪಿಯರು ಪರಸ್ತ್ರೀಯರು ಮತ್ತು ಅವರ ಅಭಿಗಮನ ಪಾರದಾರಿಕ ಪಾಪ. ಲೋಕಶಿಕ್ಷಣಾರ್ಥವಾಗಿಯೇ ತಾನು ಕೆಲಸ ಮಾಡು ತ್ತಿರುವೆನೆಂದು ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿರುವನು. ಲೋಕ ಶಿಕ್ಷಕನು ಪಾರದಾರಿಕನಾದರೆ ಅವನು ಪಾಪಾಚಾರಿಯೂ ಪಾಪವನ್ನು ಕಲಿ ಸುವವನೂ ಆದನು. ಆದುದರಿಂದ ಪುರಾಣಕಾರನಿಂದ ಆದ ದೋಷಕ್ಷಾಳ ನವು ನಡೆಯದು. ಹೀಗೆ ದೋಷವನ್ನು ತೊಡೆದುದರಿಂದ ಪ್ರಯೋಜನ ವೇನೂ ಇರದು. ಭಾಗವತಕಾರನು ತಾನಾಗಿಯೇ ಕೃಷ್ಣನು ಈ ರಾಸ ಮಂಡಲ ಮಧ್ಯದಲ್ಲಿ ಜಿತೇಂದ್ರಿಯನೆಂದು ಪರಿಚಯಮಾಡಿಸಿದ್ದಾನೆ. ಹೇಗೆಂದರೆ:—

> ಏವಂ ಶಶಾಂಕಾಂಶುವಿರಾಜಿತಾ ನಿಶಾಃ ಸಸತ್ಯಕಾಮೋಽನುರತಾಬಲಾಗಣಃ ।
> ಸಿಷೇವ ಆತ್ಮನ್ಯವರುದ್ಧಸೌರತಃ ಸರ್ವಾಃ ಶರತ್ಕಾವ್ಯ ಕಥಾ ರಸಾಶ್ರಯಾಃ ॥
> —ಶ್ರೀಮದ್ಭಾಗವತ, ೧೦ನೆಯ ಸ್ಕಂಧ, ೩೩ನೆಯ ಅಧ್ಯಾಯ, ೨೬ನೆಯ ಶ್ಲೋಕ

ಆದರೆ ವಿಷ್ಣುಪುರಾಣಕಾರನಿಗಿಂತ ಭಾಗವತಕಾರನು ತೂಕದಲ್ಲಿ ಹೆಚ್ಚಿನವನು, ಮತ್ತು ಭಕ್ತಿತತ್ತ್ವದ ತಳವನ್ನು ಶೋಧಿಸುವುದರಲ್ಲಿ ಬಹಳ ಶ್ರೇಷ್ಠನು. ಹೆಣ್ಣು ಜಾತಿ ಜಗತ್ತಿನಲ್ಲಿ ಗಂಡನನ್ನೇ ಪ್ರಿಯತಮ ವಸ್ತುವೆಂದು ತಿಳಿದಿರುವುದು. ಜಗದೀಶ್ವರನಲ್ಲಿ ಪರಮ ಭಕ್ತಳಾದವಳು ಅವನನ್ನು ಪತಿ ಭಾವದಲ್ಲಿ ಪಡೆಯಲು ಬಯಸಿದರೆ--ಇಂಗ್ಲೀಷನ್ನು ಓದಿದ ನಾವು ಬೇಕಾ ದುದನ್ನು ಅಂದರೂ—ಮಾತು ಬಹಳ ರಮಣೀಯವೇನೋ ಹೌದು! ಇದರಲ್ಲಿ ಮಾನವ ಹೃದಯದ ಒಳಗುಟ್ಟಿನ ಪರಿಚಯವೂ ಮತ್ತು ಭಗವ ದ್ಭಕ್ತಿಯ ಸೌಂದರ್ಯದ ಬಿಗಿಯೂ ಬಹುಮಟ್ಟಿಗೆ ಕಂಡುಬರುವುದು. "ಆಮೇಲೆ ಆವಳು ಅವನನ್ನು ಪತಿಭಾವದಲ್ಲಿ ನೋಡಿದಳೋ ಅವಳೇ ಅವನನ್ನು ಪಡೆದಳು. ಆವಳಿಗೆ ಜಾರಬುದ್ಧಿಯಿದ್ದಿತೋ ಆವಳಿಗೆ ಅವನು

ಸಿಗಲಿಲ್ಲ.” ಈ ಮಾತಿನಲ್ಲಿಯೂ ಭಕ್ತಿಯ ಗುರಿ ಅನನ್ಯ ಎಂದು ತೋರಿಸಲು ಎಷ್ಟು ಸುಂದರವಾದ ಉದಾಹರಣೆ! ಆದರೆ ಪುರಾಣಕಾರನು ಬೇರೆ ಒಂದು ಮಾತಿನಿಂದ ಸಿಕ್ಕನ್ನು ತಂದುಹಾಕಿದಾನೆ. ಗಂಡನೆಂದರೆ ಅವನೊಡನೆ ಇಂದ್ರಿಯ ಸಂಬಂಧವು ಒಂದುಂಟಷ್ಟೆ. ಕಾರ್ಯತಃ ಬಾರಿ ಬಾರಿಗೂ ಆ ಇಂದ್ರಿಯ ಸಂಬಂಧವು ರಾಸವರ್ಣನೆಯೊಳಗೆ ಬೆರೆತಿರುವುದು. ಭಾಗವತೋಕ್ತ ರಾಸವು ವಿಷ್ಣುಪುರಾಣ ಮತ್ತು ಹರಿವಂಶಗಳಂತೆ ಬರಿ ಕುಣಿತ ಪಾಡಿಕೆಗಳಲ್ಲ. ಕೈಲಾಸಶಿಖರದಲ್ಲಿ ತಪಸ್ಸು ಮಾಡುವ ಜಟಾಧಾರಿಯ ರೋಷಾನಲದಲ್ಲಿ ಬೆಂದು ಬೂದಿಯಾದ ಅನಂಗನು ಬೃಂದಾವನದಲ್ಲಿ ಕಿಶೋರ ರಾಸವಿಹಾರಿಯ ಪದಾಶ್ರಯದಲ್ಲಿ ಬದುಕುವುದಕ್ಕೆ ಹೊಗೆಯಾಡುತ್ತಿರುವನು. ಪುರಾಣಕಾರನ ಅಭಿಪ್ರಾಯವು ಕದರ್ಯವಲ್ಲ. ಈಶ್ವರನನ್ನು ಪಡೆದು ಮುಕ್ತವಾದ ಜೀವದ ಆನಂದವನ್ನು, “ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್” ಎಂಬ ವಾಕ್ಯವನ್ನು ನೆನೆದು ಅದನ್ನೇ ಬಿಚ್ಚಿ ಹೇಳಲು ಯತ್ನಮಾಡಿದಾನೆ. ಆದರೆ ಜನಗಳು ಅದನ್ನು ಅರಿಯಲಿಲ್ಲ. ಅವನು ಹುಟ್ಟಹಾಕಿದ ಭಗವದ್ಭಕ್ತಿ ಪದ್ಮದ ಬಳ್ಳಿಯ ಬೇರು ತಳಸಿಗದ ನೀರಿನಲ್ಲಿ ಮುಳುಗಿಕೊಂಡಿತು. ಮೇಲೆಯೇ ಅರಳಿದ ಕಾಮಕುಸುಮದ ಕಾಂತಿಯು ಮಿನುಗುಗೊಂಡಿತು. ಮೇಲೆ ಮೇಲೆಯೇ ತೇಲಾಡುವವರು, ಆ ಕುಸುಮದ ಕಾಂತಿಯ ಮಾಲೆಯನ್ನು ಕಟ್ಟಿ ಇಂದ್ರಿಯಪರತಾಮಯವಾದ ವೈಷ್ಣವ ಧರ್ಮವನ್ನು ತಯಾರಿಸಿದರು. ಭಾಗವತದಲ್ಲಿನ ಭಕ್ತಿತತ್ತ್ವದ ಆಳವಾದ ಗುಟ್ಟು ಅದೇ ಜಯದೇವ ಗೋಸ್ವಾಮಿಯ ಕೈಯಲ್ಲಿ ಮದನಧರ್ಮೋತ್ಸವವಾಯಿತು. ಇಷ್ಟುಕಾಲದ ತನಕ ನಮ್ಮ ಜನ್ಮಭೂಮಿಯು ಅದೇ ಮದನಧರ್ಮೋತ್ಸವದ ಬಲು ಹೊರೆಯಿಂದ ಕುಗ್ಗಿ ಹೋಗಿದೆ. ಆದುದರಿಂದಲೇ ಕೃಷ್ಣ ಚರಿತ್ರೆಗೆ ಹೊಸ ವ್ಯಾಖ್ಯಾನವು ಪ್ರಯೋಜನವಾಗಿರುವುದು. ಕೃಷ್ಣ ಚರಿತ್ರೆಯು ಪರಿಶುದ್ಧತೆಯಲ್ಲಿ ಸರ್ವಗುಣಮಯತ್ವದಲ್ಲಿ ಪ್ರಪಂಚದಲ್ಲಿ ಸಾಟಿಯಿಲ್ಲದುದು. ನನ್ನಂತಹ ಅಶಕ್ತನಾದ ಅಧಮನು ಈ ಪವಿತ್ರ ಚರಿತ್ರೆಯನ್ನು ಪಾಡಿದರೂ ಜನಗಳು ಕೇಳುವರೆಂದೇ ಈ ಹೊಸ ಪರಿಯ ಕೃಷ್ಣಗೀತೆಯನ್ನು ರಚಿಸಲು ಸಾಹಸಗೊಂಡೆನು.

ಅಷ್ಟಮ ಪರಿಚ್ಛೇದ

ವ್ರಜಗೋಪಿ (ಭಾಗವತ)

ಬ್ರಾಹ್ಮಣ ಕನ್ನೆಯರು

ವಸ್ತ್ರಾಹರಣದ ಗುಟ್ಟಿನ ವಿಷಯದಲ್ಲಿ ಇನ್ನೊಂದು ಮಾತನ್ನು ಹೇಳುವುದುಳಿದಿದೆ:—

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥

ಈ ವ್ಯಾಕ್ಯವನ್ನನುಸರಿಸಿ ಜಗದೀಶ್ವರನಿಗೆ ಸರ್ವಸಮರ್ಪಣೆಯನ್ನು ಮಾಡಬಲ್ಲವರಿಗೆ ತಾನೇ ಈಶ್ವರನನ್ನು ಪಡೆದುಕೊಳ್ಳುವ ಅಧಿಕಾರ. ವಸ್ತ್ರಹರಣಕಾಲದಲ್ಲಿ ವ್ರಜಗೋಪಿಯರು ಶ್ರೀ ಕೃಷ್ಣನಲ್ಲಿ ಸರ್ವ ಸಮರ್ಪಣೆಯನ್ನು ಮಾಡುವ ಸಾಮರ್ಥ್ಯವನ್ನು ತೋರಿಸಿದ ಕಾರಣ ಅವರು ಕೃಷ್ಣನನ್ನು ಪಡೆದುಕೊಳ್ಳಲು ಅಧಿಕಾರಿಗಳಾದರು. ಭಾಗವತಕಾರನು ಮತ್ತೊಂದು ಉಪನ್ಯಾಸವನ್ನು ರಚಿಸಿ ಈ ತತ್ತ್ವವು ಇನ್ನೂ ಪರಿಷ್ಕಾರವಾಗಿ ತಿಳಿಯುವಂತೆ ಮಾಡಿರುವನು. ಹೇಗೆಂದರೆ:—

ಕಾಡಿನಲ್ಲಿ ಒಂದು ದಿನ ಹಸುಗಳನ್ನು ಮೇಯಿಸುತ್ತಿರುವಾಗ ಗೊಲ್ಲರು ಬಹಳ ಹಸಿವಿನಿಂದ ಬಳಲಿ ತಿಂಡಿಯನ್ನು ಹವಣಿಸಲು ಶ್ರೀ ಕೃಷ್ಣನನ್ನು ಬೇಡಿಕೊಂಡರು. ಸ್ವಲ್ಪ ದೂರಪ್ರದೇಶದಲ್ಲಿ ವಿಪ್ರೋತ್ತಮರು ಯಜ್ಞವನ್ನು ಮಾಡುತ್ತಿರಲು, ಕೃಷ್ಣನು ಗೊಲ್ಲರನ್ನು ಕುರಿತು—ಯಾಗಶಾಲೆಗೆ ಹೋಗಿ ತನ್ನ ಹೆಸರನ್ನು ಹೇಳಿ ಅನ್ನವನ್ನು ಬೇಡಿರೆಂದು ಹೇಳದನು. ಗೊಲ್ಲರು ಹೋಗಿ ಬೇಡಲು ಬ್ರಾಹ್ಮಣರು ಇವರಿಗೆ ಅನ್ನವನ್ನು ನೀಡುವುದಂತಿರಲಿ ಆ ಸ್ಥಳದಿಂದಾಚೆಗೆ ದಬ್ಬಿಬಿಟ್ಟರು. ಗೊಲ್ಲರು ಹಿಂದಿರುಗಿ ಕೃಷ್ಣನ ಬಳಿಗೆ ಬಂದು ಸಂಗತಿ ಎಲ್ಲವನ್ನೂ ತಿಳಿಸಿದರು. ಆಗ ಕೃಷ್ಣನು "ನೀವು ಇನ್ನೊಂದು ಸಲ ಯಜ್ಞಶಾಲೆ ಎಡೆಗೆ ಹೋಗಿ ಅಲ್ಲಿಯ ಮನೆಗಳಲ್ಲಿರುವ ಬ್ರಾಹ್ಮಣ ಕನ್ನೆಯರನ್ನು ಕಂಡು ನನ್ನ ಹೆಸರನ್ನು ಹೇಳಿ ಅನ್ನವನ್ನು ಬೇಡಿ" ಎಂದು ಹೇಳಿದನು. ಅವರು ಅದರಂತೆಯೇ ಮಾಡಿದರು. ಬ್ರಾಹ್ಮಣ ಕನ್ನೆಯರು ಕೃಷ್ಣನ ಹೆಸರನ್ನು ಕೇಳಿ ಗೊಲ್ಲರಿಗೆಲ್ಲಾ ಯಥೇಚ್ಛವಾಗಿ ಭೋಜನವನ್ನು ಮಾಡಿಸಿದರು. ಕೃಷ್ಣನು ಸಮೀಪದಲ್ಲಿಯೇ ಇರುವನೆಂಬುದನ್ನು ತಿಳಿದು ಅವನ ದರ್ಶನವನ್ನು ಬಯಸಿ ಅವರೆಲ್ಲರೂ ಕೃಷ್ಣನ ಬಳಿಗೆ ಬಂದರು. ಏಕೆಂದರೆ ಕೃಷ್ಣನು ದೇವರೆಂದವರು ತಿಳಿದಿದ್ದರು. ಬಳಿಕ ಕೃಷ್ಣನು ಬ್ರಾಹ್ಮಣ ಕನ್ನೆಯರನ್ನು ಕುರಿತು ನಿಮ್ಮ ನಿಮ್ಮ ಮನೆಗಳಿಗೆ ಹೋಗಬಹುದೆಂಬ ಅನುಮತಿಯನ್ನು ಕೊಡಲು ಅವರು "ನಾವು ತಮ್ಮ ಭಕ್ತರು; ತಾಯಿ ತಂದೆ, ಮಕ್ಕಳು ಮುಂತಾದವರನ್ನೆಲ್ಲ ಬಿಟ್ಟುಬಂದಿರುವೆವು. ಇನ್ನು

ಅವರು ನಮ್ಮನ್ನು ಮನೆಗೆ ಸೇರಿಸರು. ನಾವು ನಿಮ್ಮಡಿಗಳಲ್ಲಿ ಬಿದ್ದಿರುವೆವು. ನಮ ಗನ್ಯಗತಿಯನ್ನು ವಿಧಿಸಬೇಕು" ಎಂದು ಬೇಡಿಕೊಳ್ಳಲು ಕೃಷ್ಣನಿಂತೆಂದನು; ನೋಡಿ, ಅಂಗಸಂಗ ಮಾತ ವೇ ಅನುರಾಗಕ್ಕೆ ಕಾರಣವಲ್ಲ, ನೀವು ನನ್ನನ್ನು ಮನಸ್ಸಿನಲ್ಲಿಡುವು ದಾದರೆ ಬೇಗನೆ ನನ್ನನ್ನು ಪಡೆಯುವಿರಿ, ಶ್ರವಣ ದರ್ಶನ ಧ್ಯಾನ್ಯ ಕೀರ್ತನಗಳಿಂದ ನನ್ನನ್ನು ಪಡೆಯಬಹುದೇ ಹೊರತು ಅಂಗಸಂಗವೊಂದು ಮಾತ್ರವೇ ಆಗುವುದಿಲ್ಲ ವೆಂದು ಹೇಳಲು ಅವರು ಹಿಂದಿರುಗಿ ಹೋದರು.

ಏನನ್ನು ಮಾಡಿ ಈ ಬ್ರಾಹ್ಮಣ ಹುಡುಗಿಯರು ಕೃಷ್ಣನನ್ನು ಪಡೆಯಹೋದರು? ತಂದೆತಾಯಿ ಮುಂತಾದ ಸ್ವಜನಗಳನ್ನು ಬಿಟ್ಟುಬಂದಿದ್ದರು. ಕುಲಟಿ (ರಂಡೆ) ಯರೂ ಸಾಮಾನ್ಯವಾಗಿ ಇಂತಹ ತ್ಯಾಗವನ್ನೇ ಮಾಡಿ ಜಾರನನ್ನು ಹಿಂಬಾಲಿಸುವು ದುಂಟು. ಭಗವಂತನಲ್ಲಿ ಸರ್ವಸ್ವಾರ್ಪಣವು ಅವರಿಂದಾಗದೆ ಹೋಯಿತು. ಸಿದ್ಧ ರಾಗಲು ಇವರು ಅಧಿಕಾರಿಗಳಾಗಲಿಲ್ಲ. ಆದುದರಿಂದ ಸಿದ್ಧರಾಗಲು ಮೊದಲನೆಯ ಮೆಟ್ಟಲಾದ ಶ್ರವಣ ಮನನ ನಿದಿಧ್ಯಾಸನಾದಿ ವಿಷಯಕವಾಗಿ ಉಪದೇಶವನ್ನು ಕೊಟ್ಟು ಬ್ರಾಹ್ಮಣ ಕನ್ನೆಯರನ್ನು ನಿರಾಕರಿಸಿದನು. ಪವಿತ್ರವಾದ ಬ್ರಾಹ್ಮಣ ಕುಲ ದಲ್ಲಿ ಹುಟ್ಟಿದರೂ ಸಾಧನಾಭಾವದಿಂದ ಯಾವುದನ್ನು ಪಡೆಯುವುದಕ್ಕಾಗಲಿಲ್ಲವೋ ಅಂಥಾದ್ದು ಸಾಧನ ಪ್ರಭಾವದಿಂದ ಗೊಲ್ಲತಿಯರಿಗೆ ದೊರಕಿತು. ಪೂರ್ವರಾಗವನ್ನು ವರ್ಣಿಸಿರುವೆಡೆಯಲ್ಲಿ ಭಾಗವತಕಾರನು ಗೋಪಕನ್ಯೆಯರ ಶ್ರವಣ ಮನನ ನಿದಿಧ್ಯಾಸನ ಗಳನ್ನು ಸವಿಸ್ತಾರವಾಗಿ ತಿಳಿಸಿರುತ್ತಾನೆ.

ಈಗ ಪ್ರಖ್ಯಾತವಾದ ರಾಸಪಂಚಾಧ್ಯಾಯಕ್ಕೆ ತಲುಪಿದೆವು. ಆದರೆ ಈ ರಾಸಲೀಲೆಯ ತತ್ತ್ವವನ್ನು ವಸ್ತ್ರಾಹರಣ ವಿಷಯವನ್ನು ಕುರಿತು ಹೇಳು ವಾಗಲೇ ವಿಸ್ತರಿಸಿ ವಿವರಿಸಿರಲು, ಈಗ ಈ ರಾಸಪಂಚಾಧ್ಯಾಯದ ಮಾತನ್ನು ಅತಿಸಂಕ್ಷೇಪವಾಗಿ ಹೇಳಿದರೆ ಸಾಕು.

ನವಮ ಪರಿಚ್ಛೇದ

ವ್ರಜಗೋಪಿ (ಭಾಗವತ)

ರಾಸಲೀಲೆ

ಭಾಗವತ ದಶಮಸ್ಕಂಧದಲ್ಲಿನ ೨೯, ೩೦, ೩೧, ೩೨ ಮತ್ತು ೩೩ ಈ ಐದು ಅಧ್ಯಾಯಗಳು ರಾಸಪಂಚಾಧ್ಯಾಯಗಳು. ಮೊದಲನೆಯದಾದ ೨೯ನೆಯ ಅಧ್ಯಾಯದಲ್ಲಿ—ಶರತ್ತಿನ ಹುಣ್ಣಿಮೆ ರಾತ್ರಿಯಲ್ಲಿ ಶ್ರೀ ಕೃಷ್ಣನು ಮಧುರ ವೇಣುವನ್ನು ನುಡಿಸಿದನು. ವಿಷ್ಣುಪುರಾಣದಲ್ಲಿ ಅವನು 'ಕಲಪದ' ಎಂದರೆ ಅಸ್ಫುಟವಾದ ಮುದ್ದು ಪದಗಳಿಂದ ಕೂಡಿದ ಗೀತ

(ಸಂಗೀತ)ವನ್ನು ಮಾಡಿದನೆಂದು ಹೇಳಿರುವುದು ವಾಚಕರ ಜ್ಞಾಪಕದಲ್ಲಿರಬಹುದು. ಭಾಗವತಕಾರನೂ ಅದೇ ಕಲಪದವನ್ನಿಟ್ಟಿರುವನು. 'ಜಗೌ ಕಲವ್ಮ್.' ಟೀಕಾಕಾರನಾದ ವಿಶ್ವನಾಥನು ಈ ಕಲಶಬ್ದದಿಂದ ಕೃಷ್ಣಮಂತ್ರದ ಬೀಜಾಕ್ಷರವಾದ 'ಕ್ಲೀವ್' ಶಬ್ದವನ್ನು ನಿಷ್ಪತ್ತಿಮಾಡಿ ಈ ಗೀತಕ್ಕೆ 'ಕಾಮಗೀತೆ' ಎಂದು ಹೇಳಿರುವನು. ಟೀಕಾಕಾರರ ಮಹಿಮೆಯು ಅಪಾರವಾದುದು! ಪುರಾಣಕಾರನೂ ಇದಕ್ಕೆ ಅನಂಗವರ್ಧನವೆಂದು ಹೇಳಿರುವನು.

ಕೊಳಲನ್ನು ಕೇಳಿ ಗೋಪಾಂಗನೆಯರು ಕೃಷ್ಣದರ್ಶನಾರ್ಥವಾಗಿ ಓಡಿಬಂದರು. ಪುರಾಣಕಾರನು ವರ್ಣಿಸಿರುವ ಅವರ ಆತುರ ವಿಭ್ರಮಗಳನ್ನು ಓದಿದರೆ ಕಾಳಿದಾಸನ ಪುರಸ್ತ್ರೀಯರ ವರ್ಣನೆಯು ಜ್ಞಾಪಕಕ್ಕೆ ಬರುವುದು.

ಗೋಪಿಯರು ಬಂದ ಬಳಿಕ ಕೃಷ್ಣನು ಏನೇನೂ ಅರಿಯದವನಂತೆ ಮಾತನಾಡತೊಡಗಿದನು. "ಇದೇನು, ಎಲ್ಲವೂ ಮಂಗಳವೇ ತಾನೆ? ನಿಮಗೆ ನಾನಾವ ಪ್ರಿಯವನ್ನು ಮಾಡಿಯೇನು? ಮನೆಯಲ್ಲೆಲ್ಲರೂ ಕುಶಲರಷ್ಟೆ? ನೀವೀಗ ಇಲ್ಲಿಗೆ ಬಂದುದೇನು?" ಎಂದ ಬಳಿಕ, "ಈ ರಾತ್ರಿಯು ಘೋರವಾದುದು, ಭೀಷಣವಾದ ಮೃಗಗಳಿಗೆಲ್ಲಾ ಇದು ತವರುಮನೆ. ಹೆಣ್ಣುಮಕ್ಕಳಿಗೆ ಸರಿಯಾದ ಸ್ಥಳವಿದಲ್ಲ, ಆದುದರಿಂದ ನೀವೆಲ್ಲರೂ ನಿಮ್ಮ ನಿಮ್ಮ ಮನೆಗಳನ್ನು ಕುರಿತು ಹಿಂದಿರುಗಿರಿ. ನಿಮ್ಮ ತಾಯಿತಂದೆಗಳೂ, ಅಣ್ಣತಮ್ಮಂದಿರೂ, ಗಂಡಂದಿರೂ ನಿಮ್ಮನ್ನು ಕಾಣದೆ ಹುಡುಕಾಡುತ್ತಿರುವರು. ಬಂಧುಗಳ ಭಯಕ್ಕೆ ಕಾರಣವನ್ನೊದಗಿಸದಿರಿ. ರಾಕಾಚಂದ್ರ ವಿರಾಜಿತವಾದ ಯಮುನಾಸಮೀರಣ ಲೀಲಾಕಂಪಿತ ತರುಪಲ್ಲವ ಶೋಭಿತ ಕುಸುಮಿತವನವನ್ನು ನೋಡಿದ್ದಾಯಿತಷ್ಟೆ.—ಈಗ ಎಲೈ ಸತಿಗಳಿರಾ, ಬೇಗನೆ ಹಿಂತಿರುಗಿ ಪತಿಸೇವೆಯನ್ನು ಮಾಡಿ. ಮಕ್ಕಳು ಮರಿಗಳು ಅಳುತ್ತಿರುವರು, ಅವರುಗಳಿಗೆ ಹಾಲುಣಿಸಿ. ಅಲ್ಲದೆ ನನ್ನ ಮೇಲಿನ ಸ್ನೇಹದಿಂದ ನೀವಿಲ್ಲಿ ಬಂದಿರುವಿರಾದರೆ ಪ್ರಾಣಿಕೋಟಿಗಳೆಲ್ಲವೂ ನನ್ನನ್ನು ಹೀಗೇ ಪ್ರೀತಿಸೀತು. ಎಲೈ ಕಲ್ಯಾಣಿಯರೆ, ಪತಿಯ ಅಕಪಟವಾದ ಶುಶ್ರೂಷೆ, ಬಂಧು ಬಾಂಧವರ ಮತ್ತು ಮಕ್ಕಳು ಮರಿಗಳ ಅನುಪೋಷಣೆಯೇ ಹೆಂಗಸರ ಮೂಲಧರ್ಮ.

ಗಂಡನು ದುಶ್ಶೀಲನಾಗಲಿ, ದುರ್ಭಗನಾಗಲಿ, ಜಡನಾಗಲಿ, ರೋಗಿಯಾಗಲಿ ಇಲ್ಲವೆ ಅಧೀನನಾಗಲಿ ಯಾವ ಹೆಂಗಸಾದರೆ ಅಪಾತಕಿಯಾಗಿ ಎರಡು ಮನೆ ತನಗಳಿಗೂ ಮಂಗಳವನ್ನು ಕೋರುವಳೋ ಅಂಥವಳಿಗೆ ಆ ಗಂಡನು ತ್ಯಾಜ್ಯ ನಾಗನು. ಕುಲಸ್ತ್ರೀಯರಿಗೆ ಉಪಪತಿಯನ್ನು ಕೋರುವುದು ಅಸ್ವರ್ಗ್ಯವೂ, ಅಪಯಶಸ್ಕರವೂ, ತುಚ್ಛವೂ, ಭಯಾವಹವೂ, ನಿಂದಿತವೂ ಆದುದು. ಶ್ರವಣದಿಂದಲೂ, ದರ್ಶನದಿಂದಲೂ, ಧ್ಯಾನದಿಂದಲೂ, ಅನುಕೀರ್ತನೆ ಯಿಂದಲೂ ನನ್ನ ಭಾವವು ಉದಯಿಸಬಹುದು. ಆದರೆ ಇದು ಸನ್ನಿಕರ್ಷದ ಲ್ಲಾಗದು ; ಆದುದರಿಂದ ನೀವು ಮನೆಗಳಿಗೆ ಹಿಂದಿರುಗಿರಿ."

ಪುರಾಣಕಾರನು ಕೃಷ್ಣನ ಬಾಯಲ್ಲಿ ಈ ಹೇಳಿಕೆಯನ್ನು ಕೂರಿಸಿ, ಪಾತಿವ್ರತ್ಯ ಮಹಾತ್ಮ್ಯವನ್ನರಿಯದೆಯೋ ಅಥವಾ ಅದರ ಮೇಲಿನ ಅವಜ್ಞತೆ ಯಿಂದಲೋ ತಾನು ಕೃಷ್ಣಗೋಪಿಯರ ಇಂದ್ರಿಯ ಸಂಬಂಧವಾದ ವರ್ಣನೆ ಯನ್ನು ಮಾಡುತ್ತಲಿಲ್ಲವೆಂದು ತೋರಿಸಿರುವನು. ಅವನ ಅಭಿಪ್ರಾಯ ವನ್ನು ಮೊದಲೇ ತಿಳಿಸಿರುವೆನು. ಕೃಷ್ಣನು ಬ್ರಾಹ್ಮಣಕನ್ನೆಯರಿಗೆ ಇದೇ ಮಾತನ್ನು ಹೇಳಿದ್ದನ್ನು ಕೇಳಿ ಅವರು ಹಿಂದಿರುಗಿ ಹೋದರು. ಗೋಪಿಯ ರಾದರೋ ಹಿಂದಿರುಗಲೇ ಇಲ್ಲ. ಅವರಳುತಳುತ "ಇಂಥ ಮಾತನ್ನು ಹೇಳಬೇಡ, ನಿನ್ನ ಪಾದಮೂಲದಲ್ಲಿ ಸರ್ವವಿಷಯುವನ್ನೂ ಪರಿತ್ಯಾಗಮಾಡಿ ರುವೆವು. ಆದಿಪುರುಷನು ಮುಮುಕ್ಷುಗಳನ್ನು ಹೇಗೆ ಬಿಡನೋ, ಹಾಗೆಯೇ ನೀನು ನಮ್ಮಗಳಿಗೆಂಥ ಕೇಡುಂಟಾದರೂ ನಮ್ಮನ್ನು ಕೈಬಿಡಲಾಗದು. ನೀನು ಧರ್ಮಜ್ಞನು, ಪತಿ ಪುತ್ರ ಬಂಧುಗಳ ಸೇವೆಯನ್ನು ಮಾಡುವುದೇ ಹೆಂಗಸರ ಧರ್ಮವೆಂದು ಹೇಳಿದೆಯಲ್ಲಾ ; ಆ ಸೇವೆಯು ನಿನ್ನಲ್ಲಿಯೇ ವರ್ತಿ ಸಲಿ. ಏಕೆಂದರೆ, ನೀನು ಈಶ್ವರನು, ದೇಹಧಾರಿಗಳಿಗೆ ನೀನೇ ಪ್ರಿಯ ಬಂಧುವು ಮತ್ತು ಆತ್ಮನು. ಎಲೈ ಆತ್ಮನೆ, ಕುಶಲಿಗಳಿಗೆ ನೀನೇ ನಿತ್ಯ ಪ್ರಿಯನು, ನಿನ್ನಲ್ಲಿ ಅಂಥವರು ರತಿ (ಆತ್ಮರತಿ)ಯನ್ನು ಮಾಡುವರು. ಬರೀ ದುಃಖದಾಯಕರಾದ ಪತಿ ಸುತರಿಂದ ಏನಾಗುವುದು ?" ಇತ್ಯಾದಿ ವಾಕ್ಯ ಗಳಿಂದ ಗೋಪಿಯರು ಕೃಷ್ಣನನ್ನು ಈಶ್ವರನೆಂದು ತಿಳಿದು ಭಜಿಸಿದರೆಂತಲೂ, ಈಶ್ವರಾರ್ಥವಾಗಿಯೇ ಗಂಡಂದಿರನ್ನು ಬಿಟ್ಟರೆಂತಲೂ ಪುರಾಣಕಾರನು ತಿಳಿ ಸುತಲಿದಾನೆ. ಇನ್ನೂ ಕೆಲವು ಮಾತುಗಳಿಂದ ಕೃಷ್ಣನ ಅನಂತ ಸೌಂದರ್ಯ

ವನ್ನು ನೋಡಿ ಗೋಪಿಯರು ಮುಗ್ಧರಾಗಿಯೇ ಅವನನ್ನನುಸರಿಸಿದರೆಂತಲೂ, ಶ್ರೀ ಕೃಷ್ಣನು ಸ್ವಯಂ ಆತ್ಮಾರಾಮನು; ಎಂದರೆ ತನ್ನಲ್ಲೇ ಹೊರತು ರತಿಯೇ ಆಗಲಿ ವಿರತಿಯೇ ಆಗಲಿ ಬೇರೆ ಇಲ್ಲವೇ ಇಲ್ಲವೆಂತಲೂ, ಅವರೊಡನೆ ಆಡುತ್ತಾ ಯಮುನಾ ತೀರದ ಮರಳುದಿಬ್ಬಗಳಲ್ಲಿ ಅಲೆದಾಡಿದನೆಂತಲೂ ಹೇಳಿರುವನು.

ಭಾಗವತಕಾರನ ರಾಸಲೀಲೆಯಲ್ಲಿ ಇಂದ್ರಿಯ ಸಂಬಂಧವಾದುದೇನೂ ಇಲ್ಲವೆಂದು ಕೆಲವರು ಹೇಳುವುದುಂಟು. ಇದು ನಿಜವಾಗಿದ್ದರೆ ನಾನು ಈ ರಾಸಲೀಲೆಗೆ ಮಾಡಿರುವ ಅರ್ಥವು ಸರ್ವಥಾ ಇಲ್ಲಿ ನಡೆಯುತ್ತಿರಲಿಲ್ಲ. ಆದರೆ ಇದು ಪ್ರಕೃತವಲ್ಲವೆಂಬುದಕ್ಕೆ ಇಲ್ಲಿಂದಲೇ ಶ್ಲೋಕವೊಂದನ್ನು ಎತ್ತಿರುವೆನು :—

ಬಾಹುಪ್ರಸಾರ್ಯ ಪರಿರಭ್ಯ ಕರಾಲಕೋರು
ನೀವೀಸ್ತನಾಲಭನನರ್ಮ ನಖಾಗ್ರ ಪಾತೈಃ ।
ಕ್ಷ್ವೇಲ್ಯಾವಲೋಕ ಹಸಿತೈರ್ವ್ರಜಸುಂದರೀಣಾ—
ಮುತ್ತಂಭಯನ್ ರತಿಪತಿಂ ರಮಯಾಂಚಕಾರ ॥ ೪೧ ॥

ಬೇರೆ ಬೇರೆ ಸ್ಥಳಗಳಿಂದ ಇನ್ನೂ ಎರಡು ಮೂರು ಇಂಥ ಪ್ರಮಾಣಗಳನ್ನೆತ್ತುವೆನು. ಇವಕ್ಕೆಲ್ಲಾ ಕನ್ನಡದಲ್ಲಿ ಅರ್ಥವನ್ನು ಬರೆಯಬಾರದು.

ಇದಾದಮೇಲೆ ಕೃಷ್ಣಸಂಗವನ್ನು ಪಡೆದು ವ್ರಜಗೋಪಿಯರು ಅತ್ಯಂತ ಗರ್ವಿತರಾದರು. ಈ ಸೌಭಾಗ್ಯಮದವನ್ನು ತಗ್ಗಿಸುವುದಕ್ಕೋಸ್ಕರ ಶ್ರೀ ಕೃಷ್ಣನು ಅಂತರ್ಹಿತನಾದನು. ಇಷ್ಟಕ್ಕೆ ೨೯ನೆಯ ಅಧ್ಯಾಯ ಮುಗಿಯಿತು.

ಮೂವತ್ತನೆಯ ಅಧ್ಯಾಯದಲ್ಲಿ ಗೋಪಿಯರು ಕೃಷ್ಣನನ್ನು ಹುಡುಕಿದ ವಿಷಯ. ಇದು ವಿಷ್ಣುಪುರಾಣದ ಅನುಕರಣ. ಭಾಗವತಕಾರನಾದರೋ ಕಾವ್ಯಭಾಗವನ್ನು ಇನ್ನೂ ವಿಸ್ತರಿಸಿರುವನು. ಆದುದರಿಂದ ಈ ಅಧ್ಯಾಯದ ವಿಷಯದಲ್ಲಿ ಹೆಚ್ಚಾಗಿ ಬರೆಯಬೇಕಾದುದೇನೂ ಇಲ್ಲ. ೩೧ನೆಯ ಅಧ್ಯಾಯದಲ್ಲಿ ಗೋಪಿಯರು ಹಾಡಿ ಹಾಡಿ ಕೃಷ್ಣನನ್ನು ಕರೆಯುತ್ತಿರುವರು. ಇದರಲ್ಲಿ ಭಕ್ತಿರಸ ಮತ್ತು ಆದಿರಸಗಳೆರಡೂ ಇರುವುವು. ತಿಳಿದುಕೊಳ್ಳಬೇಕಾದ

ವಿಷಯವೇನೂ ಇಲ್ಲ. ೩೨ನೆಯ ಅಧ್ಯಾಯದಲ್ಲಿ ಕೃಷ್ಣನು ಆವಿರ್ಭೂತನಾದನು. ಇಲ್ಲಿ ಗೋಪಿಯರ ಇಂದ್ರಿಯ ಸಂತೋಷ ಸಂಬಂಧವಾದ ವ್ಯವಹಾರಕ್ಕೆ ಉದಾಹರಣೆಯೊಂದನ್ನು ಎತ್ತುವೆವು :—

ಕಾಚಿದಂಜಲಿನಾ ಗೃಹ್ಯಾತ್ ತನ್ವೀ ತಾಂಬೂಲ ಚರ್ವಿತಂ ॥
ಏಕಾ ತದಂಘ್ರಿಕಮಲಂ ಸಂತಪ್ತಾ ಸ್ತನಯೋರ್ನ್ಯಧಾತ್ ॥

ಈ ಅಧ್ಯಾಯದ ಕೊನೆಗೆ ಕೃಷ್ಣಗೋಪಿಯರಿಗಾದ ಆಧ್ಯಾತ್ಮಿಕವಾದ ಮಾತು ಕಥೆಗಳುಂಟು. ಅವನ್ನು ಇಲ್ಲಿ ಎತ್ತುವ ಆವಶ್ಯಕತೆ ನಮಗೆ ತೋರುವುದಿಲ್ಲ. ಇದಾದಮೇಲೆ ೩೩ನೆಯ ಅಧ್ಯಾಯದಲ್ಲಿ ರಾಸಕ್ರೀಡೆ ಮತ್ತು ವಿಹಾರವರ್ಣನೆ. ಇಲ್ಲಿ ರಾಸಕ್ರೀಡೆ ವಿಷ್ಣುಪುರಾಣದಲ್ಲಿ ಹೇಳಿರುವ ರಾಸಕ್ರೀಡೆಯಂತೆ ಬರೀ ನೃತ್ಯ ಗೀತ. ಆದರೆ ಗೋಪಿಯರು ಇಲ್ಲಿ ಕೃಷ್ಣನನ್ನು ಪತಿಭಾವದಲ್ಲಿ ಪಡೆದಿದ್ದರಾದುದರಿಂದ ಕೊಂಚ ಇಂದ್ರಿಯಸಂಬಂಧವಾದುದೂ ಉಂಟು. ಹೇಗೆಂದರೆ :—

ಕಸ್ಯಾಶ್ಚಿನ್ನಾಟ್ಯ ವಿಕ್ಷಿಪ್ತ ಕುಂಡಲತ್ವಿಷಮಂಡಿತಂ ।
ಗಂಡಂ ಗಂಡೇ ಸಂದಧತ್ಯಾಃ ಪ್ರಾದಾತ್ತಾಂಬೂಲ ಚರ್ವಿತಂ ॥ ೧೩ ॥

ನೃತ್ಯಂತೀ ಗಾಯತೀ ಕಾಚಿತ್ಕೂಜನ್ನೂಪುರ ಮೇಖಲಾ ।
ಪಾರ್ಶ್ವಸ್ಥಾಚ್ಯುತ ಹಸ್ತಾಬ್ಜಂ ಶ್ರಾಂತಾಧಾತ್ ಸ್ತನಯೋಶ್ಶಿವಂ ॥ ೧೪ ॥

* * * *

ತದಂಗ ಸಂಗ ಪ್ರಮುದಾಕುಲೇಂದ್ರಿಯಾಃ
ಕೇಶಾನ್ ದುಕೂಲಂ ಕುಚಪಟ್ಟಿಕಾಂ ವಾ ।

ನಾಂಜಃ ಪ್ರತಿವ್ಯೋಢುಮಲಂ ವ್ರಜಸ್ತ್ರಿಯೋ
ವಿಸ್ರಸ್ತ ಮಾಲಾಭರಣಾಃ ಕುರೂದ್ವಹ ॥ ೧೮ ॥

ಈ ಬಗೆಯ ಮಾತುಗಳು ವಿನಾ ಹೆಚ್ಚು ಇನ್ನೇನೂ ಇಲ್ಲ. ಶ್ರೀ ಕೃಷ್ಣನು ಸ್ವಯಂ ಜಿತೇಂದ್ರಿಯನೆಂದು ಪುರಾಣಕಾರನು ಮೊದಲೇ ವರ್ಣಿಸಿರುತ್ತಾನೆ. ಇದನ್ನು ಮೊದಲೇ ತಿಳಿಸಿ ಪ್ರಮಾಣಗಳನ್ನು ಕೊಟ್ಟಿರುವೆನು.

ದಶಮ ಪರಿಚ್ಛೇದ

ಶ್ರೀ ರಾಧೆ

ಭಾಗವತದ ಈ ರಾಸಪಂಚಾಧ್ಯಾಯದಲ್ಲೆಲ್ಲಿಯೂ 'ರಾಧೆ'ಯ ಹೆಸರೇ ಇಲ್ಲ. ವೈಷ್ಣವಾಚಾರ್ಯರ ಎಲಬು ಮಜ್ಜಗಳಲ್ಲಿಯೂ 'ರಾಧೆ'ಯ ಹೆಸರು ಬೆರೆತಿರುವುದು ಸರಿಯಷ್ಟೆ. ಅವರಿಂದಾದ ಟೀಕೆ ಟಿಪ್ಪಣಿಗಳಲ್ಲಿ ಬಾರಿ ಬಾರಿಗೂ ರಾಧಾ ಪ್ರಸಂಗವನ್ನೆತ್ತಿರುವರಾದರೂ ಮೂಲದಲ್ಲಿ ಬೇರೆ ಇದಿಲ್ಲ. ಗೋಪಿಯರ ಅನುರಾಗಾಧಿಕ್ಯದಿಂದುಂಟಾದ ಈರ್ಷ್ಯೆಯನ್ನು ತೋರಿಸುವುದಕ್ಕೋಸ್ಕರ ಕವಿಯು ಬರೆದಿರುವುದೇನೆಂದರೆ--"ಅವನ ಹೆಜ್ಜೆಯ ಗುರುತುಗಳನ್ನು ನೋಡಿ ಯಾವಳೋ ಗೋಪಿಯೊಬ್ಬಳನ್ನು ಕೂಡಿ ಶ್ರೀಕೃಷ್ಣನು ಯಾರೂ ಇಲ್ಲದ ತಾವಿಗೆ ಹೋಗಿರಬೇಕು" ಎಂದೂಹಿಸಿದ್ದು. ಇದು ಗೋಪಿಯರ ಹೊಟ್ಟೆಯ ಕಿಚ್ಚಿನಿಂದುಂಟಾದ ಭ್ರಮೆ ಮಾತ್ರ. ಶ್ರೀ ಕೃಷ್ಣನು ಅಂತರ್ಧಾನನಾದನು. ಇಷ್ಟುಮಟ್ಟಿಗೆ ಮೂಲದಲ್ಲಿರುವುದು; ಯಾರನ್ನೋ ಕೂಡಿ ಕೃಷ್ಣನು ಕಣ್ಣು ಮರೆಯಾದನೆಂದಿಲ್ಲ. ಅಲ್ಲದೆ ರಾಧೆಯ ಹೆಸರಿನ ವಾಸನೆ ಸುದಾ ಇಲ್ಲ.

ರಾಸ ಪಂಚಾಧ್ಯಾಯ ಹಾಗಿರಲಿ, ಭಾಗವತದ ಪ್ರಕರಣದಲ್ಲಿಯೂ ರಾಧೆಯ ಹೆಸರು ಇಲ್ಲವೇ ಇಲ್ಲ. ಭಾಗವತ ಒಂದರಲ್ಲೇ ಏಕೆ, ವಿಷ್ಣು ಪುರಾಣ, ಹರಿವಂಶ ಅಥವಾ ಮಹಾಭಾರತ ಇವಾವುದರಲ್ಲಿಯೂ ಈಕೆಯ ಹೆಸರೇ ಇಲ್ಲ. ಈಗಿನ ಕೃಷ್ಣೋಪಾಸನಕ್ಕೆ ಪ್ರಧಾನವಾದ ಅಂಗವಾಗಿರುವ ಯಾವ ರಾಧೆಯನ್ನು ಬಿಟ್ಟು ಕೃಷ್ಣನಾಮವೇ ಅಥವಾ ರಾಧೆಯಿಲ್ಲದ ಕೃಷ್ಣ ದೇವಾಲಯವೇ ಆಗಲಿ, ಕೃಷ್ಣಮೂರ್ತಿಯೇ ಆಗಲಿ ಇರದೋ ಯಾವ ವೈಷ್ಣವ ರಚನೆಗಳಲ್ಲಿ ಕೃಷ್ಣನಿಗಿಂತ ರಾಧೆಗೇ ಹೆಚ್ಚು ಪ್ರಾಧಾನ್ಯವೋ ಅಂಥಾ ರಾಧೆ ಮಹಾಭಾರತ, ಹರಿವಂಶ, ವಿಷ್ಣುಪುರಾಣ ಮತ್ತು ಭಾಗವತಗಳಲ್ಲಿ ಇಲ್ಲದಿರಲು ಇವಳಿನ್ನೆಲ್ಲಿಂದ ಮೂಡಿದಳು?

ಮೊಟ್ಟಮೊದಲು ಬ್ರಹ್ಮವೈವರ್ತಪುರಾಣದಲ್ಲಿ ರಾಧೆಯನ್ನು ಕಾಣ ಬಹುದು. ಇದು ಪುರಾಣಗಳಲ್ಲೆಲ್ಲ ಬಹು ಕನಿಷ್ಠವಾದುದೆಂದು "ವಿಲ್‌ಸನ್" ಸಾಹೇಬರು ಹೇಳಿರುವರು. ಇದರ ರಚನೆಯ ಪ್ರಣಾಲಿಯು ಈಗಿನ

ಕಾಲದ ಭಟ್ಟರು ಆಚಾರ್ಯರು ಇಂಥವರುಗಳ ರೀತಿಯಾದುದು. ಇದರಲ್ಲಿ ಷಷ್ಠಿ, ಮನಸಾ ಮುಂತಾದ ದೇವಿಗಳ ಕತೆಗಳೂ ಇವೆ. ಪುರಾತನವಾದ ಬ್ರಹ್ಮವೈವರ್ತವು ಲುಪ್ತವಾಗಿಬಿಟ್ಟಿರುವುದೆಂದು ಪ್ರಮಾಣಗಳ ದ್ವಾರಾ ನಾನು ಮೊದಲೇ ತಿಳಿಸಿರುವೆನು. ಈ ಹೆಸರಿನಮೇಲೆ ಈಗಿರುವ ಪುರಾಣದಲ್ಲಿ ಹೊಸದೊಂದು ದೇವತತ್ತ್ವವನ್ನು ಹುಟ್ಟಿಹಾಕಿರುವರು. ಕೃಷ್ಣನು ವಿಷ್ಣುವಿನ ಅವತಾರವೆಂದು ಪೂರ್ವದಿಂದಲೂ ಪ್ರಸಿದ್ಧವಾಗಿರುವುದು ಸರಿಯಷ್ಟೆ. ಇಲ್ಲಿಯಾದರೆ ಕೃಷ್ಣನು ವಿಷ್ಣುವಿನ ಅವತಾರವಂತಿರಲಿ, ಕೃಷ್ಣನೇ ವಿಷ್ಣುವನ್ನು ಸೃಜಿಸಿದನು. ವಿಷ್ಣುವು ವೈಕುಂಠದಲ್ಲಿರುವನು, ಕೃಷ್ಣನಾದರೆ ಗೋಕುಲಧಾಮದಲ್ಲಿ ರಾಸಮಂಡಲದಲ್ಲಿರುವನು. ವೈಕುಂಠವು ಇದಕ್ಕಿಂತ ಬಹಳ ಕೀಳುತರದ್ದು. ಇವನು ವಿಷ್ಣುವನ್ನು ಮಾತ್ರವೇ ಅಲ್ಲ—ಬ್ರಹ್ಮ, ರುದ್ರ, ಲಕ್ಷ್ಮೀ, ದುರ್ಗಾ ಮೊದಲಾದ ಸಮಸ್ತ ದೇವ ದೇವಿಯರನ್ನೂ ಜೀವಗಣಗಳೆಲ್ಲವನ್ನೂ ಸೃಜಿಸಿರುವನು. ಇವನ ವಾಸಸ್ಥಾನವು ಗೋಕುಲಧಾಮವು ಎಂದು ಹೇಳಿರುವರು. ಅಲ್ಲಿ ಗೋವುಗಳೂ ಗೋಪ ಗೋಪಿಯರೂ ಇರುವರು. ಅವರು ದೇವ ದೇವಿಯರಿಗಿಂತಲೂ ಮೇಲು. ಆ ಗೋಲೋಕಧಾಮಕ್ಕೆ ಅಧಿಷ್ಠಾತ್ರಿಯಾದ ಕೃಷ್ಣನ ವಿಲಾಸಿನಿಯಾದ ದೇವಿಯೇ ರಾಧೆಯು. ರಾಧೆಗೆ ಮೊದಲೇ ರಾಸಮಂಡಲ! *ರಾಸಮಂಡಲದಲ್ಲಿ ಅವನು ಇವಳನ್ನು ಸೃಜಿಸಿದನು. ರಾಸದ 'ರಾ' ಮತ್ತು 'ಧಾ' ಧಾತುವಿನ ಧಾ ಇಂದ 'ರಾಧಾ'ವನ್ನು ನಿಷ್ಪನ್ನಮಾಡಿರುವನು.

ಈ ಗೋಪ ಗೋಪಿಯರ ವಾಸಸ್ಥಾನವಾದ ರಾಧೆಯು ಆಧಿಪತ್ಯಕ್ಕೊಳಗಾದ ಗೋಲೋಕಧಾಮವು ಪೂರ್ವಕವಿಗಳಿಂದ ವರ್ಣಿತವಾದ ಬೃಂದಾವನ ವ್ರಜದ ನಕಲು. ಈಗಿನ ಕಾಲದ ಕೃಷ್ಣಜಾತ್ರೆಯ ಆಟದಲ್ಲಿ ಚಂದ್ರಾವಳಿಯೆಂಬವಳೊಬ್ಬಳು ರಾಧೆಗೆ ಎದುರುಕಕ್ಷಿಯಾಗಿರುವಳಷ್ಟೆ.

*ರಾಸೇ ಸಂಭೂಯ ಗೋಲಕೇ ಸಾ ದಧಾವ ಹರೇಃ ಪುರಃ ।
ತೇನ ರಾಧಾ ಸಮಾಖ್ಯಾತಾ ಪುರಾವಿದ್ಭಿರ್ದ್ವಿಜೋತ್ತಮ ॥
ಬ್ರಹ್ಮಖಂಡ, ೫ನೆಯ ಅಧ್ಯಾಯ

ಆದರೆ ಬೇರೆ ಎಡೆಯಲ್ಲಿ—
.... ರಾಕಾರೋ ದಾನವಾಚಕಃ ॥
ಧಾ ನಿರ್ವಾಣಂ ಚ ತದ್ಧಾತ್ರೀ ತೇನ ರಾಧಾ ಪ್ರಕೀರ್ತಿತಾ ॥
ಶ್ರೀ ಕೃಷ್ಣ ಜನ್ಮಖಂಡ, ೩೩ನೆಯ ಅಧ್ಯಾಯ

ಗೋಲೋಕಧಾಮದಲ್ಲಿಯೂ ಹೀಗೆಯೇ ವಿರಜೆಯೆಂಬವಳು ರಾಧೆಗೆ ಎದುರು ಕಕ್ಷಿಯಾಗಿದ್ದಳು. ಮಾನಭಂಜನದ ಜಾತ್ರೆಯಲ್ಲಿ ಆಟದವರು ಚಂದ್ರಾವಳಿಯ ಲತಾಗೃಹಕ್ಕೆ ಎಂತು ಕೃಷ್ಣನನ್ನೊಯ್ಯುವರೋ ಹಾಗೆಯೇ ಕವಿಯು ವಿರಜೆಯ ಲತಾಗೃಹಕ್ಕೆ ಕೃಷ್ಣನನ್ನೊಯ್ದಿರುವನು. ಇದರಿಂದ ಆಟದ ರಾಧಿಕೆಗೆ ಕೃಷ್ಣನಲ್ಲಿ ಹೊಟ್ಟೆಯಕಿಚ್ಚೂ ಕೋಪವೂ ಹೇಗೆ ಉಂಟಾಯಿತೋ ಹಾಗೆಯೇ ಬ್ರಹ್ಮವೈವರ್ತದ ರಾಧಿಕೆಗೂ ಆಯಿತು. ಹೀಗೆ ಗಲಾಟೆಗಿಟ್ಟುಕೊಂಡಿತು. ರಾಧೆಯು ವಿರಜೆಯ ಮನೆಯಲ್ಲಿ ಕೃಷ್ಣನನ್ನು ಹಿಡಿಯುವುದಕ್ಕೋಸ್ಕರ ಸಾರೋಟನ್ನೇರಿ ವಿರಜಳ ಮನೆಯ ಮುಂಗಡೆಗೆ ಬಂದಳು. ಅಲ್ಲಿ ವಿರಜಳ ಮನೆಯ ಬಾಗಿಲ ಕೋಲಕಾರನಾದ ಶ್ರೀದಾಮನು ಇವಳನ್ನು ಒಳಕ್ಕೆ ಹೋಗದಂತೆ ತಡೆದನು. ಇತ್ತ ಕಡೆ ರಾಧಿಕೆಯ ಭಯದಿಂದ ವಿರಜೆಯು ಕರಗಿ ನೀರಾಗಿ ನದಿಯ ರೂಪವನ್ನು ಧರಿಸಿದಳು. ಕೃಷ್ಣನು ಇದಕ್ಕಾಗಿ ದುಃಖಿಸಿ ಅವಳನ್ನು ಪುನರುಜ್ಜೀವನಮಾಡಿ ಮೊದಲಿನ ರೂಪವನ್ನು ಕೊಟ್ಟನು. ಇವಳು ಗೋಲೋಕನಾಥನೊಡನೆ ಅವಿರತನಾದ ಆನಂದವನ್ನನುಭವಿಸತೊಡಗಿದಳು. ಕ್ರಮವಿಡಿದು ಅವಳಿಗೆ ಏಳುಮಂದಿ ಮಕ್ಕಳು ಉದಿಸಿದರು. ಆದರೆ ಪುತ್ರರು ಆನಂದಾನುಭವಕ್ಕೆ ವಿಘ್ನಕಾರಿಗಳಾದಕಾರಣ ತಾಯಿಯ ಶಾಪದಿಂದ ಇವರು ಏಳು ಸಮುದ್ರಗಳಾದರು. ಇತ್ತ ಕಡೆ ರಾಧೆಯು ಕೃಷ್ಣ ವಿರಜೆಯರ ವೃತ್ತಾಂತವನ್ನು ಗೊತ್ತುಮಾಡಿ ಕೃಷ್ಣನನ್ನು ಹಲವು ಬಗೆಯಿಂದ ಗದರಿಸಿ "ನೀನು ಭೂಮಿಯಲ್ಲಿ ಹುಟ್ಟು" ಎಂದು ಶಪಿಸಿದಳು. ಇತ್ತ ಕಡೆ ಕೃಷ್ಣಕಿಂಕರನಾದ ಶ್ರೀದಾಮನು ರಾಧೆಯ ದುಷ್ಟ ವ್ಯವಹಾರದಿಂದ ಕುಪಿತನಾಗಿ ಅವಳನ್ನು ಗದರಿಸಲು, ರಾಧೆಯು ಅವನನ್ನು ತಿರಸ್ಕರಿಸಿ "ನೀನು ಅಸುರನಾಗಿ ಭೂಮಿಯಲ್ಲಿ ಹುಟ್ಟು" ಎಂದು ಶಪಿಸಿದಳು. ಶ್ರೀದಾಮನೂ ಕೂಡ "ನೀನೂ ಭೂಮಿಗಿಳಿದು ರಾಯಣನ ಹೆಂಡತಿಯಾಗಿ ಕಳಂಕಿಯಾಗು" ಎಂದು ಶಪಿಸಿದನು. ಕಡೆಗೆ ಇಬ್ಬರೂ ಕೃಷ್ಣನಲ್ಲಿಗೆ ಬಂದು ಗೋಳಾಡಿದರು. ಕೃಷ್ಣನು ಶ್ರೀದಾಮನಿಗೆ "ನೀನು ಅಸುರರಿಗಧಿಪತಿಯಾಗಿ ಯಾರಿಂದಲೂ ಸೋಲಿಸಲಾಗದವನಾಗುವಿ; ಮತ್ತು ಕೊನೆಗೆ ಶಂಕರನ ಶೂಲಸ್ಪರ್ಶದಿಂದ ಮುಕ್ತಿಯನ್ನು ಪಡೆಯುವಿ" ಎಂದು ವರವನ್ನು ದಯಪಾಲಿಸಿದನು. ರಾಧೆಯನ್ನು ಕುರಿತು "ನೀನೂ ನಡೆ, ನಾನೂ ಹೊರಡು

ತ್ತೇನೆ” ಎಂದು ಸಮುದಾಯಿಸಿ ಭೂಭಾರವನ್ನಿಳಿಸುವುದಕ್ಕಾಗಿ ಅವತರಿಸಿದನು.

ಇವೆಲ್ಲಾ ಹೊಸವು. ಮತ್ತೂ ಈಚೀಚೆಗೆ ಪ್ರಚಾರವಾದುವು. ಆದಾಗ್ಗೂ ಈ ಬ್ರಹ್ಮವೈವರ್ತ ಪುರಾಣವು ವಂಗ ವೈಷ್ಣವ ಧರ್ಮದಮೇಲೆ ಅತಿಶಯವಾಗಿ ಆಧಿಪತ್ಯವನ್ನು ಪಡೆದುಕೊಂಡಿದೆ. ಜಯದೇವಾದಿ ವಂಗ ಕವಿಗಳಿಗೂ, ವಂಗಜಾತಿಯ ಸಂಗೀತಕ್ಕೂ, ವಂಗಜಾತ್ರೆ ಮತ್ತು ಉತ್ಸವ ಗಳಿಗೂ ಮೂಲವು ಬ್ರಹ್ಮವೈವರ್ತದಲ್ಲಿಯೇ. ಬ್ರಹ್ಮವೈವರ್ತಕಾರನು ಹೇಳಿದ ಅಸಲು ಮಾತೊಂದನ್ನು ವಂಗ ವೈಷ್ಣವರು ಗ್ರಹಿಸಿರುವುದಿಲ್ಲ. ಅಂದರೆ, ಇವರಲ್ಲಿ ಇದು ಚೆನ್ನಾಗಿ ಮೊಳೆತಿಲ್ಲ. ರಾಧಿಕೆಯು ರಾಯಣನ ಹೆಂಡತಿಯೆಂದು ಪರಿಚಿತಳಾಗಿರುವಳಷ್ಟೆ. ಆದರೆ ಇವಳು ಪುರಾಣಕಾರನ ಮತದಲ್ಲಿ ಯಥಾರೀತಿಯಾಗಿ ಮದುವೆಯಾದ ಕೃಷ್ಣನ ಪತ್ನಿ. ವಿವಾಹ ವೃತ್ತಾಂತವನ್ನು ವಿಸ್ತರಿಸುವುದಕ್ಕೆ ಮೊದಲು ಗೀತಗೋವಿಂದದ ಪ್ರಥಮ ಶ್ಲೋಕವನ್ನು ಪಾಠಕರ ಸ್ಮರಣೆಗೆ ತರುವೆನು :—

ಮೇಘೈರ್ಮೇದುರಮಂಬರಂ ವನಭುವಃ ಶ್ಯಾಮಾಸ್ತಮಾಲದ್ರುಮೈಃ
ನಕ್ತಂ ಭೀರುರಯಂ ತ್ವಮೇವ ತದಿಮಂ ರಾಧೇ ಗೃಹಂ ಪ್ರಾಪಯ ॥
ಇತ್ಥಂ ನಂದ ನಿದೇಶತಶ್ಚಲಿತಯೋಃ ಪ್ರತ್ಯಧ್ವ ಕುಂಜದ್ರುಮಂ
ರಾಧಾ ಮಾಧವಯೋರ್ಜಯಂತಿ ಯಮುನಾಕೂಲೇ ರಹಃಕೇಲಯಃ ॥

ಅರ್ಥ :—ಎಲೈ ರಾಧೆ, ಮೋಡಗಳು ಮುಗಿಲನ್ನು ಕವಿಯುತ್ತಲಿವೆ, ಹೊಂಗೆಯ ಮರಗಳಿಂದ ಕಾಡು ಕತ್ತಲಾಗುತ್ತಲಿದೆ, ಆದುದರಿಂದ ಇವನನ್ನು ನೀನೇ ಮನೆಗೆ ಕರೆದೊಯ್ಯುವುದೆಂದು ನಂದನು ಅಪ್ಪಣೆಯನ್ನು ಕೊಡಲು ; ಹಾದಿಯೊಳಗಿನ ಹೊದರುಗಟ್ಟಿದ ಮರಗಳ ಕಡೆಗೆ ಹೊರಟ ರಾಧಾ ಮಾಧವರ ಯಮುನೆಯ ದಡದ ಗುಟ್ಟಿನ ಆಟವು ಎಲ್ಲರಿಗೂ ಜಯವನ್ನು ತರಲಿ.

ಹೀಗೆಂದರೇನು ? ಟೀಕಾಕಾರನೂ ಅನುವಾದಕಾರನೂ ಇದಕ್ಕೆ ವಿಶದ ವಾದ ಅಭಿಪ್ರಾಯವನ್ನು ತಿಳಿಸಲರಿಯರು. ಅನುವಾದಕಾರನೊಬ್ಬನು “ ಗೀತಗೋವಿಂದದ ಮೊದಲನೆಯ ಶ್ಲೋಕವು ಕೊಂಚ ಅಸ್ಪಷ್ಟ. ಕವಿಯು

ನಾಯಕ ನಾಯಕಿಯರ ಆವ ಸ್ಥಿತಿಯನ್ನು ನೆನೆದು ಇಂತು ಬರೆದಿರುತ್ತಾನೋ ತಿಳಿಯುವುದಕ್ಕಾಗುವುದಿಲ್ಲ" ಎಂದು ಬರೆದಿರುವನು. ಟೀಕಾಕಾರನ ಮತ ದಲ್ಲಿ ಇದು ರಾಧಿಕೆಯ ಗೆಳತಿಯೊಬ್ಬಳ ಮಾತು. ಹೀಗಾದರೆ ಒಂದು ಬಗೆ ಯಾಗಿ ಭಾವವೇನೋ ಸೊಗಸುವುದು ಸರಿಯೆ; ಶಬ್ದಾರ್ಥಗಳು ಮಟ್ಟಿಗೆ ಅಸಂಗತವಾಗುವುವು ಎಂದು ಬರೆದಿರುವನು. ಸಹಜವಾಗಿ ಇಂದು ರಾಧಿಕೆಯ ಗೆಳತಿಯ ಮಾತಲ್ಲ. ಜಯದೇವ ಗೋಸ್ವಾಮಿಯು ಬ್ರಹ್ಮವೈವರ್ತದಲ್ಲಿ ಬರೆದಿರುವ ಈ ಮದುವೆಯ ಸೂಚನೆಯನ್ನು ನೆನೆದೇ ಈ ಶ್ಲೋಕವನ್ನು ರಚಿಸಿರುವನು. ಈಗ ಇದೇ ಮಾತುಗಳನ್ನೇ ಬ್ರಹ್ಮವೈವರ್ತದಿಂದ ಎತ್ತು ವೆನು. ರಾಧೆಯು ಶ್ರೀದಾಮನ ಶಾಪಾನುಸಾರವಾಗಿ ಶ್ರೀ ಕೃಷ್ಣನಿಗಿಂತ ಕೆಲವು ವರ್ಷ ಮುಂಚಿತವಾಗಿಯೇ ಪೃಥಿವಿಗೆ ಬರಲು ಕಟ್ಟುಬಿದ್ದಿದ್ದಳಾದುದ ರಿಂದ ರಾಧೆಯು ಕೃಷ್ಣನಿಗಿಂತ ಬಲು ದೊಡ್ಡವಳು. ಇವಳು ಯುವತಿ ಯಾದಾಗ ಕೃಷ್ಣನಿನ್ನೂ ಕೂಸು.

ಏಕದಾ ಕೃಷ್ಣಸಹಿತೋ ನಂದೋ ಬೃಂದಾವನಂ ಯಯೌ ।
ತತ್ರೋಪವನ ಭಾಂಡೀರೇ ಚಾರಯಾಮಾಸ ಗೋಕುಲಂ ॥ ೧ ॥

ಸರಸ್ಸು ಸ್ವಾದು ತೋಯಂ ಚ ಪಾಯಯಾಮಾಸ ತಂ ಪಪೌ ।
ಉವಾಸ ವಟಮೂಲೇ ಚ ವಾಲಂಕೃತ್ವಾ ಸ್ವವಕ್ಷಸಿ ॥ ೨ ॥

ಏತಸ್ಮಿನ್ನಂತರೇ ಕೃಷ್ಣೋ ಮಾಯಾ ಬಾಲಕ ವಿಗ್ರಹಃ ।
ಚಕಾರ ಮಾಯಯಾ ಕಸ್ಮಾನ್ಮೇಘಾಚ್ಛನ್ನಂ ನಭೋ ಮುನೇ ॥ ೩ ॥

ಮೇಘಾವೃತಂ ನಭೋದೃಷ್ಟ್ವಾ ಶ್ಯಾಮಲಂ ಕಾನನಾಂತರಂ ।
ಜಂಝಾವಾತಂ ಮೇಘಶಬ್ದಂ ವಜ್ರಶಬ್ದಂ ಚ ದಾರುಣಂ ॥ ೪ ॥

ವೃಷ್ಟಿಧಾರಾಮತಿಸ್ಥೂಲಾಂ ಕಂಪಮಾನಾಂಶ್ಚ ಪಾದಪಾನ್ ।
ದೃಷ್ಟ್ವೈವಂ ಪತಿತಸ್ಕಂಧಾನ್ ನಂದೋ ಭಯಮವಾಪಹ ॥ ೫ ॥

ಕಥಂ ಯಸ್ಯಾಮಿ ಗೋವತ್ಸಂ ವಿಹಾಯ ಸ್ವಾಶ್ರಮಂಪ್ರತಿ ।
ಗೃಹಂ ಯದಿ ನಯಾಸ್ಯಾಮಿ ಭವತಾ ಬಾಲಕಸ್ಯ ಕಿಮ್ ॥ ೬ ॥

ಏವಂ ನಂದೇ ಪ್ರವದತಿ ರುರೋದ ಶ್ರೀಹರಿಸ್ತದಾ ।
ಮಾಯಾಭಿಯಾ ಭಯೇಭ್ಯಶ್ಚ ಪಿತುಃ ಕಂಠಂ ದಧಾರ ಸಃ ॥ ೭ ॥

ಏತಸ್ಮಿನ್ನಂತರೇ ರಾಧಾ ಜಗಾಮ ಕೃಷ್ಣಸನ್ನಿಧಿಂ

ಬ್ರಹ್ಮವೈವರ್ತ ಪುರಾಣ, ಶ್ರೀ ಕೃಷ್ಣ ಜನ್ಮಖಂಡ, ೧೫ನೆಯ ಅಧ್ಯಾಯ

ಅರ್ಥ :—ಒಂದು ದಿನ ನಂದನು ಕೃಷ್ಣನೊಡನೆ ಬೃಂದಾವನಕ್ಕೆ ಹೋಗಿ ಅಲ್ಲಿನ ಭಾಂಡೀರವನದಲ್ಲಿ ಗೋವುಗಳನ್ನು ಮೇಯಿಸುತ್ತಾ ಅಲ್ಲಿಯ ಸರಸ್ಸಿನ ಸಿಹಿನೀರನ್ನು ಅವುಗಳಿಗೆ ಕುಡಿಸಿ ತಾನೂ ಕುಡಿದನು. ಕೂಸನ್ನು ಎದೆಗಪ್ಪಿಕೊಂಡು ಆ ವನದ ಆಲದಮರದಡಿಯಲ್ಲಿರಲು, ಎಲೈ ಮುನಿಯೆ, ಮಾಯೆಯಿಂದ ಮಗುವಿನ ಶರೀರವನ್ನು ಧರಿಸಿದ ಕೃಷ್ಣನು ಥಟ್ಟನೆ ಮಾಯೆ ಯಿಂದ ಮುಗಿಲೆಲ್ಲ ಮೋಡಗಳಿಂದ ಕವಿದುಕೊಳ್ಳುವಂತೆ ಮಾಡಿದನು. ಆಕಾಶವು ಮೇಘಗಳಿಂದ ಮರೆಯಾಗಿ ಕಾನನವು ಕತ್ತಲೆಯಿಂದ ಕವಿದು ಬಿರುಮಳೆ, ಗಾಳಿ, ಗುಡುಗು, ಸಿಡಿಲುಗಳುಂಟಾಗಿ ಮರಗಳು ಮುರಿದು ಬೀಳುತಲಿರಲು ನಂದನಿಗೆ ಭಯವುಂಟಾಗಿ "ಗೋವುಗಳನ್ನೂ ಕರುಗಳನ್ನೂ ಬಿಟ್ಟು ಮನೆಗೆ ಹೇಗೆ ಹೋಗಲಿ! ಇಲ್ಲದಿದ್ದರೆ ಈ ಮಗುವಿನ ಪಾಡೇನು?" ಎಂದು ಆಲೋಚಿಸುತ್ತಿರುವಷ್ಟರಲ್ಲಿ ಕೃಷ್ಣನು ಅಳತೊಡಗಿ ದಿಗಿಲಿನ ಠಕ್ಕಿನಿಂದ ತಂದೆಯ ಕೊರಳನ್ನಪ್ಪಿಕೊಂಡನು. ಈ ಸಮಯಕ್ಕೆ ಸರಿಯಾಗಿ ರಾಧೆಯು ಕೃಷ್ಣನ ಬಳಿಗೆ ಬಂದೊದಗಿದಳು.

ರಾಧೆಯ ಅಪೂರ್ವವಾದ ಲಾವಣ್ಯವನ್ನು ನೋಡಿ ನಂದನು ವಿಸ್ಮಿತನಾಗಿ ಅವಳನ್ನು ಕುರಿತು ಇಂತೆಂದನು: "ಶ್ರೀ ಹರಿಗೆ ನೀನು ಪದ್ಮಳಿಗಿಂತಲೂ ಹೆಚ್ಚು ಪ್ರಿಯಳೆಂಬುದಾಗಿ ಗರ್ಗರಿಂದ ಕೇಳಿರುವೆನು ಮತ್ತು ಇವನು ಪರಮ ನಿರ್ಗುಣನಾದ ಅಚ್ಚುತನಾದ ಮಹಾವಿಷ್ಣುವಾದರೂ, ನಾನು ಮಾನವನಾದುದರಿಂದ ವಿಷ್ಣುಮಾಯೆಗೆ ಮೋಹಿತನಾಗಿರುವೆನು. ಎಲೈ ಭದ್ರೆ, ನಿನ್ನ ಪ್ರಾಣನಾಥನನ್ನು ಸ್ವೀಕರಿಸಿ ನಿನಗೆ ಸುಖವಾಗುವೆಡೆಗೆ ಹೋಗು; ನಿನ್ನ ಮನೋರಥವನ್ನು ತೀರಿಸಿಕೊಂಡಮೇಲೆ ನನ್ನ ಪುತ್ರನನ್ನು ಹಿಂದಿರುಗಿ ಕೊಡುವಿ."

ಹೀಗೆ ಹೇಳಿ ನಂದನು ರಾಧೆಗೆ ಶ್ರೀ ಕೃಷ್ಣನನ್ನೊಪ್ಪಿಸಿಕೊಡಲು, ಅವಳು ಕೃಷ್ಣನನ್ನು ಕಂಕುಳಿನಲ್ಲೆತ್ತಿಕೊಂಡು ಬಹುದೂರ ಹೋದ ಬಳಿಕ ರಾಸ ಮಂಡಲವನ್ನು ನೆನೆಯಲು ಆಗ ಮನೋಹರವಾದ ವಿಹಾರಭೂಮಿಯುತ್ಪನ್ನವಾಯಿತು. ಕೃಷ್ಣನು ಅಲ್ಲಿಗೆ ಬಂದ ಬಳಿಕ ಹೊಸ ಪ್ರಾಯ (ಕಿಶೋರ)ದವನಾಗಿ ರಾಧೆಯನ್ನು ಕುರಿತು ಇಂತೆಂದನು, "ನೀನು ಗೋ ಲೋಕಧಾಮವನ್ನು ಸ್ಮರಿಸುತ್ತಿರುವೆಯಾದರೆ ನಾನು ಒಪ್ಪಿಕೊಂಡಂತೆ ನಡೆ

ಯಿಸುತಲಿರುವೆನು.” ಹೀಗೆ ಅವರು ಪ್ರೇಮಾಲಾಪದಲ್ಲಿರಲು ಆಗ ಬ್ರಹ್ಮನು ಅಲ್ಲಿಗೆ ಬಂದು ರಾಧೆಯನ್ನು ಬಹಳವಾಗಿ ಸ್ತುತಿಸಿ ಕೊನೆಗೆ ತಾನೇ ಕನ್ಯಾದಾಯಕನಾಗಿ ನಿಂತು ಯಥಾ ವಿಹಿತವಾದ ವೇದವಿಧಿಯನ್ನನುಸರಿಸಿ ಅವಳನ್ನು ಕೃಷ್ಣನಿಗೆ ಸಮರ್ಪಿಸಿ, ಅವರಿಗೆ ವಿವಾಹಬಂಧನವನ್ನು ಕಟ್ಟಿ ಅಂತರ್ಧಾನನಾದನು. ರಾಯಣನೊಡನೆ ರಾಧೆಗೆ ವಿವಾಹವಾಗಿತ್ತೋ ಇಲ್ಲವೋ, ಆಗಿದ್ದರೆ ಇದಕ್ಕೆ ಮೊದಲೋ ಅಥವಾ ಇದಾದಮೇಲೆಯೋ? ಬ್ರಹ್ಮವೈವರ್ತದಲ್ಲಿ ಹುಡುಕಲು ನನಗೆ ದೊರೆಯಲಿಲ್ಲ. ಕೃಷ್ಣ ರಾಧೆಯರ ವಿವಾಹವಾದ ಬಳಿಕ ವಿಹಾರವರ್ಣನೆ. ಬ್ರಹ್ಮವೈವರ್ತದ ರಾಸಲೀಲೆಯೂ ಈ ಬಗೆಯದೇ ಎಂದು ಹೇಳಬೇಕಾದುದಿಲ್ಲ.

ಪಾಠಕರೆ ನೋಡಿ. ಅಂತೂ ಬ್ರಹ್ಮವೈವರ್ತಕಾರನು ಸಂಪೂರ್ಣವಾಗಿ ಹೊಸದಾದ ವೈಷ್ಣವ ಧರ್ಮವೊಂದನ್ನು ರಚಿಸಿರುವನು. ಇದರ ಹೆಸರು ವಾಸನೆಗಳು ಕೂಡಾ ವಿಷ್ಣು, ಭಾಗವತ ಅಥವಾ ಮತ್ತಾವ ಪುರಾಣದಲ್ಲಿಯೂ ಇಲ್ಲ. ರಾಧೆಯೇ ಈ ನೂತನ ವೈಷ್ಣವ ಧರ್ಮಕ್ಕೆ ಕೇಂದ್ರಸ್ವರೂಪಳಾದವಳು. ಜಯದೇವನು ಈ ಹೊಸ ಧರ್ಮವನ್ನು ಹಿಡಿದೇ ಗೋವಿಂದ ಗೀತೆಯನ್ನು ಬರೆದಿರುವನು. ಅವನ ಮೇಲುಪಂಕ್ತಿಯನ್ನು ಹಿಡಿದು ವಿದ್ಯಾಪತಿ, ಚಂಡೀದಾಸ ಮೊದಲಾದ ವಂಗ ವೈಷ್ಣವರು ಕೃಷ್ಣ ಸಂಗೀತವನ್ನು ರಚಿಸಿರುವರು. ಇದೇ ಧರ್ಮವನ್ನವಲಂಬಿಸಿಯೇ ಶ್ರೀ ಚೈತನ್ಯದೇವನು ಕಾಂತರಸಾಶ್ರಿತವಾದ ಅಭಿನವಭಕ್ತಿವಾದವನ್ನು ಪ್ರಚಾರಮಾಡಿರುವನು. ಹೇಳುವುದೇನು—ಕವಿ, ಋಷಿ, ಪುರಾಣ, ಶಾಸ್ತ್ರ—ಇವೆಲ್ಲಕ್ಕಿಂತ ಬ್ರಹ್ಮವೈವರ್ತಕಾರನೇ ವಂಗಜೀವನದ ಮೇಲೆ ಹೆಚ್ಚಾದ ಆಧಿಪತ್ಯವನ್ನು ವಿಸ್ತರಿಸಿರುವನು. ಈ ಹೊಸ ಧರ್ಮದ ತಾತ್ಪರ್ಯವೇನು ? ಇದೆಲ್ಲಿಂದ ಅಂಕುರಿಸಿತು ?

ಭಾರತವರ್ಷದಲ್ಲುತ್ಪನ್ನವಾದ ದರ್ಶನ ಶಾಸ್ತ್ರಗಳೆಲ್ಲವುಗಳಲ್ಲಿ ಆರು ಮಟ್ಟಿಗೆ ಎಲ್ಲೆಲ್ಲಿಯೂ ಪ್ರಾಧಾನ್ಯವನ್ನು ಪಡೆದಿವೆ. ಈ ಆರರಲ್ಲಿಯೂ ಎರಡರ ಪ್ರಖ್ಯಾತಿಯೇ ಹೆಚ್ಚು. ವೇದಾಂತ, ಸಾಂಖ್ಯ. ವ್ಯಾಸ ಪ್ರಣೀತವಾದ ಬ್ರಹ್ಮಸೂತ್ರದ ಆಧಾರದ ಮೇಲೆ ವೇದಾಂತ ದರ್ಶನವು ಹುಟ್ಟಿರುವುದೆಂದು ಹಲವರು ನಂಬಿರುವರು. ವಸ್ತುತಃ ವೇದಾಂತದ ಮೂಲವು ಉಪ

ನಿಷತ್ತು, ಬ್ರಹ್ಮಸೂತ್ರವಲ್ಲ. ಉಪನಿಷತ್ತನ್ನು ಕೂಡಾ ವೇದಾಂತವೆಂದು ಕರೆಯುವರು. ಉಪನಿಷತ್ತಿನಲ್ಲಿ ಹೇಳಿರುವ ಬ್ರಹ್ಮತತ್ತ್ವದಲ್ಲಿ ಸಂಕ್ಷೇಪವಾಗಿ ಈಶ್ವರನನ್ನು ಬಿಟ್ಟು ಇನ್ನೇನೂ ಇಲ್ಲ. ಈ ಜಗತ್ತೂ ಜೀವಗಣಗಳೂ ಈಶ್ವರನ ಅಂಶ. ಈಶ್ವರನೊಬ್ಬನು. ಸೃಷ್ಟಿಮಾಡಲು ಅಪೇಕ್ಷಿಸಿ ಬಹುವಾದನು. ಅವನು ಪರಮಾತ್ಮನು. ಜೀವಾತ್ಮನು ಪರಮಾತ್ಮನ ಅಂಶ. ಈಶ್ವರನ ಮಾಯೆಯು ದೆಸೆಯಿಂದಲೇ ಜೀವಾತ್ಮನ ಪ್ರಾಪ್ತಿ ಮತ್ತು ಈ ಮಾಯೆಯಿಂದ ಮುಕ್ತನಾದರೇನೇ ಈಶ್ವರನಲ್ಲಿ ಅಡಕವಾಗುವುದು. ಇದು ಪೂರ್ಣ ಅದ್ವೈತವಾದ.

ಮೊಟ್ಟಮೊದಲಿನ ವೈಷ್ಣವಧರ್ಮವು ವೇದಾಂತದ ಈ ಈಶ್ವರ ವಾದದ ತಳಹದಿಯ ಮೇಲೆ ರಚಿತವಾಯಿತು. ವಿಷ್ಣು ಮತ್ತು ಇವನ ಅವತಾರವಾದ ಕೃಷ್ಣನು ವೇದಾಂತದ ಈಶ್ವರನು. ವಿಷ್ಣುಪುರಾಣ, ಭಾಗವತ ಮತ್ತು ಇದೇ ರೀತಿಯ ಇತರ ಗ್ರಂಥಗಳಲ್ಲಿ ವಿಷ್ಣು ಸ್ತೋತ್ರ ಮತ್ತು ಕೃಷ್ಣ ಸ್ತೋತ್ರಗಳು ಸಂಪೂರ್ಣವಾಗಿಯೋ ಅಥವಾ ಭಾಗಮಾತ್ರವಾಗಿಯೇ ಅಂತೂ ಅದ್ವೈತವಾದಾತ್ಮಕಗಳು. ಇದಕ್ಕೆ ಮುಖ್ಯವಾದ ಉದಾಹರಣೆಯು ಶಾಂತಿಪರ್ವದಲ್ಲಿ ಭೀಷ್ಮನಿಂದಾದ ಕೃಷ್ಣ ಸ್ತೋತ್ರವೇ.

ಆದರೆ, ದ್ವೈತಾದ್ವೈತವಾದವು ಹಲವು ಬಗೆಯಾಗಿ ಆಗಬಹುದು. ಈಗಿನ ಕಾಲದಲ್ಲಿ--ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಮತ್ತು ವಲ್ಲಭಾಚಾರ್ಯರು ಇವರುಗಳೆಲ್ಲ ಅದ್ವೈತವಾದಕ್ಕೆ ಬೇರೆ ಬೇರೆಯ ವ್ಯಾಖ್ಯಾನವನ್ನು ಮಾಡಿ ಅದ್ವೈತವಾದ, ವಿಶಿಷ್ಟಾದ್ವೈತವಾದ, ದ್ವೈತಾದ್ವೈತವಾದ, ವಿಶುದ್ಧಾದ್ವೈತ ವಾದವೆಂದು ನಾಲ್ಕು ಬಗೆಯಾದ ಮಾತುಗಳನ್ನು ಪ್ರಚಾರಮಾಡಿರುವರು. ಪೂರ್ವಕಾಲದಲ್ಲಿ ಈಶ್ವರ ಮತ್ತು ಈಶ್ವರಸ್ಥಿತ ಜಗತ್ತಿನ ಸಂಬಂಧವಾಗಿ ಎರಡು ಬಗೆಯ ವ್ಯಾಖ್ಯಾನಗಳು ಕಂಡುಬರುವವು. ಈಶ್ವರನ ವಿನಾ ಇನ್ನೇನೂ ಇಲ್ಲ. ಎಂದರೆ, ಈಶ್ವರನೇ ಜಗತ್ತು. ಅವನನ್ನು ಬಿಟ್ಟು ಪ್ರಪಂಚದ ಯಾವ ಪದಾರ್ಥವೂ ಇರದು ಎಂಬುದೊಂದು ಮತ. ಜಗತ್ತು ಈಶ್ವರನಲ್ಲ ಅಥವಾ ಈಶ್ವರನು ಜಗತ್ತಲ್ಲ; ಆದರೆ ಈಶ್ವರನಲ್ಲಿ ಜಗತ್ತಿರುವುದು—ಸೂತ್ರೇ ಮಣಿಗಣಾಇವ—ಸೂತ್ರದಲ್ಲಿ ಮಣಿಗಳಂತೆ. ಎಂದರೆ ದಾರಕ್ಕೆ ಪೋಣಿಸಿರುವ

ಮಣಿಗಳಂತೆ ಈಶ್ವರನು ಸಮಸ್ತ ವಸ್ತುಗಳಲ್ಲಿಯೂ ಇರುವನಾದರೂ ಈಶ್ವರನು ವಸ್ತುವಲ್ಲ. ಅವನು ಬೇರೆ ಎಂಬುದು ಇನ್ನೊಂದು ಮತ. ಪ್ರಾಚೀನವಾದ ವೈಷ್ಣವ ಧರ್ಮ ಈ ಎರಡನೆಯ ಮತದ ಮೇಲೆ ನಿಂತಿರುವುದು.

ಪ್ರಧಾನವಾದ ಇನ್ನೊಂದು ದರ್ಶನಶಾಸ್ತ್ರವು ಸಾಂಖ್ಯವಷ್ಟೆ. ಕಪಿಲನ ಸಾಂಖ್ಯವು ಈಶ್ವರನನ್ನೇ ಒಪ್ಪುವುದಿಲ್ಲವಾದರೂ ಆಮೇಲಿನ ಸಾಂಖ್ಯವಾದಿಗಳು ಈಶ್ವರನನ್ನು ಒಪ್ಪಿಕೊಂಡಿರುವರು. ಸಾಂಖ್ಯದ ಮರ್ಮವೇನೆಂದರೆ— ಜಡಜಗತ್ತು ಅಥವಾ ಜಡಜಗನ್ಮಯಿಯಾದ ಶಕ್ತಿಯು ಮತ್ತು ಪರಮಾತ್ಮನು; ಇವರು ಸುತರಾಂ ಬೇರೆ ಬೇರೆ. ಪರಮಾತ್ಮ ಅಥವಾ ಪುರುಷನು ಸರ್ವಥಾ ಸಂಗಶೂನ್ಯನು. ಅವನು ಏನನ್ನೂ ಮಾಡುನು ಮತ್ತು ಜಗತ್ತಿಗೂ ಅವನಿಗೂ ಯಾವ ಸಂಬಂಧವೂ ಇರುವುದಿಲ್ಲ. ಜಡಜಗತ್ತು ಅಥವಾ ಜಡಜಗನ್ಮಯವಾದ ಶಕ್ತಿಗೆ ಅವರು ಪ್ರಕೃತಿಯೆನ್ನುವರು. ಈ ಪ್ರಕೃತಿಯೇ ಸೃಷ್ಟಿಸ್ಥಿತಿಲಯಗಳಿಗೆ ಕಾರಣಳಾದವಳು. ಈ ಪ್ರಕೃತಿಪುರುಷ ತತ್ತ್ವದಿಂದ ಪ್ರಕೃತಿ ಪ್ರಧಾನವಾದ ತಾಂತ್ರಿಕ ಧರ್ಮವುಂಟಾಗಿರುವುದು. ಈ ತಾಂತ್ರಿಕ ಧರ್ಮವು ಪ್ರಕೃತಿಪುರುಷರಿಗೆ ಅತಿ ಬಲವತ್ತರವಾದ ಸಂಬಂಧವನ್ನೋ ಐಕ್ಯವನ್ನೋ ಹೂಡಿ, ಪ್ರಕೃತಿಯೇ ಪ್ರಧಾನವೆಂದು ಹೇಳಿಕೊಂಡು ಲೋಕರಂಜತೆಯನ್ನು ಪಡೆದುಕೊಂಡಿತ್ತು. ವೈಷ್ಣವರ ಅದ್ವೈತವಾದದಿಂದ ಅಸಂತುಷ್ಟರಾದವರು ತಾಂತ್ರಿಕ ಧರ್ಮದ ಆಶ್ರಯವನ್ನು ಪಡೆದುಕೊಂಡರು. ಈ ತಾಂತ್ರಿತ ಧರ್ಮದ ಸಾರಾಂಶವನ್ನು ವೈಷ್ಣವ ಧರ್ಮದೊಡನೆ ಬೆರಸಿ ವೈಷ್ಣವ ಧರ್ಮವನ್ನು ಮತ್ತೆ ಮೆರೆಯಿಸಬೇಕೆಂತಲೋ ಅಥವಾ ಸಂಸ್ಕರಣ ಮಾಡಬೇಕೆಂತಲೋ ಬ್ರಹ್ಮವೈವರ್ತಕಾರನು ಯತ್ನಮಾಡಿರುವನು. ಇವನಿಂದ ಸೃಷ್ಟಿತಳಾದ ರಾಧೆಯು ಸಾಂಖ್ಯವಾದಿಗಳ ಮೂಲ ಪ್ರಕೃತಿ ಸ್ಥಾನೀಯಳು. ಕೃಷ್ಣನು ಮೂಲಪ್ರಕೃತಿಯನ್ನು ಸೃಜಿಸಿ ಆಮೇಲೆ ರಾಧೆಯನ್ನು ಹುಟ್ಟಿಸಿದನೆಂದು ಬ್ರಹ್ಮವೈವರ್ತ ಪುರಾಣದ ಬ್ರಹ್ಮಖಂಡದಲ್ಲಿ ಬರೆದಿದ್ದರೂ ಶ್ರೀ ಕೃಷ್ಣ ಜನ್ಮ ಖಂಡದಲ್ಲಿ ರಾಧೆಯನ್ನು ಶ್ರೀ ಕೃಷ್ಣನು ಸ್ವಯಂ ತಾನೇ ಬಾರಿಬಾರಿಗೂ ಮೂಲಪ್ರಕೃತಿಯೆಂದು ಕರೆಯುತಲಿದಾನೆ:—

"ಮಮಾರ್ಧಾಂಶ ಸ್ವರೂಪಾ ತ್ವಂ ಮೂಲಪ್ರಕೃತಿರೀಶ್ವರೀ"

ಶ್ರೀ ಕೃಷ್ಣ ಜನ್ಮಖಂಡ, ೧೫ನೆಯ ಅಧ್ಯಾಯ, ೬೭ನೆಯ ಶ್ಲೋಕ

ಪರಮಾತ್ಮನೊಡನೆ ಪ್ರಕೃತಿಯ ಅಥವಾ ಕೃಷ್ಣನೊಡನೆ ರಾಧೆಯ ಸಂಬಂಧವು ಎಂತಹದೆಂಬುದನ್ನು ಪುರಾಣಕಾರನು ಹೀಗೆ ತಿಳಿಯಪಡಿಸಿರುವನು. ಇದು ಕೃಷ್ಣನ ಹೇಳಿಕೆ—

ಯಥಾ ತ್ವಂ ಚ ತಥಾಹಂ ಚ ಭೇದೌಹಿ ನಾವಯೋರ್ಧ್ರುವಂ ॥ ೫೭ ॥
ಯಥಾ ಕ್ಷೀರೇಚ ಧಾವಳ್ಯಂ ಯಥಾಗ್ನೌ ದಾಹಿಕಾಸತಿ ।
ಯಥಾ ಪೃಥಿವ್ಯಾಂ ಗಂಧಶ್ಚ ತಥಾಹಂ ತ್ವಯಿ ಸಂತತಂ ॥ ೫೮ ॥
ವಿನಾ ಮೃದಾ ಘಟಂ ಕರ್ತುಂ ವಿನಾ ಸ್ವರ್ಣೇನ ಕುಂಡಲಂ ।
ಕುಲಾಲಃ ಸ್ವರ್ಣಕಾರಶ್ಚ ನಹಿ ಶಕ್ತಃ ಕದಾಚನ ॥ ೫೯ ॥
ತಥಾ ತ್ವಯಾ ವಿನಾ ಸೃಷ್ಟಿಂ ನ ಚ ಕರ್ತುಮಹಂ ಕ್ಷಮಃ ।
ಸೃಷ್ಟೇರಾಧಾರಭೂತಾ ತ್ವಂ ಬೀಜರೂಪೋಽಹಮಚ್ಯುತಃ ॥ ೬೦ ॥

* * *

ಕೃಷ್ಣಂ ವದಂತಿ ಮಾಂ ಲೋಕಾಸ್ತ್ವಯೈವರಹಿತಂ ಯದಾ ।
ಶ್ರೀ ಕೃಷ್ಣಂ ಚ ತದಾ ತೇ ಹಿ ತ್ವಯೈವ ಸಹಿತಂ ಪರಂ ॥ ೬೨ ॥
ತ್ವಂ ಚ ಶ್ರೀಸ್ತ್ವಂ ಚ ಸಂಪತ್ತಿಸ್ತ್ವಮಾಧಾರಸ್ವರೂಪಿಣಿ ।
ಸರ್ವಶಕ್ತಿಸ್ವರೂಪಾಸಿ ಸರ್ವೇಷಾಂ ಚ ಮಮಾಪಿ ಚ ॥ ೬೩ ॥
ತ್ವಂ ಸ್ತ್ರೀಪುಮಾನಹಂ ರಾಧೇ ನೇತಿ ವೇದೇಷು ನಿರ್ಣಯಃ ।
ತ್ವಂ ಚ ಸರ್ವಸ್ವರೂಪಾಣಿ ಸರ್ವರೂಪೋಽಹಮಕ್ಷರೇ ॥ ೬೪ ॥
ಯದಾ ತೇಜಃ ಸ್ವರೂಪೋಽಹಂ ತೇಜೋ ರೂಪಾಸಿ ತ್ವಂ ತದಾ ।
ನ ಶರೀರೀ ಯದಾಽಽಹಂಚ ತದಾತ್ವಮಶರೀರಿಣೀ ॥ ೬೫ ॥
ಸರ್ವಬೀಜಸ್ವರೂಪೋಽಹಂ ಯಥಾ ಯೋಗೇನ ಸುಂದರಿ ।
ತ್ವಂಚ ಶಕ್ತಿಸ್ವರೂಪಾಸಿ ಸರ್ವಸ್ತ್ರೀರೂಪಧಾರಿಣಿ ॥ ೬೬ ॥

ಶ್ರೀ ಕೃಷ್ಣ ಜನ್ಮಖಂಡ, ೧೫ನೆಯ ಅಧ್ಯಾಯ

ನೀನಿರುವೆಡೆಯಲ್ಲಿಯೇ ನಾನು, ನಮ್ಮಿಬ್ಬರಿಗೂ ನಿಶ್ಚಿತವಾದ ಭೇದವಾವುದೂ ಇರುವುದಿಲ್ಲ. ಹಾಲಿನ ಬಿಳುಪಿನಂತೆ, ಬೆಂಕಿಯೊಳಗಣ ಕಾವಿನಂತೆ, ಭೂಮಿಯಲ್ಲಿನ ಗಂಧದಂತೆ ನಿನ್ನಲ್ಲಿ ಸರ್ವದಾ ನಾನಿರುವೆನು. ಮಣ್ಣಿಲ್ಲದೆ ಕುಂಬಾರನು ಮಡಿಕೆಯನ್ನೂ ಹೊನ್ನಿಲ್ಲದೆ ಅಕ್ಕಸಾಲೆಯು ಕುಂಡಲವನ್ನೂ ಎಂತು ಮಾಡಲಾರರೋ, ಹಾಗೆಯೇ ನಾನು ನಿನ್ನನ್ನು

ಬಿಟ್ಟು ಸೃಷ್ಟಿಯನ್ನು ಮಾಡಲಾಗುವುದಿಲ್ಲ. ನೀನು ಸೃಷ್ಟಿಗೆ ಆಧಾರ ಭೂತಳು, ನಾನು ನಾಶರಹಿತವಾದ ಬೀಜರೂಪಿಯು. ನಿನ್ನನ್ನು ಬಿಟ್ಟಿರಲು ಜನರು ನನ್ನನ್ನು ಕೃಷ್ಣನೆನ್ನುವರು. ನಿನ್ನೊಡಗೂಡಿರಲು ಶ್ರೀ ಕೃಷ್ಣನೆನ್ನು ವರು. ನೀನೇ ಶ್ರೀ, ನೀನೇ ಸಂಪತ್ತು, ನೀನೇ ಆಧಾರಸ್ವರೂಪಿಣಿಯು, ಸರ್ವರ ಮತ್ತು ನನ್ನ ಸರ್ವಶಕ್ತಿಸ್ವರೂಪಳೇ ನೀನು. ಎಲೈ ರಾಧೆಯೆ, ನೀನು ಸ್ತ್ರೀ, ನಾನು ಪುರುಷ; ವೇದಗಳೂ ಕೂಡ ಇದನ್ನು ನಿರ್ಣೈಸಲಾರ ವಾಗಿವೆ. ಎಲೈ ಅಕ್ಷರಳೇ ನೀನು ಸರ್ವಸ್ವರೂಪಳು, ನಾನು ಸರ್ವರೂಪನು. ನಾನು ತೇಜಃಸ್ವರೂಪನಾಗಲು ನೀನಾಗ ತೇಜೋರೂಪಳು. ನಾನು ಶರೀರಿ ಯಲ್ಲವಾಗಲು ನೀನು ಅಶರೀರಿಣಿಯಾಗುವಿ. ಎಲೈ ಸುಂದರಿ ನಾನು ಯೋಗದ್ವಾರ ಸರ್ವಬೀಜಸ್ವರೂಪನಾಗಲು ನೀನಾಗ ಶಕ್ತಿಸ್ವರೂಪಳಾದ ಸರ್ವಸ್ತ್ರೀರೂಪವನ್ನು ಧರಿಸುವವಳಾಗುವೆ. ತಿರುಗಿಯೂ—

ಯಥಾಹಂ ಚ ತಥಾತ್ವಂ ಚ ಯಥಾ ಧಾವಳ್ಯ ದುಗ್ಧಯೋಃ ।
ಭೇದಃ ಕದಾಪಿ ನಭವೇನ್ನಿಶ್ಚಿತಂ ಚ ತಥಾವಯೋಃ ॥ ೫೬ ॥

* * *

ತ್ವತ್ಕಲಾಂಶಾತ್ ಶಕಲಯಾ ವಿಶ್ವೇಷು ಸರ್ವಯೋಷಿತಃ ।
ಯಾ ಯೋಷಿತ್ ಸಾ ಚ ಭವತಿ ಯಃ ಪುಮಾನ್ ಸೋಽಹಮೇವ ಚ ॥ ೬೮ ॥
ಅಹಂ ಚ ಕಲಯಾ ವಹ್ನಿಸ್ತ್ವಂ ಸ್ವಾಹಾ ದಾಹಿಕಾ ಕ್ರಿಯಾ ।
ತ್ವಯಾ ಸಹ ಸಮರ್ಥೋಽಹಂ ನಾಲಂ ದಗ್ಧುಂ ಚ ತ್ವಾಂ ವಿನಾ ॥ ೬೯ ॥
ಅಹಂ ದೀಪ್ತಿಮತಾಂ ಸೂರ್ಯಃ ಕಲಯಾ ತ್ವಂ ಪ್ರಭಾತ್ಮಿಕಾ ।
ಸಂಗತಶ್ಚತ್ವಯಾ ಭಾಸೇ ತ್ವಾಂ ವಿನಾಽಹಂ ನ ದೀಪ್ತಿಮಾನ್ ॥ ೭೦ ॥
ಅಹಂ ಚ ಕಲಯಾ ಚಂದ್ರಸ್ತ್ವಂಚ ಶೋಭಾ ಚ ರೋಹಿಣೀ ।
ಮನೋಹರಸ್ತ್ವಯಾ ಸಾರ್ಧಂ ತ್ವಾಂ ವಿನಾ ಚ ನ ಸುಂದರೀ ॥ ೭೧ ॥
ಅಹಮಿಂದ್ರಶ್ಚ ಕಲಯಾ ಸ್ವರ್ಗ ಲಕ್ಷ್ಮೀಶ್ಚ ತ್ವಂ ಸತಿ ।
ತ್ವಯಾ ಸಾರ್ಧಂ ದೇವರಾಜೋ ಹತಶ್ರೀಶ್ಚ ತ್ವಯಾ ವಿನಾ ॥ ೭೨ ॥
ಅಹಂ ಧರ್ಮಂ ಚ ಕಲಯಾ ತ್ವಂ ಚ ಮೂರ್ತಿಶ್ಚ ಧರ್ಮಿಣೀ ।
ನಾಹಂ ಶಕ್ತೋ ಧರ್ಮಕೃತ್ಯ ತ್ವಾಂ ಚ ಧರ್ಮಕ್ರಿಯಾಂ ವಿನಾ ॥ ೭೩ ॥
ಅಹಂ ಯಜ್ಞಶ್ಚ ಕಲಯಾ ತ್ವಂ ಚ ಸ್ವಾಂಶೇನ ದಕ್ಷಿಣಾ ।
ತ್ವಯಾ ಸಾರ್ಧಂ ಚ ಫಲದೋಽಪ್ಯಸಮರ್ಥಃ ತ್ವಯಾ ವಿನಾ ॥ ೭೪ ॥

ಕಲಯಾ ಪಿತೃಲೋಕೋಽಹಂ ಸ್ವಾಂಶೇನ ತ್ವಂ ಸ್ವಧಾಸತಿ ।
ತ್ವಯಾಲಂ ಕಾವ್ಯದಾನೇಚ ಸದಾ ನಾಲಂ ತ್ವಯಾ ವಿನಾ ॥ ೭೫ ॥

ತ್ವಂ ಚ ಸಂಪತ್ಸ್ವರೂಪಾಹಮಿಾಶ್ವರಶ್ಚ ತ್ವಯಾ ಸಹ ।
ಲಕ್ಷ್ಮೀಯುಕ್ತಸ್ತ್ವಯಾ ಲಕ್ಷ್ಮಿ ನಿಶ್ರೀಕಶ್ಚಾಪಿ ತ್ವಾಂ ವಿನಾ ॥ ೭೬ ॥

ಅಹಂ ಪುಮಾಂಸ್ತ್ವ ಪ್ರಕೃತಿರ್ನಸ್ರಷ್ಟಾಹಂ ತ್ವಯಾ ವಿನಾ ।
ಯದಾ ನಾಲಂ ಕುಲಾಲಶ್ಚ ಘಟಂ ಕರ್ತುಂ ಮೃದಾ ವಿನಾ ॥ ೭೭ ॥

ಅಹಂ ಶೇಷಶ್ಚ ಕಲಯಾ ಸ್ವಾಂಶೇನ ತ್ವಂ ವಸುಂಧರಾ ।
ತ್ವಾಂ ಶಸ್ಯರತ್ನಾಧಾರಾಂಶ್ಚ ಭಿಭರ್ಮಿ ಮೂರ್ಧ್ನಿ ಸುಂದರಿ ॥ ೭೮ ॥

ತ್ವಂ ಚ ಶಾಂತಿಶ್ಚ ಕಾಂತಿಶ್ಚ ಮೂರ್ತಿಮೂರ್ತಿಮತೀ ಸತಿ ।
ತುಷ್ಟಿಃ ಪುಷ್ಟಿಃ ಕ್ಷಮಾ ಲಜ್ಜಾ ಕ್ಷುತ್ತೃಷ್ಣಶ್ಚ ಪರಾ ದಯಾ ॥ ೭೯ ॥

ನಿದ್ರಾಶುದ್ಧಾ ಚ ತಂದ್ರಾಚ ಮೂರ್ಚ್ಛಾ ಚ ಸಂತತಿಕ್ರಿಯಾ ।
ಮುಕ್ತಿರೂಪಾ ಭಕ್ತಿರೂಪಾ ದೇಹಿನಾಂ ದುಃಖರೂಪಿಣೀ ॥ ೮೦ ॥

ಮಮಾಧಾರಾ ಸದಾ ತ್ವಷ್ಣ ತವಾತ್ಮಾಹಂ ಪರಸ್ಪರಂ ।
ಯಥಾ ತ್ವಂ ಚ ತಥಾಹಂ ಚ ಸಮೌ ಪ್ರಕೃತಿ ಪೂರುಷೌ ॥ ೮೧ ॥

ನ ಹಿ ಸೃಷ್ಟಿರ್ಭವೇದ್ದೇವಿ ದ್ವಯೋರೇಕತರಂ ವಿನಾ ।

ಶ್ರೀ ಕೃಷ್ಣ ಜನ್ಮಖಂಡ, ೬೭ನೆಯ ಅಧ್ಯಾಯ*

"ಹಾಲಿನ ಬಿಳುಪಿನಂತೆ ನಾನಿರುವಲ್ಲಿಯೇ ನೀನೂ ಇರುವವಳು, ನನಗೂ ನಿನಗೂ ಭೇದವೆಂದಿಗೂ ಇಲ್ಲ; ಇದು ನಿಶ್ಚಯ. ಪ್ರಪಂಚದ ಸ್ತ್ರೀಯರೆಲ್ಲಾ ನಿನ್ನ ಕಲಾಂಶದ ಅಂಶಕಲೆಗಳು: ಎಲ್ಲಿ ಸ್ತ್ರೀಯರೋ ಅಲ್ಲಿಯೇ ನೀನು, ಪುರುಷರೆಲ್ಲಿಯೊ ಅಲ್ಲೇ ನಾನಿರುವೆನು. ಕಲೆಯದ್ವಾರಾ ನಾನು ಅಗ್ನಿ, ನೀನು ಪ್ರಿಯಳಾದ ಜ್ವಾಲೆ, ಸ್ವಾಹಾದೇವಿ. ನೀನು ಸೇರಿ ಇರಲು ನಾನು ದಹಿಸುವೆನು, ನೀನಿಲ್ಲದಿದ್ದರೆ ಆಗುವುದಿಲ್ಲ. ನಾನು ದೀಪ್ತಿಮಂತರಲ್ಲಿ ಸೂರ್ಯನು, ನೀನು ಕಲಾಂಶದಿಂದ ಪ್ರಭೆಯು, ನೀನು ಜೊತೆಯಲ್ಲಿರಲು ನಾನು ಬೆಳಗುವೆನೇ ಹೊರತು ನೀನಿಲ್ಲವಾದರೆ ಆಗುವುದಿಲ್ಲ. ಕಲೆಯೊಂದರಿಂದ ನಾನು ಚಂದ್ರನು, ನೀನು ಶೋಭಾ ಮತ್ತು ರೋಹಿಣಿಯು. ಎಲೈ ಸುಂದರಿ, ನಿನ್ನೊಡನೆ ಇರಲು ನಾನು ಮನೋಹರ

---

* "ಬಂಗಭಾಷಿ" ಕಾರ್ಯಾಲಯದಿಂದ ಹೊರಟ ಸಂಸ್ಕಾರದಿಂದ ಮೇಲಿನದು ಎತ್ತಲಾಗಿದೆ. ಮೂಲದಲ್ಲಿ ಸ್ವಲ್ಪ ತಬ್ಬಿಬ್ಬಾಗಿದೆಯೆಂದು ತೋರುವುದು.

ನಾಗಿರುವೆನಲ್ಲದೆ ಬೇರೆಯಿಲ್ಲ. ಎಲೈ ಸತಿಯೆ, ಕಲೆಯ ದ್ವಾರಾ ನಾನು ಇಂದ್ರನು, ನೀನು ಸ್ವರ್ಲಕ್ಷ್ಮಿ. ನಿನ್ನೊಡಗೂಡಿ ನಾನು ದೇವರಾಜನಾಗಿರುವೆನು. ನೀನಿಲ್ಲದಿರಲು ನಾನು ಕಾಂತಿಹೀನನಾಗುವೆನು. ನಾನು ಕಲೆಯ ದ್ವಾರಾ ಧರ್ಮನು, ನೀನು ಧರ್ಮಿಣೀ ಮೂರ್ತಿ. ಧರ್ಮಕ್ರಿಯಾ ಸ್ವರೂಪಳಾದ ನಿನ್ನನ್ನು ಬಿಟ್ಟು ಧರ್ಮಕಾರ್ಯದಲ್ಲಿ ನನಗೆ ಸಾಮರ್ಥ್ಯವೆಲ್ಲಿಯದು? ಕಲೆಯೊಂದರಿಂದ ನಾನು ಯಜ್ಞ, ನೀನು ನಿನ್ನಂಶದಿಂದ ದಕ್ಷಿಣೆಯು. ನೀನು ಜೊತೆಯಲ್ಲಿರಲು ನಾನು ಫಲದಾಯಕನಾಗುವೆನು, ಇಲ್ಲದಿದ್ದರಲ್ಲ. ಕಲೆಯ ದ್ವಾರಾ ನಾನು ಪಿತೃಲೋಕ, ನೀನು ನಿನ್ನಂಶದಿಂದ ಸ್ವಧೆ, ನಿನ್ನನ್ನು ತ್ಯಜಿಸಿ ಮಾಡಿದ ಪಿತೃದಾನ ವ್ಯರ್ಥ. ನೀನು ಸಂಪತ್ಸ್ವರೂಪಳು, ನೀನು ಜೊತೆಯಲ್ಲಿದ್ದರೇನೇ ನಾನು ಪ್ರಭು. ನೀನು ಲಕ್ಷ್ಮಿ, ನಿನ್ನೊಡಗೂಡಿ ನಾನು ಶ್ರೀಮಂತನು, ನಿನ್ನನ್ನು ತೊರೆದರೆ ನಾನು ನಿಶ್ರೀಕನು. ನಾನು ಪುರುಷ, ನೀನು ಪ್ರಕೃತಿ; ನಿನ್ನನ್ನು ತ್ಯಜಿಸಿ ನಾನು ಸೃಷ್ಟಿಕರ್ತನಾಗೆನು. ಮಣ್ಣಿಲ್ಲದೆ ಕುಂಬಾರನು ಎಂತು ಗಡಿಗೆಯನ್ನು ಮಾಡಲಾರನೋ ಅಂತೆಯೇ ನಾನೂ ನಿನ್ನನ್ನು ಬಿಟ್ಟು ಸೃಜಿಸಲಾರೆನು. ನಾನು ಕಲೆಯ ದ್ವಾರಾ ಶೇಷನು, ನೀನು ವಸುಂಧರೆ. ಎಲೈ ಸುಂದರಿಯೆ, ಶಸ್ಯರತ್ನಗಳಿಗೆ ಆಧಾರಳಾದ ನಿನ್ನನ್ನು ನಾನು ತಲೆಯಮೇಲೆ ಹೊತ್ತಿರುವೆನು. ಎಲೈ ಸತಿಯೆ! ನೀನೇ ಶಾಂತಿ, ಕಾಂತಿ, ಮೂರ್ತಿ, ಮೂರ್ತಿಮತ್ತಾದವಳು; ತುಷ್ಟಿ, ಪುಷ್ಟಿ, ಕ್ಷಮೆ, ಲಜ್ಜೆ, ಹಸಿವು, ಬಾಯಾರಿಕೆ, ಪರಾದಯೆ, ಶುದ್ಧತೆ, ನಿದ್ರೆ, ತಂದ್ರತೆ, ಮೂರ್ಛೆ, ಸಂತತಿಕ್ರಿಯೆ, ಮೂರ್ತಿರೂಪಳು, ಭಕ್ತಿರೂಪಳು ಮತ್ತು ಜೀವನದ ದುಃಖ ಸ್ವರೂಪಳಾದವಳು. ನೀನೇ ಸದಾ ನನ್ನ ಆಧಾರ, ನಾನು ನಿನ್ನ ಆತ್ಮ. ನೀನಾವ ಬಳಿಯಲ್ಲಿಯೋ ನಾನಲ್ಲಿ ನಿನ್ನ ಸಮಾನ ಪ್ರಕೃತಿ ಪುರುಷನು; ಎಲೈ ದೇವಿಯೇ ಎರಡರ ಪೈಕಿ ಒಂದಿಲ್ಲವಾದರೂ ಸೃಷ್ಟಿಯಾಗುವುದಿಲ್ಲ."

ಈ ಬಗೆಯಾದ ಇನ್ನೂ ಹಲವು ಮಾತುಗಳನ್ನು ಎತ್ತಬಹುದಾದರೂ ಇಲ್ಲಿ ದೊರೆಯುವುದು ಸಾಂಖ್ಯದಲ್ಲಿ ತಿಳಿಯಪಡಿಸಿರುವ ದ್ವೈತವಾದವಲ್ಲ. ಸಾಂಖ್ಯದ ಪ್ರಕೃತಿಯು ತಂತ್ರ ಶಕ್ತಿಯಲ್ಲಿ ಪರಿಣಾಮವಾಗಿತ್ತಷ್ಟೆ. ಪ್ರಕೃತಿವಾದಕ್ಕೂ ಶಕ್ತಿವಾದಕ್ಕೂ ಇರುವ ತಾರತಮ್ಯವೇನೆಂದರೆ:—

ಪ್ರಕೃತಿಯು ಪುರುಷನಿಂದ ಸಂಪೂರ್ಣವಾಗಿ ಬೇರೆಯಾದುದು. ಪ್ರಕೃತಿಯೊಡನೆ ಪುರುಷನ ಸಂಬಂಧಕ್ಕೆ ಸಾಂಖ್ಯಪ್ರವಚನಕಾರನು ಸ್ಫಟಿಕ ಪಾತ್ರೆಯಲ್ಲಿನ ದಾಸವಾಳದ ಹೂವಿನ ಛಾಯೆಯ (ಬಿಂಬದ) ಹೋಲಿಕೆಯನ್ನು ಕೊಟ್ಟು ತಿಳಿಯಪಡಿಸಲು ಯತ್ನಿಸಿರುವನು. ಸ್ಫಟಿಕಪಾತ್ರೆಯೂ ದಾಸವಾಳದ ಹೂವೂ ಸಂಪೂರ್ಣವಾಗಿ ಬೇರೆ ಬೇರೆಯಾದುದಾದರೂ ಹೂವಿನ ಬಿಂಬವು ಪಾತ್ರೆಯಲ್ಲಿ ಪ್ರತಿಫಲಿಸುವುದು. ಪ್ರಕೃತಿ ಪುರುಷರಿಗಿರುವ ಸಂಬಂಧವು ಇಷ್ಟೇ ಬಲವತ್ತರವಾದುದು. ಶಕ್ತಿಯೊಡನೆ ಆತ್ಮದ ಸಂಬಂಧವಾದರೂ ಆತ್ಮವೇ ಶಕ್ತಿಗೆ ಆಧಾರವಾದುದು. ಆಧಾರವು ಆಧೇಯವನ್ನು ಬಿಟ್ಟು ಹೇಗೆ ಇರಲಾರದೋ ಹಾಗೆಯೇ ಆತ್ಮಕ್ಕೂ ಶಕ್ತಿಗೂ ಪಾರ್ಥಕ್ಯವಿಲ್ಲ. ಈ ಶಕ್ತಿವಾದವು ತಂತ್ರಗಳಲ್ಲಿ ಮಾತ್ರವಲ್ಲದೆ ಇನ್ನೆಲ್ಲಿಯೂ ಇಲ್ಲವೆಂದೇನೂ ಅಲ್ಲ. ವೈಷ್ಣವಪುರಾಣಕಾರನು ಸಾಂಖ್ಯದ ಪ್ರಕೃತಿಯನ್ನು ವೈಷ್ಣವೀಶಕ್ತಿಯಲ್ಲಿ ಹುಗಿದು ಇಟ್ಟಿರುವನು. ಇದನ್ನು ತಿಳಿಸುವುದಕ್ಕಾಗಿ ವಿಷ್ಣುಪುರಾಣದಿಂದ ಈ ಕೆಳಗಣ ಶ್ಲೋಕಗಳನ್ನು ಎತ್ತಿರುವೆನು :—

ನಿತ್ಯೈವ ಸಾ ಜಗನ್ಮಾತಾ ವಿಷ್ಣೋಃಶ್ರೀರನಪಾಯಿನೀ ।
ಯಥಾ ಸರ್ವಗತೋ ವಿಷ್ಣು ಸ್ತಥೈವೇಯಂ ದ್ವಿಜೋತ್ತಮ ॥ ೧೫ ॥

ಅರ್ಥೋ ವಿಷ್ಣುರಿಯಂ ವಾಣೀ ನೀತಿರೇಷಾ ನಯೋ ಹರಿಃ ।
ಬೋಧೋ ವಿಷ್ಣುರಿಯಂ ಬುದ್ಧಿರ್ಧರ್ಮೋಽಸೌ ಸತ್ಕ್ರಿಯಾತ್ವಿಯಂ ॥ ೧೬ ॥

ಸ್ರಷ್ಟಾ ವಿಷ್ಣುರಿಯಂ ಸೃಷ್ಟಿಃ ಶ್ರೀ ಭೂಮಿರ್ಭೂಧರೋ ಹರಿಃ ।
ಸಂತೋಷೋ ಭಗವಾನ್ ಲಕ್ಷ್ಮೀಸ್ತುಷ್ಟಿರ್ಮೈತ್ರೇಯ! ಶಾಶ್ವತೀ ॥ ೧೭ ॥

ಇಚ್ಛಾ ಶ್ರೀ ಭಗವಾನ್ ಕಾಮೋ ಯಜ್ಞೋಽಸೌ ದಕ್ಷಿಣಾ ತು ಸಾ ।
ಆದ್ಯಾಹುತಿರಸೌ ದೇವೀ ಪುರೋಡಾಶೋ ಜನಾರ್ದನಃ ॥ ॥ ೧೮ ॥

ಪತ್ನೀಶಾಲಾ ಮುನೇ! ಲಕ್ಷ್ಮೀಃ ಪ್ರಾಗ್ವಂಶೋ ಮಧುಸೂದನಃ ।
ಚಿತಿರ್ಲಕ್ಷ್ಮೀ ರ್ಹರಿರ್ಯೂಪ ಇಧ್ಮಾ ಶ್ರೀ ಭಗವಾನ್ ಕುಶಃ ॥ ೧೯ ॥

ಸಾಮಸ್ವರೂಪೋ ಭಗವಾನ್ ಉದ್ಗೀತಿಃ ಕಮಲಾಲಯಾ ।
ಸ್ವಾಹಾ ಲಕ್ಷ್ಮೀರ್ಜಗನ್ನಾಥೋ ವಾಸುದೇವೋ ಹುತಾಶನಃ ॥ ೨೦ ॥

ಶಂಕರೋ ಭಗವಾನ್ ಶೌರಿರ್ಭೂತಿರ್ಗೌರಿರ್ದ್ವಿಜೋತ್ತಮ ।
ಮೈತ್ರೇಯ! ಕೇಶವಃ ಸೂರ್ಯಸ್ತತ್ಪ್ರಭಾಕಮಲಾಲಯಾ ॥ ೨೧ ॥

ವಿಷ್ಣುಃ ಪಿತೃಗಣಃ ಪದ್ಮಾ ಸ್ವಧಾ ಶಾಶ್ವತ ತುಷ್ಟಿದಾ ।
ದ್ಯೌ ಶ್ರೀಃ ಸರ್ವಾತ್ಮಕೋ ವಿಷ್ಣುರವಕಾಶೋऽತಿವಿಸ್ತರಃ ॥ ೨೨ ॥

ಶಶಾಂಕಃ ಶ್ರೀಧರಃ ಕಾಂತಿಃ ಶ್ರೀಸ್ತಸ್ಯೈವಾನಪಾಯಿನೀ ।
ಧೃತಿರ್ಲಕ್ಷ್ಮೀರ್ಜಗಚ್ಚೇಷ್ಟೋ ವಾಯುಃ ಸರ್ವತ್ರ ಗೋ ಹರಿಃ ॥ ೨೩ ॥

ಜಲಧಿರ್ದ್ವಿಜ! ಗೋವಿಂದಸ್ತದ್ವೇಲಾ ಶ್ರೀರ್ಮಹಾಮತ! ।
ಲಕ್ಷ್ಮೀಸ್ವರೂಪಮಿಂದ್ರಾಣಿ ದೇವೇಂದ್ರೋ ಮಧುಸೂದನಃ ॥ ೨೪ ॥

ಯಮಶ್ಚಕ್ರಧರಃ ಸಾಕ್ಷಾತ್ ಧೂಮೋರ್ಣಾ ಕಮಲಾಲಯಾ ।
ಋದ್ಧಿಃ ಶ್ರೀಃ ಶ್ರೀಧರೋ ದೇವಃ ಸ್ವಯಮೇವ ಧನೇಶ್ವರಃ ॥ ೨೫ ॥

ಗೌರೀ ಲಕ್ಷ್ಮೀರ್ಮಹಾಭಾಗಾ ಕೇಶವೋ ವರುಣ ಸ್ವಯಂ ।
ಶ್ರೀರ್ದೇವಸೇನಾ ವಿಪ್ರೇಂದ್ರ! ದೇವಸೇನಾಪತಿರ್ಹರಿಃ ॥ ೨೬ ॥

ಅವಷ್ಟಂಭೋ ಗದಾಪಾಣಿಃ ಶಕ್ತಿರ್ಲಕ್ಷ್ಮೀರ್ದ್ವಿಜೋತ್ತಮ! ।
ಕಾಷ್ಠಾ ಲಕ್ಷ್ಮೀರ್ನಿಮೇಷೋऽಸೌ ಮುಹೂರ್ತೋऽಸೌ ಕಲಾತು ಸಾ ॥ ೨೭ ॥

ಜ್ಯೋತ್ಸ್ನಾ ಲಕ್ಷ್ಮೀಃ ಪ್ರದೀಪೋऽಸೌ ಸರ್ವಃ ಸರ್ವೇಶ್ವರೋ ಹರಿಃ ।
ಲತಾಭೂತಾಜಗನ್ಮಾತಾ ಶ್ರೀರ್ವಿಷ್ಣುರ್ದ್ರುಮ ಸಂಸ್ಥಿತಃ ॥ ೨೮ ॥

ವಿಭಾವರೀ ಶ್ರೀರ್ದಿವಸೋ ದೇವಶ್ಚಕ್ರಗದಾಧರಃ ।
ವರಪ್ರದೋ ವರೋ ವಿಷ್ಣುರ್ವಧೂಃ ಪದ್ಮವನಾಲಯಾ ॥ ೨೯ ॥

ನದಸ್ವರೂಪೋ ಭಗವಾನ್ ಶ್ರೀ ನದೀರೂಪ ಸಂಸ್ಥಿತಿಃ ।
ಧ್ವಜಶ್ಚ ಪುಂಡರೀಕಾಕ್ಷಃ ಪತಾಕಾ ಕಮಲಾಲಯಾ ॥ ೩೦ ॥

ತೃಷಾ ಲಕ್ಷ್ಮೀರ್ಜಗತ್ಸ್ವಾಮೀ ಲೋಭೋ ನಾರಾಯಣಃ ಪರಃ ।
ರತಿರಾಗೌ ಚ ಧರ್ಮಂ ಚ ಲಕ್ಷ್ಮೀರ್ಗೋವಿಂದ ಏವ ಚ ॥ ೩೧ ॥

ಕಿಂಚಾತಿಬಹುಲೋಕ್ತೇನ ಸಂಕ್ಷೇಪೇಣೇದಮುಚ್ಯತೇ ।
ದೇವತಿರ್ಯಙ್ಮನುಷ್ಯಾದೌ ಪುಂನಾಮ್ನಿ ಭಗವಾನ್ ಹರಿಃ ।
ಸ್ತ್ರೀನಾಮ್ನಿ ಲಕ್ಷ್ಮೀ ಮೈತ್ರೇಯ! ನಾನಯೋರ್ವಿದ್ಯತೇ ಪರಂ ॥ ೩೨ ॥

ಶ್ರೀ ವಿಷ್ಣುಪುರಾಣ, ಪ್ರಥಮಾಂಶ, ಅಷ್ಟಮೋऽಧ್ಯಾಯಃ

"ವಿಷ್ಣುವಿನ ಶ್ರೀಯು ಅಕ್ಷಯಳೂ ನಿತ್ಯಳೂ ಆದ ಜಗನ್ಮಾತೆ. ಎಲೈ ದ್ವಿಜೋತ್ತಮನೆ! ವಿಷ್ಣುವು ಎಂತು ಸರ್ವಗತನೋ ಅವಳೂ ಹಾಗೆಯೇ ಸಮಸ್ತವಸ್ತುಗಳಲ್ಲಿಯೂ ಇರತಕ್ಕವಳು. ಅವಳು ವಾಕ್ಯ, ವಿಷ್ಣುವು ಅರ್ಥ; ಅವಳು ನೀತಿ, ಹರಿಯು ನಯ; ಅವಳು ಬುದ್ಧಿ, ಹರಿಯು ಬೋಧೆ; ಅವಳು ಧರ್ಮ, ಇವನು ಸತ್ಕ್ರಿಯೆ; ವಿಷ್ಣುವು ಸ್ರಷ್ಟಾ,

ಇವಳು ಸೃಷ್ಟಿ; ಶ್ರೀಯು ಭೂಮಿ, ಹರಿಯು ಭೂಧರ. ಭಗವಂತನು ಸಂತೋಷ; ಎಲೈ ಮೈತ್ರೇಯನೆ! ಲಕ್ಷ್ಮಿಯು ಶಾಶ್ವತವಾದ ತುಷ್ಟಿಯು. ಶ್ರೀಯು ಇಚ್ಛೆ, ಭಗವಂತನು ಕಾಮ; ಅವನು ಯಜ್ಞ, ಇವಳು ದಕ್ಷಿಣೆ; ಜನಾರ್ದನನು ಪುರೋಡಾಶ; ದೇವಿಯು ಆದ್ಯಾಹುತಿ. ಎಲೈ ಮುನಿಯೆ! ಲಕ್ಷ್ಮಿಯು ಪತ್ನೀ ಶಾಲೆ, ಮಧುಸೂದನನು ಪ್ರಾಗ್ವಂಶ; ಹರಿಯು ಯೂಪ, ಲಕ್ಷ್ಮಿಯು ಚಿತಿ; ಭಗವಂತನು ಕುಶ, ಲಕ್ಷ್ಮಿಯು ಇಧ್ಮ (ಸಮಿತ್ತು); ಭಗವಂತನು ಸಾಮ, ಕಮಲಾಲಯೆಯು ಉದ್ಗೀತಿ; ಲಕ್ಷ್ಮಿಯು ಸ್ವಾಹಾ, ಜಗನ್ನಾಥನಾದ ವಾಸುದೇವನು ಅಗ್ನಿ. ಭಗವಂತನಾದ ಶೌರಿಯು ಶಂಕರನು, ಲಕ್ಷ್ಮಿ ಗೌರಿ. ಎಲೈ ಮೈತ್ರೇಯನೆ; ಕೇಶವನು ಸೂರ್ಯನು, ಕಮಲಾಲಯೆಯು ಅವನ ಪ್ರಭೆ; ಪಿತೃಗಳು ವಿಷ್ಣು, ನಿತ್ಯತುಷ್ಟಿಯನ್ನೀಯುವ ಸ್ವಧಾ ಲಕ್ಷ್ಮಿ; ಸ್ವರ್ಗವೇ ಶ್ರೀ, ಅತಿವಿಶಾಲವಾದ ಆಕಾಶಸ್ವರೂಪವೇ ವಿಷ್ಣು; ಶ್ರೀಧರನೇ ಚಂದ್ರನು, ಶ್ರೀಯು ಅವನ ಅಕ್ಷಯವಾದ ಕಾಂತಿ; ಜಗಚ್ಚೇಷ್ಟೆಯಾದ ಧೃತಿಯೇ ಲಕ್ಷ್ಮಿ; ಸರ್ವತ್ರಗಾಮಿ ಯಾದ ವಾಯುವೇ ವಿಷ್ಣು; ಎಲೈ ದ್ವಿಜನೆ, ಗೋವಿಂದನು ಜಲಧಿ. ಎಲೈ ಮಹಾಮತಿಯೆ, ಶ್ರೀಯು ಅದರ ಅಲೆಯುರುಳು; ಲಕ್ಷ್ಮಿಯೇ ಇಂದ್ರಾಣಿ, ಮಧುಸೂದನನೇ ದೇವೇಂದ್ರ; ಚಕ್ರಧರನೇ ಸಾಕ್ಷಾದ್ಯಮ, ಕಮಲೆ ಧೂಮೋರ್ಣಳು; ಶ್ರೀಯು ಋದ್ಧಿ (ಹೆಚ್ಚಿಗೆ), ಶ್ರೀಧರನು ಸ್ವಯಂ ಧನೇಶ್ವರನು; ಕೇಶವನು ಸ್ವಯಂ ವರುಣನು, ಮಹಾಭಾಗಳಾದ ಲಕ್ಷ್ಮಿಯು ಸ್ವಯಂ ಗೌರಿಯು. ಎಲೈ ವಿಪ್ರೇಂದ್ರನೆ! ಶ್ರೀಯೇ ದೇವ ಸೇನೆಯು, ಹರಿಯೇ ದೇವಸೇನಾಪತಿ; ಗದಾಧರನೇ ಪುರುಷಾಕಾರ (ಕರ್ತ)ನು, ಎಲೈ ದ್ವಿಜೋತ್ತಮನೆ! ಲಕ್ಷ್ಮಿಯು ಶಕ್ತಿ; ಕಾಷ್ಠಾ ಇವಳು ಅವನು ನಿಮೇಷ, ಅವನು ಮುಹೂರ್ತ ಇವಳು ಕಲೆ; ಲಕ್ಷ್ಮಿಯು ಬೆಳಕು, ಹರಿಯು ಸರ್ವಪ್ರದೀಪನು; ಜಗನ್ಮಾತೆಯು ಲತಾಭೂತಳು, ವಿಷ್ಣುವು ದ್ರುಮರೂಪನು. ಶ್ರೀಯು ವಿಭಾವರಿ (ರಾತ್ರಿ)ಯು, ಚಕ್ರಗದಾಧರನಾದ ದೇವರು ಹಗಲು; ವರಪ್ರದನಾದ ವರನೇ ವಿಷ್ಣು, ಪದ್ಮವನಾಲಯೆಯೇ ವಧು; ಭಗವಂತನು ನದಸ್ವರೂಪನು, ಶ್ರೀಯು ನದೀಸ್ವರೂಪಳು; ಪುಂಡ

ರೀಕಾಕ್ಷನೇ ಧ್ವಜ, ಕಮಲಾಲಯೆಯು ಪತಾಕೆ; ಲಕ್ಷ್ಮಿಯೇ ತೃಷ್ಣೆ, ಜಗತ್ಸ್ವಾಮಿಯಾದ ನಾರಾಯಣನೇ ಪರಮ ಲೋಭ; ಹೇ ಧರ್ಮಜ್ಞ ! ಲಕ್ಷ್ಮಿಯೇ ರತಿಯು, ಗೋವಿಂದನು ರಾಗ. ಬಹಳ ಹೇಳುವುದರಿಂದೇನು ? ಸಂಕ್ಷೇಪವಾಗಿ ದೇವತಿರ್ಯಙ್ಮನುಷ್ಯಾದಿಗಳಲ್ಲಿ ಪುನ್ನಾಮವಿಶಿಷ್ಟಗಳೆಲ್ಲವೂ ಹರಿ, ಸ್ತ್ರೀ ಹೆಸರಾದುವುಗಳೆಲ್ಲವೂ ಲಕ್ಷ್ಮಿ; ಎಲೈ ಮೈತ್ರೇಯನೇ ಇವೆರಡರ ವಿನಾ ಮತ್ತೇನೂ ಇಲ್ಲ."

ವೇದಾಂತದ ಮಾಯಾವಾದವೇ ಸಾಂಖ್ಯದ ಪ್ರಕೃತಿವಾದ. ಪ್ರಕೃತಿಯಿಂದ ಶಕ್ತಿವಾದದ ಉತ್ಪತ್ತಿ. ಈ ಕೆಲವು ಶ್ಲೋಕಗಳಲ್ಲಿ ಶಕ್ತಿವಾದವು ಅದ್ವೈತವಾದದೊಡನೆ ಬೆರೆತಿರುವುದು. ಇದನ್ನು ಸ್ಮರಿಸಿಯೇ ಬ್ರಹ್ಮವೈವರ್ತಕಾರನು ಹೀಗೆ ಬೆರೆದಿರಬಹುದು :—"ಕೃಷ್ಣನು ರಾಧೆಯನ್ನು ಕುರಿತು ನೀನಿಲ್ಲದಿರಲು ನಾನು ಬರೀ ಕೃಷ್ಣನು, ನಿನ್ನೊಡಗೂಡಿರಲು ನಾನು ಶ್ರೀ ಕೃಷ್ಣನು." ವಿಷ್ಣುಪುರಾಣದ ಶ್ರೀಯನ್ನು ಕೂಡಿಯೇ ಇವನು ಶ್ರೀ ಕೃಷ್ಣನು. ಪಾಠಕರೇ ನೋಡಿ, ವಿಷ್ಣುಪುರಾಣದಲ್ಲಿ ಶ್ರೀಯ ವಿಷಯವಾಗಿ ಹೇಳಿರುವುದನ್ನೇ ಬ್ರಹ್ಮವೈವರ್ತದಲ್ಲಿ ರಾಧೆಯ ಸಂಬಂಧವಾಗಿ ಸ್ವಲ್ಪವೂ ಹೆಚ್ಚು ಕಡಮೆಯಿಲ್ಲದೆ ಹೇಳಿರುವುದು. ರಾಧೆಯೇ ಆ ಶ್ರೀಯು. ಈ ಪರಿಚ್ಛೇದಕ್ಕೆ 'ಶ್ರೀ ರಾಧೆ' ಎಂಬ ಶಿರೋನಾಮವನ್ನು ಕೊಟ್ಟಿರುವೆನು. ರಾಧೆ ಈಶ್ವರನ ಶಕ್ತಿ, ಉಭಯರಿಗೂ ವಿಧಿ ಸಂಪಾದಿತವಾದ ಪರಿಣಯ ಶಕ್ತಿಮಾನನ ಸ್ಫೂರ್ತಿ ಎಂದರೆ ಶಕ್ತಿಯ ವಿಕಾಸ ಅಥವಾ ಸಂಪೂರ್ಣವಾಗಿ ಅರಳುವಿಕೆಯೇ.

ಈಗ ಪ್ರಚಾರದಲ್ಲಿರುವ ಬ್ರಹ್ಮವೈವರ್ತದಲ್ಲಿ ಹೇಳಿರುವ ರಾಧಾತತ್ತ್ವವೇನೆಂಬುದನ್ನು ತಿಳಿಸಿದೆನಲ್ಲವೆ; ಆದರೆ ಆದಿಮ ಬ್ರಹ್ಮವೈವರ್ತ ಪುರಾಣದಲ್ಲಿ ರಾಧಾ ತತ್ತ್ವವಿದ್ದಿತೋ? ಇರಬಹುದು; ಆದರೆ ಈಗಿರುವಂತೆಯಲ್ಲ. ಈಗಿನ ಬ್ರಹ್ಮವೈವರ್ತದ ರಾಧಾ ಶಬ್ದಕ್ಕೆ ಬಗೆಬಗೆಯಾಗಿ ವ್ಯುತ್ಪತ್ತಿಯನ್ನು ಮಾಡಿರುವರು. ಇವುಗಳ ಪೈಕಿ ಎರಡನ್ನು ಮುಂಚೆಯೇ ಅಡಿಟಿಪ್ಪಣಿಯಲ್ಲಿ ಎತ್ತಿರುವೆನು. ಈಗಿಲ್ಲಿ ಇನ್ನೊಂದನ್ನು ಎತ್ತುವೆನು.

ರೇಫೋಹಿ ಕೋಟಿ ಜನ್ಮಾಘಂ ಕರ್ಮಭೋಗಂ ಶುಭಾಶುಭಂ ।
ಆಕಾರೋ ಗರ್ಭವಾಸಂ ಚ ಮೃತ್ಯುಂ ಚ ರೋಗಮುತ್ಸೃಜೇತ್ ॥ ೧೦೬ ॥

ಧಕಾರ ಆಯುಷೋಃಹಾನಿಮಾಕಾರೋಃ ಭವಬಂಧನಂ ।
ಶ್ರವಣ ಸ್ಮರಣೋಃಕ್ತಿಭ್ಯಃ ಪ್ರಣಶ್ಯತಿ ನಸಂಶಯಃ ॥ ೧೦೭ ॥

ರಾಕಾರೋಃ ನಿಶ್ಚಲಾಂ ಭಕ್ತಿಂ ದಾಸ್ಯಂ ಕೃಷ್ಣಪದಾಂಬುಜೇಃ ।
ಸರ್ವೇಃಪ್ಸಿತಂ ಸದಾನಂದಂ ಸರ್ವಸಿದ್ಧೌಘಮೀಶ್ವರಂ ॥ ೧೦೮ ॥

ಧಕಾರಸ್ಸಹವಾಸಂ ಚ ತತ್ತುಲ್ಯಕಾಲಮೇಃವ ಚ ।
ದದಾತಿ ಸಾರ್ಷ್ಟಿಂ ಸಾರೂಪ್ಯಂ ತತ್ತ್ವಜ್ಞಾನಂ ಹರೇಸ್ಸಮಂ ॥ ೧೦೯ ॥

ಬ್ರಹ್ಮವೈವರ್ತ ಪುರಾಣ, ಶ್ರೀ ಕೃಷ್ಣ ಜನ್ಮಖಂಡ, ೧೩ನೆಯ ಅಧ್ಯಾಯ

ಇವುಗಳಲ್ಲಾವುದೂ ರಾಧಾ ಶಬ್ದಕ್ಕೆ ಪ್ರಕೃತವಾದ ವ್ಯುತ್ಪತ್ತಿಯಲ್ಲ. ರಾಧಾ ಧಾತುವಿಗೆ ಆರಾಧನೆ, ಪೂಜೆ ಎಂಬರ್ಥದಲ್ಲಿ ಉಪಯೋಗ. ಯಾವಳು ಕೃಷ್ಣನನ್ನು ಆರಾಧಿಸುವಳೋ ಅವಳೇ ರಾಧೆ ಅಥವಾ ರಾಧಿಕೆ. ಈಗಿನ ಬ್ರಹ್ಮವೈವರ್ತದಲ್ಲಿ ಈ ವ್ಯುತ್ಪತ್ತಿ ಎಲ್ಲಿಯೂ ಸಿಕ್ಕುವುದೇ ಇಲ್ಲ. ರಾಧಾ ಶಬ್ದದ ಪ್ರಕೃತ ವ್ಯುತ್ಪತ್ತಿಯನ್ನು ಮರೆಮಾಡಿ ಹಲವು ಬಗೆಯಾಗಿ ವ್ಯಾಕರಣ ವಿರುದ್ಧವಾದ ಚಮತ್ಕಾರಗಳನ್ನು ಮಾಡಿ ಭ್ರಾಂತಿಯನ್ನು ಹುಟ್ಟಿಸುವುದಕ್ಕೆ ಯತ್ನಿಸಿ, ಈ ಭ್ರಾಂತಿಯನ್ನೂರ್ಜಿತಪಡಿಸುವುದಕ್ಕಾಗಿ ಸಾಮವೇದಕ್ಕೆ ಅಡ್ಡಬಿದ್ದಿರುವವನು *ರಾಧಾ ಶಬ್ದವನ್ನು ಸೃಜಿಸಿದವನೆಂದಿಗೂ ಆಗಲಾರನು. ರಾಧಾ ಶಬ್ದದ ಪ್ರಕೃತ ವ್ಯುತ್ಪತ್ತಿಯನ್ನು ಹಿಡಿದು ರಾಧಾ ರೂಪಕವನ್ನು ರಚಿಸಿದವನು ರಾಧೆಯ ಸೃಷ್ಟಿಕರ್ತನಲ್ಲ. ಆದುದರಿಂದ ಆದಿಮ ಬ್ರಹ್ಮವೈವರ್ತದಲ್ಲಿಯೇ ರಾಧೆಯು ಮೊದಲು ಸೃಷ್ಟಿಯಾಗಿರಬೇಕು. ಅಲ್ಲಿ ರಾಧೆಯು ಕೃಷ್ಣಾರಾಧಕಳಾದ, ಆದರ್ಶರೂಪಳಾದ ಗೋಪಿಯಾಗಿದ್ದಿರಬೇಕು, ಸಂದೇಹವಿಲ್ಲ.

ರಾಧಾ ಶಬ್ದಕ್ಕೆ ಇನ್ನೊಂದರ್ಥವುಂಟು. ವಿಶಾಖಾ ನಕ್ಷತ್ರಕ್ಕೆ ರಾಧೆಯೆಂಬ ಹೆಸರಿರುವುದು.† ಕೃತ್ತಿಕೆಯಿಂದ ವಿಶಾಖೆಯು ಹದಿನಾಲ್ಕನೆಯ ನಕ್ಷತ್ರ. ಪೂರ್ವದಲ್ಲಿ ವರ್ಷವನ್ನು ಕೃತ್ತಿಕೆಯಿಂದ ಎಣಿಸುತ್ತಿದ್ದರು. ಕೃತ್ತಿಕೆಯಿಂದ ರಾಶಿಗಳನ್ನು ಲೆಕ್ಕಮಾಡಲು ವಿಶಾಖೆಯು ಸರಿಯಾಗಿ ಮಧ್ಯಕ್ಕೆ ಬರುತ್ತದೆ. ಆದುದರಿಂದ ಇದು ರಾಶಿಮಂಡಲದ ಮಧ್ಯವರ್ತಿನಿಯೇನೋ

* ರಾಧಾ ಶಬ್ದಸ್ಯ ವ್ಯುತ್ಪತ್ತಿಃ ಸಾಮವೇದೇಃ ನಿರೂಪಿತಾ–೧೩, ಅ. ೧೫೩.

† ರಾಧಾ ವಿಶಾಖಾ ಪುಷ್ಯೇಃ ತು ಸಿದ್ಧತಿಶ್ರಷ್ಯೌವಿಷ್ಯಯಾ— ಅಮರಕೋಃಶ.

ಹೌದು. ಇದಕ್ಕೂ ಈ ರಾಸಮಂಡಲ ಮಧ್ಯವರ್ತಿಯಾದ ರಾಧೆಗೆ ಸಂಬಂಧವೇನಾದರೂ ಉಂಟೋ ಇಲ್ಲವೋ, ಅಸಲು ಬ್ರಹ್ಮವೈವರ್ತವಿಲ್ಲದಿರಲು ಖಂಡಿತವಾಗಿ ಹೇಳುವುದಕ್ಕಾಗುವುದಿಲ್ಲ.

ಅಥರ್ವವೇದದ ಉಪನಿಷತ್ತುಗಳ ಪೈಕಿ "ಗೋಪಾಲ ತಾಪನಿ" ಎಂಬುದೊಂದು. ಕೃಷ್ಣನ ಗೋಪಮೂರ್ತಿಯು ಉಪಾಸನೆಯೇ ಇದರ ವಿಷಯು. ಇದರ ರಚನೆಯನ್ನು ನೋಡುವಲ್ಲಿ, ಹಲವು ಉಪನಿಷತ್ತುಗಳಿಗಿಂತ ಇದು ಬಹಳ ಈಚಿನದಿರಬೇಕು. ಇದರಲ್ಲಿ ಕೃಷ್ಣನು ಗೋಪಗೋಪಿಯರಿಂದ ಸುತ್ತಿಕೊಂಡು ಇರುವನೆಂದು ಹೇಳಿದೆ. ಆದರೆ ಇದರಲ್ಲಿ ಗೋಪ ಗೋಪಿಯರಿಗೆ ಮಾಡಿರುವ ಅರ್ಥವು ರೂಢಿಯಲ್ಲಿನದಕ್ಕೆ ಹೊರಚ್ಚು. ಗೋಪಿಯೆಂದರೆ ಅವಿದ್ಯಾಕಲೆ. ಟೀಕಾಕಾರರು ಹೇಳುವರು—

"ಗೋಪ್ಯಾಯಂತೀತಿ ಗೋಪ್ಯಾಃ ಪಾಲನಶಕ್ತಯಃ" ಇನ್ನು "ಗೋಪೀಜನವಲ್ಲಭ ಅರ್ಥೇ ಗೋಪೀನಾಂ ಪಾಲನಶಕ್ತಿನಾಂ ಜನಃ ಸಮೂಹ, ತದ್ವಾಚ್ಯಾ ಅವಿದ್ಯಾ ಕಲಾಶ್ಚತಾಸಾಂ ವಲ್ಲಭಾ ಸ್ವಾಮಿ ಪ್ರೇರಕ—ಈಶ್ವರಃ."

ಉಪನಿಷತ್ತಿನಲ್ಲಿ ಈ ಬಗೆಯ ಅರ್ಥವಿದೆ. ರಾಸಲೀಲೆಯು ಮಾತೇ ಇಲ್ಲ. ರಾಧೆಯ ಹೆಸರು ಸುದಾ ಇಲ್ಲ. ಮುಖಂಡ ಗೋಪಿಯೊಬ್ಬಳ ಮಾತೇನೋ ಇದೆ. ಆದರೆ ಅವಳು ರಾಧೆಯಲ್ಲ. ಅವಳ ಹೆಸರು ಗಾಂಧರ್ವಿ. ಅವಳ ಪ್ರಾಧಾನ್ಯವೂ ಕಾಮಕೇಳಿಯಲ್ಲಲ್ಲ—ತತ್ತ್ವದ ವಿಚಾರದಲ್ಲಿ—ಬ್ರಹ್ಮವೈವರ್ತಪುರಾಣ ಮತ್ತು ಜಯದೇವನ ಕಾವ್ಯ—ಇವನ್ನು ಬಿಟ್ಟರೆ ಪ್ರಾಚೀನ ಗ್ರಂಥಗಳಲ್ಲಿ ಮತ್ತೆಲ್ಲಿಯೂ 'ರಾಧೆ' ಇಲ್ಲ.

ಏಕಾದಶ ಪರಿಚ್ಛೇದ

ಬೃಂದಾವನ ಲೀಲೆಯ ಪರಿಸಮಾಪ್ತಿ

ಭಾಗವತದಲ್ಲಿ ಬೃಂದಾವನ ಲೀಲೆಯ ಸಂಬಂಧವಾಗಿ ಇನ್ನೂ ಹಲವು ಹೇಳಿಕೆಗಳುಂಟು :—

ಒಂದು ದಿನ ಯಮುನೆಯ ಸ್ನಾನಕ್ಕೆಂದು ನಂದನು ಇಳಿಯಲು ವರುಣನ ಆಳೊಬ್ಬನು ಅವನನ್ನು ಹಿಡಿದುಕೊಂಡು ವರುಣಾಲಯಕ್ಕೆ ತೆಗೆದುಕೊಂಡುಬಂದನು. ಸಹಜ ನುಡಿಯಲ್ಲಿ—ನಂದನು ಒಂದು ದಿನ ನೀರಿನಲ್ಲಿ ಮುಳುಗಿಕೊಳ್ಳಲು ಕೃಷ್ಣನು ಅವನನ್ನೆತ್ತಿ ರಕ್ಷಿಸಿದನು.

ಒಂದು ದಿನ ಹಾವೊಂದು ನಂದನನ್ನಾಕ್ರಮಿಸಿತು. ಕೃಷ್ಣನು ಆ ಸರ್ಪಮುಖ ದಿಂದ ನಂದನನ್ನು ರಕ್ಷಿಸಿ ಆ ಹಾವನ್ನು ಸಂಹರಿಸಿದನು. ಈ ಹಾವೊಬ್ಬ ವಿದ್ಯಾ ಧರನು. ಕೃಷ್ಣಸ್ಪರ್ಶದಿಂದ ಮುಕ್ತಿಯನ್ನು ಪಡೆದು ಸ್ವಸ್ಥಾನಕ್ಕೆ ಹೋದನು. ಸಹಜ ವಾಣಿಯಲ್ಲಿ—ಕೃಷ್ಣನು ನಂದನನ್ನು ಹಾವಿನ ಕಡಿತದಿಂದ ರಕ್ಷಿಸಿದನು.

ಶಂಖಚೂಡನೆಂಬೊಬ್ಬ ಅಸುರನು ವ್ರಜಾಂಗನೆಯರನ್ನು ಎತ್ತಿಕೊಂಡು ಹೋಗಲು, ಬಲರಾಮಕೃಷ್ಣರು ಅವನ ಬೆನ್ನಟ್ಟಿಹೋಗಿ ಅವನನ್ನು ಕೊಂದು ಗೋಪಿ ಯರನ್ನು ಬಿಡಿಸಿಕೊಂಡು ಬಂದರು. ಬ್ರಹ್ಮವೈವರ್ತದಲ್ಲಿ ಈ ಕಥೆಯು ಬೇರೆ ವಿಧ ವಾಗಿರುವುದು. ಅದರ ಸ್ವಲ್ಪ ಭಾಗವನ್ನು ಮೊದಲೇ ತಿಳಿಸಿರುವೆನು.

ಈ ಮೇಲಿನ ಮೂರು ಕಥೆಗಳೂ ವಿಷ್ಣುಪುರಾಣದಲ್ಲಿಯಾಗಲಿ, ಹರಿ ವಂಶ ಅಥವಾ ಮಹಾಭಾರತದಲ್ಲಿಯೇ ಆಗಲಿ ಇಲ್ಲ. ಅರಿಷ್ಟಾಸುರ ಮತ್ತು ಕೇಶೀ ಅಸುರರ ವಧೆಯ ವೃತ್ತಾಂತವಾದರೋ ಹರಿವಂಶ, ವಿಷ್ಣುಪುರಾಣ ಮತ್ತು ಮಹಾಭಾರತದಲ್ಲಿ ಶಿಶುಪಾಲನಿಂದಾದ ಕೃಷ್ಣನಿಂದೆಯ ವೃತ್ತಾಂತ ಇವುಗಳಲ್ಲಿರುವುದು. ಶಿಶುಪಾಲನು ಇವರನ್ನು ಹೋರಿ ಮತ್ತು ಕುದುರೆ ಎಂದು ನಿರ್ದೇಶಿಸಿರುವನು.

ಮೊದಲಿನ ಮೂರು ವಿಷಯುಗಳನ್ನೂ ಭಾಗವತಕಾರನಿಂದಾದ ಉಪ ನ್ಯಾಸಗಳೆಂದು ಹಾರಿಸಿದರೂ ಅರಿಷ್ಟವಧೆ ಮತ್ತು ಕೇಶಿವಧೆಗಳನ್ನು ಹಾರಿಸು ವುದಕ್ಕಾಗುವುದಿಲ್ಲ. ಇದರಮೇಲೆ ಕೇಶಿವಧೆಯ ವೃತ್ತಾಂತವು ಅಥರ್ವಣ ವೇದದಲ್ಲಿಯೂ ಇರುವುದೆಂದು ಹೇಳಿರುವೆನು. ಅಲ್ಲಿ ಕೇಶಿಯನ್ನು ಕೃಷ್ಣ ಕೇಶಿಯೆಂದು ಹೇಳಿದೆ. ಕೃಷ್ಣಕೇಶಿಯೆಂದರೆ ಕರಿಗೂದಲಿನವನೆಂದರ್ಥವಾಗು ವುದು. ಋಗ್ವೇದದಲ್ಲಿಯೂ ಕೇಶಿಸೂಕ್ತಿಯೊಂದುಂಟು. (ದಶಮ ಮಂಡಲ, ೧೩೬ನೆಯ ಸೂಕ್ತ.) ಈ ಕೇಶಿದೇವನಾರೆಂಬ ನಿಶ್ಚಯವಿಲ್ಲ. ನಾಲ್ಕನೆಯ ಮತ್ತು ಐದನೆಯ ಋಕ್ಕುಗಳಿಂದ ಇದನ್ನು ಬರೆದು ಮುನಿಯೇ ಕೇಶಿದೇವ ನೆಂದು ತಿಳಿದುಬರುವಂತಿದೆ. ಮುನಿಗಳು ಉದ್ದುದ್ದವಾದ ಕೂದಲನ್ನು ಬಿಟ್ಟಿರುತ್ತಿದ್ದರು. ಈ ಎರಡು ಋಕ್ಕುಗಳಲ್ಲಿ ಮುನಿಗಳ ಪ್ರಶಂಸೆಯನ್ನೇ

ಮಾಡಿದ್ದಾಗಿದೆ. 'ಮ್ಯೂರ್' ಸಾಹೇಬರು ಹೀಗೆಂದು ತಿಳಿಸಿರುವರು. ಮೊದಲನೆಯ ಋಕ್ಕಿಗೆ ರಮೇಶಚಂದ್ರದತ್ತರು ಹೀಗೆ ಅರ್ಥವನ್ನು ಬರೆದಿರುವರು :—

"ಕೇಶಿಯೆಂದು ಹೆಸರಾದ ದೇವನೇ ಅಗ್ನಿಯನ್ನೂ ಜಲವನ್ನೂ ಭೂಲೋಕವನ್ನೂ ಸ್ವರ್ಗಲೋಕವನ್ನೂ ಧರಿಸಿರುವನು. ಸಂಸಾರ ಸಮಸ್ತವನ್ನೂ ಕೇಶಿಯೇ ಬೆಳಕಿನಿಂದ ದರ್ಶನಯೋಗ್ಯವನ್ನಾಗಿ ಮಾಡುವನು. ಇಂಥಾದ್ದಾದ ಜ್ಯೋತಿಯೇ ಕೇಶಿ. ಹೀಗೆ ಜಗತ್ತನ್ನು ಮುಸುಕುವ ಕತ್ತಲೆಯೇ ಕೃಷ್ಣಕೇಶಿ. ಕೃಷ್ಣನು ಇದನ್ನು ನಿವಾರಿಸಿರುವನು, ಎಂದರೆ ಜಗತ್ತನ್ನು ಮುಸುಕಿರುವ ಕತ್ತಲೆಯನ್ನು ಅಳಿದವನು.

ಇಲ್ಲಿಗೆ ಬೃಂದಾವನ ಲೀಲೆ ಮುಗಿಯಿತು. ಈಗ ಇದರಲ್ಲಿ ದೊರೆತುದೇನು? ಐತಿಹಾಸಿಕವಾದುದೇನೂ ಸಿಕ್ಕಲಿಲ್ಲವೆಂದೇ ಹೇಳಬಹುದು. ಈ ಪೌರಾಣಿಕ ಕಥೆಗಳೆಲ್ಲ ಅತಿಪ್ರಕೃತಿ ಉಪನ್ಯಾಸಗಳಿಂದ ತುಂಬಿವೆ. ಇವುಗಳೊಳಗೆ ಐತಿಹಾಸಿಕ ತತ್ತ್ವ ಅತಿದುರ್ಲಭ. ಮುಖ್ಯವಾಗಿ ಇಲ್ಲಿ ದೊರೆತುದು ಇಷ್ಟೇ—ಕೃಷ್ಣ ಸಂಬಂಧವಾಗಿ ಇರುವ ಪ್ರವಾದಗಳೆಲ್ಲವೂ ಎಂದರೆ—ಚೋರವಾದ, ಪರದಾರವಾದ ಇವುಗಳೆಲ್ಲವೂ ಅಮೌಲಿಕ ಮತ್ತು ಅಲೀಕಗಳು (ಸುಳ್ಳು). ಇದನ್ನು ಸ್ಥಾಪಿಸುವುದಕ್ಕಾಗಿಯೇ ನಾವಿಷ್ಟು ಸವಿಸ್ತಾರವಾದ ವ್ರಜಲೀಲೆಯ ಸಮಾಲೋಚನೆಯನ್ನು ಮಾಡಿದೆವು. ಐತಿಹಾಸಿಕ ತತ್ತ್ವವೇನಾದರೂ ದೊರಕಿತೆಂದರೆ ಅದು ಇಷ್ಟೆ—ಅತ್ಯಾಚಾರಿಯಾದ ಕಂಸನ ಭಯದಿಂದ ವಸುದೇವನು ತನ್ನ ಪತ್ನಿಯಾದ ರೋಹಿಣಿಯನ್ನೂ, ರಾಮ ಕೃಷ್ಣರೆಂಬಿಬ್ಬರು ಮಕ್ಕಳನ್ನೂ ನಂದಾಲಯದಲ್ಲಿ ಬಚ್ಚಿಟ್ಟದ್ದನು. ಕೃಷ್ಣನು ಶೈಶವವನ್ನೂ ಬಾಲ್ಯವನ್ನೂ ಅಲ್ಲಿ ಕಳೆದನು. ಅವನು ಶೈಶವದಲ್ಲಿ ರೂಪಲಾವಣ್ಯದಿಂದಲೂ, ಶಿಶುಸುಲಭವಾದ ಗುಣಗಳೆಲ್ಲವುಗಳಿಂದಲೂ ಸರ್ವಜನಗಳ ಪ್ರೀತಿಗೆ ಪಾತ್ರನಾಗಿದ್ದನು. ಬಾಲ್ಯದಲ್ಲವನು ಅತಿಶಯ ಬಲಶಾಲಿಯಾಗಿ ಬೃಂದಾವನಕ್ಕೆ ಅರಿಷ್ಟಕಾರಿಗಳಾದ ಮೃಗ ಮುಂತಾದುವುಗಳನ್ನು ಕೊಂದು ಗೋಪಾಲಕರನ್ನು ಸರ್ವವೇಳೆಯಲ್ಲಿಯೂ ಕಾಪಾಡುತ್ತಿದ್ದನು. ಅವನು ಮಗುವಾದಂದಿನಿಂದಲೂ ಸರ್ವಜನರ ಮತ್ತು ಸರ್ವಜೀವಿಗಳಮೇಲೂ ಕಾರುಣ್ಯದುಂಬಿ ಎಲ್ಲರಿಗೂ ಉಪಕಾರಮಾಡುತ್ತಿದ್ದನು. ಗೊಲ್ಲಗೊಲ್ಲತಿಯ

ರೆಲ್ಲರಲ್ಲೂ ಬಹಳ ಸ್ನೇಹಪರನಾಗಿದ್ದನು. ಎಲ್ಲರೊಡನೆಯೂ ಅವನು ಆಮೋದ ಆಹ್ಲಾದಗಳಲ್ಲಿ ಸೇರುತ್ತಿದ್ದನು. ಮತ್ತು ಎಲ್ಲರನ್ನೂ ಸಂತೋಷ ಪಡಿಸಲು ಯತ್ನಿಸುತ್ತಿದ್ದನು. ಬಾಲ್ಯದಲ್ಲಿಯೇ ಪ್ರಕೃತಿಧರ್ಮ ತತ್ತ್ವವು ಅವನ ಹೃದಯದಲ್ಲಿ ಉದ್ಭಾಸಿತವಾಗಿದ್ದಿತು. ಇಷ್ಟಾದರೂ ಐತಿಹಾಸಿಕ ತತ್ತ್ವವು ಸಿಕ್ಕಿರುವುದೆಂದು ಒತ್ತಿಹೇಳುವುಕ್ಕಾಗುವುದಿಲ್ಲ. ಆದರೂ ಇದಕ್ಕಿಂತ ಹೆಚ್ಚೇನೂ ಇಲ್ಲ.

—ದ್ವಿತೀಯ ಖಂಡ ಸಂಪೂರ್ಣ—

ತೃತೀಯ ಖಂಡ

ಮಥುರಾ–ದ್ವಾರಕಾ

ಯಸ್ತನೋತಿ ಸತಾಂ ಸೇತುಮೃತೇನಾಮೃತಯೋನಿನಾ ।
ಧರ್ಮಾರ್ಥ ವ್ಯವಹಾರಾಂಗೈಸ್ತಸ್ಮೈ ಸತ್ಯಾತ್ಮನೇ ನಮಃ ॥

ಶಾಂತಿಪರ್ವ, ೪೭ನೆಯ ಅಧ್ಯಾಯ

ಪ್ರಥಮ ಪರಿಚ್ಛೇದ

ಕಂಸವಧೆ

ಇತ್ತ ಕಡೆ ಬೃಂದಾವನದಲ್ಲಿ ಕೃಷ್ಣ ಬಲರಾಮರು ಅತಿಶಯ ಬಲಶಾಲಿಗಳಾಗಿರುತ್ತಾರೆ. ಪೂತನಿ ಮೊದಲಾದ ಅರಿಷ್ಟಗಳು ಮೊದಲ್ಗೊಂಡು ತನ್ನಿಂದ ಪ್ರೇರಿಸಲ್ಪಟ್ಟ ದೂತರು ನಿಹತರಾದರೆಂಬ ವರ್ತಮಾನವು ಕಂಸನಿಗೆ ಬಂತು. ಕೃಷ್ಣ ಬಲರಾಮರು ವಸುದೇವನ ಮಕ್ಕಳು, ದೇವಕಿಯ ಎಂಟನೆಯ ಸಂತಾನವೆಂದರಿತು ತಾನು ಕೊಂದ ಕನ್ಯೆ ನಂದ ಯಶೋದೆಯರ ಮಗಳು. ವಸುದೇವನು ಮಕ್ಕಳನ್ನು ಬದಲಾಯಿಸಿ ಕೃಷ್ಣನನ್ನು ನಂದನ ಮನೆಯಲ್ಲಿ ಮುಚ್ಚಿಟ್ಟಿರುತ್ತಾನೆ ಎಂದು ದೇವರ್ಷಿ ನಾರದನು ತಿಳುಹಿದನು. ಈ ಸಂಗತಿಯನ್ನೆಲ್ಲ ಕೇಳಿ ಕಂಸನಿಗೆ ಭಯವುಂಟಾಗಿ ರೋಷಾತಿಶಯದಿಂದ ವಸುದೇವನನ್ನು ತಿರಸ್ಕಾರಮಾಡಿ ಅವನನ್ನು ಕೊಲ್ಲಲುಜ್ಜುಗಿಸಿದನು; ಮತ್ತು ಕೃಷ್ಣ ಬಲರಾಮರನ್ನು ಕರೆತರಲು ಅಕ್ರೂರನೆಂಬ ಯಾದವ ಮುಖಂಡನನ್ನು ಬೃಂದಾವನಕ್ಕಟ್ಟಿ ತನ್ನಲ್ಲಿದ್ದ ಪ್ರಖ್ಯಾತರಾದ ಬಲಿಷ್ಠರಾದ ಜಟ್ಟಿಗಳಿಂದ ರಾಮ ಕೃಷ್ಣರನ್ನು ಕೊಲ್ಲಿಸಬೇಕೆಂದೆಣಿಸಿ ಧನುರ್ಮಖವೆಂಬ ಯಜ್ಞವೊಂದಕ್ಕೆ ಮೊದಲುಮಾಡಿದನು. ಕೃಷ್ಣಬಲರಾಮರು ಅಕ್ರೂರನೊಂದಿಗೆ* ಬಂದು ರಂಗಭೂಮಿಯನ್ನು ಪ್ರವೇಶಿಸುವುದಕ್ಕಿಂತ ಮುಂಚೆ ಕಂಸನ ಶಿಕ್ಷಿತ

* ಹಾದಿಯಲ್ಲಿ ಕುಬ್ಜಳ ಸಂಗಡ ಉಂಟಾದ ಘಟನೆಯುಂಟಷ್ಟೆ. ವಿಷ್ಣುಪುರಾಣದಲ್ಲಿ ಈ ವಿಷಯವಾಗಿ ನಿಂದಾಸ್ಪದವೇನೂ ಇಲ್ಲ. ತಾನು ಸುಂದರಿಯೆಂಬುದನ್ನು

ವಾದ ಕುವಲಯಾಪೀಡವೆಂಬ ಆನೆಯನ್ನೂ ಪ್ರಸಿದ್ಧರಾದ ಚಾಣೂರಮಲ್ಲ ಮತ್ತು ಮುಷ್ಟಿಯೋದ್ಧರನ್ನೂ ಕೊಂದರು. ಇದನ್ನು ಕಂಡು ಕಂಸನು ನಂದನನ್ನು ಕಬ್ಬಿಣದ ಬೇಡಿಗಳಿಂದ ಬಿಗಿದು ವಸುದೇವನನ್ನು ನಾಶಮಾಡಲು ಅಪ್ಪಣೆಯನ್ನು ಕೊಟ್ಟು ರಾಮ ಕೃಷ್ಣರನ್ನು ಬಡಿದಟ್ಟುವಂತೆ ಅಪ್ಪಣೆಯನ್ನು ಕೊಟ್ಟನು. ಆಗ ಇತರ ಯಾದವರೊಡಗೂಡಿ ಮಲ್ಲಯುದ್ಧವನ್ನು ನೋಡುವುದಕ್ಕೆಂದು ಬಂದ ಕಂಸನು ಕುಳಿತಿದ್ದ ಮೇಲು ಮಂಚಿಗೆಗೆ ಕೃಷ್ಣನು ಹಾರಿ ಅವನ ಮೇಲೆ ಬಿದ್ದು ಕೂದಲು ಹಿಡಿದೆಳೆದು ರಂಗಭೂಮಿಗೆ ಉರುಳಿಸಿ ಅವನನ್ನು ಕೊಂದನು. ಇದಾದಮೇಲೆ ವಸುದೇವ ದೇವಕಿ ಮೊದಲಾದ ಹಿರಿಯರಿಗೆ ಯಥೋಚಿತವಾಗಿ ವಂದಿಸಿ ಕಂಸನ ತಂದೆಯಾದ ಉಗ್ರಸೇನನಿಗೆ ರಾಜ್ಯದ ಪಟ್ಟವನ್ನು ಕಟ್ಟಿದನು. ತಾನು ರಾಜನಾಗಲಿಲ್ಲ.

ಹರಿವಂಶ ಮತ್ತು ಪುರಾಣಗಳಲ್ಲಿ ಹೀಗೆ ಕಂಸವಧೆಯ ವೃತ್ತಾಂತವನ್ನು ಹೇಳಿದ್ದಾರೆ. ಕಂಸನ ವಧೆಯೇನೋ ಐತಿಹಾಸಿಕವೇ ಆದರೂ ಆ ವಿಷಯಕವಾದ ಈ ವರ್ಣನೆಯಲ್ಲಿ ಐತಿಹಾಸಿಕವಿಲ್ಲ. ಇದನ್ನು ನಂಬುವುದಾದರೆ ಅತಿಪ್ರಕೃತಿಗಳನ್ನು ಒಪ್ಪಿಕೊಳ್ಳಬೇಕಾಗುವುದು. ಮೊಟ್ಟಮೊದಲು ದೇವರ್ಷಿ ನಾರದನ* ಇರುವಿಕೆಯನ್ನು ಒಪ್ಪಬೇಕು. ಆಮೇಲೆ ಆಕಾಶವಾಣಿ.*

ನೆನೆದು ಕೃಷ್ಣನನ್ನು ತನ್ನ ಮನೆಗೆ ಬಿಜಮಾಡಿಸಬೇಕೆಂದು ಬೇಡಿಕೊಂಡಳು. ಕೃಷ್ಣನು ನಕ್ಕು ಮುಂದೆ ನಡೆದನು. ವಿಷ್ಣುಪುರಾಣದಲ್ಲಿರುವುದು ಇಷ್ಟು ಮಾತ್ರ. ಕೃಷ್ಣನ ಈ ನಡತೆ ಮಾನವೋಚಿತ, ಮತ್ತು ಸಜ್ಜನೋಚಿತ. ಭಾಗವತ ಮತ್ತು ಬ್ರಹ್ಮವೈವರ್ತಕಾರರಾದರೋ ಇಷ್ಟಕ್ಕೆ ಸಂತುಷ್ಟರಾಗದೆ ಕುಬ್ಜೆಗೆ ಹಠಾತ್ತು ಭಕ್ತಿ, ಭಕ್ತಿಗೆ ಹಠಾತ್ತು ಪುರಸ್ಕಾರವನ್ನು ಒಡ್ಡಿ, ಕುಬ್ಜೆಯನ್ನು ಪಟ್ಟದ ರಾಣಿಯ ಸ್ಥಾನಕ್ಕೆ ಏರಿಸಿರುವರು.

ನಾವು ಇಲ್ಲಿಂದ ಮುಂದಕ್ಕೆ ಭಾಗವತಕ್ಕೆ ಬೀಳ್ಕೊಟ್ಟೆವು. ಭಾಗವತದಲ್ಲಿ ಐತಿಹಾಸಿಕವಾದುವೇನೂ ದೊರೆಯದಿರುವುದೇ ಇದಕ್ಕೆ ಕಾರಣ; ಇಲ್ಲಿರುವವು ವಿಷ್ಣುಪುರಾಣದಲ್ಲಿಯೂ ಉಂಟು. ಇದಕ್ಕಿಂತ ಹೆಚ್ಚಾಗಿ ದೊರೆಯುವುವೆಲ್ಲಾ ಅತಿಪ್ರಕೃತಿ ಮತ್ತು ಕಟ್ಟುಕಥೆಗಳು ಮಾತ್ರವೇ. ಭಾಗವತದಲ್ಲಿ ವರ್ಣಿಸಿರುವ ಬಾಲ್ಯಲೀಲೆ ಹೆಚ್ಚಿನ ಪ್ರಸಿದ್ಧಿಯನ್ನು ಹೊಂದಿರುವುದೆಂದು ಈ ವಿಷಯ ಪರಿಚಯವನ್ನು ಮಾಡಿಕೊಟ್ಟೆವು. ಈಗ ಹೋಗಿಬರುವುದಕ್ಕೆ ಅಪ್ಪಣೆಯನ್ನು ಭಾಗವತದಿಂದ ಪಡೆಯಬಹುದು.

* ಹಲವೆಡೆ 'ನಾರದ', 'ಆಕಾಶವಾಣಿ' ಇವು ಸಂನ್ಯಾಸಿ ಗೋಸಾಯಿ ವೇಷಗಳನ್ನು ಹಾಕಿಕೊಂಡ ರಾಜರ ಪ್ರಧಾನ ಅಂಗವಾದ ಗೂಢಚಾರವರ್ಗದ ಸಂಕ್ಷೇಪ ನಾಮಕರಣವಲ್ಲವಷ್ಟೆ.

—ರಾ. ವ್ಯಾ.

ಇದರಿಂದಲೇತಾನೇ ಕಂಸನಿಗೆ ಭಯವು ಅಂಕುರಿಸಿದ್ದು. ಇದರಮೇಲೆ ಗೊಲ್ಲಹುಡುಗರಿಬ್ಬರು ಮಥುರಾಧಿಪತಿಯನ್ನು ಸಭಾಮಧ್ಯದಲ್ಲಿ ನಾಶಮಾಡ ಬಲ್ಲರೆಂಬುದನ್ನು ಸಹಜವಾಗಿ ನಂಬುವುದಕ್ಕಾಗುವುದಿಲ್ಲ. ಆದುದರಿಂದ ಸರ್ವಪ್ರಾಚೀನವಾದ ಮಹಾಭಾರತದಲ್ಲಿ ಈ ವಿಷಯವಾಗಿ ಏನಿರುವುದೆಂಬು ದನ್ನು ನೋಡೋಣ. ಆ ಮಹಾಭಾರತ ಸಭಾಪರ್ವ ಜರಾಸಂಧವಧ ಪರ್ವಾಧ್ಯಾಯದಲ್ಲಿ ಕೃಷ್ಣನು ತಾನೇ ತನ್ನ ವೃತ್ತಾಂತವನ್ನು ಯುಧಿಷ್ಠಿರನಿಗೆ ಹೀಗೆ ತಿಳಿಸಿರುತ್ತಾನೆ :—

ಕೆಲವುಕಾಲ ಕಳೆಯಿತು. *ಕಂಸನು ಯಾದವರನ್ನು ಮುರಿದು ಸಹದೇವಿ ಮತ್ತು ಅನುಜೆಯರೆಂಬ ಬಾರ್ಹದ್ರಥನ ಇಬ್ಬರು ಮಕ್ಕಳನ್ನು ಮದುವೆಯಾಗಿದ್ದನು. ಈ ದುರಾತ್ಮನು ಸ್ವಂತ ಬಲದಿಂದ ಜ್ಞಾತಿಗಳನ್ನೇ ಬಡಿಯುವುದರಲ್ಲಿ ಮುಖಂಡ ನಾದನು. ಭೋಜವಂಶದ ವೃದ್ಧಕ್ಷತ್ರಿಯರು ಮೂಢನಾದ ಕಂಸನ ತುಂಟತನದಿಂದ ಬಹಳವಾಗಿ ನೊಂದು ಬಂಧುಬಾಂಧವರ ಪರಿತ್ಯಾಗವನ್ನು ಮಾಡೆಂದು ನನ್ನನ್ನು ಬಲ ವಂತಮಾಡಿದರು. ಆ ಸಮಯದಲ್ಲಿ ನಾನು ಅಕ್ರೂರನಿಗೆ ಆಹುಕನ ಮಗಳನ್ನು ಕೊಟ್ಟು ವಿವಾಹಮಾಡಿ ಜ್ಞಾತಿಗಳ ಹಿತಸಾಧನೆಗೆ ಬಲಭದ್ರನೊಡಗೂಡಿ ಕಂಸನನ್ನೂ ಸುನಾಮನನ್ನೂ ಸಂಹರಿಸಿದನು.

ಇದರಲ್ಲಿ ಕೃಷ್ಣ ಬಲರಾಮರು ಬೃಂದಾವನದಿಂದ ಕರೆಕಳುಹಿಸಲ್ಪಟ್ಟ ವಿಚಾರವೇ ಇಲ್ಲ. ಅಲ್ಲದೆ ಕಂಸವಧೆಗೆ ಮುಂಚಿನಿಂದಲೂ ಕೃಷ್ಣ ಬಲರಾಮರು ಮಥುರೆಯಲ್ಲಿಯೇ ಇದ್ದಂತೆ ಕಾಣುವುದು. ವೃದ್ಧ ಯಾದವರು ಜ್ಞಾತಿ, ವರ್ಗ ಪರಿತ್ಯಾಗವನ್ನು ಮಾಡೆಂದು ಎಂದರೆ ಊರಬಿಟ್ಟು ಓಡಿಹೋಗಿ ಆತ್ಮ ಸಂರಕ್ಷಣೆಯನ್ನು ಮಾಡಿಕೊಳ್ಳೆಂದು ಪರಾಮರ್ಶವನ್ನು ಕೊಟ್ಟರೂ ಕೃಷ್ಣನು ಹಾಗೆ ಮಾಡದೆ ಸ್ವಜನರ ಮಂಗಳಕ್ಕಾಗಿ ಕಂಸನನ್ನೇ ಕೊಂದನು. ಈ ಕೆಲಸಕ್ಕೆ ಸಹಾಯಕರಾಗಿ ಬಲರಾಮನಲ್ಲದೆ ಮತ್ತಾರಾದರೂ ಇದ್ದರೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಪ್ರಕಾಶವಾಗಿ ಸಹಾಯವನ್ನು ಮಾಡಲಿ ಮಾಡದೇ ಇರಲಿ ಇತರ ಯಾದವರಾರೂ ಕಂಸನನ್ನುಳಿಸುವುದಕ್ಕೆ ಯತ್ನಿಸ ಲಿಲ್ಲ. ಕಂಸನು ಅವರಮೇಲೆ ತುಂಟಾಟಗಳನ್ನು ತೋರಿಸಿದ್ದರಿಂದ ಅವರೆ ಲ್ಲರೂ ಬಲಿಷ್ಠರಾದ ರಾಮ ಕೃಷ್ಣರನ್ನು ಮುಂದುಮಾಡಿಕೊಂಡು ಕಾರ್ಯ

* ಕಾಳೀಪ್ರಸನ್ನ ಸಿಂಹನ ಮಹಾಭಾರತ ತರ್ಜುಮೆಯಲ್ಲಿ, 'ದಾನವರಾಜ ಕಂಸ' ಎಂದಿದೆ. ಮೂಲದಲ್ಲಿ ಅದಿಲ್ಲ. ಹೇಗೆಂದರೆ 'ಕಸ್ಯಚಿದ್ದಥ ಕಾಲಸ್ಯ ಕಂಸೋ ನಿರ್ಮಥ್ಯ ಯಾದವಾನ್.' ಆದುದರಿಂದ ಬರೀ 'ದಾನವ ರಾಜ' ಎಂಬ ಮಾತನ್ನು ಕಿತ್ತು ಹಾಕಿರುವೆನು.

ವನ್ನು ಸಾಧಿಸಿಕೊಂಡಂತೆ ತೋರುವುದು. ಇಷ್ಟು ಸ್ವಲ್ಪವೇ ಐತಿಹಾಸಿಕ ತತ್ತ್ವವು ಸಿಕ್ಕುವುದು.

ಕೃಷ್ಣನು ಕಂಸನನ್ನು ಕೊಂದು ಯಾದವರ ಮೇಲಿನ ಆಧಿಪತ್ಯವನ್ನು ಕಂಸನ ತಂದೆಯಾದ ಉಗ್ರಸೇನನಿಗೇನೇ ಕೊಟ್ಟನು. ಮಹಾಭಾರತದಲ್ಲಿಯೇ ಉಗ್ರಸೇನನು ಯಾದವರ ಅಧಿಪತಿಯೆಂದು ವರ್ಣಿಸಿರುತ್ತಾರೆ. ರಾಜನನ್ನು ಕೊಲ್ಲಬಲ್ಲವನೇ ರಾಜ್ಯಭಾಗಿಯಾಗುವುದು ಈ ದೇಶದಲ್ಲಿ ಬಲು ದಿನದಿಂದಲೂ ನಡೆದುಬಂದ ರೀತಿ ಮತ್ತು ನೀತಿಯುಷ್ಟೆ. ಕಂಸನನ್ನು ಗೆದ್ದ ಕೃಷ್ಣನು ಅನಾಯಾಸವಾಗಿಯೇ ಮಥುರೆಯ ಸಿಂಹಾಸನವನ್ನು ಏರಬಹುದಾಗಿದ್ದರೂ ಅವನು ಹಾಗೆ ಮಾಡದೆ ಧರ್ಮವಾಗಿ ಉಗ್ರಸೇನನಿಗೆ ಸೇರಿದ ರಾಜ್ಯವನ್ನು ಅವನಿಗೇ ಕೊಟ್ಟನು. ಉಗ್ರಸೇನನನ್ನು ಸಿಂಹಾಸನದಿಂದ ತಳ್ಳಿ ಕಂಸನು ತಾನೇ ರಾಜನಾಗಿದ್ದನು. ಕೃಷ್ಣನಲ್ಲಿ ಧರ್ಮವೇ ಮುಖ್ಯ; ಅವನು ಮಗುವಾಗಿದ್ದಂದಿನಿಂದಲೂ ಧರ್ಮಾತ್ಮನು. ಆದುದರಿಂದ ರಾಜ್ಯ ಯಾರದೋ ಅವನಿಗೆ ರಾಜ್ಯವನ್ನು ಹಿಂದಿರುಗಿ ಕೊಟ್ಟನು. ಧರ್ಮದ ಕಟ್ಟಿಗೆ ಬಿದ್ದೇ ಅವನು ಕಂಸನನ್ನು ಕೊಂದದ್ದು. ಅವನು ಪ್ರಕಾಶವಾಗಿಯೂ ಕೂಡ ಯಾತರಿಂದ ಪರಹಿತವೋ ಅದೇ ಧರ್ಮ ಎಂದು ಹೇಳಿದ್ದಾನೆ; ಇದು ಮುಂದಕ್ಕೆ ಗೊತ್ತಾಗುವುದು. ಇಲ್ಲಿ ಅತ್ಯಂತ ದುಷ್ಟನಾದ ಕಂಸನ ವಧೆಯಿಂದ ಯಾದವರಿಗೆಲ್ಲಾ ಹಿತವಾಯಿತು. ಆದುದರಿಂದಲೇ ಅವನು ಕಂಸನನ್ನು ಕೊಂದನು. ಇದು ಧರ್ಮಕ್ಕೋಸ್ಕರವೇ. ಕೊಂದಮೇಲೆ ಕರುಣ ಹೃದಯನಾದ ಆದರ್ಶಪುರುಷನು ,ಕಂಸನ ವಿಷಯವಾಗಿ ಬಹು ನೊಂದುಕೊಂಡನು. ಇದು ಗ್ರಂಥದಲ್ಲೇ ಇದೆ. ಕಂಸವಧೆಯಲ್ಲಿ ಈಗತಾನೇ ಪ್ರಕೃತವಾದ ಇತಿಹಾಸವನ್ನೆದುರುಗೊಳ್ಳುವೆವು. ಇಲ್ಲಿ ಕೃಷ್ಣನು ಪರಮ ಬಲಶಾಲಿ, ಪರಮಕಾರ್ಯದಕ್ಷ, ಪರಮನ್ಯಾಯಪರ, ಪರಮಧರ್ಮಾತ್ಮ, ಪರಹಿತದಲ್ಲಿ ರತ ಮತ್ತು ಪರರ ವಿಷಯದಲ್ಲಿ ಕಾತರ. ಇಲ್ಲಿಂದ ಮುಂದಕ್ಕೆ ಇವನು ಆದರ್ಶಪುರುಷನೆಂಬುದನ್ನು ನೋಡಬಹುದು.

ದ್ವಿತೀಯ ಪರಿಚ್ಛೇದ

ಶಿಕ್ಷಣ

ಕಂಸನನ್ನು ಕೊಂದ ಬಳಿಕ ಕೃಷ್ಣ ಬಲರಾಮರು ಕಾಶಿಯಲ್ಲಿ ಸಾಂದೀಪಿನೀ ಋಷಿಯ ಹತ್ತಿರ ವಿದ್ಯಾಭ್ಯಾಸಕ್ಕಾಗಿ ಹೊರಟರು. ಮತ್ತು ಅರುವತ್ತನಾಲ್ಕು ದಿನಗಳಲ್ಲಿ ಶಸ್ತ್ರವಿದ್ಯೆಯಲ್ಲಿ ಪಂಡಿತರಾಗಿ ಗುರುದಕ್ಷಿಣೆಯನ್ನುಯನ್ನು ಕೊಟ್ಟು ಹಿಂದಿರುಗಿದರು ಎಂದು ಪುರಾಣದಲ್ಲಿ ಹೇಳಿದೆ. ಕೃಷ್ಣನ ಶಿಕ್ಷಣೆಯ ವಿಷಯವಾಗಿ ಇಷ್ಟರ ಹೊರತು ಇನ್ನೇನೂ ಇಲ್ಲ. ನಂದಾಲಯದಲ್ಲಿ ಅವನಿಗೆ ಯಾವ ತೆರನಾದ ಶಿಕ್ಷಣೆಯಾಗಲಿ ದೊರೆತ ಪ್ರಸಂಗ ಯಾವ ಗ್ರಂಥದಲ್ಲಿಯೂ ಇಲ್ಲ. ನಂದನು ಜಾತಿಯಲ್ಲಿ ವೈಶ್ಯನು. ವೈಶ್ಯರಿಗೆ ವೇದಕ್ಕೆ ಅಧಿಕಾರವಿತ್ತು. ವೈಶ್ಯಾಲಯದಲ್ಲಿ ಇವನಿಗೆ ಯಾವ ತೆರನಾದ ಶಿಕ್ಷಣೆಯೂ ದೊರಕದಿರುವುದು ವಿಚಿತ್ರಕರವೇ ಸರಿ. ಶಿಕ್ಷಣೆಯ ಕಾಲ ಬರುವುದಕ್ಕಿಂತ ಮುಂಚೆಯೇ ಅವನನ್ನು ನಂದಾಲಯದಿಂದ ಮಥುರೆಗೆ ಕರೆದುಕೊಂಡು ಬಂದಿದ್ದರು. ಪೂರ್ವಪರಿಚ್ಛೇದದಲ್ಲಿ ಮಹಾಭಾರತದಿಂದ ಎತ್ತಿರುವ ಕೃಷ್ಣನ ವಾಕ್ಯದಿಂದ ಕಂಸವಧೆಗೆ ಮುಂಚೆಯೇ ಹೀಗಾಗಿರಬೇಕೆಂದು ಊಹಿಸಬಹುದು. ಅಲ್ಲದೆ ಮಹಾಭಾರತ ಸಭಾಪರ್ವದಲ್ಲಿ ಶಿಶುಪಾಲನಿಂದಾದ ಕೃಷ್ಣನಿಂದೆಯಲ್ಲಿ ಶಿಶುಪಾಲನು ಕೃಷ್ಣನನ್ನು ಕಂಸನ ಉಪ್ಪು ತಿಂದವನೆಂದು ಹೇಳಿರುತ್ತಾನೆ.

> ಯಸ್ಯ ಚಾನೇನ ಧರ್ಮಜ್ಞ ಭುಕ್ತಮನ್ನಂ ಬಲೀಯಸಃ ।
> ಸಚಾನೇನ ಹತಃ ಕಂಸ ಇತ್ಯೇತನ್ನ ಮಹಾದ್ಭುತಂ ॥
>
> —ಮಹಾಭಾರತ, ಸಭಾಪರ್ವ, ೪೦ನೆಯ ಅಧ್ಯಾಯ

ಆದುದರಿಂದ ಸರಿಸುಮಾರಾಗಿ ಶಿಕ್ಷಣೆಯ ಸಮಯವೊದಗಿದಾಗ ಕೃಷ್ಣನನ್ನು ಮಥುರೆಗೆ ಕರೆತಂದಿದ್ದರು. ಬೃಂದಾವನದಲ್ಲಿ ಗೋಪಿಯರೊಡನೆ ಪ್ರಖ್ಯಾತವಾದ ಬಾಲಲೀಲೆ ಉಪನ್ಯಾಸ ಮಾತ್ರವೆಂಬುದಕ್ಕೆ ಇದೊಂದು ರೀತಿಯ ಪ್ರಮಾಣ.

ಮಥುರೆಯಲ್ಲಿದ್ದಾಗಲೂ ಇವನಿಗೆ ಯಾವ ಬಗೆಯ ಶಿಕ್ಷಣೆಯಾಗಿತ್ತು ಎಂಬುದಕ್ಕೆ ಯಾವ ವಿವರಣೆಯೂ ಇಲ್ಲ. ಕೇವಲ ಸಾಂದೀಪಿನೀ ಮನೆಯ

ಹತ್ತಿರ ಅರುವತ್ತನಾಲ್ಕು ದಿವಸ ಅಸ್ತ್ರಶಿಕ್ಷೆ ಹೊಂದಿದ ಮಾತು ಮಾತ್ರವಿದೆ. ಕೃಷ್ಣನನ್ನು ಈಶ್ವರನೆಂದು ತಿಳಿದಿರುವರಲ್ಲಿ ಕೆಲವರು ಸರ್ವಜ್ಞನಾದ ಈಶ್ವರನಿಗೆ ಶಿಕ್ಷಣೆಯಿಂದ ಪ್ರಯೋಜನವೇನೆಂದು ಎನ್ನಬಹುದು. ಇವರಿಗೆ ಉತ್ತರವಾಗಿ (ಅರುವತ್ತನಾಲ್ಕು ದಿವಸ) ಸಾಂದೀಪಿನಿಯ ಮನೆಯಲ್ಲಿ ಶಿಕ್ಷಣೆಯ ಪ್ರಯೋಜನವೇನೆಂದು ಕೇಳಬಹುದು. ಫಲತಃ ಕೃಷ್ಣನು ಈಶ್ವರಾವತಾರವಾದರೂ ಮಾನವ ಧರ್ಮಾವಲಂಬಿ. ಆದುದರಿಂದ ಮನುಷ್ಯವ್ಯಕ್ತಿಯ ಮೂಲಕವಾಗಿಯೇ ಸಮಸ್ತ ಕಾರ್ಯಗಳನ್ನೂ ನೆರವೇರಿಸಿಕೊಳ್ಳುವನೆಂದು ಮೊದಲೇ ಹೇಳಿರುವೆವು. ಇದಕ್ಕೆ ಈಗ ಹೆಚ್ಚು ಹೆಚ್ಚು ಪ್ರಮಾಣಗಳನ್ನು ತೋರಿಸುವೆವು. ಮಾನವಶಕ್ತಿಯಿಂದ ಕೆಲಸವನ್ನು ಮಾಡಹೋಗಲು ಶಿಕ್ಷಣೆಯ ಮೂಲಕ ಆ ಮನುಷ್ಯಶಕ್ತಿಯನ್ನು ಅನುಶೀಲಿತ ಮತ್ತು ಪ್ರಸ್ಫುರಿತವನ್ನಾಗಿ ಮಾಡಬೇಕಾಗುವುದು. ಯಾವ ಮನುಷ್ಯಶಕ್ತಿಯಾದರೆ ಸ್ವತಃ ಸ್ಫುರಿತವಾಗಿ ಸರ್ವಕಾರ್ಯ ಸಾಧನ ಕ್ಷಮವಾಗುವುದೋ ಅದು ಭಗವಚ್ಛಕ್ತಿಯೇ ಹೊರತು ಮನುಷ್ಯಶಕ್ತಿಯಾಗಲಾರದು. ಕೃಷ್ಣನಿಗೆ ಮಾನುಷೀ ಶಿಕ್ಷಣವಾಗಿತ್ತೆಂಬುದಕ್ಕೆ ಈ ಸಾಂದೀಪಿನಿಯ ವೃತ್ತಾಂತವಲ್ಲದೆ ಬೇರೆ ಪ್ರಮಾಣವೂ ಉಂಟು. ಅವನು ಸಮಗ್ರವಾಗಿ ವೇದಾಧ್ಯಾಯನವನ್ನು ಮಾಡಿದ್ದನು. ಮಹಾಭಾರತ ಸಭಾಪರ್ವದಲ್ಲಿ ಅರ್ಘ್ಯಾಭಿಹರಣ ಪರ್ವಾಧ್ಯಾಯದಲ್ಲಿ ಕೃಷ್ಣನ ಪೂಜ್ಯತಾ ವಿಷಯವಾಗಿ ಭೀಷ್ಮನು—"ಕೃಷ್ಣನು ಸಮಸ್ತ ವೇದ ವೇದಾಂಗ ಪಾರದರ್ಶಿಯೆಂಬುದೊಂದು ಕಾರಣವನ್ನಾಗಿ ತೋರಿಸಿರುತ್ತಾನೆ. ಆ ಬಗೆಯ ವೇದವೇದಾಂಗ ಜ್ಞಾನಸಂಪನ್ನನಾದ ಬೇರೊಬ್ಬನು ಅಪರೂಪ."

ವೇದ ವೇದಾಂಗ ವಿಜ್ಞಾನಂ ಬಲಂ ಚಾಪ್ಯಧಿಕಂ ತಥಾ।
ನೃಣಾಂ ಲೋಕೇಹಿ ಕೋಽನ್ಯೋಽಸ್ತಿ ವಿಶಿಷ್ಟಃ ಕೇಶವಾದೃತೇ॥

—ಮಹಾಭಾರತ ಸಭಾಪರ್ವ, ೩೮ನೆಯ ಅಧ್ಯಾಯ

ಮಹಾಭಾರತದಲ್ಲಿ ಕೃಷ್ಣನ ವೇದಜ್ಞಾನ ಸಂಬಂಧವಾಗಿ ಈ ತೆರನಾದ ಇನ್ನೂ ಹಲವು ಪ್ರಮಾಣಗಳು ಸಿಕ್ಕುವುವು. ಈ ವೇದಜ್ಞಾನ ಅವನಿಗೆ ಸ್ವತಃ ಉಂಟಾದುದಲ್ಲ. ಛಾಂದೋಗ್ಯೋಪನಿಷತ್ತಿನಲ್ಲಿ ಇವನು

ಆಂಗೀರಸವಂಶೀಯನಾದ 'ಘೋರ' ಋಷಿಯಲ್ಲಿ ಅಧ್ಯಯನಮಾಡಿದ್ದನೆಂಬ ಪ್ರಮಾಣವು ಸಿಕ್ಕುತ್ತದೆ.

ಆ ಸಮಯದಲ್ಲಿ ಶ್ರೇಷ್ಠ ಬ್ರಾಹ್ಮಣರು ಕ್ಷತ್ರಿಯರ ಉಚ್ಚಶಿಕ್ಷಣೆಯ ಉಚ್ಚಾಂಶಕ್ಕೆ ತಪಸ್ಸೆಂದು ಹೇಳುತ್ತಿದ್ದರು. ಶ್ರೇಷ್ಠರಾದ ರಾಜರ್ಷಿಗಳು ಯಾವಾಗಲಾದರೂ ಒಂದೊಂದು ಸಮಯದಲ್ಲಿ ತಪಸ್ಸುಮಾಡಿದ್ದರೆಂದು ತಿಳಿಯಬರುವುದು. ಈಗ ತಪಸ್ಸೆಂದರೆ ನಾವು ತಿಳಿದುಕೊಳ್ಳುವ ಅರ್ಥವು ವೇದದ ಅನೇಕ ಭಾಗಗಳಲ್ಲಿ ಸಹಜವಾದ ಅರ್ಥವಲ್ಲವೆಂದು ತೋರುತ್ತದೆ. ತಪಸ್ಸೆಂದರೆ ಕಾಡಿನಲ್ಲಿ ಕುಳಿತು ಕಣ್ಣುಮುಚ್ಚಿಕೊಂಡು ನಿಃಶ್ವಾಸವನ್ನು ಬಿಗಿದು ಅನ್ನ ನೀರುಗಳನ್ನು ಬಿಟ್ಟು ಈಶ್ವರನನ್ನು ಧ್ಯಾನಿಸುವುದೆಂದು ನಾವಂದುಕೊಂಡಿರುವೆವು. ಆದರೆ ದೇವತೆಗಳ ಮಧ್ಯದಲ್ಲಿಯೂ ಕೂಡ ಕೆಲ ಕೆಲವರು,—ಮತ್ತು ಮಹಾದೇವನೂ ಕೂಡ,—ತಪಸ್ಸುಮಾಡಿದ್ದರೆಂದು ಕೆಲವು ಗ್ರಂಥಗಳಲ್ಲಿ ಕಾಣಬರುತ್ತದೆ. ವಿಶೇಷತಃ ಶತಪಥಬ್ರಾಹ್ಮಣದಲ್ಲಿ ಪರಬ್ರಹ್ಮನು ಸೃಷ್ಟಿಮಾಡಲು ಇಷ್ಟಪಟ್ಟಾಗ ತಪಸ್ಸಿನ ಮುಖಾಂತರವೇ ಸೃಷ್ಟಿಮಾಡಿದನೆಂದಿದೆ:—

> ಸೋಽಕಾಮಯತ । ಬಹು ಸ್ಯಾಂ ಪ್ರಜಾಯೇಯೇತಿ ।
> ಸ ತಪೋಽತಪ್ಯತ । ಸ ತಪಸ್ತಪ್ತ್ವಾ ಇದಂ ಸರ್ವಮಸೃಜತ ।

೨ನೆಯ ವಲ್ಲಿ, ೬ನೆಯ ಅನುವಾಕ

ಅರ್ಥ :—ಅವನು ಪ್ರಜಾಸೃಷ್ಟಿಗಾಗಿ ಹಲವಾಗುವೆನೆಂದು ಇಷ್ಟಪಟ್ಟನು. ಅವನು ತಪಸ್ಸುಮಾಡಿದನು. ತಪಸ್ಸುಮಾಡಿ ಈ ಸಕಲವನ್ನೂ ಸೃಷ್ಟಿಮಾಡಿದನು. ಈ ಸ್ಥಳಗಳಲ್ಲೆಲ್ಲ ತಪಸ್ಸೆಂದರೆ ಚಿತ್ತವನ್ನು ಎಳೆದು ತನ್ನ ಯಾವಚ್ಛಕ್ತಿಯನ್ನೂ ಅನುಶೀಲನ ಮತ್ತು ಪ್ರಸ್ಫೂರಣಮಾಡುವಿಕೆ ಎಂದೇ ಅರ್ಥವಾಗುವುದು. ಕೃಷ್ಣನು ಹತ್ತು ವರ್ಷಗಳವರೆಗೂ ಹಿಮಾಲಯ ಪರ್ವತದಲ್ಲಿ ತಪಸ್ಸನ್ನು ಮಾಡಿದ್ದನೆಂದು ಮಹಾಭಾರತದಲ್ಲಿ ಹೇಳಿದೆ. ಮಹಾಭಾರತದ ಐಷೀಕ ಪರ್ವತದಲ್ಲಿ ಅಶ್ವತ್ಥಾಮನಿಂದ ಬಿಡಲ್ಪಟ್ಟ ಬ್ರಹ್ಮಶಿರಾಸ್ತ್ರದಿಂದ ಉತ್ತರೆಯ ಗರ್ಭಪಾತ ಉಂಟಾದಾಗ ಮೃತಶಿಶುವನ್ನು ಪುನಃ ಬದುಕಿಸುವುದಾಗಿ ಕೃಷ್ಣನು ಪ್ರತಿಜ್ಞೆಯನ್ನು ಮಾಡಿ, ಅಶ್ವತ್ಥಾಮನನ್ನು ಕುರಿತು ನನ್ನ ತಪೋಬಲವನ್ನು ನೀನು ನೋಡುವಿ ಎಂದು ಹೇಳಿರುವನು.

ಆದರ್ಶ ಪುರುಷನ ಶಿಕ್ಷಣೆ ಆದರ್ಶ ಶಿಕ್ಷಣೆಯೇ ಆಗುವುದು. ಫಲವೂ ಹಾಗೆಯೇ ಕಾಣುವುದು. ಆ ಪ್ರಾಚೀನಕಾಲದಲ್ಲಿ ಆದರ್ಶ ಶಿಕ್ಷಣೆ ಹೇಗಿತ್ತೆಂಬುದು ಕೊಂಚವೂ ತಿಳಿಯದಿದೆ. ಇದು ಬಹು ದುಃಖಕರವಾದ ವಿಷಯ.

ತೃತೀಯ ಪರಿಚ್ಛೇದ

ಜ ರಾ ಸಂ ಧ

ಎಲ್ಲಾ ಕಾಲದಲ್ಲಿಯೂ ಭಾರತವರ್ಷದಲ್ಲಿ ಮುಖ್ಯವಾಗಿ ಉತ್ತರಾರ್ಧದಲ್ಲಿ ಒಬ್ಬೊಬ್ಬ ಸಮ್ರಾಜ(ಅಧಿರಾಜ)ನ ಆಧಿಪತ್ಯವನ್ನು ಇತರ ರಾಜರುಗಳು ಸ್ವೀಕರಿಸುವುದು ರೂಢಿಯಲ್ಲಿತ್ತು. ಕೆಲವರು ಕಪ್ಪವನ್ನು ಕೊಡುತ್ತಲೂ, ಕೆಲವರು ಆಜ್ಞಾಪ್ರಕಾರ ನಡೆಯುತ್ತಲೂ ಇರುತ್ತ ಯುದ್ಧ ಕಾಲದಲ್ಲಿ ಎಲ್ಲರೂ ಸಮ್ಮಿಳಿತರಾಗಿರುತ್ತಿದ್ದರು. ಐತಿಹಾಸಿಕ ಕಾಲದಲ್ಲಿ ಚಂದ್ರಗುಪ್ತ, ವಿಕ್ರಮಾದಿತ್ಯ, ಅಶೋಕ--ಇವರು ಮಹಾಪ್ರತಾಪಶಾಲಿಗಳಾದ ಗುಪ್ತವಂಶೀಯರೂ ಹರ್ಷವರ್ಧನ. ಶಿಲಾದಿತ್ಯ ಮೊದಲಾದವರೂ ಮತ್ತು ಈಚಿನ ಕಾಲದಲ್ಲಿ ಪಠಾಣರೂ ಮೊಗಲರೂ ಹೀಗೆ ಸಮ್ರಾಟರಾಗಿದ್ದರು. ಹಿಂದೂರಾಜ್ಯದ ಕಾಲದಲ್ಲಿ ಬಹಳಕಾಲ ಇಂಥಾ ಆಧಿಪತ್ಯವು ಮಗಧಾಧಿಪತಿಗಳಿಗೆ ಇತ್ತು. ನಾವು ವರ್ಣಿಸುತ್ತಿರುವ ಕಾಲದಲ್ಲಿಯೂ ಉತ್ತರ ಭಾರತಕ್ಕೆ ಮಗಧರಾಜ್ಯದ ಆರಸೇ ಸಮ್ರಾಜನಾಗಿದ್ದನು. ಇವನೇ ಪ್ರಖ್ಯಾತನಾದ ಜರಾಸಂಧ. ಇವನ ಬಲಪ್ರತಾಪಗಳನ್ನು ಮಹಾಭಾರತ, ಹರಿವಂಶ ಮತ್ತು ಸಮಸ್ತ ಪುರಾಣಗಳಲ್ಲಿಯೂ ಅತಿಶಯವಾಗಿ ವಿಸ್ತರಿಸಿ ವರ್ಣಿಸಿರುತ್ತಾರೆ. ಕುರುಕ್ಷೇತ್ರ ಯುದ್ಧದಲ್ಲಿ ಕ್ಷತ್ರಿಯರೆಲ್ಲರೂ ಒಟ್ಟುಗೂಡಿದ್ದರೆಂದು ಹೇಳಿದೆಯಷ್ಟೆ. ಆದರೆ ಉಭಯಪಕ್ಷಗಳಿಂದಲೂ ಒಟ್ಟಿನ ಮೇಲೆ ಹದಿನೆಂಟು ಅಕ್ಷೋಹಿಣೀ ಸೇನೆ ಇತ್ತು ಎಂದು ಬರೆದಿದ್ದಾರೆ. ಜರಾಸಂಧನೊಬ್ಬನಲ್ಲಿಯೇ ಇಪ್ಪತ್ತು ಅಕ್ಷೋಹಿಣೀ ಸೈನ್ಯವಿತ್ತೆಂದು ಬರೆದಿದೆ.

ಕಂಸನು ಜರಾಸಂಧನ ಅಳಿಯನು. ಕಂಸನು ಇವನ ಇಬ್ಬರು ಮಕ್ಕಳನ್ನೂ ಮದುವೆಯಾಗಿದ್ದನು. ಕಂಸನು ನಾಶವಾದ ಮೇಲೆ ಜರಾ

ಸಂಧನ ವಿಧವೆಯರಾದ ಮಕ್ಕಳಿಬ್ಬರೂ ತಂದೆಯ ಬಳಿಗೆ ಹೋಗಿ ಗೋಳಾಡಿದರು. ಅವನು ಕೃಷ್ಣನನ್ನು ಕೊಲ್ಲಲಿಕ್ಕೆ ಮಹಾಸೈನ್ಯ ಸಮೇತನಾಗಿ ಮಥುರೆಯನ್ನು ಮುತ್ತಿದನು. ಜರಾಸಂಧನ ಲೆಕ್ಕವಿಲ್ಲದ ಸೈನ್ಯದ ಮುಂದೆ ಯಾದವ ಸೈನ್ಯ ಬಹುಸ್ವಲ್ಪ. ಆದರೂ ಕೃಷ್ಣನ ನಾಯಕತ್ವದ ಚಾತುರ್ಯದಿಂದ ಯಾದವರು ಜರಾಸಂಧನನ್ನು ಹಿಮ್ಮೆಟ್ಟಿಸಿದ್ದರು. ಆದರೆ ಜರಾಸಂಧನು ಬಾರಿಬಾರಿಗೂ ಮಥುರೆಯನ್ನು ಮುತ್ತತೊಡಗಿದನು. ಅನೇಕ ಸಲ ಹಿಂದಕ್ಕಟ್ಟಲ್ಪಟ್ಟರೂ ಈ ಮುತ್ತಿಗೆಗಳಿಂದ ಯಾದವರು ಬಲು ಕುಗ್ಗುತ್ತ ಬಂದರು. ಇವರ ಸೈನ್ಯವೂ ಬರುತ್ತ ಬರುತ್ತ ಕ್ಷಯಹೊಂದಿ ಸೈನ್ಯದ ಹೆಸರು ಕೂಡ ಉಳಿಯುವುದೇ ಕಷ್ಟವಾಯಿತು. ಜರಾಸಂಧನ ಸೈನ್ಯದಲ್ಲಾದರೋ ಸಮುದ್ರದ ಉಬ್ಬರವಿಳಿತಗಳಂತೆ ಕ್ಷಯ ವೃದ್ಧಿಗಳು ಕಾಣದಿದ್ದವು. ಈ ರೀತಿಯಾಗಿ ಹದಿನೇಳು ಸಲ ಮುತ್ತಿಗೆಯಿಂದ ನೊಂದಮೇಲೆ ಯಾದವರು ಕೃಷ್ಣನ ಪರಾಮರ್ಶವನ್ನನುಸರಿಸಿ ಮಥುರೆಯನ್ನು ಬಿಟ್ಟು, ಆಕ್ರಮಿಸಲು ಅಸಾಧ್ಯವಾದಂಥ ಪ್ರದೇಶದಲ್ಲಿ ದುರ್ಗವನ್ನು ಕಟ್ಟಿಕೊಂಡು ವಾಸಮಾಡಲು ಅಭಿಪ್ರಾಯಪಟ್ಟರು. ಅದೇ ಪ್ರಕಾರವಾಗಿ ಸಮುದ್ರದಲ್ಲಿನ ದ್ವೀಪವಾದ ದ್ವಾರಕೆಯಲ್ಲಿ ಯಾದವರು ಊರನ್ನು ಕಟ್ಟಿ ಹತ್ತಲಸಾಧ್ಯವಾದ ರೈವತಕ ಪರ್ವತದಮೇಲೆ ದ್ವಾರಕಿಯ ರಕ್ಷಣಾರ್ಥವಾಗಿ ದುರ್ಗಶ್ರೇಣಿಯನ್ನು ನಿರ್ಮಿಸಿಕೊಂಡರು. ದ್ವಾರಕಿಗೆ ಹೋಗುವುದಕ್ಕೆ ಮುಂಚೆಯೇ ಜರಾಸಂಧನು ಹದಿನೆಂಟನೆಯ ಸಲ ಮಥುರೆಯನ್ನು ಮುತ್ತಿದನು.

ಈ ಸಮಯದಲ್ಲಿ ಜರಾಸಂಧನ ಪ್ರೋತ್ಸಾಹದಿಂದ ಇನ್ನೊಬ್ಬ ಪ್ರಬಲ ಶತ್ರುವು ಕೃಷ್ಣನನ್ನಾಕ್ರಮಿಸಬಂದನು. ಪ್ರಾಚೀನ ಕಾಲದಲ್ಲಿ ಭಾರತ ವರ್ಷದಲ್ಲಿ ಅಲ್ಲಲ್ಲಿ ಯವನರ ರಾಜತ್ವವಿದ್ದದ್ದನ್ನು ಹಲವು ಗ್ರಂಥಗಳಲ್ಲಿ ನೋಡಬಹುದು. ಈಗಿನ ಕಾಲದ ಪಂಡಿತರು—ಪ್ರಾಚೀನ ಗ್ರೀಕರಿಗೇನೇ ಭಾರತವರ್ಷೀಯರು ಯವನರೆಂದು ಕರೆಯುತಿದ್ದರೆಂದು ಸಿದ್ಧಾಂತ ಮಾಡಿರುವರು ಈ ಸಿದ್ಧಾಂತವು ಶುದ್ಧವೋ ಅಲ್ಲವೋ ಎಂಬ ವಿಷಯದಲ್ಲಿ ಹಲವು ಸಂಶಯಗಳುಂಟು. ಶಕ, ಹೂಣ, ಗ್ರೀಕ ಮೊದಲಾದ ಹಿಂದುಗಳಲ್ಲದ ಸಭ್ಯ ಜಾತಿಯವರೆಲ್ಲರನ್ನೂ ಯವನರೆಂತ ಕರೆಯುತಿದ್ದರೆಂದು ತೋರುತ್ತದೆ. ಇದು ಹೇಗಾದರೂ ಇರಲಿ. ಈ ಸಮಯದಲ್ಲಿ ಕಾಲಯವನನೆಂಬ ಯವನ

ರಾಜನೊಬ್ಬನು ಬಹಳ ಪ್ರತಾಪಶಾಲಿಯಾಗಿದ್ದನು. ಇವನು ಸೈನ್ಯ ಸಮೇತನಾಗಿ ಮಥುರೆಯನ್ನು ಮುತ್ತಿದನು. ಪರಮ ಸಮರ ರಹಸ್ಯಜ್ಞನಾದ ಕೃಷ್ಣನು ಅವನೊಡನೆ ಸಸೈನ್ಯವಾಗಿ ಯುದ್ಧಮಾಡಲು ಇಷ್ಟಪಡಲಿಲ್ಲ. ಏಕೆಂದರೆ, ಸಣ್ಣದಾದ ಯಾದವ ಸೇನೆ ಅವನೊಡನೆ ಯುದ್ಧಮಾಡಿ ಗೆದ್ದರೂ ಸಂಖ್ಯೆಯಲ್ಲಿ ಇನ್ನಷ್ಟು ಕಡಮೆಯಾಗುವುದು. ಅಲ್ಲದೆ ಕಳೆದುಳಿದ ಭಟರಿಂದ ಜರಾಸಂಧನನ್ನು ಹಿಂದಟ್ಟಲು ಆಗದೆ ಹೋಗಬಹುದು. ಅಲ್ಲದೆ ಸರ್ವ ಭೂತಗಳಲ್ಲಿಯೂ ದಯಾಮಯನಾದ ಕೃಷ್ಣನಿಗೆ ಧರ್ಮ, ಪ್ರಯೋಜನ ಇವುಗಳಿಗೆ ಮೀರಿದ ಪ್ರಾಣಹತ್ಯ ಬೇಡವಾಗಿತ್ತೆಂಬುದು ಮುಂದೆ ಗೊತ್ತಾಗುವುದು. ಅನೇಕ ಸಮಯಗಳಲ್ಲಿ ಯುದ್ಧವು ಧರ್ಮಾರ್ಥವಾಗಿರುವುದು. ಅಂಥ ವೇಳೆಗಳಲ್ಲಿ ಯುದ್ಧಕ್ಕೆ ಹಿಮ್ಮೆಟ್ಟಿದರೆ ಧರ್ಮ ಹಾನಿಯುಂಟಾಗುವುದು. ಗೀತೆಯಲ್ಲಿ ಕೃಷ್ಣನು ಇದೇ ಮತವನ್ನು ಪ್ರಕಾಶಪಡಿಸಿರುತ್ತಾನೆ. ಇಲ್ಲಿ ಕಾಲಯವನ ಮತ್ತು ಜರಾಸಂಧರೊಡನೆ ಯುದ್ಧ ಧರ್ಮಯುದ್ಧ. ಆತ್ಮ ರಕ್ಷಣಾರ್ಥವಾಗಿಯೂ, ಸ್ವಜನ ರಕ್ಷಣಾರ್ಥವಾಗಿಯೂ ಯುದ್ಧವನ್ನು ಮಾಡದಿದ್ದರೆ ಘೋರವಾದ ಅಧರ್ಮ ಪ್ರಾಪ್ತವಾಗುವುದು. ಯುದ್ಧವನ್ನು ಮಾಡಲೇಬೇಕಾದಾಗ ಎಷ್ಟು ಕೊಂಚ ಪ್ರಾಣಹಾನಿಯಿಂದ ಕಾರ್ಯವನ್ನು ಸಂಪಾದಿಸಬಹುದೋ ಅಷ್ಟನ್ನೇ ಮಾಡುವುದು ಧಾರ್ಮಿಕರ ಕರ್ತವ್ಯ. ಮಹಾಭಾರತ ಸಭಾಪರ್ವ ಜರಾಸಂಧವಧ ಪರ್ವಾಧ್ಯಾಯದಲ್ಲಿ ಕೃಷ್ಣನು ಇತರ ಬೇರೆ ಯಾವ ಮನುಷ್ಯ ಜೀವಹಾನಿಯೂ ಇಲ್ಲದಂತೆ ಜರಾಸಂಧನ ವಧೆಯನ್ನು ಕೈಗೂಡಿಸಲಿಕ್ಕೆ ತಕ್ಕ ಉಪಾಯವನ್ನು ಒದಗಿಸಿಕೊಂಡಿದ್ದನೆಂಬುದು ಕಂಡುಬರುವುದು. ಕಾಲಯವನನೊಡನೆ ಆದ ಯುದ್ಧದಲ್ಲಿಯೂ ಅದನ್ನೇ ಮಾಡಿದನು. ಅವನು ಸೈನ್ಯಸಮೇತನಾಗಿ ಕಾಲಯವನನನ್ನೆದುರಿಸದೆ ಒಬ್ಬನೇ ಒಂಟಿಯಾಗಿ ಅವನ ಬಿಡಾರಕ್ಕೆ ಹೋದನು. ಕಾಲಯವನನು ಅವನ ಗುರುತನ್ನು ಹಿಡಿದು ಅವನನ್ನು ಕೈಸೆರೆ ಹಿಡಿಯಲಿಕ್ಕಾಗಿ ಕೈಚಾಚಿದನು. ಕೃಷ್ಣನು ಸಿಕ್ಕದೆ ಓಡಿದನು, ಕಾಲಯವನನು ಅವನ ಬೆನ್ನಟ್ಟಿದನು. ಕೃಷ್ಣನು ವೇದದಲ್ಲಿಯೂ ಯುದ್ಧವಿದ್ಯೆದಲ್ಲಿಯೂ ಎಂತು ಸುಪಂಡಿತನೋ ಶಾರೀರಕ ವ್ಯಾಯಾಮದಲ್ಲಿಯೂ ಹಾಗಿಯೇ ನಿಸ್ಸೀಮನು. ಆದರ್ಶ ಮನುಷ್ಯನು ಹೀಗಿರುವುದು ಉಚಿತವೆಂಬುದನ್ನು ಧರ್ಮತತ್ತ್ವದಲ್ಲಿ ಕಾಣಿಸಿರುವೆನು.

ಆದುದರಿಂದ ಕೃಷ್ಣನನ್ನು ಕಾಲಯವನನ್ನು ಹಿಡಿಯಲಾರದೆ ಹೋದನು. ಇವನು ಕಾಲಯವನನನ್ನು ಹೀಗೆ ಒಂದು ಪರ್ವತದ ಗುಹೆಯುವರೆಗೂ ಬರಮಾಡಿಕೊಂಡನು. ಆ ಗುಹೆಯಲ್ಲಿ ಮುಚುಕುಂದನೆಂಬ ಋಷಿಯೊಬ್ಬನು ನಿದ್ರೆ ಗೈಯುತ್ತಿದ್ದನು. ಗುಹೆಯ ಕತ್ತಲಿನಲ್ಲಿ ಕೃಷ್ಣನನ್ನು ಕಾಣದೆ ಋಷಿಯನ್ನು ಕೃಷ್ಣನೆಂದು ಭ್ರಮಿಸಿ ಕಾಲಯವನನು ಋಷಿಯನ್ನು ಕಾಲಿನಿಂದ ಒದೆದನು. ಇದರಿಂದ ಎಚ್ಚರಗೊಂಡ ಋಷಿ ಅವನನ್ನು ತೀಕ್ಷ್ಣ ದೃಷ್ಟಿಯಿಂದ ನೋಡಿದ ನೋಟಕ್ಕೇ ಕಾಲಯವನನು ಸುಟ್ಟು ಬೂದಿಯಾದನು.

ಈ ಅತಿಪ್ರಕೃತಿಯನ್ನು ನಾವು ನಂಬಲಾರೆವು. ಮುಖ್ಯವಾಗಿ ಕೃಷ್ಣನು ಕೌಶಲವನ್ನು ತೋರಿಸಿ ಕಾಲಯವನನನ್ನು ಅವನ ಸೈನ್ಯದಿಂದ ಬೇರ್ಪಡಿಸಿ ಗೋಪ್ಯವಾದ ಸ್ಥಳದಲ್ಲಿ ಇಬ್ಬರೇ ಯುದ್ಧಮಾಡಿ ಕೊಂದಿರಬೇಕು. ಕಾಲಯವನನು ಹತನಾಗಲು ಅವನ ಸೈನ್ಯ ಭಂಗಹೊಂದಿ ಮಥುರೆಯನ್ನು ಬಿಟ್ಟು ಹೊರಟುಹೋಯಿತು. ಆಮೇಲೆ ಜರಾಸಂಧನೊಡನೆ ಯುದ್ಧಮಾಡಲು ಹದಿನೆಂಟನೆಯ ಸಲವೂ ಜರಾಸಂಧನು ಹಿಂದಿರುಗಿದನು.

ಮೇಲೆ ಹೇಳಿದ ವಿವರಣೆ ಹರಿವಂಶ ಮತ್ತು ವಿಷ್ಣುಪುರಾಣಗಳನ್ನನುಸರಿಸಿದೆ. ಮಹಾಭಾರತದಲ್ಲಿ ಜರಾಸಂಧನ ವಿಷಯವಾಗಿ ಕೃಷ್ಣನು ಯುಧಿಷ್ಠಿರನಿಗೆ ಕೊಟ್ಟಿರುವ ಪರಿಚಯದಲ್ಲಿ ಹದಿನೆಂಟು ಸಲ ಆದ ಯುದ್ಧದ ಸಮಾಚಾರವೇ ಇಲ್ಲ. ಅಲ್ಲದೆ ಜರಾಸಂಧನೊಡನೆ ಯಾದವರಿಗೆ ಕದನ ಕೂಡಿತ್ತೋ ಇಲ್ಲವೋ ಎಂಬುದೂ ಕೂಡ ಸ್ಪಷ್ಟವಾಗಿಲ್ಲ. ಅಲ್ಲಿರುವ ವಿಷಯದಿಂದ ಜರಾಸಂಧನು ಮಥುರೆಯನ್ನು ಒಂದು ಸಲ ಮುತ್ತಲು ಬಂದಿದ್ದಾಗ ಹಂಸನೆಂಬೊಬ್ಬ ಅವನ ಜತೆಗಾರನಾದ ವೀರನನ್ನು ಬಲದೇವನು ಕೊಲ್ಲಲು ಜರಾಸಂಧನು ದುಃಖಿತನಾಗಿ ಹಿಂದಿರುಗಿಬಿಟ್ಟನು. ಈ ಸ್ಥಾನದಲ್ಲಿ ಇಲ್ಲಿರುವ ವಿಷಯವನ್ನು ಕೆಳಗೆ ಎತ್ತಿದ್ದೇವೆ.—

ಕೆಲ ಕಾಲ ಕಳೆಯಿತು. ಕಂಸನು ಯಾದವರನ್ನು ಸೋಲಿಸಿ ಸಹದೇವಿ ಮತ್ತು ಅನುಜೆಯರೆಂಬ ಬಾರ್ಹದ್ರಥನ ಮಕ್ಕಳಿಬ್ಬರನ್ನು ಮದುವೆಯಾಗಿದ್ದನು. ಈ ದುರಾತ್ಮನು ತನ್ನ ಬಾಹುಬಲದಿಂದ ಜ್ಞಾತಿವರ್ಗವನ್ನಡಗಿಸಲು ಎಲ್ಲರಿಗಿಂತಲೂ ಪ್ರಧಾನನಾಗಿದ್ದನು. ಭೋಜವಂಶೀಯರಾದ ವೃದ್ಧಕ್ಷತ್ರಿಯರು ಈ ಮೂಢಕಂಸನ ಹಾವಳಿ

ಯಿಂದ ಬಹು ನೊಂದು ಜ್ಞಾತಿಗಳನ್ನು ಪರಿತ್ಯಜಿಸೆಂದು ನನಗೆ ಬಲವಂತಮಾಡಿದರು. ಆಗ ನಾನು ಆಹುಕನ ಮಗಳನ್ನು ಅಕ್ರೂರನಿಗೆ ಕೊಡಿಸಿ ಜ್ಞಾತಿಗಳ ಹಿತಸಾಧನೆಗಾಗಿ ಬಲಭದ್ರನನ್ನು ಕೂಡಿ ಕಂಸನನ್ನೂ ಸುನಾಮನನ್ನೂ ಸಂಹಾರಮಾಡಿದನು. ಇದರಿಂದ ಕಂಸಭಯ ನಿವಾರಿತವಾದರೂ ಜರಾಸಂಧನು ಕೆಲವು ದಿನಗಳಾದಮೇಲೆ ಬಹು ಪ್ರಬಲನಾಗಿ ಎದ್ದನು. ಆಗ ನಾವು ಜ್ಞಾತಿ ಬಂಧುಗಳೊಡಗೂಡಿ ಪರಾಮರ್ಶ ಮಾಡುವುದರಲ್ಲಿ ಶತ್ರುನಾಶಕ ಮಹಾಸ್ತ್ರ ಸಹಾಯದಿಂದ ನೂರು ವರ್ಷಗಳವರೆಗೂ ವಿಶ್ರಾಂತಿಯಿಲ್ಲದೆ ಜರಾಸಂಧನ ಸೈನ್ಯವನ್ನು ಕಡಿದರೂ ಅದು ನಿಶ್ಶೇಷವಾಗುವುದಿಲ್ಲ. ದೇವಸಮಾನ ತೇಜಸ್ವಿಗಳೂ ಮಹಾ ಬಲಶಾಲಿಗಳೂ ಅಜೇಯರೂ ಆದ ಹಂಸ ಮತ್ತು ಡಿಂಭಕರೆಂಬ ವೀರರಿಬ್ಬರೂ ಅವನ ಬೆಂಬಲಕ್ಕಿರುವರು; ಇವರು ಅಸ್ತ್ರ ಘಾತದಿಂದ ಸಾಯುವವರಲ್ಲ. ಇವರೀರ್ವರೂ ಮತ್ತು ಜರಾಸಂಧನೂ ಸೇರಿ ಒಟ್ಟಿಗೆ ಕಾದಿದರೆ ತ್ರಿಭುವನನ್ನಾದರೂ ಜಯಿಸಿಯಾರು! ಎಂದು ಖಂಡಿತವಾಗಿಯೂ ನನಗೆ ತೋರುತ್ತಲಿದೆ. ಎಲೈ ಧರ್ಮರಾಜನೇ ಈ ಪರಾಮರ್ಶವು ಕೇವಲ ನನ್ನ ಅಭಿಪ್ರಾಯ ವೆಂದೆಣಿಸಬೇಡ; ಇತರ ಭೂಪತಿಗಳೂ ಹೀಗೆಯೇ ತಿಳಿದಿರುವರು.

ಹಂಸನೆಂಬ ಪ್ರಖ್ಯಾತನಾದ ಇನ್ನೊರ್ವ ರಾಜನಿದ್ದನು. ಬಲದೇವನು ಕಾಳಗ ದಲ್ಲಿ ಅವನನ್ನು ಕೊಂದನು. ಜನಗಳ ಬಾಯಿಂದ ಹಂಸನು ಸತ್ತನೆಂಬ ವಾರ್ತೆಯನ್ನು ಡಿಂಭಕನು ಕೇಳಿ ನಾಮಸಾದೃಶ್ಯದಿಂದ ತನ್ನ ಜತೆಗಾರನಾದ ಹಂಸನು ಸತ್ತನೆಂದು ತಿಳಿದು ಹಂಸನಿಲ್ಲದ ತನ್ನ ಜೀವನವೇಕೆ ಎಂದು ವಿವೇಚಿಸಿ ಯಮುನೆಯಲ್ಲಿ ಬಿದ್ದು ಪ್ರಾಣಬಿಟ್ಟನು. ಇತ್ತಕಡೆ ಇವನ ಸಹಚರನಾದ ಹಂಸನು ಪರಮಮಿತ್ರನಾದ ಡಿಂಭ ಕನು ತಾನು ಸತ್ತನೆಂಬ ಸುಳ್ಳು ವಾರ್ತೆಯಿಂದ ಪ್ರಾಣಬಿಟ್ಟನೆಂದು ಕೇಳಿ ಇನ್ನಿಲ್ಲದಷ್ಟು ದುಃಖಪಟ್ಟು ಯಮುನೆಯ ನೀರಿಗೆ ಆತ್ಮ ಸಮರ್ಪಣೆಯನ್ನು ಮಾಡಿದನು. ಈ ಇಬ್ಬರು ವೀರರ ಸಾವಿನ ವರ್ತಮಾನವನ್ನು ಕೇಳಿ ಅತಿಯಾಗಿ ದುಃಖಪಟ್ಟು ಖಿನ್ನನಾಗಿ ಜರಾ ಸಂಧನು ತನ್ನ ಪಟ್ಟಣಕ್ಕೆ ಹಿಂದಿರುಗಿದನು. ಬಳಿಕ ನಾವು ಬಹು ಸಂತೋಷದಿಂದ ಮಥುರೆಯಲ್ಲಿ ವಾಸಿಸುತ್ತಿದ್ದೆವು. ಕೆಲವು ದಿನಗಳ ಮೇಲೆ ಗಂಡನನ್ನು ಕಳೆದುಕೊಂಡು ಗೋಳಿಡುತ್ತಿರುವ ಜರಾಸಂಧನ ಮಕ್ಕಳು ತಂದೆಯ ಸಮೀಪಕ್ಕೆ ಹೋಗಿ ತಮ್ಮ ಗಂಡ ನನ್ನು ಕೊಂದವನನ್ನು ಕೊಲ್ಲಬೇಕೆಂದು ಬಾರಿಬಾರಿಗೂ ಹೇಳುತ್ತ ಹಟ ಮಾಡು ತ್ತಿದ್ದರು. ನಾವು ಮೊದಲೇ ಜರಾಸಂಧನ ಬಲವಿಕ್ರಮಗಳ ವಿಷಯವನ್ನು ಗೊತ್ತು ಮಾಡಿಕೊಂಡಿದ್ದೆವು. ಆದುದರಿಂದ ಈಗ ಅದನ್ನು ಸ್ಮರಿಸಿಕೊಂಡು ಅತಿಯಾಗಿ ಕಳ ವಳಗೊಂಡೆವು. ಆಗ ನಮ್ಮ ವಿಶೇಷ ಧನ ಸಂಪತ್ತುಗಳನ್ನು ಭಾಗಮಾಡಿಕೊಂಡು ಎಲ್ಲರೂ ಅಷ್ಟಷ್ಟನ್ನು ತೆಗೆದುಕೊಂಡು ಹೊರಟು ಹೋಗಬೇಕೆಂದು ಗೊತ್ತುಮಾಡಿ ಸ್ವಸ್ಥಾನವನ್ನು ಬಿಟ್ಟು ಪಶ್ಚಿಮ ದಿಕ್ಕಿಗೆ ಪಲಾಯನ ಮಾಡಿದೆವು. ಈ ಪಶ್ಚಿಮ ದೇಶದಲ್ಲಿ ರೈವತಕ ಪರ್ವತದಿಂದ ರಕ್ಷಿತವಾದ ಪರಮ ರಮಣೀಯವಾದ ಕುಶಸ್ಥಲೀ ಹೆಸರಿನ ಊರಿನಲ್ಲಿ ವಾಸಮಾಡುತ್ತಲಿದ್ದೇವೆ. ಅಲ್ಲಿ ದುರ್ಗಸಂಸ್ಕಾರವನ್ನು ಮಾಡಿ ವೃಷ್ಣಿ ವಂಶೀಯ ಮಹಾ ರಥರಂತಿರಲಿ, ಹೆಂಗಸರೂ ಕೂಡ ಅನಾಯಾಸವಾಗಿ ಯುದ್ಧ ಮಾಡಬಲ್ಲವರಾಗಿರುವರು. ಎಲೈ ರಾಜನೇ, ಈಗ ನಾವು ಯಾರ ಭಯವೂ ಇಲ್ಲದೆ

ಈ ಊರಿನಲ್ಲಿ ವಾಸಮಾಡುತಲಿದ್ದೇವೆ. ಸರ್ವಶ್ರೇಷ್ಠವಾದ ರೈವತಕ ಪರ್ವತವು ಮಗಧ ದೇಶವನ್ನೆಲ್ಲಾ ಸುತ್ತುವರಿದುಕೊಂಡಿರುವುದನ್ನು ಯಾದವರು ಕಂಡು ಬಹು ಸಂತೋಷಗೊಂಡರು. ಎಲೈ ಕುರುಕುಲಪ್ರದೀಪನೆ, ನಾವು ಸಮರ್ಥರಾದರೂ ಜರಾಸಂಧನ ಉಪದ್ರವಕ್ಕೆ ಭಯಪಟ್ಟು ಬೆಟ್ಟದ ಮರೆಯನ್ನು ಹೊಂದಿರುವೆವು. *ಈ ಪರ್ವತವು ಮೂರು ಯೋಜನ ಉದ್ದವಿರುವುದು. ಪ್ರಸ್ಥಭೂಮಿಯು ಒಂದು ಯೋಜನಕ್ಕಿಂತಲೂ ಹೆಚ್ಚು. ಮತ್ತು ಇಪ್ಪತ್ತೊಂದು ಕೋಡುಗಳನ್ನುಳ್ಳದ್ದು. ಇದರಲ್ಲಿ ಒಂದೊಂದು ಯೋಜನಕ್ಕೂ ನೂರು ನೂರು ಬಾಗಿಲುಗಳೂ ಅತ್ಯುತ್ಕೃಷ್ಟವೂ ಎತ್ತರವೂ ಆದ ತೋರಣಗಳೂ ಇರುವುವು. ಯುದ್ಧ ದುರ್ಮದರೂ ಮಹಾಬಲ ಶಾಲಿಗಳೂ ಆದ ಕ್ಷತ್ರಿಯರು ಅವುಗಳಲ್ಲಿ ಸರ್ವದಾ ವಾಸಮಾಡುತ್ತಿರುವರು. ಎಲೈ ರಾಜನೇ, ನಮ್ಮ ಕುಲದಲ್ಲಿ ಹದಿನೆಂಟು ಸಾವಿರ ಸೋದರರಿರುವೆವು. ಆಹುಕನ ನೂರುಜನ ಮಕ್ಕಳು ದೇವತೆಗಳ ಸಮಾನರು ; ಚಾರುದೇಷ್ಣ ಮತ್ತು ಅವನ ಸೋದರ ಚಕ್ರದೇವ, ಸಾತ್ಯಕಿ, ನಾನು, ಬಲಭದ್ರ, ಯುದ್ಧವಿಶಾರದನಾದ ಶಾಂಬ ಈ ಏಳು ಜನವೂ ರಥಿಗಳು. ಕೃತವರ್ಮ, ಅನಾಧೃಷ್ಟ, ಸಮೀಕ, ಸಮಿತಿಂಜಯ, ಕಕ್ಷಶಂಕು ಮತ್ತು ಕುಂತಿ—ಈ ಏಳುಜನವೂ ಮಹಾರಥರು. ಅಂಧಕ, ಭೋಜರ ಇಬ್ಬರು ವೃದ್ಧಪುತ್ರರು ಮತ್ತು ರಾಜನೂ ಮಹಾ ಬಲಪರಾಕ್ರಾಂತರೂ ದೃಢಕಾಯರೂ ಆದ ಇವರಕಡೆಯ ಹತ್ತುಜನ ಮಹಾವೀರರೂ ಇವರೆಲ್ಲರನ ಜರಾಸಂಧನಿಂದಾಕ್ರಮಿಸಲ್ಪಟ್ಟ ಮಧ್ಯಮ ದೇಶವನ್ನು ನೆನೆದು ಯದುವಂಶರೊಡನೆ ಬೆರೆತುಕೊಂಡಿರುವರು.

ಈ ಜರಾಸಂಧ ಪರ್ವಾಧ್ಯಾಯವು ವಿಶೇಷವಾಗಿ ಮಹಾಭಾರತದ ಮೂಲ ಅಂಶವೆಂದು ನಾವು ನಂಬಿರುವೆವು. ಒಂದೆರಡು ಮಾತುಗಳು ಪ್ರಕ್ಷಿಪ್ತವಾಗಿರಬಹುದಾದರೂ ಅಧಿಕಾಂಶವು ಮೌಲಿಕವು. ಇದು ನಿಜವಾದರೆ ಮೇಲೆ ಹೇಳಿದ ವೃತ್ತಾಂತವೇ ಕೃಷ್ಣನೊಡನೆ ಜರಾಸಂಧನಿಗೆ ಇದ್ದ ವಿರೋಧಕ್ಕೆ ಕಾರಣವೆಂದೊಪ್ಪಿಕೊಳ್ಳಬೇಕಾಗುವುದು. ಏಕೆಂದರೆ, ಹರಿವಂಶ ಮತ್ತು ಪುರಾಣಗಳೆಲ್ಲಕ್ಕಿಂತಲೂ ಮಹಾಭಾರತದ ಮೌಲಿಕ ಅಂಶವು ಪ್ರಾಚೀನವಾದುದೆಂದು ಮೊದಲೇ ತಿಳಿಸಿರುವೆವು. ಇದು ಸತ್ಯ ವಾದರೆ ಜರಾಸಂಧನಿಂದಾದ ಹದಿನೆಂಟು ಸಾರಿಯ ಮಥುರೆಯ ಮುತ್ತಿ ಗೆಯೂ ಮತ್ತು ಹದಿನೆಂಟನೆಯ ಸಲದ ಸೋಲೂ ಸುಳ್ಳು ಹರಟೆ.

---

* ಮಗಧ ದೇಶವನ್ನಾಕ್ರಮಿಸಿರುವುದೆಂದರೆ, ವಿಂಧ್ಯಪರ್ವತ, ಆರಾವಳಿಪರ್ವತ ಗಳಿರಬಹುದೆ ? ಆದರೆ ಇವುಗಳ ಉದ್ದವು ಮೂರು ಯೋಜನ ಮಾತ್ರವಲ್ಲ. ಇವು ಮಧ್ಯ ದೇಶವನ್ನು ಸಂಪೂರ್ಣವಾಗಿ ಆವರಿಸಿವೆ. ಗಿರಿನಾರು ಸಹ ಮೂರು ಯೋಜನ ಕ್ಕಿಂತ ಹೆಚ್ಚಿನದು.

ಒಂದು ಸಲ ಮಾತ್ರ ಮಥುರೆಯನ್ನಾಕ್ರಮಿಸಲು ಬಂದು ನಿಷ್ಫಲನಾಗಿ ಹಿಂದಕ್ಕೆ ಹೋಗಿದ್ದನು. ಎರಡನೆಯ ಸಲ ಆಕ್ರಮಿಸುವ ಸಂಭವವಿತ್ತು. ನಾಲ್ಕು ಕಡೆಗಳಲ್ಲಿಯೂ ಸಮತಲವಾದ ದೇಶದ ನಡುವೆ ಇರುವ ಮಥುರೆಯಲ್ಲಿದ್ದುಕೊಂಡು ಅಗಣಿತವಾದ ಸೈನ್ಯದಿಂದ ಬಾರಿಬಾರಿಗೂ ಮುತ್ತಿಗೆಯನ್ನು ನಿಷ್ಫಲಮಾಡುವುದು ಅಸಂಭವವು ಎಂದು ಕೃಷ್ಣನು ತಿಳಿದು, ಎಲ್ಲಿ ದುರ್ಗದ ಆಸರೆಯಿಂದ ಸಣ್ಣ ಸೈನ್ಯವನ್ನು ಕಾಪಾಡಿಕೊಂಡು ಜರಾಸಂಧನನ್ನು ಹಿಮ್ಮೆಟ್ಟಿಸಬಹುದೋ ಅಂಥ ತಾವಿಗೆ ರಾಜಧಾನಿಯನ್ನು ಬದಲಾಯಿಸಿಕೊಂಡನು. ಇದನ್ನು ನೋಡಿ ಜರಾಸಂಧನು ಅತ್ತಕಡೆಗೆ ವೈಯಿಕ್ಕಲಿಲ್ಲ. ಜಯಪರಾಜಯದ ಮಾತಾವುದೂ ಇಲ್ಲಿ ಇಲ್ಲ. ಕೃಷ್ಣನು ಯುದ್ಧಕೌಶಲದಲ್ಲಿ ಪಾರದರ್ಶಿ, ರಾಜನೀತಿಜ್ಞ ಮತ್ತು ಮನುಷ್ಯಹತ್ಯಕ್ಕೆ ಅತಿಶಯ ವಿರೋಧಿ ಎಂಬುದು ಮಟ್ಟಿಗೆ ತಿಳಿಯಬರುತ್ತದೆ. ಆದರ್ಶ ಮನುಷ್ಯನ ಗುಣಗಳೆಲ್ಲವೂ ಇದರಲ್ಲಿ ಕ್ರಮವಾಗಿ ಪರಿಸ್ಫುಟವಾಗುತ್ತಲಿವೆ.

ಚತುರ್ಥ ಪರಿಚ್ಛೇದ

ಕೃಷ್ಣನ ಮದುವೆ

ಕೃಷ್ಣನ ಪ್ರಥಮ ಪತ್ನಿಯು ರುಕ್ಮಿಣಿ. ಇವಳು ವಿದರ್ಭ (ಮಹಾರಾಷ್ಟ್ರ, ಬೀದರ) ರಾಜನಾದ ಭೀಷ್ಮಕನ ಮಗಳು. ಇವಳು ಅತಿಶಯ ರೂಪವಂತಳು ಗುಣವಂತಳು ಎಂಬುದನ್ನು ಕೇಳಿ, ಕೃಷ್ಣನು ಭೀಷ್ಮಕನನ್ನು ವಿವಾಹಾರ್ಥವಾಗಿ ಬೇಡಿದ್ದನು. ರುಕ್ಮಿಣಿಯೂ ಕೃಷ್ಣನಲ್ಲಿ ಅನುರಕ್ತಳಾಗಿದ್ದಳು. ಭೀಷ್ಮಕನಾದರೆ ಕೃಷ್ಣನ ಹಗೆಯಾದ ಜರಾಸಂಧನ ಹೇಳಿಕೆಯ ಮೇರೆ ರುಕ್ಮಿಣಿಯನ್ನು ಕೃಷ್ಣನಿಗೆ ಕೊಡಲು ಸಮ್ಮತಿಸದೆ ಅವನ ಶತ್ರುವಾದ ಶಿಶುಪಾಲನೊಂದಿಗೆ ಮದುವೆಯನ್ನು ಗೊತ್ತುಮಾಡಿ ಲಗ್ನವನ್ನು ನಿಶ್ಚಯಿಸಿ ರಾಜರುಗಳಿಗೆ ಔತಣವನ್ನು ಕೊಟ್ಟು ಯಾದವರನ್ನು ಮಟ್ಟಿಗೆ ಕರೆಯದೆ ಹೋಗಲು, ಕೃಷ್ಣನು ತಾನು ಯಾದವರನ್ನು ಕೂಡಿ ಭೀಷ್ಮಕನ ರಾಜಧಾನಿಗೆ ಹೋಗಿ ರುಕ್ಮಿಣಿಯನ್ನು ಅವಳ ಬಂಧುಗಳ

ಸಮ್ಮತಿಯಿಲ್ಲದೇನೇ ಸ್ವೀಕರಿಸಿ ವಿವಾಹಮಾಡಿಕೊಳ್ಳಬೇಕೆಂದು ಸಂಕಲ್ಪಿಸಿ ಕೊಂಡನು.

ಕೃಷ್ಣನು ಇದಕ್ಕನುಸಾರವಾಗಿ ಮದುವೆಯ ದಿನ ರುಕ್ಮಿಣಿಯು ದೇವರ ಪೂಜೆಯನ್ನು ಮಾಡಿ ದೇವಸ್ಥಾನದಿಂದ ಹೊರಗೆ ಬರಲು ಅವಳನ್ನು ಎತ್ತಿ ರಥದಲ್ಲಿ ಕೂರಿಸಿಕೊಂಡನು. ಭೀಷ್ಮಕನೂ ಮತ್ತು ಅವನ ಪುತ್ರರೂ, ಜರಾಸಂಧ ಮೊದಲಾದ ಭೀಷ್ಮಕನ ಮಿತ್ರರಾಜರೂ ಕೃಷ್ಣನ ಆಗಮನವನ್ನು ಕೇಳಿ ಹೀಗೊಂದು ಗಲಭೆಯುಂಟಾಗಬಹುದೆಂದೂಹಿಸಿ ಮೊದಲಿಂದಲೂ ತಕ್ಕ ಜಾಗರೂಕತೆಯಿಂದಲೇ ಇದ್ದರು. ಇವರು ಸೈನ್ಯ ಸಮೇತರಾಗಿ ಕೃಷ್ಣನನ್ನು ಅಟ್ಟಿಕೊಂಡು ಹೋದರು. ಆದರೆ ಅವನನ್ನೇ ಆಗಲಿ ಯಾದವರನ್ನೇ ಆಗಲಿ ಯಾರೂ ಸೋಲಿಸಲಾರದೆ ಹೋದರು. ರುಕ್ಮಿಣಿಯನ್ನು ದ್ವಾರಕಿಗೊಯ್ದು ವಿಧಿವತ್ತಾಗಿ ಕೃಷ್ಣನು ಅವಳನ್ನು ಮದುವೆಯಾದನು.

ಇದಕ್ಕೆ ಹರಣವೆನ್ನುವರು. ಹರಣವೆಂದರೆ ಕನ್ಯೆಯ ಮೇಲೆ ಯಾವ ತೆರನಾದ ಬಲೋದ್ಬಂಧವನ್ನೂ ತಿಳಿಯಲಾಗದು. ಕನ್ಯೆಗೆ ವರನು ಅಭಿಮತನಾಗಿ, ಅವಳು ಮದುವೆಗೆ ಸಮ್ಮತಳಾಗಿರಲು ಅವಳಮೇಲೆ ಬಲೋದ್ಬಂಧವೆಲ್ಲಿಯದು ? ರುಕ್ಮಿಣೀಹರಣದಲ್ಲಿ ದೋಷವೇನೂ ಇಲ್ಲ. ಏಕೆಂದರೆ, ರುಕ್ಮಿಣಿಯು ಕೃಷ್ಣನಲ್ಲಿ ಅನುರಕ್ತಳು. ಇದಲ್ಲದೆ, ಈ ತೆರನಾದ ದೋಷವು ಕೃಷ್ಣನ ಒಪ್ಪಿಗೆಯಮೇಲೆ ಅರ್ಜುನನಿಂದಾದ ಸುಭದ್ರಾಹರಣಕ್ಕೂ ತಟ್ಟದೆಂಬುದನ್ನು ಮುಂದೆ ವಿವರಿಸಲಾಗುವುದು.

ಆದರೆ ಇದರೊಳಗೆ ಇನ್ನೊಂದು ಮಾತುಂಟು. ಆ ಕಾಲದಲ್ಲಿ ಕ್ಷತ್ರಿಯರ ಮದುವೆಯು ಎರಡು ತೆರನಾಗಿ ನಡೆಯುವುದು ಪ್ರಶಸ್ತವೆನಿಸಿಕೊಂಡಿತ್ತು : (೧) ಸ್ವಯಂವರ ವಿವಾಹ ; (೨) ಹರಣ. ಆಗಾಗ್ಗೆ ಒಂದನೇ ರೀತಿಯ ವಿವಾಹವು ಎರಡು ಬಗೆಯಾಗಿಯೂ ಪರಿಣಮಿಸುತ್ತಿತ್ತು.

ಉದಾ.—ಕಾಶೀರಾಜನ ಮಕ್ಕಳಾದ ಅಂಬಿಕಾದಿಗಳ ವಿವಾಹ. ಈ ವಿವಾಹದಲ್ಲಿ ಸ್ವಯಂವರವಾಯಿತು. ಆದರೆ ಆದರ್ಶ ಕ್ಷತ್ರಿಯನಾದ ದೇವವ್ರತ ಭೀಷ್ಮನು ಸ್ವಯಂವರವನ್ನು ಗೌರವಿಸದೆ ಮೂವರನ್ನೂ ಕಸಿದು ಕೊಂಡು ಹೊರಟುಹೋದನು. ಆಮೇಲೆ ಕನ್ಯೆಯ ಸ್ವಯಂವರವಾದರೂ

ಆಗಲಿ, ಪರಣವಾದರೂ ಆಗಲಿ ಉದ್ಧತ ಸ್ವಭಾವದವರಾದ ರಣಪ್ರಿಯರಾದ ಕ್ಷತ್ರಿಯರು ಹೇಗೋ ಒಂದು ಯುದ್ಧವನ್ನು ನಡಸುತ್ತಿದ್ದರು. ಇತಿಹಾಸದಲ್ಲಿ ದ್ರೌಪದೀ ಸ್ವಯಂವರ, ಕಾವ್ಯದಲ್ಲಿ ಇಂದುಮತೀ ಸ್ವಯಂವರ—ಇವನ್ನೆಲ್ಲಾ ನೋಡಿದರೆ, ಕನ್ಯಾಹರಣವಾಗದಿದ್ದರೂ ಯುದ್ಧವೇನೋ ಆಗುತ್ತಿತ್ತು ಎಂದು ತಿಳಿಯಬರುವುದು. ಮೌಲಿಕ ಮಹಾಭಾರತದ ಅಂಶದಲ್ಲಿ ರುಕ್ಮಿಣಿಯು ಹರಣ ಮಾಡಲ್ಪಟ್ಟಳೆಂಬ ಮಾತೇ ಸಿಕ್ಕುವುದಿಲ್ಲ. ಶಿಶುಪಾಲ ವಧ ಪರ್ವಾಧ್ಯಾಯ ದಲ್ಲಿ ಕೃಷ್ಣನು ಹೇಳುತಲಿದಾನೆ :—

ರುಕ್ಮಿಣ್ಯಾಮಸ್ಯ ಮೂಢಸ್ಯ ಪ್ರಾರ್ಥನಾಸೀನ್ಮುಮೂರ್ಷತಃ ।
ನ ಚ ತಾಂ ಪ್ರಾಪ್ತವಾನ್ ಮೂಢಃ ಶೂದ್ರೋ ವೇದಶ್ರುತೀಮಿವ ॥
ಶಿಶುಪಾಲ ವಧ ಪರ್ವಾಧ್ಯಾಯ ೪೫, ೧೫ನೆಯ ಶ್ಲೋಕ

ಶಿಶುಪಾಲನು ಹೀಗೆ ಉತ್ತರ ಹೇಳಿದನು :—

ಮತ್ಪೂರ್ವಾಂ ರುಕ್ಮಿಣೀಂ ಕೃಷ್ಣ ಸಂಸತ್ಸುಪರಿಕೀರ್ತಯನ್ ।
ವಿಶೇಷತಃ ಪಾರ್ಥಿವೇಷು ವ್ರೀಡಾಂ ನ ಕುರುಷೇ ಕಥಂ ॥

ಮನ್ಯಮಾನೋ ಹಿ ಕಸ್ಸತ್ಸು ಪುರುಷಃ ಪರಿಕೀರ್ತಯೇತ್ ।
ಅನ್ಯಪೂರ್ವಾಂ ಸ್ತ್ರಿಯಂ ಜಾತು ತ್ವದನ್ಯೋ ಮಧುಸೂದನ ॥
ಶಿಶುಪಾಲ ವಧ ಪರ್ವಾಧ್ಯಾಯ, ೪೫ನೆಯ ಅಧ್ಯಾಯ. ೧೮-೧೯ನೆಯ ಶ್ಲೋಕ

ಮೇಲೆ ಹೇಳಿದುದರಲ್ಲಿ ರುಕ್ಮಿಣಿಯು ಅಪಹೃತಳಾಗಿದ್ದಳೆಂದಾಗಲಿ, ಅದಕ್ಕಾಗಿ ಜಗಳವೊಂದು ನಡೆಯಿತೆಂದಾಗಲಿ ತಿಳಿಯಲು ಆಗುವುದಿಲ್ಲ. ಇದರಮೇಲೆ ಉದ್ಯೋಗಪರ್ವದೊಂದೆಡೆಯಲ್ಲಿ ಹೀಗೆಂದು ಬರೆದು ಇದೆ:—

ಯೋ ರುಕ್ಮಿಣೀಮೇಕರಥೇನ ಭೋಜಾನ್ ।
ಉತ್ಸಾದ್ಯರಾಜ್ಞಃ ಸಮರೇ ಪ್ರಸಹ್ಯ ॥
ಉವಾಹ ಭಾರ್ಯಾಂ ಯಶಸಾ ಜ್ವಲಂತೀಂ
ಯಸ್ಯಾಂ ಜಜ್ಞೇ ರೌಕ್ಮಿಣೇಯೋ ಮಹಾತ್ಮಾ ॥

ಇಲ್ಲಿ ಕದನದ ಮಾತುಂಟು. ಹರಣದ ವಾರ್ತೆ ಇಲ್ಲ. ಇದೇ ಉದ್ಯೋಗಪರ್ವದ ಇನ್ನೊಂದೆಡೆಯಲ್ಲಿ ರುಕ್ಮಿಣೀ ಹರಣವು ಇರುವುದು. ಸೈನ್ಯವನ್ನು ಕೂಡಿಸುವಾಗ ರುಕ್ಮಿಣಿಯ ಅಣ್ಣನಾದ ರುಕ್ಮಿಯು ಪಾಂಡವರ ಬಿಡದಿಗೆ ಬಂದು—

ಬಾಹುಬಲಗರ್ವಿತನಾದ ರುಕ್ಮಿ, ಪೂರ್ವದಲ್ಲಿ ಬುದ್ಧಿವಂತನಾದ ವಾಸುದೇವನು ತನ್ನ ತಂಗಿಯಾದ ರುಕ್ಮಿಣಿಯನ್ನು ಕದ್ದು ಎತ್ತಿಕೊಂಡು ಹೋದುದನ್ನು ಸಹಿಸಲಾರದೆ, ಕೃಷ್ಣನನ್ನು ಸಾಯಬಡಿದಲ್ಲದೆ ಹಿಂತಿರುಗೆನೆಂದು ಶಪಥವನ್ನು ಕಟ್ಟಿಕೊಂಡು, ಭಾಗೀರಥಿಯಂತೆ ಕೊಬ್ಬಿ ವೇಗವಾಗಿಯೂ ವಿಚಿತ್ರವಾದ ಆಯುಧಗಳಿಂದಲೂ ಶೋಭಿಸುತ್ತಿರುವ ಚತುರಂಗಬಲವನ್ನು ಕೂಡಿ ಕೃಷ್ಣನನ್ನು ಬೆನ್ನುಹತ್ತಿ ಓಡಿದನು. ಆಮೇಲೆ ಅವನ ಹತ್ತಿರಕ್ಕೆ ಬಂದೊಡನೆ ಸೋತು ಹೀನಾಯದಿಂದ ತಲೆಬಾಗಿ ಹಿಂದಿರುಗಿದನು. ಆದರೆ ಕೃಷ್ಣನಿಂದ ಪರಾಜಿತವಾದೆಡೆಯಲ್ಲಿಯೇ ಭೋಜಕಟಕವೆಂಬ ಹೆಸರಿನ ಬಲು ಸೇನೆಯಿಂದಲೂ ಗಜತುರಗಳಿಂದಲೂ ತುಂಬಿ ಹೆಸರುಗೊಂಡ ನಗರಿಯೊಂದನ್ನು ಕಟ್ಟಿದನು. ಈಗ ಅದೇ ಭೋಜರಿಗೆ ಒಡೆಯನಾದ ರುಕ್ಮಿ ಒಂದಕ್ಷೋಹಿಣಿ ಸೈನ್ಯವನ್ನು ತೆಗೆದುಕೊಂಡು ಬೇಗನೆ ಪಾಂಡವರಿದ್ದಲ್ಲಿಗೆ ಬಂದನು. ಪಾಂಡವರು ಅರಿಯದಂತೆ ಕೃಷ್ಣನಿಗೆ ಸಂತೋಷವನ್ನು ಉಂಟುಮಾಡಬೇಕೆಂಬ ಕುತೂಹಲದಿಂದ ಕವಚ, ಧನುಸ್ಸು, ಕತ್ತಿ, ಖಡ್ಗ, ಬತ್ತಳಿಕೆಗಳನ್ನೂ ತೆಗೆದುಕೊಂಡು ಸೂರ್ಯನಂತೆ ಬೆಳಗುತ್ತಿರುವ ಧ್ವಜದೊಂದಿಗೆ ಪಾಂಡವರ ಮಂಡಲಿಯಲ್ಲಿ ಬೆರೆತನು.

ಈ ಮಾತು ಉದ್ಯೋಗಪರ್ವದ ೧೫೭ನೆಯ ಅಧ್ಯಾಯದಲ್ಲಿದೆ. ಈ ಅಧ್ಯಾಯದ ಹೆಸರು "ರುಕ್ಮಿ ಪ್ರತ್ಯಾಖ್ಯಾನ"ವೆಂತ ಇದೆ. ಮಹಾಭಾರತದ ಪರ್ವಸಂಗ್ರಹ ಅಧ್ಯಾಯದ ವಿಷಯವನ್ನು ಮೊದಲೇ ತಿಳುಹಿಸಿರುತ್ತೇನೆ. ಅಲ್ಲಿ ಉದ್ಯೋಗಪರ್ವದಲ್ಲಿ ೧೮೬ ಅಧ್ಯಾಯಗಳೆಂತಲೂ, ೬,೬೯೮ ಶ್ಲೋಕಗಳೆಂತಲೂ ಹೇಳಿರುತ್ತದೆ.

ಉದ್ಯೋಗಪರ್ವ ಸಂದಿಷ್ಟಂ ಸಂದಿವಿಗ್ರಹಮಿಶ್ರಿತಂ ।
ಅಧ್ಯಾಯಾನಾಂ ಶತಂ ಪ್ರೋಕ್ತಂ ಷಡಶೀತಿರ್ಮಹರ್ಷಿಣಾ ॥

ಶ್ಲೋಕಾನಾಂ ಷಟ್ಸಹಸ್ರಾಣಿ ತಾವಂತ್ಯೇವ ಶತಾನಿ ಚ ।
ಶ್ಲೋಕಾಶ್ಚ ನವತಿಃ ಪ್ರೋಕ್ತಾಸ್ತಥೈವಾಷ್ಟೌ ಮಹಾತ್ಮನಾ ॥

ಮಹಾಭಾರತ: ಆದಿ ಪರ್ವ

ಈಗ ಮಹಾಭಾರತದಲ್ಲಿ ೧೯೭ ಅಧ್ಯಾಯಗಳಿವೆ. ಆದುದರಿಂದ ಈ ೧೧ ಅಧ್ಯಾಯಗಳೂ ಪರ್ವಸಂಗ್ರಹಾಧ್ಯಾಯವನ್ನು ಬರೆದಮೇಲೆ ಸೇರಿವೆ. ಈಗ ೭,೬೫೭ ಶ್ಲೋಕಗಳಿವೆ. ಅಂದರೆ, ಸುಮಾರು ೧,೦೦೦ ಶ್ಲೋಕಗಳು ಹೆಚ್ಚಿವೆ. ಈ ಅಧ್ಯಾಯಗಳೂ ಈ ಶ್ಲೋಕಗಳೂ ಅವುವು! ಉದ್ಯೋಗಪರ್ವದ ವೃತ್ತಾಂತವಾವುದನ್ನೂ ಪರ್ವಸಂಗ್ರಹಾಧ್ಯಾಯದಲ್ಲಿ ಎತ್ತಿಲ್ಲವೆಂಬುದನ್ನು ಮೊದಲು ನೋಡಬೇಕಾದುದು. ಇದರಮೇಲೆ

ರುಕ್ಮಿಯ ಆಗಮನವೇ ಆಗಲಿ ಪ್ರತ್ಯಾಖ್ಯಾನವೇ ಆಗಲಿ ಪರ್ವಸಂಗ್ರಹಾಧ್ಯಾಯದಲ್ಲಿ ಹಿಡಿದಿರುವುದಿಲ್ಲ. ಆದುದರಿಂದ ಈ ೧೫೭ ನೆಯ ಅಧ್ಯಾಯವು ಪ್ರಕ್ಷಿಪ್ತವಾದ ೧೧ ಅಧ್ಯಾಯಗಳ ಪೈಕಿ ಒಂದಾದುದು ಎಂಬುದೇ ವಿಚಾರ ಸಂಗತ. ಈ ರುಕ್ಮಿ ಪ್ರತ್ಯಾಖ್ಯಾನ ಪರ್ವಾಧ್ಯಾಯದೊಡನೆ ಮಹಾಭಾರತಕ್ಕೆ ಆವ ಸಂಬಂಧವೂ ಇರದು. ರುಕ್ಮಿಯು ಸಸೈನ್ಯನಾಗಿ ಬಂದು ಅರ್ಜುನನಿಂದ ಒಲ್ಲೆ ಎನಿಸಿಕೊಂಡು ದುರ್ಯೋಧನನಲ್ಲಿ ಹೋಗಿ ಅಲ್ಲಿಯೂ ತಿರಸ್ಕೃತನಾಗಿ ಹಿಂದಕ್ಕೆ ಹೋದನೆಂಬಷ್ಟು ವಿನಾ ಮಹಾಭಾರತಕ್ಕೆ ಇವನ ಸಂಬಂಧವು ಮತ್ತೇನೂ ಇಲ್ಲ. ಈ ಎರಡು ಲಕ್ಷಣಗಳನ್ನೂ ಒಟ್ಟುಗೂಡಿಸಿ ನೋಡುವುದರಲ್ಲಿ ಖಂಡಿತವಾಗಿ ೧೫೭ ನೆಯ ಅಧ್ಯಾಯವು ಪ್ರಕ್ಷಿಪ್ತವೆಂತ ಹೇಳಬೇಕಾಗುವುದು; ಅಂದರೆ, ರುಕ್ಮಿಣೀಹರಣ ವೃತ್ತಾಂತವು ಮಹಾಭಾರತಕ್ಕೆ ಸಂಬಂಧಿಸಿದ್ದಲ್ಲವೇ ಅಲ್ಲ. ವಿಷ್ಣುಪುರಾಣದಲ್ಲಿ ಮಹಾಭಾರತ ಯುದ್ಧಕ್ಕೆ ಮುಂಚೆಯೇ ರುಕ್ಮಿಯನ್ನು ಬಲರಾಮನು ಪಗಡೆಯಾಟದಿಂದ ಉಂಟಾದ ಆದೊಂದು ಜಗಳದಲ್ಲಿ ಕೊಂದುಹಾಕಿದ್ದನೆಂತ ಹೇಳಿರುವುದೇ ಇದಕ್ಕೆ ಬೇರೆಯೊಂದು ಪ್ರಮಾಣವಾಗಿರುವುದು. ರುಕ್ಮಿಣಿಯನ್ನು ಶಿಶುಪಾಲನು ಕಾಮಿಸಿದ್ದನು ಎಂಬುದು ಸತ್ಯ. ಆದರೆ ಅವಳನ್ನು ಅವನು ಮದುವೆಯಾಗಲಿಲ್ಲವೆಂಬುದೂ ನಿಜ. ಕೃಷ್ಣನು ಇವಳನ್ನು ಮದುವೆಯಾದನು ಎಂಬುದೂ ನಿಶ್ಚಯ. ಮದುವೆಯಾದಮೇಲೆ ಯುದ್ಧವೊಂದು ಆಗಿತ್ತು. ಆದರೆ "ಹರಣ"ದ (ಕಳವು) ಮಾತುಮಟ್ಟಿಗೆ ಅಸಲು ಮಹಾಭಾರತದಲ್ಲೆಲ್ಲಿಯೂ ಇಲ್ಲ. ಹರಿವಂಶದಲ್ಲಿಯೂ ಪುರಾಣಗಳಲ್ಲಿಯೂ ಉಂಟು.

ಶಿಶುಪಾಲನು ಭೀಷ್ಮನನ್ನು ತಿರಸ್ಕಾರಮಾಡಿದಾಗ ಕಾಶೀರಾಜನ ಮಕ್ಕಳನ್ನು ಎತ್ತಿಕೊಂಡುಹೋದುದಕ್ಕಾಗಿ ಅವನನ್ನು ಬೈದು ಇರುವನಾದರೂ, ಕೃಷ್ಣನನ್ನು ತಿರಸ್ಕಾರಮಾಡುವಾಗ ರುಕ್ಮಿಣಿಯನ್ನು ಎತ್ತಿಕೊಂಡು ಹೋಗಿದ್ದನೆಂತ ತೋರುವುದಿಲ್ಲ. ಮೊದಲು ಎತ್ತಿದ ಮಾತು ಕಥೆಗಳಿಂದ ತೋರುವದೇನೆಂದರೆ, ಶಿಶುಪಾಲನು ರುಕ್ಮಿಣಿಯನ್ನು ಪ್ರಾರ್ಥಿಸಿದ್ದನು. ಆದರೆ ಭೀಷ್ಮಕನು ಅವಳನ್ನು ಕೃಷ್ಣನಿಗೆ ಕೊಟ್ಟು ಮದುವೆ ಮಾಡಿದನು. ಇದಾದಮೇಲೆ ಇವನ ಮಗ ರುಕ್ಮಿಯು ಶಿಶುಪಾಲನ

ಪಕ್ಷವನ್ನು ವಹಿಸಿ ಜಗಳವನ್ನು ಮಾಡಿದನು. ಈ ರುಕ್ಮಿಯು ಕಲಹ ಪ್ರಿಯನು. ಅನಿರುದ್ಧನ ಮದುವೆಯಲ್ಲಿ ದ್ಯೂತದ ನೆಪಮಾಡಿ ಬಲರಾಮನ ಕಾಲುಕೆರದು ಜಗಳವಾಡಿ ಹತನಾದನು.

ಪಂಚಮ ಪರಿಚ್ಛೇದ

ನರಕ ವಧೆ, ಮೊದಲಾದವು

ನರಕಾಸುರನೆಂಬ ಭೂಮಿಯ ಮಗನೊಬ್ಬನಿದ್ದನಂತೆ. ಇವನ ರಾಜಧಾನಿ ಪ್ರಾಗ್ಜ್ಯೋತಿಷಪುರಿ. ಇವನು ಬಹಳ ಕೆಡುಕನಾಗಿದ್ದನು. ಇಂದ್ರನೇ ಸ್ವಯಂ ದ್ವಾರಕೆಗೆ ಬಂದು, ಅವನ ಮೇಲೆ ಕೃಷ್ಣನಲ್ಲಿ ಫಿರ್ಯಾದು ಹೇಳಿದನು. ಇತರ ಕೆಟ್ಟ ಕೆಲಸಗಳೊಂದಿಗೆ ನರಕನು ಇಂದ್ರ, ವಿಷ್ಣು ಮೊದಲಾದ ಆದಿತ್ಯರುಗಳ ತಾಯಿಯಾದ ದಿತಿಯ ಓಲೆಯನ್ನು ಕದ್ದು ತೆಗೆದುಕೊಂಡುಹೋಗಿದ್ದನು. ಕೃಷ್ಣನು ಇಂದ್ರನ ಮಾತಿಗೊಪ್ಪಿ ಪ್ರಾಗ್ಜ್ಯೋತಿಷಕ್ಕೆ ಹೋಗಿ ನರಕನನ್ನು ಕೊಂದು, ಅವನ ಹದಿನಾರು ಸಾವಿರ ಹೆಣ್ಣುಮಕ್ಕಳನ್ನು ತಾನೇ ಮದುವೆಯಾದನು. ನರಕನ ತಾಯಿಯಾದ ಪೃಥ್ವಿಯು ನರಕನಿಂದ ಕದಿಯಲ್ಪಟ್ಟಿದ್ದ ದಿತಿಯ ಓಲೆಯನ್ನು ಕೃಷ್ಣನಿಗೆ ತಂದೊಪ್ಪಿಸಿ, ಕೃಷ್ಣನು ಪೃಥ್ವಿಯನ್ನು ಉದ್ಧರಿಸಲಿಕ್ಕಾಗಿ ವರಾಹಾವತಾರಮಾಡಿ ಪೃಥ್ವಿಯನ್ನು ಎತ್ತಿದಾಗ ಉಂಟಾದ ಸಂಪರ್ಕದಿಂದ ತಾನು ಬಸುರಾಗಿ ನರಕನನ್ನು ಹೆತ್ತಿದ್ದಳು ಎಂತ ತಿಳಿಯಪಡಿಸಿದಳು.

ಇದಷ್ಟೂ ಅತಿಪ್ರಕೃತಿ ಮತ್ತೂ ಬಹಳ ಸುಳ್ಳು. ವಿಷ್ಣುವು ವರಾಹ ರೂಪವನ್ನು ಧರಿಸಲಿಲ್ಲ, ಪ್ರಜಾಪತಿಯು ಪೃಥ್ವಿಯನ್ನು ಎತ್ತಲೋಸುಗ ವರಾಹ ಅವತಾರವನ್ನು ಮಾಡಿದನು—ಹೀಗೆಂತಲೇ ವೇದದಲ್ಲಿ ಇರುವುದು. ಕೃಷ್ಣನ ಕಾಲದಲ್ಲಿ ಪ್ರಾಗ್ಜ್ಯೋತಿಷಕ್ಕೆ ರಾಜನು ನರಕಾಸುರನಲ್ಲ, ಭಗದತ್ತನೆಂಬವನು. ಇವನು ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನಿಂದ ಕೊಲ್ಲಲ್ಪಟ್ಟನು. ಅಂದರೆ, ಇಂದ್ರನು ದ್ವಾರಕೆಗೆ ಬಂದುದೂ, ಪೃಥ್ವಿಯು ಗರ್ಭವನ್ನು ಧರಿಸಿದುದೂ, ಒಬ್ಬನಿಗೆ ಹದಿನಾರು ಸಾವಿರ ಹೆಣ್ಣುಮಕ್ಕಳು,

ಕೃಷ್ಣನಿಗೆ ಹದಿನಾರುಸಾವಿರ ಮಹಷಿಯರು—ಇವೆಲ್ಲಾ ಕಟ್ಟುಕಥೆಯ ಭಾಗಗಳು ಮತ್ತು ಪೊಳ್ಳು ಹರಟೆ. ಇದನ್ನು ಪಾಠಕರಿಗೆ ತಿಳುಹಿಸಬೇಕೆ?

ಈ ನರಕಾಸುರನ ವಧೆಯ ದೆಸೆಯಿಂದ ವಿಷ್ಣುಪುರಾಣದ ರೀತಿ ಪಾರಿಜಾತ ಹರಣಕ್ಕೆ ಸಿಲುಕಿದ ಕೃಷ್ಣನು ದಿತಿಯ ಓಲೆಯನ್ನೂ ತೆಗೆದು ಕೊಂಡು ಸತ್ಯಭಾಮೆಯನ್ನೊಡಗೂಡಿ ಇಂದ್ರಾಲಯಕ್ಕೆ ಪಯಣವನ್ನು ಬೆಳೆಯಿಸಿದನು. ಅಲ್ಲಿ ಸತ್ಯಭಾಮೆಯು ಪಾರಿಜಾತ ವೃಕ್ಷವನ್ನು ಕಾಮಿಸಲು, ಈ ಗಿಡಕ್ಕಾಗಿ ಇಂದ್ರನೊಡನೆ ಕೃಷ್ಣನಿಗೆ ಕಾಳಗಗೂಡಿತು. ಇಂದ್ರನು ಸೋತುಹೋದನು. ಹರಿವಂಶದಲ್ಲಿ ಇದು ಬೇರೆ ರೀತಿಯಾಗಿ ಇದೆ. ವಿಷ್ಣು ಪುರಾಣವನ್ನು ಹರಿವಂಶಕ್ಕಿಂತ ಮುಂಚಿನದೆಂದು ನಾವು ಒಪ್ಪಿರುವಾಗ ಅದನ್ನೇ ಅನುಸರಿಸೋಣ. ಈ ಎರಡು ಗ್ರಂಥಗಳಲ್ಲಿ ಹೇಳಿರುವುದೂ ಅತ್ಯದ್ಭುತವೂ ಅತಿಪ್ರಕೃತವೂ ಆದುವು. ನಾವು ಇಂದ್ರ ಇಂದ್ರಾಲಯ ಮತ್ತು ಪಾರಿಜಾತಗಳ ಇರವನ್ನೇ ಒಪ್ಪದಿರುವಾಗ ಈ ಪಾರಿಜಾತ ಹರಣ ವೃತ್ತಾಂತವನ್ನೆಲ್ಲಾ ಬಿಡಲು ಬಾಧ್ಯರು.

ಇದಾದಮೇಲೆ ಬಾಣಾಸುರ ವಧೆಯ ವೃತ್ತಾಂತ. ಇದೂ ಅತಿ ಪ್ರಕೃತಿ ಅದ್ಭುತಗಳಿಂದ ತುಂಬಿ ತ್ಯಾಜ್ಯವಾಗತಕ್ಕುದಾಗಿದೆ. ಇದಾದ ಮೇಲೆ ಪೌಂಡ್ರರ ರಾಜ ವಾಸುದೇವನ ವಧೆ ಮತ್ತು ಕಾಶಿಯ ದಹನ. ಇದರಲ್ಲಿ ಕೊಂಚ ಐತಿಹಾಸಿಕವು ಇರುವಂತೆ ಇದೆ. ಪೌಂಡ್ರರ ರಾಜ್ಯವು ಐತಿಹಾಸಿಕವಾದುದು, ಪೌಂಡ್ರಜಾತಿಯವರೂ ಇತಿಹಾಸದಲ್ಲಿ ಪರಿಚಿತರು. ಅನೈತಿಹಾಸಿಕ ಕಾಲದಲ್ಲಿಯೂ ಇವರ ಕಥನವು ದೇಶೀಯರ ಮತ್ತು ವಿದೇಶೀಯರ ಗ್ರಂಥಗಳಲ್ಲಿ ಇರುವುದು. ರಾಮಾಯಣದಲ್ಲಿ ಇವರು ದಾಕ್ಷಿಣಾತ್ಯದಲ್ಲಿನವರಾದರೂ, ಮಹಾಭಾರತದಲ್ಲಿ ಈಗಿನ ಬಂಗಾಳಾಕ್ಕೆ ಪಶ್ಚಿಮ ದಿಕ್ಕಿನಲ್ಲಿದ್ದವರು. ಕುರುಕ್ಷೇತ್ರದ ಯುದ್ಧಕ್ಕೆ ಇವರೂ ಬಂದಿದ್ದರು, ಮತ್ತು ಇವರು ಅನಾರ್ಯಜಾತಿಯವರೆಂದು ಎಣಿಸಲ್ಪಟ್ಟಿ ದ್ದಾರೆ. ದಶಕುಮಾರ ಚರಿತ್ರೆಯಲ್ಲಿಯೂ ಇವರ ವಿಷಯವು ಇದೆ. ಮತ್ತು ಚೀನಾದೇಶದ ಪರಿವ್ರಾಜಕನೊಬ್ಬನು ಇವರು ಬಂಗಾಳದಲ್ಲಿ ಸ್ಥಾಪಿತ ರಾಗಿದ್ದದ್ದನ್ನು ನೋಡಿಹೋಗಿದ್ದನು. ಇವನು ಅವರ ರಾಜಧಾನಿಯಾದ

ಪೌಂಡ್ರವರ್ಧನಕ್ಕೆ ಹೋಗಿದ್ದನು. ಕೃಷ್ಣನ ಕಾಲದಲ್ಲಿ ಪೌಂಡ್ರವರ್ಧನಕ್ಕೆ ರಾಜನಾಗಿದ್ದವನ ಹೆಸರು ವಾಸುದೇವ. ವಾಸುದೇವ ಶಬ್ದಕ್ಕೆ ಹಲವು ಅರ್ಥಗಳು ಆಗುವುವು. ವಸುದೇವನ ಮಗನು ವಾಸುದೇವ. ಸರ್ವ ನಿವಾಸನು ಅಂದರೆ ಸಮಸ್ತ ಭೂತಗಳಿಗೂ ವಾಸಸ್ಥಾನವಾದವನು ವಾಸು ದೇವನು. ಆದುದರಿಂದ ಪ್ರಕೃತದಲ್ಲಿ ಈಶ್ವರಾವತಾರನಾದವನೊಬ್ಬನೇ ಈ ಹೆಸರಿಗೆ ಅಧಿಕಾರಿ.* ಈ ಪೌಂಡ್ರಕ ವಾಸುದೇವನು ತಾನೇ ವಾಸು ದೇವನೆಂತಲೂ, ದ್ವಾರಕಿಯ ವಾಸುದೇವನು ಜಾಲನೆಂದೂ, ತಾನು ನಿಜವಾದ ದೇವರೆಂದೂ ಪ್ರಚಾರಗೊಳಿಸಿ, ಕೃಷ್ಣನನ್ನು ಕುರಿತು ತನಗೇ ಸಲ್ಲಬೇಕಾದ ಶಂಖ ಚಕ್ರ ಗದೆ ಮುಂತಾದ ಚಿಹ್ನೆಗಳನ್ನೆಲ್ಲಾ ತನಗೆ ಒಪ್ಪಿಸಿಬಿಡಬೇಕೆಂತ ಹೇಳಿಕಳುಹಿಸಿದನು. ಕೃಷ್ಣನು ಹಾಗೆಯೇ ಆಗಲಿ ಎಂತ ಪೌಂಡ್ರಕನಲ್ಲಿ ಹೋಗಿ ಚಕ್ರಾದಿ ಅಸ್ತ್ರಗಳನ್ನು ಅವನಮೇಲೆ ಎಸೆದು ಅವನನ್ನು ಕೊಂದನು. ಪೌಂಡ್ರಕನು ಸತ್ತಮೇಲೆ ವಾರಣಾಸಿಯ ಅಧಿಪತಿಗಳ ಗುಂಪು ಪೌಂಡ್ರಕನ ಪಕ್ಷವನ್ನು ವಹಿಸಿ ಕೃಷ್ಣನೊಡನೆ ಹಗೆಯನ್ನು ಬಳೆಯಿಸಿ ಯುದ್ಧಮಾಡು ತ್ತಿದ್ದರು. ಕೃಷ್ಣನು ವಾರಣಾಸಿಯನ್ನು ಲಗ್ಗೆ ಹತ್ತಿ ಅರಿಗಳನ್ನು ಬಡಿದು ಊರನ್ನು ಸುಟ್ಟುಬಿಟ್ಟನು.

ಹೀಗೆ ಹಗೆಗಳನ್ನು ಬಡಿಯುವುದು ಅಧರ್ಮ, ಊರನ್ನು ಸುಡುವುದು ಧರ್ಮಾನುಮೋದಿತವಲ್ಲ, ಪರಮ ಧರ್ಮಾತ್ಮನಾದ ಕೃಷ್ಣನು ಏಕೆ ಹೀಗೆ ಮಾಡಿದನೆಂಬುದಕ್ಕೆ ನಂಬಬಹುದಾದ ಕಾರಣವೊಂದೂ ದೊರಕದು. ಕಾಶೀ ರಾಜನು ಕೃಷ್ಣನಿಂದ ಹತನಾದನೆಂತಲೂ, ಇವನ ಮಗನು ಮಹಾದೇವನನ್ನು ಕುರಿತು ತಪಸ್ಸುಮಾಡಿ ಕೃಷ್ಣನನ್ನು ಕೊಲ್ಲುವಂತಹ ಕೃತ್ಯವೊಂದು† ಉತ್ಪತ್ತಿ ಯಾಗಬೇಕೆಂತ ಬೇಡಿದನೆಂತಲೂ, ವರಪ್ರಕಾರ ಯಜ್ಞಕುಂಡದಿಂದ ಶರೀರ ದಿಂದ ಕೂಡಿದ ಅಮೋಘವಾದ ಶಕ್ತಿಯೊಂದು ಹೊರಹಾಯ್ದು ಭೀಷಣ ಆಕಾರವನ್ನು ತಾಳಿ ಕೃಷ್ಣನನ್ನು ಬೆನ್ನಟ್ಟಿತೆಂತಲೂ, ಕೃಷ್ಣನು ಇದರ ವಧೆ ಗಾಗಿ ತನ್ನ ಸುದರ್ಶನ ಚಕ್ರವನ್ನು ಕಳುಹಲು, ವೈಷ್ಣವ ಚಕ್ರ ಪ್ರಭಾವದ

---

* ವಸುಸ್ಸರ್ವನಿವಾಸಶ್ಚ ವಿಶ್ವಾನಿ ಯಸ್ಯ ಲೋಮಸು ।
ಸ ಚ ದೇವಃ ಪರಂಬ್ರಹ್ಮ ವಾಸುದೇವ ಇತಿ ಸ್ಮೃತಃ ॥

† 'ಕೃತ್ಯ' ಎಂದರೆ, ಅಭಿಚಾರ ಅಥವಾ ಮಾಟ.

ಮುಂದೆ ಮಾಹೇಶ್ವರೀ ಶಕ್ತಿಯ ತೇಜಸ್ಸು ಕುಂದಿ ಓಡಿ ವಾರಣಾಸಿ ಊರಿನೊಳಕ್ಕೆ ನುಗ್ಗಲು, ಅದನ್ನು ಹಿಂಬಾಲಿಸಿದ ಚಕ್ರದ ಉರಿಯಿಂದ ಊರು ಸುಟ್ಟು ಹೋದಂತೆಯೂ ವಿಷ್ಣು ಪುರಾಣದಲ್ಲಿ ಬರೆದಿದೆ. ಇದು ಅತಿಶಯವಾದ ಅನೈಸರ್ಗಿಕವಾದುದರಿಂದ ವಿಶ್ವಾಸಕ್ಕೆ ಯೋಗ್ಯವಲ್ಲ. ಹರಿವಂಶದಲ್ಲಿ ಪೌಂಡ್ರಕ ವಧೆಯ ವೃತ್ತಾಂತವಿದ್ದರೂ ವಾರಣಾಸಿಯ ದಹನ ವಿಷಯವಿರುವುದಿಲ್ಲ. ಇದರ ಪ್ರಸಂಗವು ಕೊಂಚಮಟ್ಟಿಗೆ ಮಹಾಭಾರತದಲ್ಲೇ ಇರುವುದಾದುದರಿಂದ ಅನೈಸರ್ಗಿಕವೆಂದು ಬಿಟ್ಟುಬಿಡಲಾಗುವುದಿಲ್ಲ. ಆದರೆ ಏಕೆ ಕೃಷ್ಣನು ವಾರಣಾಸಿಯನ್ನು ಸುಡಬೇಕಾಗಿ ಬಂತೊ ಅದಕ್ಕೆ ಸರಿಯಾದ ಕಾರಣವು ತಿಳಿಯದು.

ಮೇಲೆಹೇಳಿದ ಯುದ್ಧಗಳಲ್ಲದೆ ಉದ್ಯೋಗಪರ್ವದ ನಲವತ್ತೇಳನೆಯ ಅಧ್ಯಾಯದಲ್ಲಿ ಅರ್ಜುನನ ಬಾಯಲ್ಲಿ ಕೃಷ್ಣನಿಂದಾದ ಗಂಧರ್ವರಾಜನ ಜಯ, ಪಾಂಡ್ಯಜಯ, ಕಳಿಂಗಜಯ, ಶಾಲ್ವಜಯ, ಏಕಲವ್ಯನ ಸಂಹಾರ ಇವು ಹೇಳಲ್ಪಟ್ಟಿರುವುವು. ಇವುಗಳ ಪೈಕಿ ಶಾಲ್ವನ ಜಯವನ್ನು ಅರಣ್ಯ ಪರ್ವದಲ್ಲಿ ವಿವರಿಸಿದೆ. ಇದನ್ನು ಬಿಟ್ಟರೆ ಮಿಕ್ಕ ಕಡೆಯಲ್ಲಿ ಇವುಗಳ ವಿಸ್ತಾರವಾದ ವಿವರಣೆ ನನಗೆಲ್ಲಿಯೂ ಸಿಕ್ಕಲಿಲ್ಲ. ಹರಿವಂಶ ಮತ್ತು ಪುರಾಣಗಳನ್ನು ಸಂಗ್ರಹಮಾಡುವುದಕ್ಕೆ ಮುಂಚೆಯೇ ಈ ಸಕಲ ಯುದ್ಧಗಳ ವಾರ್ತೆಯೂ ಲುಪ್ತವಾಗಿ ಹೋಗಿದ್ದಿರಬೇಕೆಂದು ತೋರು ವುದು. ಹರಿವಂಶದಲ್ಲಿಯೂ, ಭಾಗವತದಲ್ಲಿಯೂ ಇನ್ನೂ ಹಲವು ವಿಷಯ ಗಳು ಇರುವುವು. ಅವು ಮಹಾಭಾರತದಲ್ಲಿಯೂ, ವಿಷ್ಣುಪುರಾಣದಲ್ಲಿಯೂ ಇಲ್ಲದುದರಿಂದ ಅವನ್ನು ನಾನು ಬಿಟ್ಟುಬಿಟ್ಟಿದೇನೆ.

ಷಷ್ಠ ಪರಿಚ್ಛೇದ

ದ್ವಾರಕಾವಾಸ—ಸ್ಯಮಂತಕ

ದ್ವಾರಕಿಯಲ್ಲಿ ಕೃಷ್ಣನು ರಾಜನಾಗಿರಲಿಲ್ಲ. ನಮಗೆ ತಿಳಿಯಬರುವ ಮಟ್ಟಿಗೆ ನೋಡುವುದರಲ್ಲಿ ಯೂರೋಪು ಇತಿಹಾಸದಲ್ಲಿ ಅಲಿಗಾರ್ಕಿ

(Oligarchy) ಎಂಬ ಶಾಸನದಂತಹದೊಂದು ತೆರನ ರಾಜ್ಯಭಾರವು ಯಾದವರಲ್ಲಿ ರೂಢಿಯಾಗಿತ್ತೆಂದು ತೋರುತ್ತದೆ. ಅಂದರೆ, ಇವರಲ್ಲಿ ಸಮಾಜದ ಯಜಮಾನರೆಲ್ಲರೂ ಪರಸ್ಪರವಾಗಿ ಸಮಾನ ಸ್ಪರ್ಧೆಯುಳ್ಳವರಾಗಿದ್ದರು. ವಯಸ್ಸಿನಲ್ಲಿ ಹಿರಿಯನಾದವನನ್ನು ರಾಜನೆನ್ನುತ್ತಿದ್ದರು. ಆದುದರಿಂದಲೇ ಉಗ್ರಸೇನನಿಗೆ ರಾಜನೆಂತ ಹೆಸರು. ಇಂತಹ ಮುಖಂಡನಿಗೆ ವಾಸ್ತವಿಕವಾಗಿ ಕರ್ತೃತ್ವವು ವಿಶೇಷವಿರದು. ಯುದ್ಧದಲ್ಲಿಯೂ, ಪರಾಕ್ರಮದಲ್ಲಿಯೂ ಅಧಿಕನಾದವನಿಗೇನೇ ನಾಯಕತನವು ಉಂಟಾಗುತ್ತಿತ್ತು. ಆದುದರಿಂದಲೇ ಬಲ, ವೀರ್ಯ, ಬುದ್ಧಿಗಳಲ್ಲಿ ಸರ್ವಶ್ರೇಷ್ಠನಾದ ಕೃಷ್ಣನೇ ನೇತೃಸ್ವರೂಪನಾಗಿದ್ದನು. ಇವನ ಅಣ್ಣ ಬಲರಾಮನು ಮತ್ತು ಕೃತವರ್ಮ ಮುಂತಾದ ಹಿರಿಯರಾದ ಯಾದವರೂ ಅವನ ವಶೀಭೂತರಾಗಿದ್ದರು. ಕೃಷ್ಣನು ಯಾವಾಗಲೂ ಅವರ ಮಂಗಳವನ್ನು ಕೋರುವವನಾಗಿ ಅವರ ರಕ್ಷಣೆಯನ್ನು ಸಾಧಿಸುತ್ತ ಬಲು ರಾಜ್ಯಗಳನ್ನು ಜಯಿಸಿದ್ದರೂ ತನ್ನ ಜ್ಞಾತಿಗಳಿಗೆ ಕೊಡದೆ, ತಾನೇತಾನಾಗಿ ಯಾವ ಐಶ್ವರ್ಯವನ್ನೂ ಭೋಗಿಸದೆ, ಎಲ್ಲರಲ್ಲಿಯೂ ಸಮಾನ ಪ್ರೀತಿಯುಳ್ಳವನಾಗಿ ಎಲ್ಲರ ಹಿತವನ್ನೇ ಸಾಧಿಸುತ್ತಾ ಜ್ಞಾತಿಗಳಲ್ಲಿ ಆದರ್ಶ ಪುರುಷ ಎಂತು ನಡೆದುಕೊಳ್ಳಬೇಕೋ ಹಾಗೆ ಇರುತ್ತಾ ಇದ್ದನು. ಆದರೆ ಜ್ಞಾತಿಗಳು ಯಾವಾಗಲು ಜ್ಞಾತಿಗಳೇ. ಅವನ ಬಲಪರಾಕ್ರಮಗಳಿಗೆ ಬೆದರಿ ಜ್ಞಾತಿಗಳು ಅವನ ಹತೋಟಿಯಲ್ಲಿ ಇದ್ದುದೇನೋ ಸರಿಯಾದರೂ, ಅವನಮೇಲೆ ಅವರಿಗೆ ದ್ವೇಷವಿರಲಿಲ್ಲವೆಂತ ಹೇಳುವುದಕ್ಕಾಗುವುದಿಲ್ಲ. ಈ ವಿಷಯವಾಗಿ ಕೃಷ್ಣನು ಸ್ವಯಂ ನಾರದರಲ್ಲಿ ಹೇಳಿಕೊಂಡುದನ್ನು ಭೀಷ್ಮನು ನಾರದರಿಂದ ಕೇಳಿ ಯುಧಿಷ್ಠರನಿಗೆ ತಿಳುಹಿಸಿದನು. ಇದು ಸತ್ಯವೋ ಮಿಥ್ಯವೋ ಲೋಕ ಶಿಕ್ಷಣೆಗಾಗಿ ನಾವು ಮಹಾಭಾರತದ ಶಾಂತಿಪರ್ವದಿಂದ ಈ ಕೆಳಗೆ ಇದನ್ನು ಎತ್ತಿದೇವೆ:—

“ಜ್ಞಾತಿಗಳಿಗೆ ಐಶ್ವರ್ಯದ ಅರ್ಧಭಾಗವನ್ನು ಇತ್ತು, ಅವರಿರದ ಕಹಿಯಾದ ಮಾತುಗಳನ್ನು ಕೇಳುತ್ತಾ, ಅವರ ಗುಲಾಮನಂತೆ ಇದ್ದುಕೊಂಡಿದೇನೆ. ಬೆಂಕಿಯನ್ನು ಸಂಪಾದಿಸಲು ಇಚ್ಛೆಯುಳ್ಳವನು ಅರಣಿಕಾಷ್ಠವನ್ನು ಕಡೆಯುವಂತೆ ಜ್ಞಾತಿಗಳ ಕೆಟ್ಟ ಮಾತುಗಳು ನನ್ನ ಎದೆಯನ್ನು ಸುಡುತ್ತಿವೆ. ಬಲದೇವನು ಬಲದಲ್ಲಿಯೂ, ಗದನು ಸೌಕುಮಾರ್ಯದಲ್ಲಿಯೂ, ನನ್ನ ಮಗ ಪ್ರದ್ಯುಮ್ನನು ಸೌಂದರ್ಯದಲ್ಲಿಯೂ ಜನಗಳಲ್ಲಿ ಈಡಿಲ್ಲದವರೆಂದು ಎಣಿಸಲ್ಪಟ್ಟಿರುವರು; ಅಂಧಕವೃಷ್ಣಿವಂಶೀಯರು

ಮಹಾಬಲಶಾಲಿಗಳಾಗಿಯೂ, ಉತ್ಸಾಹದಿಂದ ತುಂಬಿದವರಾಗಿಯೂ, ಕೈಕೊಂಡ ದ್ದನ್ನು ಮುತುವರ್ಜಿಯಿಂದಲೂ, ಒಂದೇ ಮನಸ್ಸಿನಿಂದಲೂ ನಡೆಯಿಸುವರಾಗಿಯೂ ಇರುವವರು. ಇಂಥವರುಗಳ ಸಹಾಯವಿಲ್ಲದವರು ಅವಶ್ಯವಾಗಿ ನಾಶವನ್ನು ಹೊಂದುವರು. ಇವರ ಸಹಾಯವನ್ನು ಪಡೆದ ಆರಾದರೂ ಅನಾಯಾಸವಾಗಿಯೇ ಅಸಾಮಾನ್ಯವಾದ ಐಶ್ವರ್ಯವನ್ನು ಹೊಂದಲಾಪರು. ಇಂಥವರೆಲ್ಲರೂ ನನ್ನ ಸಹಾಯ ಕ್ಕಿದ್ದರೂ ನಾನು ಅಸಹಾಯನಾಗಿ ಕಾಲಹರಣ ಮಾಡುತ್ತಿದ್ದೇನೆ. ಆಹುಕನೂ ಅಕ್ರೂರನೂ ನನ್ನ ಪರಮ ಮಿತ್ರರು. ಇವರಲ್ಲಿ ಒಬ್ಬನ ಸ್ನೇಹವು ಇನ್ನೊಬ್ಬನ ಕ್ರೋಧವನ್ನು ಬಳೆಯಿಸುವುದು. ನಾನು ಆದುದರಿಂದಲೇ ಆರಲ್ಲಿಯೂ ಸ್ನೇಹವನ್ನು ತೋರಿಸದೆ ಇರುತ್ತೇನೆ. ಇವರಲ್ಲಿ ನನಗಿರುವ ಪ್ರೀತಿಯ ದೆಸೆಯಿಂದ ಇವರನ್ನು ಪರಿತ್ಯಾಗಮಾಡುವುದೂ ಬಹಳ ಕಠಿನವಾಗಿರವುದು. ಆದುದರಿಂದಲೇ ಆಹುಕನೂ ಅಕ್ರೂರನೂ ಯಾರ ಪಕ್ಷವೋ ಅವರ ದುಃಖಪರಂಪರೆಗೆ ಪಾರವಿಲ್ಲ ಮತ್ತು ಅವರ ಲ್ಲೊಬ್ಬನು ಆರ ಪಕ್ಷದಲ್ಲಿಲ್ಲವೋ ಅವನಿಗಿಂತ ದುಃಖಿ ಇನ್ನಾರೂ ಇಲ್ಲವೆಂತ ಗೊತ್ತು ಮಾಡಿಕೊಂಡಿರುವೆನು. ಆದುದಾಗಲಿ, ನಾನು ಸದ್ಯದಲ್ಲಿ ಜೂಜುಗಾರ ಅಣ್ಣತಮ್ಮಂದಿ ರಿಬ್ಬರ ನಡುವೆ ಸಿಕ್ಕಿಕೊಂಡ ತಾಯಿಯಂತೆ ಇಬ್ಬರಿಗೂ ಜಯವನ್ನು ಕೋರುತ ಲಿದ್ದೇನೆ. ಎಲೈ ನಾರದರೆ, ಈ ಇಬ್ಬರು ಮಿತ್ರರನ್ನೂ ಒಂದುಗೂಡಿಸಲಿಕ್ಕಾಗಿ ನಾನು ಹೀಗೆ ವ್ಯಥೆಪಡುತ್ತಿದ್ದೇನೆ."

ಈ ಮಾತಿಗೆ ಉದಾಹರಣೆಗಾಗಿ, ಸ್ಯಮಂತಕೋಪಾಖ್ಯಾನವನ್ನು ಹೇಳಲು ಇಚ್ಛಿಸುತ್ತೇನೆ. ಸ್ಯಮಂತಕೋಪಾಖ್ಯಾನವು ಅತಿಪ್ರಕೃತಿಗಳಿಂದ ತುಂಬಿದೆ. ಇದರಲ್ಲಿ ಅತಿಪ್ರಕೃತಿಯನ್ನು ಬಿಟ್ಟಮೇಲೂ ಉಳಿದುದು ಎಷ್ಟರ ಮಟ್ಟಿಗೆ ನಿಜವೋ ಹೇಳಲಾಗದು. ಆದುದಾಗಲಿ ಸ್ಥೂಲ ವೃತ್ತಾಂತವನ್ನು ಪಾಠಕರಿಗೆ ತಿಳಿಸುತಲಿದ್ದೇನೆ:—

ಸತ್ರಾಜಿತನೆಂಬೊಬ್ಬ ಯಾದವನು ದ್ವಾರಕಿಯಲ್ಲ ವಾಸವಾಗಿದ್ದನು. ಅವನಿಗೆ ಅತಿಪ್ರಕಾಶಮಾನವಾದ ಸರ್ವಜನ ಲೋಭನೀಯವಾದೊಂದು ಮಣಿಯು ದೊರಕಿತು. ಈ ಮಣಿಯೇ ಸ್ಯಮಂತಕ. ಕೃಷ್ಣನು ಈ ಮಣಿ ಯನ್ನು ನೋಡಿ ಇದು ಯಾದವರ ಒಡೆಯನಾದ ಉಗ್ರಸೇನನಿಗೇನೇ ತಕ್ಕುದೆಂದು ವಿವೇಚಿಸಿದ್ದರೂ ಜ್ಞಾತಿವಿರೋಧಕ್ಕೆ ಭಯಪಟ್ಟು ಆ ಮಣಿ ಯನ್ನು ಪ್ರಾರ್ಥಿಸಲಿಲ್ಲ. ಆದರೂ ಈ ಮಣಿಯಮೇಲೆ ಕೃಷ್ಣನ ಕಣ್ಣು ಇದೆಯಂತ ಸತ್ರಾಜಿತನು ಹೆದರಿ ಕೃಷ್ಣನು ಬೇಡಿಯಾನೆಂಬ ಭಯದಿಂದ ಆ ಮಣಿಯನ್ನು ತಾನು ಧರಿಸದೆ ತನ್ನ ತಮ್ಮನಾದ ಪ್ರಸೇನನಿಗೆ ಇತ್ತನು. ಪ್ರಸೇನನು ಈ ಮಣಿಯನ್ನು ತೊಟ್ಟು ಬೇಟೆಗಾಗಿ ಒಂದು ದಿನ ಹೋಗಿರಲು

ಸಿಂಹವೊಂದು ಅವನನ್ನು ಕೊಂದು ಆ ಮಣಿಯನ್ನು ಕಚ್ಚಿಕೊಂಡು ಹೋಗುತ್ತಿರುವಾಗ ಜಾಂಬವಂತನು ಅದನ್ನು ಕೊಂದು ಮಣಿಯನ್ನು ತಾನು ಪಡೆದುಕೊಂಡನು. ಜಾಂಬವಂತನು ಒಂದು ಕರಡಿ. ಇವನು ತ್ರೇತಾ ಯುಗದಲ್ಲಿ ರಾಮನ ವಾನರ ಸೇನೆಯಲ್ಲಿದ್ದುಕೊಂಡು ರಾಮನ ಪಕ್ಷವಾಗಿ ರಾವಣನಮೇಲೆ ಹೋಗಿದ್ದನೆಂದು ಹೇಳಿದೆ.

ಇತ್ತಕಡೆ ಪ್ರಸೇನನು ಕೊಲ್ಲಲ್ಪಟ್ಟು ಸ್ಯಮಂತಕ ಮಣಿಯೂ ಕಾಣದೇ ಇರುವುದನ್ನು ಅರಿತು, ದ್ವಾರಕಿಯ ಜನರು ಕೃಷ್ಣನಿಗೆ ಈ ಮಣಿಯಮೇಲೆ ಆಸೆ ಇದ್ದುದರಿಂದ ಕೃಷ್ಣನೇ ಈ ಕೆಲಸವನ್ನು ನಡೆಯಿಸಿ ಮಣಿಯನ್ನು ಹೊತ್ತುಹಾಕಿರಬೇಕೆಂದು ಸಂದೇಹಪಟ್ಟರು. ಇಂತಹ ದೂರನ್ನು ಕೃಷ್ಣನು ಸಹಿಸಲಾರದೆ ಮಣಿಯನ್ನು ಹುಡುಕುವುದಕ್ಕೆ ತಾನಾಗಿಯೇ ಹೊರಟನು. ಪ್ರಸೇನನು ಸತ್ತುಬಿದ್ದಿದ್ದಲ್ಲಿ ಸಿಂಹದ ಹೆಜ್ಜೆಯ ಗುರುತುಗಳನ್ನು ಕಂಡು ಅವನ್ನು ಎಲ್ಲರಿಗೂ ತೋರಿ ಆ ಗುರುತುಗಳನ್ನು ಹಿಡಿದು ಮುಂದೆ ಹಾಯಲು ಕೆಲದೂರದ ಮೇಲೆ ಕರಡಿಯ ಹೆಜ್ಜೆಯ ಗುರುತುಗಳು ಕಣ್ದೋರಿದವು. ಈ ಗುರುತುಗಳನ್ನು ಹಿಡಿದು ಗುಹೆಯೊಳಕ್ಕೆ ಹೋಗಿ ಅಲ್ಲಿ ಜಾಂಬವಂತನ ಮಗುವನ್ನು ಆಡಿಸುತ್ತಿದ್ದ ದಾದಿಯ ಕೈಯಲ್ಲಿ ಆ ಮಣಿಯನ್ನು ಕಂಡನು. ಆಮೇಲೆ ಜಾಂಬವಂತನೊಡನೆ ಕಾದಿ ಅವನನ್ನು ಸೋಲಿಸಲು ಅವನು ಕೃಷ್ಣನಿಗೆ ಸ್ಯಮಂತಕಮಣಿಯನ್ನು ಕೊಟ್ಟನು ಮತ್ತು ತನ್ನ ಮಗಳು ಜಾಂಬವತಿಯನ್ನೂ ಅವನಿಗೆ ಮದುವೆಮಾಡಿದನು. ಕೃಷ್ಣನು ಮಣಿಯನ್ನು ತೆಗೆದುಕೊಂಡು ದ್ವಾರಕಿಗೆ ಹಿಂದಿರುಗಿ ಸತ್ರಾಜಿತನಿಗೆ ಅದನ್ನು ಒಪ್ಪಿಸಿದನು. ಹೆರರ ಸ್ವತ್ತನ್ನು ಕೃಷ್ಣನು ಹಾರೈಸನು. ಸತ್ರಾಜಿತನಾದರೋ ಕೃಷ್ಣನ ಮೇಲೆ ಎಂದೂ ಇಲ್ಲದ ಕೆಟ್ಟ ದೂರನ್ನು ಹೊರಸಿದೆನೆಂದು ಬೆದರಿ ಕೃಷ್ಣನನ್ನು ಸಮದಾಯಿಸಬೇಕೆಂದು ತನ್ನ ಮಗಳಾದ ಸತ್ಯಭಾಮೆಯನ್ನು ಅವನಿಗೆ ಕೊಟ್ಟು ಮದುವೆಮಾಡಿದನು. ಸತ್ಯಭಾಮೆಯು ಎಲ್ಲರಿಗೂ ಇನಿದಾದ ರೂಪವತಿಯಾಗಿದ್ದುದರಿಂದ ಇವಳನ್ನು ಮದುವೆಯಾಗಲು ಮೂವರು ಮುಖಂಡರಾದ ಯಾದವರು ಅಂದರೆ ಶತಧನ್ವ, ಮಹಾವೀರ ಕೃತವರ್ಮ, ಕೃಷ್ಣನ ಪರಮಭಕ್ತನೂ ಸುಹೃದಯನೂ ಆದ ಅಕ್ರೂರ ಇವರು ಬೇಡಿದ್ದರು. ಕೃಷ್ಣನಿಗೆ ಇವಳನ್ನು ಕೊಟ್ಟದ್ದರಿಂದ ಇವರು ತಮಗೆ ಅಪಮಾನವಾಯಿತೆಂದು

ಬಹು ಕೋಪಗೊಂಡು ಸತ್ರಾಜಿತನನ್ನು ಕೊಂದುಹಾಕಲಿಕ್ಕೆ ತಂತ್ರವನ್ನು ಮಾಡಿದರು. ಅಕ್ರೂರನೂ ಕೃತವರ್ಮನೂ ಶತಧನ್ವನನ್ನು ಕುರಿತು ನೀನು ಸತ್ರಾಜಿತನನ್ನು ಕೊಂದು ಮಣಿಯನ್ನು ಎತ್ತಿಹಾಕು, ಕೃಷ್ಣನು ನಿನ್ನನ್ನು ಎದುರಿಸಿ ನಿಲ್ಲುವ ಪಕ್ಷದಲ್ಲಿ ನಾವಿಬ್ಬರೂ ಬೆಂಬಲವಾಗುವೆವೆಂದು ಉಬ್ಬಿಸಿದರು. ಶತಧನ್ವನು ಇದಕ್ಕೆ ಒಪ್ಪಿ, ಕೃಷ್ಣನು ವಾರಣಾವತಕ್ಕೆ ಹೋಗಿರುವ ವೇಳೆಯಲ್ಲಿ ಹಾಸಿಗೆಯಲ್ಲಿ ನಿದ್ರಿಸುತ್ತಿರುವ ಸತ್ರಾಜಿತನನ್ನು ಕೊಂದು ಮಣಿಯನ್ನು ಕದ್ದೊಯ್ದನು.

ಸತ್ಯಭಾಮೆಯು ತಂದೆಯ ಸಾವಿಗಾಗಿ ಬಹಳ ಮನನೊಂದು ಕೃಷ್ಣನಲ್ಲಿ ಫಿರ್ಯಾದನ್ನು ಹೇಳಿಕೊಂಡಳು. ಆಗ ಕೃಷ್ಣನು ದ್ವಾರಕಿಗೆ ಹಿಂದಿರುಗಿ ಬಂದು ಬಲರಾಮನ ಜೊತೆಯಲ್ಲಿ ಶತಧನ್ವನನ್ನು ಕೊಲ್ಲಲು ಯತ್ನಮಾಡುತ್ತಿರಲು, ಅವನು ಕೃತವರ್ಮ ಅಕ್ರೂರರನ್ನು ಸಹಾಯ ಮಾಡಲು ಬೇಡಿದನು. ಅವರು ಕೃಷ್ಣಬಲರಾಮರ ಶತ್ರುತ್ವವನ್ನು ಒಲ್ಲದೆ ಹೋದರು. ಶತಧನ್ವನು ಆಗ ಅಕ್ರೂರನಿಗೆ ಮಣಿಯನ್ನು ಕೊಟ್ಟು ತೇಜಿಯೊಂದನ್ನು ಹತ್ತಿ ಓಡಿದನು. ಕೃಷ್ಣಬಲರಾಮರು ರಥದಲ್ಲಿ ಅವನನ್ನು ಅಟಕ್ಕೊಂಡು ಹೋದುದರಿಂದ ಅವನನ್ನು ಹಿಡಿಯಲು ಆಗಲಿಲ್ಲ. ಶತಧನ್ವನ ಕುದುರೆಯಾದರೋ ಬಳಲಿ ಬೇಸತ್ತು ದಾರಿಯಲ್ಲಿ ಬಿದ್ದುಕೊಂಡು ಪ್ರಾಣಬಿಟ್ಟಿತು. ಶತಧನ್ವನು ಕಾಲು ನಡಿಗೆಯಲ್ಲಿಯೇ ಓಡಬೇಕಾಯಿತು. ನ್ಯಾಯಯುದ್ಧ ಪರಾಯಣನಾದ ಕೃಷ್ಣನು ಆಗ ಬಲರಾಮನನ್ನು ರಥದಲ್ಲಿ ಉಳಿಸಿ, ತಾನು ಕಾಲುನಡಿಗೆಯಲ್ಲಿ ಶತಧನ್ವನ ಬೆನ್ನಟ್ಟಿ ಎರಡು ಕ್ರೋಶ ದೂರಹೋಗಿ ಅವನ ತಲೆಯನ್ನು ತರಿದನು. ಮಣಿಯಾದರೋ ಅವನಲ್ಲಿ ಇರಲಿಲ್ಲ. ಹಿಂದಿರುಗಿಬಂದು ಬಲರಾಮನಿಗೆ ಈ ವಿಷಯವನ್ನು ತಿಳುಹಲು ಬಲರಾಮನು ಅವನ ಮಾತನ್ನು ನಂಬಲಿಲ್ಲ, ಮತ್ತು ತನ್ನನ್ನು ಮಣಿಯ ಭಾಗದಿಂದ ವಂಚಿಸಬೇಕೆಂತಲೇ ಕೃಷ್ಣನು ಹೀಗೆ ಹೇಳುತ್ತಾನೆಂದು ತಿಳಿದು, ಕೃಷ್ಣನನ್ನು ಕುರಿತು "ಧಿಕ್, ನೀನು ಎಂತ ಲೋಭಿ! ಇಗೋ ಇತ್ತ ದಾರಿ, ನೀನು ದ್ವಾರಕಿಗೆ ಹೋಗಬಹುದು, ನಾನು ಇನ್ನು ದ್ವಾರಕಿಗೆ ಬಾರೆನು" ಎಂತ ಹೇಳಿ ಕೃಷ್ಣನನ್ನು ಪರಿತ್ಯಾಗಮಾಡಿ, ವಿದೇಹನಗರಿಗೆ (ಜನಕಪುರಕ್ಕೆ) ಹೋಗಿ ಮೂರು ವರುಷಗಳವರೆಗೂ ಅಲ್ಲಿಯೇ ವಾಸಮಾಡಿದನು. ಇತ್ತ ಕಡೆ ತಾನೂ ದ್ವಾರಕೆಯನ್ನು

ಬಿಟ್ಟು ಅಕ್ರೂರನ್ನೂ ಪಲಾಯನಮಾಡಿದನು, ಇದನ್ನು ತಿಳಿದು ಕೆಲವು ಯಾದವರು ಹೋಗಿ ಅಕ್ರೂರನಿಗೆ ಅಭಯವನ್ನು ಕೊಟ್ಟು ಹಿಂದಕ್ಕೆ ಕರೆತಂದ ಮೇಲೆ ಒಂದು ದಿನ ಕೃಷ್ಣನು ಯಾದವರನ್ನೆಲ್ಲಾ ಓಲಗಕ್ಕೆ ಬರಮಾಡಿಕೊಂಡು ಅಕ್ರೂರನನ್ನು ಕುರಿತು "ಎಲೈ ಅಕ್ರೂರನೆ, ಸ್ಯಮಂತಕಮಣಿ ನಿನ್ನಲ್ಲಿರುವುದನ್ನು ನಾನು ಬಲ್ಲೆನು, ಆ ಮಣಿ ನಿನ್ನಲ್ಲಿಯೇ ಇರಲಿ; ಆದರೆ ಒಂದುಸಲ ಅದನ್ನು ಎಲ್ಲರಿಗೂ ತೋರಿಸು" ಎಂತ ಹೇಳಿದನು. ಅಕ್ರೂರನು ಈಗ ಮಣಿಯು ತನ್ನಲ್ಲಿ ಇಲ್ಲವೆಂದರೆ ಮೈಯೆಲ್ಲಾ ಹುಡುಕುವರೆಂತ ಬೆದರಿ ಒಪ್ಪಿಕೊಂಡು ಮಣಿಯನ್ನು ಬಹಿರಂಗಪಡಿಸಿದನು, ಆಗ ಬಲರಾಮ ಸತ್ಯಭಾಮೆ ಇವರಿಬ್ಬರೂ ಆ ಮಣಿಯನ್ನು ಕಸುಕೊಳ್ಳಲು ತ್ವರೆಪಡುವುದನ್ನು ಕಂಡು ಕೃಷ್ಣನು ತನ್ನ ಪ್ರತಿಜ್ಞೆಯನ್ನು ಉಳಿಸಲೋಸುಗ ಸತ್ಯಭಾಮಾ ಬಲರಾಮರಾರಿಗೂ ಸಿಕ್ಕದಂತೆ ಎಚ್ಚರದಿಂದಿದ್ದು ತಾನೂ ತೆಗೆದುಕೊಳ್ಳದೆ ಅಕ್ರೂರನಿಗೇನೆ ಹಿಂದಕ್ಕೆ ಒಪ್ಪಿಸಿಬಿಟ್ಟನು.*

ಈ ಸ್ಯಮಂತಕಮಣಿಯ ವೃತ್ತಾಂತ ಕೃಷ್ಣನ ನ್ಯಾಯಪರತೆಯನ್ನೂ, ಸ್ವಾರ್ಥಶೂನ್ಯತೆಯನ್ನೂ, ಸತ್ಯಪ್ರತಿಜ್ಞತೆಯನ್ನೂ, ಕಾರ್ಯದಕ್ಷತೆಯನ್ನೂ ಅತಿಸ್ಫುಟವಾಗಿ ಹೊರಬೀಳಿಸುತ್ತದೆಯಾದರೂ ಈ ಉಪನ್ಯಾಸವು ಸತ್ಯದ ಆಧಾರವುಳ್ಳದೆಂದು ತೋರುವುದಿಲ್ಲ.

ಸಪ್ತಮ ಪರಿಚ್ಛೇದ

ಕೃಷ್ಣನ ಬಹು ವಿವಾಹ

ಈ ಸ್ಯಮಂತಕಮಣಿಯು ವಿಷಯವಾಗಿ ಕೃಷ್ಣನ ಬಹು ವಿವಾಹತ್ವವು ತಾನಾಗಿಯೇ ಬಂದೊದಗಿದೆ. ಇವನು ಮೊದಲೇ ರುಕ್ಮಿಣಿಯನ್ನು ಮದುವೆಯಾಗಿದ್ದನು. ಈಗ ಸ್ಯಮಂತಕಮಣಿಯೊಂದರ ಪ್ರಭಾವದಿಂದ ಈರ್ವರು

* ಹೀಗೆಂದು ವಿಷ್ಣುಪುರಾಣದಲ್ಲಿ ಇದೆ. ಹರಿವಂಶದಲ್ಲಿ ಮಣಿಯನ್ನು ಕೃಷ್ಣನೇ ತೆಗೆದುಕೊಂಡನೆಂದು ಹೇಳಿದೆ.

ಹೆಂಡಿರು (ಜಾಂಬವತಿ ಸತ್ಯಭಾಮೆಯರು) ದೊರೆತರು. ಹೀಗೆಂತಲೇ ವಿಷ್ಣುಪುರಾಣವು ಹೇಳುತ್ತದೆ, ಹರಿವಂಶವಾದರೋ ಇನ್ನೊಂದು ಮೆಟ್ಟಲು ಮೇಲಕ್ಕೆ ಹತ್ತಿರುವುದು—ಇಬ್ಬರಲ್ಲ ನಾಲ್ವರು ಎಂತ ಹೇಳುತಲಿದೆ. ಸತ್ರಾಜಿತನಿಗೆ ಮೂವ್ವರು ಹೆಣ್ಣುಮಕ್ಕಳು—ಸತ್ಯಭಾಮೆ, ಪ್ರಸ್ವಾಪಿನೀ, ವ್ರತಿನೀ ಎಂದು. ಇವರು ಮೂವರನ್ನೂ ಅವನು ಕೃಷ್ಣನಿಗೆ ಅರ್ಪಿಸಿದನು. ಎರಡಾಗಲಿ ನಾಲ್ಕಾಗಲಿ ಇವು ಬರೀ ಸಂಖ್ಯೆಗಳು ಮಾತ್ರ. ಅವುಗಳಿಂದ ಸಾಧಕ ಬಾಧಕವೇನೂ ಇರದು. ಅಸಲಾಗಿ ಹದಿನಾರುಸಾವಿರದ ಮೇಲೆ ತಾನೇ ಇವು. ಹೀಗೆಂತಲೇ ನಾಣ್ಣುಡಿ. ವಿಷ್ಣುಪುರಾಣದ ೪ನೆಯ ಅಂಶದಲ್ಲಿ—

ಭಗವತೋಽಪ್ಯತ್ರ ಮರ್ತ್ಯಲೋಕೇಽವತೀರ್ಣಸ್ಯ। ಷೋಡಶಸಹಸ್ರಾಣ್ಯೇಕೋತ್ತರಶತಾನಿ ಸ್ತ್ರೀಣಾಮಭವನ್

ಎಂತ ಹೇಳಿದೆ. ಕೃಷ್ಣನಿಗೆ ಹದಿನಾರು ಸಾವಿರದೊಂದುನೂರು ಒಂದು ಹೆಂಡಿರು. ಆದರೆ ಇದೇ ಪುರಾಣದ ೫ನೆಯ ಅಂಶದ ೨೮ನೆಯ ಅಧ್ಯಾಯದಲ್ಲಿ ಮುಖ್ಯವಾದವರ ಹೆಸರುಗಳನ್ನು ಎತ್ತಿ ಹೀಗೆ ಹೇಳಿದೆ:—

ರುಕ್ಮಿಣಿಯನ್ನು ಬಿಟ್ಟು—

ಅನ್ಯಾಶ್ಚ ಭಾರ್ಯಾಃ ಕೃಷ್ಣಸ್ಯ ಬಭೂವುಃ ಸಪ್ತಶೋಭನಾಃ।

ಇದಾದಮೇಲೆ—

ಷೋಡಶಾಸನ್ ಸಹಸ್ರಾಣಿ ಸ್ತ್ರೀಣಾಮನ್ಯಾನಿ ಚಕ್ರಿಣಃ।

ಅಂದರೆ, ಹದಿನಾರುಸಾವಿರದ ಏಳು ಜನರು ಎಂತ ಆಯಿತು. ಇದರಲ್ಲಿ ಹದಿನಾರು ಸಾವಿರ ನರಕನ ಮಕ್ಕಳು. ಇದಂತೂ ಪೊಳ್ಳು ಎಂದು ಮೊದಲೇ ತಿಳುಹಿಸಿರುವೆನು.

ಕಥೆ ಎಷ್ಟು ದೊಡ್ಡ ಪೊಳ್ಳು ಎಂಬುದನ್ನು ತಿಳಿದುಕೊಳ್ಳ ಹೋಗಲು ವಿಷ್ಣುಪುರಾಣದ ನಾಲ್ಕನೆಯ ಅಂಶದ ಹದಿನೈದನೆಯ ಅಧ್ಯಾಯದಲ್ಲಿ ಈ ಸಮಸ್ತ ಹೆಂಗಸರ ಹೊಟ್ಟೆಯಲ್ಲಿ ಕೃಷ್ಣನಿಗೆ ಒಂದು ಲಕ್ಷವೂ ಎಂಭತ್ತು ಸಾವಿರ ಮಕ್ಕಳು ಜನಿಸಿದರೆಂತ ಹೇಳಿದೆ. ಇದೇ ಪುರಾಣದಲ್ಲಿ ಕೃಷ್ಣನು ೧೨೫ ವರುಷಗಳು ಭೂಲೋಕದಲ್ಲಿ ಇದ್ದನೆಂದು ಹೇಳಿದೆ. ಗುಣಿಸಿದರೆ ಕೃಷ್ಣನಿಗೆ ವರುಷಕ್ಕೆ ೧,೪೪೦ರಂತೆ ದಿನ ಒಂದಕ್ಕೆ ನಾಲ್ಕರಂತೆ ಮಕ್ಕಳು

ಹುಟ್ಟುತ್ತಿದ್ದರು. ಇಲ್ಲಿ ಬರೀ ಕೃಷ್ಣನ ಇಚ್ಛೆಯಿಂದಲೇ ಕೃಷ್ಣನ ಹೆಂಡತಿಯರು ಬಸುರಾಗುತ್ತಿದ್ದರೆಂದು ಅಂದುಕೊಳ್ಳಬೇಕಾಗುವುದು.

ಆ ನರಕಾಪುರದ ಹದಿನಾರು ಸಾವಿರ ಕನ್ಯೆಯರ ವಿಷಯವಾದ ಪೊಳ್ಳು ಮಾತಂತಿರಲಿ; ಇವರಮೇಲೆ ಎಂಟು ಜನ ಮುಖ್ಯರಾದ ಮಹಿಷಿಯರ ಮಾತುಂಟಷ್ಟೆ. ಒಬ್ಬಳಂತೂ ರುಕ್ಮಿಣಿ. ವಿಷ್ಣುಪುರಾಣಕಾರನು ಇವಳಲ್ಲದೆ ಇನ್ನೂ ಏಳು ಜನರಿದ್ದರೆಂದು ಹೇಳಿರುವನು. ೫ ನೆಯ ಅಂಶದ ೨೮ ನೆಯ ಅಧ್ಯಾಯದಲ್ಲಿ ಹೆಸರುಗಳನ್ನು ಹೇಳಿರುವನು. ಯಾವುವೆಂದರೆ: (೧) ಕಾಳಿಂದಿ, (೨) ಮಿತ್ರವಿಂದಾ, (೩) ನಗ್ನಜಿತನ ಮಗಳು ಸತ್ಯೆ, (೪) ಜಾಂಬವತಿ, (೫) ರೋಹಿಣಿ--ಇವಳು ಕಾಮರೂಪಿ*, (೬) ಮದ್ರರಾಜನ ಮಗಳು ಸುಶೀಲೆ, (೭) ಸತ್ರಾಜಿತನ ಮಗಳು ಸತ್ಯಭಾಮೆ, (೮) ಲಕ್ಷ್ಮಣೆ.

ರುಕ್ಮಿಣಿಯನ್ನು ಸೇರಿಸಿ ಒಂಬತ್ತು ಜನಗಳಾದರು. ಇದರಮೇಲೆ ೩೨ ನೆಯ ಅಧ್ಯಾಯದಲ್ಲಿ ಇನ್ನೊಂದು ರೀತಿ ಹೇಳಿರುವುದು. ಕೃಷ್ಣನ ಮಕ್ಕಳ ಹೆಸರುಗಳನ್ನು ಕೀರ್ತಿಸುತ್ತಿರುವಾಗ ಹೇಳಿದುದು :—

ಪ್ರದ್ಯುಮ್ನಾದ್ಯಾ ಹರೇಃ ಪುತ್ರಾ ರುಕ್ಮಿಣ್ಯಾಃ ಕಥಿತಾಸ್ತವ ।
ಭಾನುಂ ಭೌಮೇರಿಕಾದ್ಯಾಂಶ್ಚ ಸತ್ಯಭಾಮಾ ವ್ಯಜಾಯುತ ।
ದೀಪ್ತಿಮಾನ್ತಾಮ್ರಪಕ್ಷಾದ್ಯಾ ರೋಹಿಣ್ಯಾಂ ತನಯಾ ಹರೇಃ ।
ಬಭೂವುರ್ಜಾಂಬವತ್ಯಾಂ ಚ ಸಾಂಬಾದ್ಯಾ ಬಲಶಾಲಿನಃ ।
ತನಯಾ ಭದ್ರವಿಂದಾದ್ಯಾ ನಾಗ್ನಜಿತ್ಯಾಂ ಮಹಾಬಲಾಃ ।
ಸಂಗ್ರಾಮಜಿತ್ಪ್ರಧಾನಾಸ್ತು ಶೈಬ್ಯಾಯಾಂ ಚ ಹರೇಃ ಸುತಾಃ ।
ವೃಕಾದ್ಯಾಸ್ತು ಸುತಾ ಮಾದ್ರ್ಯಾಂ ಗಾತ್ರವತ್ ಪ್ರಮುಖಾನ್ ಸುತಾನ್ ।
ಅವಾಪ ಲಕ್ಷ್ಮಣಾಪುತ್ರಾಃ ಕಾಲಿಂದ್ಯಾಂಶ್ಚ ಶ್ರುತಾದಯಃ ।

ಈ ತಾಳಿಕೆಯಲ್ಲಿ ರುಕ್ಮಿಣಿಯಲ್ಲದೆ ಸಿಕ್ಕಿದವರು (೧) ಸತ್ಯಭಾಮೆ (೭), ೨. ರೋಹಿಣಿ (೫), ೩. ಜಾಂಬವತಿ (೪), ೪. ನಾಗ್ನಜತೀ (೩), ೫. ಶೈಬ್ಯಾ (೨), ೬. ಮಾದ್ರಿ (೬), ೭. ಲಕ್ಷ್ಮಣಾ (೮), ೮. ಕಾಳಿಂದಿ (೧).

* ಕಾಮರೂಪಿ ಎಂಬದೊಂದು ನಟುವರಲ್ಲಿನ ಭೇದ ; ಒಬ್ಬನೇ ಹಲವು ವೇಷಗಳನ್ನು ಧರಿಸಿ ನಾಟಕವನ್ನು ಆಡುವನು. ಈ ಅದ್ಭುತ ಪಾಂಡಿತ್ಯವು ಅಲ್ಲಲ್ಲಿ ಇನ್ನೂ ಉಳಿದಿದೆ. ಇಂಥ ನಟುವರನ್ನು ರೇವಾ ಸಂಸ್ಥಾನದಲ್ಲಿ ನಾನು ನೋಡಿದೇನೆ.—ರಾ. ವ್ಯಾ.

೪ನೆಯ ಅಂಶದ ೨೫ನೆಯ ಅಧ್ಯಾಯದಲ್ಲಿಯಾದರೋ—

ತಾಸಾಂ ಚ ರುಕ್ಮಿಣೀ ಸತ್ಯಭಾಮಾ ಜಾಂಬವತೀ ಜಾಲಹಾಸಿನೀ ಪ್ರಮುಖಾ ಅಷ್ಟೌಪತ್ನ್ಯಃ ಪ್ರಧಾನಾಃ ।

ಇಲ್ಲಿ ಎಲ್ಲಾ ಹೆಸರುಗಳೂ ದೊರೆಯಲಿಲ್ಲವು. ಹೊಸದಾದ "ಜಾಲಹಾಸಿನಿ" ಎಂಬದೊಂದು ಸಿಕ್ಕಿತು. ಇಷ್ಟಂತೂ ವಿಷ್ಣುಪುರಾಣದಲ್ಲಿನದಾಯಿತು. ಹರಿವಂಶದಲ್ಲಿ ಇನ್ನೂ ಸಿಕ್ಕು ಬೆರೆತುಕೊಂಡಿದೆ.

ಮಹಿಷೀಃ ಸಪ್ತಕಲ್ಯಾಣೀಸ್ತತೋऽನ್ಯಾ ಮಧುಸೂದನಃ ।
ಉಪಯೇಮೇ ಮಹಾಬಾಹುರ್ಗುಣೋಪೇತಾಃ ಕುಲೋದ್ಗತಾಃ ॥
ಕಾಲಿಂದೀ ಮಿತ್ರವಿಂದಾ ಚ ಸತ್ಯಾಂ ನಾಗ್ನಜಿತೀಂ ತಥಾಂ ।
ಸುತಾಂ ಜಾಂಬವತಸ್ಯಾಪಿ ರೋಹಿಣೀಂ ಕಾಮರೂಪಿಣೀಂ ॥
ಮದ್ರರಾಜಸುತಾಂ ಚಾಪಿ ಸುಶೀಲಾಂ ಭದ್ರಲೋಚನಾಂ ।
ಸಾತ್ರಾಜಿತೀಂ ಸತ್ಯಭಾಮಾಂ ಲಕ್ಷ್ಮಣಾಂ ಜಾಲಹಾಸಿನೀಮ್ ॥
ಶೈಬ್ಯಸ್ಯ ಚ ಸುತಾಂ ತನ್ವೀಂ ರೂಪೇಣಾಪ್ಸರಸಾಂ ಸಮಾಮ್ ।

೧೫ ಅಧ್ಯಾಯ, ಶ್ಲೋಕ ೬೭

ಇಲ್ಲಿ ಲಕ್ಷ್ಮಣಳೇ ಜಾಲಹಾಸಿನಿ ಎಂದು ತಿಳಿಯಬರುತ್ತದೆ. ಹೀಗಾದರೂ ಇಷ್ಟು ಜನರು ಸಿಕ್ಕುವರು:—

೧. ಕಾಲಿಂದೀ, ೨. ಮಿತ್ರವಿಂದಾ, ೩. ಸತ್ಯಾ, ೪. ಜಾಂಬವತ್ ಸುತೆ, ೫. ರೋಹಿಣೀ, ೬. ಮಾದ್ರೀ ಸುಶೀಲೆ, ೭. ಸತ್ರಾಜಿತನ ಮಗಳು ಸತ್ಯಭಾಮೆ, ೮. ಜಾಲಹಾಸಿನೀ ಲಕ್ಷ್ಮಣಾ, ೯. ಶೈಬ್ಯಾ—ಕ್ರಮವಾಗಿ ಶ್ರೀವೃದ್ಧಿಯಾಗತೊಡಗಿದೆ. ರುಕ್ಮಿಣಿಯಲ್ಲದೇನೆ ಒಂಭತ್ತು ಜನರಾದರು. ಇದಂತೂ ೧೧೮ ಅಧ್ಯಾಯದ ತಾಳಿಕೆ, ಹರಿವಂಶದಲ್ಲಿನ ೧೬೨ ನೆಯ ಅಧ್ಯಾಯದಲ್ಲಿ ಇನ್ನೊಂದು ತಾಳಿಕೆಯು ಸಿಗುತ್ತದೆ:—

ಅಷ್ಟೌಮಹಿಷ್ಯಾಃ ಪುತ್ರಿಣ್ಯಾ ಇತಿ ಪ್ರಾಧಾನತಃ ಸ್ಮೃತಾಃ ।
ಸರ್ವಾರ್ಧಾರ ಪ್ರಜಾಶ್ಚೈವ ತಾನ್ಯಪತ್ಯಾನಿಮೇ ಶೃಣು ॥
ರುಕ್ಮಿಣೀ ಸತ್ಯಭಾಮಾ ಚ ದೇವೀ ನಾಗ್ನಜಿತೀ ತಥಾ ।
ಸುದತ್ತಾ ಚ ತಥಾ ಶೈಬ್ಯಾ ಲಕ್ಷ್ಮಣಾಜಾಲ ಹಾಸಿನೀ ॥
ಮಿತ್ರವಿಂದಾ ಚ ಕಾಲಿಂದೀ ಜಾಂಬವತ್ಯಥ ಪೌರವೀ ।
ಸುಭೀಮಾ ಚ ತಥಾ ಮಾದ್ರೀ ॥

ಇಲ್ಲಿ ರುಕ್ಮಿಣಿಯನ್ನು ಬಿಟ್ಟು

೧. ಸತ್ಯಭಾಮೆ, ೨. ನಾಗ್ನಜಿತೀ, ೩. ಸುದತ್ತಾ, ೪. ಶೈಬ್ಯಾ, ೫, ಲಕ್ಷ್ಮಣಾ ಜಾಲಹಾಸಿನಿ, ೬. ಮಿತ್ರವಿಂದಾ, ೭. ಕಾಲಿಂದೀ, ೮. ಜಾಂಬವತೀ, ೯. ಪೌರವೀ, ೧೦. ಸುಭೀಮಾ, ೧೧. ಮಾದ್ರಿ.

ಹರಿವಂಶವನ್ನು ಮಾಡಿದ ಋಷಿವರ್ಯರು ಎಂಟುಜನವೆಂತ ಹೇಳಿ ರುಕ್ಮಿಣಿಯನ್ನೊಳಗೊಂಡು ಹನ್ನೆರಡು ಜನಗಳ ಹೆಸರನ್ನು ಹೇಳಿದರು. ಇಷ್ಟಕ್ಕೆ ಸುಮ್ಮನಾಗದೆ ಪ್ರತಿಯೊಬ್ಬರ ಸಂತಾನವನ್ನೂ ಕೀರ್ತಿಸತೊಡಗಲು ಇನ್ನೂ ಈ ಕೆಳಗೆ ಹೇಳಿದವರು ದೊರಕಿದರು :—

೧೨. ಸುದೇವ. ೧೩. ಉಪಾಸಂಗಾ, ೧೪. ಕೌಶಿಕೀ, ೧೫. ಸುತಸೋಮ, ೧೬. ಯೌಧಿಷ್ಠಿರಿ.*

ತಾಸಾಮುಪತ್ಯಾ ನ್ಯಷ್ಟಾನಾಂ ಭಗರ್ವ ಪ್ರವ್ರವೀತುಮೇ

ಇದಕ್ಕೆ ಉತ್ತರವಾಗಿ ಈ ಮಹಿಷಿಗಳ ಮಕ್ಕಳು ಹೇಳಲ್ಪಟ್ಟಿದ್ದಾರೆ. ಇವರಲ್ಲದೆ ಸತ್ರಾಜಿತನ ಇನ್ನಿಬ್ಬರು ಹೆಣ್ಣುಮಕ್ಕಳಾದ ವ್ರತಿನೀ ಪ್ರಸ್ವಾಪಿನಿಯರ ವಿಷಯವನ್ನು ಮೊದಲೇ ತಿಳಿಸಿರುವುದು.

ಇವಲ್ಲದೆ ಮಹಾಭಾರತದಲ್ಲಿ ಹೊಸವೆರಡು ಹೆಸರುಗಳು ದೊರೆಯುತ್ತವೆ, ಗಾಂಧಾರೀ ಮತ್ತು ಹೈಮವತೀ.

ರುಕ್ಮಿಣೀತ್ವಥ ಗಾಂಧಾರೀ ಶೈಬ್ಯಾ ಹೈಮವತೀತ್ಯಪಿ ।
ದೇವೀ ಜಾಂಬವತೀ ಚೈವ ವಿವಿಶುರ್ಜಾತವೇದಸಮ್ ॥

ಮೌಸಲಪರ್ವ, ಅಧ್ಯಾಯ ೭

ಈ ಹೆಸರುಗಳನ್ನೆಲ್ಲಾ ಒಟ್ಟುಗೂಡಿಸಿ ಮಹಿಷಿಯರು ಎಷ್ಟು ಜನಗಳಾದರೆಂಬುದನ್ನು ನೋಡೋಣ :—

(೧) ರುಕ್ಮಿಣಿ, (೨) ಸತ್ಯಭಾಮೆ, (೩) ಗಾಂಧಾರಿ, (೪) ಶೈಬ್ಯ, (೫) ಹೈಮವತಿ, (೬) ಜಾಂಬವತಿ. ಮಹಾಭಾರತದಲ್ಲಿ ಇವಲ್ಲದೆ ಬೇರೆ ಹೆಸರುಗಳಿಲ್ಲವಾದರೂ ಅನ್ಯಾ ಶಬ್ದವೇನೋ ಇದೆ. ವಿಷ್ಣುಪುರಾಣದಲ್ಲಿ ೨೮ ನೆಯ ಅಧ್ಯಾಯದಲ್ಲಿ ೧, ೨, ೩ ಅಲ್ಲದೆ ಈ ಕೆಲವು ಹೆಸರುಗಳು ಸಿಗುತ್ತವೆ :—

---

* ಇವರುಗಳು ಪ್ರಧಾನ ಅಷ್ಟಮಹಿಷಿಗಳಲ್ಲಿಯೇ ಪರಿಗಣಿಸಲ್ಪಟ್ಟಿರುವರು.

(೭) ಕಾಲಿಂದಿ, (೮) ಮಿತ್ರವಿಂದಾ, (೯) ಸತ್ಯಾನಾಗ್ನಜಿತೀ, (೧೦) ರೋಹಿಣಿ, (೧೧) ಮಾದ್ರೀ, (೧೨) ಲಕ್ಷ್ಮಣಾ ಜಾಲಹಾಸಿನಿ.

ವಿಷ್ಣುಪುರಾಣದ ೩೨ನೆಯ ಅಧ್ಯಾಯದಲ್ಲಿ ಮೇಲೆ ಹೇಳಿದುವಲ್ಲದೆ ಶೈಬ್ಯ ಎಂಬದೊಂದು ಹೆಸರು ಹೆಚ್ಚಿಗೆ ಸಿಕ್ಕುತ್ತದೆ. ಇದಾದಮೇಲೆ ಹರಿವಂಶದ ಮೊದಲನೆಯ ತಾಳಿಕೆಯಾದ ೧೧೮ನೆಯ ಅಧ್ಯಾಯದಲ್ಲಿ ಇವಲ್ಲದೆ ಹೊಸ ಹೆಸರುಗಳೇನೂ ಇರುವುದಿಲ್ಲ. ೧೬೨ ನೆಯ ಅಧ್ಯಾಯದಲ್ಲಿಯಾದರೋ ಇವು ಸಿಕ್ಕುತ್ತವೆ:—

(೧೩) ಸುದತ್ತಾ, (೧೪) ಪೌರವಿ, (೧೫) ಸುಭೀಮು, ಮತ್ತು ಇದೇ ಅಧ್ಯಾಯದಲ್ಲಿ ಮಕ್ಕಳನ್ನು ಎಣಿಸುವಾಗ (೧೬) ಸುದೇವ, (೧೭) ಉಪಾಸಂಗ, (೧೮) ಕೌಶಿಕ, (೧೯) ಸುತಸೋಮು, (೨೦) ಯೌಧಿಷ್ಠಿರಿ, ಮತ್ತು ಸತ್ಯಭಾಮೆಯ ಮದುವೆಯ ಕಾಲದಲ್ಲಿ (೨೧) ವ್ರತಿನಿ, (೨೨) ಪ್ರಸ್ವಾಪಿನಿ—ಸಿಕ್ಕುವುವು.

ಎಂಟು ಜನಗಳ ತಾವಿನಲ್ಲಿ ೨೨ ಜನಗಳು ದೊರಕಿದರು. ಇಷ್ಟರೊಳಗೆ ೧೩ ರಿಂದ ೨೨ರ ವರೆಗೂ ಬರೀ ಹರಿವಂಶದಲ್ಲಿ ಮಟ್ಟಿಗೆ ಹೆಚ್ಚಿಗೆಯಾದುದುರಿಂದ ಈ ಹತ್ತು ಜನಗಳನ್ನೂ ಬಿಟ್ಟುಬಿಟ್ಟರೂ ೧೨ ಜನರು ಉಳಿಯುವರು. ಗಾಂಧಾರಿ ಹೈಮವತಿಯರ ಹೆಸರು ಮೌಸಲಪರ್ವದಲ್ಲಿ ಬಿಟ್ಟು ಮತ್ತೆಲ್ಲಿಯೂ ದೊರೆಯುವುದಿಲ್ಲ. ಮೌಸಲಪರ್ವವು ಮಹಾಭಾರತದಲ್ಲಿ ಪ್ರಕ್ಷಿಪ್ತವೆಂಬುದನ್ನು ಮುಂದಕ್ಕೆ ತೋರಿಸುವೆವು. ಆದುದರಿಂದ ಈ ಎರಡು ಹೆಸರುಗಳನ್ನು ಬಿಡಬಹುದು. ಇನ್ನು ಉಳಿಯುವುದು ೧೦.

ಜಾಂಬವತಿಯ ಹೆಸರನ್ನು ವಿಷ್ಣುಪುರಾಣದ ೨೮ ನೆಯ ಅಧ್ಯಾಯದಲ್ಲಿ ಹೀಗೆ ಬರೆದಿದೆ:—

ದೇವೀ ಜಾಂಬವತೀ ಚಾಪಿ ರೋಹಿಣೀ ಕಾಮರೂಪಿಣೀ ।

ಹರಿವಂಶದಲ್ಲಿ ಹೀಗೆ—

ಸುತಾಂ ಜಾಂಬವತಶ್ಚಾಪಿ ರೋಹಿಣೀಂ ಕಾಮರೂಪಿಣೀಂ ।

ಇದರ ಅರ್ಥವು “ಜಾಂಬವಂತನ ಮಗಳು ರೋಹಿಣಿಯು” ಎಂದರೆ ಅಸಂಗತವಾಗಲಾರದು ಮತ್ತು ಹೀಗೆಯೇ ಸಂಗತವೆಂತಲೂ ತೋರುತ್ತದೆ.

ಅಂದರೆ ಜಾಂಬವತಿಯೂ ರೋಹಿಣಿಯೂ ಒಬ್ಬಳೆ. ಮಿಕ್ಕವರು ಎಂಟು ಜನಗಳು ಉಳಿದರು.

ಸತ್ಯಭಾಮೆ ಮತ್ತು ಸತ್ಯ ಎಂಬುವರು ಬೇರೆ ಬೇರೆ ಅಲ್ಲ, ಒಬ್ಬಳೇ. ಇದಕ್ಕೆ ಪ್ರಮಾಣವನ್ನು ಈ ಕೆಳಗೆ ಎತ್ತಿದ್ದೇನೆ. ಸತ್ರಾಜಿತನ ವಧೆಯು ಮಾತಾದಮೇಲೆ—

ಕೃಷ್ಣಃ ಸತ್ಯಭಾಮಾಮರ್ಷತಾಮ್ರಲೋಚನಃ ಪ್ರಾಹ, ಸತ್ಯೇ !
ಮಮೈಷಾವಹಾಸನಾ !

ಅಂದರೆ ಸತ್ಯಭಾಮೆಯ ಮೇಲಿನ ಕೋಪದಿಂದ ಕೃಷ್ಣನು ಕೆಂಪೇರಿದ ಕಂಗಳುಳ್ಳವನಾಗಿ ಹೀಗೆಂದನು: "ಎಲೈ ಸತ್ಯೆ, ಇದು ನನ್ನನ್ನು ಹೀನ ಗಳೆಯುವುದು ತಾನೆ!" ತಿರಿಗೂ ಪಂಚಮಾಂಶದ ೩೦ ನೆಯ ಅಧ್ಯಾಯದಲ್ಲಿ ಪಾರಿಜಾತಹರಣದಲ್ಲಿ ಕೃಷ್ಣನು ಸತ್ಯಭಾಮೆಯನ್ನು ಕುರಿತು ಹೇಳುತ್ತಿರುವನು :—

ಸತ್ಯೇ ! ಯಥಾ ತ್ವಮಿತ್ಯುಕ್ತಂ ತ್ವಯಾ ಕೃಷ್ಣಾ ಸಕೃತ್ ಪ್ರಿಯಮ್

ಆವಶ್ಯಕವಾದರೆ ಇನ್ನೂ ಎಷ್ಟೋ ಪ್ರಮಾಣಗಳನ್ನು ಕೊಡಬಹುದು. ಸದ್ಯಕ್ಕೆ ಇವೇ ಸಾಕು.

ಆದುದರಿಂದ ಈ ಹತ್ತು ಜನಗಳಿಂದ 'ಸತ್ಯೆ' ಎಂಬುದು ಸತ್ಯಭಾಮೆಗೆ ಅನ್ವಯವಾಗತಕ್ಕದೆಂದು ಬಿಟ್ಟುಬಿಟ್ಟರೆ, ಉಳಿಯುವರು ಎಂಟು ಜನಗಳು.

(೧) ರುಕ್ಮಿಣಿ, (೨) ಸತ್ಯಭಾಮೆ, (೩) ಜಾಂಬವತಿ, (೪) ಶೈಬ್ಯ, (೫) ಕಾಲಿಂದಿ, (೬) ಮಿತ್ರವಿಂದೆ, (೭) ಮಾದ್ರಿ, (೮) ಲಕ್ಷಣ್ಮಾಜಾಲಹಾಸಿನಿ.

ಇವರ ಪೈಕಿ ಶೈಬ್ಯ, ಕಾಲಿಂದಿ, ಮಿತ್ರವಿಂದಾ, ಲಕ್ಷ್ಮಣೆ, ಮಾದ್ರಿ ಮತ್ತು ಸುಶೀಲೆ ಎಂಬ ಐವರು ತಾಳಿಕೆಯಲ್ಲಿ ಮಾತ್ರವೇ ಇರುವರು. ಇವರು ಕಾರ್ಯಕ್ಷೇತ್ರದಲ್ಲಿ ಎಲ್ಲಿಯೂ ಸಿಕ್ಕುವುದಿಲ್ಲ. ಇವರೊಡನೆ ಮದುವೆಯು ಯಾವಾಗ ಏಕೆ ಆಯಿತೊ? ಯಾರೂ ಏನನ್ನೂ ಹೇಳಿಲ್ಲ. ಕೃಷ್ಣಜೀವಿನಿಯಲ್ಲಿ ಇವರ ಸಂಸ್ಪರ್ಶವೇ ಇರುವುದಿಲ್ಲ. ಇವರ ಮಕ್ಕಳ ತಾಳಿಕೆಯನ್ನು ಕೃಷ್ಣಪುತ್ರರ ತಾಳಿಕೆಯಲ್ಲಿ ವಿಷ್ಣುಪುರಾಣಕಾರನು ಬರೆದೇನೋ ಇರುವನಾದರೂ ಅವರು ಕರ್ಮಕ್ಷೇತ್ರದಲ್ಲಿ ಎಲ್ಲಿಯೂ ಕಾಣಬರುವುದಿಲ್ಲ. ಇವರು

ಯಾರ ಕನ್ಯೆಯರು, ಯಾವ ದೇಶದವರು ಎಂಬಾವ ಮಾತೂ ಎಲ್ಲಿಯೂ ಇರುವುದಿಲ್ಲ. ಸುಶೀಲೆಯು ಮದ್ರರಾಜನ ಮಗಳು ಎಂಬುದೊಂದು ಮಾತು ಇರುವುದು. ಕೃಷ್ಣನ ಸಮಕಾಲದಲ್ಲಿ ಇದ್ದ ಮದ್ರರಾಜನು ನಕುಲ ಸಹದೇವರ ಸೋದರಮಾವನಾದ ಮತ್ತು ಕುರುಕ್ಷೇತ್ರದಲ್ಲಿ ಪ್ರಖ್ಯಾತ ರಥಿಕನಾದ ಶಲ್ಯನು. ಇವರಿಬ್ಬರೂ ಕುರುಕ್ಷೇತ್ರದಲ್ಲಿ ಹದಿನೇಳು ದಿನಗಳವರೆಗೂ ಪರಸ್ಪರ ಶತ್ರುಸೈನ್ಯಗಳಲ್ಲಿ ಇರುತ್ತಿದ್ದರು. ಹಲವು ವೇಳೆಗಳಲ್ಲಿ ಇವರಿಗೆ ಭೇಟಿಯಾಗಿರುವುದು. ಕೃಷ್ಣ ಸಂಬಂಧವಾಗಿ ಹಲವು ಮಾತುಗಳನ್ನು ಶಲ್ಯನು ಆಡಿರುವನು. ಕೃಷ್ಣನೂ ಶಲ್ಯನ ವಿಷಯವಾಗಿ ಹಲವನ್ನು ಆಡಿರುವನು. ಇವರು ಎದುರು ಬದರಾಗಿ ಒಬ್ಬರು ಇನ್ನೊಬ್ಬರನ್ನು ಮೂದಲಿಸಿ ಮಾತನಾಡಿರುವರು. ಇದಾವುದರಲ್ಲಿಯೂ ರಾಗಿಯಷ್ಟಾದರೂ ಕೃಷ್ಣನು ಶಲ್ಯನ ಅಳಿಯನೋ ಭಾವನೋ ಅಥವಾ ಆ ಬಗೆಯ ಸಂಬಂಧಿಯೊಬ್ಬನೋ ಎಂಬುದು ಹೊರ ಬೀಳುವುದಿಲ್ಲ. ಸಂಬಂಧವು ಇಷ್ಟೇ ಕಾಣಬರುವುದು. ಶಲ್ಯನು ಅರ್ಜುನ ವಾಸುದೇವರನ್ನು ಒಟ್ಟಿಗೆ ಕೊಲ್ಲಲು ಕರ್ಣನಿಗೆ ಉಪದೇಶವನ್ನಿತ್ತನು. ಕೃಷ್ಣನು ಶಲ್ಯನನ್ನು ಕೊಲ್ಲುವಂತೆ ಯುಧಿಷ್ಠಿರನಿಗೆ ಪ್ರೇರಿಸಿ ಶಲ್ಯನಿಗೆ ಯಮ ಸ್ವರೂಪನಾದನು. ಕೃಷ್ಣನು ಮಾದ್ರಿಯನ್ನು ಮದುವೆಯಾಗಿದ್ದನೆಂಬುದು ಶುದ್ಧ ಸುಳ್ಳೆಂದು ತೋರುವುದು. ಶೈಬ್ಯ, ಕಾಲಿಂದಿ, ಮಿತ್ರವಿಂದಾ ಮತ್ತು ಲಕ್ಷ್ಮಣೆಯ ಕುಲ, ಶೀಲ, ದೇಶ ಮತ್ತು ವಿವಾಹವಾವುದೂ ಆರಿಗೂ ತಿಳಿಯದು. ಇವರು ಬರೀ ಕಾವ್ಯಕ್ಕೆ ಅಲಂಕಾರವಾದವರು ಮಾತ್ರ; ಈ ವಿಷಯದಲ್ಲಿ ಸಂದೇಹವಿರದು.

ಇಷ್ಟೇ ಏನು. ಕೇವಲ ಮಾದ್ರಿಯೇ ಅಲ್ಲ; ಜಾಂಬವತಿಯಾದ ರೋಹಿಣಿಯನ್ನೂ ಸತ್ಯಭಾಮೆಯನ್ನೂ ಹೀಗೆಯೇ ನೋಡಬೇಕಾಗುವುದು. ಜಾಂಬವತಿಗೂ ಕಾಳಿಂದಿ ಮುಂತಾದವರಿಗೂ ಇರುವ ಭೇದ ಇಷ್ಟೇ. ಅವನ ಮಗನಾದ ಶಾಂಬನು ಐದು ಯಾದವರೊಡನೆ ಅಲ್ಲಲ್ಲಿ ಕಣ್ಣಿಗೆ ಬೀಳುವನು. ಇವನು ಲಕ್ಷಣಾ ಹರಣಕಾಲದಲ್ಲಿ ಮಟ್ಟಿಗೆ ಕಾರ್ಯಕ್ಷೇತ್ರದಲ್ಲಿ ಸಿಕ್ಕುವನು. ಲಕ್ಷಣೆ ದುರ್ಯೋಧನನ ಮಗಳು. ಮಹಾಭಾರತವು ಪಾಂಡವರ ಜೀವನ ವೃತ್ತವೆಂತು ಮಟ್ಟಿಗೊ ಅಂತುಮಟ್ಟಿಗೆ ಕೌರವರ ಜೀವನ ವೃತ್ತಾಂತವೂ ಆಗಿರುವುದು. ಲಕ್ಷಣಾಹರಣದಲ್ಲಿ ಸತ್ಯವೇನಾದರೂ ಇದ್ದಿದ್ದರೆ ಇದು

ಮಹಾಭಾರತದಲ್ಲಿ ಇರುತ್ತಿತ್ತು. ಅದಂತೂ ಇಲ್ಲ.* ಜಾಂಬವತಿ ಕರಡಿಯ ಮಗಳು ; ಭಲ್ಲೂಕಿನಿ ಕೃಷ್ಣ ಅಥವಾ ಮತ್ತ್ಯಾವ ಮಾನವನ ಹೆಂಡತಿಯೂ ಆಗಲಾರಳು. ಆದುದರಿಂದಲೇ ಕಾಮರೂಪಿಣಿ ಎಂತ ಹೇಳಿರುವುದು. ಅಂದರೆ ಕರಡಿಯಾದರೂ ಮಾನವಿಯಾಗುತ್ತಿದ್ದಳೆಂದು. ಕಾಮರೂಪಿಣಿಯಾದ ಕರಡಿಯನ್ನು ನಾನು ನಂಬಲಾರೆ. ಮತ್ತು ಕೃಷ್ಣನು ಕರಡಿಯನ್ನು ಮದುವೆಯಾಗಿದ್ದನೆಂಬುದನ್ನೂ ಒಪ್ಪಿಕೊಳ್ಳಲಾರೆ.

ಸತ್ಯಭಾಮೆಗೆ ಮಗನೇನೋ ಇದ್ದನೆಂದು ಕೇಳಿಯುಂಟು. ಅವನು ಕಾರ್ಯಕ್ಷೇತ್ರದಲ್ಲೆಲ್ಲೂ ಇರುವುದಿಲ್ಲ. ಅವಳ ಮೇಲಿನ ಸಂದೇಹಕ್ಕೆ ಇದೇ ಮೊದಲನೆಯ ಕಾರಣ. ಸತ್ಯಭಾಮೆಯೇ ರುಕ್ಮಿಣಿಯಂತೆ ಆಗಿಂದಾಗ್ಗೆ ಸ್ವತಃ ಕಾರ್ಯಕ್ಷೇತ್ರದಲ್ಲಿ ಇರುವುದೇನೋ ಸರಿಯೆ. ಅವಳ ಮದುವೆಯ ವೃತ್ತಾಂತವನ್ನೂ ವಿಸ್ತಾರವಾಗಿ ಆಲೋಚಿಸಿಯಾಗಿದೆ.

ಮಹಾಭಾರತದ ವನಪರ್ವದ ಮಾರ್ಕಂಡೇಯ ಸಮಸ್ಯಾ ಪರ್ವಾಧ್ಯಾಯದಲ್ಲಿ ಸತ್ಯಭಾಮೆ ಸಿಕ್ಕುವಳು. ಈ ಪರ್ವಾಧ್ಯಾಯವು ಪ್ರಕ್ಷಿಪ್ತ ; ಮಹಾಭಾರತದ ವನಪರ್ವ ಸಮಾಲೋಚನೆಯ ಕಾಲದಲ್ಲಿ ಪಾಠಕರು ಅದನ್ನು ನೋಡುವರು. ಇಲ್ಲಿ ದ್ರೌಪದೀ ಸತ್ಯಭಾಮಾ ಸಂವಾದವೆಂದು ಸಣ್ಣದೊಂದು ಪರ್ವಾಧ್ಯಾಯವಿರುವುದು. ಇದೂ ಪ್ರಕ್ಷಿಪ್ತವಾದುದು.

ಮಹಾಭಾರತದ ಕಥೆಯೊಡನೆ ಇದಕ್ಕೆ ಸಂಬಂಧವೇನೂ ಇರುವುದಿಲ್ಲ. ಇದು ಹೆಂಡತಿಯು ಗಂಡನೊಡನೆ ಎಂತು ನಡೆದುಕೊಳ್ಳಬೇಕೆಂಬುದನ್ನು ತಿಳುಹಿಸುವ ಪ್ರಬಂಧವೊಂದು. ಪ್ರಬಂಧದ ಲಕ್ಷಣ ಈಗಿನ ಕಾಲದ್ದು.

---

* ಲಕ್ಷಣಾ ಹರಣವನ್ನು ಬಿಟ್ಟರೆ ಯದುಗಳ ಧ್ವಂಸದಲ್ಲಿಯೂ ಶಾಂಬನ ನಾಯಕತ್ವವು ಕಾಣಬರುವುದು. ಇವನೇ ಹೊಟ್ಟೆಗೆ ಒನಕೆಯನ್ನು ಬಿಗಿದುಕೊಂಡು ಹೆಣ್ಣು ವೇಷವನ್ನು ಹಾಕಿಕೊಂಡವನು. ಈ ಗ್ರಂಥದ ಏಳನೆಯ ಭಾಗದಲ್ಲಿ ಈ ಮೌಸಲ ಪರ್ವವು ಪ್ರಕ್ಷಿಪ್ತವೆಂಬುದನ್ನು ಹೇಳಿರುವೆನು. ಮುಸಲದಿಂದ ಉಂಟಾದ ವೃತ್ತಾಂತವೆಲ್ಲವೂ ಅತಿಪ್ರಕೃತಿಯಾದುದರಿಂದ ತ್ಯಾಜ್ಯವಾದುದು. ಜಾಂಬವತಿಯ ಮದುವೆಯಾದಮೇಲೆ—ಬಹಳ ಕಾಲದಮೇಲೆ—ಸುಭದ್ರೆಯ ಮದುವೆ. ಸುಭದ್ರೆಯ ಮೊಮ್ಮಗ ಪರೀಕ್ಷಿತನಿಗೆ ಮುವತ್ತಾರು ವರ್ಷಗಳಾದಾಗ್ಗೆ ಯದುವಂಶದ ಧ್ವಂಸ. ಆಗ್ಗೆ ಶಾಂಬನು ಬಹು ಮುದುಕನಾಗಿರಬೇಕು. ಹಣ್ಣು ಮುದುಕನಿಗೆ ಗರ್ಭಿಣಿಯ ವೇಷವನ್ನು ತೊಡಿಸಿ ಋಷಿಗಳನ್ನು ಠಕಾಯಿಸಲು ಆಗಲಾರದು.

ಇದಾದಮೇಲೆ ಉದ್ಯೋಗಪರ್ವದಲ್ಲಿ ಸತ್ಯಭಾಮೆಯು ಯಾನ ಸಂಧಿ ಪರ್ವಾಧ್ಯಾಯದಲ್ಲಿ ಕಾಣಿಸುವಳು. ಇದೂ ಪ್ರಕ್ಷಿಪ್ತವೆಂಬುದನ್ನು ಈ ಪರ್ವಾಧ್ಯಾಯವನ್ನು ಸಮಾಲೋಚಿಸುವ ಕಾಲದಲ್ಲಿ ತೋರಿಸುವೆನು. ಕೃಷ್ಣನು ಕುರುಕ್ಷೇತ್ರದ ಯುದ್ಧಕ್ಕೆ ಆರಿಸಲ್ಪಟ್ಟು ಉಪಪ್ಲಾವ್ಯ ನಗರಕ್ಕೆ ಬಂದಿದ್ದನು—ಯುದ್ಧಯಾತ್ರೆಗೆ ಸತ್ಯಭಾಮೆಯನ್ನೊಡಗೊಂಡು ಬರಬೇಕಾದ ಸಂಭವವಿರಲಿಲ್ಲ. ಕುರುಕ್ಷೇತ್ರ ಯುದ್ಧದಲ್ಲಿ ಸತ್ಯಭಾಮೆ ಜೊತೆಯಲ್ಲಿ ಇರಲಿಲ್ಲವೆಂಬುದು ಮಹಾಭಾರತವನ್ನು ಓದಿದರೇನೆ ಗೊತ್ತಾಗುವುದು. ಯುದ್ಧಪರ್ವಗಳಾವವುಗಳಲ್ಲಿಯೂ ಮತ್ತು ಅವಕ್ಕೆ ಮುಂದೆ ಬರುವ ಪರ್ವಗಳಲ್ಲಿ ಆವವುಗಳಲ್ಲಿಯೂ ಸತ್ಯಭಾಮೆಯ ಮಾತೇ ಇಲ್ಲ.

ಕೇವಲ ಕೃಷ್ಣನು ತನ್ನ ಮಾನವಲೀಲೆಯನ್ನು ಅಡಗಿಸಿಕೊಂಡಮೇಲೆ ಮೌಸಲಪರ್ವದಲ್ಲಿ ಸತ್ಯಭಾಮೆಯ ಹೆಸರು ಇರುವುದು. ಮೌಸಲಪರ್ವವೂ ಪ್ರಕ್ಷಿಪ್ತವೆಂಬುದನ್ನು ಮುಂದಕ್ಕೆ ತೋರಿಸಲಾಗುವುದು.

ಮಹಾಭಾರತದ ಆವಾವ ಅಂಶಗಳು ನಿಸ್ಸಂದೇಹವಾಗಿ ಮೌಲಿಕವಾದವುಗಳೆಂದು ಸ್ವೀಕರಿಸಲಾಗುವುದೋ ಅಂಥಾ ಆವೆಡೆಗಳಲ್ಲಿಯೂ ಸತ್ಯಭಾಮೆಯ ಹೆಸರು ಇರುವುದಿಲ್ಲ, ಪ್ರಕ್ಷಿಪ್ತ ಅಂಶಗಳಲ್ಲೆಲ್ಲಾ ಇರುವುದು. ಸತ್ಯಭಾಮೆಯ ಸಂಬಂಧವಾಗಿ ಸಂದೇಹಪಡಲಿಕ್ಕೆ ಇದೇ ಎರಡನೆಯ ಕಾರಣ.

ಇದಾದಮೇಲೆ ವಿಷ್ಣುಪುರಾಣ. ಇದರಲ್ಲಿ ಇವಳ ವಿವಾಹವೃತ್ತಾಂತವು ಸ್ಯಮಂತಕಮಣಿಯ ಉಪಾಖ್ಯಾನದಲ್ಲಿ ಇರುವುದು. ಕೃಷ್ಣನೊಡನೆ ಕರಡಿಯ ಮಗಳು ಮದುವೆಯಂತಹ ಪೊಳ್ಳು ಇರುವೆಡೆಯಲ್ಲಿ ಇವಳ ಪರಿಣಯವೂ ಸೇರಿರುವುದು. ಇದಾದಮೇಲೆ ಈ ವಿವಾಹದಿಂದ ದ್ವೇಷಗೊಂಡು ಶತಧನ್ವನು ಸತ್ಯಭಾಮೆಯ ತಂದೆಯನ್ನು ಕೊಂದನೆಂದು ಹೇಳಿರುವುದು. ಕೃಷ್ಣನು ಆಗ ಅರಗಿನ ಮನೆಯು ಸುಟ್ಟುಹೋದ ವಾರ್ತೆಯನ್ನು ಕೇಳಿ ಪಾಂಡವರನ್ನು ಹುಡುಕಿಕೊಂಡು ವಾರಣಾವತಕ್ಕೆ ಹೋಗಿದ್ದನೆಂದು ಹೇಳಿದೆ. ಅಲ್ಲಿಗೇನೆ ಸತ್ಯಭಾಮೆಯು ತನ್ನ ತಂದೆಯ ವಿಷಯದಲ್ಲಿ ನಡೆದ ಘೋರಕೃತ್ಯದ ವಿಷಯವಾಗಿ ಫಿರ್ಯಾದನ್ನು ಹೇಳಿ ಕಳುಹಿಸಿಕೊಟ್ಟಳೆಂದೂ ಇರುವುದು. ಇದು ಸುಳ್ಳು. ಕೃಷ್ಣನು ವಾರಣಾವತಕ್ಕೆ ಹೋಗಿರಲಿಲ್ಲ; ಹೋಗಿದ್ದರೆ

ಮಹಾಭಾರತದಲ್ಲಿ ಇರುತ್ತಿತ್ತು. ಅಲ್ಲಿಲ್ಲ; ಆದುದರಿಂದ ಈ ಮಾತುಗಳೇ ಸಂದೇಹಕ್ಕೆ ಮೂರನೆಯ ಕಾರಣ.

ಇದಾದಮೇಲೆ ವಿಷ್ಣುಪುರಾಣದಲ್ಲಿ ಪಾರಿಜಾತಹರಣ ವೃತ್ತಾಂತದಲ್ಲಿ ಸತ್ಯಭಾಮೆ ದೊರಕುವಳು. ಅದು ಅನೈಸರ್ಗಿಕವಾದ ಅಲೀಕ ವ್ಯಾಪಾರ. ಪ್ರಕೃತದಲ್ಲಿ ವಿಶ್ವಾಸಯೋಗ್ಯವಾದಾವೆಡೆಯಲ್ಲಿಯೂ ವಿಷ್ಣುಪುರಾಣದಲ್ಲಿ ಅವಳು ಇಲ್ಲ. ಇದೇ ಸಂದೇಹಕ್ಕೆ ನಾಲ್ಕನೆಯ ಕಾರಣ.

ಮಹಾಭಾರತ ಆದಿಪರ್ವದ ಸಂಭವಪರ್ವದ ಎಪ್ಪತ್ತೆಂಟನೆಯ ಅಧ್ಯಾಯದ ಹೆಸರು 'ಅಂಶಾವತರಣ'ವೆಂದಿದೆ. ಮಹಾಭಾರತದ ನಾಯಕ ನಾಯಕಿಯರು ಆವಾವ ದೇವ ದೇವಿ ಅಸುರ ರಾಕ್ಷಸರ ಅಂಶವನ್ನು ಕೂಡಿ ಜನಿಸಿದರೆಂಬುದನ್ನು ವರ್ಣಿಸಿರುವುದು. ಕೊನೆಯೆಡೆಯಲ್ಲಿ ಕೃಷ್ಣನು ನಾರಾಯಣನ ಅಂಶ, ಬಲರಾಮನು ಶೇಷನಾಗನ ಅಂಶ, ಪ್ರದ್ಯುಮ್ನನು ಸನತ್ಕುಮಾರನ ಅಂಶ, ದ್ರೌಪದಿಯು ಶಚಿಯ ಅಂತ, ಕುಂತಿ ಮಾದ್ರಿಯರು ಸಿದ್ಧಿ ಮತ್ತು ಧೃತಿಯ ಅಂಶ. ಕೃಷ್ಣನ ಪತ್ನಿಯರ ವಿಷಯದಲ್ಲಿ ಹದಿನಾರು ಮಹಿಷಿಯರು ಅಪ್ಸರೋಗಣಗಳ ಅಂಶವೆಂತಲೂ, ರುಕ್ಮಿಣೀದೇವಿಯು ಲಕ್ಷ್ಮಿಯ ಅಂಶವೆಂತಲೂ ಬರೆದಿದೆ. ಕೃಷ್ಣನ ಇತರ ಹೆಂಡತಿಯರ ಹೆಸರೇ ಇರುವುದಿಲ್ಲ. ಇದೇ ಸಂದೇಹಕ್ಕೆ ಐದನೆಯ ಕಾರಣ. ಈ ಕಾರಣವು ಸತ್ಯಭಾಮೆಯೊಬ್ಬಳ ವಿಷಯದಲ್ಲಿ ಮಟ್ಟಿಗೆ ಅಲ್ಲ, ರುಕ್ಮಿಣಿಯ ಹೊರತು ಕೃಷ್ಣನ ಮುಖ್ಯರಾದ ಮಹಿಷಿಯರೆಲ್ಲರಿಗೂ ಸಲ್ಲುವುದು. ನರಕನ ಹದಿನಾರುಸಾವಿರ ಮಕ್ಕಳೆಂಬ ಅನೈಸರ್ಗಿಕವಾದ ಮಾತನ್ನು ಹೊರದೂಡಲು ರುಕ್ಮಿಣಿಯನ್ನು ಬಿಟ್ಟರೆ ಕೃಷ್ಣನಿಗೆ ಮತ್ತಾವ ಹೆಂಡಿರೂ ಇರಲಿಲ್ಲವೆಂದು ಮಹಾಭಾರತದ ಈ ಅಂಶದಿಂದಲೇ ಗೊತ್ತಾಗುತ್ತಿರುವುದು.

ಕರಡಿಯ ಮಗ ಶಾಂಬನ ವಿಷಯವಾಗಿ ಹೇಳಿದುದನ್ನು ಬಿಟ್ಟರೆ ರುಕ್ಮಿಣಿಯ ಹೊರತು ಮತ್ತಾವ ಕೃಷ್ಣ ಮಹಿಷಿಯರ ಪುತ್ರಪೌತ್ರರುಗಳೂ ಕಾರ್ಯಕ್ಷೇತ್ರದಲ್ಲಿ ಕಾಣುವುದಿಲ್ಲ. ರುಕ್ಮಿಣಿಯ ವಂಶೀಯನೇ ರಾಜನಾದವನು—ಮಿಕ್ಕವರ ವಂಶಿಕರಾರೂ ಎಲ್ಲೂ ಇರಲಿಲ್ಲ.

ಈ ಸಕಲ ಕಾರಣಗಳಿಂದಲೂ ಕೃಷ್ಣನಿಗೆ ಒಬ್ಬಳಿಗಿಂತ ಹೆಚ್ಚು ಮಹಿಷಿಯರು ಇರಲಿಲ್ಲವೆಂದು ತೋರುವುದು. ಇದ್ದರೂ ಇರಬಹುದು. ಆಗಿನ ಕಾಲದ ರೀತಿಯೇ ಹೀಗಿದ್ದಿತು. ಪಂಚಪಾಂಡವರೆಲ್ಲರಿಗೂ ಒಬ್ಬಳಿಗಿಂತ ಹೆಚ್ಚಾಗಿಯೇ ಹೆಂಡತಿಯರಿದ್ದರು. ಆದರ್ಶ ಧಾರ್ಮಿಕನಾದ ಭೀಷ್ಮನೂ ಕೂಡ ಚಿಕ್ಕತಮ್ಮನಿಗೋಸ್ಕರ ಕಾಶೀರಾಜನ ಮೂವರು ಕನ್ನಿಕೆಯರನ್ನು ತಂದಿದ್ದನು. ಒಂದಕ್ಕಿಂತ ಹೆಚ್ಚಿನ ವಿವಾಹವನ್ನು ಕೃಷ್ಣನು ಒಪ್ಪುತಲಿರಲಿಲ್ಲವೆಂತ ಎಲ್ಲಿಯೂ ಇಲ್ಲ. ನಾನು ವಿಚಾರಮಾಡುವಲ್ಲಿ ಒಂದಕ್ಕಿಂತ ಹೆಚ್ಚಾಗಿ ಮದುವೆ ಮಾಡಿಕೊಳ್ಳುವುದು ಸಕಲಾವಸ್ಥೆಗಳಲ್ಲಿಯೂ ಅಧರ್ಮವೆಂದು ನನಗೆಲ್ಲಿಯೂ ದೊರೆತಿಲ್ಲ. ಆದಕಾರಣ ಯಾವಾಗಲೂ ಪುರುಷನು ಒಂದಕ್ಕಿಂತ ಹೆಚ್ಚಾಗಿ ಮದುವೆಯಾಗುವುದು ಅಧರ್ಮವೆಂಬುದೇನೋ ಸರಿ ; ಆದರೂ ಇದು ಸಕಲ ಅವಸ್ಥೆಗಳಲ್ಲಿಯೂ ಅಲ್ಲ. ಹೆಂಡತಿಯು ಕುಷ್ಠ ರೋಗದಿಂದ ಪೀಡಿತಳಾಗಿರಲಿ, ಅಥವಾ ಈ ಬಗೆಯ ಮತ್ತಾವುದೋ ರೋಗದಿಂದ ನರಳುತ್ತ ಆವ ತೆರದಿಂದಲೂ ಸಂಸಾರ ಧರ್ಮದಲ್ಲಿ ಸಹಾಯವನ್ನು ಮಾಡಲಾರದವಳಾಗಿರುವಾಗ ದಾರಾಂತರ ಪರಿಗ್ರಹವು ಪಾಪವೆಂದು ನಾನರಿಯೆ. ಹೆಂಡತಿಯು ಧರ್ಮಭ್ರಷ್ಟಳಾಗಿ ಕುಲಕಳಂಕಿನಿಯಾಗಿರಲು ನ್ಯಾಯಸ್ಥಾನಕ್ಕೆ ಹೋಗದೆಯೇ ಎರಡನೆಯ ಸಲ ಯಾವನೂ ಮದುವೆಯಾಗಬಾರದೆಂಬ ನಿಯಮದ ಸಾಮಂಜಸ್ಯವು ನನ್ನ ಕ್ಷುದ್ರಬುದ್ಧಿಗೆ ಅಷ್ಟೇನೂ ಹೆಚ್ಚಿನದಾಗಿ ತೋರುವುದಿಲ್ಲ. ನ್ಯಾಯಸ್ಥಾನದಲ್ಲಿ ಗೌರವ ಬಳೆಯುವುದಕ್ಕೆ ಉದಾಹರಣೆಗಳು ನಮ್ಮ ಸಭ್ಯತರ ಸಮಾಜದಲ್ಲಿ ಸಿಕ್ಕುತಲೇ ಇರುತ್ತವೆ.

ಉತ್ತರಾಧಿಕಾರಿಯನ್ನು ಪಡೆಯಲೇ ಬೇಕಾಗಿರುವ ಹೆಂಡತಿಯು ಬಂಜೆಯಾಗಿರಲು ಬೇರೇ ಮದುವೆಯನ್ನು ಮಾಡಿಕೊಳ್ಳಬಾರದ್ದು ಏಕೋ ನಾನು ಕಾಣೆ! ಯೂರೋಪು—ಯೆಹೂದ್ಯನ ಹತ್ತಿರ—ಆವ ಅವಸ್ಥೆಯಲ್ಲಿಯೂ ದಾರಾಂತರ ಪರಿಗ್ರಹಣವು ಕೂಡದೆಂದು ಕಲಿತುಕೊಂಡಿರುವುದು. ಯೂರೋಪು ಈ ಕುಶಿಕ್ಷಣೆಯಲ್ಲಿ ಮುಳುಗದೇ ಇದ್ದರೆ ಜೋಸೆಫೈನ್ ಎಂಬಾಕೆಯ ಪರಿತ್ಯಾಗವೆಂಬ ಘೋರನರಕ ಪಾತಕಕ್ಕೆ ಬೋನೋಪಾರ್ಟನು ಬಿದ್ದು ಪತಿತನಾಗಬೇಕಾದುದಿರಲಿಲ್ಲ.

ಎಂಟನೆಯ ಹೆನ್ರಿಯು ಮಾತು ಮಾತಿಗೂ ಪತ್ನೀಹತ್ಯಮಾಡಬೇಕಾದುದೂ ಇರಲಿಲ್ಲ. ಯೂರೋಪಿನಲ್ಲಿ ಸಭ್ಯತೆಯ ಉಜ್ವಲವಾದ ಬೆಳಕಿನಲ್ಲಿ ಇನ್ನೂ ಈಗಲೂ ಇದೇ ಕಾರಣದಿಂದ ಅನೇಕ ಪತ್ನೀಹತ್ಯಗಳೂ ಪತಿಹತ್ಯಗಳೂ ನಡೆಯುತ್ತಿರುವುವು. ನಮ್ಮ ಶಿಕ್ಷಿತ ಸಂಪ್ರದಾಯದವರಲ್ಲಿ ವಿಲಾಯತಿಯಲ್ಲಿ ಎಂತೋ ಅಂತೆಯೇ ಪವಿತ್ರವೂ, ಶ್ರೇಷ್ಠವೂ, ದೋಷಶೂನ್ಯವೂ, ಮೇಲೆ ಕೆಳಗೆ ೧೪ ತಲೆಗಳ ಉದ್ಧಾರಕ್ಕೆ ಕಾರಣವೂ ಎಂತ ನಂಬುಗೆ ಇರಬಹುದು. ಆದರೆ ನಾನಾದರೆ ವಿಲಾಯತಿಯವರಿಂದ ನಾವು ಕಲಿತುಕೊಳ್ಳಬೇಕಾದದ್ದು ಅನೇಕವಿವೆ; ನಮ್ಮಿಂದಲೂ ವಿಲಾಯತಿಯವರು ಕಲಿಯಬೇಕಾದ್ದು ಹಲವಿವೆ ಎಂದು ನಂಬಿದ್ದೇನೆ. ಈ ಪೈಕಿ ಈ ವಿವಾಹ ತತ್ತ್ವವನ್ನು ಅವರು ನಮ್ಮಿಂದ ಕಲಿತುಕೊಳ್ಳಬೇಕಾದ್ದು.

ಕೃಷ್ಣನು ಒಂದಕ್ಕಿಂತ ಹೆಚ್ಚಾಗಿ ಮದುವೆಯನ್ನು ಮಾಡಿಕೊಂಡಿದ್ದನೋ ಇಲ್ಲವೋ ಎಂಬುದಕ್ಕೆ ಗಣ್ಯವಾದ ಪ್ರಮಾಣವಾವುದೂ ಇಲ್ಲವೆಂಬುದನ್ನೇನೋ ನೋಡಿದ್ದಾಯಿತು. ಒಂದುವೇಳೆ ಮಾಡಿಕೊಂಡಿದ್ದರೆ ಏತಕ್ಕೆ ಮಾಡಿಕೊಂಡಿದ್ದನು ಎಂಬುದಕ್ಕೆ ನಂಬಬಹುದಾದ ಇತಿವೃತ್ತವಿರುವುದಿಲ್ಲ. ಸ್ಯಮಂತಕಮಣಿಯನ್ನು ಕೊಟ್ಟಾಗ ಅದರ ಜತೆಗೆ ಕನ್ಯಾರತ್ನವನ್ನೂ ಕೊಟ್ಟನೆಂಬುದು ಅಜ್ಜಿಗೆ ತಕ್ಕುದಾದ ಕಥೆ. ನರಕರಾಜನಿಗೆ ಹದಿನಾರುಸಾವಿರ ಮಕ್ಕಳು ಎಂಬುದು ಮುತ್ತಜ್ಜಿಯ ಉಪಕಥೆ. ನಾವು ಕೇಳಿ ಆನಂದವನ್ನೇನೋ ಅನುಭವಿಸಿದೆವು, ಆದರೆ ನಂಬಲಾರೆವು.

— ತೃತೀಯ ಖಂಡ ಸಂಪೂರ್ಣ —

ಚತುರ್ಥ ಖಂಡ

ಇಂದ್ರ ಪ್ರಸ್ಥ

ಅಕುಂಠಂ ಸರ್ವಕಾರ್ಯೇಷು ಧರ್ಮಕಾರ್ಯಾರ್ಥಮುದ್ಯತಂ ।
ವೈಕುಂಠಸ್ಯ ಚ ಯದ್ರೂಪಂ ತಸ್ಮೈ ಕಾರ್ಯಾತ್ಮನೇ ನಮಃ ॥

ಶಾಂತಿಪರ್ವ, ಅಧ್ಯಾಯ ೪೭

ಪ್ರಥಮ ಪರಿಚ್ಛೇದ

ದ್ರೌಪದೀ ಸ್ವಯಂವರ

ಮಹಾಭಾರತಲ್ಲಿರುವ ಕೃಷ್ಣ ಕಥೆಯಲ್ಲಿ ಮೌಲಿಕವೂ ವಿಶ್ವಾಸ ಯೋಗ್ಯವೂ ಆದುದಾವುದೆಂಬುದನ್ನು ಗೊತ್ತುಮಾಡಿಕೊಳ್ಳುವುದಕ್ಕಾಗಿ ಪ್ರಥಮ ಖಂಡದಲ್ಲಿ ನಾವು ಸ್ಥಾಪಿಸಿಕೊಂಡ ನಿಯಮಗಳೆಲ್ಲವನ್ನೂ ಪಾಠಕರು ಮನಸ್ಸಿಗೆ ತಂದುಕೊಳ್ಳಬೇಕೆಂದು ಬೇಡುವೆವು.

ಮಹಾಭಾರತದಲ್ಲಿ ಕೃಷ್ಣನನ್ನು ಮೊಟ್ಟಮೊದಲು ದ್ರೌಪದೀ ಸ್ವಯಂವರದಲ್ಲಿ ಕಾಣುವೆವು. ನನ್ನ ವಿವೇಚನೆಯಲ್ಲಿ ಈ ಅಂಶದ ಮೌಲಿಕತೆಯ ವಿಷಯದಲ್ಲಿ ಸಂಶಯಪಡಲು ಕಾರಣವಿಲ್ಲವೆಂದು ತೋರುವುದು. ಪಾಂಚಾಲದೇಶದ ಐದು ಪಂಗಡಗಳ ಒಟ್ಟುಕೂಡಿದ್ದರ ಸ್ವರೂಪವೇ 'ಪಾಂಚಾಲಿ' ಎಂದು ಲಾಸನ್ ಸಾಹೇಬರು ದ್ರೌಪದಿಯ ಮನುಷ್ಯತ್ವವನ್ನೇ ಹಾರಿಸಿಬಿಟ್ಟಿರುವುದನ್ನು ಮೊದಲೇ ತಿಳಿಸಿರುವೆನು. ಯಜ್ಞದ ಅಗ್ನಿಯಿಂದ ದ್ರುಪದನು ಮಗಳನ್ನು ಪಡೆದದ್ದನ್ನೂ, ಇವಳಿಗೆ ಗಂಡಂದಿರು ಇದ್ದುದ್ದನ್ನೂ ನಾನು ನಂಬುವುದಿಲ್ಲ, ದ್ರುಪದನಿಗೆ ಔರಸ ಕನ್ಯೆಯೊಬ್ಬಳು ಇರುವುದು ಸಂಶಯಾಸ್ಪದವೇನೂ ಅಲ್ಲ. ಅವಳಿಗೆ ಸ್ವಯಂವರವಾದುದೂ ಆ ಸ್ವಯಂವರದಲ್ಲಿ ಅರ್ಜುನನು ಲಕ್ಷ್ಯವನ್ನು ಭೇದಿಸಿದನೆಂಬುದೂ ನಿಜವೇ. ಇದರ ಮೇಲೆ ಅವಳಿಗೆ ಗಂಡಂದಿರು

ಐವರಾದರೋ ಅಥವಾ ಒಬ್ಬನೇಯೋ ಎಂಬುದನ್ನು ಗೊತ್ತುಮಾಡುವುದರಿಂದ ನಮಗೆ ಪ್ರಯೋಜನವಿಲ್ಲ. *

ಕೃಷ್ಣನು ಮಹಾಭಾರತದಲ್ಲಿ ಮೊಟ್ಟಮೊದಲು ದ್ರೌಪದೀ ಸ್ವಯಂವರದಲ್ಲಿ ಕಾಣುವನು. ಅಲ್ಲಿ ಇವನ ದೇವತ್ವವಾವುದೂ ಸೂಚಿತವಾಗಿಲ್ಲ. ಇತರ ಕ್ಷತ್ರಿಯರಂತೆ ಯಾದವರೊಡನೆ ಇವನೂ ಕರೆಯಲ್ಪಟ್ಟವನಾಗಿ ಪಾಂಚಾಲ ನಗರಕ್ಕೆ ಬಂದಿರುವನು. ದ್ರೌಪದಿಯನ್ನು ಹೊಂದಬೇಕೆಂದು ಇತರ ಕ್ಷತ್ರಿಯರು ಲಕ್ಷ್ಯವನ್ನು ಭೇದಿಸಲೆತ್ನಿಸಿದರು. ಯಾದವರಾರೂ ಈ ಕೆಲಸಕ್ಕೆ ಕೈಯಿಕ್ಕಲಿಲ್ಲ.

ಪಾಂಡವರು ಈ ಸಭೆಯಲ್ಲಿ ಇದ್ದರೂ ಕರೆಸಿಕೊಂಡು ಬಂದಿರಲಿಲ್ಲ. ದುರ್ಯೋಧನನು ಇವರನ್ನು ಕೊಲ್ಲಲುಜ್ಜುಗಿಸಿದ್ದನಾದದ್ದರಿಂದ ಅವರು ಆತ್ಮಸಂರಕ್ಷಣಾರ್ಥವಾಗಿ ವೇಷವನ್ನು ಮರೆಯಿಸಿಕೊಂಡು ಕಾಡುಮೇಡುಗಳಲ್ಲಿ ಅಲೆಯುತ್ತಲಿದ್ದು ದ್ರೌಪದೀ ಸ್ವಯಂವರ ವಾರ್ತೆಯನ್ನು ಕೇಳಿ ಅಲ್ಲಿಗೆ ಬಂದರು.

ಅಲ್ಲಿ ನೆರದಿದ್ದ ಬ್ರಹ್ಮ ಕ್ಷತ್ರಿಯರೊಳಗೆ ಕೃಷ್ಣನು ಮಾತ್ರವೇ ಛದ್ಮವೇಷಧಾರಿಗಳಾದ ಪಾಂಡವರನ್ನು ಗುರುತಿಸಿದನು. ಆದರೆ ಇದು ದೈವಶಕ್ತಿಯ ಪ್ರಭಾವದಿಂದಲೂ ಇಂಗಿತದಿಂದಲೂ ಅಲ್ಲ. ಮನುಷ್ಯ ಬುದ್ಧಿಯಿಂದಲೇ ತಿಳಿದನೆಂಬುದು ಅವನ ಮಾತಿನಿಂದಲೇ ವ್ಯಕ್ತವಾಗುವುದು. ಬಲದೇವನನ್ನು ಕುರಿತು ಶ್ರೀಕೃಷ್ಣನು—“ಅಣ್ಣಾ! ಈ ವಿಶಾಲವಾದ ಶರಾಸನವನ್ನು ಸೆಳೆಯುತ್ತಿರುವವನು ಅರ್ಜುನನೇ, ಇದಕ್ಕೆ ಸಂಶಯವಿಲ್ಲ. ಬಾಹುಬಲದಿಂದ ವೃಕ್ಷವನ್ನು ಬುಡಸಹಿತ ಕಿತ್ತುಕೊಂಡು ನಿರ್ಭಯನಾಗಿ ರಾಜಮಂಡಲಿಯಮೇಲೆ ಬೀಳುತ್ತಿರುವವನು ವೃಕೋದರನು............ಇತ್ಯಾದಿ.” ಇದಾದಮೇಲೆ ಪರಸ್ಪರ ಪರಿಚಯ

---

* ವ್ಯಾಸರು ಮಹಾಭಾರತದ ಪರ್ವಸಂಗ್ರಹಾಧ್ಯಾಯದಲ್ಲಿನ ಅನುಕ್ರಮಣಿಕಾಧ್ಯಾಯದ ೧೫೦ ಶ್ಲೋಕಗಳಲ್ಲಿ ಮಹಾಭಾರತದ ಸಂಕ್ಷೇಪ ವೃತ್ತಾಂತವನ್ನು ಉದಾಹರಿಸಿರುವರೆಂದು ಮೊದಲೇ ತಿಳಿಸಿರುವೆನು. ಈ ಅನುಕ್ರಮಣಿಕೆಯ ಸಂಕ್ಷೇಪ ವಿವರಣೆಯಲ್ಲಿ ದ್ರೌಪದೀ ಸ್ವಯಂವರ ವಿಷಯವಿರುವುದು; ಆದರೆ ಇವಳಿಗೆ ಪಂಚ ಪಾಂಡವರೊಡನೆ ಉದ್ವಾಹ ಬೆಳೆಯಿತೆಂಬ ವಿಷಯವಿಲ್ಲ. ಅರ್ಜುನನೇ ಇವಳನ್ನು ಪಡೆದುಕೊಂಡನೆಂದಿರುವುದು.

ಸಮವಾಯೇ ತತೋ ರಾಜ್ಞಾಂ ಕನ್ಯಾಂ ಭರ್ತೃಃ ಸ್ವಯಂವರಮ್ ।
ಪ್ರಾಪ್ತವಾನರ್ಜುನಃ ಕೃಷ್ಣಾಂ ಕೃತ್ವಾ ಕರ್ಮ ಸುದುಷ್ಕರಮ್ ॥ ೧೨೫ ॥

ಮಾಡಿಕೊಂಡನಂತರ ಯುಧಿಷ್ಠಿರನು — "ನಮ್ಮನ್ನು ನೀನು ಹೇಗೆ ಗುರುತಿಸಿದೆ?" ಎನ್ನಲು, ಕೃಷ್ಣನು ಬೂದಿ ಕವಿದ ಬೆಂಕಿ ಅಡಗಿರುವುದುಂಟೆ? ಎಂದನು. ಪಾಂಡವರನ್ನು ಆ ಛದ್ಮವೇಷದಲ್ಲಿ ತಿಳಿಯುವುದು ಬಹಳ ಕಷ್ಟವಾಗಿತ್ತು; ಮತ್ತಾರೂ ಅವರನ್ನು ಗುರುತಿಸಲಿಲ್ಲವೆಂಬುದೇ ಆಶ್ಚರ್ಯ. ಸ್ವಾಭಾವಿಕವಾದ ಮನುಷ್ಯ ಬುದ್ಧಿಯಿಂದ ಕೃಷ್ಣನು ಮಾತ್ರ ಗುರುತಿಸಿದನು. ಇದರಿಂದ ಇತರ ಜನಗಳಿಗಿಂತ ಕೃಷ್ಣನ ಬುದ್ಧಿ ತೀಕ್ಷ್ಣವಾದುದೆಂದು ತಿಳಿಯಬರುವುದು.

ಹೀಗೆಂದು ಮಹಾಭಾರತಕಾರನು ಪರಿಷ್ಕಾರವಾಗಿ ಒಂದೆಡೆಯಲ್ಲಿಯೂ ಹೇಳಿಲ್ಲವಾದರೂ, ಕೃಷ್ಣನು ಕಾರ್ಯಗಳನ್ನು ಪ್ರತಿಯೊಂದೆಡೆಯಲ್ಲಿಯೂ ಮನುಷ್ಯ ಬುದ್ಧಿಯಿಂದಲೇ ಸಾಧಿಸಿರುವನು. ಇದರಿಂದ ಕೃಷ್ಣನು ಎಲ್ಲರಿಗಿಂತಲೂ ಹೆಚ್ಚಾದ ತೀಕ್ಷ್ಣ ಬುದ್ಧಿಯುಳ್ಳವನೆಂದು ಕಾಣಬರುವುದಲ್ಲದೆ ಮತ್ತೇನೂ ಇಲ್ಲ. ಇತರ ವೃತ್ತಿಗಳಲ್ಲಿ ಹೇಗೋ ಹಾಗೆಯೇ ಬುದ್ಧಿಯಲ್ಲಿಯೂ ಇವನು ಆದರ್ಶ ಮನುಷ್ಯನು.

ಪರಂತು, ಅರ್ಜುನನು ಲಕ್ಷ್ಯವನ್ನು ಕೆಡಹಿದ ಬಳಿಕ ಅಲ್ಲಿ ನೆರೆದಿದ್ದ ರಾಜರೊಡನೆ ದೊಡ್ಡ ಜಗಳವೊಂದೆದ್ದಿತು. ಅರ್ಜುನನು ಭಿಕ್ಷುಕರಾದ ಬ್ರಾಹ್ಮಣರ ವೇಷವನ್ನು ಧರಿಸಿದ್ದನು. ಆವನೋ ಒಬ್ಬ ಬಡ ಬಿಕಾರಿ ಬ್ರಾಹ್ಮಣನು ರಾಜಾಧಿರಾಜರ ಬಾಯತುತ್ತನ್ನು ಕಸಿದುಕೊಳ್ಳುವುದೆಂದರೇನು? ರಾಜನ್ಯರುಗಳೆಲ್ಲ ಅರ್ಜುನನ ಮೇಲೆ ಬಿದ್ದು ಎಷ್ಟೆಷ್ಟು ಮಟ್ಟಿಗೆ ಕಾದಿದರೊ ಅಷ್ಟರಮಟ್ಟಿಗೂ ಅರ್ಜುನನೇ ಜಯಶಾಲಿಯಾಗಿದ್ದನು. ಈ ವಿವಾದವು ಕೃಷ್ಣನ ಮಾತಿನ ಮೇಲೆ ಅಡಗಿತು. ಮಹಾಭಾರತದಲ್ಲಿ ಕೃಷ್ಣನ ಮೊದಲ ಕೆಲಸ ಇಷ್ಟೇ. ಅವನು ಹೇಗೆ ಈ ಜಗಳವನ್ನು ಅಡಗಿಸಿದನೆಂಬುದನ್ನು ತಿಳಿಸುವುದೇ ನಮ್ಮ ಉದ್ದೇಶ. ಜಗಳವನ್ನಡಗಿಸುವುದಕ್ಕೆ ಹಲವು ಉಪಾಯಗಳಿದ್ದುವು. ತಾನು ಸ್ವತಃ ಪ್ರಖ್ಯಾತನಾದ ವೀರನು; ಬೆಂಬಲಕ್ಕೆ ಬಲದೇವ, ಸಾತ್ಯಕಿ ಮೊದಲಾದ ಅದ್ವಿತೀಯ ವೀರರುಗಳಿದ್ದರು. ಅರ್ಜುನನು ತನ್ನ ತಂದೆಯ ತಂಗಿಯ ಮಗನಾದುದರಿಂದ ತನ್ನವನು. ಯಾದವರೊಡನೆ ತಾನು ಸಮರಕ್ಷೇತ್ರಕ್ಕೆ ಇಳಿದೊಡನೆಯೇ ಜಗಳ ಅಡಗಿಹೋಗುವಂತೆ ಇತ್ತು. ~~ಕೃಷ್ಣ~~ನು ಇದನ್ನೇ ಮಾಡಿದನು.
ಕೃಷ್ಣ

ಆದರ್ಶ ಧಾರ್ಮಿಕನಾದ ಕೃಷ್ಣನಾದರೋ ಕದನವಿಲ್ಲದೆ ಆಗಬಹುದಾ ದಂಥಾದ್ದರ ವಿಷಯದಲ್ಲಿ ಎಂದಿಗೂ ಯುದ್ಧಕ್ಕೆ ಪ್ರವರ್ತಿಸನು. ಮಹಾ ಭಾರತದಲ್ಲೆಲ್ಲಿಯಾದರೂ ಸರಿಯೆ ಕೃಷ್ಣನು ಧರ್ಮಾರ್ಥಕ್ಕಲ್ಲದೆ ಮತ್ತಾವ ನಿಮಿತ್ತಕ್ಕೂ ಯುದ್ಧಕ್ಕೆ ಪ್ರವರ್ತಿಸಿರುವುದಿಲ್ಲ. ಆತ್ಮರಕ್ಷಣಾರ್ಥವಾಗಿ ಯಾಗಲಿ, ಪರರನ್ನು ರಕ್ಷಿಸುವುದಕ್ಕಾಗಿಯಾಗಲಿ ಯುದ್ಧಮಾಡದೇ ಇರೋಣ ಪರಮ ಅಧರ್ಮವಾಗುತ್ತದೆ. ನಾವು ಹಿಂದುಗಳು. ಈಗ ಏಳು ಶತಮಾನ ಗಳಿಂದಲೂ ಆ ಅಧರ್ಮದ ಫಲವನ್ನು ಉಣ್ಣುತ್ತಲಿದ್ದೇವೆ. ಕೃಷ್ಣನು ಇತರ ಕಾರಣಗಳಿಗಾಗಿ ಯುದ್ಧವನ್ನು ಮಾಡಲೇ ಇಲ್ಲ. ಮತ್ತು ಧರ್ಮಸ್ಥಾಪನೆ ಗೋಸ್ಕರ ಮಾಡುವ ಯುದ್ಧಕ್ಕೆ ಅವನಲ್ಲಿ ಅಡ್ಡಿಯೂ ಇರಲಿಲ್ಲ. ಯುದ್ಧ ವಿಲ್ಲದೆ ಎಲ್ಲಿ ಧರ್ಮೋನ್ನತಿ ಆಗದೋ ಅಂಥ ಕಡೆಯಲ್ಲಿ ಯುದ್ಧಕ್ಕೆ ಹಿಂಜರಿ ಯುವುದು ಅಧರ್ಮ. ಕೇವಲ ಕಾಶಿರಾಮದಾಸನೋ ಅಥವಾ ಹರಿಕಥೆ ಆಚಾರ್ಯರೋ ಹೇಳಿದ ಮಹಾಭಾರತವೇ ಯಾರಿಗೆ ಪ್ರಮಾಣವೋ ಮತ್ತು ಯಾರಿಗಾದರೆ ಇದರಲ್ಲೇ ವಿಶ್ವಾಸವೋ ಅಂಥವರು ಕೃಷ್ಣನು ಸಕಲ ಯುದ್ಧ ಗಳಿಗೂ ಮೂಲನೆಂದು ತಿಳಿದುಕೊಂಡಿರುತ್ತಾರೆ. ಮೂಲ ಮಹಾಭಾರತ ವನ್ನು ಬುದ್ಧಿಪೂರ್ವಕವಾಗಿ ಓದಿದ್ದಾದರೆ ಇಂಥ ವಿಶ್ವಾಸ ಮೂಡದು. ಆಗ್ಗೆ ಧರ್ಮಾರ್ಥ ವಿನಾ ಕೃಷ್ಣನು ಎಂದೂ ಯಾರಿಗೂ ಯುದ್ಧಕ್ಕೆ ಪ್ರೋತ್ಸಾಹ ಕೊಡಲಿಲ್ಲ; ತಾನೂ ಧರ್ಮಾರ್ಥದ ವಿನಾ ಯುದ್ಧವನ್ನು ಮಾಡಲಿಲ್ಲ ಎಂಬುದು ಚೆನ್ನಾಗಿ ತಿಳಿಯುತ್ತದೆ.

ಇಲ್ಲಿ ಕೃಷ್ಣನು ಯುದ್ಧದ ಗಂಧವನ್ನೇ ಮನಸ್ಸಿಗೆ ಹಚ್ಚಿಕೊಳ್ಳ ಲಿಲ್ಲ. ಅವನು ಕಾದುತ್ತಿರುವ ಭೂಪಾಲರ ಸಮೂಹವನ್ನು ಕುರಿತು “ಎಲೈ ನರಪತಿಗಳಿರಾ, ಇವನು ರಾಜಕುಮಾರಿಯನ್ನು ಧರ್ಮತಃ ಪಡೆದುಕೊಂಡಿರುವನು. ನೀವು ಶಾಂತರಾಗಿ, ಯುದ್ಧದಿಂದ ಇನ್ನು ಪ್ರಯೋಜನವಿಲ್ಲ.” ಧರ್ಮತಃ,—ಎಂದರೆ, ಧರ್ಮದ ಮಾತೇ ಇದುವರೆಗೂ ಯಾರಿಗೂ ಹೊಳೆದಿರಲಿಲ್ಲ. ಆಗಿನ ಕಾಲದ ಕ್ಷತ್ರಿಯ ರಾಜರುಗಳು ಧರ್ಮಭೀತರಾಗಿದ್ದರು. ರುಚಿಪೂರ್ವಕವಾಗಿ ಎಂದಿಗೂ ಅಧರ್ಮದಲ್ಲಿ ಪ್ರವೃತ್ತರಾಗುತ್ತಿರಲಿಲ್ಲ. ಈ ಸಮಯದಲ್ಲಾದರೋ ರಾಗಾಂಧರಾಗಿ ಧರ್ಮದ ಮಾತನ್ನೇ ಮರೆತುಹೋಗಿದ್ದರೂ ಪ್ರಕೃತ ಧರ್ಮಾತ್ಮನೂ

ಧರ್ಮವೃದ್ಧಿಗಾಗಿಯೇ ಜೀವನವೆತ್ತಿದವನೂ ಈ ವಿಷಯದಲ್ಲಿ ಧರ್ಮವು ಯಾರ ಪಕ್ಷದಲ್ಲೆಂಬುದನ್ನು ಮರೆಯನು. ಧರ್ಮವನ್ನು ಮರೆತವರಿಗೆ ಎಚ್ಚರಿಕೆಯನ್ನು ಕೊಟ್ಟು ಧರ್ಮಸ್ವರೂಪವನ್ನರಿಯದವರಿಗೆ ಧರ್ಮ ಸ್ವರೂಪವನ್ನು ತಿಳಿಸುವುದೇ ಅವನ ಕರ್ತವ್ಯ.

ರಾಜರುಗಳನ್ನು ಕುರಿತು ಇವನು ರಾಜಕುಮಾರಿಯನ್ನು ಧರ್ಮತಃ ಪಡೆದುಕೊಂಡಿರಲು, ಇನ್ನು ಯುದ್ಧದಿಂದ ಪ್ರಯೋಜನವಿಲ್ಲವೆಂದು ಶ್ರೀಕೃಷ್ಣನು ಹೇಳಿದನು. ಈ ಮಾತನ್ನು ಕೇಳಿ ರಾಜರು ಹಿಮ್ಮೆಟ್ಟಿದರು. ಯುದ್ಧವೂ ಮುಗಿಯಿತು. ಪಾಂಡವರು ಸ್ವಸ್ಥಾನಕ್ಕೆ ಹೊರಟುಹೋದರು. ಈಗ ಇಲ್ಲಿ ತಿಳಿಯುವುದೇನೆಂದರೆ, ಅವನೋ ಒಬ್ಬ ಬಣಗುಪೋರನು ಗರ್ವಿತರಾದ ರಾಜರುಗಳಿಗೆ ಧರ್ಮದ ಮಾತನ್ನು ಜ್ಞಾಪಿಸಿಕೊಟ್ಟಿದ್ದರೆ ಅದರಿಂದ ಇವರು ಎಂದಿಗೂ ಯುದ್ಧವನ್ನು ಬಿಡುತ್ತಿರಲಿಲ್ಲ. ಧರ್ಮದ ಮಾತನ್ನೆಚ್ಚರಿಸಿದವನು ಮಹಾಬಲಶಾಲಿ ಮತ್ತು ಗೌರವಾನ್ವಿತನು. ಅವನು ಜ್ಞಾನ, ಧರ್ಮ ಮತ್ತು ಬಾಹುಬಲದಲ್ಲಿ ಎಲ್ಲರಿಗೂ ಮುಂದಾಳಾಗಿದ್ದನು. ಸಮಸ್ತ ವೃತ್ತಿಗಳನ್ನೂ ಸಂಪೂರ್ಣವಾಗಿ ಅನುಶೀಲನ ಮಾಡಿದ್ದನು. ಇದರ ಫಲವೇ ಈ ಪ್ರಧಾನತೆ. ಸಕಲ ವೃತ್ತಿಗಳೂ ಅನು ಶೀಲಿತವಾಗದೇ ಹೋದರೆ ಇಂಥ ಫಲವುಂಟಾಗುವುದಿಲ್ಲ. ಈ ರೀತಿಯಾಗಿ ಶ್ರೀಕೃಷ್ಣ ಚರಿತ್ರೆಯ ಮೂಲಕ ಧರ್ಮತತ್ತ್ವ ಹೊರಹೊಮ್ಮುತಲಿದೆ.

ದ್ವಿತೀಯ ಪರಿಚ್ಛೇದ

ಕೃಷ್ಣ ಯುಧಿಷ್ಠಿರ ಸಂವಾದ

ಅರ್ಜುನನು ಲಕ್ಷ್ಯವನ್ನು ಭೇದಿಸಿ ರಾಜಸಮೂಹದೊಡನೆ ಯುದ್ಧ ಮಾಡಿ ಮುಗಿಸಿ ಅಣ್ಣತಮ್ಮಂದಿರನ್ನು ಕೂಡಿ ಆಶ್ರಮಕ್ಕೆ ಹೊರಟು ಹೋದನು ರಾಜರುಗಳು ತಂತಮ್ಮ ಬಿಡಾರಗಳಿಗೆ ತೆರಳತೊಡಗಿದರು. ಈಗ ಕೃಷ್ಣನು ಮಾಡಬೇಕಾದ ಕರ್ತವ್ಯವೇನು? ದ್ರೌಪದಿಯ ಸ್ವಯಂವರ

ಮುಗಿಯಿತು. ಉತ್ಸವ ಮೆರೆಯಿತು. ಕೃಷ್ಣನಿಗೆ ಪಾಂಚಾಲದಲ್ಲಿರಲು ಇನ್ನು ಯಾವ ಪ್ರಯೋಜನವೂ ಇರಲಿಲ್ಲ. ಈಗ ತನ್ನ ಊರಿಗೆ ಹಿಂದಿರುಗಿದ್ದರೆ ಆಗಿತ್ತು. ಇತರ ರಾಜರುಗಳು ಹಾಗೆಯೇ ಮಾಡಿದರು. ಕೃಷ್ಣನಾದರೆ ಹಾಗೆ ಮಾಡದೆ ಬಲದೇವನನ್ನೊಡಗೂಡಿ ಎಲ್ಲಿಯೋ ಭಾರ್ಗವನ ಆವಿಗೆಯ ಬಳಿಯಲ್ಲಿ ಬಿಕಾರಿಯ ವೇಷದಿಂದಿದ್ದ ಪಾಂಡವರ ವಸತಿಯನ್ನು ಗೊತ್ತು ಮಾಡಿ ಯುಧಿಷ್ಠಿರನನ್ನು ಸಂದರ್ಶಿಸಿದನು.

ಅಲ್ಲಿ ಅವನಿಗೆ ಕೆಲಸವೇನೂ ಇರಲಿಲ್ಲ. ಯುಧಿಷ್ಠಿರನೊಡನೆ ಪೂರ್ವದಲ್ಲಿ ಎಂದೂ ದರ್ಶನವೇ ಆಗಲಿ ಸಲ್ಲಾಪವೇ ಆಗಲಿ ನಡೆದಿರಲಿಲ್ಲ. ಏಕೆಂದರೆ, ಮಹಾಭಾರತಕಾರನೇ "ವಾಸುದೇವನು ಯುಧಿಷ್ಠಿರನಲ್ಲಿಗೆ ಹೋಗಿ ಅವನ ಕಾಲುಗಳಿಗೆ ನಮಸ್ಕಾರಮಾಡಿ ತನ್ನ ಪರಿಚಯವನ್ನು ಹೇಳಿಕೊಂಡನು" ಎಂದು ಹೇಳಿರುವನು. ತನ್ನ ಪರಿಚಯವನ್ನು ಹೇಳಿ ಕೊಳ್ಳಬೇಕಾದರೆ ಇದಕ್ಕೆ ಮುಂಚೆ ಪರಸ್ಪರ ಅವಲೋಕನವಾಗಲಿ ಸಲ್ಲಾಪ ವಾಗಲಿ ಇರಲಿಲ್ಲವೆಂದು ತಿಳಿಯಬೇಕಾಗುವುದು. ಕೃಷ್ಣ ಪಾಂಡವರ ಪರಸ್ಪರ ಪರಿಚಿತಿಗೆ ಇದೇ ಮೊದಲು. ಕೇವಲ ಮಾವನ ಮಕ್ಕಳೆಂದು ಕೃಷ್ಣನು ಅವರನ್ನು ಹುಡುಕಿ ಅವರ ಪರಿಚಯ ಮಾಡಿಕೊಂಡನು. ಈ ಕೆಲಸವು ಸಾಧಾರಣವಾಗಿ ಪ್ರಾಪಂಚಿಕ ವ್ಯವಹಾರಕ್ಕೆ ಅಷ್ಟೊಂದು ರೂಢಿಯಾದುದಲ್ಲ. ಲೋಕದಲ್ಲಿ ಈ ರೀತಿಯಾದ ರೂಢಿಯೇನೋ ಉಂಟಾದರೂ ಸೋದರಮಾವನು ದೊಡ್ಡ ರಾಜನೇ ಆಗಲಿ ಅಥವಾ ಐಶ್ವರ್ಯವಂತನೇ ಆಗಲಿ ಆಗಿದ್ದರೆ, ಅಂಥವರೊಡನೆ ತಮ್ಮ ಕಷ್ಟನಿಷ್ಠುರ ಗಳನ್ನು ಹೇಳಿಕೊಳ್ಳಲು ಜನರು ಬರುವುದುಂಟು. ಪಾಂಡವರಾದರೋ ಈಗ ಸಾಮಾನ್ಯ ಭಿಕ್ಷುಕರು. ಅವರನ್ನು ಕಾಣುವುದರಿಂದ ಕೃಷ್ಣನಿಗೆ ಯಾವ ಆಶೆಯೂ ಸಿದ್ಧಿಸುವಂತಿರಲಿಲ್ಲ. ಮಾತನಾಡಿಸಿ ಕೃಷ್ಣನು ಯಾವ ಲೌಕಿಕ ಪ್ರಯೋಜನವನ್ನಾಗಲಿ ಪಡೆದುಕೊಂಡಂತೆ ಕಾಣುವುದಿಲ್ಲ. ಆತನು ವಿನಯಪೂರ್ವಕವಾಗಿ ಯುಧಿಷ್ಠಿರನೊಡನೆ ಸಲ್ಲಾಪಮಾಡಿ ಅವರಿಗೆ ಮಂಗಳವನ್ನು ಕೋರಿ ಹಿಂದಿರುಗಿದನು. ಬಳಿಕ ಪಾಂಡವರಿಗೆ ವಿವಾಹ ನೆರವೇರುವವರೆಗೂ ಪಾಂಚಾಲದಲ್ಲಿ ತನ್ನ ಬಿಡಾರದಲ್ಲಿದ್ದನು. ಮದುವೆ ಯಾದಮೇಲೆ ಪಾಂಡವರಿಗೆ ಉಡುಗೊರೆಯ ರೂಪವಾಗಿ ವಿಚಿತ್ರವಾದ

ವೈಡೂರ್ಯ ಮಣಿಯನ್ನೂ, ಚಿನ್ನದ ಒಡವೆಗಳನ್ನೂ, ನಾನಾದೇಶದಿಂದ ತಂದ ಬಹು ಬೆಲೆಯಾದ ವಸನಗಳನ್ನೂ, ರಮಣೀಯವಾದ ತಲ್ಪಗಳನ್ನೂ, ವಿವಿಧ ಗೃಹೋಪಕರಣಗಳನ್ನೂ, ಬಹು ಸಂಖ್ಯೆಯ ದಾಸದಾಸೀ ಜನಗಳನ್ನೂ, ಸುಶಿಕ್ಷಿತವಾದ ಗಜಸಮೂಹಗಳನ್ನೂ, ಉತ್ಕೃಷ್ಟವಾದ ಘೋಟಕ (ಲಡಾಯಿಯ ಕುದುರೆ) ಪಂಕ್ತಿಗಳನ್ನೂ, ಅಸಂಖ್ಯಾತವಾದ ರಥಗಳನ್ನೂ, ಕೋಟಿ ಕೋಟಿ ರಜತ ಕಾಂಚನ ಸಾಮಗ್ರಿಗಳನ್ನೂ ತಂಡೋಪತಂಡವಾಗಿ ಕೃಷ್ಣನು ಕಳುಹಿಸಿಕೊಟ್ಟನು. ಇವಾವುವೂ ಪಾಂಡವರಿಗೆ ಆಗ ಇರಲಿಲ್ಲ. ಆಗ ಅವರು ಭಿಕ್ಷುಕರಾಗಿ ದುರವಸ್ಥೆಯಲ್ಲಿದ್ದರು. ಆದುದರಿಂದ ಈ ಸಮಸ್ತವೂ ಅವರಿಗೆ ವಿಶೇಷ ಪ್ರಯೋಜನಕಾರಿಗಳಾಗಿದ್ದವು. ಅವರು ರಾಜಕನ್ಯೆಯನ್ನು ಪಾಣಿಗ್ರಹಣಮಾಡಿ ಗೃಹಸ್ಥರಾಗಿದ್ದರು. ಯುಧಿಷ್ಠಿರನು ಕೃಷ್ಣನಿಂದ ಪ್ರೇರಿತವಾದ ದ್ರವ್ಯ ಸಾಮಗ್ರಿಗಳನ್ನೆಲ್ಲವನ್ನೂ ಆದರದಿಂದ ಸ್ವೀಕರಿಸಿದನು. ಕೃಷ್ಣನಾದರೋ ಪಾಂಡವರನ್ನು ಮರಳಿ ನೋಡದೆಯೇ ಯಥಾಸ್ಥಾನವನ್ನು ಕುರಿತು ತೆರಳಿದನು. ಇದಾದಮೇಲೆ ಪಾಂಡವರನ್ನು ಅವನು ಹುಡುಕಲಿಲ್ಲ. ಪಾಂಡವರು ತಮ್ಮ ರಾಜ್ಯಾರ್ಧಭಾಗವನ್ನು ಪಡೆದು ಇಂದ್ರಪ್ರಸ್ಥವನ್ನು ನಿರ್ಮಿಸಿ ರಾಜತ್ವವನ್ನು ನಡಸುತ್ತಿದ್ದರು. ತಿರಿಗೂ ಪಾಂಡವರೊಡನೆ ಕೃಷ್ಣನು ಹೇಗೆ ಸೇರಿದನೆಂಬುದನ್ನು ಮುಂದೆ ತಿಳಿಸುವೆವು.

ಯಾವನು ನಿಃಸ್ವಾರ್ಥ ಆಚರಣೆಯನ್ನು ಅನುಸರಿಸುತ್ತ ದುರವಸ್ಥೆಯಲ್ಲಿ ತೊಳಲುತ್ತಿರುವಂಥವರಿಗೆ ಹಿತವನ್ನುಂಟುಮಾಡುವುದೇ ತನ್ನ ಜೀವನದ ವ್ರತವೆಂದು ತಿಳಿದು ಆಚರಿಸಿದ್ದನೋ ಅಂಥವನ ವಿಷಯದಲ್ಲಿ ಪಾಶ್ಚಾತ್ಯರು ಬಾಯಿಂದಲೂ ಮತ್ತು ಅವರುಗಳ ಶಿಷ್ಯರಿಂದಲೂ ಕೃಷ್ಣನು ದುಷ್ಕಾರ್ಯಾಸಕ್ತನು, ದುರಭಿಸಂಧಿಯುಕ್ತನು, ಕ್ರೂರನು, ಮತ್ತು ಪಾಪಾಚಾರಿಯು ಎಂದು ಸ್ಥಿರಮಾಡಿರುವುದು ವಿಸ್ಮಯಕರವಾಗಿರುವುದು. ಐತಿಹಾಸಿಕ ತತ್ತ್ವವನ್ನು ಶೋಧಿಸಿ ತೆಗೆಯುವ ಶಕ್ತಿ ಅಥವಾ ಆ ವಿಷಯ ಶ್ರದ್ಧೆ ಮತ್ತು ಪ್ರಯತ್ನ ಇಲ್ಲದೆ ಇರುವಾಗ ಹೀಗೆಯೇ ಪರಿಣಮಿಸುವುದುಂಟು. ಅಸಲುಮಾತು ಏನೆಂದರೆ—ಆದರ್ಶಪುರುಷನ ಇತರೇ ಸದ್ವೃತ್ತಿಗಳಂತೆ ಪ್ರೀತಿವೃತ್ತಿಯೂ ಕೂಡ ಪೂರ್ಣವಿಕಸಿತವಾಗಿ ಸ್ಫೂರ್ತಿಯನ್ನು

ಪಡೆಯುವುವೇ ಸಂಭವ. ಯುಧಿಷ್ಠಿರನು ತಮ್ಮ ಕುಟುಂಬಕ್ಕೆ ಸೇರಿದವನು. ಕೃಷ್ಣನೊಡನೆ ಮೊದಲಿನಿಂದ ಇವನಿಗೆ ಮಾತು, ಕಥೆ, ಪ್ರೀತಿ, ಆತ್ಮೀಯತೆ ಮತ್ತು ತನ್ನವನು ಎಂಬ ಅಭಿಮಾನ ಇದ್ದಿದ್ದರೆ ಅವನು ಈಗ ನಡಸಿದ ನಡವಳಿಕೆಯು ಭದ್ರಜನೋಚಿತವಾದುದೆಂದು ಸುಮ್ಮನಾಗುತ್ತಿದ್ದನು. ವಿಶೇಷವಾಗಿ ಎತ್ತಿತೋರಿಸುವುದಕ್ಕೂ ಅಧಿಕಾರವಿರುತ್ತಿರಲಿಲ್ಲ. ಅಪರಿಚಿತನೂ ದರಿದ್ರನೂ ಮತ್ತು ಹೀನಾವಸ್ಥೆಯಲ್ಲಿರುವ ಬಂಧುವನ್ನು ಹುಡುಕಿ ತನ್ನ ಕೆಲಸಕ್ಕೆ ತೊಂದರೆ ತಂದುಕೊಂಡು ಅವರಿಗೆ ಉಪಕಾರವನ್ನು ಮಾಡುವಂಥವನ ಪ್ರೀತಿಯೇ ಆದರ್ಶಪ್ರೀತಿಯು. ಕೃಷ್ಣನ ಈ ಕಾರ್ಯವು ಬಲು ಸಣ್ಣದೇನೋ ಹೌದು. ಆದರೆ ಇಂಥಾ ಸಣ್ಣಸಣ್ಣ ಕಾರ್ಯಗಳಲ್ಲಿ ತಾನೇ ಮನುಷ್ಯನ ಚರಿತ್ರೆಯ ಯಥಾರ್ಥ ಪರಿಚಯವು ಸಿಕ್ಕುವುದು ? ತುಂಟನು ಮಹತ್ಕಾರ್ಯವೊಂದನ್ನು ಬಹು ಪ್ರಯಾಸಪಟ್ಟು ಮಾಡಬಹುದು ಅಥವಾ ಮಾಡಿಯೂ ಇರಬಹುದು. ಸಣ್ಣಸಣ್ಣ ಕಾರ್ಯಗಳಲ್ಲಿ ಕೂಡ ಧರ್ಮಾತ್ಮತೆಯ ಪರಿಚಯವನ್ನು ಹೊರಗೆಡುವವನಲ್ಲವೇ ನಿಜವಾದ ಧರ್ಮ ಪುರುಷನು ! ಆದುದರಿಂದಲೇ ನಾವು ಮಹಾಭಾರತದ * ಸಮಾಲೋಚನೆಯಲ್ಲಿ ಕೃಷ್ಣನು ಮಾಡಿದ ಸಣ್ಣ ಮತ್ತು ದೊಡ್ಡ ಎಂದರೆ ಸಮಸ್ತ ಕಾರ್ಯಗಳ ಶೋಧನೆಯಲ್ಲಿ ತೊಡಗಿರುವೆವು. ನಮ್ಮ ಈ ನಿಯಮಾನುಸಾರವಾಗಿಯೇ ಕೃಷ್ಣನನ್ನು ತಿಳಿದುಕೊಳ್ಳುವ ಪ್ರವೃತ್ತಿ ಬಲಪಡಲಿಲ್ಲವಲ್ಲಾ ಎಂಬುದೇ ನಮ್ಮ ದೌರ್ಭಾಗ್ಯ. ಹೀಗೆ ಮಾಡದೇ ಶ್ರೀ ಕೃಷ್ಣ ಚರಿತ್ರೆಯಲ್ಲಿ ಕೇವಲ "ಅಶ್ವತ್ಥಾಮೋ ಹತಃ ಕುಂಜರಃ" ಎಂಬುದನ್ನು ಮಟ್ಟಿಗೆ ಕಲಿತುಕೊಂಡಿದ್ದೇವೆ : ಎಂದರೆ, ಯಾವುದು ಸತ್ಯವೋ ಯಾವುದು ಐತಿಹಾಸಿಕವೋ ಅದನ್ನು ಹುಡುಕದೆ, ಯಾವುದು ಸುಳ್ಳೋ ಯಾವುದು ಕಲ್ಪಿತವೋ ಅದರ ಮೇಲೆಯೇ ನಮ್ಮ ಭಾರವನ್ನು ಬಿಟ್ಟಿರುವೆವು. ** "ಅಶ್ವತ್ಥಾಮೋ ಹತಃ ಕುಂಜರಃ" ಎಂಬುದು ಸುಳ್ಳು. ಇದನ್ನು ದ್ರೋಣಪರ್ವಾಧ್ಯಾಯದ ಸಮಾಲೋಚನೆಯ ಕಾಲದಲ್ಲಿ ತೋರಿಸುವೆವು.

---

* ಹರಿವಂಶ ಮತ್ತು ಪುರಾಣಗಳೆಲ್ಲವರಲ್ಲಿಯೂ ನಂಬಬಹುದಾದ ಅಂಶಗಳು ಸಿಕ್ಕುವುದಿಲ್ಲವೆಂದು ಹಿಂದೆ ಹೀಗೆ ಮಾಡಲಿಲ್ಲ.

** 'ಅಶ್ವತ್ಥಾಮೋ ಹತಃ ಕುಂಜರಃ' ಎಂಬುದು ಮಹಾಭಾರತದ ಮಾತೇ ಅಲ್ಲ. ಯಾರೋ ಕಥೆಯ ದಾಸರ ವಚನವಾಗಿರಬೇಕು.

ಈ ವೈವಾಹಿಕ ಪರ್ವದಲ್ಲಿ ಕೃಷ್ಣ ಸಂಬಂಧವಾಗಿ ಒಂದು ದೊಡ್ಡ ಅಪಹಾಸ್ಯದ ಮಾತು ವ್ಯಾಸೋಕ್ತವೆಂದು ಹೇಳಿದ್ದಾರೆ. ಇದು ನಮ್ಮ ಸಮಾಲೋಚನೆಯ ಅಂಶಗಳಲ್ಲಿ ಸೇರದೇ ಹೋಗಿದ್ದರೂ ಅದನ್ನು ಕೊಂಚ ಎತ್ತಿಹೇಳುವುದವಶ್ಯವೆಂದು ಇಲ್ಲಿ ತಿಳಿದಿರುವೆವು—ದ್ರುಪದರಾಜನು ಮಗಳಿಗೆ ಐವರು ಗಂಡಂದಿರಾಗುವರೆಂದು ಕೇಳಿ ಅಡ್ಡಿಯನ್ನೆಸಗಿರುವನು. ವ್ಯಾಸರು ಅವನ ಅಡ್ಡಿಯನ್ನು ಖಂಡಿಸಿರುವರು. ಈ ಖಂಡನ ವಿಷಯವಾಗಿ ದ್ರುಪದನಿಗೆ ಒಂದು ಉಪಾಖ್ಯಾನವನ್ನು ಉದಾಹರಿಸಿರುವರು. ಇದು ಬಹಳ ಅದ್ಭುತ ವ್ಯಾಪಾರ. ಇದರ ಮುಖ್ಯ ತಾತ್ಪರ್ಯವೇನೆಂದರೆ—ಇಂದ್ರನು ಒಂದು ದಿನ ಗಂಗಾನದಿಯ ತೀರದಲ್ಲಿ ಅಳುತ್ತಿರುವ ಸುಂದರಿಯೊರ್ವಳನ್ನು ಕಂಡನು. ಅವಳನ್ನು ಕುರಿತು ನೀನು ಅಳುವುದೇಕೆಂದು ಕೇಳಲು, ಇಲ್ಲಿ ಬರೋಣವಾಗಲಿ ತೋರಿಸುತ್ತೇನೆ ಎಂದು ಉತ್ತರವಿತ್ತು ಒಡನೆಯೇ ಆ ಇಂದ್ರನನ್ನು ಸಂಗಡ ಕರೆದುಕೊಂಡು ಒಬ್ಬ ಯುವಕನೂ ಯುವತಿಯೂ ಪಗಡೆಯಾಡುತ್ತಿರುವಲ್ಲಿಗೆ ಹೋದಳು. ಯುವಕ ಯುವತಿಯರು ಇಂದ್ರನಿಗೆ ಯೋಗ್ಯವಾದ ಸನ್ಮಾನವನ್ನು ಮಾಡದಿರಲು ಅವನಿಗೆ ಬಹಳ ಕೋಪಬಂದಿತು. ದಾಳವನ್ನು ಹಾಕುತ್ತಿದ್ದವನೇ ಸ್ವಯಂ ಮಹಾದೇವನು. ಇಂದ್ರನು ಕೋಪಗೊಂಡುದನ್ನು ಕಂಡು ಅವನನ್ನು ಕುರಿತು, ಒಂದು ಪೊಟ್ಟರೆಯೊಳಕ್ಕೆ ಪ್ರವೇಶಿಸುವಂತೆ ಅಪ್ಪಣೆಮಾಡಿದನು. ಇಂದ್ರನು ಒಳಪೊಕ್ಕು ನೋಡಲು ಅಲ್ಲಿ ತನ್ನಂತೆಯೇ ನಾಲ್ಕುಮಂದಿ ಇಂದ್ರರಿದ್ದರು. ಕೊನೆಗೆ ಮಹಾದೇವನು ಇಂದ್ರರೈವರನ್ನೂ ಕೂಗಿ ನೀವು ಪೃಥ್ವಿಯಲ್ಲಿ ಮನುಷ್ಯರಾಗಿರಿ ಎಂದು ಶಪಿಸಿದನು. ಈ ಪಂಚ ಇಂದ್ರದೇವತೆಗಳೇ ಹೋಗಿ ತಾವಾಗಿಯೇ ತಮ್ಮನ್ನು ಯಾವುದಾದರೂ ಮನುಷ್ಯ ಸ್ತ್ರೀಯಲ್ಲಿ ಹುಟ್ಟಲು ಅನುಜ್ಞೆಯನ್ನೀಯಬೇಕೆಂದು ಪ್ರಾರ್ಥಿಸಿದರು. ಆ ಐದು ಜನಗಳೇ (ಇಂದ್ರ ಮುಂತಾದವರು) ಔರಸರಾಗಿ ಪಂಚಪಾಂಡವರೆನಿಸಿದರು. ಅಪರಾಧವಿಲ್ಲದೆಯೇ ಇವರನ್ನು ಕರೆತಂದ ಸುಂದರಿಯು ಈ ಐವರಿಗೂ ಹೆಂಡತಿಯಾಗುವಂತೆ ಅನುಜ್ಞೆಮಾಡಿದನು. ಇವಳೇ ದ್ರೌಪದಿಯಾದಳು. ಇವಳು ಮೊದಲು ಅಳುತ್ತಿದ್ದಳಷ್ಟೆ, ಅದಕ್ಕೆ ಕಾರಣದ ಸುದ್ದಿಯೇ ಇಲ್ಲ. ಅಧಿಕತರವಾದ ರಹಸ್ಯ ವಿಷಯವೇನೆಂದರೆ, ನಾರಾಯಣನು ಈ ಮಾತನ್ನು

ಕೇಳಿದ ಮಾತ್ರಕ್ಕೇನೇ ತನ್ನ ತಲೆಯಿಂದ ಎರಡು ಕೂದಲುಗಳನ್ನು ಕಿತ್ತು ಬಿಸುಟನು. ಅದರಲ್ಲಿ ಒಂದು ಎಳೆಯದು, ಇನ್ನೊಂದು ಬಲಿತದ್ದು. ಬಲಿತದ್ದು ಬಲರಾಮನೂ, ಎಳೆಯದು ಕೃಷ್ಣನೂ ಆಗಿ ಜನ್ಮಿಸಿದರು! ಬುದ್ಧಿಮತಿಗಳಾದ ಪಾಠಕರಿಗೆ ಮಹಾಭಾರತದ ಮೂರನೆಯ ಸ್ತರವೆಂದು ತಿಳಿಸುವುದರಲ್ಲಿ ಈ ಉಪಾಖ್ಯಾನವು ಸೇರತಕ್ಕುದೆಂದು ಹೇಳಬೇಕಾಗಿಲ್ಲವು. ಇದು ಮಹಾಭಾರತದ ಯಾವ ಅಂಶವೂ ಅಲ್ಲ. ಮೊಟ್ಟಮೊದಲೇ ಉಪಾಖ್ಯಾನದ ರಚನೆ, ಘಟನೆ—ಇವು ಬಂಗಾಳೀ ದೇಶದ ಎಲ್ಲಕ್ಕೂ ಕೆಳಗಿನ ದರ್ಜೆಯ ಉಪನ್ಯಾಸಕಾರರ ರಚನೆಗಿಂತಲೂ ನಿಕೃಷ್ಟತರವಾದುದು. ಮಹಾಭಾರತದ ಪ್ರಥಮ ಮತ್ತು ದ್ವಿತೀಯ ಸ್ತರದ ಪ್ರತಿಭಾಶಾಲಿಗಳಾದ ಕವಿಗಳು ಇಂಥ ಉಪಾಖ್ಯಾನವನ್ನು ಸೃಷ್ಟಿಸುವಷ್ಟು ಪಾತಕಿಗಳಲ್ಲ. ದ್ವಿತೀಯತಃ—ಮಹಾಭಾರತದ ಇತರ ಅಂಶಗಳೊಡನೆ ಇದಕ್ಕೆ ಯಾವ ಪ್ರಯೋಜನವೂ ಸಂಬಂಧವೂ ಇಲ್ಲ. ಈ ಆಪತ್ತಿ ವ್ಯಾಸೋಕ್ತವಾದ ಎರಡನೆಯ ಉಪಾಖ್ಯಾನದಿಂದ ಖಂಡಿತವಾಗಿದೆ. ಈ ಎರಡನೆಯ ಉಪಾಖ್ಯಾನವೂ ಇದೇ ಅಧ್ಯಾಯದಲ್ಲೇ ಇದೆ. ಇದು ಸಂಕ್ಷೇಪವಾಗಿಯೂ ಸರಳವಾಗಿಯೂ ಆದಿ ಮಹಾಭಾರತದಲ್ಲಿ ಇದ್ದರೂ ಇರಬಹುದಾಗಿ ಕಾಣುತ್ತದೆ. ಮೇಲೆ ಹೇಳಿದ ಉಪಾಖ್ಯಾನವು ಇದಕ್ಕೆ ವ್ಯತಿರೇಕವಾದುದು. ಈ ಎರಡರಲ್ಲಿಯೂ ದ್ರೌಪದಿಯ ಪೂರ್ವಜನ್ಮದ ಬೇರೆ ಬೇರೆ ರೀತಿಯ ಪರಿಚಯವು ಸಿಕ್ಕುವುದು. ಇದರಲ್ಲಿ ಒಂದು ಶುದ್ಧಾಂಗವಾಗಿಯೂ ಪ್ರಕ್ಷಿಪ್ತವೆಂಬುದಕ್ಕೆ ಸಂದೇಹವೇ ಇಲ್ಲ. ಮತ್ತು ಮೇಲೆ ಹೇಳಿದ್ದೇ ಇದು ಆಗಿರಬೇಕೆಂದು ಸಿದ್ಧಾಂತಿಸಬೇಕು. ತೃತೀಯತಃ, ಮೇಲಿನ ಉಪಾಖ್ಯಾನವು ಮಹಾಭಾರತದ ಇತರ ಕಡೆಗಳಲ್ಲಿ ಹೇಳಿರುವ ಅಂಶಕ್ಕೆ ವ್ಯತಿರೇಕವಾಗಿದೆ. ಮಹಾಭಾರತದಲ್ಲೆಲ್ಲ ಇಂದ್ರನು ಒಬ್ಬನೇ ಎಂದು ಹೇಳಿದೆ. ಪಾಂಡವರು—ಧರ್ಮ, ವಾಯು, ಇಂದ್ರ, ಅಶ್ವಿನೀಕುಮಾರರ ಔರಸಪುತ್ರರು ಮಾತ್ರವೇ. ಇಲ್ಲಿಯಾದರೆ ಒಬ್ಬೊಬ್ಬರೂ ಒಂದೊಂದು ಇಂದ್ರರು. ಈ ವಿನೋದಕ್ಕೆ ಸಾಮಂಜಸ್ಯವನ್ನುಂಟುಮಾಡಬೇಕೆಂಬ ಉದ್ದೇಶದಿಂದ ಉಪಾಖ್ಯಾನವನ್ನು ನಿರ್ಮಿಸಿದ ಕಥಕನು ಮಹಾದೇವನಲ್ಲಿ ಇಂದ್ರಾದಿಗಳೇ ಬಂದು ನಮ್ಮನ್ನು ಮಾನುಷಗರ್ಭದಲ್ಲಿ ಸೃಜಿಸಲನುಜ್ಞೆ

ಯಾಗಬೇಕೆಂದು ಬೇಡಿಕೊಂಡರೆಂದು ಬರೆದಿರುವನು. ಜಗದ್ವಿಜಯಿಾ ಗ್ರಂಥವಾದ ಮಹಾಭಾರತ ಇಂತಹ ಕರ್ತೃಯ ಲೇಖಣಿಯಿಂದ ಹರಿದುದಲ್ಲ ವೆಂಬುದೇನೋ ನಿಶ್ಚಯ.

ಈ ನಂಬಬಾರದ ಉಪಾಖ್ಯಾನವನ್ನು ಇಲ್ಲಿ ಎತ್ತಿರುವುದಕ್ಕೆ ನಮ್ಮ ಮುಖ್ಯಾಶಯವೇನೆಂದರೆ: ಯಾವ ರಚನೆಯನ್ನು ಹಿಡಿದು ನಾವು ಮಹಾ ಭಾರತದಲ್ಲಿ ಮೂರುಬಗೆಯ ರಚನೆಯನ್ನು ವಿಂಗಡಿಸಿರುವೆವೋ ಅದನ್ನು ಉದಾಹರಣೆಯ ಮೂಲಕವಾಗಿ ಪಾಠಕರಿಗೆ ತಿಳಿಸಬೇಕೆಂಬುದೇ. ಅಲ್ಲದೆ ಒಂದು ಐತಿಹಾಸಿಕತತ್ತ್ವವೂ ಇದರ ಮೂಲಕ ಸ್ಪಷ್ಟವಾಗುತ್ತಲಿದೆ. ಯಾವ ವಿಷ್ಣು ವೇದದಲ್ಲಿ ಸೂರ್ಯನು ಮೂರ್ತಿವಿಶೇಷಮಾತ್ರನೋ, ಪುರಾಣೇತಿ ಹಾಸಗಳ ಉಚ್ಚಸ್ಥಾನದಲ್ಲಿ ಯಾವನು ಸರ್ವವ್ಯಾಪಕನಾದ ಈಶ್ವರನೋ, ಅಂಥವನು ಎಂತಹ ಪ್ರಕಾರವಾದ ಈಚಿನ ಪರಮಪಾತಕಿಗಳ ಕೈಯಲ್ಲಿ ಗಡ್ಡ, ಮಿಾಸೆ, ಎಳೆಗೂದಲು, ನರೆಗೂದಲು ಮುಂತಾದ ಐಶ್ವರ್ಯವನ್ನು ಪಡೆದುಕೊಂಡಿರುವನೆಂಬುದು ಈ ಪ್ರಕ್ಷಿಪ್ತ ಉಪಾಖ್ಯಾನದಿಂದ ತಿಳಿಯ ಲಾಗುವುದು. ಕೃಷ್ಣದ್ವೇಷಿಯಾದ ಶೈವನಾವನಿಂದಲೋ ಈ ಉಪಾಖ್ಯಾನ ರಚಿತವಾಗಿ ಮಹಾಭಾರತದಲ್ಲಿ ಪ್ರಕ್ಷಿಪ್ತವಾಗಿರಬೇಕೆಂದು ವಿವೇಚಿಸ ಬಹುದು. ಏಕೆಂದರೆ, ಇಲ್ಲಿ ಮಹಾದೇವನೇ ಸರ್ವನಿಯಾಮಕನು ಮತ್ತು ಕೃಷ್ಣನು ನಾರಾಯಣನ ಒಂದು ಕೂದಲು ಮಾತ್ರ. ಮಹಾಭಾರತ ವನ್ನಾಲೋಚಿಸುವಾಗ ಕೃಷ್ಣವಾದಿ ಮತ್ತು ಶೈವವಾದಿಗಳಿಗೆ ಈ ಬಗೆಯಾಗಿ ಬಗೆ ಬಗೆಯ ವಿವಾದದ ಗುರುತುಗಳು ಸಿಕ್ಕುವುವು. ಇಂತಹ ಚಿಹ್ನೆ ಗಳಿಂದೊಡಗೂಡಿದ ವಿಷಯಗಳು ಪ್ರಕ್ಷಿಪ್ತವೆಂದು ಹೇಳಲು ಕಾರಣ ಗಳಿರುವುವು. ಇದು ನಿಜವಾದರೆ, ಆದಿಮಹಾಭಾರತ ಪ್ರಚಾರವಾದ ಬಹಳ ದಿನಗಳ ಬಳಿಕ ಈ ವಿವಾದವುಂಟಾಗಿತ್ತೆಂದೂ ಶಿವೋಪಾಸನೆ ಕೃಷ್ಣೋಪಾಸನೆಗಳೆರಡೂ ಪ್ರಬಲವಾಗಿ, ಪರಸ್ಪರ ವಿವಾದ ಘೋರತರ ವಾಗಿತ್ತೆಂದೂ ತಿಳಿಯಬರುವುದು. ಮಹಾಭಾರತದ ಪ್ರಚಾರದ ಸಮಯ ದಲ್ಲಿಯೂ, ಅದರ ಬಳಿಕಣ ಸಮಿಾಪಕಾಲದಲ್ಲಿಯೂ, ಉಪಾಸನೆ ಇಷ್ಟು ಪ್ರಬಲತರವಾಗಿರಲಿಲ್ಲ. ಆಗ್ಗೆ ವೇದದ ದೇವತೆಗಳ ಪ್ರಬಲತೆಯ ಕಾಲ. ಯಾವಾಗ ಇವೆರಡೂ ಆದುವೋ (ವೇದ, ಪುರಾಣ) ಆಗ ವಿವಾದವು

ಅಂಕುರಿಸಿತು. ಅಂದಿನಿಂದ ಮಹಾಭಾರತದ ಕಳೆ ಹೆಚ್ಚುವುದಕ್ಕೆ ಮೊದಲಾಯಿತು. ಉಭಯಪಕ್ಷದವರೂ ಮಹಾಭಾರತಕ್ಕೆ ಶರಣಿಕ್ಕಿ ತಮ್ಮ ದೇವರನ್ನು ದೊಡ್ಡದುಮಾಡಿಕೊಳ್ಳುವ ಆಶೆಯಿಂದ ಶೈವರು ಶಿವಮಾಹಾತ್ಮ್ಯ ಸೂಚಕವಾದ ರಚನೆಗಳನ್ನೆಲ್ಲ ಮಹಾಭಾರತಕ್ಕೆ ಸೇರಿಸುತ್ತಲೂ,* ಇದಕ್ಕೆ ಉತ್ತರವಾಗಿ ವೈಷ್ಣವರು ವಿಷ್ಣು ಅಥವಾ ಕೃಷ್ಣ ಮಾಹಾತ್ಮ್ಯ ಸೂಚಕವಾದ ಇದೇ ರೀತಿಯ ರಚನೆಗಳನ್ನು ಸೇರಿಸುತ್ತಲೂ ಬಂದರು. ಇವಕ್ಕೆ ಅನುಶಾಸನಪರ್ವದಲ್ಲಿ ಕೆಲವು ಉತ್ತಮ ಉದಾಹರಣೆಗಳು ದೊರಕುವವು. ಇಷ್ಟವುಳ್ಳವರು ಓದಿ ನೋಡಬಹುದು. ಪ್ರತಿಯೊಂದರಲ್ಲಿಯೂ ಒಂದೊಂದು ಕತ್ತಿವೈಯಿನ ಪರಿಮಳ ದೊರಕುವುದು.

ತೃತೀಯ ಪರಿಚ್ಛೇದ

ಸುಭದ್ರಾ ಹರಣ

ದ್ರೌಪದೀ ಸ್ವಯಂವರವಾದಮೇಲೆ ಸುಭದ್ರಾಹರಣದಲ್ಲಿ ಕೃಷ್ಣನು ಕಂಗಳಿಗೆ ಬೀಳುವನು. ಸುಭದ್ರೆಯ ಮದುವೆಯ ವಿಚಾರದಲ್ಲಿ ಕೃಷ್ಣನ ನಡವಳಿಕೆ ೧೯ನೆಯ ಶತಮಾನದ ನೀತಿಶಾಸ್ತ್ರಜ್ಞರಿಗೆ ಮೆಚ್ಚಿಗೆಯಾಗದು. ಇಪ್ಪತ್ತನೆಯ ಶತಮಾನದ ನೀತಿಶಾಸನದ ಮೇಲೂ ಜಗದೀಶ್ವರನ ನೀತಿಶಾಸ್ತ್ರವೆಂಬುದೊಂದುಂಟಷ್ಟೆ. ಅದು ಸಕಲ ಶಕಾಬ್ದಗಳಲ್ಲಿಯೂ ಸಕಲ ದೇಶಗಳಲ್ಲಿಯೂ ಚಲಾಯಿಸಲ್ಪಡುತ್ತದೆ. ಕೃಷ್ಣನ ನಡವಳಿಕೆಯನ್ನು ನಾವು ಚಿರಸ್ಥಾಯಿಯಾದ ಅಭ್ರಾಂತ ಪ್ರಾಪಂಚಿಕ ನೀತಿಯಿಂದಲೇ ಪರೀಕ್ಷಿಸೋಣ. ಈ ದೇಶದಲ್ಲಿ ಹಲವರು ಅಕ್ಬರೀ ಗಜದ ಅಳತೆಯ ಮೇರೆಗೆ ಗೊತ್ತಾದ ಜಮೀನುಗಳನ್ನು ಪಡೆದುಕೊಂಡಿದ್ದರು. ಜಹಗೀರುದಾರರು ಈಗಿನ ಸಣ್ಣ ಸರಕಾರೀ ಗಜದ ಅಳತೆಯನ್ನು ಹಾಕಿಸಿ ರೈತರಿಂದ ಬಹಳ ಜಮೀನುಗಳನ್ನು ಕಿತ್ತುಕೊಂಡರು. ಹೀಗೆ ೧೯ನೆಯ ಶತಮಾನದಲ್ಲಿಯೂ

---

* ಇವನ್ನನುಸರಿಸಿಯೇ ಮ್ಯೂರ್ ಮೊದಲಾದ ಪಾಶ್ಚಾತ್ಯ ಪಂಡಿತರು ಕೃಷ್ಣನು ಶೈವನೆಂದು ನಿರ್ಧರಿಸಿರುವರು.

ಅಳತೆಯ ಕೋಲು ಸಣ್ಣದಾಗಿರುವುದು. ಆದುದರಿಂದಲೇ ಇದರಿಂದ ನಮ್ಮ ಐತಿಹಾಸಿಕ ಪಿತ್ರಾರ್ಜಿತವೆಲ್ಲವನ್ನೂ ಕಳೆದುಕೊಳ್ಳುತ್ತಿದ್ದೇವೆ. ಇದನ್ನು ಹಲವುಬಾರಿ ಹೇಳಿರುವೆನು. ನಾವು ಈಗ ಅಕ್ಬರೀ ಗಜಕಡ್ಡಿಯನ್ನು ಚಲಾಯಿಸೋಣ.

ವಿಚಾರಕ್ಕೆ ಕೈಹಾಕುವುದಕ್ಕೆ ಮುಂಚೆ ಸುಭದ್ರಾಹರಣ ವೃತ್ತಾಂತವು ಮಹಾಭಾರತದಲ್ಲಿ ಅಂತರ್ಗತವಾದುದೋ ಪ್ರಕ್ಷಿಪ್ತವಾದುದೋ ಎಂಬುದು ಮೊದಲು ಗೊತ್ತಾಗಲಿ. ಇದು ಪ್ರಕ್ಷಿಪ್ತವಾದುದೋ ಅಥವಾ ಅಲ್ಲವೋ ಎನ್ನುವುದಕ್ಕೆ ಕಾರಣಗಳಾವುವಾದರೂ ಇರುವುದಾದರೆ ಅದನ್ನು ತೋರಿಸಿದರೆ ತಂಟೆ ಹರಿಯುವುದು. ಇಷ್ಟು ವಾಗಾಡಂಬರದಿಂದ ಪ್ರಯೋಜನವಿಲ್ಲ ಎಂದು ಕೃಷ್ಣಭಕ್ತರು ಹೇಳಬಹುದು. ಆದುದರಿಂದ ಸುಭದ್ರಾಹರಣವು ಮೂಲ ಮಹಾಭಾರತದ ಅಂಶವೆಂದೇ ಹೇಳಲು ನಾವು ಬಾಧ್ಯರು. ಇದು ಗ್ರಂಥದ ಮೂಲಸ್ತರಕ್ಕೆ ಸೇರಿದುದೆಂಬುದಕ್ಕೆ ನಮಗೆ ಏನೂ ಸಂಶಯ ತೋರುವುದಿಲ್ಲ. ಇದರ ಪ್ರಸಂಗ ಅನುಕ್ರಮಣಿಕಾಧ್ಯಾಯದಲ್ಲಿಯೂ ಪರ್ವಸಂಗ್ರಹಾಧ್ಯಾಯದಲ್ಲಿಯೂ ಇದೆ. ಇದರ ರಚನೆಯು ಅತಿ ಉಚ್ಚಶ್ರೇಣಿಗೆ ಸೇರಿದ ಕವಿಯ ಸರಣಿ. ದ್ವಿತೀಯ ಸ್ತರದ ರಚನೆಯು ಸಕಲ ವೇಳೆಗಳಲ್ಲಿಯೂ ಸುಂದರವೇ ಹೌದು. ಆದರೆ ಮೊದಲನೆಯ ಸ್ತರಕ್ಕೂ ದ್ವಿತೀಯ ಸ್ತರಕ್ಕೂ ಪ್ರಭೇದವಿದ್ದೇ ಇರುವುದು. ಪ್ರಥಮ ಸ್ತರದ ರಚನೆಯು ಸರಳ, ಸ್ವಾಭಾವಿಕವಾದುದು. ದ್ವಿತೀಯ ಸ್ತರದ್ದು ಅಲಂಕಾರ ಅತ್ಯುಕ್ತಿಗಳಿಂದ ಬಡಾಯಿಸಿದ್ದು. ಸುಭದ್ರಾಹರಣದ ರಚನೆ ಸರಳ ಸ್ವಾಭಾವಿಕವೂ ಅತ್ಯುಕ್ತಿ ಅಲಂಕಾರಗಳಿಂದ ಅಷ್ಟು ಹೆಚ್ಚದೆಯೂ ಇರುವುದು. ಸುತರಾಂ ಪ್ರಥಮ ಸ್ತರಕ್ಕೆ ಸೇರಿದುದೇ ವಿನಾ ದ್ವಿತೀಯ ಸ್ತರದ್ದಲ್ಲ. ಇದರ ಮೇಲೆ ಸುಭದ್ರಾಹರಣವನ್ನು ಮಹಾಭಾರತದಿಂದ ಎತ್ತಿಹಾಕಿದರೆ ಅದು ಮಹಾಭಾರತವನ್ನು ಅಸಂಪೂರ್ಣವನ್ನಾಗಿ ಮಾಡುವುದು. ಇದು ಮುಖ್ಯವಾದುದು. ಸುಭದ್ರೆಯಿಂದ ಅಭಿಮನ್ಯುವೂ, ಅಭಿಮನ್ಯುವಿನಿಂದ ಪರೀಕ್ಷಿತನೂ, ಪರೀಕ್ಷಿತನಿಂದ ಜನಮೇಜಯನೂ ಹುಟ್ಟಿದರು. ಸುಭದ್ರಾರ್ಜುನರ ವಂಶದವರೇ ಬಹುಶತಾಬ್ದಗಳವರೆಗೂ ಭಾರತದಲ್ಲಿ ಸಾಮ್ರಾಜ್ಯವನ್ನು ನಡಸು

ತ್ತಿದ್ದರು. ದ್ರೌಪದಿಯ ವಂಶದವರಾರೂ ಅಲ್ಲ. ದ್ರೌಪದೀ ಸ್ವಯಂವರ ವನ್ನಾದರೂ ಎತ್ತಿಹಾಕಬಹುದು. ಸುಭದ್ರಾಪರಿಣಯವನ್ನೆತ್ತಿ ಹಾಕ ಲಾಗುವುದಿಲ್ಲ.

ದ್ರೌಪದಿಯಂತೆಯೇ ಸುಭದ್ರೆಯನ್ನೂ ಸಾಹೇಬರುಗಳು ಹಾರಿಸಿ ಬಿಟ್ಟಿರುವರು. ಯಾದವ ಪ್ರೀತಿಸ್ವರೂಪವಾದ ಮಂಗಳವೇ ಸುಭದ್ರೆ ಎಂದು ಲಾಸನ್ ಸಾಹೇಬರು ಹೇಳುವರು. ವೇಬರ್ ಸಾಹೇಬರ ಆಪತ್ತಿಯು ಇದಕ್ಕಿಂತ ದೊಡ್ಡದು. ಈತನು ಕೃಷ್ಣನ ತಂಗಿಯಾದ ಸುಭದ್ರೆಯ ಮನುಷ್ಯತ್ವವನ್ನೇ ಒಪ್ಪನು. ಇದಕ್ಕಾಗಿ ಯಜುರ್ವೇದ ಮಾಧ್ಯಂದಿನೀ ಶಾಖೆಯ ೨೩ನೆಯ ಅಧ್ಯಾಯದ ೧೮ನೆಯ ಕಾಂಡಿಕೆಯ ೪ನೆಯ ಮಂತ್ರವನ್ನು ಎತ್ತಬೇಕಾಗಿರುವುದು.

"ಎಲೈ ಅಂಬೆ, ಎಲೈ ಅಂಬಿಕೆ, ಎಲೈ ಅಂಬಾಲಿಕೆ, ನೋಡಿ, ಈ ಕುದುರೆ ಈಗ ದೀರ್ಘನಿದ್ರೆಯನ್ನು ಪಡೆದಿರುವುದು. ನಾನು ಕಾಂಪಿಲವಾಸಿನೀ ಸುಭದ್ರೆ ಯಾಗಿದ್ದರೂ ಸ್ವಯಂ ಇದರ ಸಮೀಪವನ್ನು ಸೇರಿರುವೆನು. ಎಂದರೆ ಪತಿಭಾವ ದಲ್ಲಿ ವರಿಸಿರುವೆನು. ಈ ವಿಷಯದಲ್ಲಿ ನನಗ್ಯಾರೂ ಆಜ್ಞೆ ಮಾಡಲಿಲ್ಲ." *

"Kampila is a town in the country of the Panchalas. Subhadra, therefore, would seem to be the wife of the king of that district, etc."

ಸಾಯಣಾಚಾರ್ಯರು ಕಾಂಪಿಲವಾಸಿನಿ ಎಂಬುದಕ್ಕೆ ಹೀಗೆ ಅರ್ಥ ಮಾಡಿದರು :—

ಕಾಂಪಿಲ ಶಬ್ದೇನ ಶ್ಲಾಘ್ಯೋ ವಸ್ತ್ರ ವಿಶೇಷ ಉಚ್ಯತೇ ।

ವೇಬರ್ ಸಾಹೇಬರು ತಾವು ಸಂಸ್ಕೃತವನ್ನು ಸಾಯಣಾ ಚಾರ್ಯರಿಗಿಂತಲೂ ಚೆನ್ನಾಗಿ ಬಲ್ಲವರೆಂದು ನಂಬಿಕೊಂಡು ಈ ವ್ಯಾಖ್ಯೆ ಯನ್ನು ಒತ್ತಲಿಸಿಬಿಟ್ಟಿರುವರು. ಹಾಗೆಯೇ ಆಗಲಿ; ಕಾಂಪಿಲವಾಸಿನಿ ಯಾದ ಯಾವುದೋ ಹೆಂಗಸಿನ ಹೆಸರು ಸುಭದ್ರೆಯೆಂತಲಾದರೂ ಕೃಷ್ಣನ ತಂಗಿಯ ಹೆಸರು ಸುಭದ್ರೆಯೆಂದೇಕೆ ಇರಲಾರದೋ ನಮಗೆ ತಿಳಿಯದು.

---

*ಶ್ರೀಯುಕ್ತ ಸತ್ಯವ್ರತ ಸಾಮಶ್ರಮಿಯವರ ಭಾಷಾಂತರ. ಇದರಿಂದ ವೇಬರ್ ಸಾಹೇಬರು ಹೀಗೆ ಸಿದ್ಧಾಂತ ಮಾಡಿದರು.

ಅಶ್ವಮೇಧವನ್ನು ಮಾಡುವ ರಾಜನ ಹೆಂಡತಿ ಯಾವಳೋ ಅವಳೇ ನಾನು ಕಾಂಪಿಲವಾಸಿನೀ ಸುಭದ್ರಾ ಎಂದು ಹೇಳಬೇಕು. ಸುಭದ್ರೆ ಎಂದರೆ ಕಲ್ಯಾಣಿ, ಸೌಭಾಗ್ಯವತಿ ಎಂದು ಸಾಮಾಶ್ರಮಿ ಎಂಬ ಪಂಡಿತರು ಉದಾಹರಿಸಿರುವರು. ಮಹೀಧರನು ಕಾಂಪಿಲ ನಗರಿಯ ಮಹಿಳೆಯರು ರೂಪಲಾವಣ್ಯವತಿಯರೆಂದು ಹೇಳಿರುವನು. ಆದುದರಿಂದ ಈ ಮಂತ್ರದ ಅರ್ಥ ನಾನು ಸೌಭಾಗ್ಯವತಿಯೂ ರೂಪಲಾವಣ್ಯವಂತೆಯೂ ಆಗಿದ್ದಾಗ್ಯೂ ಈ ಅಶ್ವದ ಹತ್ತಿರಕ್ಕೆ ಬಂದಿರುವೆನು ಎಂದಾಗಬಹುದು. ಆದುದರಿಂದ ಈ ಮಂತ್ರದ ಆಧಾರದಮೇಲೆ ಕೃಷ್ಣನ ತಂಗಿ ಅರ್ಜುನನ ಹೆಂಡತಿ ಸುಭದ್ರೆಗೆ ಬದಲು ಯಾವಳೋ ಪಾಂಚಾಲೀ ಸುಭದ್ರೆಯನ್ನು ಕಲ್ಪಿಸಿಕೊಳ್ಳಬೇಕು ಎಂದು ತಿಳಿಯುವುದಲ್ಲಾದೀತೆ? ಯುಧಿಷ್ಠಿರನು ಅಶ್ವಮೇಧ ಯಜ್ಞವನ್ನು ಮಾಡಿದ್ದನು. ಮತ್ತು ಅವನಿಗಿಂತ ಎಷ್ಟೋ ಹಿಂದಿನ ರಾಜರೂ ಅಶ್ವಮೇಧಗಳನ್ನು ಮಾಡಿದ್ದರೆಂದು ಮಹಾಭಾರತ ದಲ್ಲಿಯೂ ಇನ್ನೂ ಇತರ ಪ್ರಾಚೀನ ಗ್ರಂಥಗಳಲ್ಲಿಯೂ ಇರುವುದು. ಆದುದರಿಂದ ಅಶ್ವಮೇಧ ಯಜ್ಞದಿಂದ ಈ ಯಜುರ್ಮಂತ್ರವು ಕೃಷ್ಣ ಪಾಂಡವರಿಗಿಂತಲೂ ಮುಂಚಿನದೇ ಆಗಿರಬೇಕು. ಈಗ ಜನರು ಆಧುನಿಕ ಲೇಖಕರ ಕಾವ್ಯಗಳಿಂದ ಪುತ್ರೀಪುತ್ರರ ಹೆಸರುಗಳನ್ನು ಹೇಗೆ ತೆಗೆದು ಇಡುವರೋ ಹಾಗೆಯೇ ಪೂರ್ವದಲ್ಲೂ ಇಟ್ಟಿರಬಹುದು.* ಕಾಶೀರಾಜನು ತನ್ನ ಮೂವರು ಮಕ್ಕಳಿಗೂ ಇದೇ ಮಂತ್ರದಿಂದ ಅಂಬೆ, ಅಂಬಿಕೆ, ಅಂಬಾಲಿಕೆ ಎಂಬ ಹೆಸರುಗಳನ್ನೆತ್ತಿ ಇಟ್ಟಿರಬೇಕು. ಕೃಷ್ಣನ ತಂಗಿಗೂ ಹೀಗೆಯೇ ನಾಮಕರಣವಾಗಿರಬಹುದು. ಈ ಮಂತ್ರದಲ್ಲಿ ಕೃಷ್ಣನ ತಂಗಿ ಸುಭದ್ರೆಯೆಂಬವಳಾರೂ ಇರಲಿಲ್ಲವೆಂದು ಕಂಡುಬರುವುದಿಲ್ಲವೆಂದು ಊಹಿಸಬಹುದು. ಆದುದರಿಂದ ನಾವು ಸುಭದ್ರಾಹರಣದ ವಿಚಾರಕ್ಕೆ ಪ್ರವರ್ತಿಸೋಣ.

ಈಗ ಸುಭದ್ರಾ ಹರಣದ ವಿಷಯದಲ್ಲಿನ ನೀತಿಯನ್ನು ವಿಚಾರಿಸು ವುದಕ್ಕೆ ಮೊದಲು ಪಾಠಕರು ಕಾಶೀದಾಸನ ಅಥವಾ ಇತರ ಹರಿಕಥೆಯ ಆಚಾರ್ಯರ ಮತ್ತು ದಾಸರ ಅಥವಾ ಅಜ್ಜ, ಅಜ್ಜಿಯರಲ್ಲಿಯೋ ಅಥವಾ

---

* ಹೇಗೆಂದರೆ ಪ್ರಮೀಳಾ, ಮೃಣಾಳಿನಿ, ಇತ್ಯಾದಿ.

ನಾಟಕ ನಾವೆಲುಗಳಲ್ಲಿ ಕೇಳಿ ಅಥವಾ ಓದಿ ಇರುವ ಸುಭದ್ರಾಪರಿಣಯ ವನ್ನು ಅನುಗ್ರಹಿಸಿ ಮರೆತುಬಿಡಲು ಕೇಳಿಕೊಳ್ಳುತ್ತಲಿದೇನೆ. ಅರ್ಜುನನನ್ನು ನೋಡಿ ಸುಭದ್ರೆಯು ಮನ್ಮಥನ ಬಾಣಗಳಿಂದ ಬಳಲಿ ಕಂಗೆಟ್ಟು ಇರಲು ಸತ್ಯಭಾಮೆಯ ಮಧ್ಯಸ್ಥಿಕೆಯಿಂದ ಅರ್ಜುನನು ಸುಭದ್ರೆಯನ್ನು ಎತ್ತಿ ಕೊಂಡು ಹೋದನು; ಯಾದವರ ಸೇನೆಯೊಡನೆ ಅವನಿಗೆ ಘೋರತರವಾದ ಯುದ್ಧವೂ ಕೂಡಿತು; ಸುಭದ್ರೆಯು ಅರ್ಜುನನಿಗೆ ಸಾರಥಿಯಾಗಿ ಅಂತರಿಕ್ಷ ದಲ್ಲಿ ರಥವನ್ನು ನಡೆಯಿಸಿದಳು—ಎಂಬುದನ್ನೆಲ್ಲಾ ದಯವಿಟ್ಟು ಮರೆಯಿರಿ. ಇವಷ್ಟೂ ಬಹಳ ಮನೋಹರವಾದ ರಚನೆಯೇ ಸರಿ. ಆದರೆ ಮೂಲ ಮಹಾಭಾರತದಲ್ಲಿ ಇದರ ಹುಟ್ಟೇ ಇಲ್ಲ. ಮೊಟ್ಟಮೊದಲು ಈ ಸಂಗತಿ ಕಾಶೀರಾಮದಾಸನ ಗ್ರಂಥದಲ್ಲಿ ಕಾಣಬರುವುದು. ಇದು ಇವನ ರಚನೆಯೋ ಅಥವಾ ಇವನ ಪೂರ್ವಿಕ ಹರಿದಾಸರ ರಚನೆಯೋ ತಿಳಿಯದು. ಸಂಸ್ಕೃತ ಮಹಾಭಾರತದಲ್ಲಿ ಸುಭದ್ರಾಹರಣವನ್ನು ಹೇಳಿರುವುದರ ಸ್ಥೂಲಮರ್ಮ ಹೀಗಿರುವುದು.

ದ್ರೌಪದಿಯ ವಿವಾಹವಾದಮೇಲೆ ಪಾಂಡವರು ಇಂದ್ರಪ್ರಸ್ಥದಲ್ಲಿ ಸುಖವಾಗಿ ರಾಜ್ಯವನ್ನು ಆಳುತ್ತಿದ್ದರು. ಆವುದೋ ಕಾರಣದಿಂದ ಅರ್ಜುನನು ೧೨ ವರ್ಷಗಳ ಪರಿಯಂತ ಇಂದ್ರಪ್ರಸ್ಥವನ್ನು ಬಿಟ್ಟು ವಿದೇಶದಲ್ಲಿ ಅಲೆಯುತ್ತಿದ್ದನು. ಇತರ ದೇಶಗಳನ್ನು ಸುತ್ತಿದಮೇಲೆ ಅವನು ದ್ವಾರಕಿಗೆ ಬಂದನು. ಅಲ್ಲಿ ಯಾದವರು ಅವನನ್ನು ವಿಶೇಷ ಆದರದಿಂದ ಬರಮಾಡಿಕೊಂಡು ಸತ್ಕಾರವನ್ನು ಮಾಡಿದರು. ಅರ್ಜುನನು ಕೆಲವು ದಿನಗಳವರೆಗೆ ಅಲ್ಲೇ ಇದ್ದನು. ಒಂದುದಿನ ಯಾದವರು ರೈವತಕ ಪರ್ವತದಲ್ಲಿ ದೊಡ್ಡ ಉತ್ಸವವೊಂದನ್ನು ನಡಸತೊಡಗಿದರು. ಉತ್ಸವಕ್ಕೆ ಯಾದವ ವೀರರೂ ಯಾದವ ಸ್ತ್ರೀಯರೂ ಬಂದು ಆಮೋದಾಹ್ಲಾದಗಳಲ್ಲಿದ್ದರು. ಇತರ ಮಹಿಳೆಯರೊಡನೆ ಸುಭದ್ರೆಯೂ ಅಲ್ಲಿಗೆ ಬಂದಿದ್ದಳು. ಅವಳು ಕುಮಾರಿಯಾದ ಬಾಲಿಕೆಯಾಗಿದ್ದಳು. ಈ ಸಮಯದಲ್ಲಿ ಅಲ್ಲಿಗೆ ಬಂದಿದ್ದ ಅರ್ಜುನನು ಇವಳನ್ನು ನೋಡಿ ಮುಗ್ಧನಾದನು. ಕೃಷ್ಣನು ಇದನ್ನು ತಿಳಿದು ಅರ್ಜುನನನ್ನು ಕುರಿತು, "ಎಲೈ ಸಖನೆ, ವನಚರನಾಗಿಯೂ ಅನಂಗಶರದಿಂದ ಚಂಚಲನಾಗಬಹುದೆ" ಎಂದು ಕೇಳಿದನು. ಅರ್ಜುನನು

ತಪ್ಪನ್ನೊಪ್ಪಿಕೊಂಡು ಸುಭದ್ರೆಯು ಎಂತು ತನ್ನ ಮಹಿಷಿಯಾಗು ವಳೆಂಬುದಕ್ಕೆ ಕೃಷ್ಣನ ಪರಾಮರ್ಶವನ್ನು ಕೇಳಿದನು. ಕೃಷ್ಣನು ಈ ಕೆಳಗೆ ಬರೆದಿರುವ ಪರಾಮರ್ಶವನ್ನು ಕೊಟ್ಟನು :—

"ಎಲೈ ಅರ್ಜುನನೇ, ಸ್ವಯಂವರವೇ ಕ್ಷತ್ರಿಯನಿಗೆ ವಿಧಿ. ಆದರೆ ಹೆಂಗಸರ ಪ್ರವೃತ್ತಿಯನ್ನು ಹೇಳುವುದಕ್ಕಾಗುವುದಿಲ್ಲ. ಆ ವಿಷಯದಲ್ಲಿ ನನಗೆ ಅತ್ಯಂತ ಸಂಶಯವುಂಟಾಗಿರುವುದು. ಇದರಮೇಲೆ ಧರ್ಮಶಾಸ್ತ್ರ ಕಾರರು ಹೇಳುವುದೇನೆಂದರೆ—'ವಿವಾಹೋದ್ದೇಶದಿಂದ ಬಲಪೂರ್ವಕವಾಗಿ ಎತ್ತಿಕೊಂಡು ಹೋಗುವುದು ಮಹಾವೀರನಾದ ಕ್ಷತ್ರಿಯನಲ್ಲಿ ಪ್ರಶಂಸನೀಯ' ಎಂದು. ಆದುದರಿಂದ ಸ್ವಯಂವರದ ಕಾಲ ಬಂದಾಗ ನೀನು ನನ್ನ ತಂಗಿಯನ್ನು ಬಲಪೂರ್ವಕವಾಗಿ ಎತ್ತಿಕೊಂಡು ಹೋಗಿಬಿಡು. ಏಕೆಂದರೆ, ಸ್ವಯಂವರ ಕಾಲದಲ್ಲಿ ಹುಡುಗಿಯು ಯಾರಮೇಲೆ ಅನುರಕ್ತಳಾಗುವಳೋ ಯಾರು ಬಲ್ಲರು ?"

ಈ ಸಲಹೆಗೆ ಅನುಸಾರವಾಗಿ ಅರ್ಜುನನು ಮೊದಲು ಯುಧಿಷ್ಠಿರನ ಮತ್ತು ಕುಂತಿಯ ಅನುಮತಿಗಾಗಿ ದೂತನನ್ನು ಕಳುಹಿದನು. ಅವರ ಒಪ್ಪಿಗೆಯು ದೊರೆತಮೇಲೆ ಒಂದು ದಿವಸ ಸುಭದ್ರೆ ರೈವತಕ ಪರ್ವತಕ್ಕೆ ಪ್ರದಕ್ಷಿಣೆಮಾಡಿ ದ್ವಾರಕಿಗೆ ಬರುತ್ತಿರುವಾಗ ಅವಳನ್ನು ಬಲಪೂರ್ವಕವಾಗಿ ಹಿಡಿದು ರಥದಲ್ಲಿ ಎತ್ತಿ ಕೂರಿಸಿಕೊಂಡು ಅರ್ಜುನನು ಹೊರಟುಹೋದನು.

ಈಗಿನ ಕಾಲದಲ್ಲಿ ಯಾರಾದರೂ ವಿವಾಹಕ್ಕಾಗಿ ಒಬ್ಬರ ಮಗಳನ್ನು ಬಲವಂತದಿಂದ ಎತ್ತಿಕೊಂಡುಹೋದರೆ ಸಮಾಜದಲ್ಲಿ ನಿಂದಕನೂ ರಾಜ ಶಾಸನದಿಂದ ದಂಡಿತನೂ ಆಗಲು ಯೋಗ್ಯನೇ ಸರಿ. ಅಲ್ಲದೆ ಈಗಿನ ಕಾಲದಲ್ಲಿ ಒಬ್ಬನು ಇನ್ನೊಬ್ಬನಿಗೆ "ಮಹಾಸ್ವಾಮಿ, ನನ್ನ ತಂಗಿಯನ್ನು ಮದುವೆ ಮಾಡಿಕೊಳ್ಳಲಿಷ್ಟವಿದ್ದರೆ ಅವಳನ್ನೆತ್ತಿಕೊಂಡು ಹೋಗಿಬಿಡಿ. ಇದೇ ನನ್ನ ಸಲಹೆ" ಎಂದು ಹೇಳಿದರೆ ಅವನು ನಮ್ಮಲ್ಲಿ ನಿಂದನೀಯನಾಗುವನು. ಆದುದರಿಂದ ಈಗಿನ ನೀತಿಶಾಸ್ತ್ರಾನುಸಾರವಾಗಿ (ಈ ನೀತಿಶಾಸ್ತ್ರದ ಮೇಲೆ ನಾನೇನೂ ದೋಷಾರೋಪಮಾಡುತ್ತಲಿಲ್ಲ) ಕೃಷ್ಣಾರ್ಜುನರಿಬ್ಬರೂ ಅತಿ ನಿಂದನೀಯವಾದ ಕಾರ್ಯವನ್ನು ಮಾಡಿದರೆಂಬುದಕ್ಕೆ ಸಂಶಯವಿಲ್ಲ.

ಜನಗಳ ಕಣ್ಣಿಗೆ ಮಣ್ಣೆರಚಿ ಕೃಷ್ಣನನ್ನು ದೊಡ್ಡವನನ್ನಾಗಿ ಮಾಡುವುದು ನನ್ನ ಉದ್ದೇಶವಾಗಿದ್ದರೆ ಸುಭದ್ರಾಹರಣ ಪರ್ವಾಧ್ಯಾಯವು ಪ್ರಕ್ಷಿಪ್ತ ವೆಂದೋ ಅದೇ ಬಗೆ ಯಾವುದಾದರೊಂದು ಕೃತ್ರಿಮದಿಂದಲೋ ಈ ಕಥೆಯನ್ನೇ ಬಿಟ್ಟುಬಿಡುತ್ತಿದ್ದೆನು. ಇದಾವ ದಾರಿಯನ್ನೂ ನಾನು ತುಳಿಯಲಾರೆ. ಸತ್ಯವನ್ನು ಬಿಟ್ಟು ಮಿಥ್ಯವನ್ನು ಸ್ತುತಿಸುವುದರಿಂದ ಯಾರ ಮಹಿಮೆಯೂ ಹೆಚ್ಚುವುದಿಲ್ಲವಲ್ಲದೆ ಧರ್ಮಕ್ಕೆ ಹಾನಿಯೇ ಹೊರತು ಏಳಿಗೆಯೆಂದಿಗೂ ಉಂಟಾಗುವುದಿಲ್ಲ.

ಆದುದರಿಂದ ಈ ವಿಷಯವನ್ನು ಚೆನ್ನಾಗಿ ಶೋಧಿಸಿ ತಿಳಿದುಕೊಳ್ಳ ಬೇಕಾಗಿದೆ. ಆವನೋ ಒಬ್ಬನು ಪರನ ಮಗಳನ್ನೆತ್ತಿಕೊಂಡು ಹೋಗಿ ಮದುವೆಮಾಡಿಕೊಂಡರೆ ದೋಷವೆಂದೆಣಿಸುವುದೇಕೆ ?

ಕದ್ದ ಹುಡುಗಿಯ ಮೇಲೆ ಅತ್ಯಾಚಾರವು ನಡೆಯುವುದೊಂದು, ಹುಡುಗಿಯ ತಾಯ್ತಂದೆ ಬಂಧುಗಳ ಮೇಲಿನ ಅತ್ಯಾಚಾರವೊಂದು, ಸಮಾಜದ ಮೇಲಿನ ಅತ್ಯಾಚಾರವೊಂದು—ಎಂಬೀ ಮೂರು ಬಗೆಯ ಕಾರಣಗಳಿಂದ ಕನ್ಯಾಹರಣವು ದೋಷವೆಂದು ಪರಿಗಣಿತವಾಗುವುದು. ಅದು ಆದಮೇಲೂ ನ್ಯಾಯವನ್ನು ಮೀರಿ ಬಲಪ್ರಯೋಗ ಮಾಡಕೂಡದೆಂಬುದೇ ಸಮಾಜ ರಕ್ಷಣೆಯ ಮೂಲಸೂತ್ರ. ಹೀಗೆ ಬಲಪ್ರಯೋಗ ಮಾಡಿದರೆ ಸಮಾಜದ ನೆಮ್ಮದಿಗೆ ಭಂಗವುಂಟುಮಾಡಿದಂತಾಗುವುದು. ವಿವಾಹಾರ್ಥವಾಗಿ ಕನ್ಯಾಹರಣವು ನಿಂದನೀಯವೆಂದು ಹೇಳಲು ಈ ಮೂರು ದೊಡ್ಡಕಾರಣ ಗಳಲ್ಲದೆ ಇನ್ನಾವ ಕಾರಣವೂ ಇಲ್ಲ.

ಕೃಷ್ಣನ ಈ ಕೆಲಸದಲ್ಲಿ ಈ ಮೂರು ಕಾರಣಗಳಿಂದ ಯಾರಿಗೆ ಎಷ್ಟರ ವರೆಗೂ ಅತ್ಯಾಚಾರವುಂಟಾಯಿತೆಂಬುದನ್ನು ನೋಡೋಣ. ಅಪಹೃತ ಳಾದ ಹುಡುಗಿಯಮೇಲೆ ಎಷ್ಟರವರೆಗಿನ ಅತ್ಯಾಚಾರವು ನಡೆಯಿತೋ ನೋಡೋಣ. ಕೃಷ್ಣನು ಅವಳ ಅಣ್ಣನು ಮತ್ತು ವಂಶದಲ್ಲಿ ಶ್ರೇಷ್ಠನು. ಸುಭದ್ರೆಗೆ ಸರ್ವವಿಧದಲ್ಲಿಯೂ ಮಂಗಳವಾಗುವಂತೆ ನೋಡಿಕೊಳ್ಳುವುದೇ ಅವನ ಕರ್ತವ್ಯ. ಅದೇ ಅವನ ಧರ್ಮ. ಎಂದರೆ ೧೯ನೆಯ ಶತಮಾನದ ಭಾಷೆಯಲ್ಲಿ ಇದೇ ಅವನ 'ಡ್ಯೂಟಿ'. ಈಗ ಹೆಂಗಸಿಗೆ ಸರ್ವಪ್ರಕಾರವಾದ

ಮಂಗಳವು ಸತ್ಪಾತ್ರನನ್ನು ಹೊಂದುವುದೇ ಆಗಿದೆ. ಆದುದರಿಂದ ಸುಭದ್ರೆಯ ವಿಷಯವಾಗಿ ಕೃಷ್ಣನ ಮುಖ್ಯ 'ಡ್ಯೂಟಿ' ಅವಳು ಹೇಗೆ ಸತ್ಪಾತ್ರನನ್ನು ಪಡೆಯುವಳೋ ಹಾಗೆ ಮಾಡುವುದೇ. ಅರ್ಜುನ ನಂತಹ ಸತ್ಪಾತ್ರನು ಕೃಷ್ಣನಿಗೆ ಪರಿಚಿತವಾದ ಇತರರಲ್ಲಿ ಇರಲಿಲ್ಲವೆಂದು ಮಹಾಭಾರತವನ್ನು ಓದಿರುವವರ ಹತ್ತಿರ ಕಷ್ಟಪಟ್ಟು ಪ್ರಮಾಣ ಮಾಡ ಬೇಕಾಗಿರುವುದಿಲ್ಲ. ಆದುದರಿಂದ ಅವನು ಹೇಗೆ ಮಾಡಿದರೆ ಅವಳು ಅರ್ಜುನನ ಪತ್ನಿಯಾದಾಳೋ ಹಾಗೆ ಮಾಡುವುದು ಸುಭದ್ರೆಯ ಮಂಗಳಾರ್ಥಕ್ಕಾಗಿಯೇ ಕೃಷ್ಣನ ಕರ್ತವ್ಯ. ಮೇಲೆ ಎತ್ತಿರುವ ಅವನ ಮಾತುಗಳಿಂದ ಬಲಪೂರ್ವಕವಾಗಿ ಹರಣಮಾಡಿದಲ್ಲದೆ ಬೇರೆ ರೀತಿಯಾಗಿ ಕರ್ತವ್ಯವನ್ನು ಸಾಧಿಸುವುದಕ್ಕಾಗುವುದೋ ಇಲ್ಲವೋ ಸಂಶಯ. ಇಂದು ಕೈಕೊಂಡ ಕರ್ಮದ ಫಲ ಮುಂದಿನ ಚಿರಜೀವನಕ್ಕೆ ಮಂಗಳವನ್ನು ತರುವ ವಿಷಯದಲ್ಲಿ ಸಂದೇಹ ಎದ್ದರೆ ಆ ದಾರಿಯನ್ನು ತುಳಿಯಬಾರದು. ಆದುದ ರಿಂದ ಕೃಷ್ಣನು ಸುಭದ್ರೆಯ ಚಿರಜೀವದ ಪರಮಶುಭವನ್ನು ಚೆನ್ನಾಗಿ ವಿವೇಚನೆಮಾಡಿ ಅವಳ ವಿಷಯವಾಗಿ ಪರಮಧರ್ಮಸಮ್ಮತವಾದ ಕಾರ್ಯ ವನ್ನೇ ಮಾಡಿದನು. ಅವಳಮೇಲೆ ಅತ್ಯಾಚಾರವೇನೂ ಆಗಲಿಲ್ಲ.

ಇದಕ್ಕೆ ಎರಡು ತೊಂದರೆಗಳು ಕಾಣಬಹುದು. ನನಗೆ ಯಾವ ಕೆಲಸದಲ್ಲಿ ಇಷ್ಟವಿಲ್ಲವೋ ಅದು ನನಗೆ ಮಂಗಳಕರವಾದರೂ ನನ್ನನ್ನು ಬಲವಂತದಿಂದ ಆ ಕಾರ್ಯಕ್ಕೆ ಒಪ್ಪುವಂತೆ ಮಾಡುವುದಕ್ಕೆ ಯಾರಿಗೂ ಅಧಿಕಾರವಿಲ್ಲ. ಪುರೋಹಿತನು,—ನನ್ನ ಸರ್ವಸ್ವವನ್ನೂ ಬ್ರಾಹ್ಮಣನಿಗೆ ದಾನಮಾಡಿದರೆ ನನಗೆ ಮಂಗಳವಾಗುವುದೆಂದು ತಿಳಿದು,–ನನ್ನನ್ನು ಹೊಡೆದು ಬಡಿದು ನನ್ನ ಆಸ್ತಿಯನ್ನೆಲ್ಲಾ ಬ್ರಾಹ್ಮಣರಿಗೆ ದಾನಕೊಡಿಸಲು ಅವನಿಗೆ ಅಧಿಕಾರವಿರುವುದೆ? ಶುಭೋದ್ದೇಶ ಸಾಧನೆಗಾಗಿ ನಿಂದನೀಯವಾದ ಉಪಾಯವನ್ನವಲಂಬಿಸುವುದೂ ನಿಂದನೀಯವೆ. ೧೯ನೆಯ ಶತಮಾನದ ಭಾಷೆಯಲ್ಲಿ ಇದರ ಅರ್ಥವು—The end does not sanctify the means.

ಇದಕ್ಕೆ ಎರಡು ಉತ್ತರಗಳು ಇರುವುವು. ಸುಭದ್ರೆಗೆ ಅರ್ಜುನನ ಮೇಲೆ ಅನುರಾಗವಿರಲಿಲ್ಲವೆಂದಾಗಲಿ, ವಿರಕ್ತಿಯಿದ್ದಿತೆಂದಾಗಲಿ ಕಂಡು

ಬಂದಿಲ್ಲ. ಇಚ್ಛೆ ಅನಿಚ್ಛೆ ಒಂದೂ ಗೋಚರಕ್ಕೆ ಬಂದಿಲ್ಲ. ಗೋಚರಕ್ಕೆ ಬರುವ ಸಂಭವವೂ ಬಹಳ ಕಡಮೆ. ಹಿಂದೂಗಳ ಮನೆಯ ಹುಡುಗಿ, ಕುಮಾರಿ ಮತ್ತು ಬಾಲಿಕೆಯಾದವಳು ಪಾತ್ರದ ವಿಚಾರವಾಗಿ ಇಚ್ಛೆಯನ್ನೇ ಆಗಲಿ ಅನಿಚ್ಛೆಯನ್ನೇ ಆಗಲಿ ಹೊರಪಡಿಸೋಣವು ಬಹಳ ಕಡಮೆ. ವಾಸ್ತವಿಕವಾಗಿ ಅವರ ಮನಸ್ಸಿನಲ್ಲಿಯೂ ಪಾತ್ರವಿಶೇಷದ ಮೇಲೆ ಇಚ್ಛೆ ಅಥವಾ ಅನಿಚ್ಛೆ ಯಾವುದೂ ಹುಟ್ಟುವುದಿಲ್ಲವೆಂದು ತೋರುತ್ತದೆ. ಆದರೆ ಮನೆಯಲ್ಲಿ ಹುಡುಗಿಯನ್ನು ಧಾಂಡಿಗಳಾಗಿ ಬೆಳಸಿಟ್ಟುಕೊಂಡಿದ್ದರೆ ಅಂಥವರಿಗೆ ಮಾತ್ರ ಈ ಇಚ್ಛೆಯುಂಟಾಗಬಹುದು. ಯಾವುದಾದರೊಂದು ಕೆಲಸದಲ್ಲಿ ನನಗೆ ಇಚ್ಛೆಯಾಗಲಿ ಅನಿಚ್ಛೆಯಾಗಲಿ ಇಲ್ಲದೇ ಇರುವಾಗ ಆ ಕೆಲಸವು ನನ್ನ ಪಕ್ಷದಲ್ಲಿ ಮಂಗಳಕರವಾಗಿ ಇರಲು ಆ ಕೆಲಸಕ್ಕೆ ನಾನು ತೊಡಗದೆ ಲಜ್ಜೆಯಿಂದಲೋ, ಬೇರೆ ಉಪಾಯ ತೋರದಿರುವುದರಿಂದಲೋ ತಟಸ್ಥನಾಗಿರುವಾಗ ನನಗೆ ಕೊಂಚ ಬಲವಂತದ ಬೆದರಿಕೆಯನ್ನು ತೋರಿ ಕಾರ್ಯವನ್ನು ಸಾಧಿಸುವಲ್ಲಿ ಬಲಪ್ರಯೋಗ ಅಧರ್ಮವಾಗುವುದೆಂತು? ಈಗ ಒಬ್ಬ ದೊಡ್ಡ ಮನೆತನದ ಹುಡುಗನು ಕಷ್ಟಕ್ಕೆ ಸಿಲುಕಿಕೊಂಡಿದಾನೆಂದು ಭಾವಿಸೋಣ. ಅವನು ನಿಮ್ಮಲ್ಲಿ ಒಂದು ಕೆಲಸಕ್ಕೆ ಸೇರಿಕೊಂಡರೆ ಜೀವನೋಪಾಯವು ದೊರೆತು ಬದುಕಿಕೊಳ್ಳುವನು. ದೊಡ್ಡ ಮನೆತನದವನಾದುದರಿಂದ ಇದಕ್ಕೆ ಅವನು ಇಷ್ಟಪಡುವುದಿಲ್ಲ. ಆಗ ನೀವು ಅವನನ್ನು ಹಿಡಿದುಕೊಂಡುಹೋಗಿ ಬಲವಂತವಾಗಿ ಚಾಕರಿಗೆ ಸೇರಿಸಿದರೆ ತೊಂದರೆ ಮಾಡುವುದಿರಲಿ ಹೆಂಡತಿ ಮಕ್ಕಳೊಂದಿಗೆ ಸುಖವಾಗಿರುವನು. ಇಂಥಾ ಸ್ಥಿತಿಯಲ್ಲಿ ಅವನ ಕೈಯನ್ನು ಹಿಡಿದು ಎಳೆದು ಚೆನ್ನಾಗಿ ಗದರಿಸಿ ಅವನನ್ನು ಆಫೀಸಿನಲ್ಲಿ ಕುಕ್ಕಿಹಾಕಿಬಂದರೆ ಅಧರ್ಮವನ್ನೂ ಪೀಡನೆಯನ್ನೂ ಮಾಡಿದ ಹಾಗಾಯಿತೇನು? ಸುಭದ್ರೆಯ ಅವಸ್ಥೆಯೂ ಹೀಗೆಯೇ ಆಯಿತು. ಹಿಂದೂಗಳ ಮನೆಯ ಕನ್ಯೆಯ ತಿಳಿವಳಿಕೆಯನ್ನು ಕೇಳಿ ಇನ್ನು "ಲೇ, ಬಾ" ಎಂದು ಕರೆದರೆ ವರನೊಡನೆ ಹೋಗಿಬಿಡುವಳೇ? ಕಾರ್ಯತಃ ಹಿಡಿದೆಳೆದು ತಂದು ಬೆದರಿಕೆಯನ್ನು ತೋರಿಸುವುದು ಹೊರತು ಮಂಗಳಸಾಧನಕ್ಕೆ ಬೇರೆ ಯಾವ ಉಪಾಯವೂ ಇರಲಿಲ್ಲ.

ಇಷ್ಟವಿಲ್ಲದಿರಲು ಅದು ಮಂಗಳಕರವಾದರೂ ನನ್ನನ್ನು ಬಲವಂತದಿಂದ ಅದರಲ್ಲಿ ತೊಡಗುವಂತೆ ಮಾಡಲು ಯಾರಿಗೂ ಅಧಿಕಾರವಿರುವುದಿಲ್ಲ. ಈ ಆಪತ್ತಿಗೆ ಎರಡು ಬಗೆಯ ಉತ್ತರಗಳನ್ನು ನಾವು ಹೇಳಿಯೇ ಇರುವೆವು. ಮೊದಲನೆಯದನ್ನು ಮೇಲೆ ತಿಳಿಸಿಯೂ ಇರುವೆವು. ಅದರಲ್ಲಿ ಆಪತ್ತಿಯು ಯಥಾರ್ಥವೆಂದು ಒಪ್ಪಿಕೊಂಡು ಉತ್ತರವನ್ನು ಕೊಟ್ಟೆವು. ಈ ಆಪತ್ತಿಯು ಸಕಲ ಸಮಯಗಳಲ್ಲಿಯೂ ಯಥಾರ್ಥವಾದುದಲ್ಲ. ಯಾವ ಕಾರ್ಯದಲ್ಲಿ ನಮಗೆ ಪರಮ ಮಂಗಳವೋ ಅದರಲ್ಲಿ ನಮಗೆ ಇಷ್ಟವಿಲ್ಲದೆ ಇರಲು ಬಲವಂತದಿಂದ ಆ ಕೆಲಸಕ್ಕೇನೇ ನಮ್ಮನ್ನು ಬಗ್ಗಿಸುವುದಕ್ಕೆ ಯಾರಿಗೂ ಅಧಿಕಾರವಿಲ್ಲ ಎಂಬ ಮಾತು ಎಲ್ಲೆಡೆಯಲ್ಲಿಯೂ ನಡೆಯುವುದಿಲ್ಲ. ರೋಗ ದಿಂದ ಪ್ರಾಣವನ್ನು ಕಳೆದುಕೊಳ್ಳುತ್ತಿರುವವನು ಸ್ವಭಾವ ಸುಲಭವಾದ ಬೇಸರದಿಂದ ಔಷಧವನ್ನು ಸೇವಿಸನು. ಬಲವಂತದಿಂದ ಅವನು ಔಷಧ ವನ್ನು ಸೇವಿಸುವಂತೆ ಗೈಯಲು ಅವನ ಬಂಧುಗಳಿಗೂ ಚಿಕಿತ್ಸಕರಿಗೂ ಅಧಿಕಾರವುಂಟೇ ಉಂಟು. ಸಾಂಘಾತಿಕವಾದ ಗೆಡ್ಡೆ, ಹುಣ್ಣು, ಇಂಥವನ್ನು ಇಚ್ಛಾಪೂರ್ವಕವಾಗಿ ಛೇದಿಸಲು ಒಪ್ಪಿ ರೋಗಿಯು ಶಸ್ತ್ರವನ್ನು ಹಾಕಿಸ ಗೊಡನು. ಜೋರಾವರಿಯಿಂದ ಅದನ್ನು ಕತ್ತರಿಸುವುದಕ್ಕೆ ಡಾಕ್ಟರಿಗೆ ಅಧಿಕಾರವಿದ್ದೇ ಇರುವುದು; ಹುಡುಗನು ಓದುಬರಹವನ್ನು ಕಲಿಯನು; ಬಲವಂತದಿಂದ ಓದುಬರಹವನ್ನು ಕಲಿಸುವುದಕ್ಕೆ ತಾಯಿತಂದೆಗಳಿಗೂ ಶಿಕ್ಷಕರಿಗೂ ಅಧಿಕಾರವಿದ್ದೇ ಇರುವುದು. ಈ ಮದುವೆಯ ವಿಷಯವನ್ನೇ ಪರ್ಯಾಲೋಚಿಸಲು—ವಯಸ್ಕರಲ್ಲದ ಹುಡುಗ ಅಥವಾ ಹುಡುಗಿ ಯನ್ನು ಅನುಚಿತ ವಿವಾಹದಿಂದ ಹಿಂತಿರುಗಿಸಲು ತಂದೆತಾಯಿಗಳಿಗೆ ಅಧಿಕಾರವಿಲ್ಲವೆ? ಈಗಲೂ ಸಭ್ಯರಾದ ಐರೋಪೀಯ ಜಾತಿಯವರಲ್ಲಿಯೂ ಕನ್ಯಾವಿವಾಹ ವಿಷಯವಾಗಿ ಬಲವಂತದಿಂದ ಸತ್ಪಾತ್ರದಲ್ಲಿ ದಾನಮಾಡುವ ಪದ್ಧತಿಯಿದೆ. ಹದಿನೈದು ವರ್ಷದ ಹಿಂದೂ ಹುಡುಗಿ ಸುಪಾತ್ರನನ್ನು ಮದುವೆಯಾಗಲೊಪ್ಪದಿದ್ದರೆ ಯಾವ ತಂದೆತಾಯಿಗಳು ತಾನೇ ಬಲವಂತ ದಿಂದ ಅವನಿಗೆ ಆ ಹುಡುಗಿಯನ್ನು ಕೊಟ್ಟು ಮದುವೆಮಾಡದೆ ಬಿಟ್ಟಾರು? ಜೋರಾವರಿಯಿಂದ ಹುಡುಗಿಯಾದ ಕನ್ಯೆಯನ್ನು ಸತ್ಪಾತ್ರನಿಗೆ ಕೊಟ್ಟವನು ನಿಂದನೀಯನೆ? ಹಾಗಲ್ಲದೇ ಇದ್ದರೆ ಸುಭದ್ರಾಹರಣಕ್ಕೆ ಕೃಷ್ಣನ

ಅನುಮತಿಯೂ ನಿಂದನೀಯವಾಗುವುದು ಹೇಗೆ? ಮೊದಲನೆಯ ಆಪತ್ತಿಗಂತೂ ಈ ಎರಡು ವಿಧದ ಉತ್ತರಗಳಾದುವು. ಈಗ ಎರಡನೆಯ ತರದ ಆಪತ್ತಿಯನ್ನು ನೋಡೋಣ.

ಕೃಷ್ಣನು ಸುಭದ್ರೆಯ ಮಂಗಳವನ್ನೇ ಕೋರಿ ಈ ಪರಾಮರ್ಶವನ್ನು ಕೊಟ್ಟನೆಂಬುದನ್ನೊಪ್ಪಿದೆವು. ಬಲವಂತದಿಂದ ಅಪಹರಿಸುವುದು ವಿನಾ ಅವಳನ್ನು ಅರ್ಜುನನ ಪತ್ನಿಯನ್ನಾಗಿ ಮಾಡುವುದಕ್ಕೆ ಮತ್ತಾವ ದಾರಿಯೂ ಇರಲಿಲ್ಲವೇ? ಎಂಬುದೇ ಎರಡನೆಯ ಆಪತ್ತಿ. ಹುಡುಗಿ ಕೇವಲ ಮುಖದರ್ಶನ ಮಾತ್ರದಿಂದ ಮೋಸಹೋಗಿ ಅಪಾತ್ರನ ಕೊರಳಿಗೆ ಮಾಲೆಯನ್ನು ಹಾಕುವ ಭಯವು ಸ್ವಯಂವರದಲ್ಲೇನೋ ಉಂಟು. ಇದನ್ನು ತಪ್ಪಿಸಲು ಬೇರೆ ಉಪಾಯವೇ ಇರಲಿಲ್ಲವೇ? ಕೃಷ್ಣನಾಗಲಿ ಅರ್ಜುನನಾಗಲಿ ವಸುದೇವ ಮೊದಲಾದ ಕರ್ತೃಪಕ್ಷದವರನ್ನು ಹೇಳಿ ಕೇಳಿ ಪದ್ಧತಿಯಂತೆ ಸಂಬಂಧವನ್ನು ಗೊತ್ತುಮಾಡಿ ಅವರಿಬ್ಬರನ್ನೂ ಒಪ್ಪಿಸಿ ಕನ್ಯಾದಾನ ಮಾಡಬಹುದಾಗಿತ್ತು. ಯಾದವರು ಕೃಷ್ಣನು ಹೇಳಿದಹಾಗೇ ಕೇಳುತ್ತಿದ್ದರು. ಅವನಿಗಾರೂ ಎದುರಾಡುತ್ತಿರಲಿಲ್ಲ. ಇದರಮೇಲೆ ಅರ್ಜುನನೂ ಸತ್ಪಾತ್ರನು. ಆದುದರಿಂದ ಯಾರೂ ಈ ವಿವಾಹಕ್ಕೆ ಅಡ್ಡಬರುತ್ತಿರಲಿಲ್ಲ. ಹೀಗಿದ್ದರೂ ಪದ್ಧತಿಯಂತೆ ಮದುವೆಯಾಗಲಿಲ್ಲವೇಕೆ?

ಈಗಿನ ದಿನವಾಗಿದ್ದರೆ ಇದು ಸಹಜವಾಗಿಯೇ ನಡೆಯುತ್ತಿತ್ತು. ಸುಭದ್ರಾರ್ಜುನರ ವಿವಾಹ ಈಗ್ಗೆ ನಾಲ್ಕುಸಾವಿರ ವರ್ಷಗಳ ಹಿಂದೆ ನಡೆದದ್ದು. ಆಗಿನ ಕಾಲದ ವಿವಾಹ ಪದ್ಧತಿ ಈಗಿನಂತೆ ಇರಲಿಲ್ಲ. ಆ ವಿವಾಹ ಪದ್ಧತಿಯನ್ನು ತಿಳಿಯದೇ ಇದ್ದರೆ ಕೃಷ್ಣನ ಆದರ್ಶಬುದ್ಧಿಯೂ ಆದರ್ಶ ಪ್ರೀತಿಯೂ ನಮ್ಮ ಮನಸ್ಸಿಗೆ ಸಂಪೂರ್ಣವಾಗಿ ಹಿಡಿಯುವುದಿಲ್ಲ.

ಮನುವು ಮದುವೆ ಎಂಟು ಬಗೆಯೆಂದು ಬರೆದಿರುವನು. ಆ ಎಂಟು ಯಾವುವೆಂದರೆ:—ಬ್ರಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ ಮತ್ತು ಪೈಶಾಚ. ಈ ಕ್ರಮವನ್ನು ಪಾಠಕರು ಮನಸ್ಸಿನಲ್ಲಿಡಬೇಕು. ಈ ಎಂಟು ಪ್ರಕಾರದ ವಿವಾಹಗಳಿಗೆ ಎಲ್ಲಾ ವರ್ಣದವರಿಗೂ ಅಧಿಕಾರವಿಲ್ಲ. ಕ್ಷತ್ರಿಯರಿಗೆ ಇವುಗಳಲ್ಲಾವುದಕ್ಕೆ

ಅಧಿಕಾರವೋ ನೋಡೋಣ. ೩ನೆಯ ಅಧ್ಯಾಯದ ೨೩ನೆಯ ಶ್ಲೋಕದಲ್ಲಿ ಹೀಗೆ ಹೇಳಿರುವುದು :—

ಷಡಾನುಪೂರ್ವ್ಯಾ ವಿಪ್ರಸ್ಯ ಕ್ಷತ್ರಸ್ಯ ಚತುರೋಽವರಾನ್ ॥

ಕುಲ್ಲೂಕಭಟ್ಟನು ಇದಕ್ಕೆ ಅರ್ಥವನ್ನು ಹೀಗೆ ಬರೆದಿರುವನು—

ಕ್ಷತ್ರಿಯಸ್ಯ ಅವರಾನುಪರಿತ ನಾನಾಸುರಾದೀಂಶ್ಚತುರಃ

ಎಂದರೆ, ಕ್ಷತ್ರಿಯರಿಗೆ ಆಸುರ, ಗಾಂಧರ್ವ, ರಾಕ್ಷಸ, ಪೈಶಾಚ— ಈ ನಾಲ್ಕು ಪ್ರಕಾರವಾದ ವಿವಾಹವೇ ವಿಧಿ. ಮಿಕ್ಕವು ವಿಧಿಗನು ಸಾರವಾದುದಲ್ಲ. ಆದರೆ ೨೫ನೆಯ ಶ್ಲೋಕದಲ್ಲಿ

ಪೈಶಾಚಶ್ಚಾಽಸುರಶ್ಚೈವ ನ ಕರ್ತವ್ಯೌ ಕದಾಚನ

ಎಂದು ಇದೆ. ಎಂದರೆ ಪೈಶಾಚ ಮತ್ತು ಆಸುರ ವಿವಾಹಗಳು ಸಕಲರಿಗೂ ಅಕರ್ತವ್ಯಗಳು. ಆದುದರಿಂದ ಕ್ಷತ್ರಿಯರಿಗೆ ಕೇವಲ ಗಾಂಧರ್ವ ಮತ್ತು ರಾಕ್ಷಸ, ಈ ಎರಡು ಬಗೆಯ ವಿವಾಹಗಳೇ ವಿಹಿತವೆಂದು ಹೇಳಿದ ಹಾಗಾಯಿತು.

ಇದರಲ್ಲಿ ಕನ್ಯಾವರರ ಪರಸ್ಪರ ಅನುರಾಗದಿಂದ ಉಂಟಾಗುವ ಮದುವೆಯೇ ಗಾಂಧರ್ವ ವಿವಾಹ. ಇಲ್ಲಿ ಸುಭದ್ರೆಗೆ ಅನುರಾಗಾಭಾವದಿಂದ ಈ ವಿವಾಹವು ಅಸಂಭವ. ಮತ್ತು ಇದು ಕಾಮಸಂಭೂತವಾದ್ದರಿಂದ ಪರಮ ನೀತಿಜ್ಞರಾದ ಕೃಷ್ಣಾರ್ಜುನರಿಗೆ ಎಂದಿಗೂ ಮನಸ್ಸಿಗೆ ಬರತಕ್ಕುವಲ್ಲ. ಆದುದರಿಂದ ರಾಕ್ಷಸ ವಿವಾಹ ವಿನಾ ಮಿಕ್ಕ ಯಾವ ತೆರದ ವಿವಾಹವೂ ಕ್ಷತ್ರಿಯನಿಗೆ ಶಾಸ್ತ್ರಸಮ್ಮತವೂ ಧರ್ಮಪ್ರಶಸ್ತವೂ ಆದುದಲ್ಲ. ಇತರ ಬಗೆಯ ವಿವಾಹಗಳಿಗೆ ಸಂಭವವೂ ಇರಲಿಲ್ಲ. ಬಲವಂತದಿಂದ ಹುಡುಗಿಯನ್ನೆತ್ತಿ ಕೊಂಡುಹೋಗಿ ಮದುವೆಯಾಗುವ ವಿಧಾನಕ್ಕೆ ರಾಕ್ಷಸವೆನ್ನುವರು. ವಸ್ತುತಃ ಶಾಸ್ತ್ರಾನುಸಾರವಾಗಿ ಈ ರಾಕ್ಷಸ ವಿವಾಹವೇ ಕ್ಷತ್ರಿಯನ ಪಕ್ಷದಲ್ಲಿ ಪ್ರಶಸ್ತವಾದುದು.

ಮನುವು ಮೂರನೆಯ ಅಧ್ಯಾಯದ ೨೪ನೆಯ ಶ್ಲೋಕದಲ್ಲಿ—

ಚತುರೋ ಬ್ರಾಹ್ಮಣಸ್ಯಾದ್ಯಾನ್ ಪ್ರಶಸ್ತಾನ್ ಕವಯೋ ವಿದುಃ ।
ರಾಕ್ಷಸಂ ಕ್ಷತ್ರಿಯಸ್ಯೈಕಂ ಆಸುರೋ ವೈಶ್ಯ ಶೂದ್ರಯೋಃ ॥

ಯಾವುದು ಧರ್ಮವೋ ಮತ್ತು ಪ್ರಶಸ್ತವಾದುದೋ, ಯಾವುದು ತನ್ನ ತಂಗಿಗೂ ಅವಳ ಪತಿಗೂ ಗೌರವಾವಹವೋ, ಮತ್ತು ಯಾವುದು ತನ್ನ ಕುಲಕ್ಕೆ ಯಶಸ್ಕರವೋ ಅಂಥ ಪರಾಮರ್ಶವನ್ನು ಕೊಡಲು ಕೃಷ್ಣನು ಬಾಧ್ಯನು. ಆದುದರಿಂದ ಕೃಷ್ಣನು ಈ ಪರಾಮರ್ಶವನ್ನು ಕೊಟ್ಟು ತನ್ನ ಶಾಸ್ತ್ರಜ್ಞತೆಯನ್ನೂ, ನೀತಿಜ್ಞತೆಯನ್ನೂ, ಅಭ್ರಾಂತಬುದ್ಧಿಯನ್ನೂ ಸರ್ವಪಕ್ಷದವರ ಮಾನ ಸನ್ಮಾನ ರಕ್ಷಣೆಯ ಅಭಿಪ್ರಾಯವನ್ನೂ ಹಿತೇಚ್ಛೆಯನ್ನೂ ತೋರಿಸಿರುವನು.

ಈಗ ಮನುವಿನ ಮರೆಹೊಕ್ಕರೆ ನಡೆಯದು. ಮಹಾಭಾರತ ಯುದ್ಧಕಾಲದಲ್ಲಿ ಮನುಸಂಹಿತೆಯಿತ್ತೆಂಬುದಕ್ಕೆ ಪ್ರಮಾಣವೇನು ? ಎಂದು ಕೆಲವರು ಕೇಳಬಹುದು. ಇದೂ ಸರಿಯೆ. ಅಷ್ಟು ಪ್ರಾಚೀನಕಾಲದಲ್ಲಿ ಮನುಸಂಹಿತೆ ಸಂಕಲಿತವಾಗಿತ್ತೋ ಇಲ್ಲವೋ ಎಂಬ ವಿಷಯದಲ್ಲಿ ವಾದ ಪ್ರತಿವಾದ ನಡೆಯಬಹುದು. ಆದರೆ ಮನುಸಂಹಿತೆ ಪೂರ್ವದಲ್ಲಿ ನಡೆಯುತ್ತಿದ್ದ ರೀತಿ ನೀತಿಗಳ ಸಂಕಲನ ಮಾತ್ರವೆಂದು ಪಂಡಿತರ ಅಭಿಪ್ರಾಯ. ಇದು ಸರಿಯಾದರೆ ಯುಧಿಷ್ಠಿರನ ರಾಜತ್ವಕಾಲದಲ್ಲಿ ಈ ರೀತಿಯಾದ ವಿವಾಹ ಪದ್ಧತಿ ರೂಢಿಯಲ್ಲಿತ್ತು ಎಂದು ವಿವೇಚಿಸಬಹುದು. ವಿವೇಚಿಸುವ ಪ್ರಸಕ್ತಿಯಾಗದೆಹೋದರೆ ಮಹಾಭಾರತದಲ್ಲೇ ಈ ವಿಷಯವಿರುವುದು. ಅದನ್ನೇ ನೋಡೋಣವಾಗಲಿ. ಅದನ್ನೂ ಹೆಚ್ಚಾಗಿ ನೋಡಬೇಕಾದ್ದೇನೂ ಇಲ್ಲ. ನಾವೇ ಪಾಠಕರಿಗೆ ಹೇಳುತ್ತಿರುವ ಉತ್ತರವನ್ನು ಸ್ವಯಂ ಕೃಷ್ಣನೇ ಬಲದೇವನಿಗೆ ಹೇಳಿರುವನು. ಅರ್ಜುನನು ಸುಭದ್ರೆಯನ್ನೆತ್ತಿಕೊಂಡು ಹೋಗಿರುವನೆಂಬುದನ್ನು ಕೇಳಿ ಯಾದವರು ಕುಪಿತರಾಗಿ ಯುದ್ಧಸನ್ನದ್ಧರಾಗುತ್ತಿರುವಾಗ ಬಲದೇವನು "ಇಷ್ಟು ಗಲಭೆಯನ್ನು ಮಾಡುವುದಕ್ಕೆ ಮೊದಲು ಕೃಷ್ಣನನ್ನು ವಿಚಾರಿಸೋಣ. ಅವನು ಸುಮ್ಮನೆ ಇರುವಹಾಗಿದೆ" ಎಂದುಕೊಂಡು, ಕೃಷ್ಣನಲ್ಲಿ ಬಂದು "ಅರ್ಜುನನು ನಮ್ಮ ವಂಶಕ್ಕೆ ಅಪಮಾನವನ್ನು ಮಾಡಿರುವನು" ಎಂದು ರೇಗಿ, "ಈಗ ನಿನ್ನ ಅಭಿಪ್ರಾಯವೇನು ?" ಎಂದು ಕೇಳಿದನು. ಅದಕ್ಕೆ ಕೃಷ್ಣನು "ಅರ್ಜುನನು ನಮ್ಮ ಕುಲಕ್ಕೆ ಅಪಮಾನಮಾಡುವುದಕ್ಕೆ ಬದಲು ವಿಶೇಷ ಸನ್ಮಾನವನ್ನೇ ಮಾಡಿರುವನು. ನೀವು ಅರ್ಥಲೋಭಿಗಳಲ್ಲವೆಂದೇ ತಿಳಿದು ಹಣವನ್ನು ಕೊಟ್ಟು ಸುಭದ್ರೆಯನ್ನು

ಸ್ವೀಕರಿಸುವುದಕ್ಕೆ ಪ್ರಯತ್ನವನ್ನು ಕೂಡಾ ಮಾಡಲಿಲ್ಲ. ಸ್ವಯಂವರದಲ್ಲಿ ಕನ್ಯೆಯನ್ನು ಪಡೆಯುವುದು ಬಹು ಕಷ್ಟವಾದುದು. ಆದುದರಿಂದ ಅದಕ್ಕೆ ಒಪ್ಪದೆ ತಂದೆತಾಯಿಗಳ ಅನುಮತಿಯ ಮೇರೆಗೆ ಕೊಡಲ್ಪಟ್ಟ ಕನ್ಯೆಯನ್ನು ಪರಿಗ್ರಹಿಸುವುದು ತೇಜಸ್ವಿಗಳಾದ ಕ್ಷತ್ರಿಯರ ವಿಷಯದಲ್ಲಿ ಪ್ರಶಂಸನೀಯವಲ್ಲ ವಾದುದರಿಂದ ನನಗೆ ತೋರುವುದೇನೆಂದರೆ, ಕುಂತೀಪುತ್ರನಾದ ಧನಂಜಯನು ಮೇಲೆ ಹೇಳಿದ ದೋಷಗಳನ್ನು ಪರ್ಯಾಲೋಚಿಸಿ ಬಲವಂತದಿಂದ ಸುಭದ್ರೆಯನ್ನೆತ್ತಿಕೊಂಡುಹೋಗಿರುವನು. ಈ ಸಂಬಂಧ ನಮ್ಮ ಕುಲಕ್ಕೆ ಉಚಿತವಾದುದು. ಕುಲ ಶೀಲ ವಿದ್ಯಾ ಬುದ್ಧಿ ಸಂಪನ್ನನಾದ ಪಾರ್ಥನು ಬಲವಂತವಾಗಿ ಎತ್ತಿಕೊಂಡುಹೋಗಿರುವುದರಿಂದಲೇ ಸುಭದ್ರೆ ಯಶಸ್ವಿ ಯಾಗುವಳು, ಸಂದೇಹವಿಲ್ಲ" ಎಂದನು.

ಇಲ್ಲಿ ಕೃಷ್ಣನು ಕ್ಷತ್ರಿಯರಿಗೆ ನಾಲ್ಕು ಬಗೆಯಾದ ವಿವಾಹವನ್ನು ಹೇಳಿರುವನು: ೧. ಅರ್ಥ ಅಥವಾ ಶುಲ್ಕವನ್ನು ಕೊಟ್ಟು ವಿವಾಹವನ್ನು ಮಾಡೋಣ (ಆಸುರ), ೨. ಸ್ವಯಂವರ, ೩. ಮಾತಾಪಿತೃಗಳಿಂದ ಕೊಡಲ್ಪಟ್ಟ ಕನ್ಯೆಯನ್ನು ಮದುವೆಯಾಗುವುದು (ಪ್ರಾಜಾಪತ್ಯ), ೪. ಬಲಪೂರ್ವಕ ಹರಣ (ರಾಕ್ಷಸ).

ಇವುಗಳಲ್ಲಿ ಮೊದಲನೆಯದು ಕನ್ಯೆಯ ಕುಲಕ್ಕೆ ಅಪಕೀರ್ತಿಯನ್ನು ತರುವುದೆಂಬುದನ್ನು ಯಾರೂ ಆಕ್ಷೇಪಿಸಲಾರರು. ೨ನೆಯದರ ಫಲವು ಅನಿಶ್ಚಿತವಾದುದು, ೩ನೆಯದು ವರನ ಪಕ್ಷದಲ್ಲಿ ಅಗೌರವವಾದುದು ಎಂದಮೇಲೆ ೪ನೆಯದೊಂದೇ ವಿಹಿತವಾದ ವಿವಾಹವು. ಇದು ಕೃಷ್ಣನ ಮಾತಿನಿಂದಲೇ ಗೊತ್ತಾಗುವುದು. *

* ಮಹಾಭಾರತದ ಅನುಶಾಸನಿಕ ಪರ್ವದಲ್ಲಿ ವಿವಾಹವು ಉಂಟಷ್ಟೆ. ಅದನ್ನು ಮೇಲೆ ಎತ್ತಿಲ್ಲ. ಅದು ಪ್ರಕ್ಷಿಪ್ತವಾದುದು. ಅಲ್ಲಿ ರಾಕ್ಷಸ ವಿವಾಹವು ಭೀಷ್ಮನಿಂದಲೇ ನಿಂದಿತವೂ, ನಿಷಿದ್ಧವೂ ಆಗಿರುವುದು. ಆದರೆ ಭೀಷ್ಮನು ತಾನೇ ಕರ್ತವ್ಯಾಕರ್ತವ್ಯವನ್ನು ವಿವೇಚನೆಯಿಂದ ನಿರ್ಧರಿಸಿ, ಕಾಶೀರಾಜನ ಮೂವರು ಮಕ್ಕಳನ್ನು ಎತ್ತಿಕೊಂಡು ಬಂದಿದ್ದನು. ಶುದ್ಧಾಂಗವಾಗಿಯೂ ಭೀಷ್ಮನು ರಾಕ್ಷಸ ವಿವಾಹವು ನಿಂದಿತವೂ, ನಿಷಿದ್ಧವೂ, ಎಂದು ಹೇಳುವ ಸಂಭವವೇ ಇಲ್ಲ. ನಿಷಿದ್ಧವೂ, ನಿಂದಿತವೂ ಆದುದನ್ನು ಪ್ರಾಣಾಂತದಲ್ಲಿಯೂ ಕೂಡ ಮಾಡುವಂಥವನು ಭೀಷ್ಮನಲ್ಲ. ಅವನ ಚರಿತ್ರೆಯೇ ಹೀಗಿರುವುದು. ಭೀಷ್ಮ ಚರಿತ್ರೆಯನ್ನು ಬರೆದವನ ಬಾಯಲ್ಲಿ ಈ ಮಾತೆಂದಿಗೂ ಹೊರಡದು.

ನಾನು ರಾಕ್ಷಸ ವಿವಾಹದ ಪಕ್ಷವನ್ನು ಪುಷ್ಟೀಕರಿಸುತ್ತಿರುವೆನೆಂದು ಸಿದ್ಧಾಂತಮಾಡುವಂಥ ಅವಿವೇಕಿಗಳಾರೂ ಇಲ್ಲವೆಂದೆಣಿಸಿದ್ದೇನೆ. ರಾಕ್ಷಸ ವಿವಾಹವು ಬಹಳ ನಿಂದನೀಯವಾದುದೆಂಬ ಮಾತನ್ನೆತ್ತಿ ಸ್ಥಾನವನ್ನು ತುಂಬಿಬಿಡುವುದು ನಿಷ್ಪ್ರಯೋಜನ. ಆದರೆ ಆ ಕಾಲದಲ್ಲಿ ಕ್ಷತ್ರಿಯರಲ್ಲಿ ಇದು ಪ್ರಶಂಸಿತವಾಗಿತ್ತು. ಅದಕ್ಕೆ ಕೃಷ್ಣನು ಕಾರಣನಲ್ಲ. ನಮ್ಮಲ್ಲಿ ಸುಧಾರಕರೇ (ರಿಫಾರ್ಮರರೇ) ಆದರ್ಶ ಪುರುಷರೆಂದು ಹಲವರು ನಂಬುವರು. ಕೃಷ್ಣನು ಆದರ್ಶಪುರುಷನಾಗಿದ್ದರೆ "ಮಾಲಾಬಾರಿ"* ಎಂಬುವನ ರೀತಿ ಯನ್ನನುಸರಿಸಿ ರಿಫಾರ್ಮರರಾಗುವುದೇ ಉಚಿತವಾಗಿತ್ತು. ಮತ್ತು ಈ ಕೆಟ್ಟ ಪದ್ಧತಿಗೆ ಆಶ್ರಯವನ್ನು ಕೊಡದೆ ಇದನ್ನು ದಮನಮಾಡುವುದೇ ಉಚಿತವಾಗಿತ್ತು. ಆದರೆ ಮಾಲಾಬಾರಿಯ ಢಂಗನ್ನು ನಾವು ಮನುಷ್ಯ ಗುಣಗಳ ಮಧ್ಯದಲ್ಲಿ ಆದರ್ಶವೆಂದು ಎಣಿಸಿಲ್ಲ. ಇದಕ್ಕೆ ಉತ್ತರವಾವುದನ್ನೂ ಕೊಡುವ ಅವಶ್ಯಕತೆಯು ನಮಗೆ ತೋರಿಲ್ಲ.

ನಾವು ಮೊದಲೇ ತಿಳಿಸಿರುವಂತೆ ಬಲವಂತದಿಂದ ಕನ್ಯೆಯನ್ನಪಹರಿಸುವುದು ಈ ಮೂರು ಕಾರಣಗಳಿಂದ ನಿಂದನೀಯವು:—೧. ಕನ್ಯೆಯ ಮೇಲಣ ಅತ್ಯಾಚಾರ, ೨. ಅವಳ ತಂದೆಯ ಮೇಲಣ ಅತ್ಯಾಚಾರ, ೩. ಸಮಾಜನ ಮೇಲಣ ಅತ್ಯಾಚಾರ. ಕನ್ಯೆಯ ಮೇಲೆ ಅತ್ಯಾಚಾರ ವಾಗುವುದರ ಬದಲು ಅವಳಿಗೆ ಪರಮ ಮಂಗಳವೇ ಆಗಿರುವುದೆಂದು ತೋರಿಸಿರುವೆವು. ಈಗ ಅವಳ ತಂದೆಯ ಮೇಲಣ ಅತ್ಯಾಚಾರವುಂಟೇ ಇಲ್ಲವೇ ನೋಡೋಣ. ಇದನ್ನು ವಿಶದಪಡಿಸಲು ಅವಕಾಶವಿಲ್ಲದ್ದರಿಂದ ಸಂಕ್ಷೇಪವಾಗಿ ಸೂಚಿಸುವೆವು. ಇದುವರೆಗೂ ಹೇಳಿರುವುದರಲ್ಲಿಯೇ ಎಲ್ಲವೂ ಕೊನೆಗೊಂಡಿದೆ.

ಪಿತೃಕುಲಕ್ಕೆ ಎರಡು ಕಾರಣಗಳಿಂದ ಅತ್ಯಾಚಾರವುಂಟಾಗುವುದು: ೧. ತಮ್ಮ ಕನ್ಯೆ ಅಪಾತ್ರನಲ್ಲಿಯೋ ಅಥವಾ ನಮಗಿಷ್ಟವಿಲ್ಲದ ಪಾತ್ರ ನಲ್ಲಿಯೋ ಸೇರುವುದು. ಇಲ್ಲಿ ಅದಾಗಿಲ್ಲ. ಅರ್ಜುನನು ಅಪಾತ್ರನೂ ಅಲ್ಲ. ಇಷ್ಟವಿಲ್ಲದ ಪಾತ್ರನೂ ಅಲ್ಲ. ೨. ತನಗೆ ಅವಮಾನವಾಗುವುದು. ಆದರೆ, ಮೇಲೆ ಸೂಚಿಸಿರುವುದರಿಂದ ನಿಶ್ಚಿತವಾಗಿರುವುದೇನೆಂದರೆ—

*ಪ್ರಸಿದ್ಧನಾದ ರಿಫಾರ್ಮರು (ಸುಧಾರಕನು).

ಈ ಘಟನೆಯಿಂದ ಯಾದವರಿಗೆ ಅಪಮಾನವಾಯಿತೆಂದು ವಿವೇಚಿಸುವುದಕ್ಕೆ ಯಾವ ಕಾರಣಗಳೂ ಇರಲಿಲ್ಲ. ಇದನ್ನು ಯಾದವ ಶ್ರೇಷ್ಠನಾದ ಕೃಷ್ಣನೇ ಸಮರ್ಥಿಸಿರಲು ಇವನ ಮಾತನ್ನು ನ್ಯಾಯಸಮ್ಮತವೆಂದು ವಿವೇಚಿಸಿ ಇತರ ಯಾದವರು ಅರ್ಜುನನನ್ನು ಹಿಂದಕ್ಕೆ ಕರೆದುಕೊಂಡುಬಂದು ಉತ್ಸವ ಉಡುಗೊರೆ ಮುಂತಾದುವುಗಳಿಂದ ಕೂಡಿದ ವಿವಾಹವನ್ನು ನಡಸಿಕೊಟ್ಟರು. ಹೀಗಿರುವಲ್ಲಿ ಅವರಮೇಲೆ ಅತ್ಯಾಚಾರವಾಯಿತೆಂದು ಹೇಳಲು ನಾವು ಯಾರು? ೩. ಸಮಾಜದ ಮೇಲಿನ ಅತ್ಯಾಚಾರ—ಸಮಾಜವು ಯಾವ ಬಲವಂತವನ್ನು ವಿಧ್ಯುಕ್ತವಲ್ಲವೆಂದು ಹೇಳುವುದೋ ಅಂತಹ ಬಲಂತವನ್ನು ಸಮಾಜದಲ್ಲಿ ಯಾರಮೇಲಾದರೂ ಪ್ರಯೋಗಿಸಿದರೆ ಅದು ಸಮಾಜದ ಮೇಲಿನ ಅತ್ಯಾಚಾರವಾಗುವುದು. ಆ ಕಾಲದ ಕ್ಷತ್ರಿಯಕೃತವಾದ ಈ ಬಲಪ್ರಯೋಗವು ಪ್ರಶಸ್ತವೂ ಮತ್ತು ವಿಹಿತವೂ ಎನ್ನುತ್ತಿರುವಾಗ್ಗೆ ಸಮಾಜವು ತನ್ನ ಮೇಲೆ ಅತ್ಯಾಚಾರವಾಯಿತೆಂದು ಹೇಳುವುದಕ್ಕಧಿಕಾರವಿರಲಿಲ್ಲ. ಯಾವುದು ಸಮಾಜಕ್ಕೆ ಸಮ್ಮತವಾದುದೋ ಅದರಿಂದ ಸಮಾಜದ ಮೇಲಿನ ಅತ್ಯಾಚಾರವಿಲ್ಲ.

ನಾನು ಈ ತತ್ತ್ವವನ್ನು ಇಷ್ಟು ವಿಸ್ತರಿಸಿ ಬರೆಯುವುದಕ್ಕೆ ಕಾರಣವುಂಟು. ಸುಭದ್ರಾಹರಣದ ವಿಚಾರವಾಗಿ ಕೃಷ್ಣದ್ವೇಷಿಗಳಾರೂ ಕೃಷ್ಣನನ್ನು ಬೈದಿಲ್ಲ. ಆದುದರಿಂದ ಕೃಷ್ಣಪಕ್ಷವನ್ನು ಸಮರ್ಥಿಸುವ ಆವಶ್ಯಕತೆಯೇ ಇರಲಿಲ್ಲ. ವಿಲಾಯತಿಯಿಂದ ನಾವು ಎರವಲಾಗಿ ತಂದಿರುವ ಸಣ್ಣ ಗಜಕಡ್ಡಿಯಿಂದ ಅಳೆಯುತ್ತಾಹೋದರೆ ನಮ್ಮ ಪೂರ್ವಪುರುಷರಿಂದ ಬಂದಿರುವ ಅತುಳಸಂಪತ್ತಿಯ ಅಧಿಕಾಂಶವು ಬಿಟ್ಟುಹೋಗಿಬಿಡುವುದು ಎಂಬುದನ್ನು ತೋರಿರುವೆನು. ಆದುದರಿಂದ ನಮ್ಮ ಪೂರ್ವಕಾಲದ ಗಜಗಡ್ಡಿಯನ್ನೂ ಹೊರಕ್ಕೆ ತೆಗೆಯಬೇಕು.

ಚತುರ್ಥ ಪರಿಚ್ಛೇದ

ಖಾಂಡವ ದಹನ

ಸುಭದ್ರಾಹರಣದ ನಂತರ ಖಾಂಡವವನ ದಹನದಲ್ಲಿ ಕೃಷ್ಣನ ದರ್ಶನವು ಸಿಕ್ಕುವುದು. ಪಾಂಡವರು ಖಾಂಡವಪ್ರಸ್ಥದಲ್ಲಿ ಇರುತ್ತಿದ್ದರು. ಅವರ ರಾಜಧಾನಿಯ ಸಮೀಪದಲ್ಲಿ ಖಾಂಡವನೆಂಬ ದೊಡ್ಡ ಕಾಡು ಇತ್ತು. ಕೃಷ್ಣಾರ್ಜುನರು ಅದನ್ನು ಸುಟ್ಟರು. ಅದರ ವೃತ್ತಾಂತವೇ ಇದು. ಕಥೆ ಮಟ್ಟಿಗೆ ಅಜ್ಜಿಯದಾಗಿದೆ.

ಪೂರ್ವಕಾಲದಲ್ಲಿ ಶ್ವೇತಕಿ ಎಂಬೊಬ್ಬ ರಾಜನಿದ್ದನು. ಅವನು ದೊಡ್ಡ ಯಾಜ್ಞಿಕನು, ಸರ್ವದಾ ಯಾಗವನ್ನು ಮಾಡುತ್ತಿದ್ದನು. ಅವನು ಯಜ್ಞ ಮಾಡುತಲಿರುವಾಗ ಅವನ ಋತ್ವಿಜರಾದ ಬ್ರಾಹ್ಮಣರಿಗೆ ಬಹಳ ಮುಜುಗರವಾಯಿತು, ಆದುದರಿಂದ ಅವರು ಇನ್ನು ಮುಂದೆ ಯಜ್ಞಕರ್ಮ ವನ್ನಾಚರಿಸಲು ನಮ್ಮಿಂದ ಸಾಧ್ಯವಿಲ್ಲವೆಂದು ಕಡುಕಂಡಿತವಾಗಿ ಹೇಳಿ ಹೊರಟರು. ರಾಜನು ವಿಶೇಷವಾಗಿ ಅವರನ್ನು ಪೀಡಿಸಲು ಅವರು ಇಂತಹ ಕೆಲಸವು ನಮ್ಮಿಂದ ಸಾಗುವುದಿಲ್ಲ, ನೀನು ರುದ್ರನಲ್ಲಿಗೆ ಹೋಗು ಎಂದು ಹೇಳಿದರು. ರಾಜನು ರುದ್ರನಲ್ಲಿ ಹೋಗಲು,—ನಾವು ಯಜ್ಞ ಮಾಡುವವರಲ್ಲವು, ಅದು ಬ್ರಾಹ್ಮಣರ ಕೆಲಸವು ; ದುರ್ವಾಸನೆಂಬೊಬ್ಬ ಬ್ರಾಹ್ಮಣನಿರುವನು, ಅವನು ನನ್ನ ಅಂಶ; ಅವನಿಗೆ ನಾನು ಹೇಳುವೆನು ಎಂದೊಡಂಬಡಿಸಿದನು. ರುದ್ರನ ಬಲವಂತದ ಮೇಲೆ ದುರ್ವಾಸನು ರಾಜನ ಯಜ್ಞವನ್ನು ನೆರವೇರಿಸಿದನು. ಘೋರತರವಾದ ಯಜ್ಞವು ನಡೆಯ ತೊಡಗಿತು. ಹನ್ನೆರಡು ವರ್ಷಗಳವರೆಗೂ ಕ್ರಮವಾಗಿ ಆಜ್ಯಧಾರೆ ನಿರರ್ಗಳವಾಗಿ ಸುರಿಯತೊಡಗಿತು. ತುಪ್ಪವನ್ನುಂಡು ಯಜ್ಞೇಶ್ವರನಿಗೆ ಡಿಸ್‌ಪೆಪ್ಸಿಯವು (ಅಗ್ನಿಮಾಂದ್ಯ—ಅಜೀರ್ಣ) ಉಂಟಾಯಿತು. ಅವನು ಬ್ರಹ್ಮನಲ್ಲಿಗೆ ಹೋಗಿ ಮಹಾಸ್ವಾಮಿ — 'ಬಹು ಕಷ್ಟಕ್ಕೆ ಸಿಲುಕಿ ಕೊಂಡಿರುವೆನು. ಉಂಡುಂಡು ಮೈಯೆಲ್ಲಾ ಬೆಂಡಾಗಿಹೋಗಿವೆ ; ಏನಾದರೂ ಉಪಾಯವನ್ನು ಹೇಳಬೇಕು' ಎಂದು ಬೇಡಿಕೊಂಡನು. ಬ್ರಹ್ಮನು ಎಂತಹ ಡಾಕ್ಟರೀ ಕೆಲಸವನ್ನು ಮಾಡಿದನೋ ಅದು 'Similia

similibus curanter' ಕ್ರಮ ಎಂದರೆ, 'ಉಷ್ಣಂ ಉಷ್ಣೇನ ಶಾಮಯತಿ' ಎಂಬ ನ್ಯಾಯದಂತೆ ಆಗಿದೆ. ಒಳ್ಳೇದು, ಬ್ರಹ್ಮನು 'ಉಂಡುಂಡು ನಿನಗೆ ಈ ಜಾಡ್ಯವುಂಟಾಗಿರುವುದಾದರೆ ಇನ್ನೂ ಹಾಗೆಯೇ ಉಣ್ಣು. ಖಾಂಡವ ವನವನ್ನೆಲ್ಲಾ ಉಂಡುಬಿಡು. ಪೀಡೆಯು ಪರಿಹಾರವಾಗಿಹೋಗುವುದು' ಎಂದು ಹೇಳಿದನು.

ಅಗ್ನಿಯು ಖಾಂಡವವನವನ್ನುಣ್ಣುವುದಕ್ಕೆ ತೊಡಗಿ ನಾಲ್ಕುದಿಕ್ಕುಗಳಲ್ಲಿಯೂ ಧಗಧಗ ಶಬ್ದದಿಂದ ಸುಡಲಾರಂಭಿಸಲು ವನದಲ್ಲಿರುವ ಅನೇಕ ಜೀವಜಂತುಗಳೆಲ್ಲಾ ಎಂದರೆ — ಆನೆಗಳು ಸೊಂಡಲಿನಿಂದ ನೀರನ್ನು ತಂದುವು. ಹಾವುಗಳು ಹೆಡೆಯಿಂದ ನೀರನ್ನೆರಚಿದವು. ಹೀಗೆ ವನವಾಸಿಗಳಾದ ತಿರ್ಯಗ್ಜಂತುಗಳೆಲ್ಲ ಒಂದಾಗಿ ಅಗ್ನಿಯನ್ನಾರಿಸಿಬಿಟ್ಟವು. ಯಜ್ಞೇಶ್ವರನು ಏಳಾವರ್ತಿ ಸುಡುವುದಕ್ಕೆ ಹೋಗಿ ಪ್ರತಿಯೊಂದು ಸಲದಲ್ಲಿಯೂ ಹೀಗೆಯೇ ಹಿಮ್ಮೆಟ್ಟಿದನು. ಆಗ ಯಜ್ಞೇಶ್ವರನು ಬ್ರಾಹ್ಮಣರೂಪದಿಂದ ಕೃಷ್ಣಾರ್ಜುನರಲ್ಲಿ ಹೋಗಿ "ನಾನು ಹೊಟ್ಟೆಬಾಕನಾದ ಒಬ್ಬನು. ನನಗೆ ಉಣಬಡಿಸಬಲ್ಲಿರಾ?" ಎಂದು ಕೇಳಿದನು. ಅವರು ಅವನಿಗೆ ಉಣಬಡಿಸಲೊಪ್ಪಲು, ತನ್ನ ನಿಜಸ್ವರೂಪವನ್ನೂ ತನ್ನ ಸಣ್ಣ ಪ್ರಾರ್ಥನೆಯನ್ನೂ ತಿಳುಹಿಸಿದನು. "ಖಾಂಡವ ವನವನ್ನುಣ್ಣಬೇಕು, ಉಣ್ಣುವುದಕ್ಕೆ ಹೋಗಿರಲು ಇಂದ್ರನು ಮಳೆಗರೆದು ನನ್ನನ್ನಾರಿಸಿ ಉಣ್ಣದಂತೆ ಗೈದಿರುವನು" ಎಂದು ಹೇಳಿಕೊಂಡನು. ಆಗ ಕೃಷ್ಣಾರ್ಜುನರು ಅಸ್ತ್ರವನ್ನು ಹಿಡಿದು ವನವನ್ನು ಸುಡಲಿಕ್ಕೆ ಹೋದರು. ಇಂದ್ರನು ಮಳೆಯನ್ನು ಸುರಿಸಲು ಅರ್ಜುನನು ತನ್ನ ಬಾಣಗಳ ವೇಗದಿಂದ ಆ ಮಳೆಯನ್ನು ತಡೆದನು. ಇದು ಹೇಗೋ ಕಲಿಗಾಲದವರಾದ ನಾವು ತಿಳಿಯಲಾರೆವು. (ತಿಳಿದಿದ್ದರೆ ಅತಿವೃಷ್ಟಿಯಿಂದ ಪೈರುಪಚ್ಚೆಗಳನ್ನು ಕಾಪಾಡಿಕೊಳ್ಳುವುದಕ್ಕೆ ಉಪಾಯವಾದರೂ ಇರುತ್ತಿತ್ತು.) ಆದರೆ ಇಂದ್ರನು ಅರ್ಜುನನನ್ನು ಎದುರಿಸಿ ನಿಲ್ಲುವುವೆಂದರೇನು? ಇಂದ್ರನು ಬೆಟ್ಟವೊಂದನ್ನು ಕತ್ತರಿಸಿ ಅವನ ಮೇಲೆ ಬಿಸುಟನು. ಅರ್ಜುನನು ಬಾಣದ ವೇಗದಿಂದ ಅದನ್ನು ಕತ್ತರಿಸಿ ಎಸೆದನು. (ಈ ವಿದ್ಯೆಯು ನಮಗೆ ತಿಳಿದಿದ್ದರೆ ರೈಲ್ವೇ ಸುರಂಗದ ದಾರಿಗಳಿಗೆ ಬಹಳ ಅನುಕೂಲವುಂಟಾಗು

ತ್ತಿತ್ತು.) ಕೊನೆಗೆ ಇಂದ್ರನು ವಜ್ರವನ್ನು ಹಿರಿಯಲು ಆಗ ಆಕಾಶವಾಣಿಯು * ಇವರು ನರನಾರಾಯಣರೆಂಬ ಪ್ರಾಚೀನ ಋಷಿಗಳು ಎಂದು ತಿಳಿಸಿತು. ಆಕಾಶವಾಣಿ ಬಹಳ ಅನುಕೂಲವಾದುದು. ಈ ಮಾತನ್ನು ಹೇಳಿದವರಾರೆಂಬುದಕ್ಕೆ ಗೊತ್ತುಗುರಿಯೊಂದೂ ಇಲ್ಲವಾದರೂ ಹೇಳಿರುವ ಅಭಿಪ್ರಾಯವೇನೋ ಹೊರಬೀಳುವುದು. ಆಕಾಶವಾಣಿಯನ್ನು ಕೇಳಿ ಇಂದ್ರನು ಹಿಂದಿರುಗಿದನು. ಕೃಷ್ಣಾರ್ಜುನರು ಸ್ವೇಚ್ಛೆಯಿಂದ ವನವನ್ನು ಸುಡತೊಡಗಿದರು. ಬೆಂಕಿಯ ಹೆದರಿಕೆಯಿಂದ ಪಶುಪಕ್ಷಿಗಳು ಓಡಿಹೋಗುತ್ತಿದ್ದುವು. ಅವೆಲ್ಲವನ್ನೂ ಇವರು ಉರಿಯೊಳಕ್ಕೆ ಹೊಡೆದು ತಳ್ಳಿದರು. ಅವುಗಳ ರಕ್ತಮಾಂಸಗಳನ್ನುಂಡು ಯಜ್ಞೇಶ್ವರನ ಮಂದಾಗ್ನಿಯು ಗುಣಹೊಂದಿತು. ವಿಷದಿಂದ ವಿಷವು ಕ್ಷಯವಾಯಿತು. ಅಗ್ನಿ ಕೃಷ್ಣಾರ್ಜುನರಿಗೆ ವರವನ್ನು ಕೊಟ್ಟನು. ಉಭಯ ಕಕ್ಷಿಯವರೂ ಸಂತೋಷದಿಂದ ಹಿಂದಿರುಗಿದರು.

ಹೀಗೆ ಅಡ್ಡಾದಿಡ್ಡಿಯ ಕಥೆಗಳ ಬೆರಕೆಯನ್ನು ಎದುರಿಗೆ ಹಿಡಿದು ಐತಿಹಾಸಿಕ ಸಮಾಲೋಚನೆಯಲ್ಲಿ ಪ್ರವೃತ್ತರಾದರೆ ಕೇವಲ ಪರಿಹಾಸಕ್ಕೊಳಗಾಗುವುದಲ್ಲದೆ ಮತ್ತಾವ ಲಾಭವೂ ಆಗುವುದಿಲ್ಲ. ನಮ್ಮಿಂದ ಸಮಾಲೋಚ್ಯವಾದುದಾವುದೋ ಅಂತಹ ಕೃಷ್ಣ ಚರಿತ್ರೆಯಲ್ಲಿನ ಒಳ್ಳೆಯ ಅಥವಾ ಕೆಟ್ಟ ಅಂಗಗಳಾವುವೂ ಇದರಲ್ಲಿಲ್ಲ. ಇದರಲ್ಲಿ ಯಾವುದಾದರೂ ಐತಿಹಾಸಿಕ ತಾತ್ಪರ್ಯವಿರುವುದಾದರೆ ಅದು ಇಷ್ಟೇ ಆಗಿರಬೇಕು :—

ಪಾಂಡವರ ರಾಜಧಾನಿಯ ಹತ್ತಿರ ಒಂದು ದೊಡ್ಡ ವನವು ಇತ್ತು. ಅಲ್ಲಿ ಹಲವು ದುಷ್ಟಜಂತುಗಳು ನೆಲೆಗೊಂಡಿದ್ದವು. ಅದಕ್ಕೆ ಕೃಷ್ಣಾರ್ಜುನರು ಬೆಂಕಿ ಹಚ್ಚಿ ದುಷ್ಟ ಮೃಗಗಳನ್ನು ನಾಶಮಾಡಿ ಕಾಡನ್ನು ವ್ಯವಸಾಯಕ್ಕೆ ತಂದರು. ಇದರಲ್ಲಿ ಐತಿಹಾಸಿಕ ಕೀರ್ತಿಯಾಗಲಿ ಅಕೀರ್ತಿಯಾಗಲಿ ಯಾವುದೂ ಇಲ್ಲ.

---

* ಒಂದೆಡೆಯಲ್ಲಿ ಕೃಷ್ಣನು ವಿಷ್ಣುವಿನ ಕೇಶವೆಂತಲೂ, ಇಲ್ಲಿ ಪ್ರಾಚೀನ ಋಷಿ ಎಂತಲೂ, ಇನ್ನೊಂದೆಡೆಯಲ್ಲಿ ವಿಷ್ಣುವಿನ ಅವತಾರವೆಂತಲೂ ಇರುವುದನ್ನು ಪಾಠಕರು ನೋಡಿರಬಹುದು. ಈ ಮಾತಿಗೆ ಸಾಮಂಜಸ್ಯವನ್ನೊದಗಿಸುವುದರಿಂದ ಅಥವಾ ಖಂಡಿಸುವುದರಿಂದ ನಮಗೆ ಪ್ರಯೋಜನವಿಲ್ಲ. ಕೃಷ್ಣಚರಿತ್ರೆಯನ್ನು ಸಮಾಲೋಚಿಸುವುದು ಮಾತ್ರ ನಮ್ಮುದ್ದೇಶ.

ಸುಂದರವನ* ವೆಂಬ ಗಂಗಾಮುಖಜಭೂಮಿಯನ್ನು ಆಬಾದಿಗೆ ತರತಕ್ಕವರೂ ಹೀಗೆಯೇ ಆಗಿಂದಾಗ ಬೆಂಕಿ ಹಚ್ಚುತ್ತಲೇ ಇರುತ್ತಾರೆ. ಈ ವ್ಯಾಖ್ಯಾನವನ್ನು ಬರೆದದ್ದು ಟಾಲ್ಬಾಯ್ ವೀಲರ್ ಸಾಹೇಬರ ರೀತಿಯೇನೋ ಆಯಿತು. ಆದರೆ ನಾವು ಹೀಗೆಯೇ ತಾತ್ಪರ್ಯ ವೊಂದನ್ನು ಸೂಚಿಸಬೇಕಾದುದಕ್ಕೆ ಕಾರಣವಿರುವುದು. ಖಾಂಡವ ವನ ದಹನದ ಅಧಿಕಾಂಶವು ಮೂರನೆಯ ಸ್ತರಾಂತರ್ಗತವಾಗಬಹುದಾದರೂ ಸ್ಥೂಲಘಟನೆಯು ಮಹಾಭಾರತದಲ್ಲಿಲ್ಲವೆಂದು ನಾವು ಹೇಳುವುದಕ್ಕಾಗು ವುದಿಲ್ಲ. ಪರ್ವಸಂಗ್ರಹ ಮತ್ತು ಅನುಕ್ರಮಣಿಕಾಧ್ಯಾಯದಲ್ಲಿ ಇದರ ಪ್ರಸಂಗ ಇರುವುದು. ಈ ಖಾಂಡವವನ ದಹನದಿಂದಲೇ ಸಭಾ ಪರ್ವದ ಉತ್ಪತ್ತಿ. ಈ ವನಮಧ್ಯದಲ್ಲಿ ಮಯನೆಂಬ ದಾನವನು ವಾಸಿಸು ತ್ತಿದ್ದನು. ಅವನು ಸುಟ್ಟುಹೋಗುವಂತಾದಾಗ ಅರ್ಜುನನಲ್ಲಿ ಪ್ರಾಣ ಭಿಕ್ಷವನ್ನು ಬೇಡಿದನು. ಶರಣಾಗತನನ್ನು ಅರ್ಜುನನು ರಕ್ಷಿಸಿದನು. ಈ ಉಪಕಾರಕ್ಕೆ ಪ್ರತ್ಯುಪಕಾರ ಸ್ವರೂಪವಾಗಿ **ಮಯನೆಂಬ ದಾನವನು ಪಾಂಡವರಿಗೆ ಅತ್ಯುತ್ಕೃಷ್ಟವಾದ ಸಭಾಭವನವನ್ನು ಕಟ್ಟಿಕೊಟ್ಟನು. ಇದನ್ನು ಕುರಿತೇ ಸಭಾಪರ್ವದ ಕಥೆ.

ಸಭಾಪರ್ವವು ಅಷ್ಟಾದಶಪರ್ವಗಳಲ್ಲೊಂದು. ಮಹಾಭಾರತ ಯುದ್ಧಕ್ಕೆ ಇಲ್ಲಿ ಬೀಜಾರೋಪವು. ಇದನ್ನು ಒತ್ತಲಿಸಿಬಿಡುವುದಕ್ಕಾಗು ವುದಿಲ್ಲ. ಆದುದರಿಂದ ಇದರಲ್ಲಿ ಎಷ್ಟರಮಟ್ಟಿಗೆ ಐತಿಹಾಸಿಕ ತತ್ತ್ವವು ನಿಹಿತ ವಾಗಿರಬಹುದೋ ಅದನ್ನು ವಿಚಾರಿಸಿ ನೋಡುವುದುಚಿತ. ಸಭಾಭವನ ಮತ್ತು ಅದಕ್ಕಾಗಿ ರಾಜಸೂಯಯಾಗ ಇವೆರಡೂ ಮೌಲಿಕಗಳು ಮತ್ತು ಐತಿಹಾಸಿಕಗಳು ಎಂದು ಸ್ವೀಕರಿಸುವುದಕ್ಕೆ ಯಾವ ಆಪತ್ತಿಯೂ ಕಾಣು ವುದಿಲ್ಲ. ಸಭಾಭವನವು ಐತಿಹಾಸಿಕವಾದರೆ ಅದನ್ನು ಕಟ್ಟಿದವನೊಬ್ಬನು

---

* ಸುಂದರವನ ಅಥವಾ ಸುಂದರೀವನ. ಸುಂದರೀ ಎಂಬ ಮರದಿಂದ ತುಂಬಿದ ಕಾಡು. ಇದು ಗಂಗಾಮುಖಜಭೂಮಿಯನ್ನು ಆವರಿಸಿ ಆ ಪ್ರದೇಶಕ್ಕೆ ಈ ಹೆಸರನ್ನು ತಂದಿದೆ.

** 'ಮಯ' ಎಂಬುದೊಂದು ಜಾತಿ. ಇವರು ಕಪ್ಪುಚರ್ಮದ ದುಂಡು ತಲೆಯ ಕುಳ್ಳು ಗಡಸು ಮೈಕಟ್ಟಿನವರು. ಇವರು ಒಳ್ಳೆಯ ಶಿಲ್ಪಿಗಳು. ಇವರ ಜನಗಳೇ ಮೆಕ್ಸಿಕೋ ದೇಶದಲ್ಲಿ ಯುಕಟಾನ್ ಮುಂತಾದ ನಾಡುಗಳಲ್ಲಿ ಈಗಲೂ ಇರುವರು. ಈ ಮಯದಾನವನೂ ಈ ಜಾತಿಯವನೇ ?

ಅವಶ್ಯವಾಗಿ ಇರಲೇಬೇಕು. ಅಂತಹ ಕಾರೇಗಾರನು ಅಥವಾ ಇಂಜನಿಯರನ ಹೆಸರೇ ಮಯನು. ಅವನು ಅನಾರ್ಯವಂಶೀಯನೆಂದೋ ಏನೋ ಮಯದಾನವನೆನ್ನುತ್ತಿದ್ದರು. ಇವನು ಕಷ್ಟಕ್ಕೆ ಸಿಲುಕಿ ಅರ್ಜುನನ ಸಹಾಯದಿಂದ ಜೀವನಲಾಭವನ್ನು ಪಡೆದಿರಬಹುದು. ಕೃತಜ್ಞತೆಯಿಂದ ಈ ಇಂಜನಿಯರು ಅರ್ಜುನನಿಗೆ ಭವನವನ್ನು ಕಟ್ಟಿಕೊಟ್ಟಿರಲೂಬಹುದು. ಇದು ನಿಜವಾದರೆ ಇವನು ಹೇಗೆ ಕಷ್ಟಕ್ಕೆ ಸಿಲುಕಿದ್ದನು ಮತ್ತು ಅರ್ಜುನನಿಂದ ಹೇಗೆ ಉಪಕಾರವನ್ನು ಪಡೆದನು ಎಂಬುದು ಕೇವಲ ಖಾಂಡವವನ ದಹನದಲ್ಲಿ ಸಿಕ್ಕುವುದಾದರೂ ಇದು ಮನಸ್ಸಿಗೆ ಅಷ್ಟು ಸಮರ್ಪಕವಾಗಿ ಕಾಣುವುದಿಲ್ಲ. ಈ ಸಂಗತಿಯು ಖಾಂಡವವನ ದಹನದಲ್ಲಿ ಮುಚ್ಚುಮರೆಯಾಗಿ ಹೋಗಿದೆ. ಅನೇಕ ಪ್ರಾಚೀನ ಐತಿಹಾಸಿಕ ತತ್ತ್ವಗಳೇ ಹೀಗೆ ಅಂಧಕಾರದಲ್ಲಿ ಕವಿದುಹೋಗಿವೆ. ಮಯದಾನವನ ಸಮಾಚಾರವೇ ಕವಿಯ ಸೃಷ್ಟಿಯಾಗಿ ಇದ್ದರೂ ಇರಬಹುದು. ಹೇಗಾದರೂ ಇರಲಿ, ಈ ಮೂಲಕವಾಗಿ ಕೃಷ್ಣಾರ್ಜುನರ ಚರಿತ್ರೆಯನ್ನು ಸಂಸ್ಥಾಪಿಸಿರುವ ಭಾವ ಬಹಳ ಮನೋಹರವಾದುದು. ಇದನ್ನು ಬರೆಯದೆ ಬಿಡಲಾರೆವು. ಮಯದಾನವನು ಪ್ರಾಣವನ್ನು ಪಡೆದುಕೊಂಡು ಅರ್ಜುನನನ್ನು ಕುರಿತು —"ತಾವು ನನ್ನನ್ನು ಪ್ರಾಣದಿಂದುಳಿಸಿದಿರಿ. ತಮಗೆ ನನ್ನಿಂದಲಾವ ಪ್ರತ್ಯುಪಕಾರವಾದೀತು ಅಪ್ಪಣೆಯಾಗಬೇಕು" ಎಂದು ಕೇಳಿದನು. ಅರ್ಜುನನು ಪ್ರತ್ಯುಪಕಾರವೇನನ್ನೂ ಒಲ್ಲದೆ ಬರೀ ಪ್ರೀತಿಯೊಂದನ್ನು ಮಾತ್ರ ಬೇಡಿದನು. ಮಯನು ಅಷ್ಟಕ್ಕೆ ಬಿಡುವನಲ್ಲ. ಆವುದಾದರೊಂದು ಕಾರ್ಯವನ್ನು ಮಾಡಿಕೊಟ್ಟ ಹೊರತು ಹಿಂದಿರುಗನು. ಆಗ ಅರ್ಜುನನು—"ಎಲೈ ಕೃತಜ್ಞನೇ, ನೀನು ಆಸನ್ನ ಮೃತ್ಯುವಿನಿಂದ ರಕ್ಷೆಯನ್ನು ಪಡೆದೆನೆಂದು ನನಗೆ ಪ್ರತ್ಯುಪಕಾರವನ್ನು ಮಾಡಲಿಚ್ಛೆಸುತ್ತಿದ್ದೀಯೆ. ಇದಕ್ಕೋಸ್ಕರಲೇ ನಿನ್ನಿಂದ ಯಾವ ಕೆಲಸವನ್ನು ಮಾಡಿಸಿಕೊಳ್ಳುವುದಕ್ಕೂ ನನಗೆ ಇಚ್ಛೆಯುಂಟಾಗುವುದಿಲ್ಲ" ಎಂದನು.

ಇದೇ ನಿಷ್ಕಾಮಧರ್ಮ. ಕ್ರಿಶ್ಚಿಯನ್ ಯೂರೋಪಿನಲ್ಲಿ ಇದಿಲ್ಲ. ಸ್ವರ್ಗ ಅಥವಾ ಈಶ್ವರ ಪ್ರೀತಿ ಕಾಮ್ಯವಾದುದು ಎಂದು ಬೈಬಲಿನಲ್ಲಿ ನಿಯಮಿಸಿರುವುದು. ನಾವು ಇವೆಲ್ಲವನ್ನು ಬಿಟ್ಟು ಪಾಶ್ಚಾತ್ಯ ಗ್ರಂಥಗಳಿಂದ

ಯಾವ ಧರ್ಮವನ್ನೂ ನೀತಿಯನ್ನೂ ಕಲಿಯತೊಡಗಿರುವೆವೋ ಅದು ನನ್ನ ವಿವೇಚನೆಯಲ್ಲಿ ದೌರ್ಭಾಗ್ಯ. ಅಪರಾರ್ಧದ ಅರ್ಜುನನ ವಾಕ್ಯದಿಂದ ಈ ನಿಷ್ಕಾಮಧರ್ಮವು ಇನ್ನೂ ಸ್ಪಷ್ಟವಾಗುತ್ತಲಿದೆ. ಮಯನಿಗೆ ಯಾವುದಾದರೊಂದು ಕಾರ್ಯವನ್ನು ಮಾಡಿಕೊಟ್ಟ ಹೊರತು ಮನಸ್ಸೌಖ್ಯವಾಗದಿರಲು, ಆ ಸುಖದಿಂದ ಅರ್ಜುನನು ಅವನನ್ನು ಯಾಕೆ ವಂಚಿಸುತ್ತಿರುವನು? ಅದುದರಿಂದ ಅರ್ಜುನನು ಹೇಳತೊಡಗಿದನು: "ನಿನ್ನ ಅಭಿಲಾಷೆಯು ವ್ಯರ್ಥವಾಗಬೇಕೆಂಬುದು ನನ್ನ ಅಭಿಪ್ರಾಯವಲ್ಲ. ನೀನು ಕೃಷ್ಣನಿಗೆ ಯಾವುದಾದರೊಂದುಪಕಾರವನ್ನು ಮಾಡಿಕೊಟ್ಟರೆ ಅದು ನನಗೇ ಮಾಡಿಕೊಟ್ಟಂತಾಗುವುದು. ಎಂದರೆ--ನಿನ್ನಿಂದ ಕೆಲಸ ತೆಗೆದುಕೊಳ್ಳಲೇಬೇಕಾದರೆ ಆ ಕೆಲಸವು ಇತರರದಾಗಿರಬೇಕೇ ಹೊರತು ನನ್ನದಾಗಿ ಇರಬಾರದು" ಎಂದು.

ಆಗ ಮಯನು ಕೃಷ್ಣನನ್ನು ಕುರಿತು—ಏನಾದರೊಂದು ಕಾರ್ಯಮಂಗೈಯಲನುಜ್ಞೆಯನ್ನು ಕೊಡೆಂದು ಬಲವಂತಪಡಿಸಿದನು. ಇವನು ದಾನವ ಕುಲಕ್ಕೆ ವಿಶ್ವಕರ್ಮನು ಎಂದರೆ ಚೀಫ್ ಇಂಜನಿಯರನು. ಕೃಷ್ಣನು ತನ್ನ ಕೆಲಸವನ್ನು ಮಾಡುವುದಕ್ಕೆ ಅವನನ್ನು ನಿಯೋಗಿಸದೆ ಯುಧಿಷ್ಠಿರನಿಗೆ ಒಂದು ಸಭಾಭವನವನ್ನು ನಿರ್ಮಿಸಿಕೊಡು. ಅದು ಮನುಷ್ಯರಾರೂ ಅನುಕರಿಸದಂಥಾದ್ದಾಗಿರಲಿ ಎಂದು ಹೇಳಿದನು.

ಇದು ಕೃಷ್ಣನ ಸ್ವಂತ ಕೆಲಸವಲ್ಲ. ಕೃಷ್ಣನು ತನ್ನ ಸ್ವಂತ ಜೀವನದಲ್ಲಿ ಕಾರ್ಯಗಳೆರಡನ್ನುದ್ದೇಶಿಸಿಕೊಂಡಿದ್ದನು. ಇವು ಧರ್ಮಪ್ರಚಾರ, ಧರ್ಮರಾಜ್ಯ ಸಂಸ್ಥಾಪನೆ ಎಂದು ಮೊದಲೇ ತಿಳಿಸಿರುವೆನು. ಧರ್ಮ ಪ್ರಚಾರದ ಮಾತನ್ನು ಇನ್ನೂ ಹೆಚ್ಚಾಗಿ ಎತ್ತಿಲ್ಲ. ಈ ಸಭಾ ನಿರ್ಮಾಣವು ಧರ್ಮರಾಜ್ಯ ಸಂಸ್ಥಾಪನೆಯ ಮೊದಲನೆಯ ಸೂತ್ರ. ಇದರ ಪ್ರಯತ್ನ ಇಲ್ಲಿ ಮೊಟ್ಟಮೊದಲು ಗೋಚರವಾಗುವುದು. ಯುಧಿಷ್ಠಿರನ ಸಭಾ ನಿರ್ಮಾಣದಿಂದ ಉಂಟಾದ ಘಟನೆಗಳೆಲ್ಲವೂ ಧರ್ಮರಾಜ್ಯ ಸಂಸ್ಥಾಪನೆಯ ಪರಿಣತಿಯಲ್ಲಿ ಕೊನೆಗೊಂಡಿವೆ. ಧರ್ಮರಾಜ್ಯ ಸಂಸ್ಥಾಪನೆ ಪ್ರಪಂಚದ ಕೆಲಸ. ಅದೇ ಕೃಷ್ಣನ ಉದ್ದೇಶ. ಆದುದರಿಂದ ಈ ಸಭಾ ಸಂಸ್ಥಾಪನೆ ಅವನ ಸ್ವಂತ ಕೆಲಸ. ಕಳೆದ ಅಧ್ಯಾಯದಲ್ಲಿ ಸಮಾಜ ಸಂಸ್ಕರಣ ವಿಷಯ

ಬಂದಿತ್ತು. ಕೃಷ್ಣನು ಸಮಾಜ ಸಂಸ್ಥಾಪಕನು ಅಥವಾ (ಸೋಷಿಯಲ್ ರಿಫಾರ್ಮರ್) ಆಗಲು ಯತ್ನಮಾಡಿರಲಿಲ್ಲವೆಂದು ನಾವು ಹೇಳಿದ್ದೆವು. ದೇಶದ ನೈತಿಕ ಮತ್ತು ರಾಜನೈತಿಕ ಪುನರುಜ್ಜೀವನ (Moral and Political Regeneration) ಧರ್ಮಪ್ರಚಾರ ಮತ್ತು ಧರ್ಮರಾಜ್ಯ ಸಂಸ್ಥಾಪನೆ ಇವೇ ಅವನ ಉದ್ದೇಶ. ಇವು ಉಂಟಾದರೆ ಸಮಾಜ ತಾನಾಗಿಯೇ ಸಂಸ್ಕರಣವನ್ನು ಪಡೆಯುವುದು. ಹಾಗಲ್ಲದೆ ಹೋಗಲು ಸಮಾಜಕ್ಕೆ ಯಾವ ತೆರದ ಸಂಸ್ಕರಣ ಕಾರ್ಯವೂ ಸಫಲವಾಗದು. ಆದರ್ಶ ಪುರುಷನು ಇದನ್ನು ಬಲ್ಲನು--ಯಾವುದೆಂದರೆ ಗಿಡಕ್ಕೆ ಅಗತೆ, ಪಾತಿ ಮಾಡಿ ಆದರಿಸದೆ ಕೊಂಬೆಯೊಂದಕ್ಕೆ ನೀರೆರೆದರೆ ಫಲವಾಗದೆಂಬುದನ್ನು. ಇದು ನಮಗೆ ತಿಳಿಯದೆ ಇದೆ--ಆದುದರಿಂದಲೇ ಸಮಾಜ ಸಂಸ್ಕರಣವೆಂಬುದೊಂದು ಹೊರಚ್ಚಿನ ದಿನಸು ಎಂದು ನಿಲ್ಲಿಸಿ ಗುಡುಗಾಡುತ್ತಿರುವೆವು. ನಮಗೆ ಪ್ರಖ್ಯಾತಿಯಲ್ಲಿ ಎಂದರೆ ಖ್ಯಾತಿಯನ್ನು ಪಡೆಯುವುದರಲ್ಲಿ ಇರುವ ಅಭಿರುಚಿಯೇ ಇದಕ್ಕೆ ಒಂದು ಕಾರಣ. ಸಮಾಜ ಸಂಸ್ಕಾರಕನೆಂದು ಹೊರಬಿದ್ದೊಡನೆಯೇ ಥಟಕ್ಕನೆ ಖ್ಯಾತಿಯನ್ನು ಪಡೆಯಬಹುದು. ಅದರಲ್ಲಿಯೂ ಸಂಸ್ಕರಣ ಪದ್ಧತಿ ಇಂಗ್ಲೀಷರ ರೀತಿಯನ್ನು ಅನುಕರಿಸುವುದಾದರಂತೂ ಹೇಳಬೇಕಾದ್ದೇ ಇಲ್ಲ ಇದರಮೇಲೆ ಕೆಲಸವಿಲ್ಲದವರಿಗಂತೂ ಇದೊಂದು ಬಗೆಯ ಉತ್ತೇಜನವೇ. ಸಮಾಜ ಸಂಸ್ಕಾರ ಆಗಲಿ ಹೋಗಲಿ ಉತ್ತೇಜನವೇನೋ ಉಂಟಷ್ಟೆ. ಉತ್ತೇಜನ ಬಹು ಸೊಗಸಾದದ್ದು. ಈ ಸಂಪ್ರದಾಯದ ಜನಗಳನ್ನು ನಾವು ಕೇಳುವುದೇನೆಂದರೆ ಧರ್ಮೋನ್ನತಿಯನ್ನು ಬಿಟ್ಟು ಸಮಾಜ ಸಂಸ್ಕರಣವು ಮತ್ತಾವುದರ ತಳಹದಿಯಮೇಲೆ ನಿಂತೀತು ? ರಾಜನೈತಿಕ ಉನ್ನತಿಗೂ ಧರ್ಮದ ಉನ್ನತಿಯೇ ಮೂಲ. ಆದುದರಿಂದ ಎಲ್ಲರೂ ಸೇರಿ ಧರ್ಮೋನ್ನತಿಗೆ ಮನವನ್ನು ಕೊಡಿ. ಹೀಗಾದರೆ ಸಮಾಜ ಸಂಸ್ಕರಣಕ್ಕೆ ಬೇರೆಯಾಗಿ ಯತ್ನಮಾಡಬೇಕಾದುದೇನೂ ಇಲ್ಲ. ಇದಲ್ಲವಾದರೆ ಸಮಾಜ ಸಂಸ್ಕಾರ ಇನ್ನಾವುದರಿಂದಲೂ ಆಗಲಾರದು. ಆದುದರಿಂದಲೇ ಆದರ್ಶ ಮನುಷ್ಯನು ಮಾಲಾಬಾರಿಯಾಗಲೂ ಯತ್ನಿಸಲಿಲ್ಲ.

ಪಂಚಮ ಪರಿಚ್ಛೇದ

ಕೃಷ್ಣನ ಮನುಷ್ಯತೆ

ಕೃಷ್ಣ ಚರಿತ್ರೆಯ ಈ ಸಮಾಲೋಚನೆಯಲ್ಲಿ ಕೃಷ್ಣನ ಕೇವಲ ಮಾನವ ಪ್ರಕೃತಿಯ ಸಮಾಲೋಚನೆಯನ್ನು ಮಾಡುವೆನು. ಅವನು ಈಶ್ವರನೋ ಅಲ್ಲವೋ ಆ ವಿಷಯದಲ್ಲಿ ಏನನ್ನೂ ಹೇಳುವುದಿಲ್ಲ. ಈ ಮಾತಿನೊಡನೆ ಪಾಠಕರಿಗೇನೂ ಸಂಬಂಧವಿರುವುದಿಲ್ಲ. ನನ್ನ ಮತವು ಒಂದುವೇಳೆ ಹೀಗಿರುವುದಾದರೂ ಅದನ್ನು ಪಾಠಕರು ಗ್ರಹಿಸಲೊಪ್ಪಬೇಕೆಂದು ಹೇಳ ಲಾರೆನು. ಒಪ್ಪಿಕೊಳ್ಳಲಿ ಬಿಡಲಿ ಪಾಠಕರ ನಿಜಬುದ್ಧಿ ಮತ್ತು ಚಿತ್ತಗಳ ಮೇಲೆ ಭಾರವಿರಬೇಕೇ ಹೊರತು ಬಲವಂತವೇನೂ ನಡೆಯಲಾರದು. ಸ್ವರ್ಗ ಜೈಲ್ ಖಾನೆಯಲ್ಲ. ಅದಕ್ಕೆ ಒಂದೇ ಬಾಗಿಲೂ ಅಲ್ಲ. ಇತರ ಬಾಗಿಲುಗಳಿಲ್ಲವೆಂದು ನಾನು ತಿಳಿದುಕೊಂಡಿಲ್ಲ. *ಧರ್ಮವೇನೋ ಒಂದೇ. ಅದನ್ನು ಹೊಂದುವುದಕ್ಕೆ ಮಟ್ಟಿಗೆ ಹಲವು ಹಾದಿಗಳುಂಟು. ಕೃಷ್ಣಭಕ್ತನೂ ಕ್ರಿಶ್ಚಿಯನನೂ ಇಬ್ಬರೂ ಅಲ್ಲಿಗೆ ತಲಪಬಹುದು. ಆದುದರಿಂದ ಕೃಷ್ಣ ಧರ್ಮವನ್ನು ಸ್ವೀಕರಿಸದವನಾವನಾಗಲಿ ಅವನು ಪತಿತನೆಂದು ನಾನು ತಿಳಿಯ ಲಾರೆನು. ಕೃಷ್ಣ ದ್ವೇಷಿಗಳೂ ಮತ್ತು ಪ್ರಾಚೀನ ವೈಷ್ಣವರೂ ನನ್ನನ್ನು ನರಕಯಾತ್ರಿಕನೆಂದು ಭಾವಿಸುವುದಿಲ್ಲವೆಂದು ನಂಬಿರುವೆನು.

ನಾವು ಕೃಷ್ಣನ ಮಾನವ ಪ್ರಕೃತಿಯನ್ನು ಮಾತ್ರ ಸಮಾಲೋಚಿಸು ವೆವು. ಇದರಿಂದ ಅವನ ಮನುಷ್ಯಾತೀತವಾದ ಪ್ರಕೃತಿಯೊಂದು ಇದ್ದರೂ ಅದರ ವಿಕಾಸವು ಇಲ್ಲಿ ಪ್ರತಿಷಿದ್ಧ. ಈಶ್ವರನು ಲೋಕ ಶಿಕ್ಷಾರ್ಥವಾಗಿ ಆದರ್ಶ ಮನುಷ್ಯನಾಗಿ ಲೋಕಾಲಯದಲ್ಲಿ ಜನ್ಮವನ್ನು ಎತ್ತುವನಾದರೆ ಅವನು ಮಾನವಶಕ್ತಿಯಿಂದ ಜಗತ್ತಿನಲ್ಲಿ ಕೇವಲ ಮಾನುಷ ಕರ್ಮ ಗಳನ್ನು ಮಾಡುವನು. ಅವನು ಎಂದಿಗೂ ಲೋಕಾತೀತವಾದ ಶಕ್ತಿಯ

* ಧರ್ಮಕ್ಕೆ ಲೆಕ್ಕವಿಲ್ಲದಷ್ಟು ಹಾದಿಗಳು. ಅವನು ಹೇಗಾದರೂ ಆಗಲಿ ಧರ್ಮಾನುಷ್ಠಾನವನ್ನು ಮಾಡಲು ಅದು ನಿಷ್ಫಲವೆಂದಿಗೂ ಆಗದು.

ಮಹಾಭಾರತ, ಶಾಂತಿಪರ್ವ, ೧೭೪ನೆಯ ಅಧ್ಯಾಯ.

ಮೂಲಕ ಲೌಕಿಕವೋ ಅಲೌಕಿಕವೋ ಆದ ಕರ್ಮವಾವುದನ್ನೂ ಮಾಡನು. ಏಕೆಂದರೆ--ಅಲೌಕಿಕವಾದ ಶಕ್ತಿ ಯಾವುದೂ ಮನುಷ್ಯನಿಗಿಲ್ಲ. ಇಂಥಾ ಅಲೌಕಿಕವಾದ ಶಕ್ತಿಯಿಂದ ಸ್ವಕರ್ಮವನ್ನು ಸಾಧಿಸಿಕೊಳ್ಳುವವನು ಮನುಷ್ಯನಿಗೆ ಆದರ್ಶನಾಗಲಾರನು. ಯಾವ ಶಕ್ತಿ ಮನುಷ್ಯನಿಗಿಲ್ಲವೋ ಅದನ್ನು ಮನುಷ್ಯನು ಅನುಕರಿಸುವುದೆಂತು ?*

ಆದ್ದರಿಂದ ಶ್ರೀಕೃಷ್ಣನು ಈಶ್ವರಾವತಾರವಾದರೂ ಅವನ ಅಲೌಕಿಕ ಶಕ್ತಿಯು ವಿಕಾಸವಾಗಲಿ, ಮಾನುಷಕಾರ್ಯಸಿದ್ಧಿಯಾಗಲಿ ಉಂಟಾಗುವುದಿಲ್ಲ. ಮಹಾಭಾರತದಲ್ಲಿ ಎಲ್ಲೆಲ್ಲಿ ಕೃಷ್ಣನಿಗೆ ಅಲೌಕಿಕ ಶಕ್ತಿ ಆರೋಪಿಸಲ್ಪಟ್ಟಿರುವುದೋ ಅಲ್ಲೆಲ್ಲ ಅವು ಅಮೌಲಿಕಗಳು ಮತ್ತು ಪ್ರಕ್ಷಿಪ್ತಗಳು ಹೌದೋ ಅಲ್ಲವೋ ಎಂಬುದನ್ನು ಯಥಾ ಸ್ಥಾನದಲ್ಲಿ ವಿಚಾರ ಮಾಡುವೆವು. ಈಗ ನಾವು ತಿಳಿಸುವುದೇನು ? ಕೃಷ್ಣನು ತಾನಾಗಿಯೇ ಎಲ್ಲಿಯೂ ತಾನು ಈಶ್ವರನೆಂದುಕೊಂಡಿಲ್ಲ.† ತನಗೆ ಯಾವ ಬಗೆಯಲ್ಲಾದರೂ ಅಮಾನುಷ ಶಕ್ತಿಯುಂಟೆಂದು ಅವನು ಎಲ್ಲಿಯೂ ಹೇಳಿಲ್ಲ ; ಆರಾದರೂ ಇವನಿಗೆ ಈಶ್ವರತ್ವವನ್ನು ಆರೋಪಣಮಾಡಿದಾಗ ಆ ಮಾತನ್ನು ಅನುಮೋದಿಸಿಯೂ ಇಲ್ಲ ; ಅಲ್ಲದೆ ಹಾಗೆ

---

*"We forget that Christ incarnate was such as we are, and some of us are butting him where he can be no example to us at all. Let no fear of losing the dear great truth of the divinity of Jesus make you lose the dear great truth of the humanity of Jesus. He took upon himself our nature as a man of the like passions, he fought that terrible fight in the wilderness year by year, As an innocent man, was he persecuted by narrow hearted Jews; and his was a humanity whose virtue was pressed by all the needs of the multitude and yet kept its richness of nature; a humanity which though given up to death on the cross, expressed all that is within the capacity of our humanity; and if we really follow him we shall be holy even as he is holy."

—Sermon by Dr. Brookly, delivered at Trinity Church, Boston, 25th March 1885.

ಶ್ರೀ ಕೃಷ್ಣನ ವಿಷಯದಲ್ಲಿ ನನ್ನ ಮಾತೂ ಇದೇ.

† ಆವ ಒಂದೆರಡು ಕಡೆಗಳಲ್ಲಿ ಇಂತಹ ಮಾತು ಉಂಟೋ ಅವು ಪ್ರಕ್ಷಿಪ್ತಗಳೆಂದು ಯಥಾ ಸ್ಥಾನದಲ್ಲಿ ಸಪ್ರಮಾಣವಾಗಿ ತೋರಿಸುವೆವು.

ಆರೋಪಿಸುವವರ ವಿಶ್ವಾಸವು ದೃಢವಾಗುವಂತೆ ಯಾವ ತೆರವಾದ ಆಚರಣೆಯನ್ನೂ ನಡಸಿ ಇರುವುದಿಲ್ಲ. ಇಷ್ಟರಮೇಲೆ ಒಂದೆಡೆಯಲ್ಲಿ "ನಾನು ಸಾಧ್ಯವಾದ ಮಟ್ಟಿಗೆ ಪುರುಷಕಾರವನ್ನು ಪ್ರಕಾಶಮಾಡಬಲ್ಲೆನು; ಆದರೂ ದೈವಾನುಷ್ಠಾನದಲ್ಲಿ ನನಗೆ ಎಳ್ಳಷ್ಟೂ ಸಾಮರ್ಥ್ಯವಿರುವುದಿಲ್ಲ"ವೆಂದು ಸ್ಪಷ್ಟವಾಗಿಯೇ ಹೇಳಿರುವನು.*

ಅವನು ಯತ್ನಪೂರ್ವಕವಾಗಿ ಆಚಾರ ವ್ಯವಹಾರಗಳನ್ನು ನಡಸಿರುವನು. ಅವನು ದೇವರೆಂದು ಯಾರ ಮನಸ್ಸಿಗಾದರೂ ತೋಚಿದರೆ ಅದಕ್ಕೆ ಆಧಾರವು ಮನುಷ್ಯೋಚಿತವಾದ ನಡವಳಿಕೆಯೇ ಹೊರತು ಈ ತೆರದ ಭಾವವು ಕೃಷ್ಣನಲ್ಲಿ ಎಲ್ಲಿಯೂ ಕಂಡುಬಂದಿಲ್ಲ. ಈ ಎಲ್ಲ ಮಾತುಗಳ ಉದಾಹರಣೆಯ ರೂಪವಾಗಿ ಅವನು ಖಾಂಡವ ವನ ದಹನವಾದಮೇಲೆ ಯುಧಿಷ್ಠಿರಾದಿಗಳನ್ನು ಬೀಳ್ಕೊಂಡು ದ್ವಾರಕಿಗೆ ಪ್ರಯಾಣಮಾಡುವಾಗ ನಡೆಸಿದ ಆಚರಣೆಯ ವರ್ಣನೆಯನ್ನು ಇಲ್ಲಿ ಎತ್ತಿರುವೆನು. ಇದು ಅತ್ಯಂತ ಮಾನುಷಿಕ :—

ವೈಶಂಪಾಯನರು ಹೇಳಿದರು—ಭಗವಾನ್ ವಾಸುದೇವನು ಪರಮ ಪ್ರೀತರಾದ ಪಾಂಡವರಿಂದ ಪೂಜಿಸಲ್ಪಟ್ಟವನಾಗಿ ಕೆಲವು ದಿನಗಳವರೆಗೂ ಖಾಂಡವಪ್ರಸ್ಥದಲ್ಲಿಯೇ ವಾಸಮಾಡಿದನು. ಕೊನೆಗೆ ಪಿತೃ ದರ್ಶನಕ್ಕಾಗಿ ಅತಿಶಯವಾದ ಕುತೂಹಲದಿಂದ ತನ್ನ ಮನೆಗೆ ಹೋಗಲು ಅತ್ಯಂತ ಅಭಿಲಾಷೆಯುಳ್ಳವನಾದನು. ಅವನು ಮೊದಲು ಧರ್ಮರಾಜನಾದ ಯುಧಿಷ್ಠಿರನಿಗೆ ಹೇಳಿಕಳುಹಿಸಿ, ಆಮೇಲೆ ಸ್ವಂತ ಸೋದರತ್ತೆಯಾದ ಕುಂತೀದೇವಿಯ ಪಾದಗಳಿಗೆ ವಂದಿಸಿದನು. ಆಮೇಲೆ ವಾಸುದೇವನು ತನ್ನ ತಂಗಿಯಾದ ಸುಭದ್ರೆಯ ದರ್ಶನಕ್ಕೆಂದು ಅವಳ ಸಮೀಪಕ್ಕೆ ಹೋಗಿ ಅರ್ಥಯುಕ್ತವಾದ ಯಥಾರ್ಥ ಹಿತಕರಗಳಾದ ಅಲ್ಪಾಕ್ಷರಗಳಿಂದ ಕೂಡಿದ ಅಖಂಡನೀಯವಾದ ವಾಕ್ಯಗಳಿಂದ ಅವಳಿಗೆ ನಾನಾ ಪ್ರಕಾರವಾಗಿ ತಿಳಿಯ ಹೇಳಲು, ಭದ್ರಭಾಷಿಣಿಯಾದ ಸುಭದ್ರೆಯೂ ಕೂಡ ತನ್ನ ತಾಯಿ ಮುಂತಾದ ಸ್ವಜನರಲ್ಲಿ ವಿಜ್ಞಾಪನೀಯವಾದ ವಾಕ್ಯಸಮುದಾಯಗಳನ್ನು ಹೇಳಿ ಬಾರುಬಾರಿಗೂ

---

* ಅಹಂ ಹಿ ತತ್ ಕರಿಷ್ಯಾಮಿ ಪರಂ ಪುರುಷಕಾರತಃ ।
ದೈವಂ ತು ನ ಮಯಾ ಶಕ್ಯಂ ಕರ್ಮಕರ್ತುಂ ಕಥಂಚನ ॥
ಉದ್ಯೋಗ ಪರ್ವ, ೭೮ನೆಯ ಅಧ್ಯಾಯ.

ಪೂಜೆಮಾಡಿ ಅಭಿವಾದನಮಾಡಿದಳು. ವೃಷ್ಣಿವಂಶ ಶ್ರೇಷ್ಠನಾದ ಕೃಷ್ಣನು ಅವಳ ಅನುಜ್ಞೆಯನ್ನು ಪಡೆದು ದ್ರೌಪದಿ ಮತ್ತು ಧೌಮ್ಯರನ್ನು ಕಾಣಿಸಿ ಕೊಂಡು ಧೌಮ್ಯರಿಗೆ ವಿಧಿವತ್ತಾಗಿ ವಂದನೆಯನ್ನೂ, ದ್ರೌಪದಿಯೊಡನೆ ಸಂಭಾಷಣೆಯನ್ನೂ ಮತ್ತು ಔತಣವನ್ನೂ ಕೊಟ್ಟು, ಅರ್ಜುನನೊಡನೆ ಯುಧಿಷ್ಠಿರನೇ ಮೊದಲಾದ ನಾಲ್ಕುಜನ ಅಣ್ಣತಮ್ಮಂದಿರಲ್ಲಿಯೂ ಹೋಗಿ ಅಮರಗಣಗಳಿಂದ ಸುತ್ತುವರಿಯಲ್ಪಟ್ಟ ಮಹೇಂದ್ರನಂತೆ ಶೋಭಿಸ ತೊಡಗಿದನು.

ಆಮೇಲೆ ಕೃಷ್ಣನು ಪ್ರಯಾಣೋಚಿತವಾದ ಕರ್ಮಗಳನ್ನು ನಡೆಯಿಸ ತೊಡಗಿ ಸ್ಥಾನಾಂತರದಲ್ಲಿ—ಯಥಾ ಸಮಯದಲ್ಲಿ ಅಲಂಕಾರಗಳನ್ನು ಧರಿಸಿ, ಜಪಮಾಲೆ, ನಮಸ್ಕಾರ ಮತ್ತು ವಿವಿಧ ಗಂಧ ಪರಿಮಳ ದ್ವಾರಾ ದೇವದ್ವಿಜರ ಪೂಜೆಯನ್ನು ಬೆಳೆಯಿಸಿ, ಕ್ರಮ ಕ್ರಮವಾಗಿ ಆ ಕಾಲಕ್ಕೆ ತಕ್ಕ ಹಿತಕಾರ್ಯ ಗಳನ್ನು ನೆರವೇರಿಸಿ, ಸ್ವಪುರ ಗಮನೋದ್ಯೋಗಕ್ಕಾಗಿ ಹೊರವಳಯಕ್ಕೆ ಬಂದನು. ಬ್ರಾಹ್ಮಣರು ಸ್ವಸ್ತಿವಾಚನವನ್ನುಗ್ಗಡಿಸುತ್ತ ದಧಿಪಾತ್ರ, ಸ್ಥಲ ಪುಷ್ಪ, ಮಂತ್ರಾಕ್ಷತ ಮುಂತಾದ ಮಂಗಳದ್ರವ್ಯಗಳನ್ನು ಹಿಡಿದು ಅಲ್ಲಿ ಸಿದ್ಧ ರಾಗಿದ್ದರು. ವಾಸುದೇವನು ಅವರುಗಳಿಗೆ ಧನದಾನ ಪುರಸ್ಸರವಾಗಿ ಪ್ರದಕ್ಷಿಣೆಯನ್ನು ಮಾಡಿ ಅತ್ಯುತ್ಕೃಷ್ಟವಾದ ತಿಥಿ ನಕ್ಷತ್ರಗಳಿಂದೊಡಗೂಡಿದ ಶುಭಮುಹೂರ್ತದಲ್ಲಿ ಗದಾ ಚಕ್ರ ಅಸಿ ಶಾರ್ಙ್ಗ ಮೊದಲಾದ ಅಸ್ತ್ರಶಸ್ತ್ರ ಗಳಿಂದ ಪರಿವೃತನಾಗಿ ಗರುಡಕೇತನ ವಾಯು ವೇಗಗಾಮಿ ಕಾಂಚನ ಮಯ ರಥವನ್ನು ಹತ್ತಿ ಸ್ವಪುರಾಭಿಮುಖವಾಗಿ ಹೊರಟಿರಲು ಮಹಾರಾಜ ಯುಧಿಷ್ಠಿರನು ಸ್ನೇಹಪರತಂತ್ರನಾಗಿ ಆ ರಥವನ್ನು ಹತ್ತಿ ಸಾರಥಿಯಾದ ದಾರುಕನನ್ನು ಅವನ ಸ್ಥಳದಿಂದ ಬೇರೆಡೆಯಲ್ಲಿ ಕುಳ್ಳಿರಿಸಿ ತಾನೇ ಸಾರಥ್ಯವನ್ನು ವಹಿಸಿ ಕಡಿವಾಣಗಳನ್ನು ಹಿಡಿದನು. ಮಹಾಬಾಹು ಅರ್ಜುನನೂ ಆ ರಥವನ್ನು ಹತ್ತಿ ಬಂಗಾರದ ಕೋಲುಗಳಿಂದ ಹೊಳೆಯುತ್ತಿರುವ ಶ್ವೇತ ಚಾಮರಗಳನ್ನು ಹಿಡಿದು ಶ್ರೀ ಕೃಷ್ಣನಿಗೆ ಗಾಳಿಯನ್ನು ಬೀಸುತ ಪ್ರದಕ್ಷಿಣೆ ಯನ್ನು ಮಾಡಿದನು. ಮಹಾಬಲಶಾಲಿಯಾದ ಭೀಮಸೇನನೂ ನಕುಲ ಸಹದೇವರೂ ಋತ್ವಿಕ್ಪುರೋಹಿತರುಗಳೂ ಒಟ್ಟುಗೂಡಿ ಅವನೊಡನೆ ಹೋಗ ತೊಡಗಿದರು. ಶತ್ರುಬಲಾಂತಕನಾದ ವಾಸುದೇವನು ಯುಧಿಷ್ಠಿರಾದಿ ಭ್ರಾತೃ

ವರ್ಗದಿಂದ ಅನುಗಮ್ಯಮಾನನಾಗಿ ಶಿಷ್ಯಗಣಗಳಿಂದನುಗತನಾದ ಗುರುವಿನಂತೆ ಬೆಳಗುತಲಿದ್ದನು. ಅವನು ಅರ್ಜುನನ್ನಾಲಿಂಗಿಸಿ ಯುಧಿಷ್ಠಿರ ಭೀಮಸೇನರನ್ನು ವಂದಿಸಿ ನಕುಲ ಸಹದೇವರನ್ನು ಕುರಿತು ಸಂಭಾಷಿಸಿದನು. ಯುಧಿಷ್ಠಿರ ಭೀಮಾರ್ಜುನರು ಅವನನ್ನಾಲಿಂಗಿಸಿದರು, ನಕುಲ ಸಹದೇವರು ಅಭಿವಂದಿಸಿದರು. ಬಳಿಕ ಕ್ರಮವಾಗಿ ಅರ್ಧ ಯೋಜನದವರೆಗೂ ತೆರಳಿ ಶತ್ರುಸೂದನನಾದ ಕೃಷ್ಣನು ಯುಧಿಷ್ಠಿರನಿಗೆ ಕೈಮುಗಿದು ಹಿಂದಿರುಗಬೇಕೆಂದು ಹೇಳಿ ಕಾಲುಗಳನ್ನು ಹಿಡಿದುಕೊಂಡನು. ಧರ್ಮರಾಜನಾದ ಯುಧಿಷ್ಠಿರನು ಕಾಲಿಗೆ ಬಿದ್ದ ಪತಿತಪಾವನ ಕಮಲಲೋಚನನಾದ ಕೃಷ್ಣನನ್ನು ಮೇಲಕ್ಕೆ ಎತ್ತಿ ಅವನ ತಲೆಯನ್ನು ಮೂಸಿನೋಡಿ ಮನೆಗೆ ಹೋಗಲನುಜ್ಞೆಯನ್ನು ಕೊಟ್ಟನು. ಆಮೇಲೆ ಭಗವಾನ್ ವಾಸುದೇವನು ಪಾಂಡವರೊಡನೆ ಯಥಾವಿಧಿಯಾಗಿ ಪ್ರತಿಜ್ಞಾಪೂರ್ವಕವಾಗಿ ಬಲು ಕಷ್ಟದಿಂದ ಅವರನ್ನು ಹಿಂದಿರುಗಿಸಿ ಅಮರಾವತಿಗೆ ಹೊರಟ ಮಹೇಂದ್ರನಂತೆ ದ್ವಾರಾವತಿಗೆ ಹಿಂದಿರುಗಿದನು. ಕಣ್ಣಿಗೆ ಕಾಣುವವರೆಗೂ ಎವೆಯಿಕ್ಕದೆ ಪಾಂಡವರು ಅವನನ್ನೇ ನೋಡುತ್ತ ಮನಸ್ಸಿನಲ್ಲಿಯೇ ಅವನನ್ನು ಅನುಸರಿಸಿ ಹೋದರು. ಅವನನ್ನೆಷ್ಟು ನೋಡಿದರೂ ಅವರ ಮನಸ್ಸಿಗೆ ತೃಪ್ತಿಯುಂಟಾಗದಿರಲು ಅವನು ಅವರ ದೃಷ್ಟಿಪಥಕ್ಕೆ ಹೊರಚ್ಚಾದನು. ಆಗ ಪಾಂಡವರು ಕೃಷ್ಣ ದರ್ಶನದಲ್ಲಿ ನಿರಾಶರಾಗಿ ತದ್ವಿಷಯಗಳನ್ನು ಚಿಂತಿಸುತ ಊರಿಗೆ ತಲುಪಿದರು. ದೇವಕೀನಂದನನಾದ ಕೃಷ್ಣನ ಜತೆಯಲ್ಲಿ ಬರುತ್ತಿರುವ ಮಹಾವೀರನಾದ ಸಾತ್ಯಕಿಯೊಡನೆ ದಾರುಕನ ಸಾರಥ್ಯದಿಂದ ಗರುಡಗಮನದಿಂದ ದ್ವಾರಕಿಯನ್ನು ಸೇರಿದನು. ಧರ್ಮರಾಜನಾದ ಯುಧಿಷ್ಠಿರನು ತಮ್ಮಂದಿರೊಡನೆ ಸುಹೃಜ್ಜನರಿಂದ ಸುತ್ತುವರಿಯಲ್ಪಟ್ಟವನಾಗಿ ಸ್ವಪುರವನ್ನು ಪ್ರವೇಶಿಸಿ ತಮ್ಮಂದಿರು, ಬಂಧುಗಳು ಮತ್ತು ಮಕ್ಕಳುಗಳಿಂದ ಬೀಳ್ಕೊಂಡು ದ್ರೌಪದಿಯೊಡನೆ ಆಮೋದ ಪ್ರಮೋದ ಕಾಲಕ್ಷೇಪವನ್ನು ಮಾಡತೊಡಗಿದನು. ಅತ್ತಕಡೆ ಕೃಷ್ಣನು ಪರಮ ಆಹ್ಲಾದಿತಚಿತ್ತನಾಗಿ ದ್ವಾರಕಿಯನ್ನು ಪ್ರವೇಶಿಸಿದನು. ಉಗ್ರಸೇನ ಮೊದಲಾದ ಯಾದವ ಶ್ರೇಷ್ಠರು ಅವನನ್ನು ಪೂಜಿಸುತ್ತಿರಲು ವಾಸುದೇವನು ಪುರಪ್ರವೇಶವನ್ನು ಮಾಡಿ ಮೊದಲು ವೃದ್ಧ ತಂದೆಯಾದ ಆಹುಕನಿಗೂ, ಯಶಸ್ವಿನಿಯಾದ ತಾಯಿಗೂ, ಆಮೇಲೆ

ಬಲಭದ್ರ ಇವರಿಗೂ ಅಭಿವಾದನಮಾಡಿ, ಪ್ರದ್ಯುಮ್ನ, ಶಾಂಬ, ನಿಶಠ ಚಾರುದೇಷ್ಣ, ಗದಾ, ಅನಿರುದ್ಧ ಮತ್ತು ಭಾನುಕ ಮುಂತಾದವರನ್ನು ಆಲಿಂಗಿಸಿ ವೃದ್ಧರ ಅನುಮತಿಯನ್ನು ಪಡೆದು, ರುಕ್ಮಿಣಿಯ ಭವನಕ್ಕೆ ಹೋದನು.

ಷಷ್ಠ ಪರಿಚ್ಛೇದ

ಜರಾಸಂಧ ವಧೆಯ ಪರಾಮರ್ಶ

ಇತ್ತ ಕಡೆ ಸಭಾಗೃಹವನ್ನು ನಿರ್ಮಿಸಿದುದಾಯಿತು. ಯುಧಿಷ್ಠಿರನು ರಾಜಸೂಯವನ್ನು ಮಾಡಬೇಕೆಂಬ ಪ್ರಸ್ತಾವವೂ ಹೊರಟಿತು. ಎಲ್ಲರೂ ಈ ಮತವನ್ನು ಅನುಮೋದಿಸಿದರೂ ಯುಧಿಷ್ಠಿರನು ಕೃಷ್ಣನ ಮತವನ್ನು ತಿಳಿಯದೆ ಈ ಕೆಲಸಕ್ಕೆ ಕೈಹಾಕುವುದಕ್ಕಾಗುವುದಿಲ್ಲವೆಂದನು. ಏಕೆಂದರೆ, ಕೃಷ್ಣನೇ ನೀತಿಜ್ಞನು; ಆದುದರಿಂದ ಕೃಷ್ಣನನ್ನು ಕರೆದುಕೊಂಡುಬರಲು ಜನಗಳನ್ನು ಕಳುಹಿಸಿದನು. ಕೃಷ್ಣನು ಸಮಾಚಾರವನ್ನು ತಿಳಿದೊಡನೆಯೇ ಖಾಂಡವಪ್ರಸ್ಥಕ್ಕೆ ಬಂದನು.

ರಾಜಸೂಯವನ್ನು ಮಾಡುವ ವಿಷಯದಲ್ಲಿ ಯುಧಿಷ್ಠಿರನು ಕೃಷ್ಣನಿಗೆ ಹೇಳತೊಡಗಿದನು:—

ನಾನು ರಾಜಸೂಯವನ್ನು ಮಾಡಲು ಅಶಿಸುತ್ತಿರುವೆನು. ಇದು ಇಷ್ಟಪಟ್ಟ ಮಾತ್ರದಿಂದಲೇ ಸಂಪನ್ನವಾಗತಕ್ಕದೆಂಬುದಲ್ಲ. ಇದನ್ನು ಹೇಗೆ ನಡಸಬೇಕೋ ಅದು ನಿನಗೇ ಗೊತ್ತು. ಯಾವನು ಸಕಲವನ್ನೂ ಮಾಡಬಲ್ಲನೋ, ಯಾವನು ಸರ್ವತ್ರ ಪೂಜ್ಯನೋ, ಯಾವನು ಒಟ್ಟು ಜಗತ್ತಿಗೇ ಒಡೆಯನೋ ಅವನೇ ರಾಜಸೂಯವನ್ನು ಮಾಡಲು ಯೋಗ್ಯನು.

ಈ ವಿಷಯವನ್ನು ಕುರಿತು ಯುಧಿಷ್ಠಿರನು ಕೃಷ್ಣನಲ್ಲಿ ಆಲೋಚಿ ತಕ್ಕುದೇ ಹೌದು. ತಾನೇನು ಅಂಥವನೋ? ತನ್ನಿಂದ ಸಕಲವೂ ಮಾಡಲಾಗುವುದೋ? ತಾನೇನು ಸರ್ವತ್ರ ಪೂಜ್ಯನೋ? ಮತ್ತು ಸಮಸ್ತ ಜಗತ್ತಿಗೂ ಒಡೆಯನೋ?

ತಮ್ಮಂದಿರ ಭುಜಬಲದಿಂದ ತಾನೇನೋ ಬಹು ದೊಡ್ಡ ರಾಜನಾಗಿರುವುದೇನೋ ಸರಿ. ರಾಜಸೂಯವನ್ನು ಮಾಡುವಂಥ ರಾಜ

ನಾಗಿರುವೆನೋ? ನಾನು ಎಷ್ಟು ದೊಡ್ಡವನು? ಎಂಬುದರ ಅಳತೆಯನ್ನು ಯಾರೂ ತಾನಾಗಿ ತಾನೇ ಮಾಡಿಕೊಳ್ಳಲಾರನು. ಡಾಂಭಿಕರೂ ದುರಾತ್ಮರೂ, ದೊಡ್ಡ ಗಜಗಡ್ಡಿಯಿಂದ ತಮ್ಮನ್ನು ತಾವೇ ಅಳೆದುಕೊಂಡು ತಮ್ಮ ಮಹತ್ವದ ವಿಷಯವಾಗಿ ಕೃತನಿಶ್ಚಯರೂ ಸಂತುಷ್ಟಚಿತ್ತರೂ ಆಗಿ ಕೂಡ್ರುವುದೇನೋ ಉಂಟು. ಯುಧಿಷ್ಠಿರನಂತೆ ನ್ಯಾಯಪರನೂ ಸಾವಧಾನಿಯೂ ವಿನಯಸಂಪನ್ನನೂ ಆದವನಲ್ಲಿ ಇದು ಅಸಂಭವ. ಅವನು ತಾನೇನೋ ದೊಡ್ಡ ರಾಜನೇ ಹೌದು. ಆದರೆ ತಮ್ಮ ಸ್ವಂತ ಅಳತೆಯಿಂದ ಈ ದೊಡ್ಡಸ್ತಿಕೆಯಲ್ಲಿ ತನಗೆ ನಂಬಿಕೆಯಿಲ್ಲವೆಂದೆಂದುಕೊಂಡಿದ್ದನು. ತನ್ನ ಮಂತ್ರಿಗಳನ್ನೂ ಭೀಮಾರ್ಜುನಾದಿಗಳನ್ನೂ ಕರೆದು ನನ್ನಿಂದ ರಾಜಸೂಯವು ನಡೆದೀತೋ? ಎಂದು ವಿಚಾರಿಸಿದನು. ಅವಶ್ಯವಾಗಿ ಆಗುವುದು, ನೀನೇ ಅದಕ್ಕೆ ತಕ್ಕವನು ಎಂದು ಅವರೆಲ್ಲರೂ ಹೇಳಿದರು. ಧೌಮ್ಯ, ದ್ವೈಪಾಯನ ಮೊದಲಾದ ಋಷಿಗಳನ್ನು ವಿಚಾರಿಸಲು ಅವರೂ "ನಿನ್ನಿಂದ ಆಗಬಹುದು, ನೀನು ರಾಜಸೂಯಾನುಷ್ಠಾನಕ್ಕೆ ತಕ್ಕವನು" ಎಂದುಸುರಿದರು. ಆದರೂ ಸಾವಧಾನ* ಮನಸ್ಕನಾದ ಯುಧಿಷ್ಠಿರನ ಮನಸ್ಸು ನಿಶ್ಚಿಂತವಾಗಲಿಲ್ಲ. ಅರ್ಜುನನಾಗಲಿ ವ್ಯಾಸನಾಗಲಿ ಯುಧಿಷ್ಠಿರನ ಪರಿಚಿತರಲ್ಲಿ ಯಾರು ಎಲ್ಲರಿಗಿಂತಲೂ ಶ್ರೇಷ್ಠನೋ ಅವನಿಂದ ಈ ಮಾತಿಗೆ ಉತ್ತರ ದೊರೆತ ಹೊರತು ಯುಧಿಷ್ಠಿರನ ಸಂದೇಹ ಹೋಗದು. ಆದುದ್ದರಿಂದಲೇ ಮಹಾಬಾಹುವೂ ಸರ್ವಲೋಕೋತ್ತಮನೂ ಆದ ಕೃಷ್ಣನೊಡನೆ ಪರಾಮರ್ಶ ಮಾಡಲು ನಿಶ್ಚಯಿಸಿದನು. ಕೃಷ್ಣನು ಸರ್ವಜ್ಞನು ಮತ್ತು ಸರ್ವಕರ್ತನು. ಅವನು ಅವಶ್ಯವಾಗಿ ನನಗೆ ಸತ್ಪರಾಮರ್ಶವನ್ನು ಕೊಡುವನು ಎಂದು ಭಾವಿಸಿದದು. ಆದುದರಿಂದಲೇ ಅವನನ್ನು ಬರಮಾಡಿಕೊಂಡದ್ದಾಯಿತು. ಅವನು ಬಂದ

---

* ಪಂಚಪಾಂಡವರ ಚರಿತ್ರೆಯನ್ನು ಬುದ್ಧಿವಂತನಾದ ಸಮಾಲೋಚಕನು ಆಲೋಚಿಸಿ ನೋಡುವುದರಲ್ಲಿ ಯುಧಿಷ್ಠಿರನ ಪ್ರಧಾನವಾದ ಗುಣ ಸಾವಧಾನತೆ; ಭೀಮನು ದುಸ್ಸಾಹಸಿ; ಅರ್ಜುನನು ತನ್ನ ಬಾಹುಬಲದ ಗೌರವವನ್ನರಿತು ನಿರ್ಭಯನು ಮತ್ತು ನಿಶ್ಚಿಂತನು. ಈ ಜಗತ್ತಿನಲ್ಲಿ ಸಾವಧಾನತೆ ಅನೇಕ ಕಥೆಗಳಲ್ಲಿ ಧರ್ಮವೆಂಬ ಪರಿಚಯವನ್ನು ಪಡೆದಿದೆ. ಇಲ್ಲಿ ಇದು ಅಪ್ರಾಸಂಗಿಕವೇ ಆದರೂ ಗುರುತರವೆಂದು ತಿಳಿದು ಇದನ್ನು ಬರೆದಿರುವೆನು. ಈ ಸಾವಧಾನತೆಯೊಡನೆ ಯುಧಿಷ್ಠಿರನ ದ್ಯೂತಾನುರಾಗ ಎಷ್ಟುಮಟ್ಟಿಗೆ ಸಂಗತವೋ ಅದನ್ನು ತೋರಿಸಲು ಇದು ಸ್ಥಳವಲ್ಲ.

ಕೂಡಲೇ ಮೊಲೆ ಎತ್ತಿದ ಮಾತನ್ನು ಕೇಳಿದನು. ಅವನನ್ನೇತಕ್ಕೆ ಕೇಳಿದ ನೆಂಬುದನ್ನು ಯುಧಿಷ್ಠಿರನು ಮನಬಿಚ್ಚಿ ಹೇಳುತ್ತಿರುವನು:—

ನನ್ನ ಅನೇಕ ಸಹೃದಯರು ಯಜ್ಞವನ್ನು ಮಾಡಬೇಕೆಂಬ ಪರಾಮರ್ಶವನ್ನಿತ್ತಿರುವರು. ನಿನ್ನ ಪರಾಮರ್ಶವನ್ನರಿಯದೆ ಈ ಕೆಲಸಕ್ಕೆ ಕೈಹಾಕಲು ನಿಶ್ಚಯ ಮಾಡಿಲ್ಲ. ಎಲೈ ಕೃಷ್ಣನೇ, ಹಲವರು ಬಂಧುತೆಯ ನಿಮಿತ್ತದಿಂದ ದೋಷಗಳನ್ನು ಎತ್ತಿ ಆಡುವುದಿಲ್ಲ. ಕೆಲವರು ಸ್ವಾರ್ಥಪರರಾಗಿ ಪ್ರಿಯವಾಕ್ಯಗಳನ್ನು ಹೇಳುವರು ಕೆಲವರು ತಮಗೆ ಯಾವುದು ಹಿತವೋ ಅದೇ ಪ್ರಿಯವೆಂದು ತಿಳಿಯುವರು. ಎಲೈ ಮಹಾತ್ಮನೇ, ಈ ಪೃಥ್ವಿಯ ಮಧ್ಯದಲ್ಲಿ ಇಂತಹ ಜನಗಳೇ ಹೆಚ್ಚು. ಇಂಥವರುಗಳ ಪರಾಮರ್ಶದಿಂದ ಯಾವ ಕಾರ್ಯವನ್ನೂ ಮಾಡಲಾಗದು. ನೀನು ಮೇಲೆ ಹೇಳಿದ ದೋಷಗಳಿಲ್ಲದವನೂ ಕಾಮಕ್ರೋಧ ವಿವರ್ಜಿತನೂ ಆದುದರಿಂದ ಯಥಾರ್ಥವಾದ ಪರಾಮರ್ಶವನ್ನು ಕೊಡು.

ಪಾಠಕರೇ ನೋಡಿರಿ, ಕೃಷ್ಣನ ಕಾರ್ಯಕಲಾಪಗಳನ್ನು ಸದಾ ನೋಡುತ್ತಿರುವ ಆತ್ಮೀಯರು ಕೃಷ್ಣನು ಎಂಥವನೆಂದು ಭಾವಿಸಿರುವರು,* ಮತ್ತು ನಾವು ಈಗ ಏನಂತ ತಿಳಿದುಕೊಂಡಿರುವೆವು. ಕೃಷ್ಣನು ಕಾಮ ಕ್ರೋಧವಿವರ್ಜಿತನು, ಸರ್ವಹಿತೈಕದೃಕ್, ಸತ್ಯವಾದಿ, ಸರ್ವದೋಷ ಶೂನ್ಯ, ಸರ್ವಲೋಕೋತ್ತಮ, ಸರ್ವಜ್ಞ ಮತ್ತು ಸರ್ವಕೃತ್ ಎಂದು ಅವರು ತಿಳಿದುಕೊಂಡಿದ್ದರು. ಅವನು ಲಂಪಟನು, ಹಾಲು ಬೆಣ್ಣೆಗಳನ್ನು ಕದ್ದವನು, ಕುಟಿಲತಂತ್ರಿಯು, ಮಿಥ್ಯಾವಾದಿ, ರಿಪುವಶೀಭೂತನು ಮತ್ತು ಅನ್ಯಾಯ ದೋಷಯುಕ್ತನು ಎಂದು ನಾವು ತಿಳಿದುಕೊಂಡಿರುವೆವು. ಧರ್ಮದ ಚರಮಾದರ್ಶವೆಂದು ಪ್ರಾಚೀನ ಗ್ರಂಥಗಳಲ್ಲಿ ಪರಿಚಿತನಾಗಿರುವವನು ಯಾವ ಜಾತಿಯಿಂದ ಇಷ್ಟು ಕೆಳಕ್ಕೆ ಇಳಸಲ್ಪಟ್ಟಿರುವನೋ ಅಂತಹ ಜಾತಿಯಲ್ಲಿ ಧರ್ಮ ಲೋಪವಾಗುವುದು ಅಚ್ಚರಿಯೇ ?

ಯುಧಿಷ್ಠಿರನೆಂದುಕೊಂಡಿದ್ದಹಾಗೇ ಆಯಿತು. ಅಪ್ರಿಯವಾದ ಸತ್ಯವಾಕ್ಯವನ್ನು ಮತ್ತಾರೂ ಯುಧಿಷ್ಠಿರನಿಗೆ ಹೇಳಿರಲಿಲ್ಲ. ಕೃಷ್ಣನು ಅದನ್ನು ಹೇಳಿದನು. ಸಿಹಿಯಾದ ಮಾತುಗಳ ಮುಲಾಮನ್ನು ಹಾಕಿ ಹೀಗೆ ಹೇಳಿದನು :—

---

* ಯುಧಿಷ್ಠಿರನ ಬಾಯಿಂದ ವಾಸ್ತವಿಕವಾಗಿ ಇದೇ ಮಾತುಗಳು ಹೊರಬಿದ್ದವು. ಮತ್ತು ಅವುಗಳನ್ನು ಆವನೋ ತೀಕ್ಷ್ಣ ಲೇಖಕನು ಬರೆದಿಟ್ಟುಕೊಂಡಿದ್ದನು ಎಂದಲ್ಲ. ಮೌಲಿಕ ಮಹಾಭಾರತದಲ್ಲಿ ಎಂತಹ ಚರಿತ್ರೆಯು ಪ್ರಚುರಿತವಾಗಿದ್ದಿತು ಎಂಬುದೇ ನಮಗೆ ಆಲೋಚ್ಯವಾದುದು.

ನೀನು ರಾಜಸೂಯಕ್ಕೆ ಅಧಿಕಾರಿಯಲ್ಲ; ಏಕೆಂದರೆ ನೀನು ಸಮ್ರಾಟನಲ್ಲ. ಸಮ್ರಾಟನಿಗಲ್ಲದೆ ರಾಜಸೂಯವು ಮತ್ತಾರಿಗೂ ಲಭಿಸದು. ನೀನು ಸಮ್ರಾಟನಲ್ಲ. ಮಗಧಾಧಿಪತಿಯಾದ ಜರಾಸಂಧನೇ ಈಗಲೂ ಸಮ್ರಾಟನು. ಅವನನ್ನು ಜಯಿಸದೆ ರಾಜಸೂಯೆಗೆ ನೀನು ಅಧಿಕಾರಿಯಾಗುವುದಿಲ್ಲ. ಅಲ್ಲದೆ ಅದನ್ನು ನಿರ್ವಹಿಸುವುದೂ ಆಗದು.

ಕೃಷ್ಣನನ್ನು ಸ್ವಾರ್ಥಪರನು ನೀಚತಂತ್ರಿ ಎಂದು ಭಾವಿಸುವವರು ಅವನ ಈ ಮಾತನ್ನು ಕೇಳಿ ತನಗೆ ತಕ್ಕಂತೆಯೇ ಕೃಷ್ಣನು ಮಾತನಾಡಿದನು ಎಂದೆನ್ನಬಹುದು.--ಜರಾಸಂಧನು ಕೃಷ್ಣನ ಪೂರ್ವಶತ್ರು. ಕೃಷ್ಣನ ಕೈ ಇವನಮೇಲೆ ನಡೆದಿರಲಿಲ್ಲ. ಈಗ ಸುಸಮಯ ಒದಗಲು ಬಲವಂತರಾದ ಪಾಂಡವರಿಂದ ಅವನ ವಧೆಯನ್ನು ಸಾಧಿಸಿಕೊಂಡು ತನ್ನ ಇಷ್ಟಸಿದ್ಧಿಯಾಗುವಂತೆ ಪರಾಮರ್ಶವನ್ನು ಕೊಟ್ಟನು ಎಂದು.

ಆದರೆ ಇನ್ನೂ ಒಂದು ಮಾತುಂಟು. ಜರಾಸಂಧನು ಸಮ್ರಾಟನು ಮತ್ತು ತೈಮೂರ್‌ಲಂಗ್ ಅಥವಾ ಮೊದಲನೆಯ ನೆಪೋಲಿಯನ್ನಿನಂತೆ ಅತ್ಯಾಚಾರಿ. ಪೃಥ್ವಿ ಅವನ ಅತ್ಯಾಚಾರದಿಂದ ಬಲುಪೀಡೆಗೆ ಒಳಗಾಗಿತ್ತು. ಜರಾಸಂಧನು ರಾಜಸೂಯ ಯಜ್ಞಾರ್ಥವಾಗಿ ಪ್ರತಿಜ್ಞೆಯನ್ನು ಮಾಡಿ ಬಾಹುಬಲದಿಂದ ಸಮಸ್ತ ಭೂಪತಿಗನಲ್ಲೂ ಸೋಲಿಸಿ ಸಿಂಹವು ಪರ್ವತ ಕಂಧರದಲ್ಲಿ ಆನೆಯ ಹಿಂಡುಗಳನ್ನು ಕಟ್ಟಿಟ್ಟಂತೆ ಅವರುಗಳನ್ನು ಗಿರಿ ದುರ್ಗಗಳಲ್ಲಿ ಬಂಧನಮಾಡಿದ್ದನು. ರಾಜರುಗಳನ್ನು ಕಾರಾಗೃಹದಲ್ಲಿಡಲು ಇನ್ನೊಂದು ಭಯಾನಕವಾದ ತಾತ್ಪರ್ಯವಿದ್ದಿತು. ಈ ಎಳೆದು ತಂದಿದ್ದ ರಾಜರುಗಳನ್ನು ಯಜ್ಞಕಾಲದಲ್ಲಿ ಮಹಾದೇವನ ಇದುರಿಗೆ ಬಲಿಗೊಡಬೇಕೆಂದು ಜರಾಸಂಧನ ಅಭಿಪ್ರಾಯವಿದ್ದಿತು.

ಪೂರ್ವದಲ್ಲಿ ಯಜ್ಞಕಾಲದಲ್ಲಿ ಯಾವಾಗಲಾದರೂ ಒಂದೆರಡು ವೇಳೆಯಲ್ಲಿ ನರಬಲಿಯನ್ನು ಕೊಡುತಲಿದ್ದರೆಂಬುದನ್ನು ಇತಿಹಾಸಜ್ಞರಾದ ಪಾಠಕರಿಗೆ ತಿಳಿಸಬೇಕಾದುದಿಲ್ಲ* ಕೃಷ್ಣನು ಯುಧಿಷ್ಠಿರನನ್ನು ಕುರಿತು ಹೇಳುತ್ತಿರುವನು :—

* ಅಪರೂಪವಾಗಿ ಆರೋ ಹೀಗೆ ಮಾಡುತ್ತಿದ್ದರೇ ಹೊರತು ಇದು ಸಮಾಜದ ಪೆದ್ಧತಿಯಲ್ಲ. ಕೃಷ್ಣನೇ ಒಂದು ಕಡೆಯಲ್ಲಿ—"ನಾನು ಯಾವಾಗಲೂ ನರಬಲಿಯನ್ನು ನೋಡಿಲ್ಲ" ಎಂದು ಹೇಳಿರುವನು. ಧಾರ್ಮಿಕನಾದವನು ಈ ಭಯಂಕರವಾದ ಪದ್ಧತಿಯ ದಿಕ್ಕಿನ ಕಡೆಗೇ ಹೋಗನು.

"ಎಲೈ ಭರತಕುಲಪ್ರದೀಪನೆ, ಬಲಿಪ್ರದಾನಾರ್ಥವಾಗಿ ಒಟ್ಟುಗೂಡಿಸಿರುವ ಭೂಪತಿಗಳು ಪ್ರೋಕ್ಷಿಸಿ ತೊಳೆದ ಪಶುಗಳಂತೆ ಪಶುಪತಿಯ ಗೃಹದಲ್ಲಿ ವಾಸಮಾಡುತ್ತ ಬಲುಕಷ್ಟದಿಂದ ಜೀವಧಾರಣೆಯನ್ನು ಮಾಡಿಕೊಂಡಿರುವರು. ದುರಾತ್ಮನಾದ ಜರಾಸಂಧನು ಅವರನ್ನು ಇಷ್ಟರಲ್ಲಿಯೇ ಕತ್ತರಿಸುವನು. ಈ ಕಾರಣದಿಂದ ನಾನು ಅವನೊಡನೆ ಯುದ್ಧಮಾಡಲು ಉಪದೇಶವನ್ನು ಕೊಡುತಲಿದೇನೆ. ಈ ದುರಾತ್ಮನು ಎಂಬತ್ತಾರು ಮಂದಿ ರಾಜರುಗಳನ್ನು ಸೆಳೆತಂದಿರುವನು. ಇನ್ನು ಹದಿನಾಲ್ಕು ಮಂದಿ ರಾಜರುಗಳು ಸಿಕ್ಕಿದೊಡನೆಯೇ ಇವರೆಲ್ಲರನ್ನೂ ಒಂದೇ ಕಾಲದಲ್ಲಿ ಸಂಹರಿಸುವನು. ಎಲೈ ಧರ್ಮಾತ್ಮನೇ, ಈಗ ಯಾವನು ಜರಾಸಂಧನ ಈ ಕ್ರೂರ ಕರ್ಮಕ್ಕೆ ಅಡ್ಡಿಯನ್ನು ಒಡ್ಡಲು ಶಕ್ತನಾಗುವನೋ ಅಂಥವನ ಯಶೋರಾಶಿ ಭೂಮಂಡಲದಲ್ಲಿ ದೇದೀಪ್ಯಮಾನವಾಗುವುದು. ಮತ್ತು ಇವನನ್ನು ಯಾರು ಜಯಿಸಬಲ್ಲರೋ ಅವನೇ ನಿಶ್ಚಯವಾದ ಸಾಮ್ರಾಜ್ಯವನ್ನು ಪಡೆಯುವನು."

ಆದುದರಿಂದ ಜರಾಸಂಧನ ವಧೆಗೆ ಯುಧಿಷ್ಠಿರನಿಗೆ ಕೃಷ್ಣನು ಉಪದೇಶವನ್ನು ಕೊಟ್ಟನು. ಇದರ ಉದ್ದೇಶ ಕೃಷ್ಣನ ಸ್ವಂತಹಿತವಲ್ಲ. ಯುಧಿಷ್ಠಿರನಿಗೂ ಇದರಲ್ಲಿ ಇಷ್ಟಸಿದ್ಧಿಯಿರುವುದಾದರೂ ಈ ಪರಾಮರ್ಶದ ಪ್ರಧಾನ ಉದ್ದೇಶ ಅದೂ ಅಲ್ಲ. ಇದರ ಉದ್ದೇಶವು ಕಾರಾಗೃಹದಲ್ಲಿ ಕಟ್ಟುಬಿದ್ದಿರುವ ರಾಜಮಂಡಲಿಯ ಹಿತ; ಜರಾಸಂಧನ ಅತ್ಯಾಚಾರದಿಂದ ತೊಳಲುತ್ತಿರುವ ಭಾರತವರ್ಷದ ಹಿತ ಮತ್ತು ಸರ್ವಸಾಮಾನ್ಯರ ಹಿತ. ಕೃಷ್ಣನು ಆಗ ರೈವತಕ ದುರ್ಗದ ಆಶ್ರಯದಲ್ಲಿ ಜರಾಸಂಧನ ಕೈಗೆ ಮೀರಿ ಅಜೇಯನಾಗಿದ್ದನು. ಜರಾಸಂಧನ ವಧೆಯಿಂದ ಅವನಿಗೆ ಸ್ವಂತವಾಗಿ ಇಷ್ಟಪ್ರಾಪ್ತಿಯಾವುದೂ ಇರಲಿಲ್ಲ. ಒಂದುವೇಳೆ ಇದ್ದರೂ ಲೋಕ ಹಿತ ಸಾಧನವಾವುದರಿಂದಲೇ ಅಂತಹ ಪರಾಮರ್ಶವನ್ನು ಅವನು ಧರ್ಮತಃ ಕೊಡಲೇಬೇಕು. ಈ ಪರಾಮರ್ಶದಿಂದ ತನ್ನ ಸ್ವಂತ ಸ್ವಾರ್ಥ ಸಿದ್ಧಿಯಾಗುವುದಾದರೂ ಆ ಪರಾಮರ್ಶದಿಂದ ಕೊಟ್ಟೇತೀರಬೇಕು. ಈ ಕಾರ್ಯದಿಂದ ಲೋಕಹಿತವನ್ನು ಸಾಧಿಸುವುದು ಸರಿಯೆ. ಆದರೆ ಇದರಿಂದ ನನಗೂ ಕೊಂಚ ಸ್ವಾರ್ಥಸಿದ್ಧಿಯುಂಟು. ಈ ಪರಾಮರ್ಶವನ್ನು ಕೊಟ್ಟರೆ ಜನಗಳು

ನನ್ನನ್ನು ಸ್ವಾರ್ಥಪರನೆಂದು ತಿಳಿದುಕೊಂಡಾರು. ಆದುದರಿಂದ ನಾನು ಈ ಪರಾಮರ್ಶವನ್ನು ಕೊಡುವುದಿಲ್ಲ ಎಂದು ಭಾವಿಸುವವನೇ ಯಥಾರ್ಥವಾಗಿ ಸ್ವಾರ್ಥಪರನು ಮತ್ತು ಅಧಾರ್ಮಿಕನು. ಏಕೆಂದರೆ, ಇಂಥವನು ತನ್ನ ಮರ್ಯಾದೆಯೊಂದನ್ನು ಭಾವಿಸಿದನೇ ಹೊರತು ಲೋಕಹಿತವನ್ನು ತಿಳಿಯದೇ ಹೋದನು. ಕಳಂಕವನ್ನಾದರೂ ಆದರದಿಂದ ತಲೆಯಮೇಲೆ ಹೊತ್ತು ಕೊಂಡು ಲೋಕದ ಹಿತವನ್ನು ಸಾಧಿಸುವವನೇ ಆದರ್ಶ ಧಾರ್ಮಿಕನು. ಶ್ರೀಕೃಷ್ಣನು ಸರ್ವತ್ರವೂ ಆದರ್ಶಧಾರ್ಮಿಕನು.

ಯುಧಿಷ್ಠಿರನು ಸಾವಧಾನಿಯು. ಸಹಜವಾಗಿ ಜರಾಸಂಧನೊಡನೆ ವಿವಾದ ಗೈಯಲು ಒಡಂಬಡನು. ಆದರೆ ಭೀಮನ ಉದ್ಧತ ತೇಜಸ್ಸಿನಿಂದಲೂ ಅರ್ಜುನನ ಗರ್ವದಿಂದಲೂ ಕೂಡಿದ ಮಾತುಗಳಮೇಲೆ ಕೃಷ್ಣನ ಪರಾಮರ್ಶದಿಂದ ಕೊನೆಗೆ ಇದಕ್ಕೆ ಸಮ್ಮತಿಯನ್ನು ಹಾಕಿದನು. ಭೀಮ, ಅರ್ಜುನ, ಕೃಷ್ಣ—ಈ ಮೂವರೂ ಜರಾಸಂಧನನ್ನು ಜಯಿಸಲು ಹೊರಟರು. ಹಗೆಯ ಅಗಣಿತವಾದ ಸೇನೆಗೆ ದಿಗಿಲುಬಿದ್ದು ಮಹಾಬಲಶಾಲಿಗಳಾದ ವೃಷ್ಣಿವಂಶೀಯರೂ ರೈವತಕದ ಆಶ್ರಯಕ್ಕೆ ಮರೆಬಿದ್ದಿದ್ದರು. ಅಂತಹವನನ್ನು ಗೆಲ್ಲುವುದಕ್ಕೋಸ್ಕರ ಮೂವರೇ ಹೊರಡುವುದು ಏತರ ಪರಾಮರ್ಶ! ಈ ಪರಾಮರ್ಶ ಕೃಷ್ಣನದು, ಮತ್ತು ಈ ಪರಾಮರ್ಶ ಕೃಷ್ಣನ ಆದರ್ಶಚರಿತ್ರೆಯನ್ನೇ ಅನುಸರಿಸಿದುದು. ಜರಾಸಂಧನು ದುರಾತ್ಮನು. ಆದುದರಿಂದ ಅವನು ದಂಡನೀಯನು. ಆದರೆ ಅವನ ಸೈನಿಕರಲ್ಲಿ ತಪ್ಪೇನು? ಸೈನಿಕರನ್ನು ಕೊಲ್ಲುವುದಕ್ಕೆ ತಾನೇ ಸೈನ್ಯವನ್ನು ತೆಗೆದುಕೊಂಡು ಹೋಗಬೇಕಾದದ್ದು ಈ ತರದ ಸಸೈನ್ಯ ಯುದ್ಧದಲ್ಲಿ ಕೇವಲ ನಿರಪರಾಧಿಗಳ ಹತ್ಯವೂ ಮತ್ತು ಅಪರಾಧಿಗಳು ತಪ್ಪಿಸಿಕೊಳ್ಳೋಣವೂ ಆಗಬಹುದು. ಜರಾಸಂಧನಿಗೆ ಸೈನ್ಯಬಲವೂ ಹೆಚ್ಚು. ಪಾಂಡವ ಸೈನ್ಯವು ಅವನ ಸಮಕಕ್ಷಿಯಾಗದೇ ಹೋಗಬಹುದು. ಅಲ್ಲದೆ ಆ ಕಾಲದಲ್ಲಿ ಕ್ಷತ್ರಿಯರಲ್ಲಿ ದ್ವೈರಥ್ಯ ಯುದ್ಧಕ್ಕೆ ಕರೆದರೆ ಯಾರೂ ವಿಮುಖರಾಗುತ್ತಿರಲಿಲ್ಲ.* ಮತ್ತು ಆ ಕಾಲಕ್ಕೆ ಇದು ಧರ್ಮವೂ

* ಕಾಲಯವನನು ಕ್ಷತ್ರಿಯನಲ್ಲ.

ಆಗಿತ್ತು. ಆದುದರಿಂದ ಕೃಷ್ಣನ ಪ್ರಯತ್ನ ಅನರ್ಥ ಲೋಕಕ್ಷಯವನ್ನು ಮಾಡುವುದರ ಬದಲು ತಾವು ಮೂವರು ಮಾತ್ರ ಜರಾಸಂಧನಿಗಿದಿರಾಗಿ ಅವನನ್ನು ದ್ವೈರಥ್ಯಯುದ್ಧಕ್ಕೆ ಕರೆಯೋಣವಾಗಿತ್ತು. ಮೂವರ ಪೈಕಿ ಒಬ್ಬನೊಡನೆ ಅವನು ಯುದ್ಧಕ್ಕೆ ಒಪ್ಪಿಯೇ ಒಪ್ಪುವನು. ಆಗ ದೈಬಲ, ಸಾಹಸ ಮತ್ತು ಶಿಕ್ಷೆ ಯಾರಲ್ಲಿ ಹೆಚ್ಚೋ ಅವನೇ ಜೈಸುವನು. ಈ ವಿಷಯದಲ್ಲಿ ನಾಲ್ಕು ಜನವೂ ಶ್ರೇಷ್ಠರು, ಯುದ್ಧದ ವಿಷಯದಲ್ಲಿ ಹೀಗೆ ನಿಶ್ಚಯಿಸಿ ಅವರು ಸ್ನಾತಕ ಬ್ರಾಹ್ಮಣ ವೇಷವನ್ನು ಧರಿಸಿ ಹೊರಟರು. ಈ ವೇಷ ವೇತಕ್ಕೋ ತಿಳಿಯಲಾಗದು. ಗೋಪ್ಯವಾಗಿ ಜರಾಸಂಧನನ್ನು ಹಿಡಿದು ವಧಿಸುವುದು ಅವರ ಸಂಕಲ್ಪವಾಗಿರಲಿಲ್ಲ. ಅವರು ಶತ್ರುಭಾವದಲ್ಲಿ ಬಾಗಿಲಲ್ಲಿದ್ದ ಭೇರೀ ಮುಂತಾದವುಗಳನ್ನು ಒಡೆದು ಪ್ರಾಕಾರದ ಗೋಪುರಗಳನ್ನು ಪುಡಿಮಾಡಿ ಜರಾಸಂಧನ ಸಭೆಯನ್ನು ಹೊಕ್ಕರು. ಆದುದರಿಂದ ಗೋಪ್ಯ ಇವರ ಉದ್ದೇಶವಲ್ಲ. ಛದ್ಮ ವೇಷ ಕೃಷ್ಣಾರ್ಜುನರಿಗೆ ಅಯೋಗ್ಯವಾದುದು. ಇದರಮೇಲೆ ಇನ್ನೊಂದು ತಂಟೆ. ಅದು ಶೋಚನೀಯವೂ ಕೃಷ್ಣಾರ್ಜುನರಿಗೆ ಅಯೋಗ್ಯವೂ ಎಂತಲೇ ತೋಚುವುದು. ಜರಾಸಂಧನ ಸಮೀಪವನ್ನು ಸೇರಲು ಭೀಮಾರ್ಜುನರು ನಿಯಮಸ್ಥರಾದರು. ನಿಯಮಸ್ಥರಾದರೆ ಮಾತನಾಡಕೂಡದು. ಅವರಾವ ಮಾತನ್ನೂ ಆಡಲಿಲ್ಲ. ಜರಾಸಂಧನೊಡನೆ ಮಾತನಾಡುವ ಭಾರವು ಕೃಷ್ಣನಮೇಲೇ ಬಿದ್ದಿತು.—"ಇವರು ನಿಯಮಸ್ಥರು, ಈಗ ಮಾತನ್ನಾಡರು. ಪೂರ್ವರಾತ್ರಿಯು ಕಳೆದಮೇಲೆ ನಿಮ್ಮೊಡನೆ ಸಂಭಾಷಿಸುವರು" ಎಂದು ಕೃಷ್ಣನು ಹೇಳಿದನು. ಜರಾಸಂಧನು ಕೃಷ್ಣನ ವಾಕ್ಯವನ್ನು ಕೇಳಿ ಅವರನ್ನು ಯಜ್ಞಾಲಯದಲ್ಲಿಯೇ ಇಟ್ಟು ತಾನು ಮನೆಗೆ ತೆರಳಿದನು. ಮತ್ತು ಅರ್ಧರಾತ್ರಿಯ ಸಮಯದಲ್ಲಿ ಹಿಂದಿರುಗಿ ಅವರಿದ್ದೆಡೆಗೆ ಬಂದನು.

ಇದರಲ್ಲಿ ಏನೋ ಒಂದು ಕಲಾ ಕೌಶಲವುಂಟು. ಈ ಕೌಶಲ ಅತಿ ವಿಶುದ್ಧವೇನೂ ಅಲ್ಲ, ಚಾತುರ್ಯವೇ ಸರಿ. ಧರ್ಮಾತ್ಮರಾದವರಿಗೆ ಇದು ಯೋಗ್ಯವಲ್ಲ, ಈ ಕೌಶಲದ ಆಶಯವೇನು? ಯಾವ ಕೃಷ್ಣಾರ್ಜುನರನ್ನು ನಾವು ಧರ್ಮದ ಆದರ್ಶದಂತೆ ಕಂಡುಕೊಂಡು ಬರುತ್ತಿದ್ದೇವೋ

ಅವರಿಗೆ ಥಟ್ಟನೆ ಈ ಬೀಳು ಏತಕ್ಕೆ ? ಈ ಚಾತುರ್ಯದ ಉದ್ದೇಶವೇನಾದರೂ ಇದಿದ್ದರೆ ಇಷ್ಟಸಿದ್ಧಿಗಾಗಿ ಈ ಆಟವನ್ನಿವರು ಆಡುತ್ತಿರುವರು; ಕೌಶಲದಿಂದ ಶತ್ರುನಿಪಾತವನ್ನು ಮಾಡಬೇಕೆಂತಲೇ ಈ ಅವಲಂಬನ ಮಾಡಿರುವರು ಎಂದು ಹೇಳಬಹುದಾಗಿತ್ತು. ಹಾಗಾಗಿದ್ದರೆ ಇವರು ಧರ್ಮಾತ್ಮರಲ್ಲ. ಕೃಷ್ಣ ಚರಿತ್ರೆಯು ಎಷ್ಟು ವಿಶುದ್ಧವೆಂದಂದು ಕೊಂಡಿರುವೆವೋ ಅಷ್ಟರದಲ್ಲವೆಂದು ಹೇಳಬೇಕಾಗುವುದು.

ಜರಾಸಂಧ ವಧ ವೃತ್ತಾಂತವನ್ನು ಆದ್ಯೋಪಾಂತವಾಗಿ ನೋಡದಿರುವವರು, ಈ ಚಾತುರ್ಯದ ಉದ್ದೇಶ ಇಲ್ಲೇ ಕಾಣುತ್ತಲಿದೆಯೆನ್ನಬಹುದು. ರಾತ್ರಿಯು ಕಾಲದಲ್ಲಿ ಜರಾಸಂಧನನ್ನು ನಿಸ್ಸಹಾಯವಾದ ಅವಸ್ಥೆಯಲ್ಲಿ ಪಡೆಯುಬಹುದು; ಆಗ ಅವನನ್ನು ಥಟ್ಟನೆ ಆಕ್ರಮಿಸಿ ವಧೆಗೈವುದೇ ಈ ಚಾತುರ್ಯದ ಉದ್ದೇಶ.; ಆದುದರಿಂದ ಏನು ಮಾಡಿದರೆ ರಾತ್ರಿಯು ಕಾಲದಲ್ಲಿ ಅವನು ಸಿಕ್ಕಿಬೀಳುವನೋ ಅಂಥ ಕೌಶಲವೊಂದನ್ನು ಇವರು ನಡಸಿದರು ಎನ್ನಬಹುದು. ವಾಸ್ತವಿಕವಾಗಿ ಈ ತೆರನಾದ ಉದ್ದೇಶ ವಾವುದೂ ಅವರಿಗಿರಲಿಲ್ಲ. ಮತ್ತು ಆ ಬಗೆಯ ಕಾರ್ಯವಾವುದನ್ನೂ ಅವರು ಮಾಡಲಿಲ್ಲ. ರಾತ್ರಿಯಲ್ಲೇನೋ ಜರಾಸಂಧನನ್ನು ಅವರು ಕಂಡಿದ್ದರೂ ಅವನನ್ನು ಆಗ ಆಕ್ರಮಿಸಲೂ ಇಲ್ಲ. ಮತ್ತು ಆ ತರದ ಪ್ರಯತ್ನವನ್ನೂ ಮಾಡಲಿಲ್ಲ. ಯುದ್ಧಮಾಡಿದ್ದು ರಾತ್ರಿಯಲ್ಲಲ್ಲವೂ ಅಲ್ಲ. ಹಗಲಿನಲ್ಲಿಯೇ ಯುದ್ಧ ನಡೆದದ್ದು. ಯುದ್ಧ ಗೋಪ್ಯವಾಗಿಯೂ ನಡೆದಿಲ್ಲ. ಪ್ರಕಾಶವಾಗಿಯೇ,—ಸಮಸ್ತ ಪುರವಾಸಿಗಳ ಮತ್ತು ಮಗಧ ವಾಸಿಗಳ ಇದಿರಿನಲ್ಲಿಯೇ,—ಯುದ್ಧವಾಯಿತು. ಇದರಮೇಲೆ ಯುದ್ಧ ಒಂದು ದಿನದಲ್ಲಿ ಮಾತ್ರವೇ ನಡೆದುದಿಲ್ಲ. ಹದಿನಾಲ್ಕು ದಿನ ಪರಿಯಂತ ಯುದ್ಧ ನಡೆಯಿತು. ಮೂವರ ಪೈಕಿ ಯುದ್ಧಮಾಡಿದವನು ಮೊದಲಿಂದ ಕಡೆಯುವರೆಗೂ ಒಬ್ಬನೇ. ಥಟ್ಟನೆ ಅವನನ್ನಾಕ್ರಮಿಸಿಯೂ ಇಲ್ಲ. ಜರಾಸಂಧನು ಇದಕ್ಕಾಗಿ ಸಿದ್ಧಗೊಳ್ಳುವುದಕ್ಕೆಂದು ಹೆಚ್ಚು ಅವಕಾಶವನ್ನೂ ಪಡೆದುಕೊಂಡಿದ್ದನು. ಇಷ್ಟು ಮಾತ್ರವಲ್ಲದೆ ಯುದ್ಧದಲ್ಲಿ ಸತ್ತು ಹೋದರೂ ಹೋದೇನೆಂದು ಭಾವಿಸಿ ಯುದ್ಧಕ್ಕೆ ಮುಂಚೆ ಜರಾಸಂಧನು ತನ್ನ ಮಗನಿಗೆ ರಾಜ್ಯಪಟ್ಟವನ್ನೂ ಕಟ್ಟಿದ್ದನು. ಇಷ್ಟರವರೆಗೂ ಅವಕಾಶ

ವನ್ನು ಪಡೆದಿದ್ದನು. ನಿರಸ್ತ್ರರಾಗಿ ಜರಾಸಂಧನನ್ನೆದುರುಗೊಂಡಿದ್ದರೂ ಮುಚ್ಚುಮರೆಯೊಂದನ್ನೂ ಮಾಡಲಿಲ್ಲ. ಜರಾಸಂಧನು ಕೇಳಿದೊಡನೆಯೇ ತಮ್ಮ ನಿಜವೃತ್ತಾಂತವನ್ನೇ ಹೇಳಿರುವರು. ಯುದ್ಧಕಾಲದಲ್ಲಿ ಜರಾಸಂಧನ ಪುರೋಹಿತನು ಯುದ್ಧದಿಂದುಂಟಾಗಬಹುದಾದ ಅಂಗವೇದನೆಯ ಉಪ ಶಮನಕ್ಕಾಗಿ ತಕ್ಕ ಔಷಧಿಗಳನ್ನೂ ಹತ್ತಿರ ಇಟ್ಟುಕೊಂಡೇ ಇದ್ದನು. ಕೃಷ್ಣನ ಪಕ್ಷದಲ್ಲಿ ಇಂಥ ಸಹಾಯವಿಲ್ಲವಾದರೂ ಅನ್ಯಾಯ ಯುದ್ಧವೆಂದು ಯಾವ ಅಡ್ಡಿಯನ್ನೂ ಮಾಡಲಿಲ್ಲ. ಯುದ್ಧಕಾಲದಲ್ಲಿ ಜರಾಸಂಧನನ್ನು ಭೀಮನು ಅತಿಶಯವಾಗಿ ಪೀಡಿಸಲು ದಯಾಮಯನಾದ ಕೃಷ್ಣನು ಅಷ್ಟು ಹಿಂಸೆಮಾಡಬಾರದೆಂದು ನಿಷೇಧಿಸಿದ್ದನು.

ಇಂಥ ಚರಿತ್ರೆಯುಳ್ಳವನು ಈ ಕಾರ್ಯದಲ್ಲಿ ಚಾತುರ್ಯವನ್ನೇಕೆ ನಡೆಯಿಸಿರುವನು! ಈ ಉದ್ದೇಶ ಶೂನ್ಯವಾದ ಚಾತುರ್ಯವು ಸಂಭವವೆ? ದುರ್ಯೋಧನಾದ ಶಠನು ಹೀಗೆ ಉದ್ದೇಶ ಶೂನ್ಯವಾದ ಚಾತುರ್ಯ ವನ್ನವಲಂಬಿಸಿದರೂ ಅವಲಂಬಿಸಬಹುದು. ಕೃಷ್ಣಾರ್ಜುನರು ಇಂಥಾ ದುರ್ಯೋಧರಲ್ಲ. ಇದನ್ನು ಶತ್ರುಪಕ್ಷದವರೂ ಒಪ್ಪುವರು. ಹಾಗಾದರೆ ಈ ಚಾತುರ್ಯದ ಮಾತು ಎಲ್ಲಿಂದ ಬಂದುದು! ಈ ಸಮಸ್ತ ಜರಾಸಂಧ ವಧ ಪರ್ವಾಧ್ಯಾಯದೊಡನೆ ಯಾವ ವಿಷಯವು ಬೆರೆಯುವುದಿಲ್ಲವೋ ಅದು ಇನ್ನೆಲ್ಲಿಂದ ಬಂದುದು? ಇದನ್ನು ಯಾರಾದರೂ ಸೇರಿಸಿರಬಹುದೆ? ಈ ಮಾತುಗಳು ಪ್ರಕ್ಷಿಪ್ತವೆ? ಹೀಗಾದರೆ ಈ ಮಾತಿಗೆ ಉತ್ತರವಾವುದೂ ಇಲ್ಲ. ಆದರೆ ಈ ಮಾತನ್ನು ಇನ್ನು ಕೊಂಚ ಚೆನ್ನಾಗಿ ವಿಚಾರ ಮಾಡುವುದೊಳ್ಳೆಯದು.

ಮಹಾಭಾರತದ ಮಧ್ಯೇ ಮಧ್ಯೇ ಒಂದೊಂದು ಪರ್ವಾಧ್ಯಾಯವು ಬೆರಸಲ್ಪಟ್ಟಿರುವುದು ನಮಗೆ ತಿಳಿದೇ ಇರುವುದು. ಒಂದು ಪರ್ವವೋ ಅಧ್ಯಾಯವೋ ಪ್ರಕ್ಷಿಪ್ತವಾಗಬಹುದಾದರೆ, ಒಂದು ಅಧ್ಯಾಯದಲ್ಲಿಯೂ ಒಂದು ಪರ್ವದಲ್ಲಿಯೂ ಬೇರೇ ಅಂಶವಾವುದೋ ಅಥವಾ ಆವುದೋ ಕೆಲವು ಶ್ಲೋಕಗಳು ಬೆರತಿರಬಾರದೇಕೆ? ಹೀಗಾಗಿರುವುದರಲ್ಲಿ ವಿಚಿತ್ರ ವೇನಾದರೂ ಕಂಡುಬರುವುದು ಹಾಗಿರಲಿ, ಪ್ರಾಚೀನ ಸಂಸ್ಕೃತದ ಸಮಸ್ತ ತಂತ್ರಗಳಲ್ಲಿಯೂ ಹೀಗೆಯೇ ಹೇರಳ ಅಂಶಗಳು ಪ್ರಕ್ಷಿಪ್ತಗಳಾಗಿ ಬೆರೆತು

ಹೋಗಿವೆ. ಹೀಗಾಗಿರುವುದರಿಂದಲೇ ವೇದ ಮೊದಲ್ಗೊಂಡು ಬೇರೆ ಬೇರೆ ಶಾಖೆಗಳಾಗಿಯೂ, ರಾಮಾಯಣಾದಿ ಗ್ರಂಥಗಳಲ್ಲಿ ಬೇರೆ ಬೇರೆ ಪಾಠಗಳಾಗಿಯೂ, ಶಕುಂತಲ, ಮೇಘದೂತ ಮುಂತಾದ ಈಚಿನ ಗ್ರಂಥಗಳಲ್ಲಿ ಕೂಡ ಪಾಠಾಂತರಗಳುಂಟಾಗಿಹೋಗಿವೆ. ಸಮಸ್ತ ಗ್ರಂಥಗಳಲ್ಲಿಯೂ ಕೂಡ ಮೂಲ ಅಂಶದೊಡನೆ ಒಂದೆರಡು ಶ್ಲೋಕಗಳು ಅಲ್ಲಲ್ಲಿ ಬೆರತಿರುವುದು ಕಾಣಬರುತ್ತಿರಲು ಮಹಾಭಾರತದ ಮೂಲದಲ್ಲಿ ಹೀಗಾಗುವುದು ವಿಚಿತ್ರವೆ ?

ನಮ್ಮ ಮತಕ್ಕೆ ವಿರೋಧವಾದ ಶ್ಲೋಕಗಳೆಲ್ಲವೂ ಪ್ರಕ್ಷಿಪ್ತಗಳೆಂದು ತೆಗೆದುಬಿಡುತ್ತಿರುವೆನೆಂದೆನ್ನುವಿರೋ ? ಹಾಗಲ್ಲ. ಯಾವುದು ಪ್ರಕ್ಷಿಪ್ತ, ಯಾವುದು ಪ್ರಕ್ಷಿಪ್ತವಲ್ಲ ಎಂಬುದನ್ನು ನಿದರ್ಶನಗಳ ಮೂಲಕ ವಿವರಿಸಿ, ಶೋಧಿಸಿ, ಪ್ರಕ್ಷಿಪ್ತದ ಗುರುತುಗಳು ಅವುಗಳಲ್ಲಿ ಕಾಣಬರುವುದರಿಂದ ಅವುಗಳನ್ನು ಸ್ವೀಕರಿಸಲಾಗದೆಂದು ಹೇಳುತ್ತಲಿರುವೆನು.

ಬಹು ಪ್ರಾಚೀನ ಕಾಲದಲ್ಲಿ ಪ್ರಕ್ಷಿಪ್ತವಾಗಿರುವವುಗಳನ್ನು ಹಿಡಿಯಬೇಕಾದರೆ, ಒಳಗಣ ಪ್ರಮಾಣಗಳಲ್ಲಿ ಶ್ರೇಷ್ಠವಾದುದು—ಅಸಂಗತ, ಅನೈಕ್ಯ. ಆವುದೋ ಒಂದು ಮೂಲಪ್ರತಿಯಲ್ಲಿ ಗ್ರಂಥದ ಇತರ ವಿಷಯಗಳೆಲ್ಲಕ್ಕೂ ವಿರೋಧವಾದ ಯಾವುದೋ ಒಂದು ವಿಷಯವು ಬೆರತಿದ್ದರೆ ಇದು ಗ್ರಂಥವನ್ನು ಬರೆದವನ ಅಥವಾ ನಕಲು ತೆಗೆಯುವವನ ಭ್ರಮ ಪ್ರಮಾದದಿಂದ ಉಂಟಾದುದಾಗಿರಬೇಕು. ಅಥವಾ ಹೊರಗಡೆಯಿಂದ ಸೇರಿಸಿದುದಾಗಿರಬೇಕು. ಭ್ರಮೆಯಿಂದುಂಟಾದುದಾವುದು, ಪ್ರಕ್ಷಿಪ್ತವಾವುದು ಎಂಬುದನ್ನು ಸುಲಭವಾಗಿಯೇ ಕಂಡುಹಿಡಿಯಬಹುದು. ರಾಮಾಯಣದ ಯಾವುದೋ ಒಂದು ಪ್ರತಿಯಲ್ಲಿ ರಾಮನು ಊರ್ಮಿಳೆಯನ್ನು ಮದುವೆಯಾದ ವಿಷಯವು ಇದ್ದರೆ ಇದು ಲಿಪಿಕಾರನ ಭ್ರಮೆಯೆಂದು ಆ ಒಡನೆಯೇ ಗೊತ್ತಾಗಿಹೋಗುವುದು. ರಾಮನು ಊರ್ಮಿಳೆಯನ್ನು ಮದುವೆಯಾದುದರಿಂದ ಲಕ್ಷ್ಮಣನೊಡನೆ ದೊಡ್ಡ ಜಗಳವುಂಟಾಯಿತು. ಇದನ್ನು ನೋಡಿ ರಾಮನು ಲಕ್ಷ್ಮಣನಿಗೆ ಊರ್ಮಿಳೆಯನ್ನು ಬಿಟ್ಟುಕೊಟ್ಟು ಜಗಳವನ್ನು ಸಮದಾಯಿಸಿಕೊಂಡನು ಎಂದು ಇದ್ದಲ್ಲಿ, ಇದು ಲಿಪಿಕಾರನ ಅಥವಾ ಗ್ರಂಥಕಾರನ ಭ್ರಮೆಯ ಪ್ರಮಾದವಲ್ಲ. ಭ್ರಾತೃಸೌಹಾರ್ದ

ರಸದಲ್ಲಿ ರಸಿಕನಾದ ಆವನೋ ಒಬ್ಬನ ರಚನೆ ಮೂಲ ಪ್ರತಿಯಲ್ಲಿ ಸೇರಿಹೋಗಿದೆ ಎಂದು ಹೇಳಬೇಕಾಗುವುದು. ಜರಾಸಂಧ ಪರ್ವಾಧ್ಯಾಯದಲ್ಲಿ ನಾವು ವಿಚಾರಿಸಬೇಕಾಗಿರುವ ವಿಷಯು ಈ ಪರ್ವಾಧ್ಯಾಯದ ಇತರ ಎಲ್ಲಾ ಅಂಶಕ್ಕೂ ಸಂಪೂರ್ಣ ವಿರೋಧವುಳ್ಳದ್ದು. ಅಲ್ಲದೆ ಲಿಪಿಕಾರನ ಅಥವಾ ಗ್ರಂಥಕಾರನ ಭ್ರಮೆಯ ಪ್ರಮಾದದಿಂದ ಉಂಟಾದುದಲ್ಲವೆಂಬುದೇನೋ ಸ್ಪಷ್ಟ. ಈ ವಿಷಯು ಪ್ರಕ್ಷಿಪ್ತವೆಂದು ಹೇಳುವುದಕ್ಕೆ ನಮಗೆ ಅಧಿಕಾರವುಂಟು.

ಪ್ರಕ್ಷಿಪ್ತವನ್ನು ಮಾಡಿದವನು ಹೀಗೆ ಬೆರೆಸುವುದಕ್ಕಾಗದ ಮಾತುಗಳನ್ನು ಬೆರೆಸುವುದಕ್ಕೆ ಇವನ ಉದ್ದೇಶವೇನಿರಬಹುದು ಎಂದು ಪಾಠಕರು ಕೇಳಬಹುದು. ಮಹಾಭಾರತದಲ್ಲಿ ಮೂರು ಬಗೆಯಾದ ಬರಹಗಳು ಇರುವುದನ್ನು ನಾನು ಆಗಿಂದಾಗ ಸೂಚಿಸುತ್ತಲೇ ಇರುವೆನು. ಮೂರನೆಯ ಬಗೆಯ ಬರಹವು ಹಲವರಿಂದ ಬೆರೆತುಬಂದುದು. ಮೊದಲಿನ ಎರಡು ರೀತಿಯ ಬರಹಗಳೂ ಶ್ರೇಷ್ಠಕವಿಗಳಿಂದ ಬೆರೆತುದಾದರೂ ಸ್ಪಷ್ಟವಾಗಿ ಭಿನ್ನ ಭಿನ್ನ ಭಾಗಗಳುಳ್ಳವುಗಳು. ಇದು ನೋಡಿದೊಡನೆಯೇ ಗೊತ್ತಾಗುವುದು. ಎರಡನೇತರದ ಬರಹವನ್ನು ಬೆರೆಸಿದ ಕವಿಯ ರಚನೆಯ ಲಕ್ಷಣವು ಯುದ್ಧಪರ್ವಾಧ್ಯಾಯದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಈ ಪರ್ವಗಳ ಅಧಿಕಾಂಶಗಳು ಇವನ ಕೈವಾಡವೆಂಬುದನ್ನು ಆಯಾ ಪರ್ವಗಳ ಸಮಾಲೋಚನೆಯ ಸಮಯದಲ್ಲಿ ವಿಶದವಾಗಿ ಸೂಚಿಸುವೆನು. ಕೃಷ್ಣನನ್ನು ಚತುರಚೂಡಾಮಣಿಯನ್ನಾಗಿ ತೋರ್ಪಡಿಸಲು ಈ ಕವಿ ಬಹಳವಾಗಿ ಯತ್ನಗೊಂಡಿರುವನು. ಈ ಗುಣಗಳಲ್ಲೆಲ್ಲ ಬುದ್ಧಿ ಕುಶಲತೆಯೇ ಈ ಕವಿಗೆ ಹೆಚ್ಚು ಆದರಣೀಯ.

ಈಗಿನ ಕಾಲದಲ್ಲೂ ಇಂತಹ ಜನರು ದುರ್ಲಭರೇನೂ ಅಲ್ಲ. ಕೌಶಲವೇತ್ತನಾದ ಬುದ್ಧಿವಂತನಾದ ಚತುರನೇ ಮನುಷ್ಯತ್ವಕ್ಕೆ ಆದರ್ಶರೂಪನೆಂದಂತಿರುವವರು ಉಚ್ಚಶ್ರೇಣಿಯ ಸುಶಿಕ್ಷಿತ ಜನರುಗಳಲ್ಲಿ ಈಗಲೂ ಇರುವರು. ಈರೋಪಿಯ ಸಮಾಜದಲ್ಲಿ ಈ ಆದರ್ಶವು ಬಹಳ ಪ್ರಿಯವಾದುದು. ಇದರಿಂದಲೇ ಈಗಣ (Diplomacy—ನೀತಿ ವಿದ್ಯೆ) ಸೃಷ್ಟಿ. ಬಿಸ್‌ಮಾರ್ಕನೆಂಬ ಜರ್ಮನಿಯ ಪ್ರಖ್ಯಾತ ನೀತಿಜ್ಞ

ಪ್ರಧಾನಿ ಒಂದು ದಿನ ಜಗತ್ತಿಗೆಲ್ಲಾ ಪ್ರಧಾನನಾದ ಮನುಷ್ಯ ನಾಗಿದ್ದನು. ಥೆಮಿಸ್ಟಕ್ಲಿಸನೆಂಬ ಗ್ರೀಕ್ ಚರಿತ್ರಕಾರನ ಕಾಲದಿಂದ ಈಗಿನವರೆಗೂ ಈ ವಿದ್ಯೆಯಲ್ಲಿ ಪಟುವಾದವನೇ ಯೂರೋಪಿನಲ್ಲಿ ಮಾನ್ಯನು. "Imitation of Christ" ನ್ನು ಬರೆದ "Thomas Akempis" ಎಂಬ ಮಹಾತ್ಮನನ್ನು ಆರು ಬಲ್ಲರು? ಮಹಾಭಾರತದ ಎರಡನೇರೀತಿಯ ಕವಿಯ ಮನಸ್ಸಿನಲ್ಲಿಯೂ ಈ ಬಗೆಯ ಚರಮಾದರ್ಶವಿತ್ತು. ಇದರಮೇಲೆ ಕೃಷ್ಣನ ಈಶ್ವರತ್ವದಲ್ಲಿ ಅವನಿಗೆ ಸಂಪೂರ್ಣ ಭರವಸೆ. ಆದುದರಿಂದಲೇ ಪುರುಷೋತ್ತಮನನ್ನು ಅವನು ಕೌಶಲದಲ್ಲಿ ಶ್ರೇಷ್ಠನನ್ನಾಗಿ ಮಾಡಿರುವನು. ಸುಳ್ಳು ಮಾತಿನಿಂದ ಪ್ರಖ್ಯಾತವಾದ ದ್ರೋಣನ ಸಾವಿನ ಸಂಗತಿಯನ್ನು ಬರೆದವನೂ ಈತನೇ. ಜಯದ್ರಥನ ವಧೆಯಲ್ಲಿ ಸುದರ್ಶನ ಚಕ್ರದಿಂದ ಸೂರ್ಯನನ್ನು ಮರೆಮಾಚಿದ್ದು, ಕರ್ಣಾರ್ಜುನರ ಯುದ್ಧದಲ್ಲಿ ಅರ್ಜುನನ ರಥಚಕ್ರವನ್ನು ಭೂಮಿಯಲ್ಲಿ ತುಳಿದು ಕುದುರೆಗಳನ್ನು ನೆಲಕ್ಕೆ ಕುಕ್ಕರಿಸಿದ್ದು, ಮೊದಲಾದ ಅದ್ಭುತ ಕೌಶಲಾತಿಶಯಗಳೆಲ್ಲವೂ ಈತನ ರಚನೆಯೇ. ಈಗ ಜರಾಸಂಧವಧ ಪರ್ವಾಧ್ಯಾಯದಲ್ಲಿ ಅನರ್ಥಕವಾದ ಮತ್ತುಅಸಂಗತವಾದ ಕೌಶಲವನ್ನು ತೋರಿಸುವ ಶ್ಲೋಕಗಳನ್ನು ಇವನೇ ಮಾಡಿರಬೇಕೆಂದು ತೋರುವುದು. ಹೀಗಿರುವಾಗ ಇವನ ಉದ್ದೇಶವನ್ನು ಭೇದಿಸುವುದು ಅಷ್ಟು ಕಷ್ಟಕರವಾದುದೇನೂ ಅಲ್ಲ. ಕೃಷ್ಣನನ್ನು ಕೌಶಲ ಮಯನನ್ನಾಗಿಯೇ ತೋರಿಸಲು ಇವನು ಯತ್ನಿಸಿರುವನು. ಇಷ್ಟು ಸ್ವಲ್ಪ ವಿಷಯದ ಮೇಲೆ ನಾವು ಭಾರವನ್ನು ಬಿಡಬೇಕಾಗಿದ್ದರೆ ಇಷ್ಟನ್ನು ಹೇಳ ಬೇಕಾಗಿರಲಿಲ್ಲ. ಜರಾಸಂಧವಧ ಪರ್ವಾಧ್ಯಾಯದಲ್ಲಿ ಅವನ ಕೈಚಳಕ ಇನ್ನೂ ವಿಶದಪಡುವುದು.

ಸಪ್ತಮ ಪರಿಚ್ಛೇದ

ಕೃಷ್ಣ ಜರಾಸಂಧರ ಸಂವಾದ

ರಾತ್ರಿಯಲ್ಲಿ ಯಜ್ಞಶಾಲೆಯಲ್ಲಿ ಸ್ನಾತಕ ವೇಷಧಾರಿಗಳಾದ ಮೂವರನ್ನು ಜರಾಸಂಧನು ಕಂಡು ಸತ್ಕರಿಸಿದನು. ಈ ಮೂವರೂ

ಜರಾಸಂಧನು ಮಾಡಿದ ಸತ್ಕಾರವನ್ನು ಸ್ವೀಕರಿಸಿದರೋ ಇಲ್ಲವೋ ಎಂಬುದು ತಿಳಿಯುವುದಿಲ್ಲ. ಈ ವಿಷಯ ಬೇರೊಂದೆಡೆ ಇದೆ. ಮೂಲದ ಮೇಲೆ ಇನ್ನೊಬ್ಬನ ಕೈಚಮತ್ಕಾರವು ಸೇರಿರುವುದರಿಂದ ಹೀಗೆ ತೊಡರು ಉಂಟಾಗಿರುವುದು.

ಆಮೇಲೆ ಸೌಜನ್ಯ ವಿನಿಮಯಗಳಾದಮೇಲೆ—''ಎಲೈ ಪ್ರಿಯರೆ, ಸ್ನಾತಕ ವ್ರತಾಚಾರಿಗಳಾದ ಬ್ರಾಹ್ಮಣರು ಸಭೆಗೆ ಬರುವಾಗಲಲ್ಲದೆ ಗಂಧ ಮಾಲ್ಯಗಳನ್ನು * ಧರಿಸುವುದಿಲ್ಲ. ತಾವುಗಳು ಯಾರು ? ರಕ್ತಾಂಬರವನ್ನು ಧರಿಸಿರುವಿರಿ. ಪುಷ್ಪಮಾಲ್ಯಗಳಿಂದಲೂ ಸುಗಂಧಾನುಲೇಪನಗಳಿಂದಲೂ ನಿಮ್ಮ ಅಂಗಗಳು ಪ್ರಕಾಶಿಸುತ್ತಲಿವೆ. ಭುಜಗಳು ಹೆದೆಯ ಹೊಡೆತದ ಚಿಹ್ನೆಗಳಿಂದ ಅಂಕಿತವಾಗಿವೆ. ಆಕಾರೇಂಗಿತಗಳಿಂದ ಕ್ಷತ್ರಿಯ ತೇಜಸ್ಸಿನ ಪ್ರಮಾಣವು ತೋರ್ಪಡುತ್ತಲಿದೆ. ಆದರೂ ತಾವು ಬ್ರಾಹ್ಮಣರೆಂದು ಹೇಳುತ್ತಿರುವಿರಿ. ನಿಜವಾಗಿಯೂ ನೀವುಗಳು ಯಾರು ? ತಿಳಿಸೋಣವಾಗಲಿ. ರಾಜಸಮ್ಮುಖದಲ್ಲಿ ಸತ್ಯವೇ ಪ್ರಶಂಸನೀಯ. ತಾವು ಏತಕ್ಕೋಸ್ಕರ ಊರ ಬಾಗಿಲಿನಿಂದ ಪ್ರವೇಶಿಸದೆ ನಿರ್ಭೀತರಾಗಿ ಚೈತಕಪರ್ವತದ ಕೋಡನ್ನು ಮುರಿದು ಒಳಪೊಕ್ಕಿರಿ. ಬ್ರಾಹ್ಮಣರು ವಾಕ್ಯಗಳ ಮೂಲಕ ವೀರ್ಯವನ್ನು ಪ್ರಕಾಶಗೊಳಿಸುವುದುಂಟು. ತಾವಾದರೆ ಕಾರ್ಯದ ಮೂಲಕ ಹೀಗೆ ಮಾಡಿ ಸಂಪೂರ್ಣ ವಿರುದ್ಧಾಚರಣೆಯನ್ನು ತೋರಿಸಿರುತ್ತೀರಿ. ತಾವು ನನ್ನಲ್ಲಿಗೆ ಬರಲು ನಾನು ತಮ್ಮನ್ನು ವಿಧಿವತ್ತಾಗಿ ಸತ್ಕರಿಸಿರುವೆನಾದರೂ ಸತ್ಕಾರವನ್ನು ಸ್ವೀಕರಿಸದಿರುವುದೇಕೆ ? ಇಲ್ಲಿಗೆ ಬರುವುದರ ನಿಮಿತ್ತವೇನು ?" ಎಂದು ಜರಾಸಂಧನು ಅವರನ್ನು ಪ್ರಶ್ನಿಸಿದನು.

---

* ಅವರು ಹೂವಾಡಿಗನೊಬ್ಬನಿಂದ ಹಾರಗಳನ್ನು ಬಲವಂತವಾಗಿ ಕಸಿದುಕೊಂಡಿದ್ದರು. ರಾಜಸೂಯಮಾಡುವಷ್ಟು ಐಶ್ವರ್ಯವಂತರಾದವರಿಗೆ ಹಾರಗಳನ್ನು ಕೊಳ್ಳಲು ಬೇಕಾಗುವ ಕೆಲವು ಹಣಗಳು ಒಗದೇ ಹೋದುದು ಅತ್ಯಂತ ಅಸಂಭವವೇ ಸರಿ. ಕಪಟ ದ್ಯೂತದಿಂದ ಸೋತ, ರಾಜ್ಯವನ್ನೇ ಧರ್ಮಕ್ಕೆ ಕಟ್ಟುಬಿದ್ದು ಬಿಟ್ಟುಕೊಟ್ಟಂಥವರು ಹೂಮಾಲೆಗಳಿಗಾಗಿ ಥಕಾಯಿತಿಯನ್ನು ಮಾಡಿ ಮೂರು ಹಾರಗಳನ್ನು ಸಂಗ್ರಹಿಸುವುದುಂಟೆ ? ಇದೆಲ್ಲ ಎರಡನೆಯ ಸ್ತರದ ಕವಿಯ ಕೈವಾಡ. ಗರ್ವಾಂಧರಾದ ಕ್ಷತ್ರಿಯರ ತೇಜಸ್ಸನ್ನು ವರ್ಣಿಸುವಲ್ಲಿ ಇದು ಒಪ್ಪಿದರೂ ಒಪ್ಪಬಹುದು.

"ಎಲೈ ರಾಜನೇ, ನೀನು ನಮ್ಮನ್ನು ಸ್ನಾತಕರಾದ ಬ್ರಾಹ್ಮಣರೆಂದು ತಿಳಿದಿರುತ್ತೀ. ಬ್ರಾಹ್ಮಣರೂ ಕ್ಷತ್ರಿಯರೂ ವೈಶ್ಯರೂ ಸ್ನಾತಕವ್ರತವನ್ನು ಧರಿಸುವುದುಂಟು. ಇದಕ್ಕೆ ಸಾಮಾನ್ಯ ಮತ್ತು ವಿಶೇಷಗಳೆಂಬ ಎರಡು ತೆರದ ನಿಯಮಗಳುಂಟು. ಕ್ಷತ್ರಿಯರು ವಿಶೇಷ ನಿಯಮವನ್ನು ಅನುಸರಿಸಲು ಸಂಪತ್‌ಶಾಲಿಗಳಾಗುವರು, ಪುಷ್ಪವನ್ನು ಧರಿಸುವವರು ನಿಜವಾಗಿ ಕಾಂತಿಯುಕ್ತರಾಗುವರು ಎಂದು ತಿಳಿದೇ ಇಂತೆಸಗಿರುವೆವು. ಕ್ಷತ್ರಿಯರಲ್ಲಿ ಬಾಹುವೇ ಬಲವತ್ತರವಾದುದು. ವಾಗ್ವೀರ್ಯ ಇವರದಲ್ಲ. ಆದುದರಿಂದ ಪ್ರಗಲ್ಭ ವಾಕ್ಯಗಳನ್ನು ಪ್ರಯೋಗಿಸುವುದು ನಮಗೆ ನಿಷಿದ್ಧ" ಎಂದು ಕೃಷ್ಣನು ಮೃದು ಮಧುರ ಗಂಭೀರ ಸ್ವರದಲ್ಲಿ (ಮೂಲ ಮಹಾಭಾರತದಲ್ಲಿಯೂ ಕೃಷ್ಣನು ಚಂಚಲನಾಗಿಯೇ ಆಗಲಿ ಕುಪಿತನಾಗಿಯೇ ಆಗಲಿ ಮಾತನಾಡಿರುವುದಿಲ್ಲ. ಅವನಿಗೆ ಎಲ್ಲ ಶತ್ರುಗಳೂ ವಶವರ್ತಿಗಳು.) ಉತ್ತರ ಹೇಳಿದನು.

ಈ ಮಾತುಗಳು ಶಾಸ್ತ್ರೋಕ್ತವಾದುವು ಮತ್ತು ಚಾತುರ್ಯವುಳ್ಳವುಗಳೇ ಆದರೂ ಕೃಷ್ಣನಿಗೆ ತಕ್ಕುವುಗಳಲ್ಲ. ಸತ್ಯಪ್ರಿಯನಾದ ಧರ್ಮಾತ್ಮನ ಉಕ್ತಿಗಳಲ್ಲ. ಛದ್ಮವೇಷವನ್ನು ಧರಿಸುವುದರಿಂದ ಹೀಗೆ ಉತ್ತರವನ್ನು ಕೊಡಲೇಬೇಕಾಗುವುದು. ಛದ್ಮವೇಷವು ದ್ವಿತೀಯ ಸ್ತರದ ಕವಿಯ ಸೃಷ್ಟಿಯಾಗಿರುವುದಾದರೆ ಈ ವಾಕ್ಯಗಳಿಗೆ ಅವನೇ ಕಾರಣನು. ಕೃಷ್ಣನನ್ನು ಚತುರಚೂಡಾಮಣಿಯನ್ನಾಗಿ ಬೆಳಗಿಸಲು ಯತ್ನಿಸಿರುವವನಿಗೆ ಈ ಉತ್ತರವು ಸರಿಹೋಲುವುದು. ಬೇಕಾದುದಾಗಲಿ ಬ್ರಾಹ್ಮಣನೆಂದು ಹೇಳಿಕೊಂಡು ವಂಚಿಸಬೇಕಾದ ಉದ್ದೇಶ ಕೃಷ್ಣನಿಗೇನೂ ಇಲ್ಲ. ಕ್ಷತ್ರಿಯನೆಂದು ತಾನಾಗಿಯೇ ಒಪ್ಪಿಕೊಂಡಿರುವನು. ಅಲ್ಲದೆ ಶತ್ರುಭಾವದಲ್ಲಿ ಯುದ್ಧಾರ್ಥವಾಗಿ ಬಂದಿರುವನೆಂದೂ ಸ್ಪಷ್ಟವಾಗಿಯೇ ಹೇಳುತ್ತಿದ್ದಾನೆ—"ಬ್ರಹ್ಮನು ಕ್ಷತ್ರಿಯರ ಬಾಹುಗಳಲ್ಲಿ ಬಲವನ್ನು ತುಂಬಿರುವನು. ಎಲೈ ರಾಜನೇ, ನನ್ನ ಬಾಹುಬಲವನ್ನು ನೋಡಬೇಕೆಂಬ ಅಪೇಕ್ಷೆ ನಿನಗಿರುವುದಾದರೆ ಈಗಲೇ ಆಗಬಹುದು; ಸಂದೇಹವಿಲ್ಲ. ಎಲೈ ಬೃಹದ್ರಥನಂದನನೇ, ಧೀರಕ್ಷತ್ರಿಯರು ಶತ್ರುವಿನ ಮನೆಯಲ್ಲಿ ಅಪ್ರಕಾಶವಾಗಿಯೂ, ಸುಹೃದನ ಮನೆಯಲ್ಲಿ ಪ್ರಕಾಶವಾಗಿಯೂ ಕಾಣಿಸಿ

ಕೊಳ್ಳುವರು. ನಾವು ಸ್ವಕಾರ್ಯಸಾಧನೆಗೋಸ್ಕರ ಶತ್ರುವಿನ ಮನೆಯನ್ನು ಹೊಕ್ಕು ಅವನಿಂದಾದ ಸತ್ಕಾರವನ್ನು ಸ್ವೀಕರಿಸಲಾರೆವು. ಇದು ನಮ್ಮ ನಿತ್ಯವ್ರತವು." ಇಲ್ಲಿ ತೊಂಗುತೊಡರುಗಳಾವುವೂ ಇಲ್ಲ. ಮಾತುಗಳೆಲ್ಲ ಸ್ಪಷ್ಟವಾಗಿಯೇ ಇವೆ. ಇಲ್ಲಿಗೆ ಅಧ್ಯಾಯವೂ ಛದ್ಮವೇಷದ ತೊಡಕೂ ಮುಗಿದುಹೋಗಿದೆ. ಛದ್ಮವೇಷವನ್ನು ಯಾರೂ ಅನುಮೋದಿಸಿಲ್ಲ. ಇಷ್ಟಾದ ಬಳಿಕ ಮುಂದಿನ ಅಧ್ಯಾಯದಲ್ಲಿ ಆಡಿರುವ ಮಾತುಗಳೆಲ್ಲ ಕೃಷ್ಣನೇ ಹೇಳಿದುದು. ಅವುಗಳ ರೀತಿಯೇ ಬೇರೆ. ಇವೆಲ್ಲವೂ ಈವರೆಗೂ ನಾವು ಶೋಧಿಸಿಕೊಂಡು ಬರುತ್ತಿರುವ ಉನ್ನತ ಪುರುಷನಾದ ಶ್ರೀಕೃಷ್ಣನಿಗೆ ತಕ್ಕವು. ಪೂರ್ವ ಮತ್ತು ಉತ್ತರಾಧ್ಯಾಯಗಳಲ್ಲಿ ವರ್ಣಿತನಾದ ಕೃಷ್ಣನ ಚರಿತ್ರೆ ಪರಸ್ಪರವಾಗಿ ಇಷ್ಟು ಗುರುತರ ವ್ಯತ್ಯಾಸವುಳ್ಳುವಾಗಿರುವುದರಿಂದ ಎರಡು ಕೈಗಳ ವರ್ಣನೆಯೆಂದು ವಿವೇಚಿಸಲು ನಾವು ಬಾಧ್ಯಪಟ್ಟಿರುವೆವು.

ಜರಾಸಂಧನ ಗೃಹವನ್ನು ಕೃಷ್ಣನು ಶತ್ರುವಿನ ಗೃಹವೆಂದು ನಿರ್ದೇಶಿಸಲು, ಜರಾಸಂಧನು—"ನಾನು ತಮಗೆ ಯಾವಾಗಲಾದರೂ ವೈರವನ್ನಾಗಲಿ, ಅಪಕಾರವನ್ನಾಗಲೀ ತೋರಿಸಿದಂತೆ ನನ್ನ ಸ್ಮರಣೆಯಲ್ಲಿಲ್ಲ. ನಿರಪರಾಧಿಯಾದ ನನ್ನನ್ನು ಯಾವ ಕಾರಣದಿಂದ ನೀವು ಶತ್ರುವೆಂದು ಭಾವಿಸುತ್ತೀರಿ ?" ಇದಕ್ಕೆ ಉತ್ತರವಾಗಿ ಕೃಷ್ಣನು ಯಥಾರ್ಥವಾಗಿ ಇವನು ಏತಕ್ಕೆ ಶತ್ರುವೋ ಅದನ್ನು ಹೇಳಿರುವನು. ತನ್ನೊಡನೆ ಜರಾಸಂಧನಿಗೆ ಇದ್ದ ವಿವಾದ ವಿಷಯವನ್ನು ಎತ್ತಿರುವುದಿಲ್ಲ. ತನ್ನೊಡನೆ ವಿವಾದಮಾಡುವುದರಿಂದ ಯಾರೂ ಅವನಿಗೆ ಶತ್ರುವಾಗುವುದಿಲ್ಲ. ಅವನು ಎಲ್ಲರಲ್ಲಿಯೂ ಸಮದರ್ಶಿ. ಶತ್ರುವನ್ನೂ ಮಿತ್ರನನ್ನೂ ಸಮಾನವಾಗಿ ನೋಡುವವನು. ಅವನು ಪಾಂಡವರ ಗೆಳೆಯನೆಂತಲೂ ಕೌರವರ ಹಗೆಯೆಂತಲೂ ಲೋಕದಲ್ಲಿ ರೂಢಿಯುಂಟು. ವಾಸ್ತವಿಕವಾಗಿ ಮೌಲಿಕ ಮಹಾಭಾರತದ ಸಮಾಲೋಚನೆಯಲ್ಲಿ ಅವನು ಧರ್ಮಪಕ್ಷಪಾತಿ ಅಧರ್ಮ ವಿರೋಧಿ ಎಂಬುದನ್ನು ಮತ್ತೆ ಮತ್ತೆ ನೋಡುವೆವು. ಇಷ್ಟು ಮಾತ್ರವಲ್ಲದೆ ಅವನಿಗೆ ಪಕ್ಷ ಪರಪಕ್ಷಗಳಾವುವೂ ಇಲ್ಲ. ಸದ್ಯಕ್ಕೆ ಇದು ಹಾಗಿರಲಿ. ಕೃಷ್ಣನು ಉಪಯಾಚಕನಾಗಿ ಜರಾಸಂಧನಿಗೆ ತನ್ನ ಪರಿಚಯವನ್ನು

ಹೇಳಿದರೂ ತನ್ನೊಡನೆ ಅವನಿಗೆ ಇದ್ದ ವಿವಾದಕ್ಕಾಗಿ ಅವನನ್ನು ಶತ್ರುವೆಂದು ನಿರ್ದೇಶಿಸಲಿಲ್ಲ. ಆದರೆ ಮನುಷ್ಯಕುಲಕ್ಕೇ ಶತ್ರುವಾದವನು ಯಾರೋ ಅವನು ಕೃಷ್ಣನ ಶತ್ರುವು. ಏಕೆಂದರೆ, ಆದರ್ಶ ಪುರುಷನು ಸರ್ವಭೂತ ಗಳಲ್ಲಿಯೂ ತನ್ನನ್ನೇ ಕಾಣುವನು. ಇದಲ್ಲದೆ ಅವನಿಗೆ ಬೇರೆ ರೀತಿಯ ಆತ್ಮಜ್ಞಾನವೇ ಇಲ್ಲ. ಆದುದರಿಂದ ಅವನು ಜರಾಸಂಧನ ಪ್ರಶ್ನೆಗೆ ಉತ್ತರವಾಗಿ ತನಗೆ ಮಾಡಿರುವ ಅಪಕಾರದ ಪ್ರಸಂಗವನ್ನು ಕೂಡ ಬಿಟ್ಟು ಸಾಧಾರಣರಿಗೆ ಅವನಿಂದುಂಟಾಗಿರುವ ತೊಂದರೆಗಳನ್ನು ಎತ್ತಿ ತೋರಿಸಿರುವನು. ನೀನು ಮಹಾದೇವನಿಗೆ ಬಲಿಕೊಡುವುದಕ್ಕಾಗಿ ರಾಜಸಮೂಹವನ್ನು ಬಂಧಿಸಿರುತ್ತೀಯೆ. ಆದುದರಿಂದ ಯುಧಿಷ್ಠಿರನ ನಿಯೋಗಾನುಸಾರವಾಗಿ ನಿನ್ನನ್ನು ಎದುರಿಸಲು ನಾವು ಬಂದಿರುವೆವು. ಶತ್ರುತ್ವವನ್ನು ತಿಳಿಸುವುದಕ್ಕೋಸ್ಕರ ಕೃಷ್ಣನು ಜರಾಸಂಧನಿಗೆ ಹೀಗೆ ಹೇಳಿರುವನು : "ಎಲೈ ಬೃಹದ್ರಥನಂದನನೇ, **ನಾವು ಧರ್ಮಚಾರಿ ಗಳಾಗಿ ಧರ್ಮರಕ್ಷಣೆಯಲ್ಲಿ ಸಮರ್ಥರಾಗಿರಲು ನೀನು ಮಾಡಿದ ಪಾಪದಿಂದ ನಾವೂ ಪಾಪಿಗಳಾಗುವೆವು.**" ಪಾಠಕರು ಈ ಮಾತುಗಳಿಗೆ ವಿಶೇಷ ಗಮನವನ್ನು ಕೊಡುವರೆಂದು ನಂಬಿ ದೊಡ್ಡಕ್ಷರಗಳಲ್ಲಿ ಬರೆದಿರುವೆನು. ಇದು ಬಹು ಪುರಾತನವಾದ ಮಾತಾದರೂ ಬಹು ಗುರುತರವಾದುದು. ಧರ್ಮಸಂರಕ್ಷಣದಲ್ಲಿಯೂ ಪಾಪ ದಮನದಲ್ಲಿಯೂ ಸಮರ್ಥನಾಗಿ ಹಾಗೆ ಮಾಡದವನು ಪಾಪಕ್ಕೆ ಸಹಕಾರಿ. ಆದುದರಿಂದ ಇಹಲೋಕದಲ್ಲಿ ಸಾಧ್ಯವಾದಮಟ್ಟಿಗೆ ಪಾಪನಿವಾರಣೆಗಾಗಿ ಸಕಲರೂ ಯತ್ನಮಾಡದೇ ಇರುವುದು ಅಧರ್ಮಕರ. "ನಾನು ಪಾಪವಾವುದನ್ನೂ ಮಾಡಲಿಲ್ಲ. ಇನ್ನೊಬ್ಬನು ಪಾಪಮಾಡಿದುದರಿಂದ ನನ್ನ ದೋಷವೇನು ?" ಎಂದು ತನ್ನ ಮನಸ್ಸಿನಲ್ಲೆಣಿಸಿಕೊಂಡು ನಿಶ್ಚಿಂತನಾಗಿರುವವನು ಪಾಪಿ. ಸಮಸ್ತ ಧರ್ಮಾತ್ಮರುಗಳೂ ಇದನ್ನು ಭಾವಿಸಿಯೇ ನಿಶ್ಚಿಂತರಾಗಿ ಇರರು. ಆದುದರಿಂದಲೇ ಈ ಜಗತ್ತಿನಲ್ಲಿ ಜನ್ಮವನ್ನು ಪಡೆದ ನರೋತ್ತಮರೆಲ್ಲರೂ ಧರ್ಮರಕ್ಷಣೆಯ ಮತ್ತು ಪಾಪನಿವಾರಣೆಯ ವ್ರತವನ್ನು ಹಿಡಿಯುವರು. ಶಾಕ್ಯಸಿಂಹ, ಏಸುಕ್ರಿಸ್ತ ಮೊದಲಾದವರು ಇದಕ್ಕೆ ಉದಾಹರಣೆ. ಮೇಲೆ ಹೇಳಿದ ವಾಕ್ಯವೇ ಅವರ ಜೀವನ ಚರಿತ್ರೆಯ ಮೂಲಸೂತ್ರ.

ಶ್ರೀ ಕೃಷ್ಣನದೂ ಇದೇ ವ್ರತ. ಈ ಮಹಾವಾಕ್ಯವನ್ನು ಸ್ಮರಣೆಯಲ್ಲಿ ಇಡದೇಹೋದರೆ ಅವನ ಜೀವನ ಚರಿತ್ರೆ ಮನಸ್ಸಿಗೆ ಹತ್ತುವುದಿಲ್ಲ. ಜರಾಸಂಧ, ಕಂಸ, ಶಿಶುಪಾಲ ಇವರ ವಧೆ; ಮಹಾಭಾರತ ಯುದ್ಧದಲ್ಲಿ ಪಾಂಡವ ಪಕ್ಷಕ್ಕೆ ಕೃಷ್ಣನಿಂದಾದ ಸಹಾಯ—ಇವೆಲ್ಲವುಗಳೂ ಮೇಲಿನ ಮೂಲಸೂತ್ರದಿಂದಲೇ ಅರ್ಥವಾಗುವುವು. ಇದಕ್ಕೆ ಪುರಾಣಕಾರರು ಪೃಥ್ವಿಯ ಭಾರ ಹರಣವೆಂದು ಹೇಳಿರುವರು. ಕ್ರೈಸ್ತನಿಂದಾಗಲಿ, ಬುದ್ಧನಿಂದಾಗಲಿ, ಕೃಷ್ಣನಿಂದಾಗಲಿ ಅಥವಾ ಇನ್ನಾರಿಂದಲೇ ಆಗಲಿ ಈ ಪಾಪನಿವಾರಣೆಯ ವ್ರತದ ಹೆಸರು ಧರ್ಮಪ್ರಚಾರ. ಈ ಪ್ರಚಾರ ಎರಡು ಬಗೆಯಾಗಿ ಆಗಬಹುದು ಮತ್ತು ಆಗಿರುವುದು. ಒಂದು ವಾಕ್ಯತಃ, ಧರ್ಮಸಂಬಂಧೀಯವಾದ ಉಪದೇಶ ಮೂಲಕ. ಇನ್ನೊಂದು ಕಾರ್ಯತಃ, ಎಂದರೆ ತನ್ನ ಸಮಸ್ತ ಕಾರ್ಯವನ್ನೂ ಧರ್ಮದ ಆದರ್ಶದಲ್ಲಿ ಪರಿಣಮಿಸುವುದು. ಕ್ರೈಸ್ತನೂ, ಶಾಕ್ಯಸಿಂಹನೂ, ಕೃಷ್ಣನೂ ಈ ಎರಡು ವಿಧವಾದ ಅನುಷ್ಠಾನಗಳನ್ನು ಮಾಡಿರುವರು. ಶಾಕ್ಯಸಿಂಹನಿಂದಲೂ ಕ್ರೈಸ್ತನಿಂದಲೂ ಆದ ಧರ್ಮಪ್ರಚಾರವು ಉಪದೇಶಪ್ರಧಾನವಾದುದು; ಕೃಷ್ಣನಿಂದಾದ ಧರ್ಮಪ್ರಚಾರವು ಕಾರ್ಯಪ್ರಧಾನವಾದುದು. ಇದರಲ್ಲಿ ಕೃಷ್ಣನದೇ ಹೆಚ್ಚು ಪ್ರಾಧಾನ್ಯ. ಏಕೆಂದರೆ, ವಾಕ್ಯವು ಸಹಜ ಸುಲಭ, ಕಾರ್ಯವಾದರೋ ಕಠಿನ. ಆದರೂ ಕಾರ್ಯವು ಅಧಿಕತರ ಫಲಪ್ರದಾಯಕ. ಬರೀ ಮನುಷ್ಯ ಮಾತ್ರದವನು ಇದನ್ನು ಚೆನ್ನಾಗಿ ಮಾಡಬಲ್ಲನೇ ಇಲ್ಲವೇ ಎಂಬುದು ಈಗ ನಮಗೆ ವಿಚಾರವಲ್ಲ.

ಇಲ್ಲಿ ಈ ಕೆಳಗೆ ಹೇಳುವ ವಾಕ್ಯವನ್ನು ಚೆನ್ನಾಗಿ ಆಲೋಚಿಸಿ ನೋಡುವುದು ಅವಶ್ಯ. ಕಂಸ ಶಿಶುಪಾಲರನ್ನು ಕೃಷ್ಣನು ಕೊಂದನು. ಜರಾಸಂಧನನ್ನು ಕೊಲ್ಲಬೇಕೆಂದೇ ಈಗ ಕೃಷ್ಣನು ಬಂದಿರುವನು. ಆದರೆ ಈ ಪಾಪಿಯನ್ನು ಕೊಲ್ಲುವುದು ಆದರ್ಶ ಪುರುಷನ ಕೆಲಸವೆ? ಸರ್ವ ಭೂತಗಳಲ್ಲಿಯೂ ಸಮದರ್ಶಿಯಾದವನು ಪಾಪಾತ್ಮನನ್ನು ತನ್ನಂತೆಯೇ ನೋಡಿ ಅವನ ಹಿತವನ್ನೇತಕ್ಕೆ ಬಯಸಬಾರದು? ಪಾಪಿಯನ್ನು ಜಗತ್ತಿನಲ್ಲಿ ಬಿಟ್ಟರೆ ಜಗತ್ತಿಗೆ ಮಂಗಳವಾಗುವುದಿಲ್ಲ. ಇದು ಸತ್ಯವಾದರೂ ಜಗತ್ತಿನ ಉದ್ಧಾರಕ್ಕೆ ಅವನ ವಧ ಸಾಧನೆಯೊಂದೇ ಉಪಾಯವೇ? ಪಾಪಿಯನ್ನು

ಪಾಪದಿಂದ ಬಿಡಿಸಿ ಧರ್ಮದಲ್ಲಿ ಪರಿವರ್ತಿಸುವಂತೆ ಮಾಡಿ ಜಗತ್ತಿನ ಮತ್ತು ಪಾಪಿಯ ಮಂಗಳವನ್ನು ಒಂದೇ ಕಾಲದಲ್ಲಿ ಸಾಧಿಸುವುದು ಇನ್ನೂ ಉತ್ಕೃಷ್ಟವಾದ ಉಪಾಯವಲ್ಲವೆ? ಆದರ್ಶ ಪುರುಷನು ಇಂಥದನ್ನು ಮಾಡಬೇಕಾಗಿರಲಿಲ್ಲವೆ? ಏಸುವೂ, ಶಾಕ್ಯಸಿಂಹನೂ, ಚೈತನ್ಯನೂ ಈ ತೆರದ ಪಾಪಿಗಳ ಉದ್ಧಾರದ ಪ್ರಯತ್ನವನ್ನು ಮಾಡಿದ್ದರು.

ಇದಕ್ಕೆ ಎರಡು ಉತ್ತರಗಳುಂಟು. ಕೃಷ್ಣಚರಿತ್ರೆಯಲ್ಲಿ ಇಂಥ ಧರ್ಮದ ಅಭಾವವೇನೂ ಇಲ್ಲ. ಆದರೆ ಕ್ಷೇತ್ರಭೇದದಿಂದ ಫಲಭೇದವೂ ಉಂಟಾಗಿರುವುದು. ದುರ್ಯೋಧನನೂ ಕರ್ಣನೂ ಕೊಲ್ಲಲ್ಪಡದೆ ಧರ್ಮ ಪಥಾವಲಂಬನಪೂರ್ವಕವಾಗಿ ಜೀವದೊಡನೆಯೂ ರಾಜ್ಯದೊಡನೆಯೂ ಉಳಿದುಕೊಂಡು ಇರುವಂತೆ ಯತ್ನವನ್ನು ಮಾಡಿಯೇ ಇದ್ದನು. ಮತ್ತು ಈ ಕಾರ್ಯ ಸಂಬಂಧವಾಗಿಯೇ ಮನುಷ್ಯ ಮಾತ್ರದವನಿಗೆ ಸಾಧ್ಯವಾದ ಮಟ್ಟಿಗೂ ನಾನು ಯತ್ನಿಸುವೆನು; ಆದರೆ ದೈವ ನನಗೆ ಮೀರಿದ್ದು ಎಂದು ಹೇಳಿರುವನು. ಕೃಷ್ಣನು ಮನುಷ್ಯಶಕ್ತಿಯ ಮೂಲಕ ಕಾರ್ಯ ಗಳನ್ನು ಮಾಡುತ್ತಿದ್ದನು. ಆದುದರಿಂದ ಸ್ವಭಾವತಃ ಅಸಾಧ್ಯವಾದುದರಲ್ಲಿ ಪ್ರಯತ್ನಮಾಡಿಯೂ, ಆಗಿಂದಾಗ್ಗೆ ಪರಾಭವವನ್ನು ಪಡೆಯುತ್ತಲೂ ಇದ್ದನು. ಶಿಶುಪಾಲನಿಗೂ ನೂರು ಅಪರಾಧಗಳವರೆಗೆ ಕ್ಷಮಾಪಣೆಯನ್ನು ಕೊಟ್ಟಿದ್ದನು. ಈ ವೃತ್ತಾಂತ ಅಲೌಕಿಕವಾದ ಉಪನ್ಯಾಸದಿಂದ ಮುಚ್ಚುಮರೆ ಹೊಂದಿ ಇದೆ. ಯಥಾಸ್ಥಾನದಲ್ಲಿ ಅದರ ತಾತ್ಪರ್ಯ ವನ್ನು ಸೂಚಿಸುವೆನು. ಕಂಸನ ವಧೆಯ ವಿಷಯವನ್ನು ಮೊದಲೇ ತಿಳಿಸಿರುವೆನು.

ಕ್ರೈಸ್ತನು ಪೈಲೆಟನನ್ನು ಎಷ್ಟರಮಟ್ಟಿಗೆ ಕ್ರಿಶ್ಚಿಯನನ್ನಾಗಿ ಮಾಡುವ ಸಂಭವವಿತ್ತೋ, ಕಂಸನನ್ನು ಧರ್ಮಪಕ್ಷಕ್ಕೆ ತಿರುಗಿಸುವುದು ಕೃಷ್ಣನಿಗೂ ಅಷ್ಟೇ ಸಂಭವವಾಗಿತ್ತು. ಜರಾಸಂಧನ ವಿಷಯದಲ್ಲಿಯೂ ಹೀಗೆಯೇ ಹೇಳಬಹುದು. ಹಾಗಾದರೂ ಜರಾಸಂಧನೊಡನೆ ಕೃಷ್ಣನಿಗೆ ಈ ವಿಷಯವಾದ ಮಾತುಕಥೆಗಳು ನಡೆದೇ ಇತ್ತು. ಕೃಷ್ಣನಿಂದ ಜರಾಸಂಧನು

ಧರ್ಮೋಪದೇಶವನ್ನು ಗ್ರಹಿಸುವುದು ಹಾಗಿರಲಿ, ಕೃಷ್ಣನಿಗೆ ಈ ವಿಷಯವಾದ ಲೆಕ್ಕರೊಂದನ್ನು ಕೇಳಿಸಿಬಿಟ್ಟಿರುವನು.

ಹೇಗೆಂದರೆ, ಧರ್ಮ ಅಥವಾ ಅರ್ಥದ ಮೇಲಿನ ಪೆಟ್ಟಿನಿಂದಲೇ ಮನಸ್ಸಿಗೆ ಪೀಡೆಯುಂಟಾಗುವುದು. ಕ್ಷತ್ರಿಯ ಕುಲದಲ್ಲಿ ಜನ್ಮವನ್ನು ಎತ್ತಿಯೂ, ಧರ್ಮಜ್ಞನಾಗಿಯೂ ಅಪರಾಧವಿಲ್ಲದೆ ಜನದ ಧರ್ಮಾರ್ಥಗಳ ಮೇಲೆ ಪೆಟ್ಟಿಕ್ಕತೊಡಗುವವನಿಗೆ ಇಹದಲ್ಲಿ ಅಮಂಗಲವೂ ಪರದಲ್ಲಿ ನರಕವೂ ದೊರಕುವವು, ಇತ್ಯಾದಿ, ಇತ್ಯಾದಿ. ಇಂಥ ಸ್ಥಳಗಳಲ್ಲಿ ಧರ್ಮೋಪದೇಶದಿಂದಾವ ಪ್ರಯೋಜನವೂ ಇರುವುದಿಲ್ಲ. ಜರಾಸಂಧನನ್ನು ಒಳ್ಳೆಯ ದಾರಿಗೆ ತರಲು ಉಪಾಯವಾವುದಿತ್ತೋ ಅದು ನಮ್ಮ ಮನಸ್ಸಿಗೆ ಹೊಳೆಯುವುದಿಲ್ಲ. ಅತಿಮಾನುಷ ಕೀರ್ತಿಯೊಂದನ್ನು ಪ್ರಚಾರಗೊಳಿಸಿದ್ದರೆ ಏನಾದರೂ ಒಂದು ಫಲವಾದರೂ ಆಗಬಹುದಾಗಿತ್ತು. ಇತರ ಧರ್ಮಪ್ರಚಾರಕಾರರಲ್ಲಿ ಅನೇಕರು ಆಗಾಗ್ಗೆ ಇಂಥಾದ್ದನ್ನು ಮಾಡಿರುವುದನ್ನಾಗಿ ಕೇಳಿರುವೆವು. ಕೃಷ್ಣ ಚರಿತ್ರೆ ಅತಿಮಾನುಷ ಶಕ್ತಿಯ ವಿರೋಧಿ. ಶ್ರೀ ಕೃಷ್ಣನು ಭೂತವನ್ನು ಬಿಡಿಸುವುದಾಗಲಿ, ರೋಗವನ್ನು ತೊಲಗಿಸುವುದಾಗಲಿ, ಈ ತೆರದ ಅದ್ಭುತಗಳ ದ್ವಾರಾ ಧರ್ಮವನ್ನಾಗಲಿ, ತನ್ನ ದೇವತ್ವ ಸ್ಥಾಪನವನ್ನಾಗಲಿ ಮಾಡಿಲ್ಲ.

ಆದರೆ ಇಷ್ಟರಮಟ್ಟಿಗೆ ತಿಳಿಯಬಹುದು. ಜರಾಸಂಧನ ವಧೆ ಶ್ರೀಕೃಷ್ಣನ ಉದ್ದೇಶವಲ್ಲ. ಧರ್ಮಸಂರಕ್ಷಣೆ ಅಥವಾ ನಿರ್ದೋಷಿಗಳಾದ ಅಥವಾ ಪ್ರಪೀಡಿತರಾದ ರಾಜಗಣಗಳ ಉದ್ಧಾರವೇ ಅವನ ಉದ್ದೇಶ. ಅವನು ಜರಾಸಂಧನಿಗೆ ಅನೇಕ ತಿಳುವಳಿಕೆಗಳನ್ನು ಹೇಳಿದ ಮೇಲೆ— "ನಾನು ವಸುದೇವನಂದನನಾದ ಕೃಷ್ಣನು. ಈ ಇಬ್ಬರು ವೀರಪುರುಷರೂ ಪಾಂಡುವಿನ ಮಕ್ಕಳು. ಈಗ ಸೆರೆಯಲ್ಲಿರುವ ಸಮಸ್ತ ಭೂಪತಿಗಳನ್ನು ನೀನು ಬಿಟ್ಟುಬಿಡುವೆಯೋ, ಇಲ್ಲವೇ ಯುದ್ಧವನ್ನು ಮಾಡಿ ಪ್ರಾಣವನ್ನು ಬಿಟ್ಟುಬಿಡುವೆಯೋ ? ನಿನಗೆ ಇವೆರಡರಲ್ಲಿ ಯಾವುದು ಇಷ್ಟ" ಎಂದು ಕೇಳಲು, ಜರಾಸಂಧನು ರಾಜನ್ಯರುಗಳನ್ನು ಬಿಟ್ಟುಬಿಟ್ಟಿದ್ದರೆ ಕೃಷ್ಣನು ಜರಾಸಂಧನನ್ನೂ ಜೀವಸೊಡನೆ ಬಿಟ್ಟುಬಿಡುತ್ತಿದ್ದನು. ಜರಾಸಂಧನು

ರಾಜನ್ಯರುಗಳನ್ನು ಬಿಡುವುದಕ್ಕೆ ಒಪ್ಪದೆ ಯುದ್ಧವನ್ನೇ ಮಾಡುವುದಾಗಿ ಒಪ್ಪಿಕೊಂಡನು. ಅವರಂತೆ ಯುದ್ಧವೇ ಜರುಗಿತು. ಜರಾಸಂಧನು ಯುದ್ಧದಿಂದಲ್ಲದೆ ಮತ್ತಾವ ತೆರದಲ್ಲೂ ಯಾಥಾರ್ಥ್ಯವನ್ನು ಸ್ವೀಕರಿಸಲು ಪಾತ್ರನಾಗಿರಲಿಲ್ಲ.

ಎರಡನೆಯ ಉತ್ತರವಾವುದೆಂದರೆ, ಏಸುವಿನ ಮತ್ತು ಬುದ್ಧನ ಜೀವಿನಿಗಳಲ್ಲಿ ಪತಿತೋದ್ಧರಣದ ಯತ್ನ ನಡೆದಷ್ಟು ಕೃಷ್ಣಜೀವಿನಿಯಲ್ಲಿ ಕಂಡು ಬರುವುದಿಲ್ಲವೆಂಬುದನ್ನೇನೋ ಒಪ್ಪುವೆವು. ಏಸುವಿನ ಮತ್ತು ಶಾಕ್ಯಮುನಿಯ ವ್ಯವಸಾಯವೇ ಧರ್ಮಪ್ರಚಾರ. ಕೃಷ್ಣನು ಧರ್ಮಪ್ರಚಾರವನ್ನೇನೋ ಮಾಡಿರುವನಾದರೂ ಅವನು ಅದರ ವ್ಯವಸಾಯಿಯಲ್ಲ. ಅವನದು ಆದರ್ಶ ಪುರುಷನ ಆದರ್ಶ ಜೀವನ ನಿರ್ವಾಹ ಮತ್ತು ಅದರಿಂದುಂಟಾಗುವ ಫಲ. ಹೀಗೆ ಹೇಳುವುದರಿಂದ ಏಸುವಿನ ಅಥವಾ ಶಾಕ್ಯಮುನಿಯ ವ್ಯವಸಾಯ ವಿಚಾರವಾಗಿ ನಾವು ಲಾಘವವನ್ನು ತೋರಿಸಬೇಕೆಂಬುದು ನಮ್ಮ ಇಷ್ಟವಲ್ಲ. ಏಸು ಮತ್ತು ಶಾಕ್ಯಮುನಿ ಇವರಿಬ್ಬರನ್ನೂ ಮನುಷ್ಯ ಶ್ರೇಷ್ಠರೆಂದು ನಾನು ಭಕ್ತಿಪುರಸ್ಸರವಾಗಿ ಕಾಣುವೆನಲ್ಲದೆ ಅವರ ಚರಿತ್ರೆಯನ್ನು ಪರ್ಯಾಲೋಚಿಸಿ ಜ್ಞಾನ ಸಂಪಾದನೆಯನ್ನು ಮಾಡಬಲ್ಲೆನೆಂದೂ ನಂಬಿರುವೆನು. ಧರ್ಮಪ್ರಚಾರಕನ ವ್ಯವಸಾಯ—(ಎಂದರೆ, ಯಾವ ಕರ್ಮದಲ್ಲಿ ನಾವು ಸದಾ ಪ್ರವೃತ್ತರಾಗಿರುವೆವೋ ಅದರ ವ್ಯವಸಾಯ) ಸಮಸ್ತ ವ್ಯವಸಾಯಗಳಲ್ಲಿಯೂ ಶ್ರೇಷ್ಠವೆಂದು ನಾನು ತಿಳಿದಿರುವೆನಾದರೂ ಆದರ್ಶ ಮನುಷ್ಯನು ತನ್ನ ವ್ಯವಸಾಯದಿಂದ ಆದರ್ಶನಾಗಲಾರನು. ಏಕೆಂದರೆ, ಮನುಷ್ಯನು ಮಾಡಬೇಕಾದ ಕರ್ಮಗಳು ಎಷ್ಟು ವಿಧವಾದುವೋ ಅವೆಲ್ಲವೂ ಅವನಿಗೆ ಅನುಷ್ಠೇಯಗಳು. ಯಾವ ಕರ್ಮವೂ ಅವನ ವ್ಯವಸಾಯವಲ್ಲ. ಎಂದರೆ, ಇತರ ಕರ್ಮಗಳಿಗಿಂತ ಯಾವುದಾದರೂ ಒಂದು ಕರ್ಮವು ಪ್ರಧಾನತೆಯನ್ನು ಅವನಲ್ಲಿ ಪಡೆದಿರುವುದಿಲ್ಲ. ಏಸುವೂ ಮತ್ತು ಶಾಕ್ಯಸಿಂಹನೂ ಶ್ರೇಷ್ಠ ಪುರುಷರಾದರೂ ಆದರ್ಶ ಸ್ವರೂಪರಲ್ಲ. ಮನುಷ್ಯರ ಶ್ರೇಷ್ಠ ವ್ಯವಸಾಯದ ಅವಲಂಬನವೇ ಅವರಿಗೆ ವಿಧೇಯು. ಮತ್ತು ಅವರು ಅದನ್ನು ಅವಲಂಬಿಸಿಯೇ ಲೋಕಕ್ಕೆ ಹಿತವನ್ನು ಮಾಡಿದ್ದಾರೆ.

ನಮ್ಮ ಸಮಸ್ತ ಶಿಕ್ಷಿತ ಪಾಠಕರೂ ನಾನು ಮೇಲೆ ಹೇಳಿದ್ದನ್ನು ತಿಳಿದುಕೊಂಡಂತೆ ತೋರುವುದಿಲ್ಲ. ಹಾಗೆ ತಿಳಿಯುವುದಕ್ಕೆ ಪ್ರತಿಬಂಧಕವೂ ಒಂದುಂಟು. ಆದರ್ಶ ಪುರುಷನ ವಿಷಯವನ್ನು ಕುರಿತು—ಸಮಸ್ತ ಶಿಕ್ಷಿತ ಪಾಠಕರೂ ಆದರ್ಶ ಶಬ್ದವನ್ನು Ideal ಶಬ್ದದ ಮುಖಾಂತರ ತರ್ಜುಮೆ ಮಾಡಿಕೊಳ್ಳುವರು. ಅನುವಾದವೇನೋ ದೂಷ್ಯವಲ್ಲವಾದರೂ ಈಗ "Christian Ideal" ಒಂದುಂಟಷ್ಟೆ. ಕ್ರಿಶ್ಚಿಯನ್ನರ ಆದರ್ಶ ಪುರುಷನು ಏಸು. ನಾವು ಬಾಲ್ಯದಿಂದಲೂ ಕ್ರಿಶ್ಚಿಯನ್ ಜಾತಿಯ ಸಾಹಿತ್ಯವನ್ನು ಅಧ್ಯಯನಮಾಡಿ ಆ ಆದರ್ಶವನ್ನೇ ಹೃದಯಂಗಮವನ್ನಾಗಿ ಮಾಡಿಕೊಂಡಿರುವೆವು. ಆದರ್ಶ ಪುರುಷನೆಂದೊಡನೆಯೇ ಈ ಆದರ್ಶವೇ ನಮ್ಮ ಮನಸ್ಸಿಗೆ ಹೊಳೆಯುವುದು. ಈ ಆದರ್ಶದೊಡನೆ ಮಿಳಿತವಾಗದ್ದನ್ನು ಆದರ್ಶವೆಂದು ಸ್ವೀಕರಿಸಲಾರದವರಾಗಿರುವೆವು. ಕ್ರೈಸ್ತನು ಪತಿತೋದ್ಧಾರಿ ; ಯಾವ ದುರಾತ್ಮನನ್ನೂ ಆತನು ಕೊಲ್ಲಲಿಲ್ಲ. ಕೊಲ್ಲುವ ಶಕ್ತಿಯನ್ನೂ ಇಟ್ಟುಕೊಂಡಿರಲಿಲ್ಲ. ಶಾಕ್ಯಸಿಂಹ ಮತ್ತು ಚೈತನ್ಯರಲ್ಲಿ ಇದೇ ಗುಣ ಕಂಡುಬರುತಲಿದೆ. ಕೃಷ್ಣನು ಪತಿತಪಾವನನೆಂಬ ಬಿರುದಾಂಕಿತನಾದರೂ ಇತಿಹಾಸದಲ್ಲಿ ಪತಿತ ವಿಧ್ವಂಸಿಯಾಗಿಯೇ ಪರಿಚಿತನಾಗಿರುವನು. ಆದುದರಿಂದ ಇವನನ್ನು ಆದರ್ಶ ಪುರುಷನೆಂದು ಥಟ್ಟನೆ ತಿಳಿಯಲಾರದವರಾಗಿರುವೆವು. ಆದರೆ ನಾವು ಒಂದು ವಿಷಯವನ್ನು ವಿಚಾರಿಸಿ ನೋಡುವುದು ಉಚಿತ. 'ಕ್ರಿಶ್ಚಿಯನ್ ಐಡಿಯಲ್' ಎಂಬುದು ಮನುಷ್ಯತ್ವದ ಆದರ್ಶವೆ? ಸಮಸ್ತ ಜಾತಿಗಳ ಆದರ್ಶಗಳೂ ಇದೇ ರೂಪವಾಗಿರಬೇಕೆ ?

ಈ ಪ್ರಶ್ನೆಯಿಂದ ಮತ್ತೊಂದು ಪ್ರಶ್ನೆಯು ಹುಟ್ಟುವುದು. ಹಿಂದುಗಳಿಗೆ ಜಾತಿಯ ಆದರ್ಶವು ಬೇರೆಯಾಗಿ ಬಂದಿರುವುದೆ? ಹಿಂದೂ ಐಡಿಯಲ್ (Hindu Ideal) ಒಂದುಂಟೆ ? ಇರುವುದಾದರೆ ಅದಾವುದು ? ಶಿಕ್ಷಿತ ಹಿಂದೂಗಳ ಮಧ್ಯದಲ್ಲಿ ಹೀಗೆ ಚರ್ಚೆಯುಂಟಾದರೆ ಅನೇಕರು ತಲೆಯನ್ನು ಕೆರೆದುಕೊಳ್ಳುವುದರಲ್ಲಿ ಪ್ರವೃತ್ತರಾಗಬಹುದು. ಕೆಲವರು ಜಟಾವಲ್ಕಲವನ್ನು ಧರಿಸಿದ ಬಿಳೀಗಡ್ಡ ಮೀಸೆಗಳಿಂದಲಂಕೃತರಾದ ವ್ಯಾಸ ವಸಿಷ್ಠಾದಿ ಋಷಿಗಳನ್ನು ಹಿಡಿದು ಎಳೆದಾಡಬಹುದು. ಕೆಲವರು ಇಂಥ ಆದರ್ಶ ಇಲ್ಲವೇ ಇಲ್ಲವೆಂದು ಹಟ ಹಿಡಿಯಬಹುದು. ಇದ್ದುದೇ ನಿಜವಾಗಿದ್ದರೆ,

ನಮಗೀ ಅವಸ್ಥೆಯೆಲ್ಲುಂಟಾಗುತ್ತಿತ್ತು ಎಂದೆನ್ನಬಹುದು. ಆದರೆ ಇಂತಹ ಆದರ್ಶ ಒಂದು ದಿನ ಇದ್ದೇ ಇತ್ತು. ಆಗ್ಗೆ ಹಿಂದುವು ಪ್ರಥ್ವಿಯಲ್ಲಿ ಶ್ರೇಷ್ಠ ಜಾತಿಯವನು. ಆ ಆದರ್ಶ ಹಿಂದುವು ಯಾರು? ಇದಕ್ಕೆ ಉತ್ತರವಾಗಿ ನಾನು ತಿಳಿದಿರುವುದನ್ನು ಮೊದಲೇ ತಿಳಿಸಿರುವೆನು. ರಾಮಚಂದ್ರಾದಿ ಕ್ಷತ್ರಿಯರು ಆ ಆದರ್ಶ ಪ್ರತಿಮೆಯ ನಿಕಟವರ್ತಿಗಳು. ಆದರೆ ಹಿಂದುವಿನ ಯಥಾರ್ಥವಾದ ಆದರ್ಶನು ಶ್ರೀ ಕೃಷ್ಣನೇ. ಅವನೇ ಯಥಾರ್ಥವಾದ ಮನುಷ್ಯತ್ವದ ಆದರ್ಶ. ಕ್ರೈಸ್ತ ಮುಂತಾದವರು ಹಾಗೆ ಆದರ್ಶದ ಸಂಪೂರ್ಣತೆಯನ್ನು ಹೊಂದುವ ಸಂಭವವಿಲ್ಲ.

ಏಕೆಂದರೆ, ಮನುಷ್ಯತ್ವವಾವುದು? ಧರ್ಮತತ್ತ್ವದಲ್ಲಿ ಅದನ್ನು ತಿಳಿಸಲೆತ್ನಿಸಿರುವೆನು. ಮನುಷ್ಯನ ಸಮಸ್ತ ವೃತ್ತಿಗಳ ಸಂಪೂರ್ಣ ಸ್ಫೂರ್ತಿ ಮತ್ತು ಸಾಮಂಜಸ್ಯವೇ ಮನುಷ್ಯತ್ವ. ಯಾವನಲ್ಲಿ ಇವುಗಳೆಲ್ಲವೂ ಸ್ಫೂರ್ತಿಯನ್ನೂ ಸಾಮಂಜಸ್ಯವನ್ನೂ ಪಡೆದಿರುವುವೋ ಅವನೇ ಆದರ್ಶ ಪುರುಷನು. ಕ್ರೈಸ್ತನಲ್ಲಿ ಇದು ಇಲ್ಲ. ಶ್ರೀ ಕೃಷ್ಣನಲ್ಲಿ ಉಂಟು. ಏಸುವನ್ನು ರೋಮಕ ಸಮ್ರಾಜನು ಯೆಹೂದ್ಯರ ಶಾಸನ ಕರ್ತೃತ್ವಕ್ಕೆ ನಿಯೋಗಿಸಿದ್ದರೆ ತನ್ನ ಕೆಲಸವನ್ನು ಚೆನ್ನಾಗಿ ಮಾಡಬಲ್ಲ ಯೋಗ್ಯತೆಯಿತ್ತೆ? ಇಲ್ಲ. ಏಕೆಂದರೆ, ರಾಜಕಾರ್ಯಕ್ಕೋಸ್ಕರ ಯಾವ್ಯಾವ ಗುಣಗಳು ಅವಶ್ಯವೋ ಆ ಗುಣಗಳು ಅವನಿಂದ ಅನುಶೀಲಿಸಲ್ಪಟ್ಟಿಲ್ಲ. ಇಂತಹ ಧರ್ಮಾತ್ಮನು ರಾಜಶಾಸನ ಕರ್ತನಾಗಿದ್ದರೆ ಸಮಾಜಕ್ಕೆ ಅನಂತವಾದ ಮಂಗಳವು ಲಭಿಸುತ್ತಲಿತ್ತು. ಪಕ್ಷಾಂತರದಲ್ಲಿ ಶ್ರೀ ಕೃಷ್ಣನು ಸರ್ವಶ್ರೇಷ್ಠನೀತಿಜ್ಞನೆಂಬುದು ಪ್ರಸಿದ್ಧವಾದುದು. ಶ್ರೇಷ್ಠ ನೀತಿಜ್ಞನೆಂದೇ ಮಹಾಭಾರತದಲ್ಲಿ ಬಾರಿ ಬಾರಿಗೂ ವರ್ಣಿಸಲ್ಪಟ್ಟಿರುವನು. ಯುಧಿಷ್ಠಿರನೂ ಉಗ್ರಸೇನನೂ ಇವನ ಪರಾಮರ್ಶವನ್ನು ಬಿಟ್ಟು ದೊಡ್ಡ ಕಾರ್ಯವಾವುದಕ್ಕೂ ಕೈಹಾಕುತ್ತಿರಲಿಲ್ಲ. ಹೀಗೆ ತಾನು ರಾಜನಲ್ಲನಾದರೂ ಪ್ರಜೆಗಳಿಗೆ ಕೊನೆಯಿಲ್ಲದಷ್ಟು ಮಂಗಳವನ್ನುಂಟುಮಾಡಿಕೊಟ್ಟಿದ್ದನು. ಈ ಜರಾಸಂಧನ ಬಂದಿಗಳಾದ ರಾಜರುಗಳನ್ನು ಬಿಡಿಸಿದ್ದೂ ಇದಕ್ಕೆ ಒಂದು ದೃಷ್ಟಾಂತ. ತಿರುಗಿ ಮನಸ್ಸಿನಲ್ಲಿ ಭಾವಿಸಿ ನೋಡಿರಿ. ಯೆಹೂದ್ಯರು ರೋಮಕರ ಅತ್ಯಾಚಾರದಿಂದ ಪೀಡಿತರಾಗಿ ಸ್ವಾಧೀನತೆಯನ್ನು ಪಡೆಯಬೇಕೆಂದು

ಯತ್ನಿಸಿ ಯೇಸುವನ್ನು ಸೇನಾಪತಿಯನ್ನಾಗಿ ವರಿಸಿದ್ದರೆ ಏಸುವು ಏನನ್ನು ಮಾಡುತ್ತಿದ್ದನು ? ಯುದ್ಧಕ್ಕೆ ಅವನಿಗೆ ಶಕ್ತಿಯೂ ಇರಲಿಲ್ಲ. ಪ್ರವೃತ್ತಿಯೂ ಇರಲಿಲ್ಲ. "ಕೈಸರನಿಗೆ (Caeser) ಸೇರಬೇಕಾದುದನ್ನು ಕೈಸರನಿಗೆ ಒಪ್ಪಿಸಿಬಿಡಿ" ಎಂದು ಹೇಳಿ ಹೊರಟುಹೋಗುತ್ತಿದ್ದನು. ಕೃಷ್ಣನೂ ಯುದ್ಧದಲ್ಲಿ ಪ್ರವೃತ್ತಿ ಶೂನ್ಯನು. ಆದರೆ ಧರ್ಮಾರ್ಥ ಯುದ್ಧವಾಗುವ ಪಕ್ಷಕ್ಕೆ ಅಗತ್ಯವಾಗಿ ಅವನು ಪ್ರವೃತ್ತಿಸುತ್ತಿದ್ದನು. ಅವನು ಯುದ್ಧ ರಂಗಕ್ಕೆ ಬಂದರೆ ಅಲ್ಲಿ ಅಜೇಯನು. ಏಸುವು ಅಶಿಕ್ಷಿತನು. ಕೃಷ್ಣನು ಸರ್ವಶಾಸ್ತ್ರವೇತ್ತನು. ಇತರ ಗುಣಗಳ ವಿಚಾರದಲ್ಲಿಯೂ ಹೀಗೆಯೇ ಉಭಯರೂ ಶ್ರೇಷ್ಠ ಧಾರ್ಮಿಕರು ಮತ್ತು ಧರ್ಮಜ್ಞರು. ಕೃಷ್ಣನಾದರೋ ಯಥಾರ್ಥ ಆದರ್ಶ ಮನುಷ್ಯನು. ಕ್ರಿಶ್ಚಿಯನ್ ಐಡಿಯಲ್ಲಿಗಿಂತ ಹಿಂದೂ ಐಡಿಯಲ್ಲೇ ಶ್ರೇಷ್ಠ.

ಇಂತಹ ಸಕಲ ಗುಣಸಂಪನ್ನನಾದ ಮನುಷ್ಯನು ಆವುದಾದರೊಂದು ಕಾರ್ಯವಿಶೇಷದಲ್ಲಿ ಜೀವನವನ್ನು ಸಮರ್ಪಿಸಲಾರನು. ಹೀಗೆ ಮಾಡಲು ಇತರ ಕಾರ್ಯಗಳು ಕೈಬಿಟ್ಟುಹೋಗುವುವು. ಅಥವಾ ಮಾಡಿದರೂ ಅಸಾಮಂಜಸ್ಯವಾಗುವುದು. ಜನಾಂಗದಲ್ಲಿ ಚರಿತ್ರಾಂತರಗಳಿಂದಲೂ ಅವಸ್ಥಾಂತರಗಳಿಂದಲೂ ಶಿಕ್ಷಾಂತರಗಳಿಂದಲೂ ಬೇರೆ ಬೇರೆ ಕಾರ್ಯಗಳಿಗೆ ಬೇರೆ ಬೇರೆ ಸಾಧನಗಳೂ, ಅಧಿಕಾರಗಳೂ ಉಂಟಾಗುವುವು. ಆದರ್ಶ ಪುರುಷನು ಸಮಸ್ತ ಶ್ರೇಣಿಗಳಿಗೂ ಆದರ್ಶನಾಗುವುದು ಉಚಿತ. ಈ ಕಾರಣಗಳಿಂದ ಶಾಕ್ಯಸಿಂಹ, ಏಸು, ಚೈತನ್ಯ ಇವರಂತೆ ಶ್ರೀ ಕೃಷ್ಣನು ಸಂನ್ಯಾಸಗ್ರಹಣಪೂರ್ವಕವಾದ ಧರ್ಮಪ್ರಚಾರದ ಉದ್ಯೋಗವನ್ನು ಅವಲಂಬಿಸುವುದು ಸಂಭವವಲ್ಲ. ಕೃಷ್ಣನು ಸಂಸಾರಿಯು, ಗೃಹಸ್ಥನು, ರಾಜನೀತಿಜ್ಞನು, ಯೋದ್ಧನು, ದಂಡಪ್ರಣೇತನು, ತಪಸ್ವಿಯು ಮತ್ತು ಧರ್ಮಪ್ರಚಾರಕನು. ಇವನು ಸಂಸಾರಿಗಳಿಗೂ, ಗೃಹಿಗಳಿಗೂ, ರಾಜರುಗಳಿಗೂ, ರಾಜಪುರುಷರುಗಳಿಗೂ, ಯೋದ್ಧರಿಗೂ, ತಪಸ್ವಿಗಳಿಗೂ ಧರ್ಮಪುರುಷರಿಗೂ ಒಂದೇ ಆಧಾರದಲ್ಲಿ ಸರ್ವಾಂಗೀಣವಾದ ಮನುಷ್ಯತ್ವಕ್ಕೆ ಆದರ್ಶರೂಪನು. ಜರಾಸಂಧನಂಥವರ ವಧೆ ಆದರ್ಶ ರಾಜಪುರುಷ ಮತ್ತು ದಂಡಪ್ರಣೇತರಿಂದ ಅವಶ್ಯ ನಡೆಯಬೇಕಾದ

ಕಾರ್ಯ. ಇದೇ ಹಿಂದೂ ಐಡಿಯಲ್‌ನ ಅಸಂಪೂರ್ಣ ಸ್ವರೂಪವಾದವು, ಬೌದ್ಧಧರ್ಮ ಅಥವಾ ಕ್ರೈಸ್ತಧರ್ಮ. ಈ ಧರ್ಮಗಳ ಅಸಂಪೂರ್ಣವಾದ ಆದರ್ಶಪುರುಷರನ್ನು ಆದರ್ಶ ಸ್ಥಾನದಲ್ಲಿ ಕುಳ್ಳಿರಿಸಿ ಸಂಪೂರ್ಣವಾದ ಹಿಂದೂ ಧರ್ಮದ ಆದರ್ಶ ಪುರುಷನನ್ನು ತಿಳಿಯಲಾರದವರಾಗಿದ್ದೇವೆ.

ಮತ್ತು ಇದರಲ್ಲಿ ಅವಶ್ಯವಾಗಿ ತಿಳಿದುಕೊಳ್ಳತಕ್ಕ ವಿಸ್ಮಯಕರವಾದ ವಿಷಯವೊಂದುಂಟು. ಕ್ರಿಶ್ಚಿಯನ್ ಧರ್ಮಾವಲಂಬನವುಳ್ಳ ಯೂರೋಪು ಎಲ್ಲಿ! ಹಿಂದೂ ಧರ್ಮಾವಲಂಬನವುಳ್ಳ ಭಾರತವರ್ಷವೆಲ್ಲಿ! ಆದರ್ಶಗಳ ಫಲವು ಇವೆರಡರಲ್ಲೂ ವಿಪರೀತವಾರುವುದು. * ಯೂರೋಪು ಈಗ ಐಹಿಕ ಸುಖಾಸಕ್ತ ಸಶಸ್ತ್ರಯೋದ್ಧೃವರ್ಗದ ವಿಸ್ತಾರವಾದ ಬಿಡಾರ ಮಾತ್ರ. ಹಿಂದೂ ಧರ್ಮದ ಆದರ್ಶಪುರುಷನು ಸರ್ವಕರ್ಮ ಕರ್ತೃವು. ಈಗಿನ ಕಾಲದ ಹಿಂದುವೋ ಸರ್ವಕರ್ಮಗಳಲ್ಲಿಯೂ ಅಕರ್ಮಣ್ಯನು. ಹೀಗೆ ಫಲ ವೈಪರೀತ್ಯವುಂಟಾಗಲು ಕಾರಣವೇನು? ಇದಕ್ಕೆ ಉತ್ತರ ಸಹಜವಾಗಿಯೇ ಇದೆ. ಉಭಯ ದೇಶಗಳಲ್ಲಿಯೂ ಮನುಷ್ಯರ ಮನಸ್ಸುಗಳಿಂದ ಈ ಪ್ರಾಚೀನ ಆದರ್ಶಗಳು ಅಳಿಸಿಹೋಗಿವೆ. ಈ ಎರಡು ದೇಶಗಳಲ್ಲಿಯೂ ಒಂದು ಕಾಲದಲ್ಲಿ ಈ ಆದರ್ಶಗಳು ಪ್ರಬಲವಾಗಿದ್ದುವು. ಪ್ರಾಚೀನ ಕ್ರಿಶ್ಚಿಯನ್ನರ ಧರ್ಮಪರಾಯಣತೆಯೂ ಸಹಿಷ್ಣುತೆಯೂ, ಪ್ರಾಚೀನ ಹಿಂದೂ ರಾಜನ್ಯರುಗಳ ಸರ್ವಗುಣ ಸಂಪನ್ನತೆಯೂ ಇದಕ್ಕೆ ಪ್ರಮಾಣ. ಎಂದು ಈ ಆದರ್ಶ ಹಿಂದೂಗಳ ಮನಸ್ಸಿನಿಂದ ಬೇರ್ಪಟ್ಟಿತೋ ಅಂದೇ ಕೃಷ್ಣ ಚರಿತ್ರೆಯನ್ನು ಕೆಳಕ್ಕಿಳಿಸಿಬಿಟ್ಟೆವು. ಅಂದಿನಿಂಲೇ ನಮ್ಮ ಸಾಮಾಜಿಕ ಅವನತಿ ತಲೆಹಾಕಿತು. ಜಯದೇವ ಗೋಸ್ವಾಮಿಯ ಕೃಷ್ಣನ (ಗೀತಗೋವಿಂದದ ಕೃಷ್ಣನ) ಅನುಕರಣೆಯಲ್ಲಿ ಎಲ್ಲರೂ ಗಜಬಜಿಸುತ್ತಿರಲು ಮಹಾಭಾರತದ ಕೃಷ್ಣನು ಯಾರ ಸ್ಮರಣೆಗೆ ಬಂದಾನು?

* ಕ್ರೈಸ್ತ ಆದರ್ಶ ಪುರುಷನು ವಿನೀತ, ಹಸುಳೆಯಂಥವನು, ನಿರ್ವಿರೋಧಿ, ಸಂನ್ಯಾಸಿ. ಈಗಿನ ಕ್ರೈಸ್ತರೋ ಇದಕ್ಕೆ ಶುದ್ಧ ವಿಪರೀತ.

ಈಗ ಈ ಆದರ್ಶಪುರುಷನನ್ನು ಮತ್ತೊಮ್ಮೆ ಜಾತೀಯ (ರಾಷ್ಟ್ರೀಯ) ಹೃದಯದಲ್ಲಿ ಎಚ್ಚರಿಸಬೇಕಾಗಿದೆ. ಈ ಕೃಷ್ಣ ಚರಿತ್ರೆಯ ವ್ಯಾಖ್ಯೆಯು ಈ ಕಾರ್ಯದಲ್ಲಿ ಕೊಂಚ ಅನುಕೂಲಿಸಬಹುದೆಂದು ನಂಬಿರುವೆನು.

ಜರಾಸಂಧ ವಧೆಯ ವ್ಯಾಖ್ಯೆಯಲ್ಲಿ ಇವನ್ನೆಲ್ಲ ಹೇಳಿರುವುದರ ಪ್ರಾಮುಖ್ಯ ಆವಶ್ಯಕತೆಯೇನೂ ಇರಲಿಲ್ಲವಾದರೂ ಪ್ರಸಂಗ ಕ್ರಮದಲ್ಲಿ ಪ್ರಸ್ತಾಪಿಸಿದುದಾಯಿತು. ಇದನ್ನು ಇಲ್ಲಿ ಪ್ರಸ್ತಾಪಿಸದೆ ಬಿಟ್ಟಿದ್ದರೂ ಇನ್ನೊಂದೆಡೆಯಲ್ಲಾದರೂ ಪ್ರಸ್ತಾಪಿಸಲೇ ಬೇಕಾಗುತ್ತಿತ್ತು ಮೊದಲೇ ಹೇಳಿದುದರಿಂದ ಲೇಖಕನ ಮತ್ತು ಪಾಠಕರ ಹಾದಿಯು ಸುಪಥವಾಯಿತು.

ಅಷ್ಟಮ ಪರಿಚ್ಛೇದ

ಭೀಮ ಜರಾಸಂಧರ ಯುದ್ಧ

ನಾವು ಇಷ್ಟರವರೆಗೂ ಕೃಷ್ಣ ಚರಿತ್ರೆಯನ್ನು ಸಮಾಲೋಚಿಸಿ ನೋಡಲು ಮಹಾಭಾರತದಲ್ಲಿ ಕೃಷ್ಣನು ವಿಷ್ಣುವೆಂದೆಲ್ಲೂ ಪರಿಚಿತನಾಗಿಲ್ಲ. ವಿಷ್ಣುವೆಂದು ಅವನನ್ನು ಯಾರಾದರೂ ಸಂಬೋಧಿಸಿದ್ದಾಗಲೀ ಸಂಭಾಷಿಸಿದ್ದಾಗಲಿ ಕಂಡುಬಂದಿಲ್ಲ. ಮನುಷ್ಯಾತಿರಿಕ್ತವಾದ ಶಕ್ತಿಯಿಂದಾವ ಕಾರ್ಯವನ್ನೂ ಅವನು ಮಾಡಿದುದು ಕಂಡುಬಂದಿಲ್ಲ. ಅವನು ವಿಷ್ಣುವಿನ ಅವತಾರವಾಗಲಿ ಆಗದೇ ಇರಲಿ, ಕೃಷ್ಣ ಚರಿತ್ರೆಯ ಸ್ಥೂಲಮರ್ಮವು ಮನುಷ್ಯತ್ವವೇ ಹೊರತು ದೇವತ್ವವಲ್ಲ. ಇದನ್ನು ನಾವು ಪುನಃ ಪುನಃ ತಿಳಿಸಿರುವೆವು. ಇನ್ನು ಮುಂದಕ್ಕೆ ಮಹಾಭಾರತದ ಅನೇಕ ಕಡೆಗಳಲ್ಲಿ ಅವನನ್ನು ವಿಷ್ಣುವೆಂದು ಸಂಬೋಧಿಸಿರುವುದೂ ಮತ್ತು ಪರಿಚಿತನಾಗಿರುವುದೂ ಕಂಡುಬರುವುದು. ಅನೇಕರು ಅವನನ್ನು ವಿಷ್ಣುವೆಂದು ಭಾವಿಸಿ ಆರಾಧಿಸುತ್ತಿರುವುದನ್ನು ನೋಡುವೆವು. ಮತ್ತು ಒಂದೊಂದು ಸಲ ಲೋಕಾತೀತವಾದ ವೈಷ್ಣವೀಶಕ್ತಿಯಿಂದ ಅವನು ಕಾರ್ಯಗಳನ್ನು ಮಾಡಿರುವುದನ್ನು ನೋಡುವೆವು ಈ ಪರಿಯಂತರವೂ ಇವಾವುವನ್ನೂ ನೋಡಿಲ್ಲವಾದರೂ ಇನ್ನು ಮುಂದೆ ಇಲ್ಲಿಯೇ ನೋಡುವೆವು. ಇವೆರಡೂ ಪರಸ್ಪರ ವಿರೋಧಭಾವಗಳಲ್ಲವೆ ?

ಈ ಭಿನ್ನ ಭಾವಗಳು ಪರಸ್ಪರ ವಿರೋಧಗಳಲ್ಲವೆಂದು ಹೇಳುವುದಾದರೆ ದೈವಶಕ್ತಿಯು ಅಥವಾ ದೇವತ್ವದ ವಿಕಾಸವು ಯಾವ ಪ್ರಯೋಜನಕ್ಕೂ ಬಾರದು. ಕಾರ್ಯಗಳಲ್ಲಿಯೂ ಇತಿಹಾಸಗಳಲ್ಲಿಯೂ ಕೇವಲ ಮನುಷ್ಯ ಭಾವವೇ ಪ್ರಕಟಿಸಲ್ಪಟ್ಟಿರುವುದು. ಮತ್ತು ಅಲ್ಲಿ ಇವುಗಳಿಂದ ಪ್ರಯೋಜನ ವಿರಲು ದೈವಭಾವಕ್ಕೂ ಪ್ರಯೋಜನವುಂಟು ಎನ್ನುವುದಾದರೆ ಉತ್ತರವು ಸಾರ್ಥಕವಾಗಲಿಲ್ಲ. ದೈವಭಾವವು ಅನೇಕ ವೇಳೆಗಳಲ್ಲಿ ನಿಷ್ಪ್ರಯೋಜನ ವಾಗಿಯೇ ಪ್ರಕಾಶಗೊಂಡಿರುವುದು ಕಂಡುಬರುವುದು. ಈ ಜರಾಸಂಧವಧ ಸಂಬಂಧವಾಗಿಯೇ ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡ ಬಹುದು.

ಜರಾಸಂಧ ವಧೆಯಾದ ಬಳಿಕ ಕೃಷ್ಣನೂ ಭೀಮಾರ್ಜುನರೂ ಜರಾಸಂಧನ ರಥವನ್ನು ಹತ್ತಿ ಹೊರಹೊರಟರು. ದೇವನಿರ್ಮಿತ ರಥ, ಅದರಲ್ಲಿ ಯಾವುದಕ್ಕೂ, ಅಭಾವವಿಲ್ಲ. ಆದರೂ ಹಠಾತ್ತಾಗಿ ಕೃಷ್ಣನು ಗರುಡನನ್ನು ಸ್ಮರಿಸಿದ ಮಾತ್ರದಿಂದಲೇ ಅವನು ಬಂದು ರಥದ ಪತಾಕೆಯಲ್ಲಿ ಕುಳಿತನು. ಗರುಡನು ಬಂದು ಮತ್ತಾವ ಕಾರ್ಯವನ್ನೂ ಮಾಡಿಲ್ಲ. ಇವನಿಂದಾವ ಪ್ರಯೋಜನವೂ ಉಂಟಾಗಿಲ್ಲ. ನಡುನಡುವೆ ಇವನಿಂದ ಕೃಷ್ಣನ ವಿಷ್ಣುತ್ವ ಮಾತ್ರ ಸೂಚಿತವಾಗಿದೆ. ಜರಾಸಂಧನನ್ನು ಕೊಲ್ಲು ವಾಗ ದೈವಶಕ್ತಿಯ ಪ್ರಯೋಜನವೇನೂ ಬೇಕಾಗದೆ ಇದ್ದರೂ ರಥವನ್ನು ಹತ್ತುವಾಗ ಮಾತ್ರ ಬೇಕಾಯಿತು.

ಎರಡನೆಯ ಉದಾಹರಣೆ—ಯುದ್ಧಕ್ಕೆ ಮುಂಚೆ ಇಂಥಾ ಇನ್ನೊಂದು ಮಾತುಂಟು. ಜರಾಸಂಧನು ಯುದ್ಧವನ್ನು ಮಾಡುವುದಕ್ಕೆ ಸ್ಥಿರಸಂಕಲ್ಪ ನಾಗಲು, ಕೃಷ್ಣನು—"ಎಲೈ ರಾಜನೇ, ನಾವು ಮೂವರಲ್ಲಿ ನೀನು ಯಾರೊಡನೆ ಯುದ್ಧಮಾಡಲು ಇಚ್ಛಿಸುವೆ. ನಮ್ಮೆಲ್ಲಾರು ಯುದ್ಧಕ್ಕೆ ಸಿದ್ಧರಾಗಿ ನಿಲ್ಲೋಣ" ಎಂದು ಕೇಳಲು, ಜರಾಸಂಧನು ಭೀಮನೊಡನೆ ಯುದ್ಧಮಾಡಲೊಡಂಬಟ್ಟನು. ಇದಕ್ಕೆ ಮುಂಚೆ ಜರಾಸಂಧನು ಯಾದ ವರಿಗೆ ಅವಧ್ಯನೆಂದು ನೆನೆದು ಬ್ರಹ್ಮನ ಆದೇಶಾನುಸಾರವಾಗಿ ಕೃಷ್ಣನು ತಾನಾಗಿಯೇ ಅವನನ್ನು ಸಂಹರಿಸಲು ಪ್ರವೃತ್ತನಾಗಲಿಲ್ಲ.

ಬ್ರಹ್ಮನ ಆದೇಶವೇನೋ ಅದು ಮಹಾಭಾರತದಲ್ಲೆಲ್ಲೂ ಕಾಣಬರಲಿಲ್ಲ. ಪರವರ್ತಿ ಗ್ರಂಥಗಳಲ್ಲಿ ಮಾತ್ರ ಇದೆ. ಈಗ ಪಾಠಕರಿಗೆ ಮಹಾಭಾರತದ ಮೂಲದಮೇಲೆ ಇವೆಲ್ಲವನ್ನೂ ಯಾರೋ ಬೆರಸಿರಬೇಕೆಂದು ತೋರು ವುದಿಲ್ಲವೆ ? ಇವರ ಉದ್ದೇಶವೆಲ್ಲವೂ ಕೃಷ್ಣನ ವಿಷ್ಣುತ್ವವನ್ನು ಅಲ್ಲಲ್ಲೇ ಎಚ್ಚರಿಸುವುದಲ್ಲವೆ ! ಮೊದಲನೆಯ ಸ್ತರದ ಮೂಲದಲ್ಲಿ ಕೃಷ್ಣನಿಗೂ ವಿಷ್ಣುವಿಗೂ ಎಂತಹ ಸಂಬಂಧವೆಂಬುದನ್ನು ಸ್ಪಷ್ಟವಾಗಿ ಸೂಚಿಸಿಲ್ಲ. ಏಕೆಂದರೆ—ಕೃಷ್ಣನ ಚರಿತ್ರೆ ಮನುಷ್ಯ ಚರಿತ್ರೆ. ದೇವ ಚರಿತ್ರೆಯಲ್ಲಿ ಕೃಷ್ಣೋಪಾಸಕನಾದ ದ್ವಿತೀಯ ಸ್ತರದ ಕವಿಯ ಕೈ ಈ ಮೂಲದ ಮೇಲೆ ಬೀಳುವಾಗ ಇದಷ್ಟೂ ತಪ್ಪೆಂದು ಅವನಿಗೆ ತೋರಿರಬೇಕು. ಆಮೇಲೆ ಬರೆದ ಕವಿಗಳ ಕಲ್ಪನೆ ಈ ಅಭಾವವನ್ನು ಪೂರ್ಣಮಾಡಿರುವುದು. ಹೀಗೆ ಬಂಧ ವಿಮುಕ್ತರಾದ ಕ್ಷತ್ರಿಯ ರಾಜರುಗಳು ಕೃಷ್ಣನು ತಮ್ಮನ್ನು ಸಂರಕ್ಷಿಸಿ ದುದಕ್ಕೋಸ್ಕರ ಧನ್ಯವಾದವನ್ನು ಹೇಳತೊಡಗಿರುವರು. ಇಲ್ಲಿ ಇನ್ನಾವ ವಿಷಯವನ್ನೂ ಹೇಳಲಿಲ್ಲ. ಅವರು ಥಟ್ಟನೆ ಕೃಷ್ಣನನ್ನು ವಿಷ್ಣುವೆಂದು ಸಂಬೋಧಿಸಿರುವರು. ಇದಕ್ಕೆ ಮುಂಚೆ ಇವನನ್ನು ವಿಷ್ಣುವೆಂದಾಗಲಿ, ಅಥವಾ ಆ ಅರ್ಥ ಬರುವ ಬೇರೆ ಮಾತಿನಿಂದಾಗಲಿ ಕರೆಯುತ್ತಿದ್ದುದು ಕಂಡುಬರುವುದಿಲ್ಲ. ಇದಕ್ಕೆ ಮುಂಚೆ ಕೃಷ್ಣನನ್ನು ಈ ತೆರದ ಹೆಸರಿನಿಂದ ಕರೆಯುತ್ತಿದ್ದ ಪಕ್ಷದಲ್ಲಿ ಇದರಿಂದ ಅಸಂಗತವಾಗಲಿ ಅನೈಸರ್ಗಿಕವಾಗಲಿ ಇರುತ್ತಿರಲಿಲ್ಲ. ಜನಗಳೆಲ್ಲರೂ ಹೀಗೆ ನಂಬಿರುವರೆಂತಲೇ ಹೀಗೆ ಸಂಬೋಧಿಸ ಲ್ಪಟ್ಟಿರುವನೆಂದು ತಿಳಿಯಬಹುದಾಗಿತ್ತು. ಅಲ್ಲದೆ ಈ ಸಮಯದಲ್ಲಿ ಕೃಷ್ಣನು ಅಲೌಕಿಕವಾದ ಯಾವ ಕೆಲಸವನ್ನು ಮಾಡಿದ್ದಾಗಿ,—ಅದು ದೇವರಿಂದಲ್ಲದೆ ಮತ್ತಾರಿಂದಲೂ ಸಾಧ್ಯವಲ್ಲದ್ದಾಗಿ—ಇದ್ದ ಪಕ್ಷದಲ್ಲಿ ಹಠಾತ್ತಾಗಿ ಇವನನ್ನು ವಿಷ್ಣುವೆಂದು ಕರೆದುದಕ್ಕೆ ಸಾರ್ಥಕವಿರುತ್ತಿತ್ತು. ಆದರೆ ಅಂಥ ಕೆಲಸವಾವುದನ್ನೂ ಇವನು ಮಾಡಿರಲಿಲ್ಲ. ಅಲ್ಲದೆ ಜರಾಸಂಧ ನನ್ನು ಇವನು ಕೊಂದೂ ಇರಲಿಲ್ಲ. ಭೀಮನು ಅವನನ್ನು ಕೊಂದಿದ್ದನು. ಈ ಕಾರ್ಯದಲ್ಲಿ ಪ್ರವರ್ತಿಸಿದವನು ಕೃಷ್ಣನೇ ಹೌದಾದರೂ ಕಾರಾಗೃಹ ದಲ್ಲಿದ್ದ ರಾಜರು ಅದಾವುದನ್ನೂ ಅರಿಯರು. ಆದುದರಿಂದ ಕೃಷ್ಣನ ಮೇಲೆ ಅಕಸ್ಮಾತ್ತಾಗಿ ರಾಜನ್ಯರುಗಳಿಂದ ವಿಷ್ಣುತ್ವವು ಆರೋಪಿತವಾಗು

ವುದೆಂದಿಗೂ ಮೌಲಿಕವಾಗಲಿ ಐತಿಹಾಸಿಕವಾಗಲಿ ಆಗಲಾರದು. ಗರುಡ ಸ್ಮರಣೆ, ಬ್ರಹ್ಮನ ಆದೇಶ ಸ್ಮರಣೆ ಇವುಗಳ ಸಂಗಡ ವಿಷ್ಣುತ್ವದ ಆರೋಪಣೆ ಸಂಗತವಾಗಿರುವುದೇ ಹೊರತು ಜರಾಸಂಧ ವಧೆಯು ಮತ್ತಾವ ಅಂಶದೊಡನೆಯೂ ಸಂಗತವಾಗಿ ಕಾಣುವುದಿಲ್ಲ. ಇವೆಲ್ಲವೂ ಒಂದು ತೆರದ ಕೈಚಮತ್ಕಾರ, ಇನ್ನು ಕೆಲವು ಇನ್ನೊಬ್ಬನ ಕೈಚಮತ್ಕಾರ. ಈ ಅಂಶ ಇಷ್ಟರೊಳಗೇ ಪಾಠಕರ ಹೃದಯಂಗಮವಾಗಿರುವುದೆಂದು ನಂಬಿರುವೆನು.

ಹಾಗೆ ಅಲ್ಲವೆಂದು ಹೇಳುವವರು ಈ ಕೃಷ್ಣ ಚರಿತ್ರೆಯ ಸಮಾಲೋಚನೆಯನ್ನು ಅನುಸರಿಸುವುದರಿಂದಾವ ಫಲವನ್ನೂ ಪಡೆಯಲಾರರು. ಏಕೆಂದರೆ ಈ ವಿಷಯಗಳಲ್ಲಿ ಬೇರೆ ರೀತಿಯ ಪ್ರಮಾಣಗಳನ್ನು ಸಂಗ್ರಹಿಸುವುದು ಸಾಧ್ಯವಲ್ಲ. ಜರಾಸಂಧನ ವಧೆಯಲ್ಲಿ ಕೃಷ್ಣನ ವಿಷ್ಣುತ್ವದ ಸೂಚನೆ ಈಚಿನ ಕವಿಗಳ ಕೈವಾಡವೆಂದು ಒಪ್ಪಿಕೊಳ್ಳದವರನ್ನು ಕೇಳುವುದೇನೆಂದರೆ, ಜರಾಸಂಧನ ವಧೆಯ ಮಧ್ಯದಲ್ಲಿ ಕೃಷ್ಣನ ವಿಷ್ಣುತ್ವವು ಹೇಗೆ ಪರವರ್ತಿಗಳಾದ ಕವಿಗಳಿಂದ ಬರೆಯಲ್ಪಟ್ಟು ಬೆರಸಿಡಲ್ಪಟ್ಟಿತೋ ಹಾಗೆಯೇ ಕೃಷ್ಣನ ಕಪಟವೇಷ ಮತ್ತು ಆಚರಣೆಯ ವಿಷಯವಾಗಿ ಜರಾಸಂಧವಧ ಪರ್ವಾಧ್ಯಾಯದಲ್ಲಿ ಸಿಗುವ ಕೆಲವು ಮಾತುಗಳೂ ಹೀಗೆಯೇ ಬೆರಸಿಡಲ್ಪಟ್ಟಿರಬೇಕೆಂದೇಕೆ ಬಿಟ್ಟುಬಿಡುಬಾರದು ? ಇವೆರಡೂ ಒಂದೇ ಪ್ರಮಾಣದ ಮೇಲೆ ನಿಂತಿರುವುವು.

ವಸ್ತುತಃ ಮೇಲೆ ಹೇಳಿದ ಎರಡು ವಿಷಯಗಳನ್ನೂ ಒಟ್ಟುಗೂಡಿಸಿ ನೋಡುವಲ್ಲಿ ಈ ಜರಾಸಂಧವಧ ಪರ್ವಾಧ್ಯಾಯದಲ್ಲಿ ಈಚಿನ ಕವಿಯ ವಿಲಕ್ಷಣ ಕೈವಾಡವು ವಿಶೇಷವಾಗಿರುವುದೆಂತಲೂ, ಈ ಸಮಸ್ತ ಸಂಗತಿಗಳೂ ಅವರ ಚಾತುರ್ಯವೆಂಬುದೂ ಚೆನ್ನಾಗಿ ತಿಳಿಯಬರುವುದು. ಈ ಎರಡು ಕವಿಗಳ ಕೈವಾಡಕ್ಕೆ ಪ್ರಮಾಣವಾಗಿ ಇನ್ನೊಂದು ಉದಾಹರಣೆಯನ್ನು ಕೊಡುವೆವು.

ಜರಾಸಂಧನ ಪೂರ್ವ ವೃತ್ತಾಂತವನ್ನು ಕೃಷ್ಣನು ಯುಧಿಷ್ಠಿರನಿಗೆ ವಿವರಿಸಿದ್ದನ್ನು ಮೊದಲೇ ತಿಳುಹಿಸಿರುವೆನು. ಅದರೊಡನೆಯೇ ಕೃಷ್ಣನ ಮೇಲೆ ಜರಾಸಂಧನಿಗೆ ಕಂಸವಧೆಯಿಂದ ಉಂಟಾದ ವಿರೋಧವನ್ನು

ತಿಳುಹಿಸಿರುವೆನು. ಅಲ್ಲಿಂದ ಕೊಂಚವನ್ನು ಎತ್ತಿರುವೆನು. ಆದಾದಮೇಲೆ ಮಹಾಭಾರತಕಾರನು ಹೇಳುವುದನ್ನು ಕೇಳಿ:—

"ವೈಶಂಪಾಯನ ಮುನಿಯು ಇಂತೆಂದನು—ಬೃಹದ್ರಥರಾಯನು ತನ್ನ ಇಬ್ಬರು ರಾಣಿಯರೊಡನೆ ತಪೋವನಕ್ಕೆ ಹೋಗಿ ಬಹಳ ದಿವಸ ತಪಸ್ಸನ್ನು ಮಾಡಿ ಸ್ವರ್ಗಕ್ಕೆ ಹೋದನು. ಅವರು ಜರಾಸಂಧನನ್ನೂ, ಚಂಡಕೌಶಿಕನಿಂದ ಹೇಳಲ್ಪಟ್ಟ ಹಲವು ವರಗಳನ್ನೂ ಪಡೆದುಕೊಂಡು ನಿಷ್ಕಂಟಕವಾಗಿ ರಾಜ್ಯವನ್ನು ಪರಿಪಾಲಿಸತೊಡಗಿದರು. ಈ ಸಮಯದಲ್ಲಿ ಭಗವಾನ್ ವಾಸುದೇವನು ಕಂಸ ನರಪತಿಯನ್ನು ಕೊಂದನು. ಇದರಿಂದ ಕೃಷ್ಣನೊಡನೆ ಜರಾಸಂಧನಿಗೆ ಘೋರತರವಾದ ಶತ್ರುತ್ವವುಂಟಾಯಿತು."

ಇದೆಲ್ಲವನ್ನೂ ಕೃಷ್ಣನೇ ಹೇಳಿರುವನು. ಇದಕ್ಕಿಂತಲೂ ವಿಸ್ತಾರವಾಗಿಯೇ ತಿಳುಹಿಸಿರುವನು. ಮತ್ತೆ ಈ ಮಾತೇಕೆ? ಪ್ರಯೋಜನವುಂಟು. ಮೂಲ ಮಹಾಭಾರತವನ್ನು ಬರೆದವನಿಗೆ ಅದ್ಭುತರಸದಲ್ಲಿ ರುಚಿ ಕಡಮೆ. ಇದುದರಿಂದ ಅವನು ಕೃಷ್ಣನ ಅಲೌಕಿಕವಾದ ಘಟನೆ ಯಾವುದನ್ನೂ ಹೇಳಲಿಲ್ಲ. ಈ ಭಾವವನ್ನು ಈಗ ಪೂರ್ತಿಮಾಡಲಾಗಿದೆ. ವೈಶಂಪಾಯನನು ಹೇಳುತ್ತಲಿದ್ದಾನೆ—

"ಮಹಾಬಲ ಪರಾಕ್ರಮಶಾಲಿಯಾದ ಜರಾಸಂಧನು ಗಿರಿಶ್ರೇಣಿಯ ಮಧ್ಯದಲ್ಲಿದ್ದುಕೊಂಡು ಕೃಷ್ಣನನ್ನು ಕೊಲ್ಲುವುದಕ್ಕಾಗಿ ಒಂದು ದೊಡ್ಡ ಗದೆಯನ್ನು ತೊಂಭತ್ತೊಂಭತ್ತುಸಾರಿ ಗಿರಗಿರನೆ ತಿರುಗಿಸಿ ಬಿಸುಡಲು, ಈ ಗದೆಯು ಮಥುರೆಯಲ್ಲಿದ್ದ ಅದ್ಭುತಕರ್ಮಠನಾದ ವಾಸುದೇವನಿಗೆ ತೊಂಭತ್ತೊಂಭತ್ತು ಯೋಜನ ಹತ್ತಿರದಲ್ಲಿ ಬಿದ್ದಿತು. ಪುರಜನರು ಕೃಷ್ಣನಿಗೆ ಗದೆ ಬಿದ್ದ ಸಮಾಚಾರವನ್ನು ತಿಳುಹಿಸಿದರು. ಅಂದಿನಿಂದ ಮಥುರೆಯ ಸಮೀಪದಲ್ಲಿ ಆ ಗದೆಯು ಬಿದ್ದ ಸ್ಥಾನವು ಗದಾವಸಾನವೆಂದು ಪ್ರಖ್ಯಾತವಾಯಿತು."

ಇನ್ನೂ ಆವ ಪಾಠಕನಾದರೂ ಈಗಿನ ಜರಾಸಂಧವಧ ಪರ್ವಾಧ್ಯಾಯದಲ್ಲಿರುವ ಸಮಸ್ತ ವಿಷಯವೂ ಮೂಲ ಮಹಾಭಾರತದ್ದು, ಮತ್ತು ಒಬ್ಬನಿಂದಾದುದು ಎಂಬ ನಂಬುಗೆಯಿಂದ ಕೃಷ್ಣನೇ ಮೊದಲಾದವರು ವೇಷವನ್ನು ಬದಲಿಸಿಕೊಂಡು ಬಂದುದೇ ನಿಜವೆನ್ನುವ ಪಕ್ಷಕ್ಕೆ ಅಂಥವರನ್ನು

ಕುರಿತು ನಾವು ಬೇಡಿಕೊಳ್ಳುವುದೇನೆಂದರೆ ಅವರು ಹಿಂದೂಗಳ ಪುರಾಣೇತಿಹಾಸಗಳ ಮಧ್ಯೆ ಐತಿಹಾಸಿಕ ತತ್ತ್ವವನ್ನು ಹುಡುಕುವುದನ್ನು ಬಿಟ್ಟು ಇತರ ಶಾಸ್ತ್ರಾಲೋಚನೆಯಲ್ಲಿ ಪ್ರವೃತ್ತರಾಗುವುದು ಒಳ್ಳೆಯದು. ಇತ್ತಕಡೆ ಅವರಿಗೆ ಯಾವ ಪ್ರಯೋಜನವೂ ಇರದು.

ಈಗ ಜರಾಸಂಧ ವಧೆಯಲ್ಲಿನ ಮಿಕ್ಕ ಮಾತುಗಳನ್ನು ಹೇಳಿ ಈ ಪರ್ವಾಧ್ಯಾಯವನ್ನು ಮುಗಿಸುವೆವು. ಇದಷ್ಟೂ ಸರಳವಾದುದು.

ಜರಾಸಂಧನು ಯುದ್ಧಕ್ಕಾಗಿ ಭೀಮನನ್ನು ಚುನಾಯಿಸಿಕೊಂಡನು. ಆಮೇಲೆ ಜರಾಸಂಧನು "ಯಶಸ್ವಿಗಳಾದ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಸ್ವೀಕರಿಸಿ ಕ್ಷತ್ರಧರ್ಮಾನುಸಾರವಾಗಿ ಕವಚವನ್ನೂ ಕಿರೀಟವನ್ನೂ ಪರಿತ್ಯಾಗಮಾಡಿ ಯುದ್ಧಕ್ಕೆ ಸಿದ್ಧನಾದನು. ಆಗ ಊರಿನ ಸಮಸ್ತ ಬ್ರಾಹ್ಮಣರೂ, ಕ್ಷತ್ರಿಯರೂ, ಶೂದ್ರರೂ, ಹೆಂಗಸರೂ, ಇನ್ನೂ ಇತರ ಜನಗಳೂ ಭೀಮ ಜರಾಸಂಧರ ಕಾಳಗವನ್ನು ನೋಡಲು ಕುತೂಹಲದಿಂದ ಸೇರಿದರು. ಯುದ್ಧಕ್ಷೇತ್ರ ಜನಗಳಿಂದ ತುಂಬಿತ್ತು. ಯುದ್ಧ ಹದಿನಾಲ್ಕು ದಿನಗಳವರೆಗೂ ನಡೆಯಿತು." (ಇದು ನಿಜವಾದರೆ ಮಧ್ಯೆಮಧ್ಯೆ ಅವಕಾಶವನ್ನು ಕೊಟ್ಟು ಯುದ್ಧಮಾಡಿರಬೇಕು.) ಹದಿನಾಲ್ಕನೆಯದಿವಸ ವಾಸುದೇವನು ಜರಾಸಂಧನು ಬಳಲಿರುವುದನ್ನು ಕಂಡು ಭಯಂಕರನಾದ ಭೀಮಸೇನನನ್ನು ಕುರಿತು, "ಎಲೈ ಕೌಂತೇಯನೇ, ಬಳಲಿದ ಶತ್ರುವನ್ನು ಪೀಡಿಸುವುದು ಸರಿಯಲ್ಲ. ಶತ್ರುವು ವಿಶೇಷವಾಗಿ ಬಳಲಿದರೆ ಪ್ರಾಣವನ್ನೇ ಬಿಡಬಹುದು. ಆದುದರಿಂದ ಇವನನ್ನು ನೀನು ಪೀಡಿಸಬಾರದು. ಎಲೈ ಭರತಕುಲಾಗ್ರೇಸರನೇ, ಇವನೊಡನೆ ಮಲ್ಲಯುದ್ಧವನ್ನು ಮಾಡು." (ಅಂದರೆ, ಧರ್ಮತಃ ಶತ್ರುವನ್ನು ವಧೆಮಾಡಬೇಕಾದರೂ ಬಳಲಿಸಬಾರದು.) ಭೀಮನು ಜರಾಸಂಧನನ್ನು ಬಳಲಿಸಿಯೇ ಕೊಂದನು. ಭೀಮನ ಧರ್ಮಜ್ಞಾನ ಕೃಷ್ಣನಿಗೆ ಸಮಾನವಾದುದಾಗಲಾರದು. ಆಗ ಕೃಷ್ಣಾರ್ಜುನಭೀಮರು ಕಾರಾಗೃಹದಲ್ಲಿ ಬಂದಿಗಳಾಗಿದ್ದ ರಾಜರುಗಳನ್ನು ಬಿಡುಗಡೆ ಮಾಡಿದರು. ಇದೇ ಜರಾಸಂಧನನ್ನು ಕೊಲ್ಲುವುದಕ್ಕೆ ಕಾರಣವಾದುದು.

ಆದುದರಿಂದಲೇ ರಾಜರುಗಳನ್ನು ಬಿಡುಗಡೆಮಾಡಿದುದಲ್ಲದೆ ಮತ್ತಿನ್ನೇನನ್ನೂ ಮಾಡದೆ ಅವರು ತಮ್ಮ ದೇಶಕ್ಕೆ ಹಿಂತಿರುಗಿಹೋದರು.

ಅವರು ರಾಜ್ಯಾಕ್ರಮಣಕಾರಿಗಳು (Annexationists) ಆಗಿರಲಿಲ್ಲ. ತಂದೆಯ ತಪ್ಪಿಗಾಗಿ ಮಗನ ರಾಜ್ಯವನ್ನು ಕಳವುಮಾಡರು. ಅವರು ಜರಾಸಂಧನನ್ನು ವಧಿಸಿ ಅವನ ಮಗನಾದ ಸಹದೇವನಿಗೆ ರಾಜ್ಯಪಟ್ಟವನ್ನು ಕಟ್ಟಿದರು. ಸಹದೇವನು ಕೊಂಚ ಕಾಣಿಕೆಯನ್ನು ಕೊಡಲು ಸ್ವೀಕರಿಸಿದರು. ಬಂಧನದಿಂದ ಬಿಡುಗಡೆಯಾದ ರಾಜರು ಕೃಷ್ಣನನ್ನು ಕುರಿತು "ಈಗ ಈ ಭೃತ್ಯರಾದ ನಮ್ಮಗಳಿಗೆ ಅಪ್ಪಣೆಯನ್ನು ಕೊಡಬೇಕೆಂದು ಬೇಡಿದರು." ಕೃಷ್ಣನು ಅವರನ್ನು ಕುರಿತು, "ಯುಧಿಷ್ಠಿರರಾಯನು ರಾಜಸೂಯೆಯನ್ನು ಮಾಡಲುದ್ಯುಗಿಸಿರುವನು. ತಾವು ಸಾಮ್ರಾಜ್ಯಪದವಿಯನ್ನು ಆಕಾಂಕ್ಷಿಸುತ್ತಿರುವ ಆ ಧಾರ್ಮಿಕನಿಗೆ ಸಹಾಯವನ್ನು ಮಾಡಬೇಕೆಂಬುದೇ ನನ್ನ ಪ್ರಾರ್ಥನೆ" ಎಂದು ಹೇಳಿದನು.

ಯುಧಿಷ್ಠಿರನನ್ನು ಕೇಂದ್ರಪದವಿಗೆ ತಂದು ಧರ್ಮರಾಜ್ಯ ಸಂಸ್ಥಾಪನೆಯನ್ನು ಮಾಡುವುದು ಈಗ ಕೃಷ್ಣನ ಜೀವನದ ಉದ್ದೇಶವಾದುದರಿಂದ ಪ್ರತಿಕ್ಷಣದಲ್ಲಿಯೂ ಅದನ್ನು ಸಾಧಿಸುತ್ತಲಿದ್ದಾನೆ.

ಈ ಜರಾಸಂಧ ವಧೆಯ ಸಂದರ್ಭದಲ್ಲಿ ಕೃಷ್ಣ ಚರಿತ್ರೆಯು ವಿಶೇಷ ಮಹಿಮೆಯನ್ನು ಪ್ರಕಾಶಗೊಳಿಸುವುದಾದರೂ ಈಚಿನ ಲೇಖಕರಿಂದ ಇದು ಕಾಂತಿಗುಂದಿದೆ. ಇದಾದಮೇಲೆ ಶಿಶುಪಾಲ ವಧೆಯಲ್ಲಿ ಇನ್ನೂ ಗಡಿಬಿಡಿ.

ನವಮ ಪರಿಚ್ಛೇದ

ಅರ್ಘ್ಯಾಭಿ ಹರಣ

ಯುಧಿಷ್ಠಿರನ ರಾಜಸೂಯೆ ಮೊದಲಾಯಿತು ಹಲವು ನಾಡಿನ ರಾಯರೂ ಋಷಿಗಳೂ ಇತರ ಶ್ರೇಣಿಯ ಜನಗಳೂ ರಾಜಧಾನಿಯನ್ನು ತುಂಬಿದರು. ಈ ದೊಡ್ಡ ಕಜ್ಜವನ್ನು ನಿರ್ವಹಿಸುವುದಕ್ಕಾಗಿ ಪಾಂಡವರು ತಮ್ಮ ಸ್ವಂತ ನೆಂಟರಿಷ್ಟರುಗಳಿಗೆ ಬೇರೆಬೇರೆ ಕಾರ್ಯಗಳನ್ನು ಒಪ್ಪಿಸಿದರು. ದುಶ್ಶಾಸನನು ಮೋತೀಖಾನೆಯ ಸ್ವಾಮಿತ್ವವನ್ನು ವಹಿಸಿದನು. ಸಂಜಯನು ಪರಿಚರ್ಯಕ್ಕೆ ನಿಂತನು. ಕೃಪಾಚಾರ್ಯನು ರತ್ನಗಳನ್ನು ಜೋಪಾನಮಾಡುವುದರಲ್ಲಿಯೂ, ದಕ್ಷಿಣೆಗಳನ್ನು ಹಂಚುವುದರಲ್ಲಿಯೂ

ನಿಂತನು. ದುರ್ಯೋಧನನು ಉಪಾಯನಗಳನ್ನು (ನಜರುಗಳನ್ನು) ಸ್ವೀಕರಿಸುವುದಕ್ಕೆ ಗೊತ್ತಾದನು. ಹೀಗೆ ಎಲ್ಲರಿಗೂ ಕೆಲಸಗಳು ಗೊತ್ತುಮಾಡಲ್ಪಟ್ಟವು. ಶ್ರೀ ಕೃಷ್ಣನು ಯಾವ ಕೆಲಸವನ್ನು ವಹಿಸಿದ್ದನು? ದುಶ್ಶಾಸನಾದಿಗಳ ನಿಯೋಗದೊಡನೆ ಶ್ರೀ ಕೃಷ್ಣನ ಮಾತೂ ಹೇಳಿದೆ. ಅವನು ಬ್ರಾಹ್ಮಣರ ಕಾಲುಗಳನ್ನು ತೊಳೆಯುವುದಕ್ಕೆ ನಿಯೋಗಿಸಲ್ಪಟ್ಟನು.

ಇದು ಅರ್ಥವಾಗುವುದಿಲ್ಲ. ಆಳಿಗೆ ತಕ್ಕುದಾದ ಈ ಕಾರ್ಯಕ್ಕೆ ಶ್ರೀಕೃಷ್ಣನನ್ನು ಹಚ್ಚಲೇಕೆ? ಅಲ್ಲದೆ ಬ್ರಾಹ್ಮಣರ ಪಾದಪ್ರಕ್ಷಾಳನವೇ ಒಂದು ಮಹತ್ಕಾರ್ಯವೋ? ಅವನು ಮಾದರಿ ಮನುಷ್ಯನಾಗಬೇಕಾದರೆ ಅಡಿಗೆಯ ಮತ್ತು ದೇವರಪೂಜೆ ಬ್ರಾಹ್ಮಣರ ಪಾದಪ್ರಕ್ಷಾಳನೆಯನ್ನು ಮಾಡುತ್ತಾ ಅಲೆಯಬೇಕೋ? ಇದು ಹೀಗೆ ಇರುವುದು ನಿಜವಾದರೆ ನಾವು ಕಂಠೋಕ್ತವಾಗಿ ಇವನು ಆದರ್ಶ ಪುರುಷನಲ್ಲವೆಂದು ಹೇಳಬಲ್ಲೆವು.

ಇದನ್ನು ಹಲವು ಬಗೆಯಾಗಿ ಅರ್ಥಮಾಡಬಹುದು. ಬ್ರಾಹ್ಮಣರಿಂದ ಹರಡಲ್ಪಟ್ಟು ಈಗ ರೂಢಿಯಲ್ಲಿರುವ ಅರ್ಥವು ಶ್ರೀ ಕೃಷ್ಣನು ಬ್ರಾಹ್ಮಣರ ಗೌರವವನ್ನು ಹೆಚ್ಚಿಸುವುದಕ್ಕಾಗಿ ಕೆಲಸಗಳೆಲ್ಲವನ್ನೂ ತೊರೆದು ತಾನಾಗಿಯೇ ಇದರಲ್ಲಿ ನಿಂತನು. ಈ ಅರ್ಥವನ್ನು ನಂಬುವುದಕ್ಕಾಗುವುದಿಲ್ಲವೆಂದು ನಮಗೆ ತೋರುವುದು. ಶ್ರೀ ಕೃಷ್ಣನು ಇತರ ಕ್ಷತ್ರಿಯರಂತೆಯೇ ಬ್ರಾಹ್ಮಣರಿಗೂ ಯೋಗ್ಯತಾನುಸಾರ ಸನ್ಮಾನವನ್ನೇನೋ ಮಾಡಿದರೂ ಬ್ರಾಹ್ಮಣರ ಗೌರವವನ್ನು ಹರಡುವುದಕ್ಕಾಗಿ ವಿಶೇಷ ಪ್ರಯತ್ನಪಟ್ಟು ನಡು ಕಟ್ಟಿಕೊಂಡಂತೆ ಎಲ್ಲಿಯೂ ಕಂಡುಬರುವುದಿಲ್ಲ. ಹಲವೆಡೆಗಳಲ್ಲಿ ಇದಕ್ಕೆ ಬದಲಿಗೆ ಎದುರು ದಾರಿಯನ್ನು ಹಿಡಿದದ್ದೂ ಕಂಡುಬರುವುದು. ವನಪರ್ವದಲ್ಲಿನ ದುರ್ವಾಸರ ಆತಿಥ್ಯ ವೃತ್ತಾಂತವು ಮೌಲಿಕ ಮಹಾಭಾರತದಲ್ಲಿನದೆಂದು ವಿವೇಚಿಸುವುದಾದರೆ ಅವನು ಬ್ರಾಹ್ಮಣರನ್ನು ಪಾಂಡವರ ಆಶ್ರಮದಿಂದ ಉಪಾಯಾಂತರವಾಗಿ ಅರ್ಧಚಂದ್ರಪ್ರಯೋಗ ಮಾಡಿ ಹೊರಕ್ಕೆ ಅಟ್ಟಿದ್ದನು. ಅವನು ಅತಿಶಯ ಸಾಮ್ಯವಾದಿ. ಗೀತೆಯಲ್ಲಿ ಹೇಳಿರುವ ಧರ್ಮ ಕೃಷ್ಣನು ಹೇಳಿದ ಧರ್ಮವಾದರೆ

ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥

ಅವನ ಮತದಲ್ಲಿ ಬ್ರಾಹ್ಮಣ, ಆನೆ, ನಾಯಿ, ಚಂಡಾಲ, ಎಲ್ಲರೂ ಸಮಾನರು. ಹೀಗಾದರೆ ಇಂಥವನು ಬ್ರಾಹ್ಮಣರ ಗೌರವವನ್ನು ವೃದ್ಧಿಮಾಡಲಿಕ್ಕಾಗಿ ಇವರ ಪಾದಪ್ರಕ್ಷಾಳನೆಗೆ ನಿಲ್ಲುವುದು ಅಸಂಭವ.

ಮಾದರಿ ಮನುಷ್ಯನಾದ ಕೃಷ್ಣನು ವಿನಯದ ಮೇಲುಪಙ್ಕ್ತಿಯನ್ನು ಹಾಕುವುದಕ್ಕೋಸ್ಕರವೇ ಇಂಥಾ ಆಳಿನ ಕೆಲಸವನ್ನು ವಹಿಸಿದನೆಂದು ಕೆಲವರು ಹೇಳಬಹುದು. ವಯೋವೃದ್ಧರಾದ ಕ್ಷತ್ರಿಯರ ಪಾದ ಪ್ರಕ್ಷಾಳನೆಯನ್ನು ಮಾಡುವುದಕ್ಕೇಕೆ ನಿಯೋಗಿಸಬಾರದು! ಮತ್ತು ಈ ತೆರದ ವಿನಯವನ್ನು ನಾವು ಆದರ್ಶ ವಿನಯವೆಂದು ಹೇಳೆವು. ಇದು ಬರಿಯ ವಿನಯದ ಬಡಾಯಿ.

ಕೃಷ್ಣ ಚರಿತ್ರೆ ಸಮಯೋಪಯೋಗಿಯಾದದ್ದು. ಆಗಿನ ಕಾಲದಲ್ಲಿ ಬ್ರಾಹ್ಮಣರಲ್ಲಿ ಜನರಿಗೆ ಭಕ್ತಿ ವಿಶೇಷವಾಗಿದ್ದುದರಿಂದಲೂ, ಕೃಷ್ಣನು ಧೂರ್ತನಾದುದರಿಂದಲೂ ಅವರನ್ನು ಸಮುದಾಯಿಸುವುದಕ್ಕೋಸ್ಕರ ಹೀಗೆ ಅಲೌಕಿಕವಾದ ಬ್ರಾಹ್ಮಣ ಭಕ್ತಿಯನ್ನು ತೋರಿಸಬೇಕೆಂತ ಇನ್ನು ಕೆಲವರು ಹೇಳಬಹುದು.

ಈ ಬ್ರಾಹ್ಮಣ ಪಾದಪ್ರಕ್ಷಾಳನದ ಶ್ಲೋಕವೇ ಪ್ರಕ್ಷಿಪ್ತವೆಂದು ನನ್ನ ಮತ. ಈ ಶಿಶುಪಾಲ ವಧಪರ್ವಾಧ್ಯಾಯದ ಮುಂದಿನ ನಲವತ್ತು ನಾಲ್ಕನೆಯ ಅಧ್ಯಾಯದಲ್ಲಿ ಕೃಷ್ಣನು ಬ್ರಾಹ್ಮಣರ ಪಾದಪ್ರಕ್ಷಾಳನೆಯನ್ನು ಮಾಡುವುದರಲ್ಲಿ ಇರದೆ ಕ್ಷತ್ರಿಯನಿಗೆ ಯೋಗ್ಯವಾದ ಮತ್ತು ವೀರನಿಗೆ ಉಚಿತವಾದ ಕಾರ್ಯದಲ್ಲಿಯೇ ನಿಯೋಗಿಸಲ್ಪಟ್ಟಿದ್ದನೆಂದು ತಿಳಿಯ ಬರುವುದು. ಅಲ್ಲಿ "ಮಹಾಬಾಹುವಾದ ವಾಸುದೇವನು ಶಂಖ ಚಕ್ರ ಗದೆಗಳನ್ನು ಧರಿಸಿ ಯಜ್ಞವು ಸಾಂಗವಾಗಿ ಮುಗಿಯುವವರೆಗೂ ಅದನ್ನು ಸಂರಕ್ಷಿಸುತ್ತಿದ್ದ"ನೆಂದು ಬರೆದಿದೆ. ಅಂದರೆ, ಇವೆರೆಡೂ ಪ್ರಕ್ಷಿಪ್ತವಾಗಿರಬೇಕು. ನಾವು ಈ ಪರಿಚ್ಛೇದದಲ್ಲಿ ಈ ವಿಷಯವನ್ನು ಎತ್ತಿ ಆಡಲು ಆವಶ್ಯಕತೆಯನ್ನು ಕಾಣೆವು. ಇದೇನೂ ಅಷ್ಟು ಹೆಚ್ಚಿನ ಮಾತಲ್ಲ. ಕೃಷ್ಣ ಚರಿತ್ರೆಯ ಸಂಬಂಧವಾಗಿ ಮಹಾಭಾರತದಲ್ಲಿನ ಉಕ್ತಿಗಳು ಹಲವುವೇಳೆ ಪರಸ್ಪರ ಅಸಂಗತಗಳಾಗಿರುವುವು ಎಂಬುದನ್ನು ತೋರುವುದಕ್ಕೆಂತಲೇ ಇಷ್ಟನ್ನು ಹೇಳಿದೆವು. ಹಲವು ಕೈಗಳ ಕೆಲಸವಾದುದೇ ಇದಕ್ಕೆ ಕಾರಣ.

ಈ ರಾಜಸೂಯ ಸಭಾ ಸಮಾರಂಭದಲ್ಲಿ ಪ್ರಬಲ ಪರಾಕ್ರಮಿಯಾದ ಶಿಶುಪಾಲನೆಂಬ ರಾಜನೊರ್ವನು ಕೃಷ್ಣನಿಂದ ಕೊಲ್ಲಲ್ಪಟ್ಟನು. ಪಾಂಡವ ರೊಡನೆ ಕೂಡಿದ್ದಾಗ ಕೃಷ್ಣನು ಅಸ್ತ್ರವನ್ನು ಹಿಡಿದುದು ಇದು ಒಂದೇ ಸಲ ವೆಂದರೂ ಅನ್ನಬಹುದು. ಖಾಂಡವವನ ದಹನದ ಯುದ್ಧವು ನಾವು ವಿಶೇಷ ಮೌಲಿಕವೆಂದು ತಿಳಿದಿಲ್ಲವೆಂಬುದನ್ನು ಪಾಠಕರು ಮರೆತಿರಲಾರರು.

ಶಿಶುಪಾಲ ವಧ ಪರ್ವಾಧ್ಯಾಯದಲ್ಲಿ ಬಲವಾದ ಒಂದು ಐತಿಹಾಸಿಕ ತತ್ತ್ವ ಇರುವುದು. ವಿಚಾರಿಸಿ ನೋಡುವಲ್ಲಿ ಮಹಾಭಾರತದ ಇನ್ನಾವೆಡೆ ಯಲ್ಲಿಯೂ ಇಂತಹ ತತ್ತ್ವವು ಇರುವುದಿಲ್ಲ. ಜರಾಸಂಧನ ವಧೆಗೆ ಮುಂಚೆ ಕೃಷ್ಣನು ಮೌಲಿಕ ಮಹಾಭಾರತದಲ್ಲಿ ಎಲ್ಲಿಯೂ ದೇವರೆಂದು ಅಥವಾ ಈಶ್ವರಾವತಾರ ಸ್ವರೂಪನೆಂದು ಕರೆಯಲ್ಪಟ್ಟಿರುವುದಾಗಲಿ ಸ್ವೀಕರಿಸಲ್ಪಟ್ಟಿ ರುವುದಾಗಲಿ ಇರುವುದಿಲ್ಲ. ಜರಾಸಂಧನ ವಧೆಯಲ್ಲಿ ಇಂತಹ ಮಾತೇನೋ ಅಸ್ಪಷ್ಟವಾಗಿ ಹುಟ್ಟಿದೆ. ಈ ಶಿಶುಪಾಲ ವಧೆಯಲ್ಲಿಯೇ ಮೊಟ್ಟಮೊದಲು ತನ್ನ ಸಮಕಾಲದವರಿಂದ ಕೃಷ್ಣನು ಜಗದೀಶ್ವರನೆಂದು ಒಪ್ಪಲ್ಪಟ್ಟಿರುತ್ತಾನೆ. ಇಲ್ಲಿ ಆ ಕಾಲದಲ್ಲಿ ಕುರು ವಂಶಕ್ಕೆ ಯಜಮಾನನಾದ ಭೀಷ್ಮನೇ ಈ ಮತ ವನ್ನು ಹರಡಿದವನು.

ಈಗ ಕೃಷ್ಣನು ತನ್ನ ಜೀವಿನಿಯ ಮೊದಲ ಭಾಗದಲ್ಲಿ ಈಶ್ವರಾವತಾರ ನೆಂದು ಸ್ವೀಕೃತನಾಗದಿರಲು ಆವಾಗ ಇವನು ಮೊಟ್ಟ ಮೊದಲು ಈಶ್ವರನೆಂತ ಒಪ್ಪಲ್ಪಟ್ಟನು ಎಂಬುದೇ ಐತಿಹಾಸಿಕ ಅಸಲು ಪ್ರಶ್ನೆ. ಅವನು ಜೀವಂತ ನಾಗಿರುವಾಗಲೇ ಈಶ್ವರನೆಂತ ಹೇಳಿಸಿಕೊಂಡನೆ ? ಶಿಶುಪಾಲ ವಧೆಯಾದ ಮೇಲೆ ಮುಂದೆ ಬರುವ ಮಹಾಭಾರತದ ಅಲ್ಲಲ್ಲಿ ಇವನು ಈಶ್ವರನೆಂತ ಒಪ್ಪಲ್ಪಟ್ಟಿರುತ್ತಾನೆ. ಆದರೆ ಶಿಶುಪಾಲವಧ ಪರ್ವಾಧ್ಯಾಯವು ಮತ್ತು ಮಹಾಭಾರತದ ಅಲ್ಲಲ್ಲಿನ ಅಂಶಗಳು ಪ್ರಕ್ಷಿಪ್ತವಾಗಿರಬಾರದೇಕೆ ? ಈ ಪ್ರಶ್ನೆಗೆ ಉತ್ತರವನ್ನು ಹೇಳಲು ಆವ ಪಕ್ಷವನ್ನವಲಂಬಿಸಬೇಕು ?

ಇದಕ್ಕೆ ಉತ್ತರವನ್ನು ನಾವು ಈಗ ಹೇಳೆವು. ಬರುತ್ತಬರುತ್ತ ಉತ್ತರ ತಾನಾಗಿಯೇ ಪರಿಸ್ಫುಟವಾಗುವುದು. ಮೌಲಿಕ ಮಹಾ ಭಾರತದ ಮೂಲಾಂಶವಾಗಿ ಶಿಶುಪಾಲ ವಧ ಪರ್ವಾಧ್ಯಾಯ ಆಗಿರು ವುದಾದರೆ ಈ ಸಮಯದಲ್ಲಿ ಕೃಷ್ಣನು ಈಶ್ವರನೆಂದು ಪ್ರತಿಷ್ಠಿಸಲ್ಪಟ್ಟನೆಂದು

ವಿವೇಚಿಸಬಹುದು. ಇದಕ್ಕೆ ಸ್ವಪಕ್ಷ ವಿಪಕ್ಷಗಳೆರಡೂ ಇದ್ದವು. ಇವನ ಸ್ವಪಕ್ಷದವರಲ್ಲಿ ಭೀಷ್ಮನು ಮತ್ತು ಪಾಂಡವರೇ ಮುಖಂಡರು. ಇವನ ಎದುರು ಕಕ್ಷಿಯವರಲ್ಲಿ ಶಿಶುಪಾಲನು ಒಬ್ಬ ಮುಖಂಡನಾಗಿದ್ದನು. ಶಿಶುಪಾಲವಧ ವೃತ್ತಾಂತದಲ್ಲಿ ಅಸಲು ಸ್ವಾರಸ್ಯವೇನೆಂದರೆ, ಈ ಸಭಾ ಮಧ್ಯದಲ್ಲಿ ಕೃಷ್ಣನ ಪ್ರಾಧಾನ್ಯವನ್ನು ಸ್ಥಾಪಿಸುವುದಕ್ಕೆ ಭೀಷ್ಮಾದಿಗಳಿಗೆ ಅನುಕೂಲವಾಯಿತು. ಶಿಶುಪಾಲನು ಅವರಿಗೆ ಎದುರುಬಿದ್ದನು. ಇದರಿಂದ ಗಲಭೆಯೆದ್ದಿತು. ಶಿಶುಪಾಲನನ್ನು ಕೃಷ್ಣನು ಕೊಲ್ಲಲು ಗಲಾಟೆ ಸಮಾಧಾನವಾಯಿತು. ಯಜ್ಞಕ್ಕೆ ಇದ್ದ ವಿಘ್ನ ವಿನಷ್ಟವಾಗಲು ತೊಂದರೆಗಳಿಲ್ಲದೆ ಯಜ್ಞ ನಡೆಯಿತು.

ಈ ಮಾತುಗಳಲ್ಲಿ ನಿಶ್ಚಯವಾದ ಐತಿಹಾಸಿಕತೆಯುಂಟೆ, ಇಲ್ಲವೆ ಎಂತ ಗೊತ್ತುಮಾಡುವುದಕ್ಕೆ ಮುಂಚೆ ಈ ಶಿಶುಪಾಲವಧ ಪರ್ವಾಧ್ಯಾಯ ಮೌಲಿಕ ಅಸಲು ಮಹಾಭಾರತದ್ದೇ ? ಅಲ್ಲವೆ ? ಇದಕ್ಕೆ ಉತ್ತರ ಸುಲಭವಲ್ಲ. ಶಿಶುಪಾಲ ವಧೆಯೊಡನೆ ಮಹಾಭಾರತದ ಸ್ಥೂಲ ಘಟನೆಗಳಿಗೆ ವಿಶೇಷ ಸಂಬಂಧವಿದ್ದೇ ಇರುವುದೆಂದು ಹೇಳಲು ಆಗುವುದಿಲ್ಲ. ಹಾಗೆ ಇಲ್ಲದೇ ಹೋದರೂ ಇದು ಪ್ರಕ್ಷಿಪ್ತವೆಂದು ಹೇಳಲೇಬೇಕು ಎಂತಲ್ಲ. ಇದಕ್ಕೆ ಮುಂಚೆ ಹಲವೆಡೆಗಳಲ್ಲಿ ಶಿಶುಪಾಲನೆಂಬ ಪ್ರಬಲ ಪರಾಕ್ರಮಿಯಾದ ರಾಜನೊಬ್ಬನ ವಿಷಯ ಸಿಕ್ಕುವುದೇನೋ ನಿಜವೆ. ಇದಾದ ಮೇಲೆ ಅವನೂ ಇಲ್ಲ. ಈ ಮಧ್ಯದಲ್ಲಿ ಅವನು ಮೃತನಾಗಿದ್ದನು. ಪಾಂಡವರ ಸಭೆಯಲ್ಲಿ ಕೃಷ್ಣನಿಂದ ಅವನ ಸಾವು ಸಂಭವಿಸಿತ್ತು ಎಂಬುದಕ್ಕೆ ವಿರುದ್ಧವಾದ ಮಾತಾವುದೂ ಸಿಕ್ಕುವುದಿಲ್ಲ. ಅನುಕ್ರಮಣಿಕಾಧ್ಯಾಯದಲ್ಲಿಯೂ ಪರ್ವ ಸಂಗ್ರಹಾಧ್ಯಾಯದಲ್ಲೂ ಶಿಶುಪಾಲ ವಧೆಯ ಮಾತು ಉಂಟು.

ರಚನಾಪ್ರಣಾಳಿಯನ್ನು ನೋಡಿದರೂ ಶಿಶುಪಾಲವಧ ಪರ್ವಾಧ್ಯಾಯ ಮೂಲ ಮಹಾಭಾರತದ ಅಂಶವೆಂದೇ ತೋಚುವುದು. ಮೂಲ ಮಹಾಭಾರತದ ಇತರ ಕೆಲವಂಶಗಳಲ್ಲಿನಂತೆಯೇ ನಾಟಕಾಂಶ ಇದರಲ್ಲಿ ವಿಶೇಷವಾಗಿ ಹೆಚ್ಚಿಕೊಂಡಿದೆ. ಆದುದರಿಂದ ಇದನ್ನು ಮೂಲವಲ್ಲವೆಂದು ತ್ಯಜಿಸುವುದಕ್ಕೆ ಆಗದು.

ಅದೇನೋ ಆಗದು; ಆದರೆ ಜರಾಸಂಧವಧ ಪರ್ವಾಧ್ಯಾಯದಲ್ಲಿ ಎಂತು ಎರಡು ಕೈಗಳ ಕಟ್ಟಡಕವು ಕಾಣಬರುವುದೋ, ಅಂತೇ ಇಲ್ಲಿಯೂ ಉಂಟು. ಜರಾಸಂಧವಧೆಗಿಂತಲೂ ಶಿಶುಪಾಲವಧೆಯಲ್ಲಿಯೇ ವಿಚಿತ್ರ ಹೆಚ್ಚಿರುವುದು. ಆದುದರಿಂದ ಶಿಶುಪಾಲವಧೆ ಒಟ್ಟಿನಮೇಲೆ ಮೂಲದಲ್ಲಿನ ದಾದರೂ ಅದರಲ್ಲಿ ಎರಡನೆಯ ಕವಿಯ ಅಥವಾ ಈಚಿನ ಲೇಖಕರ ಕೈವಾಡ ವಿದೆಯೆಂದು ಗೊತ್ತುಮಾಡಬೇಕಾಯಿತು.

ಈಗ ಶಿಶುಪಾಲನ ವಧೆಯ ವೃತ್ತಾಂತವನ್ನು ವಿಸ್ತಾರವಾಗಿ ತಿಳುಹಿಸುವೆವು. ಈಗಿನ ಕಾಲದಲ್ಲಿಯೂ ನಮ್ಮ ದೇಶದಲ್ಲಿ ಒಂದು ಪದ್ಧತಿ ರೂಢಿಯಲ್ಲಿಯೇ ಇರುವುದು. ದೊಡ್ಡವರ ಮನೆಯಲ್ಲಿ ಸಭೆ ಮುಂತಾದುವು ಗಳಾವುದಾದರೂ ಆದರೆ, ಸಭೆಯಲ್ಲಿ ಎಲ್ಲರಿಗಿಂತಲೂ ಮುಖಂಡನಾದವನಿಗೆ ತಾಂಬೂಲವನ್ನು ಮೊದಲು ಒಪ್ಪಿಸುವೆವು. ಇದನ್ನು ಈಗ ಪಾತ್ರನ ಗುಣ ವನ್ನು ಅನುಸರಿಸಿ ಮಾಡುತ್ತಲಿಲ್ಲ. ವಂಶ ಮರ್ಯಾದಾನುಸಾರವಾಗಿ ಕೊಡಲ್ಪಡುತ್ತಲಿದೆ. ಕುಲೀನರ ಮನೆಯಲ್ಲಿ ಗೋಷ್ಠೀಪತಿಗೆ ಅಗ್ರ ತಾಂಬೂಲ ದೊರಕುತ್ತದೆ. ಕುಲೀನರಲ್ಲಿ ಗೊಷ್ಠೀಪತಿಯ ಅಂಶವೇ ಬಹಳ ಮರ್ಯಾದೆಗೆ ಪಾತ್ರವಾದುದು. ಕೃಷ್ಣನ ಕಾಲದಲ್ಲಿ ಈ ಪದ್ಧತಿ ಕೊಂಚ ವ್ಯತ್ಯಸ್ತವಾಗಿತ್ತು. ಸಭೆಯಲ್ಲಿ ಸರ್ವರಿಗೂ ಶ್ರೇಷ್ಠನಾದಂಥವನಿಗೆ ಅರ್ಘ್ಯ ಕೊಡಲ್ಪಡುತ್ತಲಿತ್ತು; ವಂಶಮರ್ಯಾದೆಯನ್ನು ನೋಡುತ್ತಿರಲಿಲ್ಲ. ಪಾತ್ರನ ಗುಣವನ್ನು ಅನುಸರಿಸುತ್ತ ಇತ್ತು.

ಯುಧಿಷ್ಠಿರನ ಸಭೆಯಲ್ಲಿ ಅರ್ಘ್ಯವನ್ನು ಕೊಡಬೇಕು—ಇದಕ್ಕೆ ತಕ್ಕವ ನಾರು ? ಭಾರತವರ್ಷದ ರಾಜರೆಲ್ಲರೂ ಸಭೆಗೆ ಬಂದಿರುತ್ತಾರೆ. ಇವರಲ್ಲಿ ಎಲ್ಲರಿಗಿಂತಲೂ ಉತ್ತಮನಾರು ? ಇದೇ ವಿಚಾರಿಸಬೇಕಾದುದು. ಕೃಷ್ಣನೇ ಸರ್ವ ಶ್ರೇಷ್ಠನು, ಇವನಿಗೆ ಅರ್ಘ್ಯವನ್ನು ಕೊಡತಕ್ಕುದು ಎಂತ ಭೀಷ್ಮನು ಹೇಳಿದನು.

ಮೊದಲು ಈ ಮಾತನ್ನು ಹೇಳಿದಾಗ ಕೃಷ್ಣನು ದೇವರೆಂದು ವಿವೇಚಿಸಿ ದುದರಿಂದ ಸರ್ವ ಶ್ರೇಷ್ಠನೆಂದು ಭೀಷ್ಮನು ಗೊತ್ತುಮಾಡಿದಂತೆ ಯಾವ ಭಾವದಿಂದಲೂ ಕಂಡುಬರುವುದಿಲ್ಲ. "ತೇಜಸ್ಸು, ಬಲ ಮತ್ತು ಪರಾಮರ್ಶಗಳಲ್ಲಿ" ಶ್ರೇಷ್ಠನೆಂತಲೇ ಭೀಷ್ಮನು ಅರ್ಘ್ಯವನ್ನು

ಕೊಡಬೇಕೆಂತ ಹೇಳಿದನು. ಕ್ಷಾತ್ರಗುಣಗಳಲ್ಲಿ ಕ್ಷತ್ರಿಯ ಶ್ರೇಷ್ಠನೆಂತಲೇ ಅರ್ಘ್ಯವನ್ನು ಕೊಡಬೇಕೆಂದನು. ಇಲ್ಲಿ ಭೀಷ್ಮನು ಕೃಷ್ಣನ ಮನುಷ್ಯಚರಿತ್ರೆಯನ್ನೇ ಶೋಧಿಸಿದಂತೆ ಕಂಡುಬರುತ್ತದೆ.

ಈ ಮಾತನ್ನು ಅನುಸರಿಸಿ ಕೃಷ್ಣನಿಗೆ ಅರ್ಘ್ಯವನ್ನು ಕೊಟ್ಟರು. ಅದನ್ನು ಅವನೂ ಸ್ವೀಕರಿಸಿದನು. ಇದು ಶಿಶುಪಾಲನಿಗೆ ಸಹಿಸದೇ ಹೋಯಿತು. ಶಿಶುಪಾಲನು ತನ್ನ ಕಾಲದ ಭೀಷ್ಮ, ಕೃಷ್ಣ ಮತ್ತು ಪಾಂಡವರನ್ನು ತಿರಸ್ಕರಿಸಿ ಹೇಳಿದ ಭಾಷಣವು ವಿಲಾಯತಿಯ ಪಾರ್ಲಿಮೆಂಟ್ ಮಹಾಸಭೆಯಲ್ಲಿ ಆಗಿದ್ದರೆ ಉಚಿತ ದರದಲ್ಲಿ ಧಾರಣೆಯಾಗುತ್ತಿತ್ತು. ಭಾಷಣದ ಮೊಟ್ಟಮೊದಲು ಅವನ ವಾಗ್ಮಿತೆ ವಿಶುದ್ಧವೂ ತೀವ್ರವೂ ಆಗಿದ್ದಿತು. ಕೃಷ್ಣನು ರಾಜನಲ್ಲ. ಇಷ್ಟು ಜನ ರಾಜರಿರಲು ಅವನಿಗೆ ಅರ್ಘ್ಯವನ್ನು ಕೊಡಲೇಕೆ? ಹಿರಿಯನೆಂದು ಅವನನ್ನು ಪೂಜಿಸಿದಿರಿಯಾದರೆ ಅವನ ತಂದೆಯಾದ ವಸುದೇವನನ್ನೇಕೆ ಪೂಜಿಸಲಿಲ್ಲ. ನಿಮ್ಮ ಸ್ನೇಹಿತನೂ ಪ್ರಿಯವನ್ನು ಕೋರುವವನೂ ಎಂತ ಅವನನ್ನು ಪೂಜಿಸಿದರೋ? ಮಾವ ದ್ರುಪದನಿರಲು ಇವನಿಗೇಕೆ? ಕೃಷ್ಣನು *ಆಚಾರ್ಯನೆಂದು ಅಂದುಕೊಂಡಿರುವಿರೋ? ದ್ರೋಣಾಚಾರ್ಯನಿರಲು ಕೃಷ್ಣನಿಗೆಂತಹ ಪೂಜೆ! ಋತ್ವಿಕನೆಂದು ಅರ್ಘ್ಯವನ್ನು ಕೊಟ್ಟರೊ? ವೇದವ್ಯಾಸನಿರಲು ಇದು ಕೃಷ್ಣನಿಗೆ ಸಲ್ಲುವುದೆಂತು?† ಇತ್ಯಾದಿ, ಇತ್ಯಾದಿ.

ಶಿಶುಪಾಲ ಮಹಾರಾಯನು ಮಾತನ್ನಾಡುತ್ತಾ ಆಡುತ್ತಾ ಇತರ ವಾಗ್ಮಿಗಳಂತೆಯೇ ವ್ಯೈಮರೆತನು. ಆಗ ತರ್ಕ (Logic) ವನ್ನು ಬಿಟ್ಟು ಧೋರಣೆ (Rhetoric)ಗೆ ಏರಿದನು. ವಿಚಾರವನ್ನು ಬಿಟ್ಟು ಬೈಗಳಿಗೆ ಆರಂಭಿಸಿದನು. ಪಾಂಡವರನ್ನು ಬಿಟ್ಟು ಕೃಷ್ಣನನ್ನು ಹಿಡಿದನು. ಅಲಂಕಾರ ಶಾಸ್ತ್ರವನ್ನು ಇವನು ಬಹಳ ಚೆನ್ನಾಗಿ ಬಲ್ಲನು. "ಪ್ರಿಯವನ್ನು ಕೋರುವವನು," "ಅಪ್ರಾಪ್ತ ಲಕ್ಷಣ," ಇತ್ಯಾದಿ, ಇತ್ಯಾದಿ ಚುಟಿಕೆಗಳಿಂದ ಮೊದಲುಮಾಡಿ ಕೊನೆಗೆ ಧರ್ಮಭ್ರಷ್ಟ, ದುರಾತ್ಮ ಮೊದಲಾದ

---

* ಅಭಿಮನ್ಯು, ಸಾತ್ಯಕಿ ಮೊದಲಾದ ಮಹಾರಥರಿಗೂ ಆಗಿಂದಾಗ್ಗೆ ಅರ್ಜುನನಿಗೂ ಕೂಡ ಯುದ್ಧವಿದ್ಯೆಯನ್ನು ಕಲಿಸಿದ ಆಚಾರ್ಯನು ಕೃಷ್ಣನು.

† ಆದುದರಿಂದ ಕೃಷ್ಣನು ಪ್ರಖ್ಯಾತನಾದ ವೇದಜ್ಞನೆಂಬುದನ್ನು ಒಪ್ಪಿದಂತೆ ಆಯಿತು.

ದೊಡ್ಡದೊಡ್ಡ ಬೈಗಳಿಗೆ ಬಾಯಿಹಾಕಿದನು. ಕೊನೆಗೆ ಕ್ಲೈಮ್ಯಾಕ್ಸ್ (Climax) ಕೇಂದ್ರ. ಕೃಷ್ಣನು ತುಪ್ಪವನ್ನು ನೆಕ್ಕುವ ನಾಯಿ, ಹೆಂಡಿರನ್ನು ಮಾರಿಕೊಂಡ ಷಂಡನು,* ಇತ್ಯಾದಿ, ಇತ್ಯಾದಿ ಬೈಗಳಿಗೆ ಇಳಿದನು.

ಇದನ್ನು ಕೇಳಿ ಕ್ಷಮೆಗೆ ನಿಧಿಯಾದ ಪರಮಯೋಗಿಯಾದ ಆದರ್ಶ ಪುರುಷನು ಉತ್ತರವೇನನ್ನೂ ಈಯಲಿಲ್ಲ. ಆ ಕ್ಷಣದಲ್ಲಿಯೇ ಶಿಶುಪಾಲ ನನ್ನು ಹೊಸಕಿಬಿಡುವುದಕ್ಕೆ ಕೃಷ್ಣನೇನೋ ಶಕ್ತನಾಗಿದ್ದನು. ಮುಂದಿನ ಘಟನೆಯಿಂದ ಇದನ್ನು ಪಾಠಕರು ಸುಲಭವಾಗಿಯೇ ತಿಳಿಯಬಹುದು. ಈ ತೆರನಾದ ಪೌರುಷವಚನಗಳಿಂದ ಕೃಷ್ಣನು ತಿರಸ್ಕೃತನಾಗಿದ್ದನೆಂದು ಕಂಡುಬರುವುದಿಲ್ಲ. ಯುೂರೋಪಿಯನ್ನರಂತೆ ಅವನನ್ನು ಕರೆದು "ಎಲೈ ಶಿಶುಪಾಲನೇ, ಕ್ಷಮೆಯೇ ದೊಡ್ಡ ಧರ್ಮ. ನಾನು ನಿನ್ನನ್ನು ಕ್ಷಮಿಸುವೆನು" ಎಂತ ಹೇಳಲಿಲ್ಲ. ಬಾಯಿಮುಚ್ಚಿಕೊಂಡು ಶತ್ರುವನ್ನು ಕ್ಷಮಿಸಿದನು.

ಕರ್ಮಕರ್ತೃವಾದ ಯುಧಿಷ್ಠಿರನು ಬಂದಿದ್ದ ರಾಯರುಗಳ ಕ್ರೋಧ ವನ್ನು ನೋಡಿ ಸಮುದಾಯಿಸುವುದಕ್ಕೆ ಪ್ರಯತ್ನಪಟ್ಟನು. ಸಿಹಿಮಾತು ಗಳಿಂದ ಕೃಷ್ಣ ತಿರಸ್ಕಾರಿಯನ್ನು ಸಂತೋಷಪಡಿಸಲು ಯತ್ನಿಸಿದನು. ಆದರೆ ಭೀಷ್ಮನು ಮುದುನಾದರೂ ಉಕ್ಕಿನಂತೆ ಗಡಸು. ಅವನಿಗೆ ಇದು ಸರಿಬಾರದೇಹೋಯಿತು. ಅವನು ಸ್ಪಷ್ಟವಾಗಿ ಹೀಗೆಂದದು: "ಕೃಷ್ಣನ ಪೂಜೆ ರುಚಿಸದವನಿಗೆ ವಿನಯುವನ್ನಾಗಲಿ, ಸಮಾಧಾನವಾಗಲಿ ತೋರುವುದು ಅನುಚಿತ."

ಆಗ ಕುರುವೃದ್ಧನಾದ ಭೀಷ್ಮನು ಪ್ರಮಾಣಗರ್ಭಿತವಾದ ವಾಕ್ಯ ಪರಂಪರೆಗಳಿಂದ ತಾನು ಕೃಷ್ಣನನ್ನು ಅರ್ಚಿಸಬೇಕೆಂತ ಕೊಟ್ಟ ಪರಾಮರ್ಶಕ್ಕೆ ಕೈಫಿಯತ್ತನ್ನು ಕೊಟ್ಟನು. ನಾವು ಈ ವಾಕ್ಯಗಳ ಸಾರಭಾಗವನ್ನು ಎತ್ತುವೆವು. ಆದರೆ ಇವುಗಳಲ್ಲಿ ರಹಸ್ಯವೊಂದಿರುವುದು. ಅದನ್ನು ಮೊದಲೇ ತಿಳುಹಿಸಿರುವೆವು. ಮಾತಿನ ತಾತ್ಪರ್ಯವು—ಸಕಲ ಮನುಷ್ಯರಲ್ಲಿ, ವಿಶೇಷವಾಗಿ ಕ್ಷತ್ರಿಯರಲ್ಲಿ ಇರಬೇಕಾದ ಗುಣಗಳಲ್ಲೆಲ್ಲ

* ಕೃಷ್ಣನಿಗೆ ಮಕ್ಕಳಿಲ್ಲದೇ ಇರಲಿಲ್ಲ. ಇಂದ್ರಿಯ ಪರಾಯಣರಾದ ಜನರು ಜಿತೇಂದ್ರಿಯನನ್ನು ತಿರಸ್ಕರಿಸುವುದೇ ಹೀಗೆ.

ಕೃಷ್ಣನೇ ಸರ್ವಶ್ರೇಷ್ಠನು ಎಂಬುದಾಗಿರುವುದು. ಆದುದರಿಂದಲೇ ಅವನು ಅರ್ಘ್ಯಕ್ಕೆ ಯೋಗ್ಯನು. ಇದರಮೇಲೆ ಮಧ್ಯೇ ಮಧ್ಯೇ ಕೆಲವು ಮಾತುಗಳಿರುವುವು. ಅವುಗಳಲ್ಲಿ ಕೃಷ್ಣನು ಸ್ವಯಂ ಜಗದೀಶ್ವರನು, ಆದುದರಿಂದ ಪೂಜನೀಯನು ಎಂದು ಭೀಷ್ಮನು ಹೇಳುತ್ತಿರುವನು. ನಾವು ಎರಡು ಮಾತುಗಳನ್ನೂ ಬೇರೆಬೇರೆಯಾಗಿ ತೋರಿಸುವೆವು. ಅವುಗಳ ಪ್ರಕೃತ ತಾತ್ಪರ್ಯವನ್ನು ಪಾಠಕರೇ ತಿಳಿದುಕೊಳ್ಳಲಿ.

ಭೀಷ್ಮನು ಹೇಳುತ್ತಾನೆ :—

" ಈ ಮಹತ್ತರವಾದ ರಾಜಸಭೆಯಲ್ಲಾವ ಮಹೀಪಾಲನೂ ಕೂಡ ತೇಜಸ್ಸಿನಲ್ಲಿಯೂ ಬಲದಲ್ಲಿಯೂ ಕೃಷ್ಣನಿಗೆ ಮೀರಿದವನು ಕಂಡುಬರುವುದಿಲ್ಲ. ಇದಂತೂ ಮನುಷ್ಯತ್ವದ ಮಾತಾಯಿತು. ಇದರ ಕೆಳಗೇನೇ ದೇವತ್ವದ ಮಾತು ಇದೆ. ಆತನು ನಮಗೆ ಮಾತ್ರವೇ ಪೂಜನೀಯನೆಂದಲ್ಲ. ಆ ಮಹಾಬಲನು ಮೂರು ಲೋಕಕ್ಕೂ ಪೂಜನೀಯನು. ಅವನು ಯುದ್ಧದಲ್ಲಿ ಲೆಕ್ಕವಿಲ್ಲದಷ್ಟು ಕ್ಷತ್ರಿಯರ ಗುಂಪುಗಳನು ಸದೆಬಡಿದಿರುವನು ಮತ್ತು ಅಖಂಡ ಬ್ರಹ್ಮಾಂಡವು ಅವನಿಂದಲೇ ನಿಂತಿರುವುದು."

ತಿರುಗಿ ಮನುಷ್ಯತ್ವ—

"ಕೃಷ್ಣನು ಹುಟ್ಟಿದಂದಿನಿಂದಲೂ ಅವನು ಮಾಡಿದ ಕೆಲಸಗಳನ್ನು ನನ್ನೆದುರಿಗೆ ಜನರು ಅನುಕೂಲವಾಗಿ ಕೀರ್ತಿಸಿರುವರು. ಅವನ ಬಾಲ್ಯದಿಂದಲೂ ನಾವು ಅವನನ್ನು ಪರೀಕ್ಷಿಸಿ ನೋಡುತ್ತಿರುವೆವು. ಅವನ ಶೌರ್ಯವನ್ನೂ, ವೀರ್ಯವನ್ನೂ, ಕೀರ್ತಿಯನ್ನೂ ವಿಜಯ ಮೊದಲಾದ ಸಮಸ್ತಗಳನ್ನೂ ಚನ್ನಾಗಿ ತಿಳಿದು ಜೊತೆ ಜೊತೆಯಲ್ಲಿಯೇ ದೇವತ್ವವನ್ನೂ—ಭೂತಸುಖಾವಹನಾದ ಜಗದರ್ಚಿತನಾದ ಆತನ ಪೂಜಾವಿಧಾನವನ್ನೂ ತಿಳಿದುಕೊಂಡಿರುವೆವು."*

ಮತ್ತೆ ಶುದ್ಧವಾಗಿ ಮನುಷ್ಯತ್ವ—

" ಕೃಷ್ಣನ ಪೂಜ್ಯತೆಗೆ ಕಾರಣಗಳೆರಡುಂಟು : ಅವನು ಸಮಸ್ತ ವೇದವೇದಾಂಗ ಪಾರದರ್ಶಿ; ಮತ್ತು ಬಹು ಹೆಚ್ಚಿನ ಬಲಶಾಲಿ ಅಂದರೆ, 'ಮನುಷ್ಯ ಲೋಕದಲ್ಲಿ ಇಂತಹ ಬಲವಂತನೂ ಮತ್ತು ವೇದವೇದಾಂಗ ಸಂಪನ್ನನೂ ಆದ ಇನ್ನೊಬ್ಬ ಮನುಷ್ಯನನ್ನು ಕಣ್ಣಾರ ಕಾಣುವುದು ಅತಿಕಠಿನ.' ದಾನ. ದಯಾ, ಶ್ರುತ, ಶೌರ್ಯ, ಲಜ್ಜಾ, ಕೀರ್ತಿ, ಬುದ್ಧಿ, ವಿನಯ, ಅನುಪಮ ಶ್ರೀ, ಧೈರ್ಯ ಮತ್ತು ಸಂತೋಷ ಮುಂತಾದ ಉತ್ತಮ ಗುಣಾವಳಿಗಳಿಂದ ಕೃಷ್ಣನು ಸದಾ ಬೆಳಗುತ್ತಲಿರುವನು. ಆದುದರಿಂದ ಈ ಸರ್ವಗುಣ ಸಂಪನ್ನನಾದ ಆಚಾರ್ಯನೂ, ತಂದೆಯೂ, ಗುರುವಿನಂತೆ ಪೂಜೆಗೆ ಯೋಗ್ಯನೂ ಆದ ಕೃಷ್ಣನಲ್ಲಿ ನೀವು ಸರ್ವವಿಧಾನದಲ್ಲಿಯೂ ಕ್ಷಮೆಯನ್ನು

---

* ಮೊದಲನೆಯ ಅಧ್ಯಾಯದಲ್ಲಿ ಅನುಶೀಲನ ಧರ್ಮದ ಕೊನೆಯ ಆದರ್ಶವು ಶ್ರೀ ಕೃಷ್ಣನೆಂದು ಹೇಳಿದೆವಲ್ಲವೆ? ಅದು ಈ ಭೀಷ್ಮನ ಮಾತಿನಲ್ಲಿ ವಿಂಗಡ ಬೀಳುತ್ತಲಿದೆ.

ಕೋರುವುದೇ ಕರ್ತವ್ಯ. ಅವನು ಋತ್ವಿಕನು, ಗುರು, ಸಂಬಂಧಿ, ಸ್ನಾತಕನು, ರಾಜನು ಮತ್ತು ಪ್ರಿತಿಪಾತ್ರನು. ಆದುದರಿಂದ ಅಚ್ಯುತನು ಆರ್ಚಿತನಾಗಿರುವನು."

ಪುನಃ ದೇವತ್ವದ ಮಾತು—

"ಚರಾಚರಗಳಿಂದ ಕೂಡಿದ ಈ ಪ್ರಪಂಚದ ಸೃಷ್ಟಿಸ್ಥಿತಿಲಯುಗಳಿಗೆ ಅವ್ಯಕ್ತ ಪ್ರಕೃತಿಯು, ಸನಾತನನು, ಕರ್ತನು, ಅಧೀಶ್ವರನು, ಸುತರಾಂ ಪರಮ ಪೂಜನೀಯನು—ಇಷ್ಟೂ ಆದವನೇ ಕೃಷ್ಣನು. ಇದನ್ನು ನಂಬದವರುಂಟೆ? ಬುದ್ಧಿ, ಮನಸ್ಸು, ಮಹತ್ತ್ವ ಪೃಥಿವ್ಯಾದಿ ಪಂಚಭೂತಗಳ ಗುಂಪೆಲ್ಲವೂ ಕೃಷ್ಣನೊಬ್ಬನಲ್ಲಿಯೇ ನಿಂತಿವೆ. ಚಂದ್ರ, ಸೂರ್ಯ, ಗ್ರಹ, ನಕ್ಷತ್ರಗಳು, ದಿಕ್ಕು ವಿದಿಕ್ಕುಗಳು—ಇವು ಕೃಷ್ಣನೊಬ್ಬನಲ್ಲಿ ಸೇರಿವೆ, ಇತ್ಯಾದಿ, ಇತ್ಯಾದಿ."

ಭೀಷ್ಮನು ಕೃಷ್ಣನ ಪೂಜೆಗೆ ಎರಡು ಕಾರಣಗಳೆಂದು ಹೇಳಿರುವನು: (೧) ಅವನು ಬಲದಲ್ಲಿ ಸರ್ವಶ್ರೇಷ್ಠನು (೨) ಅವನಿಗೆ ಸಮಾನನಾದ ವೇದ ವೇದಾಂಗ ಪಾರದರ್ಶಿ ಆರೂ ಇಲ್ಲ. ಅವನ ಅದ್ವಿತೀಯ ಪರಾಕ್ರಮಕ್ಕೆ ಪ್ರಮಾಣಗಳು ಈ ಗ್ರಂಥದಲ್ಲಿಯೇ ಹಲವು ದೊರಕುವುವು. ಕೃಷ್ಣನ ಅದ್ವಿತೀಯವಾದ ವೇದಜ್ಞತೆಗೆ ಗೀತಾ ಗ್ರಂಥವೇ ಪ್ರಮಾಣ. ನಾವು ಭಗವದ್ಗೀತೆ ಎಂದು ಪಾಠಮಾಡುವುದು ಕೃಷ್ಣನಿಂದಾದುದಲ್ಲ. ಅದು ವ್ಯಾಸರಿಂದ ಆದುದೆಂದು ಪ್ರಖ್ಯಾತವಾಗಿದೆ. "ವೈಯ್ಯಾಸಕೀ ಸಂಹಿತೆ" ಎಂತ ಪರಿಚಿತವಾದುದು. ಅದನ್ನು ಬರೆದವನು ವ್ಯಾಸನಾಗಲಿ ಬೇರೆ ಆವನಾಗಲಿ ಕೃಷ್ಣನ ಬಾಯಿಂದ ಬಂದ ಮಾತುಗಳನ್ನು ನೋಟುಮಾಡಿಟ್ಟುಕೊಂಡು ಈ ಗ್ರಂಥಗಳನ್ನು ಕೂಡಿಸಿಲ್ಲ. ಇದು ಮೂಲ ಮಹಾಭಾರತದ ಅಂಶವೆಂತಲೂ ನಮಗೆ ತೋರುವುದಿಲ್ಲ. ಆದರೂ ಗೀತೆಯು ಕೃಷ್ಣನ ಧರ್ಮ ಮತದ ಸಂಕಲನವೇನೋ ಹೌದು. ಇದನ್ನು ನಂಬುವೆವು. ಅವನ ಮತಾವಲಂಬಿಯಾದ ಆವನೋ ಪಂಡಿತನಿಂದ ಈ ಆಕಾರದಲ್ಲಿ ಕೂಡಿಸಲ್ಪಟ್ಟು ಇದು ಮಹಾಭಾರತದಲ್ಲಿ ಬೆರಸಿಡಲ್ಪಟ್ಟು ಪ್ರಚಾರಕ್ಕೆ ಬಂದಿರುವುದೇ ಸರಿ ಎಂತ ತೋರುವುದು. ಗೀತೋಕ್ತ ಧರ್ಮವನ್ನು ಬರೆದವನು ಸ್ಪಷ್ಟವಾಗಿ ಅದ್ವಿತೀಯನಾದ ವೇದಜ್ಞನು ಮತ್ತು ಪಂಡಿತನು. ಧರ್ಮ ಸಂಬಂಧವಾಗಿ ಅವನು ವೇದಕ್ಕೆ ಸರ್ವೋಚ್ಚಸ್ಥಾನವನ್ನು ಕೊಟ್ಟಿಲ್ಲ—ಇದರಮೇಲೆ ಒಂದೊಂದು ವೇಳೆ ವೇದವನ್ನು ಕೊಂಚ ಕೊಂಚ

ನಿಂದಿಸಿಯೇ ಇರುವನು. ಆದರೂ ಅದ್ವಿತೀಯ ವೇದಜ್ಞನಿಂದಲ್ಲದೆ ಗೀತೋಕ್ತಧರ್ಮವು ಪ್ರಣೀತವಾಗಲಿಲ್ಲ ಗೀತವನ್ನೂ ವೇದವನ್ನೂ ಅಧ್ಯಯನ ಮಾಡಿದವನು ಇದನ್ನು ಸುಲಭವಾಗಿಯೇ ತಿಳಿಯುವನು.

ಹೀಗೆ ಪರಾಕ್ರಮದಲ್ಲಿಯೂ, ಪಾಂಡಿತ್ಯದಲ್ಲಿಯೂ, ವೀರ್ಯಶಿಕ್ಷಣೆಗಳಲ್ಲಿಯೂ, ಕರ್ಮಜ್ಞಾನಗಳಲ್ಲಿಯೂ, ನೀತಿಧರ್ಮಗಳಲ್ಲಿಯೂ, ದಯಾಕ್ಷಮೆಗಳಲ್ಲಿಯೂ, ಸಮನಾಗಿರುವವನೇ ಸರ್ವಶ್ರೇಷ್ಠನು. ಅವನೇ ಮಾದರಿ ಮನುಷ್ಯನು.

ದಶಮ ಪರಿಚ್ಛೇದ

ಶಿಶುಪಾಲ ವಧೆ

ಭೀಷ್ಮನು ತನ್ನ ಮಾತುಗಳನ್ನು ಮುಗಿಸಿ ಶಿಶುಪಾಲನನ್ನು ಬಹಳವಾಗಿ ಹೀಯಾಳಿಸಿ ಅವನನ್ನು ಕುರಿತು ಹೀಗೆಂದನು: "ಕೃಷ್ಣನ ಪೂಜೆ ಶಿಶುಪಾಲನಿಗೆ ಸಂಪೂರ್ಣವಾಗಿ ಅಸಹ್ಯವಾಗಿ ತೋರಿದರೆ ಅವನಿಗೆ ರುಚಿತೋರಿದಂತೆ ಮಾಡಬಹುದು." ಅಂದರೆ, ಸರಿಬೀಳದೆ ಹೋದರೆ "ಎದ್ದು ಆಚೆಗೆ ಹೋಗಬಹುದು."

ಮಹಾಭಾರತದಿಂದಲೇ ಎತ್ತುತ್ತಲಿರುವೆನು: "ಕೃಷ್ಣನನ್ನು ಪೂಜಿಸುತ್ತಿರುವುದನ್ನು ನೋಡಿ ಸುನೀತನೆಂಬ ಮಹಾಬಲಶಾಲಿಯಾದ ವೀರನೊಬ್ಬನು ಕ್ರೋಧದಿಂದ ಮೈ ಥರಥರಗುಟ್ಟುತ್ತಿರಲು ಕೆಂಪೇರಿದ ಕಣ್ಣುಗಳುಳ್ಳವನಾಗಿ ನೆರೆದಿದ್ದ ರಾಜರೆಲ್ಲರನ್ನೂ ಎಚ್ಚರಿಸಿ 'ನಾನು ಹಿಂದೆ ಸೇನಾಧಿಪತಿಯಾಗಿದ್ದೆನು. ಈಗ ಯಾದವ ಪಾಂಡವ ಕುಲಗಳನ್ನು ಬೇರು ಸಹಿತ ಕಿತ್ತೊಗೆಯಲು ಇಂದೇ ಸಮರಸಾಗರದಲ್ಲಿ ಮುಳುಗುವೆನು' ಎಂದನು. ಚೇದಿರಾಜನಾದ ಶಿಶುಪಾಲನು ಮಹೀಪಾಲರುಗಳ ಅವಿಚಲಿತವಾದ ಉತ್ಸಾಹವನ್ನು ನೋಡಿ ಪ್ರೋತ್ಸಾಹಿತನಾಗಿ ಯಜ್ಞಕ್ಕೆ ಅಡ್ಡಿಯನ್ನು ಮಾಡಿ ಯುಧಿಷ್ಠಿರನ ಆ ಅಭಿಷೇಕ, ಕೃಷ್ಣನ ಪೂಜೆ ಇವನ್ನು ನಡೆಯದಂತೆ ಮಾಡುವುದು ನಮ್ಮ ಮುಖ್ಯ ಕೆಲಸವೆಂದು ಬುದ್ಧಿ ಹೇಳತೊಡಗಿದನು. ರಾಜರು ನಿರ್ವೇದರಾದುದರಿಂದ ಕ್ರೋಧಪರವಶರಾಗಿ

ಅವನೊಡನೆ ಬೆರೆಯುತ್ತಿರುವುದನ್ನೂ, ಅವರು ಯುದ್ಧಕ್ಕೆ ತಯಾರಾಗಲು ಆಲೋಚಿಸುವುದನ್ನೂ ಕೃಷ್ಣನು ಸ್ಪಷ್ಟವಾಗಿಯೇ ತಿಳಿದುಕೊಂಡನು."

ರಾಜನಾದ ಯುಧಿಷ್ಠಿರನು ಸಮುದ್ರದಂತಹ ರಾಜಮಂಡಲವು ರೋಷದಿಂದ ಕಲಕಲನಾದುದನ್ನು ನೋಡಿ ಪ್ರಾಜ್ಞತಮನಾದ ಪಿತಾಮಹನಾದ ಭೀಷ್ಮನನ್ನು ಕುರಿತು "ಎಲೈ ತಂದೆಯೇ! ಈ ದೊಡ್ಡ ರಾಜಸಮುದ್ರ ಕುದಿಯುತ್ತಿದೆ. ಈಗ ನಾವು ಮಾಡಬೇಕಾದದ್ದಕ್ಕೆ ನಿಮ್ಮ ಅನುಮತಿಯಾಗಬೇಕು."

ಶಿಶುಪಾಲನ ವಧೆಗೆ ಇದೇ ನಿಜವಾದ ಕಾರಣ. ಅವನನ್ನು ಕೊಲ್ಲದೆ ಹೋದರೆ ರಾಜರೊಡನೆ ಬೆರತು ಯಜ್ಞವನ್ನು ನಷ್ಟ ಮಾಡುವನು.

ಶಿಶುಪಾಲನು ತಿರುಗಿ ಭೀಷ್ಮನನ್ನೂ ಕೃಷ್ಣನನ್ನೂ ಹಲವು ಬಗೆಯಾಗಿ ಹೀನಗಳೆದನು—"ದುರಾತ್ಮ, ಮಕ್ಕಳೂ ಕೂಡ ಹೀಯಾಳಿಸುವವನೂ, ದನಕಾಯುವ ಗೊಲ್ಲ ಗುಲಾಮ (ದಾಸ)"ನೂ ಎಂದು ಅಲ್ಲಗಳೆದನು. ಪರಮಯೋಗಿಯಾದ ಕೃಷ್ಣನು ಇಷ್ಟಾದರೂ ಅವನನ್ನು ಕ್ಷಮಿಸಿ ಬಾಯಿಮುಚ್ಚಿಕೊಂಡಿದ್ದನು. ಬಲದಲ್ಲಿ ಎಂತು ಆದರ್ಶನೋ, ಕ್ಷಮೆಯಲ್ಲಿಯೂ ಹಾಗೆಯೇ ಆದರ್ಶನು. ಭೀಷ್ಮನು ಮೊದಲು ಸುಮ್ಮನಿದ್ದನು; ಆಮೇಲೆ ಭೀಮನಾದರೋ ಬಹಳ ಕೋಪಗೊಂಡು ಶಿಶುಪಾಲನ ಮೇಲೆ ಬೀಳುವುದಕ್ಕೆ ಎದ್ದು ಅವನನ್ನು ಇದುರಿಸಹೋಗಲು, ಭೀಷ್ಮನು ಅವನನ್ನು ತಡೆದು ಶಿಶುಪಾಲನ ಪೂರ್ವವೃತ್ತಾಂತವನ್ನು ತಿಳಿಸತೊಡಗಿದನು. ಈ ವೃತ್ತಾಂತವು ಅಸಂಭವವೂ ಅಸ್ವೈಸರ್ಗಿಕವೂ ಆದದ್ದರಿಂದ ವಿಶ್ವಾಸಯೋಗ್ಯವಲ್ಲ. ಇದೇನೆಂದರೆ :—

ಶಿಶುಪಾಲನು ಹುಟ್ಟುವಾಗ್ಗೆ ಅವನಿಗೆ ಮೂರುಕಣ್ಣುಗಳೂ, ನಾಲ್ಕು ಕೈಗಳೂ ಇದ್ದವು. ಮತ್ತು ಕತ್ತೆಯಂತೆ ಮಗು ಕಿರಿಚಿಕೊಳ್ಳುತ್ತಿತ್ತು. ಇಂಥಾ ಅವಲಕ್ಷಣದ ಮಗುವನ್ನು ಬಿಟ್ಟುಬಿಡುವುದೇ ಲೇಸೆಂದು ಅದರ ತಾಯಿತಂದೆಗಳು ನಿಷ್ಕರ್ಷಿಸಿಕೊಂಡರು. ಆಗ ಅಶರೀರವಾಣಿ ಕೇಳಿಸಿತು. ಆಗಿನ ಕಾಲದ ಅಜ್ಜಿಕಥೆಗಳಿಗೆ ಅಶರೀರವಾಣಿಯು ಆವಶ್ಯಕತೆ ಅತಿಶಯವಾಗಿ ಬೇಕಾಗಿದ್ದಿತು. ಅಶರೀರ

ವಾಣಿ ಕೇಳಿಸಿದ್ದು ಹೇಗೆಂದರೆ—"ಚಿನ್ನದಂತಹ ಕೂಸನ್ನು ಬಿಸಾಡುವರುಂಟೆ? ಅಕ್ಕರೆಯಿಂದ ಹಸುಳೆಯನ್ನು ಆದರಿಸಬೇಕು. ಯಮನು ಕೂಡಾ ಈ ಮಗುವನ್ನೇನೂ ಮಾಡಲಾರನು. ಆದರೆ ಇವನನ್ನು ಕೊಲ್ಲುವವನು ಹುಟ್ಟಿಯೇ ಇರುವನು." ತಾಯಿತಂದೆಗಳು "ಹಾಗಾದರೆ ಇವನನ್ನು ಕೊಲ್ಲುವವನಾರು?" ಎಂದು ವಾಣಿಯನ್ನು ವಿಚಾರಿಸಿದರು. ಆಗ ದೈವ ವಾಣಿ ಇಷ್ಟೊಂದು ಮಾತಾಡಿರುವಲ್ಲಿ ಕೃಷ್ಣನ ಹೆಸರನ್ನು ಹೇಳಿಬಿಟ್ಟಿದ್ದರೂ ಆಗಿತ್ತು. ಆದರೆ ಕಥೆಯ ಸ್ವಾರಸ್ಯ ಭಂಗವಾಗಿಬಿಡುವುದು. ಆದುದರಿಂದ ವಾಣಿಯು—"ಯಾರ ಮಡಿಲಲ್ಲಿ ಮಗು ತನ್ನ ಹೆಚ್ಚು ಕೈಗಳನ್ನೂ, ಕಣ್ಣನ್ನೂ ಕಳೆದುಕೊಳ್ಳುವುದೋ, ಅವನೇ ಇದಕ್ಕೆ ಮೃತ್ಯು" ಎಂದು ಹೇಳಿರುವುದು.

ಇದಕ್ಕಾಗಿ ಶಿಶುಪಾಲನ ತಂದೆ ದೇಶಾಂತರಗಳಿಂದ ಜನಗಳನ್ನು ಕರೆಸಿಕೊಂಡು ಪ್ರತಿಯೊಬ್ಬರ ಮಡಲಿನಲ್ಲೂ ಮಗುವನ್ನು ಇಡುತ್ತಿದ್ದನು. ಆರ ಮಡಲಿನಲ್ಲಿಯೂ ಮಗುವಿನ ಹೆಚ್ಚು ಕಣ್ಣೂ, ಕೈಗಳೂ ಹೋಗವು. ಕೃಷ್ಣ ಶಿಶುಪಾಲರು ಸಮವಯಸ್ಕರೆಂದು ತೋರುವುದು. ಇವರು ಒಂದೇ ಸಮಯದಲ್ಲಿ ರುಕ್ಮಿಣಿಯನ್ನು ಮದುವೆಯಾಗಲು ಯತ್ನಿಸಿದ್ದರು. ಮತ್ತು ದೈವವಾಣಿಯ 'ಹುಟ್ಟಿದಾನೆ' ಎಂಬ ಮಾತಿನಿಂದಲೂ ಹೀಗೆಯೇ ತೋರುವುದು. ಆದರೂ ಕೃಷ್ಣನು ದ್ವಾರಕೆಯಿಂದ ಚೇದಿರಾಜ್ಯಕ್ಕೆ ಹೋಗಿ ಶಿಶುಪಾಲನನ್ನು ಮಡಲಿನಲ್ಲಿ ಇಟ್ಟುಕೊಳ್ಳಲು ಒಡನೆಯೇ ಅವನ ಹೆಚ್ಚಿಗೆ ಕೈಗಳೆರಡೂ, ಮೂರನೆಯ ಕಣ್ಣೂ ಮಾಯವಾದವು.

ಶಿಶುಪಾಲನ ತಾಯಿ ಕೃಷ್ಣನ ಸೋದರತ್ತೆ. ಕೃಷ್ಣನನ್ನು ಜಬರದಸ್ತಿನಿಂದ ನನ್ನ ಮಗುವನ್ನು ನೀನು ಕೊಲ್ಲಲಾಗದು ಎಂದು ಅದ್ದಲಿಸಿ ಹೇಳಿದಳು. ಕೃಷ್ಣನು ವಧೆಗೆ ಯೋಗ್ಯವಾದ ನೂರು ಅಪರಾಧಗಳನ್ನು ನಾನು ಕ್ಷಮಿಸುವೆನು ಎಂದು ಮಾತು ಕೊಟ್ಟನು.

ಅಸ್ವಾಭಾವಿಕವಾದುದನ್ನು ನಾವು ನಂಬಲಾರೆವು; ಪಾಠಕರೂ ನಂಬಲಾರರು. ಚರಿತ್ರೆಗಳಲ್ಲಿ ಅಸ್ವಾಭಾವಿಕವಾದ ವಿಷಯ ದೊರಕಲು ಲೇಖಕನ ಅಥವಾ ಅವನ ಹಿಂದಿನವರ ಕಲ್ಪನೆಯೆಂದು ಎಲ್ಲರೂ ಸ್ವೀಕರಿಸುವರು. ಕ್ಷಮಾಗುಣದ ಮಹತ್ತ್ವವನ್ನರಿಯಲಾರದ ಆವನೋ ಕೃಷ್ಣನ

ಅದ್ಭುತವಾದ ಸಹನೆಯನ್ನು ತಿಳಿಯಲಾರದವನಾಗಿ ಶಿಶುಪಾಲನ ಮೇಲಿನ ಕ್ಷಮೆಗೆ ಕಾರಣವನ್ನು ತಿಳಿಸುವುದಕ್ಕೋಸ್ಕರ ಇದೊಂದು ಅದ್ಭುತವನ್ನು ತಯಾರಿಸಿದ್ದಾನೆ. 'ಕಳ್ಳನ ಹೆಜ್ಜೆ ಕಳ್ಳನೇ ಬಲ್ಲ,' 'ಆನೆಯ ಸುಳಿವು ಆನೆಗೇ ಗೊತ್ತು.' ಅಸುರ ವಧೆಗಾಗಿ ಜನ್ಮವೆತ್ತಿದ ಕೃಷ್ಣನು ಅಸುರನ ಅಪರಾಧವನ್ನು ಕ್ಷಮಿಸುವನೆಂಬುದು ಅಸಂಗತವೇ ಸರಿ. ಕೃಷ್ಣನು ಅಸುರವಧೆಗಾಗಿ ಹುಟ್ಟಿದನೆಂದು ತಿಳಿದುಕೊಂಡರೆ ಈ ಕ್ಷಮಾಗುಣವನ್ನು ತಿಳಿಯುವುದಕ್ಕಾಗುವುದಿಲ್ಲ. ಅಲ್ಲದೆ ಅವನ ಇನ್ನಾವ ಗುಣವೂ ತಿಳಿಯು ವುದಿಲ್ಲ. ಅವನು ಆದರ್ಶ ಪುರುಷನೆಂದು ಭಾವಿಸಿದರೆ, ಮನುಷ್ಯತ್ವದ ಆದರ್ಶ ವಿಕಾಸಕ್ಕಾಗಿಯೇ ಹುಟ್ಟಿದವನೆಂದು ತಿಳಿದರೆ ಅವನ ಸಮಸ್ತ ಕಾರ್ಯಗಳೂ ಚೆನ್ನಾಗಿ ಅರ್ಥವಾಗುವುವು. ಕೃಷ್ಣ ಚರಿತ್ರೆಯಂತಹ ರತ್ನಭಂಡಾರವನ್ನು ಬಿಚ್ಚುವುದಕ್ಕೆ ಈ ಆದರ್ಶ ಪುರುಷತ್ವವೇ ಬೀಗದ ಕೈ.

ಶಿಶುಪಾಲನ ಕೆಲವು ಕಟೂಕ್ತಿಗಳನ್ನು ಕೃಷ್ಣನು ಸಹಿಸಿಕೊಂಡನೆಂದು ಕೃಷ್ಣನ ಕ್ಷಮಾಗುಣವನ್ನು ನಾವು ಪ್ರಶಂಸಿಸುತ್ತಿದ್ದೇವೆಂದಲ್ಲ. ಇದಕ್ಕೆ ಮುಂಚೆ ಕೃಷ್ಣನ ಮೇಲೆ ಹಲವು ಅತ್ಯಾಚಾರಗಳನ್ನು ಶಿಶುಪಾಲನು ನಡಸಿದ್ದನು. ಪ್ರಾಗ್ಜ್ಯೋತಿಷಪುರಕ್ಕೆ ಕೃಷ್ಣನು ಹೋಗಿದ್ದ ಸಮಯವನ್ನು ಕಾದಿದ್ದು ದ್ವಾರಕೆಗೆ ಬೆಂಕಿಹಾಕಿ ಓಡಿಹೋದನು. ಅದಾವಾಗಲೋ ಭೋಜರಾಜ ರೈವತಕ ವಿಹಾರಕ್ಕೆ ಹೋಗಿದ್ದಾಗ ಶಿಶುಪಾಲನು ಬಂದು ಹಲವು ಯಾದವರನ್ನು ಕೊಂದು ಮಿಕ್ಕವರನ್ನು ಬಂಧಿಸಿದ್ದನು. ವಸುದೇವನ ಅಶ್ವಮೇಧದ ಕುದುರೆಯನ್ನು ಕದ್ದು ಬಚ್ಚಿಟ್ಟಿದ್ದನು. ಇವೆಲ್ಲಾ ಆಗಿನ ಕಾಲದ ಕ್ಷತ್ರಿಯರಲ್ಲಿ ಬಹಳ ದೊಡ್ಡ ಅಪರಾಧಗಳೆಂದು ಎಣಿಸಲ್ಪಡು ತ್ತಿದ್ದುವು. ಕೃಷ್ಣನು ಇವೆಲ್ಲವನ್ನೂ ಕ್ಷಮಿಸಿದನು. ಮತ್ತು ಕೇವಲ ಶಿಶುಪಾಲನ ಈ ವೈರಾಚರಣೆಗಳನ್ನು ಮಟ್ಟಿಗೆ ಕ್ಷಮಿಸಿದ್ದನೆಂದಲ್ಲ. ಜರಾಸಂಧನೂ ಕೂಡ ಹೀಗೆಯೇ ಬಹಳವಾಗಿ ಕೃಷ್ಣನನ್ನು ಪೀಡಿಸಿದ್ದನು. ತನ್ನಿಂದಾಗಲಿ ಇತರರಿಂದಾಗಲಿ ಜರಾಸಂಧನ ನಿಪಾತವನ್ನು ಮಾಡಲು ಶಕ್ತನಾಗಿದ್ದನೆಂಬುದನ್ನು ತೋರಿಸಿರುವನು. ಆದರೂ ಎಲ್ಲಿಯವರೆಗೂ ರಾಜಮಂಡಲಿಯನ್ನು ಬಂಧಿಸಿ ಪಶುಪತಿಯ ಮುಂದೆ ಬಲಿಕೊಡಲು ಯತ್ನಮಾಡಲಿಲ್ಲವೋ ಅಲ್ಲಿಯವರೆಗೂ ಕೃಷ್ಣನು ಜರಾಸಂಧನಮೇಲೆ

ಯಾವ ತೆರನಾದ ವೈರಾಚರಣೆಯನ್ನೂ ಮಾಡಲಿಲ್ಲ. ಯುದ್ಧವಾದರೆ ಜನಗಳು ಅನ್ಯಾಯವಾಗಿ ಲಯವಾಗುವರೆಂದು ಹೆದರಿ ತಾನೇ ಓರೆಯಾಗಿ ಹೋಗಿ ರೈವತಕದಲ್ಲಿ ಕೋಟೆಯನ್ನು ಕಟ್ಟಿಕೊಂಡಿದ್ದನು. ಹಾಗೆಯೇ ಎಲ್ಲಿಯವರೆಗೂ ಶಿಶುಪಾಲನು ತನ್ನ ಮೇಲೆ ಮಟ್ಟಿಗೆ ಶತ್ರುತ್ವವನ್ನು ತೋರುತ್ತಿದ್ದನೋ ಅಲ್ಲಿಯವರೆಗೂ ಅವನಿಗೆ ಯಾವ ತೆರನಾದ ಅನಿಷ್ಟವನ್ನೂ ಮಾಡಲಿಲ್ಲ. ಆಮೇಲೆ ಪಾಂಡವರ ಯಜ್ಞಕ್ಕೆ ವಿಘ್ನವನ್ನೂ ಮತ್ತು ಧರ್ಮರಾಜ್ಯಸಂಸ್ಥಾಪನೆಗೆ ವಿಘ್ನವನ್ನೂ ಮಾಡಲುಜ್ಜುಗಿಸಿದಾಗ ಕೃಷ್ಣನು ಅವನನ್ನು ಕೊಂದನು. ಆದರ್ಶ ಪುರುಷನ ಕ್ಷಮೆ ಕ್ಷಮಾ ಪಾರಾಯಣತೆಯ ಆದರ್ಶ. ಇದರಿಂದ ಯಾರಾದರೂ ತನ್ನ ಮೇಲೆ ಕೆಟ್ಟದ್ದನ್ನು ಮಾಡಿದರೂ ಅದಕ್ಕೆ ಪ್ರತಿಯಾಗಿ ವೈರವನ್ನು ಸಾಧಿಸನು. ಆದರೆ ಆದರ್ಶ ಪುರುಷನು ದಂಡಪ್ರಣೇತನ ಆದರ್ಶನೂ ಹೌದು. ಸಮಾಜಕ್ಕೆ ಅನಿಷ್ಟವನ್ನುಂಟುಮಾಡಲು ಯತ್ನಿಸಿದವನನ್ನು ಖಂಡಿತವಾಗಿಯೂ ದಂಡಿಸುವನು.

ಕೃಷ್ಣನ ಕ್ಷಮಾಗುಣದ ಪ್ರಸಂಗದಲ್ಲಿ ಕರ್ಣ ದುರ್ಯೋಧನರ ಮೇಲೆ ಅವನು ತೋರಿಸಿದ ಸಹನೆಯನ್ನು ಹೇಳದಿರುವುದಕ್ಕಾಗುವುದಿಲ್ಲ. ಅದು ಉದ್ಯೋಗ ಪರ್ವದ ಮಾತು. ಇಲ್ಲಿಗೆ ಸಂಬಂಧಿಸಿದುದಲ್ಲ. ಕರ್ಣ ದುರ್ಯೋಧನರು ಎಂತಹ ಸ್ಥಳದಲ್ಲಿ ಕೃಷ್ಣನನ್ನು ಕಟ್ಟಿಹಾಕುವುದಕ್ಕೆ ಯತ್ನಮಾಡಿದ್ದರೋ ಅಂತಹ ಸ್ಥಳದಲ್ಲಿ ಇನ್ನಾರಾದರೂ ಮತ್ತೆ ಯಾರನ್ನಾದರೂ ಕಟ್ಟುವುದಕ್ಕೆ ಉದ್ಯೋಗಿಸಿದ್ದರೆ ಏಸುಕ್ರಿಸ್ತನ ವಿನಾ ಮತ್ತಾವ ಮನುಷ್ಯನೂ ಶತ್ರುವನ್ನು ಮನ್ನಿಸುತ್ತಿರಲಿಲ್ಲ. ಕೃಷ್ಣನು ಮನ್ನಿಸಿದ್ದನು. ಆಮೇಲೆ ನೆಂಟನಂತೆ ಕರ್ಣನೊಡನೆ ಮಾತುಕಥೆಗಳನ್ನು ನಡಸಿದನು. ಮತ್ತು ಮಹಾಭಾರತ ಯುದ್ಧದಲ್ಲಿ ಅವರಿಗೆ ವಿರುದ್ಧವಾಗಿ ಅಸ್ತ್ರವನ್ನು ಕೂಡಾ ಧರಿಸಲಿಲ್ಲ.

ಭೀಷ್ಮ ಶಿಶುಪಾಲರಿಗೆ ಇನ್ನೂ ಎಷ್ಟೋ ಮಾತುಗಳು ನಡೆದುವು. ಭೀಷ್ಮನು—"ಶಿಶುಪಾಲನು ಕೃಷ್ಣನ ತೇಜಸ್ಸಿನಿಂದಲೇ ತೇಜೋವಂತನಾಗಿರುವನು. ಅವನು ಈಗಲೇ ಶಿಶುಪಾಲನ ತೇಜಸ್ಸನ್ನು ಅಳಿಸಿಬಿಡುವನು" ಎಂದನು. ಶಿಶುಪಾಲನು ಉರಿದುಬಿದ್ದು ಭೀಷ್ಮನನ್ನು ಬಹುವಾಗಿ ಬೈದು

ಕೊನೆಗೆ "ನಿನ್ನ ಜೀವನ ಈ ಭೂಪಾಲರ ಅನುಗ್ರಹಾಧೀನ; ಅವರು ಮನಸ್ಸು ಮಾಡಿದರೆ ನಿನ್ನನ್ನು ಸಂಹರಿಸಲಾಪರು" ಎಂದನು. ಭೀಷ್ಮನು ಆಗಿನ ಕಾಲದಲ್ಲಿ ಕ್ಷತ್ರಿಯರಲ್ಲಿ ಬಹಳ ಶ್ರೇಷ್ಠನಾದ ಯೋಧನು. "ನಾನು ಇವರನ್ನು ಹುಲ್ಲಿಗಿಂತ ಹಗುರವಾಗಿ ತಿಳಿದಿರುವೆನು" ಎಂದು ಭೀಷ್ಮನು ನುಡಿಯಲು, ಇದನ್ನು ಕೇಳಿ ನೆರೆದಿದ್ದ ರಾಜಮಂಡಲಿಯು ಗರ್ಜಿಸಿ, "ಈ ಭೀಷ್ಮನನ್ನು ಪಶುವಿನಂತೆ ಕೊಂದುಬಿಡಿ, ಇಲ್ಲವೇ ಉರಿಯುತ್ತಿರುವ ಬೆಂಕಿಯಲ್ಲಿ ಸುಟ್ಟುಬಿಡಿ" ಎಂದು ಮೇಲೆ ಬೀಳುವುದಕ್ಕೆ ಬರಲು ಭೀಷ್ಮನು ಎದ್ದು "ನಿಮ್ಮ ಕೈಲಾಗುವುದನ್ನು ಮಾಡಿ, ಇಗೋ ನಿಮ್ಮೆಲ್ಲರ ತಲೆಯ ಮೇಲೆ ನನ್ನೀ ಎಡಗಾಲನ್ನು ಇಡುವೆನು" ಎಂದನು.

ವೃದ್ಧಭೀಷ್ಮನನ್ನು ಜೋರಾವರಿಯಿಂದಾಗಲಿ ವಿಚಾರದಿಂದಾಗಲಿ ತಡೆಯಲು ಆಗದು. ಭೀಷ್ಮನು ಆಗ ರಾಜರುಗಳಿಗೆ ಯಾರು ದೊಡ್ಡವರೆಂಬುದನ್ನು ಗೊತ್ತು ಮಾಡುವುಕ್ಕೆ ಒಂದು ಸುಲಭೋಪಾಯವನ್ನು ತೋರಿಸಿದನು. ಅವನ ಮಾತಿನ ಮುಖ್ಯ ಉದ್ದೇಶವು—"ಒಳ್ಳೆಯದು, ಕೃಷ್ಣನ ಪೂಜೆಯನ್ನು ಮಾಡಿದೆನೆಂದು ನೀವು ಇಷ್ಟೊಂದು ಗೊಂದಲವನ್ನು ಹಚ್ಚಿರುವಿರಿ. ಅವನ ಶ್ರೇಷ್ಠತ್ವವನ್ನು ಒಪ್ಪದೆಯೂ ಇರುವಿರಿ. ಈಗ ಗಲಿಬಿಲಿ ಮಾಡುವುದೇಕೆ? ಅವನು ಇದಿರಿಗೇ ಇದ್ದಾನೆ. ಒಂದು ಸಲ ಪರೀಕ್ಷೆಯನ್ನು ಮಾಡಿ ನೋಡಿ, ಸಾವಿಗೆ ಕಾಲು ಕೆರೆದುಕೊಂಡಿರುವವರು ಒಂದುಸಲ ಕೃಷ್ಣನನ್ನು ಜಗಳಕ್ಕೆ ಕರೆದು ನೋಡಬಾರದೆ?" ಎಂದನು.

ಈ ಮಾತನ್ನು ಕೇಳಿ ಶಿಶುಪಾಲನು ಸುಮ್ಮನೆ ಇರುವುದಕ್ಕುಂಟೆ? ಅವನು ಕೃಷ್ಣನನ್ನು ಕುರಿತು "ಬಾ ಜಗಳಕ್ಕೆ, ನಿನ್ನನ್ನು ನನ್ನೊಡನೆ ಕಾದುವುದಕ್ಕೆ ಕರೆಯುತಲಿದೇನೆ" ಎಂದನು.

ಈಗ ಕೃಷ್ಣನು ಬಾಯಿಬಿಟ್ಟನು. ಆದರೆ ಶಿಶುಪಾಲನನ್ನು ಕುರಿತು ಅಲ್ಲ. ಕ್ಷತ್ರಿಯನಾಗಿ ಕೃಷ್ಣನು ಯುದ್ಧಕ್ಕೆ ಕರೆಯಲ್ಪಟ್ಟಿರುವನು. ಇದಕ್ಕೆ ಹಿಂಜರಿಯುವುದಕ್ಕಾಗದು ಮತ್ತು ಯುದ್ಧದಿಂದ ಧರ್ಮತಃ ಪ್ರಯೋಜನವೂ ಇತ್ತು. ಆಗ ನೆರೆದಿದ್ದ ರಾಜಸಮೂಹವನ್ನು ಕುರಿತು ಶಿಶುಪಾಲನಿಂದಾದ ಅಪರಾಧಗಳನ್ನೆಲ್ಲ ಒಂದೊಂದಾಗಿ ವಿಸ್ತರಿಸಿ ಹೇಳಿ

"ಇಷ್ಟು ದಿನವೂ ಕ್ಷಮಿಸಿದ್ದಾಯಿತು; ಇಂದು ಕ್ಷಮಿಸಲಾರೆನು" ಎಂದನು.

ಈ ಕೃಷ್ಣನ ಮಾತಿನಲ್ಲಿ ತಾನು ಸೋದರತ್ತೆಯ ಬಲವಂತದಿಂದಲೇ ಇಷ್ಟೊಂದು ಅಪರಾಧಗಳನ್ನು ಕ್ಷಮಿಸಿರುವುದಾಗಿ ಹೇಳಿರುವನು. ಇದಕ್ಕೆ ಮುಂಚೆ ಹೇಳಿರುವುದನ್ನು ಜ್ಞಾಪಿಸಿಕೊಂಡು ಇದೂ ಪ್ರಕ್ಷಿಪ್ತವಷ್ಟೆ ಎಂದು ಪಾಠಕರು ಕೇಳಬಹುದು. ಪ್ರಕ್ಷಿಪ್ತವಿದ್ದರೂ ಇರಬಹುದು. ಆದರೆ ಪ್ರಕ್ಷಿಪ್ತವೆಂದು ವಿವೇಚಿಸಲು ಪ್ರಯೋಜನವನ್ನೂ ಕಾಣೆವು, ಇದರಲ್ಲಿ ಅನೈಸರ್ಗಿಕವೇನೂ ಇಲ್ಲ. ಅಲ್ಲದೆ ವಿಶೇಷವಾಗಿ ಸ್ವಾಭಾವಿಕ ಮತ್ತು ಸಂಭವ. ಹುಡುಗನು ಪುಂಡ ಮತ್ತು ಕೃಷ್ಣದ್ವೇಷಿ. ಕೃಷ್ಣನು ಬಲವಂತ; ಮನಸ್ಸು ಮಾಡಿದರೆ ಶಿಶುಪಾಲನನ್ನು ನೊಣದಂತೆ ಹಿಸಿಕಿಹಾಕಿ ಬಿಡಬಲ್ಲ. ಇಂಥಾ ಸ್ಥಿತಿಯಲ್ಲಿ ಸೋದರತ್ತೆ ಅಣ್ಣನ ಮಗನನ್ನು ಬೇಡಿಕೊಳ್ಳುವುದು ಸಂಭವವಲ್ಲವೆ? ಕ್ಷಮಾಪರಾಯಣನಾದ ಕೃಷ್ಣನು ಶಿಶುಪಾಲನನ್ನು ನಿಜಗುಣದಿಂದ ಕ್ಷಮಿಸಿದರೂ, ಅತ್ತೆಯ ಬಲವಂತವನ್ನು ಮನಸ್ಸಿನಲ್ಲಿಟ್ಟುಕೊಂಡಿರುವುದೂ ಸಂಭವ. ಅಲ್ಲದೆ ಅತ್ತೆಯ ಮಗನನ್ನು ಕೊಲ್ಲುವುದು ನಿಂದನೀಯವಾದುದು. ಕೊಂದರೆ ಅತ್ತೆಯ ಸಮಾಧಾನಕ್ಕೆ ಏನನ್ನಾದರೂ ಹೇಳಲೇಬೇಕಾಗುವುದು.

ಆದುದರಿಂದ ಕೃಷ್ಣನ ಈ ಮಾತು ಬಹಳ ಸಂಗತವಾಗಿಯೇ ಕಾಣು ವುದು.

ಬಳಿಕ ಅನೈಸರ್ಗಿಕವಾದೊಂದು ಘಟನೆಯುಂಟಾಯಿತು. ಶ್ರೀ ಕೃಷ್ಣನು ಶಿಶುಪಾಲ ವಧೆಗಾಗಿ ತನ್ನ ಚಕ್ರವನ್ನು ಸ್ಮರಿಸಿದನು. ಸ್ಮರಣಮಾತ್ರ ದಿಂದಲೇ ಚಕ್ರವು ಅವನ ಕೈಗೆ ಬಂದು ನಿಂತಿತು. ಆಗ ಕೃಷ್ಣನು ಶಿಶುಪಾಲನ ಕತ್ತನ್ನು ಅದರಿಂದ ಕತ್ತರಿಸಿದನು.

ಈ ಅನೈಸರ್ಗಿಕ ವ್ಯಾಪಾರವನ್ನು ಪಾಠಕರ್‍ಯಾರು ಐತಿಹಾಸಿಕ ವೆಂದೆನ್ನಲಾರರು. ಕೃಷ್ಣನು ಈಶ್ವರಾವತಾರನಾದುದರಿಂದ ಅವನಲ್ಲಿ ಎಲ್ಲವೂ ಸಂಭವವು ಎಂಬ ಹೇಳುವವರನ್ನು ನಾವು ಕೇಳುವುದೇನೆಂದರೆ— "ಚಕ್ರದಿಂದ ಶಿಶುಪಾಲನನ್ನು ಕೊಲ್ಲಬೇಕಾದರೆ ಕೃಷ್ಣನು ಮನುಷ್ಯಶರೀರ ವನ್ನು ಏಕೆ ಧರಿಸಬೇಕು? ಚಕ್ರವು ಚೇತನವಿಷ್ಟವಾದ ಜೀವದಂತೆ

ಅಪ್ಪಣೆಯ ಪ್ರಕಾರ ಹೋಗಿಬರುವುದಾದರೆ ವೈಕುಂಠದಿಂದ ವಿಷ್ಣು ಶಿಶುಪಾಲನ ಶಿರಚ್ಛೇದನಕ್ಕಾಗಿ ಅದನ್ನು ಕಳುಹಲಾಗದೇಕೆ! ಈ ಕೆಲಸ ಕಾರ್ಯಗಳಿಗಾಗಿ ಮನುಷ್ಯದೇಹವನ್ನು ಧರಿಸುವುದೇಕೆ? ಈಶ್ವರನು ತನ್ನ ನೈಸರ್ಗಿಕ ನಿಯಮಾನುಸಾರವಾಗಿಯೋ ಇಚ್ಛಾಮಾತ್ರದಿಂದಲೋ ಒಬ್ಬ ಮನುಷ್ಯನ ಸಾವನ್ನು ಘಟಿಸಲಾರದವನಾಗಿ ಇಷ್ಟಕ್ಕೋಸ್ಕರ ಮನುಷ್ಯ ದೇಹವನ್ನು ಧರಿಸಿದ್ದೂ, ಸ್ವಂತಮನುಷ್ಯ ಸಾಮರ್ಥ್ಯದಿಂದಲೇ ಇನ್ನೊಬ್ಬರ ಮೇಲೆ ಬಿದ್ದು ಏಳಲಾರದಷ್ಟು ಹೀನಬಲವುಳ್ಳವನಾಗಿ ಐಶೀಶಕ್ತಿಯಿಂದ ದೈವಾಸ್ತ್ರವನ್ನು ಸ್ಮರಿಸಿ ತರಿಸಬೇಕೆ? ಈಶ್ವರನು ಇಷ್ಟರಮಟ್ಟಿನ ಅಲ್ಪ ಸಾಮರ್ಥ್ಯವುಳ್ಳವನಾದರೆ ಮನುಷ್ಯರಿಗೂ ಅವನಿಗೂ ಉಳಿದ ವ್ಯತ್ಯಾಸ ವೇನು? ನಾನು ಕೃಷ್ಣನ ಈಶ್ವರತ್ವವನ್ನು ಸ್ವೀಕರಿಸದೆ ಇಲ್ಲ. ನನ್ನ ಮತದಲ್ಲಿ ಕೃಷ್ಣನು ಮನುಷ್ಯಶಕ್ತಿಯನ್ನು ಬಿಟ್ಟು ಇತರ ಆವ ಶಕ್ತಿಯ ಆಶ್ರಯವನ್ನೂ ಹೊಂದಲಿಲ್ಲ. ಮನುಷ್ಯ ಶಕ್ತಿಯಿಂದಲೇ ಸಮಸ್ತ ಕಾರ್ಯಗಳನ್ನೂ ಮಾಡುತ್ತಿದ್ದನು. ಈ ಅನೈಸರ್ಗಿಕವಾದ ಚಕ್ರಾಸ್ತ್ರ ಸ್ಮರಣೆಯು ಅಲೀಕ ಮತ್ತು ಪ್ರಕ್ಷಿಪ್ತ. ಮನುಷ್ಯ ಯುದ್ಧದಿಂದಲೇ ಶಿಶುಪಾಲನನ್ನು ಅಡಗಿಸಿದನು, ಅದಕ್ಕೆ ಮಹಾಭಾರತದಲ್ಲಿಯೇ ಪ್ರಮಾಣವು ದೊರೆಯುವುದು. ಉದ್ಯೋಗ ಪರ್ವದಲ್ಲಿ ಧೃತರಾಷ್ಟ್ರನು ಶಿಶುಪಾಲ ವಧೆಯ ವೃತ್ತಾಂತವನ್ನು ಹೀಗೆಂದು ಹೇಳಿರುವನು: "ಪೂರ್ವದಲ್ಲಿ ರಾಜಸೂಯ ಯಜ್ಞದಲ್ಲಿ ಚೇದಿರಾಜನು ಮತ್ತು ಕರೂಷಕ ಮೊದಲಾದ ಸಮಸ್ತ ಭೂಪಾಲರೂ ಸರ್ವ ಪ್ರಕಾರವಾಗಿ ಉಜ್ಜುಗಿಸಿ, ಬಹಳ ಸಂಖ್ಯೆಯ ವೀರ ಪುರುಷರನ್ನು ಕೂಡಿಕೊಂಡು ಒಕ್ಕಟ್ಟನಿಂದಿರಲು, ಅವರಲ್ಲಿ ಚೇದಿರಾಜನ ಮಗನು ಸೂರ್ಯನಂತೆ ಪ್ರತಾಪಶಾಲಿಯೂ ಶ್ರೇಷ್ಠ ಧನುರ್ಧರನೂ ಮತ್ತು ಅಜೇಯನಾದ ಯೋದ್ಧನೂ ಆಗಿದ್ದನು. ಭಗವಾನ್ ಕೃಷ್ಣನು ಕ್ಷಣಕಾಲದಲ್ಲಿ ಅವರನ್ನು ಸೋಲಿಸಿ ಕ್ಷತ್ರಿಯ ಸಮೂಹದ ಉತ್ಸಾಹವನ್ನು ಭಂಗಪಡಿಸಿದನು. ಮತ್ತು ಕರೂಷಕರಾಜನ ಯಜಮಾನಿಕೆ ಯಲ್ಲಿ ರಾಜನ್ಯರು—ಶಿಶುಪಾಲನ ಸನ್ಮಾನವನ್ನು ಹೆಚ್ಚಿಸುತ್ತಿದ್ದವರೆಲ್ಲರೂ ಸಿಂಹಸ್ವರೂಪನಾದ ಕೃಷ್ಣನು ರಥಾರೂಢನಾದದ್ದನ್ನು ಕಂಡು ಚೇದಿಪತಿ ಯನ್ನು ಬಿಟ್ಟು ಕ್ಷುದ್ರಮೃಗಗಳಂತೆ ಪಲಾಯನಮಾಡಲು, ಅವನು

ಅವಲೀಲಾಕ್ರಮದಲ್ಲಿ ಶಿಶುಪಾಲನ ಪ್ರಾಣಸಂಹಾರಪೂರ್ವಕವಾಗಿ ಪಾಂಡವರ ಯಶಸ್ಸನ್ನೂ ಮಾನವನ್ನೂ ಅಭಿವೃದ್ಧಿಯನ್ನೈದಿಸಿದನು."

ಇಲ್ಲಂತೂ ಚಕ್ರದ ಸಮಾಚಾರವೇ ಇಲ್ಲ. ಕೃಷ್ಣನು ರಥಾರೂಢನಾಗಿ ಯಥಾರೀತಿಯಾಗಿ ಮನುಷ್ಯ ಯುದ್ಧದಲ್ಲಿ ಪ್ರವರ್ತಿಸಿರುವನು ಮತ್ತು ಅವನ ಹಿಂಬಾಲಕರನ್ನೂ ಸೋಲಿಸಿದನು. ಇಲ್ಲಿ ಒಂದೇ ಗ್ರಂಥದಲ್ಲಿ ಒಂದೇ ವಿಷಯ ಎರಡು ಪ್ರಕಾರವಾಗಿ ವರ್ಣಿತವಾಗಿದೆ. ಇವುಗಳಲ್ಲಿ ಒಂದು ನೈಜ, ಮತ್ತೊಂದು ಅನೈಸರ್ಗಿಕ. ಅನೈಸರ್ಗಿಕವಾದ್ದನ್ನು ಬಿಟ್ಟು ನೈಜವಾದ್ದನ್ನು ಐತಿಹಾಸಿಕವೆಂದು ಗ್ರಹಿಸುವುದೇ ಸರಿ. ಪುರಾಣೇತಿಹಾಸಗಳಲ್ಲಿ ಸತ್ಯವನ್ನು ಹುಡುಕುವವರು ಇದನ್ನು ಜ್ಞಾಪಕದಲ್ಲಿ ಇಟ್ಟಿರಬೇಕು. ಇಲ್ಲದೇಹೋದರೆ ಪರಿಶ್ರಮ ವಿಫಲವಾಗುವುದು.

ಶಿಶುಪಾಲ ವಧೆಯನ್ನು ನಾವು ಸಮಾಲೋಚಿಸಿದುದರಲ್ಲಿ ಅಲ್ಲಿನ ಘಟನೆಗಳ ಸ್ಥೂಲ ಐತಿಹಾಸಿಕ ತತ್ತ್ವ ನಮಗೆ ಹೀಗೆ ತೋರಿದೆ. ರಾಜಸೂಯ ಮಹಾಸಭೆಯಲ್ಲಿ ಸಮಸ್ತ ಕ್ಷತ್ರಿಯರಿಗಿಂತ ಕೃಷ್ಣನೇ ಶ್ರೇಷ್ಠನೆಂದು ಸ್ವೀಕೃತವಾಯಿತು. ಇದರಿಂದ ಶಿಶುಪಾಲ ಮೊದಲಾದ ಕೆಲವು ಕ್ಷತ್ರಿಯರು ರೋಷಗೊಂಡು ಯಜ್ಞವನ್ನು ಹಾಳುಮಾಡಲುಪಕ್ರಮಿಸಿದರು. ಕೃಷ್ಣನು ಅವರೊಡನೆ ಕಾದಿ ಸೋಲಿಸಿ ಶಿಶುಪಾಲನನ್ನು ಕೊಂದನು. ಆಮೇಲೆ ಯಜ್ಞವು ನಿರ್ವಿಘ್ನವಾಗಿ ಸಮಾಪ್ತಿಯಾಯಿತು.

ಇಲ್ಲಿ ನೋಡುವುದರಲ್ಲಿ ಕೃಷ್ಣನೊಬ್ಬನೇ ದ್ವೇಷದಿಂದ ತುಂಬಿದವನಾಗಿರುವನು. ಅರ್ಜುನಾದಿ ಯುದ್ಧಕ್ಷಮರಾದ ಪಾಂಡವರು ಇರಲು ಅವನು ಯಜ್ಞ ವಿಘ್ನಕಾರಿಗಳೊಡನೆ ಒಬ್ಬನೇ ಕಾದಿದುದೇಕೆ ? ರಾಜಸೂಯ ಯಾಗದ ಕಾರ್ಯಭಾರ ಕೃಷ್ಣನಿಗೆ ಒಪ್ಪಿಸಲ್ಪಟ್ಟಿದ್ದಿತೆಂಬುದನ್ನು ಪಾಠಕರು ಜ್ಞಾಪಕದಲ್ಲಿಟ್ಟುಕೊಂಡಿದ್ದರೆ ಉತ್ತರವು ದೊರೆಯುವುದು. ಯಜ್ಞ ಸಂರಕ್ಷಣ ಭಾರವು ಕೃಷ್ಣನಿಗೆ ಒಪ್ಪಿಸಲ್ಪಟ್ಟಿತ್ತೆಂದು ಮೊದಲೇ ಹೇಳಿರುವುದು. ಕಾರ್ಯಭಾರ ಯಾರಮೇಲೋ ಅದಕ್ಕೆ ತಕ್ಕ ಕೆಲಸವನ್ನು ಮಾಡುವುದು ಅವನ ಕರ್ತವ್ಯಕರ್ಮ. ತಾನು ಮಾಡಬೇಕಾದ ಕರ್ಮಸಾಧನೆಗಾಗಿಯೇ ಕೃಷ್ಣನು ಯುದ್ಧಕ್ಕೆ ಪ್ರವೇಶಮಾಡಿ ಶಿಶುಪಾಲನನ್ನು ಕೊಂದನು.

ಏಕಾದಶ ಪರಿಚ್ಛೇದ

ಪಾಂಡವರ ವನವಾಸ

ರಾಜಸೂಯ ಯಾಗವನ್ನು ಮುಗಿಸಿಕೊಂಡು ಕೃಷ್ಣನು ದ್ವಾರಕಿಗೆ ಹಿಂದಿರುಗಿದನು. ಸಭಾಪರ್ವದಲ್ಲಿ ಇನ್ನಿವನು ಸಿಕ್ಕುವುದಿಲ್ಲ. ಆದರೆ ಒಂದು ಸ್ಥಳದಲ್ಲಿ ಮಾತ್ರ ಇವನ ಹೆಸರು ಇರುವುದು.

ದ್ಯೂತದಲ್ಲಿ ಯುಧಿಷ್ಠಿರನು ದ್ರೌಪದಿಯನ್ನು ಸೋತನು. ಇದಾದ ಮೇಲೆ ದ್ರೌಪದಿಯ ಮುಡಿಯನ್ನು ಹಿಡಿದು ಎಳೆಯುವಿಕೆ ಮತ್ತು ಸಭಾ ಮಧ್ಯದಲ್ಲಿ ವಸ್ತ್ರಾಪಹರಣ. ಮಹಾಭಾರತದಲ್ಲಿ ಈ ಭಾಗದಂತಹ ಕಾವ್ಯಾಂಶದ ಉತ್ಕೃಷ್ಟ ರಚನೆ ಜಗತ್ತಿನ ಸಾಹಿತ್ಯದಲ್ಲಿ ಅತಿ ದುರ್ಲಭ. ಆದರೆ ನಾವು ಕಾವ್ಯವನ್ನು ಸಮಾಲೋಚಿಸುತ್ತಿಲ್ಲ. ಐತಿಹಾಸಿಕ ಮೂಲ್ಯ ಉಂಟೇ ಇಲ್ಲವೇ ಎಂಬುದನ್ನು ಪರೀಕ್ಷಿಸಬೇಕು. ದುಶ್ಶಾಸನನು ಸಭಾ ಮಧ್ಯದಲ್ಲಿ ದ್ರೌಪದಿಯ ಸೀರೆಯನ್ನು ಸೆಳೆಯ ಹೋಗಲು ನಿರುಪಾಯಳಾದ ದ್ರೌಪದಿಯು ಕೃಷ್ಣನನ್ನು ಮನಸ್ಸಿನಲ್ಲೇ ಧ್ಯಾನಿಸಿದಳು. ಆ ಅಂಶವನ್ನು ಇಲ್ಲಿ ಎತ್ತಿರುವೆವು—

ಗೋವಿಂದ ದ್ವಾರಕಾವಾಸಿನ್ ಕೃಷ್ಣ ಗೋಪೀಜನಪ್ರಿಯ

ಮತ್ತು, ಈ ಸಂಬಂಧದಲ್ಲಿ ನಾವು ಹೇಳಬೇಕಾದುದನ್ನು ಮೊದಲೇ ತಿಳಿಸಿರುವೆವು.

ಆಮೇಲೆ ವನಪರ್ವ, ಇಲ್ಲಿ ಕೃಷ್ಣನು ಮೂರಾವರ್ತಿ ಕಂಗಳಿಗೆ ಗೋಚರವಾಗುವನು. ಮೊದಲು ಪಾಂಡವರು ವನಕ್ಕೆ ಹೋದರೆಂದು ಕೇಳಿ ವೃಷ್ಣಿಭೋಜರೆಲ್ಲರೂ ಅವರನ್ನು ನೋಡಲು ಬಂದಿದ್ದರು. ಸಂಗಡ ಕೃಷ್ಣನೂ ಇದ್ದನು. ಆದರೆ ಈ ಅಂಶದಲ್ಲಿ ವರ್ಣಿಸಿರುವ ವೃತ್ತಾಂತ ಮಹಾಭಾರತದ ಮೊದಲ ಸ್ತರದ್ದಲ್ಲ, ಎರಡನೆಯ ಸ್ತರದ್ದೂ ಅಲ್ಲ, ರಚನೆ ಯಲ್ಲಿ ಸಾದೃಶ್ಯ ಕೊಂಚವೂ ಇಲ್ಲ. ಚರಿತ್ರಗತವಾದ ಸಂಗತಿ ಕೊಂಚವೂ ಇಲ್ಲ. ಕೃಷ್ಣನು ಇನ್ನೆಲ್ಲಿಯೂ ಕೋಪಗೊಂಡದ್ದು ಕಂಡುಬರುವುದಿಲ್ಲ. ಆದರೆ ಇಲ್ಲಿ ಯುಧಿಷ್ಠಿರನನ್ನು ಕಂಡೊಡನೆಯೇ ಕೃಷ್ಣನು ಚಿಟಗುಟ್ಟಿ ಕೆಂಪಾದನು. ಕಾರಣವೇನೂ ಇಲ್ಲ. ಶತ್ರುವಾರೂ ಇರಲಿಲ್ಲ. ಯಾರೂ

ಏನೂ ಅನ್ನಲೂ ಇಲ್ಲ; ಕೇವಲ ದುರ್ಯೋಧನ ಮೊದಲಾದವರನ್ನು ಕೊಂದುಬಿಡಬೇಕು. ಇದಕ್ಕಾಗಿಯೇ ಇಷ್ಟು ಕೋಪ. ಯುಧಿಷ್ಠಿರನು ಬಲುಬಗೆಯ ಸ್ತುತಿ ನುತಿ ವಿನುತಿಗಳನ್ನು ಮಾಡಿ ಅವನನ್ನು ತಡೆದನು. ಮಹಾಭಾರತ ಯುದ್ಧದಲ್ಲಿ ಅಸ್ತ್ರಧಾರಣವನ್ನು ಮಾಡಲಾರನೆಂಬ ಮಾತು ಗಳನ್ನು ಬರೆದ ಕವಿಯು ಈ ಮಾತುಗಳನ್ನು ಖಂಡಿತವಾಗಿಯೂ ಬರೆದಿರಲಾರನು. ಇದು ಖಂಡಿತ. ಆಮೇಲೆ ಈಗಿನ ಕಾಲದ ಹೋಕೆ ಗಾರರಂತೆ "ನಾನಿದ್ದಿದ್ದರೆ ಇಷ್ಟಕ್ಕೆ ಬರುತ್ತಿರಲಿಲ್ಲ. ನಾನು ಮನೆಯಲ್ಲಿರಲಿಲ್ಲ ಮಾಡುವುದೇನು ?" ಎಂದು ಕೃಷ್ಣನು ಕುಳಿತುಬಿಟ್ಟನು. ಆಗ ಯುಧಿಷ್ಠಿರನು ಕೃಷ್ಣನು ಎಲ್ಲಿಗೆ ಹೋಗಿದ್ದನೆಂದು ಪತ್ತೆ ಹಚ್ಚುವುದಕ್ಕೆ ಹೋಗಲು ಸಾಲ್ವವಧೆಯ ಮಾತು ಬಂತು. ಸಾಲ್ವನ ಸಂಗಡ ಯುದ್ಧ ಕೂಡಿತ್ತೆಂದು ಕೃಷ್ಣನು ಹೇಳತೊಡಗಿದನು. ಇದೊಂದು ಅದ್ಭುತ ವ್ಯಾಪಾರ. ಇವನ ರಾಜಧಾನಿ ಸೋಭಗಿರಿ. ಈ ಪಟ್ಟಣ ಆಕಾಶದಲ್ಲಿ ಹಾರಾಡುತ್ತಿರ ತಕ್ಕುದು; ಸಾಲ್ವನು ಅಲ್ಲಿದ್ದುಕೊಂಡು ಯುದ್ಧಕ್ಕೆ ತೊಡಗುವನು. ಈ ಅವಸ್ಥೆಯಲ್ಲಿ ಕೃಷ್ಣನು ಪ್ರತಿ ಯುದ್ಧವನ್ನು ಕೊಡಬೇಕಾಯಿತು. ಯುದ್ಧ ಸಮಯದಲ್ಲಿ ಕೃಷ್ಣನು ಯಥೇಚ್ಛ ರೋದನಗೊಳ್ಳಬೇಕಾಯಿತು. ಸಾಲ್ವನು ಮಾಯಾ ವಾಸುದೇವನೊಬ್ಬನನ್ನು ನಿರ್ಮಿಸಿ ಕೃಷ್ಣನ ಸಮ್ಮುಖದಲ್ಲಿ ಅವನನ್ನು ಕೊಂದನು. ಇದನ್ನು ನೋಡಿ ಕೃಷ್ಣನು ಅತ್ತು ಮೂರ್ಛಿತ ನಾದನು. ಇದು ಜಗದೀಶ್ವರನ ಚಿತ್ರವೂ ಅಲ್ಲ; ಮಾನುಷಿಕ ಚಿತ್ರವೂ ಅಲ್ಲ. ಅನುಕ್ರಮಣಿಕಾಧ್ಯಾಯದಲ್ಲಿಯೂ, ಪರ್ವಸಂಗ್ರಹಾಧ್ಯಾಯ ದಲ್ಲಿಯೂ ಇದರ ಸೂಚನೆಯೇ ಇಲ್ಲ. ಪಾಠಕರಾರೂ ಈ ಉಪನ್ಯಾಸ ಗಳನ್ನು ಸಮಾಲೋಚಿಸಬೇಕೆಂದು ಬಯಸಲಾರರು.

ಆಮೇಲೆ ದುರ್ವಾಸರು ಶಿಷ್ಯರೊಡಗೂಡಿ ಮಾಡಿದ ಭೋಜನ ಅತಿಯಾದ ಅನೈಸರ್ಗಿಕವಾದುದು. ಅನುಕ್ರಮಣಿಕಾಧ್ಯಾಯದಲ್ಲಿ ಇದು ಇದ್ದರೂ ಇದರಲ್ಲಿ ಐತಿಹಾಸಿಕ ಬೆಲೆಯೇನೂ ಇಲ್ಲ. ಅದು ಸಮಾ ಲೋಚನೆಗೆ ಯೋಗ್ಯವಲ್ಲ.

ಇದಾದ ಮೇಲೆ ವನಪರ್ವದ ಕೊನೆಕೊನೆಯಲ್ಲಿ ಮಾರ್ಕಂಡೇಯ ಸಮಸ್ಯಾ ಪರ್ವಾಧ್ಯಾಯದಲ್ಲಿ ಮತ್ತೆ ಕೃಷ್ಣನು ಕಂಡುಬರುವನು.

ಪಾಂಡವರು ಕಾಮ್ಯಕ ವನಕ್ಕೆ ಬಂದಿರುವರೆಂದು ಕೇಳಿ ನೋಡಿಕೊಂಡು ಹೋಗುವುದಕ್ಕಾಗಿ ಕೃಷ್ಣನು ಬಂದನು. ಈ ಸಲ ಒಂಟಿಯಾಗಿರಲಿಲ್ಲ. ಚಿಕ್ಕ ರಾಣಿವಾಸದವರ ಸಂಗಡ ಬಂದನು. ಮಾರ್ಕಂಡೇಯ ಸಮಸ್ಯಾ ಪರ್ವಾಧ್ಯಾಯು ಒಂದು ದೊಡ್ಡ ಗ್ರಂಥವೆಂದರೂ ಅನ್ನಬಹುದು. ಮಹಾಭಾರತದೊಡನೆ ಇದಕ್ಕೆ ಸಂಬಂಧವುಂಟೆಂಬುದಕ್ಕೆ ಇದರಲ್ಲಿ ಆಧಾರ ವೇನೂ ಇಲ್ಲ. ಪ್ರಕ್ಷಿಪ್ತವೆಂದೇ ತೋರುವುದು. ಪರ್ವಸಂಗ್ರಹಾಧ್ಯಾಯ ದಲ್ಲಿ ಮಾರ್ಕಂಡೇಯ ಸಮಸ್ಯಾಪರ್ವಾಧ್ಯಾಯುವಿದ್ದರೂ ಅನುಕ್ರಮಣಿಕಾ ಧ್ಯಾಯದಲ್ಲಿ ಇಲ್ಲ. ಮಹಾಭಾರತದ ಪ್ರಥಮ ಮತ್ತು ದ್ವಿತೀಯಸ್ತರ ದೊಡನೆ ಇದಕ್ಕೆ ಯಾವ ಸಾದೃಶ್ಯವೂ ಇಲ್ಲ. ಆದರೆ ಇದು ಮೌಲಿಕ ಮಹಾಭಾರತದ ಅಂಶ ಹೌದೇ ಅಲ್ಲವೇ ಎಂಬ ವಿಚಾರದಿಂದ ಅಷ್ಟೇನೂ ಪ್ರಯೋಜನವೂ ಇಲ್ಲ. ಏಕೆಂದರೆ, ಕೃಷ್ಣನು ಇಲ್ಲಿ ಏನೂ ಮಾಡಿಲ್ಲ. ಬಂದು ಯುಧಿಷ್ಠಿರ ದ್ರೌಪದೀ ಮುಂತಾದವರಿಗೆ ಕೆಲವು ಸವಿಮಾತು ಗಳನ್ನು ಹೇಳಿ ಉತ್ತರಗಳನ್ನು ಹೊಂದಿದ ಬಳಿಕ ಎಲ್ಲರೂ ಕೂಡಿ ಋಷಿವರ್ಯರ ಆಶ್ಚರ್ಯಕರವಾದ ಕಥೆಗಳನ್ನು ಕೇಳತೊಡಗಿದರು.

ಮಾರ್ಕಂಡೇಯರ ಕಥೆಗಳಾದ ಬಳಿಕ ಸತ್ಯಭಾಮಾ ದ್ರೌಪದಿಯರು ಗಳ ಸಂಭಾಷಣೆ. ಪರ್ವಸಂಗ್ರಹಾಧ್ಯಾಯದಲ್ಲಿ ದ್ರೌಪದೀ ಸತ್ಯಭಾಮೆಯರ ಸಂವಾದವು ಎಣಿಸಲ್ಪಟ್ಟಿದ್ದರೂ ಅನುಕ್ರಮಣಿಕಾಧ್ಯಾಯದಲ್ಲಿ ಇದರ ಪ್ರಸಂಗವೇ ಇಲ್ಲ. ಇದು ಪ್ರಕ್ಷಿಪ್ತವೆಂಬುದನ್ನು ಮೊದಲೇ ತಿಳಿಸಿರುವೆನು.

ಆಮೇಲೆ ವಿರಾಟಪರ್ವ. ಇಲ್ಲಿ ಕೃಷ್ಣನು ಕಾಣುವುದಿಲ್ಲ. ಕೇವಲ ಕೊನೆಯಲ್ಲಿ ಉತ್ತರೆಯ ವಿವಾಹಕ್ಕೆ ಬಂದನು. ಆಗ ನಡೆದ ಕಥಾ ವಾರ್ತೆಗಳೆಲ್ಲವೂ ಉದ್ಯೋಗ ಪರ್ವಕ್ಕೆ ಸೇರಿದವು. ಉದ್ಯೋಗಪರ್ವದಲ್ಲಿ ಕೃಷ್ಣನ ವಿಷಯವು ಹೇರಳವಾಗಿದೆ. ಕ್ರಮಶಃ ಸಮಾಲೋಚನೆಯನ್ನು ಮಾಡುವೆನು.

—ಚತುರ್ಥ ಖಂಡ ಸಂಪೂರ್ಣ—

ಪಂಚಮ ಖಂಡ

ಉಪಪ್ಲಾವ್ಯ

ಸರ್ವಭೂತಾತ್ಮ ಭೂತಾಯ ಭೂತಾದಿ ನಿಧನಾಯ ಚ ।
ಅಕ್ರೋಧ ದ್ರೋಹ ಮೋಹಾಯ ತಸ್ಮೈ ಶಾಂತಾತ್ಮನೇ ನಮಃ ॥

ಶಾಂತಿಪರ್ವ, ೪೭ನೆಯ ಅಧ್ಯಾಯ

ಪ್ರಥಮ ಪರಿಚ್ಛೇದ

ಮಹಾಭಾರತ ಯುದ್ಧಕ್ಕೆ ಸೈನ್ಯವನ್ನೊದಗಿಸುವಿಕೆ

ಈಗ ಉದ್ಯೋಗಪರ್ವವನ್ನು ಸಮಾಲೋಚಿಸುವೆವು. ಸಮಾಜವಲ್ಲಿ ಅಪರಾಧಿಯಿದ್ದೇ ಇರುವನು. ಮನುಷ್ಯರು ಒಬ್ಬರ ಮೇಲೊಬ್ಬರು ಅಪರಾಧವನ್ನು ಯಾವಾಗಲೂ ಆರೋಪಿಸುತ್ತಲೇ ಇರುವರು. ಈ ಅಪರಾಧವನ್ನು ದಮನಮಾಡು(ತಡೆಯು)ವುದು ಒಂದು ಮುಖ್ಯವಾದ ಕರ್ತವ್ಯ. ರಾಜನೀತಿ (ಲೆಜಿಸ್ಲೇಷನ್), ರಾಜದಂಡ (ಕ್ರಿಮಿನಲ್ ಲಾ), ವ್ಯವಸ್ಥಾಶಾಸ್ತ್ರ (ಎವಿಡೆನ್ಸ್ ಆಕ್ಟು), ಧರ್ಮಶಾಸ್ತ್ರ, ಅಯಿನು (ಕಾನೂನು), ಅದಾಲತ್ತು (ಕೋರ್ಟು) — ಇವೆಲ್ಲ ಅಪರಾಧವನ್ನು ನಿಗ್ರಹಿಸುವುದೆಂಬ ಒಂದು ಮುಖ್ಯವಾದ ಉದ್ದೇಶವುಳ್ಳವಾಗಿವೆ.

ಅಪರಾಧಿಯ ವಿಷಯವಾಗಿ ನಡವಳಿಕೆ ಹೇಗಿರಬೇಕು ಎಂಬ ವಿಷಯವು ನೀತಿಶಾಸ್ತ್ರದಲ್ಲಿ ಎರಡು ಬಗೆಯಾಗಿರುವುದು: ದಂಡನೆಯಿಂದ (ಬಲಪ್ರಯೋಗದಿಂದ) ದೋಷವನ್ನು ಅಡಗಿಸುವುದೊಂದು ರೀತಿ. ಅಪರಾಧವನ್ನು ಕ್ಷಮಿಸಿಕೊಂಡು ಬರುವುದು ಒಂದು ರೀತಿ. ಬಲ ಮತ್ತು ಕ್ಷಮೆ ಇವು ಪರಸ್ಪರ ವಿರೋಧಭಾವವುಳ್ಳವು. ಆದುದರಿಂದ ಇವೆರಡನ್ನೂ ಏಕತ್ರ ಸ್ವೀಕರಿಸುವುದಕ್ಕೂ, ಅಥವಾ ಒಂದನ್ನು ಸ್ವೀಕರಿಸಿ ಮತ್ತೊಂದನ್ನು ತಳ್ಳಿಬಿಡುವುದಕ್ಕೂ ಆಗದು. ಅಪರಾಧಗಳನ್ನೆಲ್ಲ

ಕ್ಷಮಿಸುತ್ತ ಬಂದರೆ ಸಮಾಜವು ಧ್ವಂಸವಾಗುವುದು. ಅಪರಾಧಗಳೊಂದನ್ನೂ ಬಿಡದೆ ದಂಡಿಸುವುದಾದರೂ ಮನುಷ್ಯನು ಪಶುವಾಗುವನು. ಆದುದರಿಂದ ಈ ಬಲ ಮತ್ತು ಕ್ಷಮೆ ಇವೆರಡರ ಸಾಮಂಜಸ್ಯವೇ ನೀತಿಶಾಸ್ತ್ರದಲ್ಲಿ ಅತಿಕಠಿನವಾದ ತತ್ತ್ವವಾಗಿ ನೆಲಸಿರುವುದು. ಸುಸಭ್ಯರೆಂದೆಂದುಕೊಂಡಿರುವ ಆಧುನಿಕ ಯುರೋಪಿಯನ್ನರೂ ಕೂಡ ಇವುಗಳ ಸಾಮಂಜಸ್ಯವನ್ನು ಇಂದಿಗೂ ಪಡೆಯಲಾರದವರಾಗಿದ್ದಾರೆ. ಕ್ರೈಸ್ತಧರ್ಮವು ಅಪರಾಧಿಗಳನ್ನೆಲ್ಲ ಕ್ಷಮಿಸುವುದೆಂತಲೂ ಅವರ ರಾಜನೀತಿ ಅಪರಾಧಿಗಳನ್ನೆಲ್ಲ ದಂಡಿಸತಕ್ಕುದೆಂತಲೂ ಬಲವಂತ ಮಾಡುತ್ತಲಿವೆ. ಯೂರೋಪಿನಲ್ಲಿ ಧರ್ಮಕ್ಕಿಂತಲೂ ರಾಜನೀತಿಯೇ ಬಲವತ್ತರವಾದುದು. ಆದುದರಿಂದ ಸರಿಸುಮಾರಾಗಿ ಯುರೋಪಿನಲ್ಲಿ ಕ್ಷಮೆಯೆಂಬುದು ಲೋಪವೇ ಆಗಿ ಬಲವು ಪ್ರಬಲವಾಗಿ ಆರ್ಭಟಿಸುತ್ತಲಿದೆ.

ಬಲ ಮತ್ತು ಕ್ಷಮೆಯ ಸಾಮಂಜಸ್ಯ ಈ ಉದ್ಯೋಗ ಪರ್ವದ ಪ್ರಧಾನ ತತ್ತ್ವ. ಶ್ರೀ ಕೃಷ್ಣನೇ ಇದರ ಮೀಮಾಂಸೆಗೆ ತೊಡಗಿರುವನು. ಮುಖ್ಯವಾಗಿ ಶ್ರೀ ಕೃಷ್ಣನೇ ಈ ಪರ್ವದ ನಾಯಕನು. ಬಲ ಮತ್ತು ಕ್ಷಮೆಗಳನ್ನು ಬಳಕೆಯಲ್ಲಿ ತರುವುದಕ್ಕೆ ಅವನು ಎಂತಹ ಆದರ್ಶವನ್ನು ಕಾರ್ಯತಃ ಪ್ರಕಾಶಪಡಿಸಿರುವನೋ ಅದನ್ನು ನಾವು ಮೊದಲೇ ನೋಡಿರುವೆವು. ತನಗೆ ಕೆಡಕನ್ನು ಮಾಡಿದವರನ್ನು ಮಾತ್ರ ಕೃಷ್ಣನು ಕ್ಷಮಿಸುವನು. ಲೋಕ(ಜನಸಮುದಾಯ)ಕ್ಕೆ ಯಾವನು ಕೆಡುಕನ್ನುಂಟುಮಾಡುವನೋ ಅಂಥವನಮೇಲೆ ಬಲಪ್ರಯೋಗವನ್ನು ಮಾಡಿ ಕೃಷ್ಣನು ದಂಡಿಸುವನು. ಆದರೆ ಹಲವೆಡೆಗಳಲ್ಲಿ ಈ ವಿಧಿಯನ್ನನುಸರಿಸಿ ನಡೆದುಕೊಳ್ಳುವುದಕ್ಕಾಗುವುದಿಲ್ಲ. ಅಲ್ಲದೆ ಹಲವುವೇಳೆ ಬಲವನ್ನು ಪ್ರಯೋಗಿಸಬೇಕೆ, ಕ್ಷಮೆಯನ್ನು ತೋರಿಸಬೇಕೆ ಎಂಬ ಸಮಸ್ಯೆಯುಂಟಾಗಿ ಇದನ್ನು ವ್ಯವಸ್ಥೆಮಾಡುವುದು ಕಡುಕಷ್ಟವಾಗಿ ತೋರುವುದು. ಈಗ ನೋಡಿ — ನನ್ನ ಪದಾರ್ಥ ಕಳವಾಗಿದೆ. ಪ್ರತಿಯೊಬ್ಬನೂ ತನ್ನ ಸ್ವತ್ತನ್ನುಳಿಸಿಕೊಳ್ಳುವುದು ಸಾಮಾಜಿಕ ಧರ್ಮ. ಪ್ರತಿಯೊಬ್ಬನೂ ತನ್ನ ಸ್ವತ್ತನ್ನುದ್ಧರಿಸಿಕೊಳ್ಳಲೊಲ್ಲದವನಾದರೆ ಸಮಾಜ ಬೇಗನೆ ಧ್ವಂಸವಾಗುವುದು. ಆದುದರಿಂದ ಕಳವಾದ ಆಸ್ತಿಯನ್ನು ಬರಮಾಡಿಕೊಳ್ಳಲೇ ಬೇಕು. ಈಗಿನ ಕಾಲದಲ್ಲಿ ಸಿವಿಲ್ ಮತ್ತು

ಕ್ರಿಮಿನಲ್ ಕೋರ್ಟುಗಳ ಸಹಾಯದಿಂದಲೇನೋ ಸಭ್ಯ ಸಮಾಜದಲ್ಲಿ ನಾವು ನಮ್ಮ ನಮ್ಮ ಸ್ವತ್ತನ್ನುದ್ಧರಿಸಿಕೊಳ್ಳಬಹುದು. ಇವುಗಳ ಸಹಾಯ ದಿಂದ ಸಿಕ್ಕಲಾಗದ್ದಕ್ಕೆ ನಾವೇನು ಮಾಡಬೇಕು ? ಬಲಪ್ರಯೋಗವೇ! ಕ್ಷಮೆ, ಬಲ ಇವುಗಳ ಸಾಮಂಜಸ್ಯವನ್ನು ಕುರಿತು ತರ್ಕವಿತರ್ಕಗಳೆಷ್ಟೋ ಉಂಟಾಗಿರುವುವು. ಸಾಮಾನ್ಯವಾಗಿ ಕಾರ್ಯತಃ ಬಲವಂತನು ಬಲ ಪ್ರಯೋಗವನ್ನೇ ಮಾಡಿ ಕಾರ್ಯವನ್ನು ಸಾಧಿಸಿಕೊಳ್ಳುವನು. ದುರ್ಬಲನು ಕ್ಷಮೆಗಾಗಿ ಮೊರೆಯಿಡುವನು; ಆದರೆ ಬಲವಂತನಾಗಿ ಕ್ಷಮೆಯಿಂದ ರಂಜಿತನಾದವನು ಎಂದರೆ, ಆದರ್ಶ ಪುರುಷನು ಹೇಗೆ ನಡೆದುಕೊಳ್ಳ ಬೇಕು? ಇದರ ಮೀಮಾಂಸೆ ಉದ್ಯೋಗಪರ್ವದ ಆರಂಭದಲ್ಲಿ ಶ್ರೀ ಕೃಷ್ಣ ವಾಕ್ಯದಲ್ಲಿ ದೊರೆಯುವುದು.

"ಪಾಂಡವರು ಪಗಡೆಯ ಆಟದಲ್ಲಿ ಶಕುನಿಗೆ ಸೋತು ತಮ್ಮ ರಾಜ್ಯ ವನ್ನು ದುರ್ಯೋಧನನಿಗೆ ಒಪ್ಪಿಸಿ ಹನ್ನೆರಡುವರ್ಷ ವನವಾಸವನ್ನೂ, ಬಳಿಕ ಒಂದು ವರ್ಷ ಅಜ್ಞಾತವಾಸವನ್ನೂ ಮಾಡಬೇಕು. ಅಜ್ಞಾತವಾಸದಲ್ಲಿ ಇವರ ಗುರುತನ್ನು ಹಿಡಿದರೆ ಪುನಃ ಹಿಂದಿನಂತೆ ನಡೆದುಕೊಳ್ಳಬೇಕು. ಗುರುತನ್ನು ಹಿಡಿಯದೆಹೋದರೆ ಪುನಃ ದುರ್ಯೋಧನನಿಂದ ತಮ್ಮ ರಾಜ್ಯ ವನ್ನು ಪಡೆಯಲುಳ್ಳವರು" ಎಂದು ಗೊತ್ತಾಗಿತ್ತು. ಆ ಪ್ರಕಾರ ಹನ್ನೆರಡು ವರ್ಷ ವನವಾಸವನ್ನೂ, ವಿರಾಟ ಪಟ್ಟಣದಲ್ಲಿ ಒಂದು ವರ್ಷ ಅಜ್ಞಾತವಾಸವನ್ನೂ ಮಾಡಿದರು. ಅಜ್ಞಾತವಾಸ ಕಾಲದಲ್ಲಿ ಇವರನ್ನು ಯಾರೂ ಗುರುತಿಸಲಿಲ್ಲ. ಮೊದಲು ಗೊತ್ತಾಗಿದ್ದ ಪ್ರಕಾರ ತಮ್ಮ ರಾಜ್ಯವನ್ನು ತಾವು ಪಡೆಯಬೇಕಾದದ್ದು ನ್ಯಾಯವೂ ಧರ್ಮವೂ ಆಗಿತ್ತು. ರಾಜ್ಯವನ್ನು ಕೌರವನು ಕೊಡಲೊಲ್ಲನು. ಕಾಳಗವನ್ನು ಮಾಡಿ ಕೌರವನನ್ನು ಕೊಂದು ತಮ್ಮ ರಾಜ್ಯವನ್ನು ತಾವು ಪಡೆಯಬೇಕಾದದ್ದು ಕರ್ತವ್ಯವಲ್ಲವೇ ?

ಅಜ್ಞಾತಕಾಲದ ಅವಧಿ ಮುಗಿದ ಬಳಿಕ ಪಾಂಡವರು ವಿರಾಟ ರಾಜ್ಯದಲ್ಲಿ ತೋರ್ಪಡಿಸಿಕೊಂಡರು. ವಿರಾಟರಾಯನು ಅವರನ್ನು ಗುರುತಿಸಿ ಪರಮಸಂತೋಷದಿಂದ ತನ್ನ ಪುತ್ರಿ ಉತ್ತರೆಯನ್ನು ಅರ್ಜುನ ಪುತ್ರ ಅಭಿಮನ್ಯುವಿಗೆ ಕೊಟ್ಟು ವಿವಾಹಮಾಡಿದನು. ಈ ವಿವಾಹಕ್ಕೆ

ಅಭಿಮನ್ಯುವಿನ ಸೋದರ ಮಾವಂದಿರಾದ ಕೃಷ್ಣ ಬಲರಾಮರೂ, ಇತರ ಯಾದವರೂ, ಪಾಂಡವರ ಮಾವನಾದ ದ್ರುಪದನೂ, ಇತರ ನೆಂಟರಿಷ್ಟರೂ ಬಂದಿದ್ದರು. ಇವರೆಲ್ಲರೂ ವಿರಾಟನ ಓಲಗದ ಹಜಾರದಲ್ಲಿ ನೆರೆದಿರುವಾಗ ಪಾಂಡವರು ತಮ್ಮ ರಾಜ್ಯವನ್ನು ಪುನಃ ಪಡೆದುಕೊಳ್ಳುವ ಪ್ರಸಂಗ ಚರ್ಚೆಗೆ ಬಂತು. ಎಲ್ಲರೂ "ಮೌನಮುದ್ರೆಯಿಂದ ಕೃಷ್ಣನನ್ನು ನೋಡುತ್ತ ಲಿದ್ದರು." ಆಗ ಕೃಷ್ಣನು ಅವರೆಲ್ಲರನ್ನೂ ಉದ್ದೇಶಿಸಿ ಪ್ರಸಂಗವನ್ನು ಪ್ರಸ್ತಾಪಿಸಿ ಹೀಗೆಂದನು : "ಈಗ ಕೌರವರಿಗೂ ಪಾಂಡವರಿಗೂ ಯಾವುದು ಹಿತಕರ, ಧರ್ಮ, ಯಶಸ್ಕರ ಮತ್ತು ಉಪಯುಕ್ತ ಎಂಬುದನ್ನು ತಾವೆಲ್ಲರೂ ಆಲೋಚಿಸಬೇಕು."

ಮರಳಿ ರಾಜ್ಯವು ಸಿಕ್ಕುವುದು ಹೇಗೋ ಹಾಗೆ ಯತ್ನಮಾಡ ಬೇಕೆಂದು ಕೃಷ್ಣನು ಹೇಳಿಲ್ಲ. ಹಿತ, ಧರ್ಮ ಮತ್ತು ಯಶಸ್ಸುಗಳಿಂದ ಬೇರ್ಪಟ್ಟ ರಾಜ್ಯವು ಯಾರಿಗಾದರೂ ಬೇಕಾಗಬಹುದೆಂದು ಅವನು ವಿವೇಚಿಸಲಿಲ್ಲ. ಆದುದರಿಂದಲೇ ಪುನಃಪುನಃ ತಿಳಿಯಪಡಿಸಿರುವನು. "ಧರ್ಮರಾಜನಾದ ಯುಧಿಷ್ಠಿರನು ಅಧರ್ಮದಿಂದ ಬಂದ ಇಂದ್ರಪದವಿ ಯನ್ನಾದರೂ ಒಲ್ಲನು. ಧರ್ಮ ಮಾರ್ಗದಿಂದ ಬಂದ ಒಂದು ಗ್ರಾಮಾಧಿ ಪತ್ಯವಾದರೂ ಅದು ಇಂದ್ರಪದವಿಗಿಂತ ಉತ್ತಮವೆಂದು ಆಶಿಸುವವನು." ಆದರ್ಶ ಪುರುಷನು ಸಂನ್ಯಾಸಿಯಾದರೆ ನಡೆಯದು, ವಿಷಯಿಯಾಗಲೇ ಬೇಕು. ಇವನೇ ಇಲ್ಲಿಯ ಆದರ್ಶ. ಅಧರ್ಮದಿಂದ ಬಂದ ಇಂದ್ರಪದವಿ ಯನ್ನೂ ಒಲ್ಲೆ, ಧರ್ಮವಾಗಿ ಬರಬೇಕಾದ ರಾಜ್ಯದ ರಾಗಿಯಷ್ಟನ್ನಾದರೂ ವಂಚಕನಿಗೆ ಬಿಡೆ; ಬಿಟ್ಟರೆ ನಾನೊಬ್ಬನು ದುಃಖಕ್ಕೆ ಭಾಗಿಯಾಗದೆ ಇರಬಹುದು. ಆದರೆ ಸಮಾಜದ ತಿದ್ದುಪಡಿಯನ್ನು ಹಾಳುಮಾಡುವ ದಾರಿಯನ್ನು ತೋರಿದ ಪಾಪ ನನ್ನನ್ನು ತಾಗವೆ ಬಿಟ್ಟೀತೆ !

ಆಮೇಲೆ ಕೌರವರ ಲೋಭವನ್ನೂ, ಶಠತೆಯನ್ನೂ, ಯುಧಿಷ್ಠಿರನ ಧಾರ್ಮಿಕತೆಯನ್ನೂ ಮತ್ತು ಇವರಿವರ ಸಂಬಂಧವನ್ನೂ ಕೃಷ್ಣನು ವಿವೇಚಿಸಿ ಮುಂದೇನು ಮಾಡಬೇಕೆಂಬುದನ್ನು ಗೊತ್ತುಮಾಡುವಂತೆ ರಾಜಸಮೂಹ ವನ್ನು ಅನುರೋಧಿಸಿದನು. ಅಲ್ಲದೆ ಈ ವಿಷಯದಲ್ಲಿ ತನ್ನ ಅಭಿಪ್ರಾಯ ಹೀಗಿರುವುದೆಂದು ಹೇಳಿದನು :— "ಯುಧಿಷ್ಠಿರನಿಗೆ ದುರ್ಯೋಧನನು

ಅರ್ಧ ರಾಜ್ಯವನ್ನು ಬಿಟ್ಟು ಕೊಡುವಂತೆ ಸಂಧಿಮಾಡಬೇಕು. ಇದಕ್ಕಾಗಿ ಧರ್ಮವನ್ನು ಬಲ್ಲಂಥವರನ್ನು ದೌತ್ಯಕ್ಕಾಗಿ ಕಳುಹಬೇಕು." ಕೃಷ್ಣನ ಅಭಿಪ್ರಾಯವು ಯುದ್ಧವಲ್ಲ, ಸಂಧಿ. ಇವನು ಯುದ್ಧವಿಷಯದಲ್ಲಿ ಎಷ್ಟರ ಮಟ್ಟಿಗೆ ವಿಮುಖನಾಗಿದ್ದನೆಂದರೆ,- ಅರ್ಧ ರಾಜ್ಯ ಪ್ರಾಪ್ತಿ ಮಾತ್ರದಿಂದಲೇ ಸಂತುಷ್ಟನಾಗಿ ಸಂಧಿಗೆ ಪರಾಮರ್ಶವನ್ನು ಕೊಟ್ಟದ್ದೂ ಅಲ್ಲದೆ, ಯುದ್ಧವನ್ನು ಮಾಡಲೇಬೇಕಾಗಿ ಬಂದಾಗೂ ತಾನು ಅಸ್ತ್ರವನ್ನು ಧರಿಸಿ ಮನುಷ್ಯರಕ್ತದ ಹೊಳೆಯನ್ನು ಹೆಚ್ಚಿಸುವುದಿಲ್ಲವೆಂದು ಪ್ರತಿಜ್ಞೆಯನ್ನು ಸಹ ಮಾಡಿದನು.

ಇದಾದಮೇಲೆ ಬಲರಾಮನು ಕೃಷ್ಣನ ಅಭಿಪ್ರಾಯವನ್ನು ಒಪ್ಪಿ, ಜೂಜಾಟದಿಂದ ರಾಜ್ಯವನ್ನು ಹಾಳುಮಾಡಿಕೊಂಡ ಯುಧಿಷ್ಠಿರನ ಜೂಜಾಟವನ್ನು ತಿರಸ್ಕಾರಮಾಡಿ—ಸಂಧಿಯ ಮೂಲಕ ಬರುವ ಸ್ವತ್ತೇ ಶ್ರೇಯಸ್ಕರವಾದ್ದು; ಇದನ್ನು ಬಿಟ್ಟು ಕಡಿದಾಡಿ ಪಡೆದ ಸ್ವತ್ತು ಎಂದಿಗೂ ಸ್ವತ್ತಾಗಿ ಆಗಲಾರದು ಎಂದು ಬಲರಾಮನು ಒತ್ತಿ ಹೇಳಿದನು. ಇವನ ಮಾತನ್ನು ಬಂಗಾರದಲ್ಲಿ ಕೆತ್ತಿ ಯೂರೋಪಿಯನ್ನರ ಮನೆ ಮನೆಯಲ್ಲಿಯೂ ಇಡಿಸಿದರೆ ಮಾನವ ಸಾಮಾನ್ಯಕ್ಕೆ ಕೊಂಚ ಮಂಗಳವಾಗಬಹುದು.

ಬಲರಾಮನಾದ ಬಳಿಕ ಸಾತ್ಯಕಿ ಎದ್ದನು. ಆ ಕಾಲದಲ್ಲಿಯೂ ಪಾರ್ಲಿಮೆಂಟರಿ ಪ್ರೊಸೀಜರು (Parliamentary Procedure) ಇತ್ತೆಂಬುದನ್ನು ಪಾಠಕರೇ ನೋಡಲಿ. ಸಾತ್ಯಕಿ ಸ್ವಯಂ ಮಹಾಬಲಶಾಲಿಯಾದ ವೀರ, ಅಲ್ಲದೆ ಕೃಷ್ಣನ ಶಿಷ್ಯ. ಅಲ್ಲದೆ ಮಹಾಭಾರತ ಯುದ್ಧದಲ್ಲಿ ಪಾಂಡವರ ಪಕ್ಷದವನು. ವೀರರಲ್ಲಿ ಅರ್ಜುನ ಮತ್ತು ಅಭಿಮನ್ಯು ಇವರಾದಮೇಲೆ ಇವನ ಪ್ರಶಂಸೆಯೇ ಕಾಣಬರುವುದು. ಕೃಷ್ಣನು ಸಂಧಿಯ ಪ್ರಸ್ತಾಪವನ್ನು ಸೂಚಿಸಿದಾಗ ಯಾವ ಮಾತಾಡುವುದಕ್ಕೂ ಸಾಹಸವುಳ್ಳವನಾಗಲಿಲ್ಲ. ಬಲರಾಮನು ಯುಧಿಷ್ಠಿರನನ್ನು ಕುರಿತು ಆಡಿದ ಮಾತುಗಳನ್ನು ಕೇಳಿ ಸಾತ್ಯಕಿ ಸಿಟ್ಟಿನಿಂದ ಕೆಂಪಾದ ಕಣ್ಣುಗಳನ್ನುಳ್ಳವನಾಗಿ ಬಲರಾಮನನ್ನು ಕುರಿತು ಷಂಡ, ನೀಚ ಮುಂತಾದ ಸಣ್ಣ ಮಾತುಗಳಿಂದ ಅಪಮಾನಪಡಿಸಿ ಹೀಗೆ ಹೇಳಿದನು: "ಕೌರವರು ಪಾಂಡವರಿಗೆ ಅವರ

ಪಿತ್ರಾರ್ಜಿತವಾದ ರಾಜ್ಯವೆಲ್ಲವನ್ನೂ ಬಿಟ್ಟು ಕೊಡಲೇಬೇಕು. ಇಲ್ಲವಾದರೆ ಅವರನ್ನು ನಿರ್ಮೂಲಮಾಡುವುದೇ ಕರ್ತವ್ಯ."

ಇಷ್ಟಾದಮೇಲೆ ಹಿರಿಯನಾದ ದ್ರುಪದನು—ಸಾತ್ಯಕಿಯ ಅಭಿಪ್ರಾಯವನ್ನೇ ಅನುಮೋದಿಸಿ ಸೈನ್ಯವನ್ನು ಜಮಾಯಿಸಿಕೊಳ್ಳುವುದಕ್ಕಾಗಿ ರಾಜರುಗಳ ಬಳಿಗೆ ಮೊದಲು ದೂತರನ್ನು ಕಳುಹುವುದು ಕರ್ತವ್ಯ. ಕೌರವರಲ್ಲಿಗೆ ಸಂಧಿಗೊಪ್ಪುವರೋ ಇಲ್ಲವೋ ಎಂಬುದಕ್ಕೂ ದೂತರನ್ನಟ್ಟಿ ನೋಡೋಣ ಎಂದು ಅಭಿಪ್ರಾಯಪಟ್ಟನು.

ಕೊನೆಗೆ ಕೃಷ್ಣನು—ದ್ರುಪದನು ಹಿರಿಯನು; ಅಲ್ಲದೆ ಸಮೀಪ ಸಂಬಂಧಿ. ಆದುದರಿಂದ ಇವನ ಮಾತಿಗೆ ಸ್ಪಷ್ಟವಾಗಿ ಎದುರಭಿಪ್ರಾಯವನ್ನು ಹೇಳದೆ—"ಯುದ್ಧವು ನಡೆಯಲೇಬೇಕಾಗಿ ಬಂದರೆ ನಾನದಕ್ಕೆ ಬೆರೆಯಲಾರೆನು. ಏಕೆಂದರೆ, ಕುರುಪಾಂಡವರೀರ್ವರೂ ನಮಗೆ ಸಮಾನ ಬಂಧುಗಳು. ಇವರಲ್ಲಿ ಯಾರೂ ನಮ್ಮಲ್ಲಿ ಮರ್ಯಾದೆಯನ್ನು ಮೀರಿ ಅಲ್ಲದ್ದನ್ನು ನಡೆಯಿಸಿಲ್ಲ. ಅಲ್ಲದೆ ನಾವಿಲ್ಲಿಗೆ ಮದುವೆಯ ಔತನಕ್ಕೆಂದು ಕರೆಯಲ್ಪಟ್ಟು ಬಂದಿರುವೆವು. ಈಗ ವಿವಾಹ ಸಾಂಗವಾಗಿ ಮುಗಿದಿರುವುದು. ಇನ್ನು ನಾವೆಲ್ಲರೂ ಸಂತೋಷದಿಂದ ನಮ್ಮ ನಮ್ಮ ಮನೆಗಳನ್ನು ಕುರಿತು ಹಿಂದಿರುಗುವೆವು" ಎಂದನು. ಗುರುಜನಗಳ ವಿಷಯವಾಗಿ ಇದಕ್ಕಿಂತ ಹೆಚ್ಚಾಗಿ ಇನ್ನಾವ ತಿರಸ್ಕಾರವನ್ನು ಮಾಡುವುದಕ್ಕಾದೀತು ? ಕೃಷ್ಣನು ಹೋಗುವಾಗ—"ದುರ್ಯೋಧನನು ಸಂಧಿಗೆ ಒಪ್ಪದೆ ಹೋಗುವನಾದರೆ ಮೊದಲು ಇತರ ಎಲ್ಲರ ಬಳಿಗೂ ದೂತರನ್ನು ಕಳುಹಿಸಿ ಕೊನೆಗೆ ನಮ್ಮ ಬರುವಿಕೆಗಾಗಿ ದೂತನನ್ನಟ್ಟುವುದು." ಎಂದರೆ, ಈ ಯುದ್ಧಕ್ಕೆ ಬರಲು ಅಷ್ಟಾಗಿ ನಮಗೆ ಇಷ್ಟವೇನೂ ಇಲ್ಲ ಎಂದು ಹೇಳಿ ದ್ವಾರಕಿಯನ್ನು ಕುರಿತು ತೆರಳಿದನು.

ಯುದ್ಧವಾಗುವ ವಿಷಯದಲ್ಲಿ ಕೃಷ್ಣನಿಗೆ ಸ್ವಲ್ಪವೂ ಇಷ್ಟವಿಲ್ಲ. ಅರ್ಧ ರಾಜ್ಯವನ್ನು ಬಿಟ್ಟುಕೊಟ್ಟಾದರೂ ಸಂಧಿಯನ್ನು ಮಾಡಿಕೊಳ್ಳುವುದೆಂಬ ಸಲಹೆಯನ್ನು ಇವನು ಕೊಟ್ಟಿರುವನು. ಅಲ್ಲದೆ ಕೌರವ ಪಾಂಡವರೀರ್ವರೂ ಸಮಾನ ಸಂಬಂಧಿಗಳೆಂದು ಒಪ್ಪಿಕೊಂಡಿರುವನು. ಇಷ್ಟು ಮಾತ್ರವಲ್ಲದೆ ಇನ್ನೂ ಪ್ರಬಲ ಪ್ರಮಾಣಗಳು ಮುಂದೆ ದೊರೆಯುವುವು.

ಇತ್ತ ಕಡೆ ಎರಡು ಪಕ್ಷದವರೂ ಯುದ್ಧಕ್ಕೆ ಉದ್ಯುಗಿಸಲಾರಂಭಿಸಿದರು. ಸೇನೆಗಳು ಕೂಡ ತೊಡಗಿದುವು. ತನ್ನ ಪಕ್ಷವಾಗಿ ಯುದ್ಧಮಾಡುವಂತೆ ಕೃಷ್ಣನನ್ನೊಪ್ಪಿಸಬೇಕೆಂದು ಅರ್ಜುನನೇ ದ್ವಾರಕಿಗೆ ಬಂದನು. ದುರ್ಯೋಧನನೂ ಅದೇ ಅಭಿಪ್ರಾಯದಿಂದ ಅಲ್ಲಿಗೆ ಬಂದನು. ಹೀಗೆ ಇವರೀರ್ವರೂ ಒಂದೇ ಅಭಿಪ್ರಾಯದಿಂದ ಏಕಕಾಲದಲ್ಲಿ ಕೃಷ್ಣನ ಬಳಿಯನ್ನು ಸೇರಿದರು. ಮುಂದೆ ನಡೆದುದನ್ನು ಮಹಾಭಾರತದಿಂದಲೇ ಎತ್ತಿ ಬರೆದಿದ್ದೇನೆ.

"ವಾಸುದೇವನು ಮಲಗಿ ನಿದ್ರಿಸುತ್ತಿರುವಲ್ಲಿ ಮೊದಲು ರಾಜಾ ದುರ್ಯೋಧನನು ಬಂದು ಅವನ ತಲೆಯ ಹತ್ತಿರವಿದ್ದ ಶ್ರೇಷ್ಠವಾದ ಆಸನದಲ್ಲಿ ಕುಳಿತುಕೊಂಡನು. ಆಮೇಲೆ ಇಂದ್ರತನಯನು ಬಂದು ವಿನೀತನೂ ಅಂಜಲಿಬದ್ಧನೂ ಆಗಿ ಯಾದವಪತಿಯ ಪದ ಸಮೀಪದಲ್ಲಿ ಸಮಾಸೀನನಾದನು. ಆಮೇಲೆ ಶ್ರೀಕೃಷ್ಣನು ಎಚ್ಚರಿಕೆಯನ್ನು ಹೊಂದಿ ಮೊದಲು ಅರ್ಜುನನನ್ನೂ, ಆಮೇಲೆ ದುರ್ಯೋಧನನನ್ನೂ ಕಂಡು ಸ್ವಾಗತ ಪ್ರಶ್ನೆಗಳಿಂದ ಸತ್ಕರಿಸಿ ಬಂದ ಕಾರ್ಯವನ್ನು ವಿಚಾರಿಸಿದನು."

ದುರ್ಯೋಧನನು ಮುಗುಳ್ನಗೆಯಿಂದ ಹೀಗೆ ಹೇಳಿದನು:—"ಈಗ ಒದಗಿರುವ ಯುದ್ಧಕ್ಕೆ ತಮ್ಮ ಸಹಾಯವನ್ನು ಕೊಡಲೇಬೇಕು. ತಮ್ಮೊಡನೆ ನಮ್ಮೀರ್ವರಿಗೂ ಒಂದೇ ಬಗೆಯ ಸಂಬಂಧವೂ ಸ್ನೇಹವೂ ಇರುವಲ್ಲಿ ನಾನು ತಮ್ಮಲ್ಲಿಗೆ ಮೊದಲು ಬಂದೆನು. ಸಜ್ಜನರು ಮೊದಲು ಬಂದವರ ಪಕ್ಷವನ್ನು ವಹಿಸಲುಳ್ಳವರು. ತಾವು ಸಾಧುಶ್ರೇಷ್ಠರೂ ಮಾನನೀಯರೂ ಆಗಿರುವಿರಿ. ಆದುದರಿಂದ ಈಗ ಸದಾಚಾರವನ್ನು ಪರಿಪಾಲಿಸಬೇಕು."

ಇದಕ್ಕೆ ಉತ್ತರವಾಗಿ ಕೃಷ್ಣನು—"ತಾವು ಮೊದಲು ಬಂದಿರೆಂಬುದರಲ್ಲಿ ನನಗಾವ ಸಂಶಯವೂ ಇಲ್ಲ. ಆದರೂ ನನ್ನ ಕಣ್ಣಿಗೆ ಮೊದಲು ಕುಂತೀಕುಮಾರನೇ ಕಾಣಿಸಿದವನು. ಆದುದರಿಂದ ನಾನು ತಮ್ಮಿಬ್ಬರಿಗೂ ಸಹಾಯಮಾಡಲುಳ್ಳವನು. ಮೊದಲು ವಯಸ್ಸಿನಲ್ಲಿ ಕಮ್ಮಿಯಾದವರೇ ಆರಿಸಿಕೊಳ್ಳುವುದು ಪ್ರಸಿದ್ಧ. ಆದುದರಿಂದ, ಎಲೈ ಕೌಂತೇಯ (ಅರ್ಜುನ), ಮೊದಲು ನಿನಗೆ ಬೇಕಾದುದಾವುದು ಕೇಳು—'ನನ್ನ ಸಮಾನ

ಯೋದ್ಧರಾದ ನಾರಾಯಣರೆಂಬ ಅರ್ಬುದ ಸಂಖ್ಯೆಯ ಗೋಪರು ಒಂದು ಕಡೆ; ಸಮರ ಪರಾಙ್ಮುಖನಾದ ನಾನು ನಿರಸ್ತ್ರನಾಗಿ ಇನ್ನೊಂದು ಕಡೆ. ಇವೆರಡರಲ್ಲಿ ನಿನಗೆ ಬೇಕಾದುದನ್ನೊಪ್ಪಿಕೋ."

ಅರ್ಜುನನು ಅರಾತಿಮರ್ದನನಾದ ಜನಾರ್ದನನು ಸಮರ ಪರಾಙ್ಮುಖನೆಂದು ತಿಳಿದೂ ಅವನನ್ನೇ ವರಿಸಿದನು. ಆಗ ರಾಜಾ ದುರ್ಯೋಧನನು ಅರ್ಬುದ ನಾರಾಯಣೀ ಸೇನೆಯನ್ನು ಪಡೆದುಕೊಂಡು, ಕೃಷ್ಣನು ಸಮರ ಪರಾಙ್ಮುಖನೆಂದು ತಿಳಿದು ಅತ್ಯಂತ ಹರ್ಷಿತನಾಗಿ ಹೊರಟುಹೋದನು.

ಉದ್ಯೋಗ ಪರ್ವದ ಈ ಹಲವಂಶಗಳನ್ನು ಸಮಾಲೋಚಿಸಲು ಇಷ್ಟು ತಿಳಿದಂತೆಯಾಯಿತು :—

೧. ಧರ್ಮಾರ್ಥ ಸಂಯುಕ್ತವಾದ ತಂತಮ್ಮ ಅಧಿಕಾರವನ್ನು ಆರೂ ಬಿಟ್ಟುಕೊಡಬಾರದೆಂಬುದು ಕೃಷ್ಣನ ಮತ. ಆದರೂ ಅವನ ಅಭಿಪ್ರಾಯ ದಲ್ಲಿ ಬಲಕ್ಕಿಂತ ಕ್ಷಮೆಯೇ ಎಷ್ಟು ಶ್ರೇಯಸ್ಸಾದುದೆಂದರೆ,– ಬಲಪ್ರಯೋಗ ಕ್ಕಿಂತ ಅರ್ಧ ಅಧಿಕಾರವನ್ನಾದರೂ ಬಿಡುವುದೇ ಲೇಸು.

೨. ಕೃಷ್ಣನು ಸರ್ವತ್ರ ಸಮದರ್ಶಿ. ಅವನು ಪಾಂಡವ ಪಕ್ಷಪಾತಿ ಮತ್ತು ಕೌರವ ಶತ್ರು ಎಂದು ಸಾಧಾರಣರು ನಂಬಿರುವರು. ಇವರೀರ್ವ ರಲ್ಲಿಯೂ ಅವನು ಸಂಪೂರ್ಣವಾಗಿ ಪಕ್ಷಪಾತ ಶೂನ್ಯನಾಗಿದ್ದನೆಂದು ನಮಗೆ ತಿಳಿದು ಬಂದಿದೆ.

೩. ಸ್ವಯಂ ವೀರನಾದರೂ ಕೃಷ್ಣನು ಯುದ್ಧ ವಿಷಯಕ್ಕೆ ವಿಮುಖನು. ಮೊದಲು ಯುದ್ಧ ನಡೆಯದಿರುವಂತೆ ಸಲಹೆಯನ್ನು ಕೊಟ್ಟನು. ಆಮೇಲೆ ಯುದ್ಧವಾಗಲೇಬೇಕಾಗಿ ಬಂದು ಅವಶ್ಯವಾಗಿ ತಾನಾವುದಾದರೊಂದು ಪಕ್ಷ ವನ್ನು ಅವಲಂಬಿಸಲೇ ಬೇಕಾಗಲು ಅಸ್ತ್ರತ್ಯಾಗವನ್ನು ಮಾಡಿ ಆರಿಸಲ್ಪಟ್ಟವ ನಾದನು. ಕ್ಷತ್ರಿಯರಲ್ಲಿ ಇಂತಹ ಇನ್ನೊಬ್ಬ ಮಹಾತ್ಮನನ್ನು ಕಾಣೆವು. ಜಿತೇಂದ್ರಿಯನೂ ಸರ್ವತ್ಯಾಗಿಯೂ ಆದ ಭೀಷ್ಮನು ಕೂಡ ಇವನ ಸರಿ ಅಲ್ಲ.

ಇಷ್ಟಾದ ಮೇಲೆ ಯುದ್ಧ ನಡೆಯದಂತೆ ಕೃಷ್ಣನು ಅನೇಕ ಪ್ರಯತ್ನ ಗಳನ್ನು ಮಾಡಿರುವನು. ಕ್ಷತ್ರಿಯ ಮಂಡಲಿಯೊಳಗೆಲ್ಲಾ ಅವನಿಗೆ ಯುದ್ಧ

ಶುದ್ಧಾಂಗವಾಗಿಯೂ ಬೇಡವಾಗಿತ್ತೋ ಮತ್ತು ಯಾವ ಒಬ್ಬನು ಮಾತ್ರ ಸರ್ವರಲ್ಲೂ ಸಮದರ್ಶಿಯಾಗಿ ಇದ್ದನೊ; ಅಂಥವನನ್ನೇ ಯುದ್ಧಕ್ಕೆ ಮುಖ್ಯ ಪ್ರೇರಕನೆಂದೂ, ಯುದ್ಧವನ್ನು ನಡೆಯಿಸಿದವನೆಂದೂ, ಪಾಂಡವ ಪಕ್ಷದಲ್ಲಿ ಪ್ರಧಾನ ಕುಚಕ್ರಿ ಎಂದೂ ಎಲ್ಲರೂ ಖಂಡಿತಮಾಡಿರುವರು.*

ಆಮೇಲೆ ನಿರಸ್ತ್ರನಾದ ಕೃಷ್ಣನನ್ನು ಯಾವ ಕೆಲಸಕ್ಕೆ ತೆಗೆದುಕೊಳ್ಳುವು ದೆಂದು ಚಿಂತಿಸಿ ಅರ್ಜುನನು ತನ್ನ ಸಾರಥಿಯಾಗಿರುವಂತೆ ಅವನನ್ನು ಬೇಡಿ ಕೊಂಡನು. ಕ್ಷತ್ರಿಯರಿಗೆ ಸಾರಥಿತನ ಅತಿನಿಂದನೀಯ. ಮದ್ರರಾಜನಾದ ಶಲ್ಯನನ್ನು ಕರ್ಣನ ಸಾರಥಿಯಾಗಬೇಕೆಂದು ಬೇಡಿದಾಗ ಅವನು ಬಹು ಕೋಪಗೊಂಡಿದ್ದನು. ಆದರ್ಶ ಮನುಷ್ಯನಾದ ಕೃಷ್ಣನು ಅಹಂಕಾರ ಶೂನ್ಯ ನಾಗಿ ಅರ್ಜುನನ ಸಾರಥಿತನವನ್ನು ಆಕ್ಷಣದಲ್ಲಿಯೇ ಒಪ್ಪಿಕೊಂಡನು. ಅವನು ಸರ್ವದೋಷ ಶೂನ್ಯ. ಸರ್ವಗುಣಾನ್ವಿತ.

ದ್ವಿತೀಯ ಪರಿಚ್ಛೇದ

ಸಂಜಯನ ಪ್ರಯಾಣ

ಎರಡು ಕಡೆಯವರೂ ಯುದ್ಧಕ್ಕೆ ಸಿದ್ಧಗೊಳಿಸಿಕೊಳ್ಳುತ್ತ ಇರುವರು. ಪಾಂಡವ ಪಕ್ಷದಲ್ಲಿ ದ್ರುಪದನ ಪರಾಮರ್ಶವನ್ನು ಅನುಸರಿಸಿ ಯುಧಿಷ್ಠಿರಾದಿ ಗಳು ಧೃತರಾಷ್ಟ್ರರಾಯನಲ್ಲಿಗೆ ಹೋಗಿ ಸಂಧಿ ಸ್ಥಾಪನೆಯನ್ನು ಮಾಡುವುದ ಕ್ಕೆಂದು ದ್ರುಪದ ಪುರೋಹಿತನನ್ನು ಕಳುಹಲು ಪ್ರಯೋಜನವೇನೂ ಆಗಲಿಲ್ಲ. ಕಾಳಗವಿಲ್ಲದೆ ಒಂದು ಸೂಜಿಯ ಮೊನೆಯೂರುವಷ್ಟು ನೆಲವನ್ನು ಕೂಡ ಕೊಡುವುದಕ್ಕೆ ದುರ್ಯೋಧನಾದಿಗಳಿಗೆ ಇಷ್ಟವಿಲ್ಲ. ಧೃತರಾಷ್ಟ್ರನಿಗಾದರೋ

* ಕಾರ್ಯತಃ ಕೃಷ್ಣ ಚರಿತ್ರೆಯ ಇಷ್ಟು ಸವಿಸ್ತಾರ ಸಮಾಲೋಚನೆ ಪ್ರಯೋಜನವಾಗಿರುವುದು.

ಭೀಮಾರ್ಜುನ ಕೃಷ್ಣ*ರೊಡನೆ ಯುದ್ಧಮಾಡುವುದೆಂದರೆ ಬಹು ಭಯ. ಆದುದರಿಂದ ಪಾಂಡವರು ಯುದ್ಧಮಾಡದೆ ಇರುವಹಾಗೆ ಸಲಹೆಯನ್ನು ಕೊಡುವುದಕ್ಕಾಗಿ ತನ್ನ ಸ್ವಂತ ಅಮಾತ್ಯನಾದ ಸಂಜಯನನ್ನು ಪಾಂಡವರಲ್ಲಿಗೆ ಕಳುಹಿಸಿದನು:—"ನಿಮ್ಮ ರಾಜ್ಯವನ್ನೇನೋ ನಾವು ಅಧರ್ಮವಾಗಿ ಕಸಿದುಕೊಳ್ಳುವೆವು. ನೀವು ಮಾತ್ರ ಇದಕ್ಕೋಸ್ಕರ ಯುದ್ಧವನ್ನು ಮಾಡಬಾರದು ; ಇಂತಹ ಕೆಲಸವು ಒಳ್ಳೆಯದಲ್ಲ." ಈ ರೀತಿಯಲ್ಲಿ ಅಯೋಗ್ಯಕರವಾದ ಮಾತನ್ನು ಅತ್ಯಂತ ನಾಚಿಕೆಗೆಟ್ಟ ಮನುಷ್ಯನು ಆಡಬಹುದಲ್ಲದೆ ಯೋಗ್ಯರಾರೂ ಹೀಗೆ ಬಾಯಿಬಿಡಲಾರರು. ಹೀಗಿದ್ದೂ ಸಂಜಯನು ಪಾಂಡವ ಸಭೆಗೆ ಬಂದು ವಿಸ್ತಾರವಾದೊಂದು ಭಾಷಣವನ್ನು ಮಾಡಿದನು. ಇದರ ಸಾರಾಂಶ:—"ಯುದ್ಧವೆಂಬುದು ಕೇವಲ ಅಧರ್ಮ. ಇಂತಹ ಅಧರ್ಮದಲ್ಲಿ ಈಗ ನೀವು ಪ್ರವರ್ತಿಸಿರುವುದನ್ನು ನೋಡಿದರೆ ನೀವು ಬಹು ಅಧರ್ಮಿಗಳು." ಇದಕ್ಕೆ ಯುಧಿಷ್ಠಿರನು ಹೇಳಿದ ಪ್ರತ್ಯುತ್ತರದ ಸಾರಾಂಶ:-

"ಎಲೈ ಸಂಜಯನೆ, ಈ ಪ್ರಪಂಚದ ಸಮಸ್ತ ಸಂಪತ್ತುಗಳೂ ದೇವತೆಗಳಿಗೂ ಪ್ರಾರ್ಥನೀಯವಾದ ಪ್ರಾಜಾಪತ್ಯ, ಬ್ರಹ್ಮಲೋಕ, ಸ್ವರ್ಗಲೋಕ ಮೊದಲಾದುವೂ ಅಧರ್ಮವಾಗಿ ನನಗೆ ದೊರೆಯುವುವಾದರೆ ನಾನವಕ್ಕೆ

---

* ಆಗಿನ ಕಾಲದಲ್ಲಿಯೇ ಶತ್ರುಪಕ್ಷದವರೂ ಕೂಡ ಕೃಷ್ಣನ ಪ್ರಾಧಾನ್ಯವನ್ನು ಪ್ರಶಂಸಿಸಿರುವುದು ಅನೇಕ ಸ್ಥಳಗಳಲ್ಲಿ ಕಂಡುಬರುವುದು. ಧೃತರಾಷ್ಟ್ರನು ಪಾಂಡವ ಪಕ್ಷದ ಸಹಾಯಕರೆಲ್ಲರನ್ನೂ ವಿವರಿಸಿದ ಬಳಿಕ-"ವೃಷ್ಣಿಸಿಂಹನಾದ ಕೃಷ್ಣನು ಸಹಾಯಕನಾಗಿರುವಂಥವರ ಪ್ರತಾಪವನ್ನು ಸಹಿಸುವುದಕ್ಕೆ ಯಾರಿಂದ ಸಾಧ್ಯವಾದೀತು (ಉದ್ಯೋಗ ಪ। ಅ. ೨೧) ಎಂದೂ," ಪುನಃ "ಅಂಥಾ ಕೃಷ್ಣನು ಈಗ ಪಾಂಡವ ರಕ್ಷಕನಾಗಿರುವನು. ದ್ವೈರಥ ಯುದ್ಧದಲ್ಲಿ ಗೆಲ್ಲುವ ಆಶೆಯಿಂದ ಯಾವನು ತಾನೇ ಅವನನ್ನೆದುರಿಸಿ ನಿಲ್ಲಲಾಪನು!" ಅವನ ಕಾರ್ಯಗಳನ್ನು ನೆನೆದು ನೆನೆದು ನನಗೆ ಶಾಂತಿ ಹಾರಿಹೋಯಿತು. ಕೃಷ್ಣನು ಯಾರ ಪಕ್ಷದಲ್ಲಿ ಮುಂದಾಳಾಗಿ ಇರುವನೋ ಅಂಥವನ ಪ್ರತಾಪವನ್ನು ಯಾರುತಾನೇ ಸಹಿಸಿಯಾರು ? ಕೃಷ್ಣನು ಅರ್ಜುನನಿಗೆ ಸಾರಥಿಯಾದನೆಂದು ಕೇಳಿದಾಗಿನಿಂದ ನನ್ನೆದೆ ಬಡಬಡಿಸುತ್ತಿದೆ. ಎಂದೂ, ಇನ್ನೊಂದೆಡೆಯಲ್ಲಿ—"ಆದರೆ ಕೇಶವನು ಅಧೃಶ್ಯನು. ಮೂರು ಲೋಕಕ್ಕೂ ಒಡೆಯನು ಮತ್ತು ಮಹಾತ್ಮನು. ಸರ್ವಲೋಕಕ್ಕೂ ಶ್ರೇಷ್ಠತಮನಾದ ಅವನನ್ನೆದುರಿಸಿ ಮನುಷ್ಯ ಮಾತ್ರದವನಾದ ಯಾವನು ತಾನೇ ನಿಲ್ಲಲಾಪನು!" ಎಂದೂ ಹೇಳಿರುವನು.

ಆಶೆಪಡುವನಲ್ಲ; ಮಹಾತ್ಮನೂ, ಧರ್ಮಪ್ರದನೂ, ನೀತಿಸಂಪನ್ನನೂ, ಬ್ರಾಹ್ಮಣರ ಉಪಾಸಕನೂ ಆದ ಕೃಷ್ಣನು ಕೌರವ ಪಾಂಡವರೀರ್ವರಿಗೂ ಹಿತೈಷಿ; ಮಹಾಬಲ ಪರಾಕ್ರಮಾಕ್ರಾಂತರಾದ ಅನೇಕ ಭೂಪತಿಗಳನ್ನು ಶಾಸನಮಾಡಿರುವನು; ಈಗ ನಾನು ಮಾಡತಕ್ಕದ್ದೇನೆಂಬುದನ್ನು ಅವನೇ ಹೇಳಲಿ; ಮಹಾಪ್ರಭಾವನಾದ ಶಿನಿಯ ಮೊಮ್ಮಗನೂ, ಚೇದಿ ಅಂಧಕ ವೃಷ್ಣಿ ಭೋಜ ಕುಕುರ ಮತ್ತು ಸೃಂಜಯ ವಂಶದವರೂ ವಾಸುದೇವನ ಬುದ್ಧಿಯ ಪ್ರಭಾವದಿಂದ ಶತ್ರುಗಳನ್ನಡಗಿಸಿ ತಮ್ಮ ಜನಗಳನ್ನೆಲ್ಲಾ ಸಂತೋಷಪಡಿಸುತ್ತಿರುವರು. ಇಂದ್ರಕಲ್ಪರಾದ ಉಗ್ರಸೇನನೇ ಮೊದಲಾದ ವೀರರು ಮಹಾಬಲ ಪರಾಕ್ರಮಾಕ್ರಾಂತರೂ ಮನಸ್ವಿಗಳೂ ಸತ್ಯ ಪರಾಯಣರೂ ಆದ ಯಾದವರೂ ಕೃಷ್ಣನಿಂದ ಸದಾ ಉಪದಿಷ್ಟರಾಗಿರುವರು. ಕೃಷ್ಣನಿಂದ ರಕ್ಷಿಸಲ್ಪಟ್ಟವನಾಗಿಯೂ ಶಿಕ್ಷಿಸಲ್ಪಟ್ಟವನಾಗಿಯೂ ಇರುವ ಕಾಶೀಶ್ವರನಾದ ಬಭ್ರುವು ಉತ್ತಮವಾದ ಶ್ರೀಯನ್ನು ಪಡೆದಿರುವನು. ಬೇಸಿಗೆಯು ಕಳೆಯಲು ಮೋಡಗಳು ಪ್ರಜೆಗಳಿಗೋಸ್ಕರ ಮಳೆಯನ್ನು ಕರೆಯುವಂತೆ ವಾಸುದೇವನು ಕಾಶೀಶ್ವರನಿಗೆ ಯಥೇಚ್ಛವಾಗಿ ಕೇಳಿದ ದ್ರವ್ಯ ವನ್ನೆಲ್ಲಾ ಕೊಟ್ಟಿರುವನು. ಕರ್ಮ ನಿಶ್ಚಯಜ್ಞನಾದ ಕೃಷ್ಣನು ಇಂತಹ ಗುಣಸಂಪನ್ನನಾದುದರಿಂದಲೇ ನಮಗೆ ಅತ್ಯಂತ ಪ್ರಿಯನು ಮತ್ತು ಸಾಧು ತಮನು ಎಂದು ತಿಳಿದು ಅವನ ಮಾತನ್ನು ಎಂದಿಗೂ ಮೀರದೆ ಇರುತ್ತೇವೆ.

ಆಮೇಲೆ ವಾಸುದೇವನು—"ಎಲೈ ಸಂಜಯನೆ, ನಾನು ಯಾವಾ ಗಲೂ ಪಾಂಡವರ ನಾಶಕರಗಳಲ್ಲದ ಸಮೃದ್ಧಿಯನ್ನೂ ಹಿತವನ್ನೂ ಕೋರುತ್ತ ಸಪುತ್ರನಾದ ಧೃತರಾಷ್ಟ್ರನ ಅಭ್ಯುದಯವನ್ನು ಇಚ್ಛಿಸುತ್ತಲೂ ಇರುತ್ತೇನೆ. ಕೌರವರಿಗೂ ಪಾಂಡವರಿಗೂ ಸಂಧಿಯುಂಟಾಗಬೇಕೆಂಬುದೇ ನನ್ನ ಅಭಿ ಪ್ರಾಯ. ನಾನು ಇವರಿಗೆ ಸಂಧಿಯ ಸಲಹೆಯ ಹೊರತು ಮತ್ತಾವ ಪರಾಮರ್ಶವನ್ನೂ ಕೊಟ್ಟಿಲ್ಲ. ಇತರ ಪಾಂಡವರೆದುರಿನಲ್ಲಿ ರಾಜಾ ಯುಧಿ ಷ್ಠಿರನ ಬಾಯಲ್ಲಿ ಎಷ್ಟೋ ಸಾರಿ ಸಂಧಿಯ ಮಾತನ್ನು ಕೇಳಿರುವೆನು. ಆದರೆ ಮಹಾರಾಜಾ ಧೃತರಾಷ್ಟ್ರ ಮತ್ತು ಇವನ ಮಕ್ಕಳು ಅತ್ಯಂತವಾದ ಅರ್ಥಲೋಭಕ್ಕೆ ಸಿಲುಕಿರುವ ಕಾರಣ ಪಾಂಡವರೊಡನೆ ಅವರಿಗೆ ಸಂಧಿ

ನಡೆಯುವುದು ಕಷ್ಟ. ಅಲ್ಲದೆ ವಿವಾದವು ದಿನ ದಿನಕ್ಕೂ ಹೆಚ್ಚುತ್ತಲೇ ಬರುವುದರಲ್ಲಿ ಆಶ್ಚರ್ಯವೇನು ? ಧರ್ಮರಾಜನಾದ ಯುಧಿಷ್ಠಿರನೂ ಮತ್ತು ನಾನೂ ಎಂದಿಗೂ ಧರ್ಮವನ್ನು ಮೀರಿ ನಡೆದವರಲ್ಲ. ಇದನ್ನು ತಿಳಿದೂ ಕೇಳಿಯೂ ನೀನು ಏತಕ್ಕೋಸ್ಕರ ಸ್ವಕರ್ಮವನ್ನು ಸಾಧಿಸುವುದರಲ್ಲಿ ಉತ್ಸಾಹಿತನಾಗಿ ಸ್ವಜನ ಪರಿಪಾಲಕನಾದ ಯುಧಿಷ್ಠಿರನನ್ನು ಅಧಾರ್ಮಿಕನೆಂದು ಕರೆದೆ ?"

ಇಷ್ಟರವರೆಗೂ ಹೇಳಿ ಶ್ರೀ ಕೃಷ್ಣನು ಧರ್ಮದ ವ್ಯಾಖ್ಯಾನಕ್ಕೆ ತೊಡಗಿದನು. ಇದು ಕೃಷ್ಣ ಚರಿತ್ರೆಗೆ ಬಹಳ ಪ್ರಯೋಜನವಾದುದು. ಅವನ ಜೀವನದ ಕೆಲಸಗಳು ಧರ್ಮರಾಜ್ಯ ಸಂಸ್ಥಾಪನೆ ಮತ್ತು ಧರ್ಮ ಪ್ರಚಾರವೆಂಬ ಎರಡು ಬಗೆಯವು. ಮಹಾಭಾರತದಲ್ಲಿ ಅವನಿಂದಾದ ಧರ್ಮರಾಜ್ಯ ಸಂಸ್ಥಾಪನೆಯನ್ನು ಸವಿಸ್ತಾರವಾಗಿ ಸೂಚಿಸಿದೆ. ಅವನಿಂದ ಪ್ರಚಾರಿತವಾದ ಧರ್ಮವಾದರೋ ಕೇವಲ ಭೀಷ್ಮ ಪರ್ವದಲ್ಲಿನ ಗೀತಾ ಪರ್ವಾಧ್ಯಾಯದಲ್ಲಿ ಅಡಗಿದೆ. ಗೀತೆಯಲ್ಲಿ ಹೇಳಿರುವ ಧರ್ಮವನ್ನು ಗೀತಾಕಾರನು ಕೃಷ್ಣನ ಬಾಯಲ್ಲಿ ಕೂರಿಸಿದ ಮಾತ್ರಕ್ಕೆ ಅದು ಗೀತೆಯನ್ನು ಬರೆದವನದಲ್ಲದೆ ಕೃಷ್ಣನ ಧರ್ಮ ಪ್ರಚಾರವೇ ಎಂದು ಸ್ಥಿರಪಡಿಸುವುದು ಹೇಗೆ ? ಸೌಭಾಗ್ಯ ಕ್ರಮದಿಂದ ಗೀತಾ ಪರ್ವಾಧ್ಯಾಯವಲ್ಲದೆ ಇತರ ಕಡೆಗಳಲ್ಲಿಯೂ ಭಾರತದಲ್ಲಿ ಕೃಷ್ಣನಿಂದ ಕೊಡಲ್ಪಟ್ಟ ಧರ್ಮೋಪದೇಶವು ಸಿಕ್ಕುವುದು. ಗೀತೆಯಲ್ಲಿ ತಿಳಿಸಿರುವ ಹೊಸ ಧರ್ಮವೂ, ಕೃಷ್ಣನು ಮಹಾಭಾರತದ ಇತರೆಡೆಗಳಲ್ಲಿ ಹೇಳಿರುವ ಧರ್ಮವೂ ಒಂದಕ್ಕೊಂದು ಸರಿಹೋಲುವುದಾದರೆ ಇದು ಕೃಷ್ಣನಿಂದಲೇ ಆಗಿ ಅವನಿಂದಲೇ ಪ್ರಚಾರಿಸಲ್ಪಟ್ಟುದಾಗಿ ಇರಬೇಕು. ಮಹಾಭಾರತದ ಐತಿಹಾಸಿಕತೆಯನ್ನು ಒಪ್ಪುವುದಾದರೆ ಭಾರತಕಾರನು ಅಲ್ಲಲ್ಲಿ ಕೃಷ್ಣನ ಮೇಲೆ ಆರೋಪಿಸಿರುವ ಧರ್ಮವು ಒಂದೇ ತರದ್ದಾಗಿದ್ದು ರೂಢಿಯಲ್ಲಿದ್ದ ಧರ್ಮವು ಅದಕ್ಕೆ ಬೇರೆಯಾದದ್ದಾಗಿರುವಲ್ಲಿ ಆ ಆರೋಪಿತ ಧರ್ಮವು ಕೃಷ್ಣನಿಂದಲೇ ಪ್ರಚಾರಿತವಾಗಿರಬೇಕೆಂದು ಹೇಳಲೇಬೇಕು. ಇದರ ಮೇಲೆ ಗೀತೆಯಲ್ಲಿ ಸವಿಸ್ತಾರವಾಗಿ ಸಂಪೂರ್ಣ ರೂಪದಲ್ಲಿ ವ್ಯಾಖ್ಯಾತವಾದ ಧರ್ಮದೊಡನೆ ಕೃಷ್ಣನಿಂದ ಪ್ರಚಾರಿಸಲ್ಪಟ್ಟ ಧರ್ಮಕ್ಕೆ ಐಕ್ಯ

ವಿರಲು ಅದೂ ಅವನು ಹೇಳಿದ ಧರ್ಮದ ಅಂಶದ ವ್ಯಾಖ್ಯೆಯೇ ಎಂದು ಖಂಡಿತವಾಯಿತು.

ಈಗ ಕೃಷ್ಣನು ಸಂಜಯನಿಗೆ ಹೇಳುವುದೇನೋ ನೋಡೋಣ--

"ಶುಚಿರ್ಭೂತನೂ ಕುಟುಂಬ ಪರಿಪಾಲಕನೂ ಆಗಿ ವೇದಾಧ್ಯಯನವನ್ನು ಮಾಡುತ್ತಾ ಜೀವನ ಯಾತ್ರೆಯನ್ನು ನಿರ್ವಹಿಸಬೇಕೆಂದು ಶಾಸ್ತ್ರ ನಿರ್ದಿಷ್ಟವಾದ ವಿಧಿಯಿರುವುದು. ಆದರೂ, ಬ್ರಾಹ್ಮಣರಿಗೆ ನಾನಾ ತೆರನಾದ ಬುದ್ಧಿ ಹುಟ್ಟಿ ಇರುವುದುಂಟು. ಕೆಲವರು ಕರ್ಮವನ್ನು ಅನುಸರಿಸಿಯೂ, ಕೆಲವರು ಕರ್ಮವನ್ನು ಬಿಟ್ಟು ಬರಿಯ ವೇದಜ್ಞಾನ ಬಲದಿಂದಲೂ ಮೋಕ್ಷವುಂಟಾಗುವುದೆಂದು ನಂಬಿರುವರು; ಆದರೆ ಊಟ ಮಾಡಿದಲ್ಲದೆ ತೃಪ್ತಿ ಹೇಗೆ ದೊರೆಯುವುದಿಲ್ಲವೋ ಹಾಗೇ ಕರ್ಮಾನುಷ್ಠಾನವನ್ನು ಮಾಡಿದಲ್ಲದೆ ವೇದಜ್ಞಾನವೊಂದರಿಂದಲೇ ಮೋಕ್ಷ ದೊರೆಯಲಾರದು. ಯಾವ ಯಾವ ವಿದ್ಯೆಗಳಿಂದ ಕರ್ಮ ಸಾಧಿತವಾಗುವುದೋ ಅವೇ ಫಲದಾಯಕಗಳು. ಆವ ವಿದ್ಯೆಯ ದ್ವಾರಾ ಕರ್ಮಾನುಷ್ಠಾನದ ವಿಧಿಯು ದೊರೆಯುವುದಿಲ್ಲವೋ ಅಂತಹ ವಿದ್ಯೆ ಸಂಪೂರ್ಣ ನಿಷ್ಫಲ. ಆದುದರಿಂದ ಬಾಯಾರಿದವನು ಜಲಪಾನವನ್ನು ಮಾಡಿ ಬಾಯಾರಿಕೆಯನ್ನು ಶಾಂತಿಗೊಳಿಸಿಕೊಳ್ಳುವಂತೆ ಇಹಕಾಲದಲ್ಲಿ ಆವ ಕರ್ಮಗಳ ಫಲ ಪ್ರತ್ಯಕ್ಷವಾಗಿಯೇ ಗೋಚರವಾಗುವವೋ ಅವುಗಳನ್ನೇ ಮಾಡುವುದು ಕರ್ತವ್ಯ. ಎಲೈ ಸಂಜಯನೆ! ಕರ್ಮವಶದಿಂದಲೇ ಈ ರೂಪವಾದ ವಿಧಿ ವಿಹಿತವಾದುದಾಗಿ ಆಗಿರುವುದು. ಕರ್ಮವೇ ಸರ್ವಪ್ರಧಾನವಾದುದು. ಕರ್ಮವನ್ನು ಬಿಟ್ಟು ಮತ್ತಾವುದೋ ವಿಷಯವನ್ನು ಉತ್ಕೃಷ್ಟವಾದುದನ್ನಾಗಿ ವಿವೇಚಿಸುವಂಥವನ ಸಮಸ್ತ ಕಾರ್ಯಗಳೂ ನಿಷ್ಫಲಗಳಾಗುವುವು.

"ನೋಡು, ದೇವತೆಗಳೂ ಕೂಡ ಕರ್ಮದ ಬಲದಿಂದಲೇ ಪ್ರಭಾವ ಸಂಪನ್ನರಾಗುವರು; ವಾಯುವು ಕರ್ಮಬಲದಿಂದಲೇ ಸದಾ ಸಂಚಾರಶೀಲನಾಗಿರುವನು; ಸೂರ್ಯನು ಕರ್ಮಬಲದಿಂದಲೇ ಆಲಸ್ಯ ಶೂನ್ಯನಾಗಿ ಅಹೋರಾತ್ರಿಗಳಲ್ಲೂ ಪರಿಭ್ರಮಿಸುತಲಿರುವನು; ಚಂದ್ರನು ಕರ್ಮಬಲ

ದಿಂದಲೇ ನಕ್ಷತ್ರಮಂಡಲದಿಂದಾವೃತನಾಗಿ ಪ್ರತಿ ತಿಂಗಳಲ್ಲಿಯೂ ಅರ್ಧ ಭಾಗ ಉದಯಸುತ್ತಲಿರುವನು. ಹುತಾಶನನು ಕರ್ಮಬಲದಿಂದಲೇ ನಿರವಚ್ಛಿನ್ನವಾಗಿ ಬಿಸಿಯನ್ನು ಪಸರಿಸುತ್ತ ಜನಗಳ ಕರ್ಮವನ್ನು ಸಾಧ್ಯ ಗೊಳಿಸುತ್ತಿರುವನು; ಪೃಥ್ವಿಯೂ ಕರ್ಮಬಲದಿಂದ ಅತ್ಯಂತ ದುರ್ಭರ ವಾದ ಭಾರವನ್ನು ಅನಾಯಾಸವಾಗಿ ಹೊತ್ತಿರುವಳು; ನದಿಗಳೆಲ್ಲವೂ ಕರ್ಮಬಲದಿಂದ ಪ್ರಾಣಿಗಳ ತೃಪ್ತಿಯನ್ನು ಸಾಧಿಸುತ್ತಾ ಸಲಿಲರಾಶಿ ಯನ್ನು ಧರಿಸುತ್ತಲಿರುವುವು; ಅಮಿತ ಬಲಶಾಲಿಯೂ ದೇವರಾಜನೂ ಆದ ಇಂದ್ರನೂ ಕೂಡ ದೇವತೆಗಳಲ್ಲಿ ಪ್ರಾಧಾನ್ಯವನ್ನು ಪಡೆಯುವುದಕ್ಕಾಗಿ ಬ್ರಹ್ಮಚರ್ಯವನ್ನು ಮಾಡಿದ್ದನು; ಮತ್ತು ಇವನು ಅದೇ ಕರ್ಮಬಲ ದಿಂದಲೇ ಹತ್ತು ದಿಕ್ಕುಗಳನ್ನೂ ನಭೋಮಂಡಲವನ್ನೂ ನೆಲೆಗೊಳಿಸಿ ಮಳೆಯನ್ನು ಕರೆಸುವನು. ಅಪ್ರಮತ್ತನಾಗಿ ಭೋಗಾಭಿಲಾಷೆಯನ್ನು ಬಿಟ್ಟು, ಪ್ರಿಯವಸ್ತು ಸಮುದಾಯಗಳನ್ನು ದೂರಮಾಡಿ, ಶ್ರೇಷ್ಠತೆಯನ್ನು ಪಡೆದು,—ಶಮೆ, ದಮೆ, ಸಮತೆ, ಸತ್ಯ ಮತ್ತು ಧರ್ಮಗಳನ್ನನುಸರಿಸಿ ದೇವ ರಾಜ್ಯಾಧಿಕಾರವನ್ನು ಮಾಡುತ್ತಿರುವನು. ಭಗವಾನ್ ಬೃಹಸ್ಪತಿ ಸಮಾ ಹಿತನಾಗಿ ಇಂದ್ರಿಯ ನಿರೋಧಪೂರ್ವಕವಾಗಿ ಬ್ರಹ್ಮಚರ್ಯಾನುಷ್ಠಾನ ವನ್ನು ಮಾಡಿದನಾದುದರಿಂದ ಅವನು ದೇವತೆಗಳಿಗೆ ಆಚಾರ್ಯನೆನಿಸಿ ಕೊಂಡನು. ರುದ್ರ, ಆದಿತ್ಯ, ಯಮ, ಕುಬೇರ, ಗಂಧರ್ವ, ಯಕ್ಷ, ಅಪ್ಸರ, ವಿಶ್ವಾವಸು ಮತ್ತು ನಕ್ಷತ್ರಗಳು ಕರ್ಮಪ್ರಭಾವದಿಂದಲೇ ವಿರಾಜಿಸುತ್ತಲಿರುವುವು. ಮಹರ್ಷಿ ಗಣಗಳು, ಬ್ರಹ್ಮವಿದ್ಯೆ, ಬ್ರಹ್ಮ ಚರ್ಯ ಮತ್ತು ಇತರ ಹಲವು ಕ್ರಿಯಾಕಲಾಪಗಳನ್ನು ನಡೆಯಿಸಿ ಶ್ರೇಷ್ಠತ್ವವನ್ನು ಪಡೆದಿರುವರು."

ಕರ್ಮವಾದ ಕೃಷ್ಣನಿಗಿಂತಲೂ ಮೊದಲೇ ಇದ್ದಿತು. ಆದರೂ ವೈದಿಕ ಕ್ರಿಯಾಲಾಪಗಳೇ ಕರ್ಮಗಳು; ಮನುಷ್ಯ ಜೀವನದಲ್ಲಿ ನಡೆಯಿಸಬೇಕಾದ ಕರ್ಮಗಳು, ಎಂದರೆ ಇಂಗ್ಲಿಷರು "ಡ್ಯೂಟಿ" ಎಂದು ಹೇಳುವ ಅಭಿಪ್ರಾಯವನ್ನುಳ್ಳ ಕರ್ಮಗಳು, ಆಗ ಪ್ರಚಲಿತವಾದ ಧರ್ಮದಲ್ಲಿ ವ್ಯವಹರಿಸಲ್ಪಡುತ್ತಲಿರಲಿಲ್ಲ. ಕರ್ಮ ಶಬ್ದಕ್ಕೆ ಪೂರ್ವದಿಂದ ಉಂಟಾದ ಅಭಿಪ್ರಾಯವು ಬದಲಾವಣೆಯಾಗಿ ಕರ್ತವ್ಯಾನುಷ್ಠಾನ ಅಥವಾ

ನಡೆಯಿಸಲೇಬೇಕಾದ ಕೆಲಸ (ಡ್ಯೂಟಿ) ಎಂದು ಅರ್ಥಮಾಡಿರುವುದು ಭಗವದ್ಗೀತೆಯಲ್ಲಿ ಮಾತ್ರವೇ ಕಂಡುಬರುವುದು. ಮತ್ತು ಇಲ್ಲಿಯೂ ಹಾಗೆಯೇ ಅರ್ಥವಾಗುತ್ತಿರುವುದು. ಮಾತಿನ ಜೋಡಣೆಯಲ್ಲಿ ವ್ಯತ್ಯಾಸ ವಿದ್ದರೂ ಮರ್ಮವು ಒಂದೇ ಆಗಿರುವುದು. ಇಲ್ಲಿ ಹೇಳುತ್ತಲಿರುವವನಾವನೋ ಅವನೇ ಅಸಲು ಗೀತೆಯನ್ನು ಹೇಳಿದವನೆಂದು ಒಪ್ಪಿಕೊಳ್ಳಬಹುದು.

ಮಾಡಬೇಕಾದ ಕೆಲಸವನ್ನು ವಿಹಿತವಾಗಿ ನಿರ್ವಹಿಸುವುದಕ್ಕೆ ಎಂದರೆ, (ಡ್ಯೂಟಿಯನ್ನು ಮಾಡುವುದಕ್ಕೆ) ನಾಮಾಂತರವು ಸ್ವಧರ್ಮ ಪಾಲನೆ. ಗೀತೆಯಲ್ಲಿ ಮೊಟ್ಟಮೊದಲೇ ಶ್ರೀಕೃಷ್ಣನು ಸ್ವಧರ್ಮಪಾಲನೆಯನ್ನು ಕುರಿತು ಅರ್ಜುನನಿಗೆ ಉಪದೇಶಮಾಡಿರುವನು. ಇಲ್ಲಿಯೂ ಕೃಷ್ಣನು ಅದೇ ಸ್ವಧರ್ಮಪಾಲನೆಯನ್ನು ಉಪದೇಶಿಸುತ್ತಿರುವನು. ಹೇಗೆಂದರೆ:—

"ಎಲೈ ಸಂಜಯನೇ! ನೀನು ಬ್ರಹ್ಮ, ಕ್ಷತ್ರಿಯ, ವೈಶ್ಯ ಮೊದಲಾದ ಸಕಲ ಜನಗಳ ಧರ್ಮವನ್ನು ಚೆನ್ನಾಗಿ ತಿಳಿದೂ ಏತಕ್ಕೋಸ್ಕರ ಹೀಗೆ ಕೌರವರಿಗೆ ಮಾತ್ರ ಹಿತವಾಗಲಿ ಎಂಬೊಂದೇ ಮನಸ್ಸಿನಿಂದ ಪಾಂಡವರ ನಿಗ್ರಹಕ್ಕೆ ಯತ್ನಿಸುತ್ತಿರುವೆ? ಧರ್ಮರಾಜನಾದ ಯುಧಿಷ್ಠಿರನು ವೇದಜ್ಞನು; ಅಶ್ವಮೇಧವನ್ನೂ ರಾಜಸೂಯವನ್ನೂ ಮಾಡಿರುವನು; ಯುದ್ಧ ವಿದ್ಯೆಯಲ್ಲಿ ಪಾರದರ್ಶಿ ಮತ್ತು ಹಸ್ತ್ಯಶ್ವರಥಗಳನ್ನು ನಡೆಯಿಸು ವುದರಲ್ಲಿ ನಿಪುಣನು. ಈಗ ಪಾಂಡವರು ಕೌರವರ ಪ್ರಾಣಹಿಂಸೆಯನ್ನು ಮಾಡದೆ ಭೀಮಸೇನನನ್ನು ಸಮುದಾಯಿಸಿ ರಾಜ್ಯಪ್ರಾಪ್ತಿಗೋಸ್ಕರ ಬೇರೆ ಯಾವುದಾದರೊಂದುಪಾಯವನ್ನು ನಡೆಸಬಲ್ಲವರಾದರೆ ಧರ್ಮ ಸಂರಕ್ಷಣೆ ಯಾಗುವುದು. ಅಲ್ಲದೆ, ಪುಣ್ಯ ಕರ್ಮವನ್ನು ನಡೆಸಿದಂತೆಯೂ ಆದೀತು. ಹಾಗಲ್ಲದೆ ಇವರು ಕ್ಷತ್ರಿಯ ಧರ್ಮವನ್ನು ಪರಿಪಾಲಿಸಿ ಸ್ವಕರ್ಮವನ್ನು ಸಾಧಿಸುವುದರಲ್ಲಿ ದುರದೃಷ್ಟವಶದಿಂದ ಮೃತ್ಯುವಿಗೆ ತುತ್ತಾದರೂ ಪ್ರಶಸ್ತವೇ. ನೀನು ಸಂಧಿಯನ್ನು ಸ್ಥಾಪಿಸುವುದೇ ಶ್ರೇಯಸ್ಕರವೆಂದು ವಿವೇಚಿಸಿರುವಂತೆ ತೋರುವುದು. ಕ್ಷತ್ರಿಯರಿಗೆ ಧರ್ಮವನ್ನು ರಕ್ಷಿಸಿದಂತೆ ಆಗುವುದು ಯುದ್ಧವನ್ನು ಮಾಡುವುದರಿಂದಲೋ ಬಿಡುವುದರಿಂದಲೋ ನೀನೇ ಹೇಳು. ಇವೆರಡರಲ್ಲಿ ಯಾವುದು ಶ್ರೇಷ್ಠವೆಂದು ನೀನು ವಿವೇಚಿ ಸುತ್ತೀಯೋ ನಾನು ಅದರಂತೆ ನಡೆದುಕೊಳ್ಳುತ್ತೇನೆ."

ಆಮೇಲೆ ಶ್ರೀ ಕೃಷ್ಣನು ಚತುರ್ವರ್ಣದವರ ಧರ್ಮವನ್ನೂ ತಿಳುಹ ತೊಡಗಿದನು. ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರ ವಿಷಯದಲ್ಲಿ ಎಂತಹ ಧರ್ಮ ವರ್ಣಿಸಲ್ಪಟ್ಟಿದೆಯೋ ಅಂಥಾದ್ದೇ ಇಲ್ಲಿಯೂ ಹೇಳಿರುವುದು. ಹೀಗೆಯೇ ಮಹಾಭಾರತದ ಇತರೆಡೆಗಳಲ್ಲಿಯೂ ಭೂರಿಭೂರಿ ಪ್ರಮಾಣಗಳಿಂದ ಗೀತೋಕ್ತ ಧರ್ಮವೂ ಕೃಷ್ಣನಿಂದ ತಿಳುಹಲ್ಪಟ್ಟ ಧರ್ಮವೂ ಒಂದೇ ಆಗಿರುವುದೆಂದು ಗೊತ್ತಾ ಗುತ್ತಲಿದೆ. ಆದುದರಿಂದ ಗೀತೆಯಲ್ಲಿ ಕೃಷ್ಣನಿಂದ ಹೇಳಲ್ಪಟ್ಟ ಧರ್ಮವು ಅವನ ಹೆಸರಿನಲ್ಲಿ ಪ್ರಚಾರವಾದ ಧರ್ಮಮಾತ್ರವಲ್ಲದೆ ಅವನಿಂದಲೇ ಕಲಿಸಲ್ಪಟ್ಟ ಧರ್ಮವೆಂದೊಂದು ಬಗೆಯಾಗಿ ಸಿದ್ಧವಾಗಿರುವುದು. ಕೃಷ್ಣನು ಇನ್ನೂ ಹಲವು ಮಾತುಗಳನ್ನು ಸಂಜಯನಿಗೆ ಸೂಚಿಸಿರುವನು. ಅದರಲ್ಲಿ ಒಂದೆರಡನ್ನು ಕೆಳಗೆ ಎತ್ತಿರುವೆವು.

ಯೂರೋಪಿಯನ್ನರ ವಿವೇಚನೆಯಲ್ಲಿ ಪರರಾಜ್ಯಾಪಹರಣಕ್ಕಿಂತ ಗೌರವವಾದ ಕರ್ಮವು ಮತ್ತಾವುದೂ ಇಲ್ಲ. ಇದಕ್ಕೆ "Conquest, Glory, Extension of Empire" ಎಂದು ಮುಂತಾಗಿ ಹೇಳುವರು. ಇಂಗ್ಲಿಷಿನಲ್ಲಿಯೂ ಯೂರೋಪೀಯ ಇತರ ಭಾಷೆಯ ಪುಸ್ತಕಗಳಲ್ಲಿರುವಂತೆಯೇ ಪರರಾಜ್ಯಾಪಹರಣದ ಗುಣಾನುವಾದ ನಡೆದಿರುವುದು. ಬರಿಯ ಗ್ಲೋರಿ (Glory) ಶಬ್ದದ ಮೋಹದಿಂದ ಮುಗ್ಧನಾಗಿ ಪ್ರಷ್ಯದ ಎರಡನೆಯ ಫ್ರೆಡರಿಕ್ಕನು ಮೂರುಸಾರಿ ಸಮರಾಗ್ನಿಯನ್ನು ಯೂರೋಪಿನಲ್ಲಿ ಪ್ರಜ್ವಲಿಸಿ ಲಕ್ಷೋಪಲಕ್ಷ ಮನುಷ್ಯರ ಸರ್ವನಾಶಕ್ಕೆ ಕಾರಣವಾಗಿದ್ದನು. ಇಂಥ ರಕ್ತಕ್ಕೆ ಬಾಯಾರಿದ ರಾಕ್ಷಸನ ವಿನಾ ಇತರರಿಗೆ ಸಹಜವಾಗಿಯೇ ಇಂಥ ಗ್ಲೋರಿಗೂ ಕಳ್ಳತನಕ್ಕೂ ಹೆಚ್ಚು ಭೇದವೇನೂ ಇಲ್ಲ. ಪರರಾಜ್ಯಾಪಹಾರಕನು ಕೇವಲ ದೊಡ್ಡ ಕಳ್ಳನು. ಇತರರು ಸಣ್ಣ ಕಳ್ಳರು* ಇಷ್ಟೇ. ಆದರೆ ಹೀಗೆ ಹೇಳುವುದು ಬಹಳ ಜವಾಬ್ದಾರಿಯ ಮಾತೇ ಸರಿ. ದಿಗ್ವಿಜಯ ಮಾಡುವುದರಲ್ಲಿ ಒಂದು ಪ್ರಕಾರವಾದ

---

* ಕೇವಲ ಪರೋಪಕಾರಕ್ಕೋಸ್ಕರ ಪರರಾಜ್ಯವನ್ನು ಸ್ವಾಧೀನ ಪಡಿಸಿಕೊಳ್ಳುವುದಾದರೆ ಅದು ಬೇರೇ ಮಾತು. ಈ ಬಗೆಯ ಕಾರ್ಯವಿಚಾರ ನನಗೆ ಮೀರಿದ್ದು. ನಾನು ರಾಜನೀತಿಜ್ಞನಲ್ಲ.

ಬಲವಾದ ಮೋಹವುಂಟು. ಈ ಮೋಹಕ್ಕೆ ಮರುಳಾಗಿ ಹಲವು ವೇಳೆಗಳಲ್ಲಿ ಆರ್ಯ ಕ್ಷತ್ರಿಯರೂ ಕೂಡ ಧರ್ಮಾಧರ್ಮವನ್ನು ಮರೆಯುತ್ತಿದ್ದರು. ಯೂರೋಪಿನಲ್ಲಿ ಡಯೋಜನೀಸ್ (Diogenese) ಮಹಾ ವೀರನಾದ ಸಿಕಂದರನಿಗೆ—"ನೀನೊಬ್ಬ ದೊಡ್ಡ ಕಳ್ಳ" ಎಂದು ಹೇಳಿದ್ದನು. ಭಾರತವರ್ಷದಲ್ಲಿ ಶ್ರೀ ಕೃಷ್ಣನು ಪರರಾಜ್ಯಲೋಲುಪರಾದ ರಾಜರನ್ನು ಕುರಿತು ಹೀಗೆ ಹೇಳಿರುವನು. ಅವನ ಅಭಿಪ್ರಾಯವು ಚಿಕ್ಕ ಕಳ್ಳನು ಮುಚ್ಚುಮರೆಯಲ್ಲಿ ಕದಿಯುವನು. ದೊಡ್ಡ ಕಳ್ಳನು ಎದುರಿಸಿ ನಿಂತು ಕದಿಯುವನು.—"ತಸ್ಕರನು ಕಣ್ಮರೆಯಲ್ಲಾಗಲಿ ಎದುರಿನಲ್ಲಾಗಲಿ ಹಠಾತ್ತಾಗಿ ಪರರ ಸ್ವತ್ತನ್ನು ಅಪಹರಿಸುತ್ತಾನೆ. ಇವೆರಡೂ ನಿಂದನೀಯ." ದುರ್ಯೋಧನನ ಕಾರ್ಯವೂ ಹೀಗೆಯೇ ಒಂದು ರೀತಿಯ ಕಳ್ಳಕೆಲಸವೆಂದು ಗೊತ್ತಾಗುವುದು.

ಇಂಥ ಕಳ್ಳಕಾರರ ಕೈಯಿಂದ ಸ್ವಂತ ಸ್ವತ್ತನ್ನುಳಿಸಿಕೊಳ್ಳುವುದು ಪರಮ ಧರ್ಮವೆಂದು ಶ್ರೀ ಕೃಷ್ಣನು ವಿವೇಚಿಸುತ್ತಿದ್ದನು. ಈಗಿನ ನೀತಿಜ್ಞರೂ ಇದೇ ಅಭಿಪ್ರಾಯದವರು. ಚಿಕ್ಕ ಕಳ್ಳನ ಕೈಯಿಂದ ತನ್ನ ಸ್ವತ್ತನ್ನು ಕಾಪಾಡಿಕೊಳ್ಳುವುದಕ್ಕೆ ಇಂಗ್ಲಿಷಿನಲ್ಲಿ ಜಸ್ಟಿಸ್ (Justice) ಎಂದೂ, ದೊಡ್ಡ ಕಳ್ಳನ ಕೈಯಿಂದ ತನ್ನ ಸ್ವತ್ತನ್ನು ಬಚಾಯಿಸಿಕೊಳ್ಳುವುದಕ್ಕೆ ಪೇಟ್ರಿಯಾಟಿಸಮ್ (Patriotism) ಎಂದೂ, ಇವೆರಡಕ್ಕೂ ದೇಶೀಯ ಭಾಷೆಯಲ್ಲಿ ಕೃಷ್ಣನು "ಸ್ವಧರ್ಮಪಾಲನೆ" ಎಂದೂ ಹೇಳುತ್ತಲಿದ್ದಾನೆ. ಈ ವಿಷಯದಲ್ಲಿ ದೇಹದಲ್ಲಿ ಪ್ರಾಣವಿರುವ ಪರ್ಯಂತವೂ ಪಿತ್ರಾರ್ಜಿತವನ್ನು ಪುನರುದ್ಧಾರಮಾಡಿಕೊಳ್ಳುವುದೇ ಅವಶ್ಯ ಕಾರ್ಯ. ಈ ಪ್ರಯತ್ನದಲ್ಲಿ ಪ್ರಾಣಪರಿತ್ಯಾಗವೂ ಶ್ಲಾಘನೀಯವೇ ಹೊರತು ವಿಮುಖನಾಗುವುದು ಹೇಗೂ ಉಚಿತವಲ್ಲ.

ಸಂಜಯನ ಧರ್ಮವೆಂಬ ಹೆಸರಿನ ಭಂಡ ಮಾತುಗಳನ್ನು ಕೇಳಿ ಕೃಷ್ಣನು ಸಂಗತವಾದ ಸ್ವಲ್ಪ ತಿರಸ್ಕಾರವನ್ನೂ ಮಾಡಿರುವನು.—"ಈಗಲಾದರೋ ನೀನು ರಾಜನಾದ ಯುಧಿಷ್ಠಿರನಿಗೆ ಧರ್ಮೋಪದೇಶವನ್ನು ಮಾಡಲಾಶಿಸುತ್ತಿರುವೆಯಲ್ಲಾ! ಆದರೆ ಈ ನೀನೇ ಹಿಂದೆ ದುಶ್ಶಾಸನನು ಮಾಡಬಾರದ ಅಪಮಾನವನ್ನು ದ್ರೌಪದಿಗೆ ಮಾಡಿದಾಗ ಸಭಾ ಮಧ್ಯದಲ್ಲಿ

ದುಶ್ಶಾಸನಿಗೆ ಧರ್ಮೋಪದೇಶವನ್ನು ಮಾಡಲೊಲ್ಲದೆ ಹೋದೆ ಏಕೆ?" ಕೃಷ್ಣನು ಎಲ್ಲರಲ್ಲಿಯೂ ಪ್ರಿಯವಾದಿಯಾದರೂ ಯಥಾರ್ಥವಾದ ದೋಷ ವನ್ನು ವರ್ಣಿಸುವಾಗ ಯಾರ ಮುಖ ದಾಕ್ಷಿಣ್ಯವನ್ನೂ ನೋಡನು. ಸತ್ಯವೇ ಅವನಿಗೆ ಸರ್ವದಾ ಪ್ರಿಯ.

ಸಂಜಯನನ್ನು ಭಂಗಿಸಿ ನುಡಿದ ಬಳಿಕ ಶ್ರೀ ಕೃಷ್ಣನು ಉಭಯ ಪಕ್ಷ ದವರಿಗೂ ಶ್ರೇಯಸ್ಸಾಗಲೆಂದು ತಾನೇ ಹಸ್ತಿನಾಪುರಿಗೆ ಬರುವೆನೆಂದು ತಿಳಿಸಿದನು. ಪಾಂಡವರಿಗೆ ಅರ್ಥಹಾನಿಯಾಗದಂತೆ ಕೌರವರು ಸಂಧಿಗೆ ಒಪ್ಪುವಹಾಗೆ ಈಗ ವಿಶೇಷ ಪ್ರಯತ್ನವನ್ನು ಮಾಡುವುದು ಅವಶ್ಯವಾಗಿದೆ ಎಂದೂ, ಇದರಿಂದೊಂದು ದೊಡ್ಡ ಪುಣ್ಯಕಾರ್ಯವನ್ನು ಸಾಧಿಸಿದಂತಾಗು ವುದೆಂದೂ, ಕೌರವರು ಮೃತ್ಯುವಿನಿಂದ ಬಿಡುಗಡೆಯನ್ನು ಹೊಂದಿದಂತಾಗು ವುದೆಂದೂ ತಿಳಿಸಿದನು.

ಲೋಕಹಿತಕ್ಕಾಗಿಯೂ, ಅಸಂಖ್ಯಾತರಾದ ಮನುಷ್ಯರ ಪ್ರಾಣ ವನ್ನೂ ಮತ್ತು ಕೌರವರನ್ನೂ ಸಹ ಬದುಕಿಸುವುದಕ್ಕೋಸ್ಕರಲೂ ಈ ದುಷ್ಕರ ಕಾರ್ಯಕ್ಕೆ ಕೃಷ್ಣನು ತಾನೇ ಉಪಯಾಚಕನಾಗಿ ಪ್ರವೇಶಿಸಿದನು. ಈ ಕೆಲಸವು ಮನುಷ್ಯಶಕ್ತಿಗೆ ದುಸ್ಸಾಧ್ಯ; ಪಾಂಡವರು ತನ್ನನ್ನೇ ಚುನಾ ಯಿಸಿಕೊಂಡಿರುವರು. ಆದುದರಿಂದ ಕೌರವರು ಇವನ ಎದುರು ಕಕ್ಷಿಯ ವರಾಗಿ ತನ್ನನ್ನು ಶತ್ರುಭಾವದಲ್ಲಿ ನೋಡುವರು. ಆದರೂ ಲೋಕಹಿತಾರ್ಥ ವಾಗಿ ಅವನು ನಿರಸ್ತ್ರನಾಗಿ ಶತ್ರುವಿನ ಪಟ್ಟಣವನ್ನು ಪ್ರವೇಶಿಸುವುದೇ ಸರಿ ಎಂದು ನಿಶ್ಚಯಿಸಿದನು.

ತೃತೀಯ ಪರಿಚ್ಛೇದ

ಯಾನಸಂಧಿ

ಇಲ್ಲಿಗೆ ಸಂಜಯನ ಯಾನಪರ್ವಾಧ್ಯಾಯ ಮುಗಿದಿರುವುದು. ಇದರ ಕೊನೆಯ ಭಾಗದಲ್ಲಿ ಕೃಷ್ಣನು ಹಸ್ತಿನಾವತಿಗೆ ಹೊರಡಲು ಒಪ್ಪಿ ತದನಂತರವೇ ಪಯಣವನ್ನು ಬೆಳೆಸಿದನಷ್ಟೆ. ಆದರೂ, ಈ ಸಂಜಯ ಯಾನ ಪರ್ವಾಧ್ಯಾಯಕ್ಕೂ ಭಗವಧ್ಯಾನಪರ್ವಾಧ್ಯಾಯಕ್ಕೂ ಮಧ್ಯೆ ಮೂರು

ಪರ್ವಾಧ್ಯಾಯಗಳಿರುವುವು. ಯಾವುವೆಂದರೆ: ಪ್ರಜಾಗರ, ಸನತ್ಸುಜಾತ ಮತ್ತು ಯಾನಸಂಧಿ ಪರ್ವಗಳು. ಇವುಗಳಲ್ಲಿ ಮೊದಲಿನ ಎರಡು ಪ್ರಕ್ಷಿಪ್ತಗಳೆಂಬುದಕ್ಕೆ ಸಂಶಯವೇನೂ ಇಲ್ಲ. ಏಕೆಂದರೆ, ಇವುಗಳಲ್ಲಿ ಮಹಾಭಾರತದ ಕಥೆಯೇನೂ ಇರುವುದಿಲ್ಲ. ಅತ್ಯುತ್ಕೃಷ್ಟ ಧರ್ಮ ಮತ್ತು ನೀತಿಯ ಮಾತುಗಳಿರುವುವು. ಕೃಷ್ಣನಮಾತೇ ಇಲ್ಲ. ಈ ಎರಡು ಪರ್ವಾಧ್ಯಾಯಗಳಿಂದ ನಮಗೇನೇನೂ ಪ್ರಯೋಜನವಿಲ್ಲ.

ಯಾನಸಂಧಿ ಪರ್ವಾಧ್ಯಾಯದಲ್ಲಿ ಸಂಜಯನು ಹಸ್ತಿನಾವತಿಗೆ ಬಂದು ಧೃತರಾಷ್ಟ್ರನಿಗೆ ಹೇಳಿದ ವಿಷಯಗಳನ್ನೆಲ್ಲ ಕೇಳಿ ಧೃತರಾಷ್ಟ್ರ, ದುರ್ಯೋಧನ ಮತ್ತು ಇತರ ಕೌರವರುಗಳು ತಂತಮ್ಮಲ್ಲಿ ಆಡಿದ ವಾದಾನುವಾದಗಳಿವೆ. ಉದ್ದುದ್ದವಾಗಿ ಹೇಳಿದ್ದನ್ನೇ ಹೇಳುತ್ತಾ ಮತ್ತು ಹಲವು ವೇಳೆ ಅಪ್ರಯೋಜಕಗಳಾದ ಮಾತುಗಳಿಂದ ತುಂಬಿ ತುಳುಕುತಲಿವೆ. ಇಲ್ಲಿ ಕೃಷ್ಣನ ಪ್ರಸಂಗ ಎರಡು ಸ್ಥಳಗಳಲ್ಲಿ ದೊರೆಯುವುದು.

೫೮ನೆಯ ಅಧ್ಯಾಯದಲ್ಲಿ—ಧೃತರಾಷ್ಟ್ರನು ಸಂಜಯನಿಂದ ಅರ್ಜುನನೆಂದ ಮಾತುಗಳನ್ನೆಲ್ಲ ಕೇಳಿ ಪುನಃ—"ಹಠಾತ್ತಾಗಿ ವಾಸುದೇವಾರ್ಜುನರೆಂದ ಮಾತುಗಳನ್ನು ಮತ್ತೆ ಕೇಳಲಿಚ್ಛಿಸುತ್ತೇನೆ, ಆದುದರಿಂದ ಅದನ್ನು ವಿಸ್ತರಿಸು" ಎಂದನು.

ಇದಕ್ಕುತ್ತರವಾಗಿ ಸಭೆಯಲ್ಲಾದ ಮಾತುಕಥೆಗಳೊಂದೂ ಇಲ್ಲದೆ ಒಂದು ಕಾಡುಕಗ್ಗಕ್ಕೆ ಮೊದಲುಮಾಡಿರುವನು. ತಾನು ಮೆಟ್ಟಂಗಾಲುಗಳನ್ನಿಟ್ಟುಕೊಂಡು, ಎಂದರೆ ಕಳ್ಳನ ಹಾಗೆ, ಅಭಿಮನ್ಯು ಮುಂತಾದವರೂ ಕೂಡ ಹೋಗಲಿಕ್ಕಾಗದ ಪಾಂಡವರ ಅಂತಃಪುರವನ್ನು ಹೊಕ್ಕು ಕೃಷ್ಣಾರ್ಜುನರನ್ನು ನೋಡಲು ಅವರೀರ್ವರೂ ಮಧ್ಯಪಾನದಿಂದ ಮತ್ತರಾಗಿ ಅರ್ಜುನನು ದ್ರೌಪದೀ ಸತ್ಯಭಾಮೆಯರ ತೊಡೆಯಮೇಲೆ ಕಾಲುಚಾಚಿಕೊಂಡು ಇದ್ದನು. ಹೊಸದಾದ ಮಾತುಕಥೆಗಳೇನೂ ಆಗಲಿಲ್ಲ. "ನಾನು ಸಹಾಯಕನಾಗಿರಲು ಅರ್ಜುನನು ಸಮಸ್ತರನ್ನೂ ಕೊಲ್ಲುವನು" ಎಂಬ ದಂಭದಿಂದ ತುಂಬಿದ ವಾಕ್ಯವನ್ನು ಕೃಷ್ಣನು ಹೇಳಿದನು.

ಆಮೇಲೆ ಅರ್ಜುನನೇನೆಂದನೆಂಬುದು ಇಲ್ಲಿ ದೊರೆಯುವುದಿಲ್ಲ. ಅಧ್ಯಾಯದ ಕೊನೆಯಲ್ಲಿ--"ಅನಂತರ ಮಹಾವೀರನಾದ ಕಿರೀಟಿ ಕೃಷ್ಣನ ಮಾತುಗಳನ್ನೆಲ್ಲ ಕೇಳಿ ಲೋಮಹರ್ಷಣವಾದ ಮಾತುಗಳನ್ನು ಪ್ರಯೋಗಿಸ ತೊಡಗಿದನು" ಎಂದಿದೆ. ಇದರಿಂದ ಮುಂದಿನ (೫೯ನೆಯ) ಅಧ್ಯಾಯದಲ್ಲಿ ಈ ಪ್ರಸ್ತಾಪವಿರಬಹುದೆಂದು ತೋರಬಹುದು. ಅಲ್ಲಿ ಪ್ರಸ್ತಾಪವೇ ಇಲ್ಲ. ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು ಸಂಧಿಯನ್ನು ಸ್ಥಾಪಿಸುವಂತೆ ಬೇಡಿಕೊಂಡ ಪ್ರಸ್ತಾಪವಿರುವುದು. ಅರವತ್ತನೆಯ ಅಧ್ಯಾಯದಲ್ಲಿ ದುರ್ಯೋಧನನು ತಂದೆಯನ್ನು ನಿಷ್ಠುರೋಕ್ತಿಗಳಿಂದ ಭಂಗಿಸಿ ಇರುವನು. ೬೧ರಲ್ಲಿ ಕರ್ಣನು ಬಾಯಿಹಾಕಿರುವನು. ಭೀಷ್ಮನು ಅವನನ್ನು ಉತ್ತಮ ಮಧ್ಯಮ ದರ್ಜೆಯಲ್ಲಿ ಹೀನಗಳೆಯುವನು. ಹೀಗೆ ಕರ್ಣ–ಭೀಷ್ಮರ ವಾದ. ೬೧ರಲ್ಲಿ ಭೀಷ್ಮ–ದುರ್ಯೋಧನರ ವಾದ. ೬೨ರಲ್ಲಿ ಭೀಷ್ಮನ ವಕ್ತೃತೆ. ೬೪ರಲ್ಲಿ ತಂದೆ ಮಕ್ಕಳಿಗೆ ಪುನಃ ವಾದ. ಇಷ್ಟಾದಮೇಲೆ ಧೃತರಾಷ್ಟ್ರನು ಅರ್ಜುನನೇನೆಂದನೆಂದು ಮತ್ತೆ ಕೇಳಿದ್ದು. ಸಂಜಯನು ಹರುಕು ಮುರುಕಾಗಿದ್ದ ೫೮ನೆಯ ಅಧ್ಯಾಯಕ್ಕೆ ಜೋಡವಣೆ ಮಾಡಿ ಅರ್ಜುನನ ವಾಕ್ಯವನ್ನು ಹೇಳತೊಡಗಿದ್ದು—ಹೀಗೆ (೫೯ರಿಂದ ೬೪) ಈ ಆರು ಅಧ್ಯಾಯಗಳೂ ಪ್ರಕ್ಷಿಪ್ತವೆಂಬುದಕ್ಕೆ ಪಾಠಕರಿಗೆ ಯಾವ ಸಂಶಯವೂ ಇರಲಾರದು. ಈ ಅಧ್ಯಾಯಗಳಿಂದ ಮಹಾಭಾರತದ ಕೆಲಸವು ಕೊಂಚವೂ ಮುಂಬರಿಯಲಿಲ್ಲ.

ಈ ಆರು ಅಧ್ಯಾಯಗಳು ಪ್ರಕ್ಷಿಪ್ತಗಳೆನ್ನುವುದಕ್ಕೆ ಯಾವಕಾರಣವೋ, ೫೮ನೆಯ ಅಧ್ಯಾಯವೂ ಅದೇ ಕಾರಣದಿಂದ ಪ್ರಕ್ಷಿಪ್ತವೆನ್ನಬಹುದು. ಇಷ್ಟುಮಾತ್ರವಲ್ಲ. ಇದು ಅಪ್ರಾಸಂಗಿಕವೂ ಅಸಂಲಗ್ನವೂ ಅಲ್ಲದೆ ಹಿಂದೆ ಹೇಳಿದ ಕೃಷ್ಣೋಕ್ತಿಗೆ ಸಂಪೂರ್ಣ ವಿರೋಧವೂ ಆದದ್ದು. ಈ ಸಮಸ್ತ ವೃತ್ತಾಂತವೂ ಅನುಕ್ರಮಣಿಕಾಧ್ಯಾಯದಲ್ಲಿಯಾಗಲಿ ಪರ್ವಸಂಗ್ರಹಾಧ್ಯಾಯದಲ್ಲಿಯಾಗಲಿ ಇರುವುದಿಲ್ಲ. ಅವನೋ ರಸಿಕನು ಅಸುರ ನಿಪಾತನ ಮಾಡುವ ಶೌರಿಯನ್ನೂ, ಸುರರನ್ನು ಕೆಡಿಸುವ ಸುರೆಯನ್ನೂ ಪೂಜೆ ಮಾಡುವಂಥವನಾಗಿ, ಒಂದೆಡೆಯಲ್ಲೇ ಎರಡನ್ನೂ ನೋಡಬೇಕೆಂದೆಣಿಸಿ ೫೮ನೆಯ ಅಧ್ಯಾಯವನ್ನು ಬೆರಸಿರಬೇಕು.

ಯಾನ ಪರ್ವಾಧ್ಯಾಯದಲ್ಲಿ ಮೊದಲು ಕೃಷ್ಣ ಸಂಬಂಧವಾದ ವಿಷಯವು ಇದಾಯಿತು. ಆಮೇಲೆ ೬೭ರಿಂದ ೭೦ರ ವರೆಗೂ ಇರುವ ನಾಲ್ಕು ಅಧ್ಯಾಯಗಳಲ್ಲಿ ಕೃಷ್ಣಮಹಿಮೆಯನ್ನು ಸಂಜಯನು ಹೇಳುತ್ತಲೂ ಧೃತರಾಷ್ಟ್ರನು ಕೇಳುತ್ತಲೂ ಇರುವನು. ಹಿಂದೆ ಮದ್ಯಪಾನದಿಂದ ಮತ್ತನೆಂದು ವರ್ಣಿಸಿದ್ದ ಕೃಷ್ಣನನ್ನು ಈಗ ಜಗದೀಶ್ವರನೆಂದು ವರ್ಣಿಸು ವನು. ಇದೂ ಪ್ರಕ್ಷಿಪ್ತವೆಂದು ತೋರುವುದು. ಪ್ರಕ್ಷಿಪ್ತವಾಗಲಿ ಆಗದೆ ಇರಲಿ ಇದರಿಂದ ನಮಗೇನೂ ಪ್ರಯೋಜನವಿಲ್ಲ. ಕೃಷ್ಣನು ದೇವರೆಂಬ ನಂಬುಗೆ ಬೇರೇ ಕಾರಣಗಳಿಂದುಂಟಾಗಿದ್ದರೆ ಇನ್ನು ಸಂಜಯ ವಾಕ್ಯ ದಿಂದೇನು ? ಕೃಷ್ಣನು ದೇವರೆಂಬ ನಂಬಿಕೆಯುಂಟಾಗದೆ ಇದ್ದರೂ ಸಂಜಯ ವಾಕ್ಯದಲ್ಲಿ ಅಂತಹ ನಂಬುಗೆಯನ್ನು ಹುಟ್ಟಿಸುವಂತಹ ಪ್ರಮಾಣಗಳೇನೂ ಇಲ್ಲ. ಆದುದರಿಂದ ಸಂಜಯ ವಾಕ್ಯದಿಂದ ನಮಗಾವ ಪ್ರಯೋಜನವೂ ಇಲ್ಲ. ಕೃಷ್ಣನ ಮಾನವ ಚರಿತ್ರೆಯ ಮಾತಾವುದೂ ಇದರಲ್ಲಿಲ್ಲವಾಗಿ ನಮಗೆ ಸಮಾಲೋಚ್ಯವಾದುದಲ್ಲ.

ಚತುರ್ಥ ಪರಿಚ್ಛೇದ

ಶ್ರೀ ಕೃಷ್ಣನ ಹಸ್ತಿನಾಯಾತ್ರೆಯ ಪ್ರಸ್ತಾಪ

ಶ್ರೀ ಕೃಷ್ಣನು ಮೊದಲು ಒಪ್ಪಿಕೊಂಡಂತೆ ಸಂಧಿಯನ್ನು ಸ್ಥಾಪಿಸ ಬೇಕೆಂದು ಕೌರವನಲ್ಲಿಗೆ ಹೊರಡಲನುವಾದನು. ಆಗ ಪಾಂಡವರೂ ದ್ರೌಪದಿಯೂ ತಂತಮ್ಮ ಮನೋಗತಗಳನ್ನು ತಿಳಿಸಲು ಕೃಷ್ಣನು ಅವರವರಿಗೆ ಕೊಟ್ಟ ಉತ್ತರಗಳೆಲ್ಲ ಐತಿಹಾಸಿಕವೆಂದು ಗ್ರಹಿಸುವುದಕ್ಕಾಗು ವುದಿಲ್ಲ. ಆದರೂ ಇತಿಹಾಸವೇತ್ತನಾದ ಕವಿ ಕೃಷ್ಣನ ಬಾಯಿಂದ ಬರಿಸಿರುವ ಮಾತುಗಳನ್ನು ನೋಡಿ ಕವಿಗೆ ಕೃಷ್ಣನ ವಿಷಯದಲ್ಲಿ ಇದ್ದ ಅಭಿಪ್ರಾಯವನ್ನು ತಿಳಿಯಬಹುದು.

ಕೃಷ್ಣನು ಯುಧಿಷ್ಠಿರನ ಮಾತಿಗೆ ಉತ್ತರವಾಗಿ—"ಎಲೈ ಮಹಾ ರಾಜನೆ, ಬ್ರಹ್ಮಚರ್ಯಾದಿಗಳು ಕ್ಷತ್ರಿಯರಿಗೆ ವಿಧೇಯಗಳಲ್ಲ. ಎಲ್ಲಾ ಆಶ್ರಮದವರೂ ಕ್ಷತ್ರಿಯನ ಭಿಕ್ಷಾಚರಣೆಯನ್ನು ನಿಷೇಧಿಸಿರುವರು.

ಸಂಗ್ರಾಮದಲ್ಲಿ ಜಯವನ್ನು ಪಡೆಯುವುದೋ ಇಲ್ಲವೇ ಪ್ರಾಣವನ್ನು ಬಿಡುವುದೋ ಅಂತೂ ಯಾವುದಾದರೊಂದು ಕ್ಷತ್ರಿಯನಿಗೆ ನಿತ್ಯಧರ್ಮವೆಂದು ವಿಧಾತನು ತೋರಿಕೊಟ್ಟಿರುವಲ್ಲಿ ದೈನ್ಯವು ಕ್ಷತ್ರಿಯನಲ್ಲಿ ಬಹಳ ನಿಂದನೀಯ. ಎಲೈ ಆರಾತಿ ನಿಪಾತನನಾದ ಯುಧಿಷ್ಠಿರನೆ! ನೀನು ದೀನನಾದರೆ ನಿನ್ನ ಸ್ವಂತ ಅಂಶವನ್ನೆಂದಿಗೂ ಪಡೆಯಲಾರೆ. ಆದುದರಿಂದ ವಿಕ್ರಮವನ್ನು ತೋರಿ ಶತ್ರುನಾಶವನ್ನು ಮಾಡು.''

ಗೀತೆಯಲ್ಲಿಯೂ ಅರ್ಜುನನಿಗೆ ಕೃಷ್ಣನು ಹೀಗೆಯೇ ಹೇಳಿರುವನು. ಇದರಿಂದ ಹೊರಡುವ ಸಿದ್ಧಾಂತದ ವಿಷಯವಾಗಿ ನಾವು ಮೊದಲೇ ಹೇಳಿದೇವೆ. ಪುನಃ ಕೃಷ್ಣನು ಭೀಮನನ್ನು ಕುರಿತು ಹೇಳಿದ ಉತ್ತರ: "ಮನುಷ್ಯನು ಪುರುಷಕಾರ ಪರಿತ್ಯಾಗವನ್ನು ಮಾಡಿ ದೈವವನ್ನೇ ಆಗಲಿ, ದೈವಪರಿತ್ಯಾಗಪೂರ್ವಕ ಪುರುಷಕಾರವನ್ನೇ ಆಗಲಿ ಅವಲಂಬನ ಮಾಡಿ ಜೀವನವನ್ನು ಧರಿಸುವುದಕ್ಕಾಗುವುದಿಲ್ಲ. ಆದುದರಿಂದ ದೈವ ಮತ್ತು ಪುರುಷಕಾರಗಳನ್ನವಲಂಬಿಸಿ ಕೃತನಿಶ್ಚಯನಾಗಿ ಕೆಲಸಮಾಡತೊಡಗುವನು. ಇಂಥವನು ಮಾಡತೊಡಗುವ ಕೆಲಸ ಆಗದೆ ಹೋದಾಗ ದುಃಖಪಡುವುದೂ ಸಿದ್ಧಿಯಾದಾಗ ಸಂತುಷ್ಟನಾಗುವುದೂ ಇಲ್ಲ." *ಗೀತೆಯಲ್ಲಿರುವುದೂ ಹೀಗೆಯೇ.

ಕೃಷ್ಣನು ಅರ್ಜುನನಿಗೆ ಹೇಳಿದ್ದು—''ಹಸನಾದ ಭೂಮಿಯನ್ನು ಹದವರಿತು ಉತ್ತು ಬೀಜವನ್ನು ಬಿತ್ತಿದರೂ ಮಳೆಯಿಲ್ಲದೆ ಹೋದರೆ ಫಲೋತ್ಪತ್ತಿಯಾಗುವುದಿಲ್ಲ. ಪುರುಷನು ಪುರುಷಕಾರವನ್ನನುಸರಿಸಿ ನೀರೆರೆದರೂ ದೈವಪ್ರಭಾವದಿಂದ ಅದು ಒಣಗಿಹೋಗಬಹುದು. ಆದುದರಿಂದ ಪ್ರಾಚೀನ ಮಹಾತ್ಮರು ದೈವ ಮತ್ತು ಪುರುಷಕಾರ ಇವೆರಡೂ ಒಂದೆಡೆಯಲ್ಲಿ ಸೇರಿದ ಹೊರತು ಕಾರ್ಯ ಕೈಗೂಡುವುದಿಲ್ಲವೆಂದು ಸ್ಥಿರಮಾಡಿರುವರು. ನಾನು ಕೈಲಾದಮಟ್ಟಿಗೂ ಪುರುಷಕಾರವನ್ನು ಮಾಡಬಲ್ಲೆನು. ಆದರೆ ದೈವಕರ್ಮಾನುಷ್ಠಾನದಲ್ಲಿ ನನಗೆ ಕೊಂಚವೂ ಸಾಮರ್ಥ್ಯವಿಲ್ಲ."

---

*ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥೨—೪೮

ಈ ಮಾತನ್ನು ನಾವು ಮೊದಲೇ ಎತ್ತಿರುವೆವು. ಕೃಷ್ಣನು ಇಲ್ಲಿ ದೇವತ್ವವನ್ನು ಲೇಶವೂ ಒಪ್ಪದವನಾಗಿರುವನು. ಮನುಷ್ಯ ಶಕ್ತಿಯ ಮೂಲಕವೇ ಕರ್ಮಸಾಧನೆಗೆ ಕೈಹಾಕಿರುವನು. ಈಶ್ವರನ ಶಕ್ತಿಯಿಂದ ಕರ್ಮಗಳನ್ನು ಸಾಧಿಸುವುದು ಈಶ್ವರನ ಅಭಿಪ್ರಾಯವಾಗಿದ್ದರೆ ಅವತಾರಕ್ಕೆ ಪ್ರಯೋಜನವೇ ಇಲ್ಲ.

ಇತರರ ಮಾತುಗಳೆಲ್ಲ ಮುಗಿದಮೇಲೆ ದ್ರೌಪದಿ ಕೃಷ್ಣನಿಗೆ ಹೇಳಿದ ಮಾತುಗಳು ಹೆಂಗಸರ ಬಾಯಿಂದ ಹೊರಟವೆಂದರೆ ಅತ್ಯಂತ ಆಶ್ಚರ್ಯವನು ಹುಟ್ಟಿಸುವಂತೆ ಇವೆ—"ಅವಧ್ಯನನ್ನು ವಧಿಸಿದರೆ ಬರುವ ಪಾಪವು ವಧಾರ್ಹನನ್ನು ವಧಿಸದಿದ್ದರೂ ಬರುವುದು."

ಹೆಂಗಸರ ಬಾಯಲ್ಲೀ ಮಾತು ಬಂದಿರಲಾರದೆಂದು ತೋರಿದರೂ ಒಪ್ಪಲೇಬೇಕಾಗಿರುವುದು. ಪೂರ್ವದಲ್ಲಿ ನಾನು 'ವಂಗದರ್ಶನದಲ್ಲಿ' ಚಿತ್ರಿಸಿರುವ ದ್ರೌಪದಿಯ ಚರಿತ್ರೆಗೆ ಈ ಮಾತು ಒಪ್ಪುವುದು. ಹೆಂಗಸಿನ ಬಾಯಿಂದ ಬಂದಿರುವ ಈ ಮಾತು ಚೆನ್ನಾಗಿರಲಿ ಇಲ್ಲದಿರಲಿ ಇದರಲ್ಲಿ ರೂಢಿಯಾದ ಮತ್ತೂ ಕೃಷ್ಣನಿಗೊಪ್ಪಿತವಾದ ಅಭಿಪ್ರಾಯವುಂಟು ಎಂಬುದನ್ನು ಜರಾಸಂಧ ವಧಾಧ್ಯಾಯದಲ್ಲಿಯೂ, ಇತರ ಹಲವೆಡೆಗಳಲ್ಲಿಯೂ ತಿಳಿಸಿರುತ್ತೇನೆ.

ದ್ರೌಪದಿಯ ಮಾತಿನ ಕೊನೆಯಲ್ಲಿ ಅಪೂರ್ವವಾದೊಂದು ಕವಿ ಕೌಶಲವಿರುವುದು. ಅದನ್ನು ನೋಡಿ :—

ಪರಮ ರಮಣೀಯವಾದ, ಸರ್ವ ಗಂಧಾದಿವಾಸಿತವಾದ, ಸರ್ವ ಲಕ್ಷಣ ಸಂಪನ್ನವಾದ, ಕುಟಿಲಾಗ್ರವಾದ, ಕಾಲಸರ್ಪನಂತಿರುವ ಕೇಶ ಕಲಾಪವನ್ನುಳ್ಳ ಅಸಿತಾಪಾಂಗಿಯಾದ ದ್ರುಪದನಂದಿನಿ ಕಂಬನಿದುಂಬಿ ದೀನವದನಳಾಗಿ ಕೃಷ್ಣನನ್ನು ಕುರಿತು : "ಎಲೈ ಜನಾರ್ದನನೇ! ದುರಾತ್ಮನಾದ ದುಶ್ಶಾಸನನು ನನ್ನ ಮುಡಿಯನ್ನು ಹಿಡಿದೆಳೆದನು. ಶತ್ರುಗಳು ಸಂಧಿಗೊಪ್ಪುವ ಅಭಿಪ್ರಾಯವುಳ್ಳವರಾದಲ್ಲಿ ನೀನು ನನ್ನೀ ಮುಂಡೆಯನ್ನು ನೆನೆಯಬೇಕು. ಭೀಮಾರ್ಜುನರು ದೀನರಂತೆ ಸಂಧಿಗೆ ಒಪ್ಪಲುಳ್ಳವರಾಗಿರುವರು. ಅದರಿಂದ ನನಗೇನೂ ನಷ್ಟವಿಲ್ಲ. ನನ್ನ ಮುದುಕನಾದ ತಂದೆಯೂ, ಮಹಾರಥರಾದ ಮಕ್ಕಳೂ ಸೇರಿ ಶತ್ರು

ಗಳೊಡನೆ ಸಂಗ್ರಾಮವನ್ನು ಮಾಡುವರು. ಮಹಾಬಲ ಪರಾಕ್ರಾಂತರಾದ ನನ್ನ ಐವರು ಮಕ್ಕಳೂ ಅಭಿಮನ್ಯುವನ್ನು ಮುಂದಿಟ್ಟುಕೊಂಡು ಕೌರವರನ್ನು ಸಂಹರಿಸುವರು. ದುರಾತ್ಮನಾದ ದುಶ್ಶಾಸನನ ಕಾಳಹಸ್ತ ಕತ್ತರಿಸಲ್ಪಟ್ಟು ನೆಲದಲ್ಲಿ ಬಿದ್ದು ಧೂಳಿನಲ್ಲಿ ಉರುಳುವುದನ್ನು ಕಣ್ಣಾರ ನೋಡಿದ ಹೊರತು ನನಗೆ ಶಾಂತಿಯೆಲ್ಲಿಯದು? ನಾನು ಉರಿಯುತ್ತಲಿರುವ ಬೆಂಕಿಯಂತೆ ನನ್ನ ಹೃದಯದಲ್ಲಿ ಕ್ರೋಧವನ್ನು ಹದಿಮೂರು ವರ್ಷಗಳಿಂದಲೂ ಅಡಗಿಸಿಕೊಂಡು ಬಂದಿರುವೆನಾದರೂ ಇನ್ನೂ ಇದನ್ನಾರಿಸುವ ಉಪಾಯವನ್ನು ಕಾಣದೆ ಇದ್ದೇನೆ; ಈಗ ಧರ್ಮದ ದಾರಿಯನ್ನು ಹಿಡಿದಾಡಿದ ವೃಕೋದರನ ಮಾತಿನ ಪೆಟ್ಟುಗಳಿಂದ ನನ್ನೆದೆಯು ಬಿರಿದುಹೋಗುತಲಿದೆ."

ನಿಬಿಡ ನಿತಂಬಿನಿಯೂ ಆಯತಲೋಚನೆಯೂ ಆದ ಕೃಷ್ಣೆ ಹೀಗೆಂದು ಬಾಷ್ಪಗದ್ಗದ ಸ್ವರದಲ್ಲಿ ಮೈ ಗಡಗಡನೆ ನಡುಗುತಲಿರಲು ಅಳತೊಡಗಿದಳು. ಕರಗಿದ ಬೆಂಕಿಯಂತೆ ಅತ್ಯಂತ ಬಿಸಿಯಾದ ಕಂಬನಿಗಳಿಂದ ಅವಳ ಪಯೋಧರಗಳು ನೆನೆಯುತಲಿರಲು, ಮಹಾಬಾಹುವಾದ ವಾಸುದೇವನು ಅವಳನ್ನು ಸಂತವಿಟ್ಟು—"ಎಲೈ ಕೃಷ್ಣೆ, ನೀನೀಗ ಅಳುತ್ತಲಿರುವಂತೆಯೇ ಕುರುಕುಲ ಕಾಮಿನಿಯರು ತಮ್ಮ ತಮ್ಮ ಜ್ಞಾತಿಬಾಂಧವರು ನಿಹತರಾಗಲು ಅಳುತ್ತಲಿರುವುದನ್ನು ಇಷ್ಟರಲ್ಲಿಯೇ ನೋಡುವೆ. ಯುಧಿಷ್ಠಿರನ ಅಪ್ಪಣೆಯ ಪ್ರಕಾರ ನಾನು ಭೀಮಾರ್ಜುನ ನಕುಲ ಸಹದೇವಾದಿಗಳನ್ನೊಡಗೊಂಡು ಕೌರವರ ವಧೆಗೆ ತೊಡಗುವೆನು. ಕಾಲವಶರಾಗಿ ಧೃತರಾಷ್ಟ್ರನ ಮಕ್ಕಳು ನನ್ನ ಮಾತನ್ನಾದರಿಸದೆ ಹೋಗಲು ಬೇಗನೆ ಸಂಹೃತರಾಗಿ ನರಿ ನಾಯ್ಗಳ ಹಬ್ಬಕ್ಕೆ ಅಣಿಯಾಗಿ ನೆಲದಲ್ಲಿ ಮಲಗುವರು. ಹಿಮವಂತನು ಚಲಿಸಿದರೂ ಮೇದಿನಿಯು ತಲೆಕೆಳಗಾದರೂ ನಕ್ಷತ್ರಮಂಡಲದಿಂದ ಕೂಡಿದ ಆಕಾಶ ಕಳಚಿಬಿದ್ದರೂ ನನ್ನ ಮಾತು ಸುಳ್ಳಾಗದು. ಎಲೈ ಕೃಷ್ಣೆ, ಕಂಬನಿಗಳನ್ನು ತೊಡೆದುಕೊ, ಇಷ್ಟರಲ್ಲಿಯೇ ನಿನ್ನ ಗಂಡಂದಿರು ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ಪಡೆದುಕೊಳ್ಳುವುದನ್ನು ನೀನು ನೋಡುವೆ, ಇದು ನಿಶ್ಚಯ."

ಇದು ರಕ್ತಕ್ಕೆ ಬಾಯಾರಿದ ಹಿಂಸಕನು ಅಥವಾ ಕ್ರೋಧದಿಂದ ಬೆಂದವನು ಆಡಿದ ಮಾತಲ್ಲ. ಸರ್ವತೋಮುಖವಾದ ಸರ್ವಕಾಲ

ವ್ಯಾಪಿಯಾದ ಬುದ್ಧಿಯ ಪ್ರಭಾವದಿಂದ ಮುಂದಾಗುವುದನ್ನು ಚೆನ್ನಾಗಿ ತಿಳಿದುಕೊಂಡಿರುವವನ ಮಾತು. ದುರ್ಯೋಧನನು ಅರ್ಧರಾಜ್ಯವನ್ನು ಹಿಂದಕ್ಕೆ ಕೊಟ್ಟು ಸಂಧಿಯನ್ನು ಮಾಡಿಕೊಳ್ಳುವುದಕ್ಕೆ ಎಂದಿಗೂ ಒಪ್ಪತಕ್ಕವನಲ್ಲವೆಂಬುದನ್ನು ಕೃಷ್ಣನು ಚೆನ್ನಾಗಿ ಬಲ್ಲವನಾಗಿದ್ದನು. ಇದನ್ನು ತಿಳಿದೂ ಸಂಧಿಗೋಸ್ಕರ ಕೌರವ ಸಭೆಗೆ ಹೋಗಬೇಕಾದುದೇಕೆಂದರೆ— ಮಾಡಬೇಕಾದುದನ್ನು ಫಲವಾಗಲಿ ಆಗದೇ ಇರಲಿ ಮಾಡಲೇಬೇಕು. ಸಿದ್ಧಿಯೂ ಅಸಿದ್ಧಿಯೂ ಒಂದೇ ಸಮವಾಗಿ ನೋಡಬೇಕಾದವು. ಗೀತೆಯಲ್ಲಿ ಇದೇ ಮಾತೇ ಅವನ ಬಾಯಿಂದ ಅಮೃತಮಯವಾದ ಧರ್ಮವಾಗಿ ಅರ್ಜುನನಿಗೆ ಕಲಿಸಿದುದಾಗಿದೆ. 'ಸಿದ್ಧ್ಯಸಿದ್ಧ್ಯೋಃಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ. ಈ ನೀತಿಯನ್ನನುಸರಿಸಿಯೇ ಆದರ್ಶ ಯೋಗಿ ಮುಂದಾಗುವುದನ್ನು ಅರಿತಿದ್ದರೂ ಸಂಧಿಸ್ಥಾಪನೆಯ ಪ್ರಯತ್ನಕ್ಕಾಗಿ ಕೌರವ ಸಭೆಗೆ ತೆರಳಿದನು.

ಪಂಚಮ ಪರಿಚ್ಛೇದ

ಪ್ರಯಾಣ

ಶ್ರೀ ಕೃಷ್ಣನ ವ್ಯವಹಾರವೆಲ್ಲವೂ ಕಾಲೋಚಿತವಾಗಿ ಮನುಷ್ಯನಿಗೆ ಉಪಯೋಗವಾಗತಕ್ಕವು. ಅವನು ಕಾರ್ತೀಕ ಮಾಸದಲ್ಲಿ ರೇವತೀ ನಕ್ಷತ್ರ ಯುಕ್ತವಾದೊಂದು ದಿವಸದ ಮೈತ್ರ ಮುಹೂರ್ತದಲ್ಲಿ ಕೌರವ ಸಭೆಯನ್ನು ಕುರಿತು ತೆರಳುವ ಉದ್ದೇಶದಿಂದ ನಂಬುಗೆಯಾದ ಬ್ರಾಹ್ಮಣರ ಸ್ವಸ್ತಿ ವಾಚನವನ್ನು ಕೇಳುತ್ತಾ, ಪ್ರಾತಃಕೃತ್ಯವನ್ನು ಮುಗಿಸಿ ಸ್ನಾನವನ್ನು ಮಾಡಿ ವಸನ ಭೂಷಣಗಳನ್ನು ಧರಿಸಿ ಸೂರ್ಯ ಮತ್ತು ಅಗ್ನಿಯ ಉಪಾಸನೆಯನ್ನು ಮಾಡಿ, ವೃಷಲಾಂಗೂಲ ದರ್ಶನಪೂರ್ವಕವಾಗಿ ಬ್ರಾಹ್ಮಣರನ್ನು ವಂದಿಸಿ ಅಗ್ನಿಗೆ ಬಲವಂದು, ಮಂಗಳಪ್ರದಗಳಾದ ವಸ್ತುಗಳನ್ನು ನೋಡುತ್ತಾ ಪ್ರಯಾಣಮಾಡಿದನು.

ಶ್ರೀ ಕೃಷನು ಗೀತೆಯಲ್ಲಿ ಪ್ರಚಾರಿಸಿರುವ ಧರ್ಮ ಆವುದುಂಟೋ ಅದರಲ್ಲಿ ಆಗಿನ ಕಾಲದಲ್ಲಿ ಪ್ರಬಲವಾಗಿ ಕಾಮ್ಯಕರ್ಮ ಪರಾಯಣವಾದ

ವೈದಿಕ ಧರ್ಮ ನಿಂದಿತವಾಗಿದೆ. ಆದರೂ ವೇದ ಪರಾಯಣರಾದ ಬ್ರಾಹ್ಮಣರ ಅಪಮಾನವನ್ನು ಯಾವಾಗಲೂ ಮಾಡಿಲ್ಲ. ಅವನು ಆದರ್ಶ ಮನುಷ್ಯನಾದುದರಿಂದ ಆಗಿನ ಕಾಲದಲ್ಲಿ ಉಚಿತವಾಗಿದ್ದ ವ್ಯವಹಾರವನ್ನೇ ಬ್ರಾಹ್ಮಣರ ವಿಷಯದಲ್ಲಿಯೂ ಆಚರಿಸಿರುವನು. ಆಗಿನ ಕಾಲದ ಬ್ರಾಹ್ಮಣರು ವಿದ್ವಾಂಸರಾಗಿಯೂ ಜ್ಞಾನಿಗಳಾಗಿಯೂ ಧರ್ಮಾತ್ಮರಾಗಿಯೂ ಅಸ್ವಾರ್ಥಪರರಾಗಿಯೂ ಇದ್ದು ಸಮಾಜದ ಮಂಗಳವನ್ನೇ ಸರ್ವದಾ ಸಾಧಿಸುತಲಿದ್ದರು. ಆದುದರಿಂದ ಎಲ್ಲಾ ವರ್ಣಗಳಲ್ಲಿಯೂ ಅವರಿಗೆ ಪೂಜೆ ಸಲ್ಲುತಲಿದ್ದುದು ನ್ಯಾಯ. ಉದಾಹರಣೆಗಾಗಿ, ದಾರಿಯಲ್ಲಿ ಋಷಿಗಳ ಸಮಾಗಮ ವರ್ಣನೆಯನ್ನು ಎತ್ತಿರುವೆನು :—

"ಮಹಾಬಾಹುವಾದ ಕೇಶವನು ಈ ರೀತಿಯಾಗಿ ಕೆಲವು ದೂರ ಪಯಣಮಾಡಿ ದಾರಿಯ ಎರಡು ಪಾರ್ಶ್ವಗಳಲ್ಲಿಯೂ ಬ್ರಹ್ಮತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಕೆಲ ಮಹರ್ಷಿಗಳನ್ನು ಕಂಡು ಒಡನೆಯೇ ರಥದಿಂದ ಇಳಿದು ಅವರನ್ನು ವಂದಿಸಿ,—'ಎಲೈ ಮಹರ್ಷಿಗಳೇ, ಸಮಸ್ತ ಜನರೂ ಕುಶಲರಾಗಿರುವರೆ? ಧರ್ಮ ಉತ್ತಮ ರೀತಿಯಲ್ಲಿ ಆಚರಿಸಲ್ಪಡುತ್ತಲಿರುವುದೆ? ಕ್ಷತ್ರಿಯಾದಿ ವರ್ಣತ್ರಯವೂ ಬ್ರಾಹ್ಮಣರ ಶಾಸನಕ್ಕೆ ಒಳಪಟ್ಟು ಇರುವುದೆ? ತಾವು ಇರುವುದು ಎಲ್ಲಿ? ಈಗ ಹೀಗೆಲ್ಲಿಗೆ ಹೋಗುತ್ತಲಿದ್ದೀರಿ? ತಮಗೆ ಏನಾಗಬೇಕು? ನನ್ನಿಂದ ತಮಗಾಗಬೇಕಾದುದು ಏನಾದರೂ ಉಂಟೆ? ತಾವು ಈ ಭೂಮಂಡಲದಲ್ಲಿ ಅವತಾರವೆತ್ತಿದುದರ ಉದ್ದೇಶವೇನು?' ಎಂದು ಕೇಳಿದನು."

"ಆಗ ಮಹಾಭಾಗನಾದ ಜಾಮದಗ್ನಿಯು ಕೃಷ್ಣನನ್ನು ಅಲಂಗಿಸಿ—'ಎಲೈ ಮಧುಸೂದನನೆ, ನಮ್ಮಲ್ಲಿ ಕೆಲವರು ದೇವರ್ಷಿಗಳು, ಕೆಲವರು ಬಹುಶ್ರುತರಾದ ಬ್ರಾಹ್ಮಣರು, ಕೆಲವರು ರಾಜರ್ಷಿಗಳು, ಇನ್ನು ಕೆಲವರು ತಪಸ್ವಿಗಳು. ನಾವು ಹಲವು ಬಾರಿ ದೇವಾಸುರರ ಸಮಾಗಮವನ್ನು ನೋಡಿದ್ದೇವೆ. ಈಗ ಕ್ಷತ್ರಿಯ ಸಮುದಾಯ ವನ್ನೂ, ಸಭಿಕರನ್ನೂ, ಭೂಪತಿಗಳನ್ನೂ, ತಮ್ಮನ್ನೂ ನೋಡುವ ಇಚ್ಛೆಯಿಂದ ಬಂದಿದ್ದೇವೆ. ನಾವು ಕೌರವ ಸಭೆಯಲ್ಲಿ ನಿಮ್ಮ ಬಾಯಿಂದ ಬರುವ ಧರ್ಮಾರ್ಥ ಯುಕ್ತವಾದ ವಾಕ್ಯಗಳನ್ನು ಕೇಳಬೇಕೆಂದಿದ್ದೇವೆ. ಭೀಷ್ಮ, ದ್ರೋಣ, ವಿದುರ ಮೊದಲಾದ ಮಹಾತ್ಮರೂ ಮತ್ತು ತಾವೂ ಆಡುವ ಸತ್ಯವಾದ ಮತ್ತು ಹಿತಕರವಾದ ಮಾತುಗಳನ್ನು ಕೇಳಲು ಅತ್ಯಂತ ಕುತೂಹಲವುಳ್ಳವರಾಗಿ ಇರುವೆವು."

"ಈಗ ತಾವು ಬೇಗನೆ ಕುರುರಾಜ್ಯಕ್ಕೆ ದಯಮಾಡಿಸೋಣಾಗಲಿ, ನಾವು ಅಲ್ಲಿ ಬಂದು ಸಭಾಮಂಟಪದ ದಿವ್ಯಾಸನದಲ್ಲಿ ತೇಜಸ್ಸಿನಿಂದ ಬೆಳಗುತ್ತ ಕುಳಿತಿರುವ ತಮ್ಮನ್ನು ಕಂಡು ಮಾತನಾಡುವೆವು."

ಇಲ್ಲಿ ಜಾಮದಗ್ನಿ ಪರಶುರಾಮನು ಶ್ರೀಕೃಷ್ಣನ ಸಮಕಾಲಿಕನೆಂದು ಹೇಳಿರುವುದು. ರಾಮಾಯಣದಲ್ಲಿ ಶ್ರೀರಾಮನ ಸಮಕಾಲಿಕನೆಂದು

ವರ್ಣಿಸಿದೆ. ಆದರೆ ಪುರಾಣದಲ್ಲಿ ರಾಮ ಕೃಷ್ಣರಿಬ್ಬರಿಗಿಂತಲೂ ಮುಂಚಿನವನೆಂದು ಹೇಳಿದೆ. ಪುರಾಣೋಕ್ತವಾದ ದಶಾವತಾರದ ಚರ್ಚೆ ಎಷ್ಟರಮಟ್ಟಿಗೆ ಸಂಗತವೆಂಬುದನ್ನು ನಾವು ಬೇರೆ ಗ್ರಂಥದಲ್ಲಿ ವಿಚಾರಿಸುವೆವು.

ಈ ಹಸ್ತಿನಾಯಾತ್ರೆಯಿಂದ ಕೃಷ್ಣನು ಸಾಧಾರಣ ಪ್ರಜೆಗಳಿಗೂ ಪೂಜ್ಯನಾಗಿದ್ದನೆಂದು ತಿಳಿಯಬರುವುದು. ಈ ಯಾತ್ರೆಯ ವರ್ಣನೆಯ ಕೆಲವಂಶವನ್ನು ಇಲ್ಲಿ ಎತ್ತಿದೆ:—

"ದೇವಕೀನಂದನನು ಸರ್ವಸಸ್ಯಪರಿಪೂರ್ಣಗಳೂ ಅತಿರಮ್ಯಗಳೂ ಸುಖಾಸ್ಪದಗಳೂ ಪರಮ ಪವಿತ್ರಗಳೂ ಆದ ಗದ್ದೆಬೈಲುಗಳನ್ನೂ, ಮನೋಹರಗಳೂ ತೃಪ್ತಿಕರಗಳೂ ಆದ ಬಗೆ ಬಗೆಯ ಹಳ್ಳಿಯ ಜಾನವಾರಗಳನ್ನೂ ನೋಡುತ್ತಾ ನಾನಾ ವಿಧವಾದ ಪಟ್ಟಣಗಳನ್ನೂ ರಾಜ್ಯಗಳನ್ನೂ ಅತಿಕ್ರಮಿಸಿ ಬರಲು, ಕುರುಕುಲದವರಿಂದ ಸಂರಕ್ಷಿತವಾಗಿ ನಿತ್ಯಸಂತುಷ್ಟರೂ ಕಷ್ಟವ್ಯಸನಗಳಿಲ್ಲದವರೂ ಆದ ಪುರವಾಸಿಗಳೂ ಕೃಷ್ಣನನ್ನು ನೋಡುವ ಕುತೂಹಲವುಳ್ಳವರಾಗಿ ಉಪಪ್ಲಾವ್ಯನಗರದಿಂದಾಚೆಗೆ ಬಂದು ದಾರಿಯಲ್ಲಿ ಎದುರು ನೋಡುತ್ತಿರುವಲ್ಲಿ,—ಮಹಾತ್ಮನಾದ ವಾಸುದೇವನು ಬರಲು ಅವನನ್ನು ವಿಧಿವತ್ತಾಗಿ ಪೂಜಿಸಿದರು."

ಇತ್ತ ಕಡೆ ಭಗವಾನ್ ಸೂರ್ಯನು ತನ್ನ ಕಿರಣಸಮೂಹವನ್ನು ಬಿಟ್ಟು ರಕ್ತಕಾಂತಿಯನ್ನು ಧರಿಸಲು ಅರಾತಿನಿಪಾತನನಾದ ಮಧುಸೂದನನು ಮರಗಳ ಕೆಳಗೆ ಪ್ರವೇಶಿಸಿ ಬೇಗನೆ ರಥದಿಂದಿಳಿದು ಯಥಾವಿಧಿಯಾಗಿ ಶೌಚವನ್ನು ಮುಗಿಸಿ ರಥದ ತೇಜಿಗಳನ್ನು ಬಿಚ್ಚಲು ಹೇಳಿ ಸಂಧ್ಯೋಪಾಸನೆಯನ್ನು ಮಾಡತೊಡಗಿದನು. ದಾರುಕನು ರಥವನ್ನು ಬಿಚ್ಚಿ ಶಾಸ್ತ್ರಾನುಸಾರವಾಗಿ ವಾಜಿಗಳ ಪರಿಚರ್ಯೆಯನ್ನು ಮಾಡಿ ಮೈತೊಳೆದು ಅವನ್ನು ಬಿಟ್ಟನು. ಮಹಾತ್ಮನಾದ ಮಧುಸೂದನನು ಸಂಧ್ಯೆಯು ಮುಗಿದಮೇಲೆ ತನ್ನ ಸಂಗಡ ಬಂದಿದ್ದವರನ್ನು ಕುರಿತು "ಎಲೈ ಪರಿಚಾರಕರಿರಾ, ಇಂದು ಯುಧಿಷ್ಠಿರನ ಕಾರ್ಯನಿಮಿತ್ತ ಇಲ್ಲೇ ರಾತ್ರಿಯನ್ನು ಕಳೆಯಬೇಕಾಗಿದೆ" ಎಂದು ಹೇಳಲು, ಪರಿಚಾರಕರು ಒಡನೆಯೇ ಪಟಮಂಟಪ (ಡೇರೆ)ಗಳನ್ನು ನಿರ್ಮಿಸಿ ರುಚಿಯಾದ ಅಡಿಗೆಯನ್ನು ಮಾಡಿದರು. ಆ ಗ್ರಾಮದಲ್ಲಿರುವ ಸ್ವಧರ್ಮಾವಲಂಬಿಗಳೂ, ವೃದ್ಧರೂ, ಆರ್ಯಕುಲೀನರೂ ಆದ ಬ್ರಾಹ್ಮಣರು ಮಹಾತ್ಮನಾದ ಹೃಷೀಕೇಶನ ಸಮೀಪಕ್ಕೆ ಬಂದು ವಿಧಿವತ್ತಾಗಿ ಅವನಿಗೆ ಪೂಜೆಯನ್ನೂ ಆಶೀರ್ವಾದವನ್ನೂ ಮಾಡಿ ತಂತಮ್ಮ ಮನೆಗಳಿಗೆ ಬರ

ಬೇಕೆಂದು ಬೇಡಿಕೊಂಡರು. ಮಧುಸೂದನನು ಅವರನ್ನು ಮರ್ಯಾದಿಸಿ ಅವರವರ ಮನೆಗಳಿಗೆ ಹೋಗಿ ಮರಳಿ ಅವರನ್ನೊಡಗೊಂಡು ತನ್ನ ಪಟ ಮಂಟಪಕ್ಕೆ ಬಂದು ಅವರ ಸಂಗಡ ಸುಖಭೋಜನಂಗೈದು ಮಲಗಿ ರಾತ್ರಿ ಯನ್ನು ಕಳೆದನು.

ಇದೆಲ್ಲಾ ಮನುಷ್ಯ ಚರಿತ್ರೆ ; ಆದರೆ ಆದರ್ಶಮನುಷ್ಯನದು. ದೇವರೆಂದು ಇವನನ್ನು ಯಾರೂ ಪೂಜಿಸಿಲ್ಲ. ಶ್ರೇಷ್ಠ ಮನುಷ್ಯನಿಗೆ ಆಗುವ ಮಾನ ಮರ್ಯಾದೆಗಳು ಇವನಿಗಾಗಿವೆ. ಮಾದರಿಯ ಮನುಷ್ಯನು ಮನುಷ್ಯ ರೊಡನೆ ಹೇಗೆ ನಡೆದುಕೊಳ್ಳಬೇಕೋ ಹಾಗೆ ಇವನು ನಡೆಯುತ್ತಿರುವನು.

ಷಷ್ಠ ಪರಿಚ್ಛೇದ

ಹಸ್ತಿನೆಯಲ್ಲಿ ಮೊಲನೆಯ ದಿನ

ಕೃಷ್ಣನ ಬರುವಿಕೆಯನ್ನು ಕೇಳಿ ಧೃತರಾಷ್ಟ್ರನು ಅವನನ್ನು ಸನ್ಮಾನಿಸಿ ಬರಮಾಡಿಕೊಳ್ಳುವುದಕ್ಕಾಗಿ ವಿಶೇಷ ಪ್ರಯತ್ನಗಳನ್ನು ಮಾಡತೊಡಗಿದನು. ನಾನಾ ರತ್ನಗಳಿಂದ ಸಭಾಗೃಹವನ್ನಲಂಕರಿಸಿದರು. ಅನೇಕಾನೇಕ ಹಸ್ತಿ, ಅಶ್ವರಥ, ದಾಸ, ಅಜಾತಾಪತ್ಯರಾದ ನೂರಾರು ದಾಸೀಗಣ, ಮೇಕೆ, ಕುದುರೇಮರಿ, ಮಣಿ, ಮಾಣಿಕ್ಯ ಮೊದಲಾದುವನ್ನು ಕೃಷ್ಣನಿಗೆ ಉಪಾಯನ ವಾಗಿ ಸಮರ್ಪಿಸುವುದಕ್ಕೆಂದು ಸಂಗ್ರಹಿಸಲಾರಂಭಿಸಿದರು.

ಇದನ್ನು ನೋಡಿ ವಿದುರನು—"ಚೆನ್ನಾಯಿತು, ಚೆನ್ನಾಯಿತು. ನೀನೆಂತಹ ಧಾರ್ಮಿಕನೋ ಅಂತಹ ಬುದ್ಧಿಯುಳ್ಳವನು. ಕೃಷ್ಣನನ್ನು ಮಣಿ, ಮಾಣಿಕ್ಯ ಮೊದಲಾದುವುಗಳಿಂದ ಮೋಸಪಡಿಸುವುದಕ್ಕಾದೀತೆ ? ಅವನು ಬಂದ ಕೆಲಸವನ್ನು ನೇರವೇರಿಸಿಕೊಡು. ಹಾಗಿಲ್ಲದೆ ಅರ್ಥಾಪೇಕ್ಷೆ ಯಿಂದ ಅವನೆಂದಿಗೂ ನಿನ್ನ ವಶನಾಗನು" ಎಂದು ಧೃತರಾಷ್ಟ್ರನಿಗೆ ತಿಳುಹಿಸಿದನು.

ಧೃತರಾಷ್ಟ್ರನು ಧೂರ್ತ, ವಿದುರನು ಸರಳಮನಸ್ಕ, ದುರ್ಯೋಧನನು ಇವೆರಡೂ. "ಕೃಷ್ಣನು ಪೂಜನೀಯನೇ ಸರಿ, ಆದರೂ ಈಗ ಅವನನ್ನರ್ಚಿಸ

ಲಾಗದು. ಯುದ್ಧವನ್ನು ಬಿಡುವುದಕ್ಕೆ ಆಗದೆ ಇರುವಾಗ ಅವನನ್ನು ಪೂಜಿಸಿ ಏನು ಪ್ರಯೋಜನ? ಅವನಿಗೆ ಹೆದರಿ ಸಂತೋಷಪಡಿಸಿದೆವೆಂದು ಜನಗಳು ಆಡಿಕೊಳ್ಳುವುದಿಲ್ಲವೆ! ಇದಕ್ಕಿಂತ ಉತ್ತಮವಾದ ಒಂದು ಒಳ್ಳೆಯ ದಾರಿಯನ್ನು ನಾನು ಹುಡುಕಿ ಇದೇನೆ. ಅವನನ್ನು ನಾವು ಬಂಧಿಸಿಬಿಟ್ಟರೆ ಪಾಂಡವರು ತಮ್ಮ ಬುದ್ಧಿಬಲವಾದ ಇವನನ್ನು ಕಳೆದುಕೊಂಡು ನಮ್ಮ ಅಡಿಯಾಳುಗಳಾಗುವರು" ಎಂದು ದುರ್ಯೋಧನನು ಹೇಳಿದನು.

ಈ ಮಾತನ್ನು ಕೇಳಿ ಧೃತರಾಷ್ಟ್ರನು ಮಗನನ್ನು ತಿರಸ್ಕರಿಸಿದನು. ಕೃಷ್ಣಭಕ್ತನಾದ ಭೀಷ್ಮನೂ ದುರ್ಯೋಧನನನ್ನು ಅನೇಕ ಬಗೆಯಾದ ನಿಷ್ಠುರ ವಚನಗಳಿಂದ ಬೈದು ಸಭೆಯಿಂದೆದ್ದು ಹೊರಟುಹೋದನು.

ಪಟ್ಟಣವಾಸಿಗಳೂ ಕೌರವರೂ ಸೇರಿ ಕೃಷ್ಣನನ್ನು ಬಹು ಸನ್ಮಾನದಿಂದ ಸಭೆಗೆ ಬರಮಾಡಿಕೊಂಡರು. ಅವನಿಗಾಗಿ ಬಹು ಕಷ್ಟಪಟ್ಟು ನಿರ್ಮಿಸಿದ್ದ ಸಭಾಮಂಟಪವನ್ನು ಕಡೆಗಣ್ಣಿಂದಲೂ ನೋಡದೆ ನೇರವಾಗಿ ಧೃತರಾಷ್ಟ್ರನ ಮನೆಗೆ ಹೋಗಿ ಅಲ್ಲಿಂದ ಕುರುಸಭೆಯನ್ನು ಪ್ರವೇಶಿಸಿ ಅಲ್ಲಿ ತನಗೆ ಯೋಗ್ಯರೆಂದು ತೋರಿದವರೊಡನೆ ಅನುಗುಣವಾದ ಸತ್ಸಂಭಾಷಣೆಯನ್ನು ಮಾಡಿ ಬಳಿಕ ರಾಜನ ಅರಮನೆಯನ್ನು ಬಿಟ್ಟು ದೀನಬಂಧುವಾದ ಕೃಷ್ಣನು ಒಬ್ಬ ದೀನನ ಮನೆಯನ್ನು ಕುರಿತು ತೆರಳಿದನು.

ವಿದುರನು ಧೃತರಾಷ್ಟ್ರನಿಗೆ ಒಂದು ಬಗೆಯ ತಮ್ಮನು. ಇಬ್ಬರೂ ವ್ಯಾಸರ ಔರಸರು. ಧೃತರಾಷ್ಟ್ರನಾದರೋ ವಿಚಿತ್ರವೀರ್ಯನ ಕ್ಷೇತ್ರಜನು. ವಿದುರನು ವಿಚಿತ್ರವೀರ್ಯನ ದಾಸಿಯೋರ್ವಳ ಕ್ಷೇತ್ರಜನು. ಇವನನ್ನು ವಿಚಿತ್ರವೀರ್ಯನ ಕ್ಷೇತ್ರಜನೆಂದರೂ ಜಾತಿಯು ತಿಳಿಯುವುದಿಲ್ಲ. ವೈಶ್ಯಳ ಗರ್ಭದಲ್ಲಿ ಕ್ಷತ್ರಿಯನ ಕ್ಷೇತ್ರದಲ್ಲಿ, ಬ್ರಾಹ್ಮಣನಿಂದ ಅವನು ಹುಟ್ಟಿದನು.*

---

* ಮಹಾಭಾರತ ವೀರರ ಜಾತಿಯನ್ನು ತಿಳಿಯುವುದು ಬಹುಕಷ್ಟ. ಪಾಂಡವರ ಅಜ್ಜಿಯು ದಾಸ ಜಾತಿಯವಳಾದ ಸತ್ಯವತಿಯು; ಭೀಷ್ಮನ ತಾಯಿಯ ಜಾತಿಯನ್ನು ಮುಚ್ಚಿ ಅವನು ಗಂಗಾನದಿಯ ಮಗನೆಂದು ಹೇಳಲು ಕಾರಣವೇನೋ ಇರಬೇಕು. ಧೃತರಾಷ್ಟ್ರನೂ ಪಾಂಡುವೂ ಬ್ರಾಹ್ಮಣ (ವ್ಯಾಸ)ನ ಔರಸರು. ಕ್ಷತ್ರಿಯ ಸ್ತ್ರೀಯರಲ್ಲಿ ಜನಿಸಿದವರು. ಸ್ವಯಂ ವ್ಯಾಸದೇವನೂ ಆ ಬೆಸ್ತ ಕನ್ಯೆಯ ಕಾನೀನ ಪುತ್ರ.

ಅವನು ಸಾಮಾನ್ಯನಾದರೂ ಪರಮಧಾರ್ಮಿಕನು. ಕೃಷ್ಣನು ರಾಜ ಪ್ರಾಸಾದವನ್ನೊಪ್ಪದೆ ವಿದುರನ ಮನೆಯಲ್ಲಿ ನಿಂತು ಅವನ ಆತಿಥ್ಯವನ್ನು ಸ್ವೀಕರಿಸಿದನು. ಆಗಿನಿಂದ ಈಚೆಗೆ 'ವಿದುರನ ಕೂಳು' ಎಂಬ ಲೋಕ ರೂಢಿ ಪ್ರಸಿದ್ಧಿಗೆ ಬಂದಿದೆ. ಪಾಂಡವರ ತಾಯಿಯೂ ಕೃಷ್ಣನ ಸೋದರತ್ತೆಯೂ ಆದ ಕುಂತಿ ಅಲ್ಲೇ ಇದ್ದಳು. ವನಕ್ಕೆ ಹೊರಟಾಗ ಪಾಂಡವರು ಕುಂತಿಯನ್ನು ಹಸ್ತಿನೆಯಲ್ಲೇ ಬಿಟ್ಟುಹೋಗಿದ್ದರು. ಹದಿಮೂರು ವರ್ಷಗಳಿಂದ ಅಡವಿಪಾಲಾಗಿ ಅಲೆಯುತ್ತಲಿದ್ದ ತನ್ನ ಮಕ್ಕಳು ಮತ್ತು ಸೊಸೆ ಪಟ್ಟ ಕಷ್ಟನಿಷ್ಠುರಗಳನ್ನೂ ನೆನೆ ನೆನೆದು ಕೃಷ್ಣನ ಮುಂದೆ ಪ್ರಲಾಪಿ ಸಿದಳು. ಇದಕ್ಕೆ ಕೃಷ್ಣನು 'ಅಮೂಲ್ಯ'ವಾದ ಉತ್ತರವನ್ನು ದಯಪಾಲಿ ಸಿರುವನು. ಮನುಷ್ಯ ಚರಿತ್ರೆಯನ್ನು ಸರ್ವ ಪ್ರದೇಶದಲ್ಲಿಯೂ ಸಂಪೂರ್ಣ ವಾಗಿ ತಿಳಿದವನ ವಿನಾ ಮತ್ತಾರೂ ಅದರ ಅಮೂಲ್ಯತೆಯನ್ನು ಅರಿಯ ಲಾರರು. ಮೂರ್ಖರ ಮಾತು ಹಾಗಿರಲಿ. ಶ್ರೀಕೃಷನು ಹೇಳುತಲಿದಾನೆ:—

"ಪಾಂಡವರು ನಿದ್ರೆ, ಆಲಸ್ಯ, ಕ್ರೋಧ, ಹರ್ಷ, ಹಸಿವು, ಬಾಯಾರಿಕೆ ಹಿಮ, ಬಿಸಿಲುಗಳನ್ನು ಜಯಿಸಿ ವೀರರಿಗುಚಿತವಾದ ಸುಖದಲ್ಲಿ ಸದಾ

ಈಗಿನ ರೀತಿಯಲ್ಲಿ ಪಾಂಡು ಧೃತರಾಷ್ಟ್ರರಿಗೆ ಯಾವ ಜಾತಿಯವರಲ್ಲೂ ಸಹಪಙ್ತಿ ಭೋಜನದ ಯೋಗ್ಯತೆ ದೊರೆಯದು. ಪಾಂಡವರು ಕುಂತಿಯ ಮಕ್ಕಳೇನೋ ಹೌದು. ಆದರೆ ತಂದೆಯ ಹೆಸರು ನಾಮಮಾತ್ರಕ್ಕೇ. ಇವರು ಇಂದ್ರಾದಿಗಳ ಔರಸರು. ಇತ್ತಕಡೆ ದ್ರೋಣರು ಭರದ್ವಾಜರ ಮಕ್ಕಳೇನೋ ಹೌದು. ತಾಯಿ ಮಾತ್ರ ಒಂದು ಬಿಂದಿಗೆ. ಬಿಂದಿಗೆಯು ಗರ್ಭಧರಿಸುವುದನ್ನು ನಂಬದವರು, ದ್ರೋಣನ ತಾಯಿಯ ಕುಲವಿಚಾರದಲ್ಲಿ ಬಹು ಸಂದೇಹಕ್ಕೆ ಸಿಕ್ಕಿಕೊಳ್ಳುವರು. ಪಾಂಡವರ ತಂದೆಯ ವಿಷಯದಲ್ಲಿ ಗಲಭೆಯಿರುವಷ್ಟು ಕರ್ಣನ ತಂದೆಯ ಸಂಬಂಧ ದಲ್ಲಿಯೂ ಇದೆ. ಕರ್ಣನ ವಿಷಯವು ಇನ್ನೂ ವಿಚಿತ್ರ. ಅವನು ಕಾನೀನ. ದ್ರೌಪದಿ ಮತ್ತು ಧೃಷ್ಟದ್ಯುಮ್ನರ ತಾಯಿ ಯಾರೆಂಬುದನ್ನು ಒಬ್ಬರೂ ಅರಿಯರು. ಅವರು ಯಜ್ಞಕುಂಡದಲ್ಲಿ ಹುಟ್ಟಿದವರು.

ಆಗಿನ ಕಾಲದಲ್ಲಿ ಮದುವೆಯ ಸಂಬಂಧದಲ್ಲಿ ಅಷ್ಟು ತೊಂದರೆಯಿರಲಿಲ್ಲ. ಹಲವು ಋಷಿಗಳ ಧರ್ಮಪತ್ನಿಯರು ಕ್ಷತ್ರಿಯರಾಗಿದ್ದರು. ಅಗಸ್ತ್ಯಪತ್ನಿ ಲೋಪಾ ಮುದ್ರೆ. ಋಷ್ಯಶೃಂಗರ ಹೆಂಡತಿಯು ಶಾಂತೆ. ಋಚೀಕ ಮತ್ತು ಜಮದಗ್ನಿಯ ಹೆಂಡತಿಯರು ಕ್ಷತ್ರಿಯರು. ಪರಶುರಾಮನು ಕ್ಷತ್ರಿಯರನ್ನು ನಾಶಮಾಡಿದಮೇಲೆ ಬ್ರಾಹ್ಮಣರಿಂದಲೇ ಈಚೀಚಿನ ಕ್ಷತ್ರಿಯರು ಹುಟ್ಟಿದರೆಂಬ ವದಂತಿಯಿದೆ. ಬ್ರಾಹ್ಮಣ ಕನ್ಯೆ ದೇವಯಾನೆ ಕ್ಷತ್ರಿಯ ಯಯಾತಿರಾಯನ ಧರ್ಮಪತ್ನಿ. ಅಹಾರ ವಿಚಾರ ಗಳಲ್ಲಿಯೂ ಅಷ್ಟೊಂದು ಕಟ್ಟು ಇರಲಿಲ್ಲವೆಂದು ಇತಿಹಾಸದಿಂದ ತಿಳಿಯ ಬರುವುದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಪರಸ್ಪರ ಭೋಜನ ಪ್ರತಿಭೋಜನ ಗಳನ್ನು ನಡಸುತ್ತಿದ್ದರು.

ಇರುತ್ತಾರೆ. ಅವರು ಇಂದ್ರಿಯ ಸುಖವನ್ನು ಬಿಸುಟು ವಿಧ್ಯುಚಿತವಾದ ಸುಖದಲ್ಲಿ ಸಂತುಷ್ಟರಾಗಿರುವರು. ಮಹಾಬಲಪರಾಕ್ರಾಂತರಾದ ಅವರು ಮಹದುತ್ಸಾಹ ಸಂಪನ್ನರಾದ ವೀರರು. ಇವರೆಂದಿಗೂ ಅಲ್ಪದಿಂದ ಸಂತುಷ್ಟರಾಗರು. ವೀರರು ಅತಿಶಯ ಕ್ಲೇಶದಲ್ಲೋ, ಇಲ್ಲವೇ ಅತ್ಯುತ್ಕೃಷ್ಟವಾದ ಸುಖವನ್ನನುಭವಿಸುವುದರಲ್ಲೋ ಇರುವಂಥವರು; **ಇಂದ್ರಿಯ ಸುಖಾಭಿಲಾಷಿಗಳಾಗಿ ಮಧ್ಯಮ ಸ್ಥಿತಿಯಲ್ಲಿರುವವರೇ ದುಃಖ ಭಾಜನರು. ರಾಜ್ಯಲಾಭ ಇಲ್ಲವೇ ವನವಾಸ ಇವೆರಡೂ ಸುಖಕ್ಕೇ ಮೂಲ.**”

“ರಾಜ್ಯಲಾಭ ಇಲ್ಲವೇ ವನವಾಸ*” ಇದರ ಅಭಿಪ್ರಾಯವನ್ನು ಈಗಿನ ಹಿಂದುಗಳು ಅರಿಯಲಾರರು. ತಿಳಿದರೆ ಇಷ್ಟು ದುಃಖವೆಲ್ಲುಂಟಾಗುತ್ತಿತ್ತು? ಇದನ್ನು ಎಂದಿಗೆ ತಿಳಿದುಕೊಳ್ಳುವರೋ ಅಂದಿಗೆ ದುಃಖವೂ ಹೋಗುವುದು. ಹಿಂದೂ ಪುರಾಣೇತಿಹಾಸಗಳಲ್ಲಿ ಇಂತಹ ಮಾತಿರುವಲ್ಲಿ ಮೇಮ್‌ಸಾಹೇಬರುಗಳು ಬರೆದ ನಾವೆಲುಗಳನ್ನು ಓದಿಯೋ, ನಾಲ್ಕು ಜನಗಳು ಸೇರಿ ಹಕ್ಕಿಗಳಂತೆ ಚಿಲಿಪಿಲಿಗುಟ್ಟಿಯೋ ಕಾಲವನ್ನು ಕಳೆಯುತಲಿದೇವಲ್ಲಾ!

ಪ್ರಸಃ ಶ್ರೀಕೃಷ್ಣನು—“ಎಲೌ ಕುಂತಿ, ಶ್ರೇಷ್ಠರಾದ ನಿನ್ನ ಮಕ್ಕಳು ಸಮಸ್ತ ಶತ್ರುಗಳನ್ನೂ ಸಂಹರಿಸಿ ಈ ಲೋಕವನ್ನು ಆಳುವುದನ್ನು ಇಷ್ಟರಲ್ಲೇ ನೋಡುವಿ” ಎಂದು ಹೇಳಿದನು.

ಕೃಷ್ಣನು ಸಂಧಿಯೆಂದಿಗೂ ನಡೆಯುವುದಿಲ್ಲ, ಯುದ್ಧವೇ ನಡೆಯುವುದು ಎಂದು ನಿಶ್ಚೈಸಿಕೊಂಡಿದ್ದನು. ಆದರೂ ಸಂಧಿಯನ್ನು ಸ್ಥಾಪಿಸುವುದಕ್ಕೆಂದು ಕೃಷ್ಣನು ಹಸ್ತಿನೆಗೆ ಬಂದಿರುತ್ತಾನೆ. ಯುದ್ಧಕ್ಕಿಂತಲೂ ಸಂಧಿ

* ಮಿಲ್ಟನ್‌ನ ಸಣ್ಣಜೀವಿ ಸೈತಾನನ—“ಆಳಾಗಿ ಸ್ವರ್ಗವನ್ನು ಭೋಗಿಸುವುದಕ್ಕಿಂತ ರಾಜನಾಗಿ ನರಕದಲ್ಲಿರುವುದೇ ಲೇಸು” ಎಂಬ ಮಾತಿನ ಸಂಗಡ ಮೇಲಿನ ಮಹತೀವಾಣಿಯನ್ನು ಹೋಲಿಕೆಮಾಡಿ ವ್ಯತ್ಯಾಸವನ್ನು ತಿಳಿಯದವರೂ ಇರಬಹುದು. ಇಂಥವರ ಮನುಷ್ಯದಶೆಯ ವಿಷಯದಲ್ಲಿ ನನಗೆ ಸಂಪೂರ್ಣ ನಿರಾಶೆ. ಅಲ್ಪನು ಪರರ ಪ್ರಭುತ್ವವನ್ನು ಸಹಿಸನು. ಮಹಾತ್ಮನು ಕರ್ತವ್ಯಕ್ಕೆ ಕಟ್ಟುಬಿದ್ದು ಸಹಿಸಬಲ್ಲನು. ಆದರೂ ಮಹಾದುಃಖ ಅಥವಾ ಮಹಾಸುಖದಿಂದಲ್ಲದೆ ಬಹುವಿಸ್ತಾರವಾದ ತನ್ನ ಚಿತ್ತವೃತ್ತಿಗಳೆಲ್ಲವೂ ಸ್ಫೂರ್ತಿಯನ್ನು ಪಡೆಯಲಾರವೆಂಬುದನ್ನು ಮಹಾತ್ಮನು ಚೆನ್ನಾಗಿ ಅರಿತಿರುವನು.

ಹಿತಕರವಾದುದರಿಂದ ಸಂಧಿಸ್ಥಾಪನೆ ಕರ್ತವ್ಯ. ಫಲಾಫಲಗಳಲ್ಲಿ ಆಸಕ್ತಿಯನ್ನು ಬಿಟ್ಟು ಕರ್ತವ್ಯವನ್ನು ಸಾಧಿಸುವುದಕ್ಕೆ ಯತ್ನಿಸಬೇಕು. ಇದಕ್ಕೆ ಕರ್ಮಯೋಗವೆಂದು ಗೀತೆಯಲ್ಲಿ ತಿಳಿಸಿರುವನು. ಇದರಂತೆ ಕೃಷ್ಣನು ಸಂಧಿಯನ್ನು ಸ್ಥಾಪಿಸುವುದಕ್ಕೆ ಯತ್ನಿಸಿ ಅದು ಅಸಾಧ್ಯವೆಂದು ನಿಶ್ಚಯವಾದ ಮೇಲೆ ತಾನೇ ಅರ್ಜುನನನ್ನು ಯುದ್ಧಕ್ಕೆ ಪ್ರೇರಿಸಿ ಸಹಾಯಕನಾಗಿ ನಿಂತು ಅವನೊಲ್ಲೆನೆಂದರೂ ಬಿಡದೆ ಅವನ ಉತ್ಸಾಹವನ್ನು ಹೆಚ್ಚಿಸಿ ಯುದ್ಧವನ್ನು ಮಾಡಿಸಿದನು. ಸಂಧಿಯು ಮನುಷ್ಯ ಯತ್ನಗಳೆಲ್ಲಕ್ಕೂ ಮೀರಿದ್ದಾದ ಬಳಿಕ ಯುದ್ಧವೇ ಕರ್ತವ್ಯ. ಗೀತೋಕ್ತ ಕರ್ಮಯೋಗದ ಪ್ರಧಾನ ಯೋಗಿಯು ತಾನೇ ಆಗಿರುವನು. ಪುಂಖಾನುಪುಂಖವಾದ ವಿಮರ್ಶೆಯಿಂದ ಇಂತಹ ಆದರ್ಶಚರಿತ್ರೆಯ ಅಸಲು ಮನುಷ್ಯತ್ವ ತಿಳಿಯಲೆಂಬ ಆಶೆಯಿಂದಲೇ ಇಷ್ಟು ಪ್ರಯಾಸಪಡಲಾಗಿದೆ.

ಕುಂತಿಯಿಂದ ಬೀಳ್ಕೊಂಡು ಕೃಷ್ಣನು ಮತ್ತೆ ಕೌರವನ ಓಲಗಕ್ಕೆ ಹೋದನು. ಅಲ್ಲಿ ದುರ್ಯೋಧನನು ಅವನನ್ನು ಊಟದ ಔತಣಕ್ಕೆ ಕರೆದನು. ಕೃಷ್ಣನು ಇದಕ್ಕೊಪ್ಪಲಿಲ್ಲ. ದುರ್ಯೋಧನನು ಕಾರಣವೇನೆಂದು ಕೇಳಿದನು. ಕೃಷ್ಣನು ಲೌಕಿಕ ರೀತಿಯನ್ನು ಜ್ಞಾಪಿಸಿ—"ದೂತನಾಗಿ ಬಂದವನು ಕಾರ್ಯವನ್ನು ಕೈಗೂಡಿಸಿಕೊಂಡ ಮೇಲೆ ಭೋಜನವನ್ನೂ ಪೂಜೆಯನ್ನೂ ಪರಿಗ್ರಹಿಸಬೇಕಲ್ಲವೆ! ನಾನು ಬಂದ ಕಾರ್ಯವು ಕೈಗೂಡಿದ ಬಳಿಕ ತಮ್ಮ ಔತಣವನ್ನು ಸ್ವೀಕರಿಸುವೆನು" ಎಂದನು. ಇದರಮೇಲೂ ಅವನು ಕೃಷ್ಣನನ್ನು ಬಹುವಾಗಿ ಪೀಡಿಸಲು ಕೃಷ್ಣನು :—

"ಮನುಷ್ಯನು ಪ್ರೀತಿಯಿಂದಲೋ ಅಥವಾ ಕಷ್ಟಕ್ಕೆ ಸಿಲುಕಿಯೋ ಇತರರ ಔತಣವನ್ನು ಸ್ವೀಕರಿಸುವನು. ತಾವು ಪ್ರೀತಿಪೂರ್ವಕವಾಗಿ ನನಗೆ ಔತಣವನ್ನು ಕೊಟ್ಟಿಲ್ಲ; ಅಥವಾ ನಾನು ಕಷ್ಟಕ್ಕೆ ಸಿಲುಕಿಯೂ ಇಲ್ಲ. ಹೀಗಿರುವಲ್ಲಿ ನಾನು ಏತಕ್ಕೋಸ್ಕರ ನಿಮ್ಮ ಅನ್ನಕ್ಕೆ ಒಳಪಡಲಿ."

ಔತಣಕ್ಕೆ ಹೇಳುವುದೂ ಬರುವುದೂ ಸಾಮಾನ್ಯವಾದೊಂದು ಕೆಲಸ. ಇಹಜೀವನದಲ್ಲಿ ಪ್ರಾಯಕವಾಗಿ ಸಾಧಾರಣ ಕಾರ್ಯಗಳನ್ನೇ ದಿನಂಪ್ರತಿಯಲ್ಲೂ ನಿರ್ವಹಿಸುತ ಇರುತ್ತೇವೆ. ಇಂಥಾ ಕರ್ಮಗಳಿಗೆ ಸಂಬಂಧಪಟ್ಟ ಆಚರಣೆಯ ಕಟ್ಟಳೆಗಳು ಹಲವು ಉಂಟಷ್ಟೆ. ಮಹತ್ಕರ್ಮಗಳನ್ನು

ಮಾಡುವ ಕ್ರಮ ಹೇಗೋ ಹಾಗೆಯೇ ಚಿಕ್ಕ ಚಿಕ್ಕ ಕರ್ಮಗಳನ್ನು ಜರುಗಿಸುವುದಕ್ಕೂ ಕಟ್ಟಳೆ ಒಂದೇ ಪ್ರಕಾರವಾಗಿ ಉಂಟು. ಈ ಕಟ್ಟಳೆಯೇ ಧರ್ಮ. ಆದರೆ ಮಹಾನುಭಾವನ ಚರಿತ್ರೆಗೂ ಸಾಧಾರಣರ ಚರಿತ್ರೆಗೂ ಎಷ್ಟೋ ಭೇದವಿರುವುದು. ಸಾಮಾನ್ಯನು ಧರ್ಮವಿರೋಧಿಯಲ್ಲವಾದರೂ ಸಾಮಾನ್ಯ ವಿಷಯಗಳಲ್ಲಿ ನೀತಿಯನ್ನು ಅನುಸರಿಸುವುದರಲ್ಲಿ ಸದಾ ಸಮರ್ಥ ನಾಗಿರುವುದಿಲ್ಲ. ನೀತಿಯ ಕಟ್ಟಡಕವನ್ನು ಶೋಧಿಸಿ ನೋಡನು. ಆದರ್ಶ ಮನುಷ್ಯನು ಕ್ಷುದ್ರ ವಿಷಯಗಳಲ್ಲಿಯೂ ಕೂಡ ನೀತಿಯ ತಳಹದಿಯನ್ನೇ ಲಕ್ಷಿಸಿದನು. ಕೃಷ್ಣನು ಯೋಚಿಸಿ ನೋಡಿ ಔತಣಕ್ಕೆ ಒಪ್ಪಿಕೊಳ್ಳುವುದು ಸತ್ಯಕ್ಕೂ ಸರಳತೆಗೂ ವಿರುದ್ಧವಾಗುವುದೆಂದು ತಿಳಿದು, ದುರ್ಯೋಧನನಿಗೆ ಸತ್ಯ ಮತ್ತು ಸರಳವಾದ ಉತ್ತರವನ್ನು ಕೊಟ್ಟನು. ಖಂಡಿತವಾದ ಉತ್ತರ ಕಠಿನವಾಗಿ ಕಂಡರೂ ಕೃಷ್ಣನು ಅದಕ್ಕೆ ಹಿಂಜರಿಯಲಿಲ್ಲ. ಎಲ್ಲಿ ನಿಷ್ಕಾಪಟ್ಯವೇ ಧರ್ಮಸಂಗತವೋ ಅಲ್ಲಿ ಪರುಷವಾದೀತೆಂದು ನಾವು ಪರಾಙ್ಮುಖರಾಗುವು ದುಂಟು. ಈ ಧರ್ಮವಿರುದ್ಧ ಲಜ್ಜೆ ಅನೇಕ ಸಮಯಗಳಲ್ಲಿ ನಮ್ಮನ್ನು ಸಣ್ಣ ಅಧರ್ಮಗಳಲ್ಲಿ ಮುಳುಗಿಸಿ ಪ್ರಾಣಸಂಕಟವನ್ನುಂಟು ಮಾಡುವುದು.

ಕುರುಸಭೆಯಿಂದ ಹೊರಟು ಕೃಷ್ಣನು ವಿದುರನ ಮನೆಯನ್ನು ಹೊಕ್ಕನು. ವಿದುರನೊಡನೆ ರಾತ್ರಿಯಲ್ಲಿ ವಿಶೇಷವಾಗಿ ಸಂಭಾಷಿಸಿದನು. ಕೃಷ್ಣನು ಹಸ್ತಿನಾವತಿಗೆ ಬಂದುದು ಅನುಚಿತವಾಯಿತೆಂದು ವಿದುರನು ಅವನಿಗೆ ತಿಳುಹಿಸಿದನು. ದುರ್ಯೋಧನನು ಹೇಗೂ ಸಂಧಿಯನ್ನು ಸ್ಥಾಪಿಸಲ್ಲೊಲ್ಲನು. ಕೃಷ್ಣನು ಇದಕ್ಕೆ ಕೊಟ್ಟ ಉತ್ತರದ ಕೆಲವಂಶಗಳನ್ನು ಇಲ್ಲಿ ಎತ್ತಿದೆ. "ಆನೆ, ಕುದುರೆ, ರಥ, ಪದಾತಿಗಳಿಂದ ತುಂಬಿಕೊಂಡಿರುವ ಲೋಕವನ್ನು ಮೃತ್ಯುವಿನ ಬಾಯಿಂದ ಪಾರುಗಾಣಿಸುವುದಕ್ಕೆ ಶಕ್ತನಾದವನು ಉತ್ಕೃಷ್ಟ ಧರ್ಮಲಾಭವನ್ನು ಪಡೆಯಲುಳ್ಳವನು."

ಯುರೋಪಿನ ಪ್ರತಿ ರಾಜಪ್ರಾಸಾದದಲ್ಲಿಯೂ ಈ ಮಾತುಗಳನ್ನು ಸ್ವರ್ಣಾಕ್ಷರಗಳಿಂದ ಕೆತ್ತಿಸಿ ಇಡುವುದವಶ್ಯ. ದಿಲ್ಲಿ, ಸಿಮ್ಲಾ ರಾಜಪ್ರಾಸಾದ ವನ್ನೂ ಬಿಡಕೂಡದು.

"ಕಷ್ಟಕ್ಕೆ ಸಿಕ್ಕಿರುವ ಬಂಧುಗಳನ್ನು ಬಿಡಿಸುವುದಕ್ಕೆ ಕೈಯಲ್ಲಾದ ಮಟ್ಟಿಗೂ ಪ್ರಯತ್ನಿಸದಿರುವವನನ್ನು ಪಂಡಿತರು ರಾಕ್ಷಸನೆಂಬರು."

"ಪ್ರಾಜ್ಞನಾದವನು ಅಕಾರ್ಯಕ್ಕೆ ತೊಡಗಿದ ತನ್ನ ಮಿತ್ರನನ್ನು ಜುಟ್ಟುಹಿಡಿದು ಎಳೆದಾದರೂ ಹಿಂತಿರುಗಿಸುವನು. ಅವನು (ದುರ್ಯೋಧನನು) ನನ್ನ ಹಿತಕರಗಳಾದ ಮಾತುಗಳನ್ನು ಕೇಳಿಯೂ ನನ್ನಮೇಲೆ ಸಂದೇಹಪಟ್ಟರೆ ಅದರಿಂದ ನನಗೇನೂ ಬಾಧೆಯಿಲ್ಲ. ಅಲ್ಲದೆ ನಮ್ಮವರಿಗೆ ಸದುಪದೇಶಪ್ರಧಾನ ನಿಬಂಧನೆಯನ್ನು ನಡಸಿದ ಪರಮ ಸಂತೋಷವಾಗುವಂತೆ ನನ್ನ ಋಣ ಹರಿದಂತೆಯೂ ಆಗುವುದು. ಜ್ಞಾತಿಗಳಲ್ಲಿ ಭೇದವುಂಟಾದಾಗ ಸತ್ಪರಾಮರ್ಶವನ್ನು ಕೊಡದೇ ಇರುವವನು ಆತ್ಮೀಯನಾಗನು."

ಕೃಷ್ಣನು ಕೇವಲ ಪರಸ್ತ್ರೀಲುಬ್ಧನಾದ ಪಾಪಿಷ್ಠ ಗೊಲ್ಲನು, ಎಂದು ಯೂರೋಪೀಯರ ನಂಬುಗೆ. ನಮ್ಮ ದೇಶದಲ್ಲಿಯೂ ಕೆಲವರು ಅದೇ ಮತದವರು. ಮತ್ತೆ ಕೆಲವರು ಅವನು ಮನುಷ್ಯರ ಹತ್ಯಕ್ಕಾಗಿ, ಭೂಭಾರವನ್ನಿಳಿಸುವುದಕ್ಕಾಗಿ, ಅವತರಿಸಿದನು ಎಂದೂ, ಇನ್ನು ಕೆಲವರು ಅವನು ಮಹಾತಂತ್ರಿ ಎಂದರೆ, ತನ್ನ ಆಶಯವನ್ನು ಪೂರ್ತಿಮಾಡಿಕೊಳ್ಳುವುದಕ್ಕಾಗಿ ಕುಟಿಲೋಪಾಯಗಳನ್ನು ಹೂಡುವನೆಂದು ತಿಳಿದಿರುವರು. ಅವನು ಇಂಥವನಾವನೂ ಅಲ್ಲ. ಅಲ್ಲದೆ ಇದಕ್ಕೆ ವ್ಯತಿರೇಕವಾಗಿ ಲೋಕ ಹಿತೈಷಿಗಳಲ್ಲಿಯೂ, ಜ್ಞಾನಿಗಳಲ್ಲಿಯೂ ಧರ್ಮೋಪದೇಶಕರಲ್ಲಿಯೂ ಅತ್ಯಂತ ಶ್ರೇಷ್ಠ, ಆದರ್ಶ ಮನುಷ್ಯ.

ಸಪ್ತಮ ಪರಿಚ್ಛೇದ

ಹಸ್ತಿನೆಯಲ್ಲಿ ಎರಡನೆಯ ದಿನ

ಮರುದಿನ ಬೆಳಗ್ಗೆ ದುರ್ಯೋಧನನೂ ಶಕುನಿಯೂ ತಾವಾಗಿ ವಿದುರನ ಮನೆಗೆ ಬಂದು ಕೃಷ್ಣನನ್ನು ಸಭೆಗೆ ಕರೆದುಕೊಂಡು ಹೋದರು. ಇಂದು ಸಭೆಯಲ್ಲಿ ಬಲು ಮಂದಿ ನೆರೆದಿದ್ದರು. ನಾರದಾದಿ ದೇವರ್ಷಿಗಳು ಜಮದಗ್ನಿ ಮೊದಲಾದ ಬ್ರಹ್ಮರ್ಷಿಗಳೊಡನೆ ಬಂದು ಸೇರಿದ್ದರು. ಕೃಷ್ಣನು ಒಳ್ಳೆಯ ವಾಚಾಳತೆಯಿಂದ ಹಲವು ಬಗೆಗಳಿಂದ ಹೇಳಿ ಸಂಧಿಯನ್ನು ಮಾಡಿಸಬೇಕೆಂದು ಧೃತರಾಷ್ಟ್ರನನ್ನು ಪ್ರೋತ್ಸಾಹಿಸಿದನು. ಋಷಿಗಳು

ಕೂಡಾ ಸಂಧಿಯೇ ಉತ್ತಮವೆಂದು ಎಷ್ಟೋ ಹೇಳಿದ್ದಾಯಿತು. "ನನ್ನಿಂದ ಯತ್ನವಿಲ್ಲ. ದುರ್ಯೋಧನನಿಗೆ ಹೇಳಿ" ಎಂದು ಧೃತರಾಷ್ಟ್ರನು ಜಾರಿಕೊಂಡನು. ಕೃಷ್ಣನೂ, ಭೀಷ್ಮದ್ರೋಣಾದಿಗಳೂ, ಇನ್ನೂ ಹಲವರೂ ಎಷ್ಟೆಷ್ಟೋ ರೀತಿಯಿಂದ ಸಂಧಿಯನ್ನು ಮಾಡಿಕೊಳ್ಳೆಂದು ದುರ್ಯೋಧನನಿಗೆ ಹೇಳಿದರು. ಸಂಧಿ ಹಾಗಿರಲಿ. ಕೃಷ್ಣನನ್ನು ಕುರಿತು ಹೀನಾಯಮಾನವಾಗಿ ಅತಿ ತುಚ್ಛವಾಗಿ ಅವನು ನುಡಿದನು. ಕೃಷ್ಣನೂ ಇದಕ್ಕೆ ತಕ್ಕ ಹಾಗೆಯೇ ಪ್ರತ್ಯುತ್ತರವನ್ನು ಕೊಟ್ಟನು. ದುರ್ಯೋಧನನ ದುಶ್ಚರಿತ್ರೆ, ಪಾಪಾಚರಣೆ ಮುಂತಾದುವನ್ನೆಲ್ಲಾ ಎತ್ತಿಹಾಕಿದನು. ಇದನ್ನು ಕೇಳಿ ದುರ್ಯೋಧನನು ಆಸ್ಥಾನವನ್ನು ಬಿಟ್ಟು ಎದ್ದುಹೋದನು.

ಆಗ ಕೃಷ್ಣನು ಧೃತರಾಷ್ಟ್ರನನ್ನು ಕುರಿತು ಸಮಸ್ತ ರಾಜನೀತಿಯ ಮೂಲಸೂತ್ರವನ್ನೂ ಅನುಸರಿಸಿ ಮುಂದಿನ ಕೆಲಸಗಳನ್ನು ಜರುಗಿಸುವಂತೆ ಬೋಧಿಸಿದನು. ಪ್ರಜಾಪರಿಪಾಲನೆಗಾಗಿ ದುಷ್ಟರನ್ನು ದಂಡಿಸುವುದು ರಾಜಶಾಸನದ ಮೂಲಾಧಾರ. ಎಂದರೆ ಅನೇಕರ ಹಿತಕ್ಕಾಗಿ ಒಬ್ಬನನ್ನು ಶಿಕ್ಷಿಸಲೇಬೇಕು. ಸಮಾಜ ಸಂರಕ್ಷಣೆಯ ಸಲುವಾಗಿ ಹತ್ಯಕಾರಿಯನ್ನು ಕೊಲ್ಲುವುದೇ ವಿಹಿತ. ಯಾವನನ್ನು ಬಂಧಿಸದೇ ಹೋದರೆ ಸಹಸ್ರಾರು ಪ್ರಾಣಿಗಳ ಪ್ರಾಣಸಂಹಾರವು ಆಗುವುದೋ ಅಂಥವನನ್ನು ಬಂಧಿಸುವುದೇ ಜ್ಞಾನಿಯ ಉಪದೇಶ. ಯೂರೋಪ್ ದೇಶದ ಸಮಸ್ತ ರಾಜರೂ, ರಾಜಮಂತ್ರಿಗಳೂ ಪರಾಮರ್ಶಿಸಿ ಹೀಗೆಂತಲೇ ಕ್ರಿ. ಶ. ೧೮೧೫ನೆಯ ಇಸವಿಯಲ್ಲಿ ನೆಪೋಲಿಯನ್ನನನ್ನು ಯಾವಜ್ಜೀವವೂ ಬಂಧನದಲ್ಲಿ ಇರುವಂತೆ ಕಟ್ಟುಗೈದರು. ಇದೇ ಕಾರಣಕ್ಕಾಗಿಯೇ ಮಹಾನೀತಿಜ್ಞನಾದ ಕೃಷ್ಣನು ಧೃತರಾಷ್ಟ್ರನನ್ನು ಕುರಿತು ದುರ್ಯೋಧನನನ್ನು ಬಂಧನದಲ್ಲಿಟ್ಟು ಪಾಂಡವರೊಡನೆ ಸಂಧಿಯನು ಸ್ಥಾಪಿಸುವಂತೆ ಪರಾಮರ್ಶವನ್ನು ಕೊಟ್ಟನು. ತಾನು ಯದುವಂಶ ರಕ್ಷಣೆಗಾಗಿ ಸೋದರಮಾವನಾದಾಗ್ಗೂ ಕಂಸವಧೆಯ ಕಾರ್ಯಕ್ಕೆ ಕೈಯಿಕ್ಕಿದ್ದನು. ಈ ಸಲಹೆ ಸ್ವೀಕರಿಸಲ್ಪಡಲಿಲ್ಲ.

ಇತ್ತಕಡೆ ಕೃಷ್ಣನನ್ನು ಕಟ್ಟಿಹಾಕಲು ದುರ್ಯೋಧನನು ಕರ್ಣನೊಡನೆ ಆಲೋಚಿಸತೊಡಗಿದನು.

ಸಾತ್ಯಕಿ, ಕೃತವರ್ಮ ಮೊದಲಾದ ಕೃಷ್ಣನ ಜ್ಞಾತಿಗಳು ಆ ಸಭೆಯಲ್ಲೇ ಇದ್ದರು. ಸಾತ್ಯಕಿಯು ಕೃಷ್ಣನನ್ನು ಎಡಬಿಡದೆ ಇದ್ದುಕೊಂಡು ಅವನಿಗೆ ಬಹಳ ಬೇಕಾದವನಾಗಿ ಇದ್ದನು. ಅಸ್ತ್ರವಿದ್ಯೆಯಲ್ಲಿ ಇವನು ಅರ್ಜುನನ ಶಿಷ್ಯನಾಗಿ ವೀರ್ಯದಲ್ಲಿಯೂ ಅವನಿಗೆ ಸಮಾನನಾಗಿಯೇ ಇದ್ದನು. ಬುದ್ಧಿಮತಿಯೂ ಇಂಗಿತಜ್ಞನೂ ಆದ ಇವನು ಕೌರವನ ಆಲೋಚನೆಯನ್ನು ಭೇದಿಸಿ ಇತರ ಯಾದವರೊಡನೆ ಇದ್ದ ಕೃತವರ್ಮನಿಗೆ ಇದನ್ನು ತಿಳಿಸಿ ಸಸೈನ್ಯವಾಗಿ ಊರಬಾಗಿಲಿನಲ್ಲಿ ಸನ್ನದ್ಧನಾಗಿರುವಂತೆ ನೇಮಿಸಿ ಕೃಷ್ಣನನ್ನು ಎಚ್ಚರಿಸಿ ಸಭಾಮಧ್ಯದಲ್ಲಿ ಎಲ್ಲರೆದುರಿಗೂ ಧೃತರಾಷ್ಟ್ರ ಮೊದಲಾದವರಿಗೆ ಈ ವಿಷಯವನ್ನು ತಿಳಿಸಿದನು. ಇದನ್ನು ಕೇಳಿ ವಿದುರನು ಧೃತರಾಷ್ಟ್ರನನ್ನು ಕುರಿತು ಇಂತೆಂದನು:—"ಪತಂಗಗಳು ಪಾವಕನ ಜ್ವಾಲೆಗೆ ಬಿದ್ದು ನಶಿಸಿಹೋಗುವಂತೆ ಇವರ ದಶೆ ಆಗುವುದಿಲ್ಲವೇ! ಜನಾರ್ದನನು ಇಷ್ಟಪಟ್ಟರೆ ಸಕಲರನ್ನೂ ಯಮನ ಸದನಕ್ಕೆ ಕಳುಹುವನು" ಎಂದು ಹೇಳಿದನು.

ಬಳಿಕ ಕೃಷ್ಣನು ಹೇಳಿರುವುದನ್ನು ನೋಡಿದರೆ ಆದರ್ಶಪುರುಷನಿಂದಲ್ಲದೆ ಇನ್ನಾರಿಂದಲೂ ಇಂತಹ ಮಾತು ಹೊರಡದೆಂಬುದು ಗೊತ್ತಾಗುವುದು. ತಾನು ಬಲಶಾಲಿಯಾದರೂ ಎಳ್ಳಷ್ಟೂ ಕ್ರೋಧವಿಲ್ಲದವನು. ಧೃತರಾಷ್ಟ್ರನನ್ನು ಕುರಿತು ಹೀಗೆ ಹೇಳಿದನು :—

"ದುರ್ಯೋಧನ ಮೊದಲಾದವರು ಕೋಪಗೊಂಡು ನನ್ನನ್ನು ಬಲಪೂರ್ವಕವಾಗಿ ಬಂಧಿಸಬೇಕೆಂದು ಇರುವರಂತೆ. ಆದರೆ ನಾನು ಅವರನ್ನು ಬಗ್ಗಿಸುವನೋ ಅಥವಾ ಅವರೇ ನನ್ನನ್ನು ಬಗ್ಗಿಸುವರೋ ನೀನೇ ನೋಡುವೆಯಂತೆ. ಒಬ್ಬೊಂಟಿಗನಾಗಿಯೇ ಇವರೆಲ್ಲರನ್ನೂ ನಾನು ನಿಗ್ರಹಿಸಲು ಹುಮ್ಮಸ್ಸು (ಹಿಮ್ಮತ್ತು) ನನಗಿದೆ. ಆದರೆ ಹೇಗೂ ನಾನು ಪಾಪಕಾರ್ಯವನ್ನು ಕೈಗೊಳ್ಳೆನು. ನಿನ್ನ ಪುತ್ರರು ಪಾಂಡವರ ಹಣಕ್ಕೆ ಆಶೆಬಿದ್ದು ಸ್ವಾರ್ಥಭ್ರಷ್ಟರಾಗುತ್ತಿರುವರು. ವಸ್ತುತಃ ನನ್ನನ್ನು ನಿಗ್ರಹಿಸಬೇಕೆಂದು ಬಯಸಿ ಯುಧಿಷ್ಠಿರನ ಕೆಲಸವನ್ನು ಕೈಗೂಡಿಸುತ್ತಲಿರುವರು. ನಾನು ಇಂದೇ ಇವರನ್ನೂ ಇವರ ಸಹಾಯಕರನ್ನೂ ಹಿಡಿದು ಕಟ್ಟಿ ಪಾಂಡವರಿಗೆ ಒಪ್ಪಿಸಿದರೆ ಇದು ಕೆಟ್ಟದ್ದೆಂತಾದೀತು? ಆದರೆ ನಿನ್ನ ಎದುರಿಗೆ ಇಂತಹ ಕ್ರೋಧ ಮತ್ತು ಪಾಪಬುದ್ಧಿಯಿಂದ ಉಂಟಾಗುವ ಕೀಳು ಕೆಲಸಕ್ಕೆ ನಾನು ಕೈಯಿಕ್ಕೆನು. ಆದ್ದರಿಂದ ದುರ್ನೀತಿಪರಾಯಣರಾದ ದುರ್ಯೋಧನಾದಿಗಳ ಇಚ್ಛಾನುಸಾರವಾಗಿಯೇ ಕಾರ್ಯ ನಡೆಯಲಿ."

ಧೃತರಾಷ್ಟ್ರನು ದುರ್ಯೋಧನನನ್ನು ಬರಮಾಡಿಕೊಂಡು ಅವನನ್ನು ಅತ್ಯಂತ ನಿಷ್ಠುರವಚನಗಳಿಂದ—"ನೀನು ಅತಿಕ್ರೂರನೂ ಪಾಪಾತ್ಮನೂ ನೀಚಬುದ್ಧಿಯುವನೂ ಆಗಿದ್ದೀಯೆ. ಇದರಿಂದಲೇ ನೀನು ಅಸಾಧ್ಯನೂ, ಅಯಶಸ್ಕರನೂ, ಸಾಧು ವಿಗರ್ಹಿತನೂ, ಪಾಪಿಷ್ಠನೂ ಆಗಿದ್ದೀಯೆ. ಕುಲ ಕಳಂಕಿಯಾದ ಮೂಢನಂತೆ ದುರಾತ್ಮರೊಡನೆ ಸೇರಿ ದುಸ್ಸಾಧ್ಯನಾದ ಜನಾರ್ದನನನ್ನು ಬಂಧಿಸಲಪೇಕ್ಷಿಸಿದ್ದೀಯೆ. ಬಾಲನು ಚಂದ್ರನನ್ನು ಹಿಡಿದು ಆಡಲಪೇಕ್ಷಿಸುವಂತೆ ಇಂದ್ರಾದಿ ದೇವಗಣಗಳಿಂದಲೂ ಆಕ್ರಮಿಸಲಶಕ್ಯ ನಾದ ಕೇಶವನನ್ನು ಹಿಡಿಯಲು ಆಶಿಸುತ್ತಿದ್ದೀಯೆ. ದೇವಾಸುರ ನರೋರಗರಲ್ಲೊಬ್ಬರೂ ಇವನನ್ನೆದುರಿಸಿ ನಿಲ್ಲಲಾರರೆಂಬುದನ್ನು ನೀನರಿ ಯೆಯಾ? ಮಗೂ, ವಾಯುದೇವನನ್ನು ಕೈಯಿಂದ ಹಿಡಿಯುವುದಕ್ಕಾದೀತೆ? ಅಂಗೈಯಲ್ಲಿ ಯಜ್ಞೇಶ್ವರನನ್ನು ಧರಿಸುವುದಕ್ಕಾದೀತೆ? ತಲೆಯಿಂದ ಭೂದೇವಿಯನ್ನು ಹೊರಲಾದೀತೆ? ಹೀಗೆಯೇ ಬಲದಿಂದ ಯಾವಾಗಲಾದರೂ ಕೇಶವನನ್ನು ಹಿಡಿಯುವುದಕ್ಕಾದೀತೆ?" ಎಂದುಅದ್ವಲಿಸಿದನು.

ದುರ್ಯೋಧನನನ್ನು ಕುರಿತು ವಿದುರನೂ ಹೀಗೆ ಗದರಿಸಿ ನುಡಿದ ಬಳಿಕ ವಾಸುದೇವನು ಘಟ್ಟಿಯಾಗಿ ನಕ್ಕು ಸಾತ್ಯಕಿ ಮತ್ತು ಕೃತವರ್ಮರ ಸಂಗಡ ಕುರುಸಭೆಯನ್ನು ಬಿಟ್ಟು ಹೊರಟನು.

ಈವರೆಗೂ ಮಹಾಭಾರತದಲ್ಲಿರುವ ಭಗವದ್ಯಾನ ವೃತ್ತಾಂತ ಸುಸಂಗತವೂ ಸ್ವಾಭಾವಿಕವೂ ಆಗಿರುವುದು. ಯಾವ ಬಗೆಯ ಅತಿ ಪ್ರಕೃತಿಯೂ ಇಲ್ಲ. ಮತ್ತು ನಂಬದಿರುವಂಥವು ಯಾವುವೂ ಇಲ್ಲ. ಕೈಬೆರಳಿನ ತೀಟೆ (ಕಡಿತ) ಯಿಂದ ಹಿಂಸೆಪಡುತ್ತಲಿದ್ದ ಪ್ರಕ್ಷಿಪ್ತಕಾರರ ಸಮೂಹ ಇದನ್ನು ಸಹಿಸೀತೆ! ಈ ಪ್ರಕಾರವಲ್ಲಿ ಒದಗಿರುವ ಮಹತ್ ಸಂದರ್ಭವೊಂದರೊಳಗೆ ಅನೈಸರ್ಗಿಕವಾದ ಅದ್ಭುತವೊಂದನ್ನು ಬೆರಸಿಡ ದಿದ್ದರೆ ಶ್ರೀ ಕೃಷ್ಣನ ಈಶ್ವರತ್ವ ಉಳಿಯುವುದೆ? ಎಂದಾಲೋಚಿಸಿ ಕೃಷ್ಣನು ನಕ್ಕು ಸಭೆಯಿಂದ ಹೊರಗೆ ಹೋಗುವಾಗ ವಿಶ್ವರೂಪ ಪ್ರಕಾಶ ವೊಂದನ್ನು ಬೆರಸಿ ಇಟ್ಟಿರುವರು. ಭೀಷ್ಮಪರ್ವದ ಭಗವದ್ಗೀತೆಯಲ್ಲಿ ವರ್ಣಿಸಿರುವ ವಿಶ್ವರೂಪದೊಡನೆ (ಇದು ಭಗವದ್ಗೀತೆಯಲ್ಲಿ ಅಸಲಿನವಾಗಲಿ ಬೆರಸಿದ್ದಾಗಲಿ) ಹೋಲಿಸಿ ನೋಡಿದರೆ ಎಷ್ಟೊಂದು ವ್ಯತ್ಯಾಸ! ಗೀತೆಯ

ವಿಶ್ವರೂಪ ವರ್ಣನೆ ಉತ್ಕೃಷ್ಟಶ್ರೇಣಿಯ ಕವಿಯ ರಚನೆ; ಪ್ರಪಂಚದ ಸಾಹಿತ್ಯಗಳನ್ನೆಲ್ಲ ಹುಡುಕಿದರೂ ಇಂಥಾದ್ದು ಸಿಕ್ಕುವುದು ದುರ್ಲಭ. ಭಗವದ್ಯಾನ ಪರ್ವಾಧ್ಯಾಯದಲ್ಲಿ ವರ್ಣಿಸಿರುವ ವಿಶ್ವರೂಪದ ರಚನೆಯನ್ನು ಮಾಡಿರುವ ಕವಿಯ ವಿಷಯದಲ್ಲಿ—ರಚನೆ ಬರಿಯ ವಿಡಂಬನೆ. ಅಲ್ಲದೆ ಗೀತೆಯ ೧೧ನೆಯ ಅಧ್ಯಾಯದಲ್ಲಿ ಅರ್ಜುನನನ್ನು ಕುರಿತು ಭಗವಂತನು "ನಿನ್ನ ಹೊರತು ಇನ್ನಾರೂ ಇದನ್ನು ನೋಡಿಲ್ಲ" ಎಂದು ಹೇಳಿರುವನು. ಕೆಲವು ದಿವಸಗಳ ಹಿಂದೆ ಕೌರವ ಸಭೆಯಲ್ಲಿ ಎಲ್ಲರೂ ನೋಡಿದ ವಿಶ್ವರೂಪ ವೆಲ್ಲಿ ಹೋಯಿತೋ?

ಇನ್ನೂ ಗೀತೆಯಲ್ಲಿ ಭಗವಂತನು—"ನಿನ್ನ ಹೊರತು ಮನುಷ್ಯ ಲೋಕದಲ್ಲಿ ಮತ್ತಾರೂ ವೇದಾಧ್ಯಯನ, ಯಜ್ಞಾನುಷ್ಠಾನ, ದಾನ, ಕ್ರಿಯಾಕಲಾಪ, ನೃತ್ಯ, ಗೀತ ಮತ್ತು ಅತಿಕಠಿನವಾದ ತಪಸ್ಸುಗಳಿಂದಲೂ ಕೂಡ ನನ್ನ ರೂಪವನ್ನು ನೋಡಲಾರದವರಾಗಿದಾರೆ." ಕುಕವಿಯ ಕೈಗೆ ಬಿದ್ದು ವಿಶ್ವರೂಪವು ಸಿಕ್ಕಿ ಸಿಕ್ಕಿದವರ ಕಣ್ಣುಗಳಿಗೆಲ್ಲಾ ಬಿದ್ದಿರುವುದು. ಗೀತೆಯಲ್ಲಿ ಇನ್ನೂ—"ಅನನ್ಯ ಸಾಧಾರಣ ಭಕ್ತಿಯನ್ನು ತೋರಿಸುವುದ ರಿಂದಲೂ ನನ್ನನ್ನು ಹೀಗೆ ಕಾಣಬಹುದು" ಎಂದಿರುವನು. ಅಲ್ಲಿ ದುಷ್ಕೃತ ಕಾರಿಗಳೂ ಪಾಪಾತ್ಮರೂ ಭಕ್ತಿಶೂನ್ಯರೂ ಶತ್ರುಗಳೂ ಸಹ ವಿಶ್ವರೂಪ ವನ್ನು ದೃಷ್ಟಿಸಿ ನೋಡಿರುವರು.

ಮೂರ್ಖನೂ ಕೂಡ ಪ್ರಯೋಜನವಿಲ್ಲದ ಕೆಲಸಕ್ಕೆ ಕೈಯಿಕ್ಕು ವುದಿಲ್ಲ. ವಿಶ್ವರೂಪಿಯ ವಿಷಯದಲ್ಲಿ ಹೇಳಬೇಕೇ! ಇಲ್ಲಿಯಾದರೋ ವಿಶ್ವ ರೂಪ ಪ್ರದರ್ಶನದಿಂದ ಎಳ್ಳಷ್ಟೂ ಪ್ರಯೋಜನವಾಗಲಿಲ್ಲ. ದುರ್ಯೋಧ ನಾದಿಗಳು ಬಲವನ್ನು ಪ್ರಯೋಗಿಸುವ ಆಲೋಚನೆಯನ್ನು ಮಾಡು ತ್ತಿದ್ದರು. ಇದರ ಪ್ರಯತ್ನವೇನೂ ಮಾಡಿಯೇ ಇಲ್ಲ. ತಂದೆಯ ಮತ್ತು ತಾತನ ಕಡೆಯಿಂದ ಧಿಕ್ಕಾರವನ್ನು ಪಡೆದು ದುರ್ಯೋಧನನು ನಿರುತ್ತರ ನಾಗಿದ್ದನು. ಬಲವನ್ನು ಪ್ರದರ್ಶಿಸುವುದಕ್ಕೆ ಪ್ರಯತ್ನಿಸಿದ್ದರೂ ವ್ಯರ್ಥ ವಾಗುತ್ತಿತ್ತು. ಇದು ಕೃಷ್ಣನಿಗೂ ತಿಳಿದಿತ್ತು. ಬಲದಿಂದ ತನ್ನನ್ನಾರೂ ನಿಗ್ರಹಿಸಲಾರದಷ್ಟು ಬಲವಂತನಾಗಿದ್ದನು. ಇದನ್ನು ಧೃತರಾಷ್ಟ್ರನೇ ಹೇಳಿದ್ದನು. ವಿದುರನೂ ತಿಳಿಸಿದ್ದನು. ಕೃಷ್ಣನೂ ಹೀಗೆಯೇ ಹೇಳಿದ್ದನು.

ಆತ್ಮಸಂರಕ್ಷಣೆಗೆ ತನ್ನ ಸ್ವಂತ ಶಕ್ತಿಯೊಂದೇ ಸಾಲವಾಗಿದ್ದರೂ ಬಾಧೆಯಿರಲಿಲ್ಲ. ಸಾತ್ಯಕಿ ಕೃತವರ್ಮ ಮೊದಲಾದ ವೃಷ್ಣಿವಂಶೀಯರು ಇವನ ಸಹಾಯಕ್ಕೆ ಸಿದ್ಧರಾಗಿದ್ದರು. ಇವರ ಸೈನ್ಯವೂ ಕೂಡ ರಾಜದ್ವಾರದಲ್ಲಿ ಕಾದಿತ್ತು. ದುರ್ಯೋಧನನ ಸೈನ್ಯವು ಸಿದ್ಧವಾಗಿ ಬಂದಿತ್ತೆ ಇಲ್ಲವೆ ಎಂಬ ಮಾತು ಸಿಕ್ಕುವುದಿಲ್ಲ. ಆದ್ದರಿಂದ ಬಲದಿಂದ ನಿಗ್ರಹಮಾಡುವ ಪ್ರಯತ್ನವು ಫಲವಾಗುವಂತಿರಲಿಲ್ಲ. ಹೀಗಿದ್ದರೂ ಭೀತನಾಗಿ ಹೋಗುವಂಥ ಕಾಪುರುಷನು ಕೃಷ್ಣನಲ್ಲ. ವಿಶ್ವರೂಪಿಗೆ ಇಂಥ ಭಯವುಂಟೆ? ಹೇಗೂ ವಿಶ್ವರೂಪ ಪ್ರಕಾಶಕ್ಕೆ ಕಾರಣವಾವುದೂ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಕೋಪಿಷ್ಠನೋ ಡಾಂಭಿಕನೋ ಅಲ್ಲದೆ ಇನ್ನಾರೂ ಶತ್ರುವಿಗೆ ಭಯವನ್ನು ಪ್ರದರ್ಶಿಸುವುದಕ್ಕೆ ಯತ್ನಿಸಲಾರರು. ವಿಶ್ವರೂಪಿಯು ಕ್ರೋಧ ಡಂಭಗಳಿಲ್ಲದವನು.

ಹೀಗಿರುವಾಗ ವಿಶ್ವರೂಪದ ವಿಷಯ ಕುಕವಿಯ ಸುಳ್ಳು ಕವಿತೆಯೆಂದು ಬಿಟ್ಟುಬಿಡತಕ್ಕದ್ದೇ ಸರಿ. ಕೃಷ್ಣನು ಮನುಷ್ಯ ಶಕ್ತಿಯ ಮೂಲಕ ಕೆಲಸಗಳನ್ನು ನಡಸುವನೇ ಹೊರತು ಈಶ್ವರ ಪ್ರಭಾವವನ್ನು ತೋರಿಸನೆಂದು ನಾನು ಬಾರಿ ಬಾರಿಗೂ ಸೂಚಿಸಿರುವೆನು. ಇಲ್ಲಿ ಈ ಉದ್ದೇಶಕ್ಕೆ ವ್ಯತ್ಯಾಸ ಬರುವುದರ ಆವಶ್ಯಕತೆಯೇನೂ ಇಲ್ಲ.

ಕುರುಸಭೆಯಿಂದ ಹೊರಟ ಕೃಷ್ಣನು ಕುಂತಿಯ ಬಳಿಗೆ ಹೋದನು. ಅಲ್ಲಿಂದ ತೆರಳಿ ಹಿಂದೆ ಪಾಂಡವರು ಬಿಡಾರವನ್ನು ಮಾಡಿಕೊಂಡಿದ್ದ ಉಪಪ್ಲಾವ್ಯನಗರಕ್ಕೆ ಬಂದನು. ಹಸ್ತಿನೆಯಿಂದ ಬರುವಾಗ ಕೆಲವು ದೂರದವರೆಗೆ ಕರ್ಣನನ್ನು ತನ್ನ ರಥದಮೇಲೆ ಕೂರಿಸಿಕೊಂಡು ಬಂದನು.

ಕೃಷ್ಣನನ್ನು ಬಂಧಿಸಬೇಕೆಂಬ ಸಲಹೆಯನ್ನು ಕೊಟ್ಟವರಲ್ಲಿ ಕರ್ಣನೊಬ್ಬನು. ಹೀಗಿದ್ದೂ ಇವನನ್ನು ರಥದಮೇಲೆ ಕೂರಿಸಿಕೊಂಡು ಬಂದದ್ದೇಕೆ? ಇದನ್ನು ಮುಂದಿನ ಪರಿಚ್ಛೇದದಲ್ಲಿ ತಿಳಿಸುವೆನು. ಇದರಲ್ಲಿ ಕೃಷ್ಣ ಚರಿತ್ರೆಯ ತಿರುಳು ಚೆನ್ನಾಗಿ ತಿಳಿಯುವುದು. ಸಾಮ, ದಂಡ, ನೀತಿಗಳಲ್ಲಿ ಕೃಷ್ಣನ ಸಾಮರ್ಥ್ಯವನ್ನು ನೋಡಿದ್ದೇವೆ. ಈಗ ಭೇದದಲ್ಲಿ ಅವನ ಬುದ್ಧಿವಂತಿಕೆಯನ್ನು ನೋಡುವೆವು. ಇದರೊಂದಿಗೆ ಕೃಷ್ಣನ ದಯೆಯೂ ಜೀವಿಗಳ ಮೇಲಣ ಹಿತೇಚ್ಛೆಯೂ ಮತ್ತು ಬುದ್ಧಿಯೂ

ಲೋಕವನ್ನು ಮೀರಿದ ಆದರ್ಶ ಮನುಷ್ಯನಿಗೇ ಸರಿಹೋಲತಕ್ಕದ್ದು ಎಂದು ತಿಳಿಯುವುದು.

ಅಷ್ಟಮ ಪರಿಚ್ಛೇದ

ಕೃಷ್ಣ ಕರ್ಣರ ಸಂವಾದ

ಸರ್ವ ಪ್ರಾಣಿಗಳಿಗೂ ದಯಾಮಯನಾದ ಶ್ರೀಕೃಷ್ಣನು ಈಗ ಒದಗಿರುವ ಮಹಾಯುದ್ಧದಲ್ಲಿ ಲೆಕ್ಕವಿಲ್ಲದಷ್ಟು ಪ್ರಾಣಿಗಳು ಅನ್ಯಾಯವಾಗಿ ನಾಶವಾಗುವವಲ್ಲಾ! ಎಂದು ಪಶ್ಚಾತ್ತಾಪಪಟ್ಟು ಯಥಾಸಾಧ್ಯವಾಗಿ ಇದನ್ನು ತಪ್ಪಿಸಲೆತ್ನಿಸಿದವನೇ ಹೊರತು ಇತರ ಕ್ಷತ್ರಿಯರಾರೂ ಈ ವಿಷಯಕ್ಕೆ ಮನಸ್ಸನ್ನೇ ಕೊಡಲಿಲ್ಲ. ವಿರಾಟನಗರದಲ್ಲಿ ಮೊದಲು ಯುದ್ಧದ ಪ್ರಸ್ತಾಪವುಂಟಾದಾಗ ಆತನು ಯುದ್ಧಕ್ಕೆ ವಿರೋಧವಾದ ಅಭಿಪ್ರಾಯವನ್ನು ಕೊಟ್ಟಿದ್ದನು. ಅರ್ಜುನನು ಅವನನ್ನು ಯುದ್ಧಕ್ಕೆ ಕರೆದಾಗ ತಾನು ಅಸ್ತ್ರವನ್ನು ಹಿಡಿದು ಯುದ್ಧಮಾಡುವುದಿಲ್ಲವೆಂಬ ಪ್ರತಿಜ್ಞೆಯನ್ನು ಮಾಡಿದನು. ಇಷ್ಟಾದರೂ ಯುದ್ಧ ನಿಲ್ಲದೆ ಬರಲು ಬೇರೆ ಉಪಾಯಗಳೊಂದೂ ಇಲ್ಲದೆ ಸಂಧಿಯನ್ನು ಮಾಡೋಣವೆಂದು ಧೃತರಾಷ್ಟ್ರನ ಸಭೆಯನ್ನು ಕುರಿತು ತೆರಳಿದನು. ಇದರಿಂದಲೂ ಪ್ರಯೋಜನವಾಗಲಿಲ್ಲ. ಪ್ರಾಣಿಹತ್ಯ ತಪ್ಪುವಂತೆ ಕಾಣಬರಲಿಲ್ಲ. ಆಗ ರಾಜನೀತಿಜ್ಞನಾದ ಕೃಷ್ಣನು ಜನಸಮುದಾಯದ ಸಂರಕ್ಷಣಾರ್ಥವಾಗಿ ಬೇರೊಂದು ಉಪಾಯವನ್ನು ಹುಡುಕಿದನು.

ಕರ್ಣನು ಮಹಾವೀರನು. ಅರ್ಜುನನ ಸಮಕಕ್ಷಿ ರಥಿ. ಇವನ ಬಾಹುಬಲದಿಂದಲೇ ದುರ್ಯೋಧನನು ತಾನು ಬಲವಂತನೆಂದು ತಿಳಿದಿದ್ದದ್ದು. ಇವನ ಬಲದಮೇಲೆ ಭಾರವನ್ನಿಟ್ಟುಕೊಂಡೇ ದುರ್ಯೋಧನನು ಯುದ್ಧಕ್ಕೆ ನಿಂತಿರುವುದು. ಕರ್ಣನ ಸಹಾಯ ತಪ್ಪಿದರೆ ಅವನೆಂದಿಗೂ ಯುದ್ಧಕ್ಕೆ ನಿಲ್ಲನು. ಶತ್ರುಪಕ್ಷದಲ್ಲಿ ಕರ್ಣನನ್ನು ಕಂಡೊಡನೆಯೇ ಯುದ್ಧಕ್ಕೆ ನಿಲ್ಲದೆ ದುರ್ಯೋಧನನು ಸಂಧಿಗೆ ಬರುವನು. ಆದಕಾರಣ ಕರ್ಣನನ್ನು ಪಾಂಡವ ಪಕ್ಷಕ್ಕೆ ಬರಮಾಡಬೇಕೆಂದೇ ತನ್ನ ರಥದಲ್ಲಿ ಕೂರಿಸಿಕೊಂಡು ಏಕಾಂತ ಸ್ಥಳಕ್ಕೆ ಹೋದನು.

ಈ ಅಭಿಪ್ರಾಯಕ್ಕನುಸಾರವಾಗಿ ಸಹಜವಾಗಿ ಇತರ ಕೆಲವು ಅನುಕೂಲ್ಯಗಳು ಇದ್ದವು.

ಅತಿರಥನೆಂಬ ಸೂತನ ಮಗನೆಂದು ಕರ್ಣನು ಪ್ರಖ್ಯಾತನಾಗಿದ್ದರೂ ಇವನು ಅವನ ಸಾಕುಮಗನೇ ಹೊರತು ಔರಸಪುತ್ರನಲ್ಲ. ಇದನ್ನು ಕರ್ಣನು ಕಾಣನು. ತಾನು ಸೂತಪತ್ನಿಯಾದ ರಾಧೆಯಲ್ಲಿ ಜನಿಸಿದವ ನೆಂದಂದುಕೊಂಡಿದ್ದನು. ಕುಂತಿಯ ಗರ್ಭದಲ್ಲಿ ಮದುವೆಗೆ ಮುಂಚೆ ಹುಟ್ಟಿದವನಾದುದರಿಂದ ಇವನು ಹುಟ್ಟಿದ ಒಡನೆಯೇ ಕುಂತಿ ಇವನನ್ನು ಪರಿತ್ಯಾಗಮಾಡಿದ್ದಳು. ಇದರಿಂದ ಸತ್ಯವಾಗಿ ಇವನು ಯುಧಿಷ್ಠಿರಾದಿ ಪಾಂಡವರ ಸಹೋದರನೂ ಜ್ಯೇಷ್ಠನೂ ಆಗಿದ್ದನು. ಇದು ಕುಂತಿಯ ಹೊರತು ಇನ್ನಾರಿಗೂ ತಿಳಿಯದು. ಆದರೆ ಕೃಷ್ಣನು ಮಾತ್ರ ತಿಳಿದುಕೊಂಡಿದ್ದನು. ಅವನ ಲೋಕಾತಿಶಯವಾದ ಬುದ್ಧಿಯ ಮುಂದೆ ಎಲ್ಲವೂ ಸಹಜವಾಗಿ ಹೊರಕ್ಕೆ ಬೀಳುತಲಿತ್ತು. ಕುಂತಿ ಕೃಷ್ಣನ ತಂದೆಯ ತಂಗಿ. ಇದು ನಡೆದದ್ದು ಭೋಜರಾಜನ ಮನೆಯಲ್ಲಿ. ಆದುದ ರಿಂದ ಕೃಷ್ಣನು ಈ ವಿಷಯವನ್ನು ಮನುಷ್ಯ ಬುದ್ಧಿಯಿಂದಲೇ ತಿಳಿಯುವುದು ಅಸಂಭವವಲ್ಲ.

ತನ್ನ ರಥದಮೇಲೆ ಕುಳಿತಿರುವ ಕರ್ಣನನ್ನು ಕುರಿತು ಕೃಷ್ಣನು— "ಎಲೈ ಕರ್ಣನೆ, ಕನ್ಯೆಯನ್ನು ಪಾಣಿಗ್ರಹಣಮಾಡಿದವನೇ ಆ ಕನ್ಯೆಯ ಮದುವೆಗೆ ಮುಂಚೆ ಮತ್ತು ಆಮೇಲೆ ಹುಟ್ಟಿದ ಮಕ್ಕಳಿಗೂ ತಂದೆ ಎಂದು ಶಾಸ್ತ್ರವಿದೆ. ನಿನ್ನ ತಾಯಿಯಾದ ಕುಂತಿಯು ಕನ್ಯೆಯಾಗಿರುವಾಗ ನೀನು ಹುಟ್ಟಿ ಧರ್ಮತಃ ಪಾಂಡುಪುತ್ರನಾಗಿ ಇದ್ದೀಯೆ. ಇಲ್ಲಿಂದ ನೀನು ಹೊರಡುವವನಾಗು. ಶಾಸ್ತ್ರಾನುಸಾರವಾಗಿ ರಾಜ್ಯಕ್ಕೆ ನೀನು ಅಧೀಶ್ವರನಾಗುವೆಯಂತೆ.'' ಈ ಪ್ರಕಾರ ನೀನು ಜ್ಯೇಷ್ಠನಾದದ್ದರಿಂದ ರಾಜನಾಗತಕ್ಕವನೆಂತಲೂ ಯುಧಿಷ್ಠಿರಾದಿಗಳು ನಿನ್ನನ್ನುಪಚರಿಸುವರೆಂತಲೂ ಕೃಷ್ಣನು ತಿಳಿಸಿದನು.

ಕೃಷ್ಣನ ಈ ಸಲಹೆಯು ಸಮಸ್ತರಿಗೂ ಧರ್ಮವೃದ್ಧಿಯನ್ನುಂಟು ಮಾಡುವುದಾಗಿ ಹಿತಕರವಾಗಿ ಇತ್ತು. ಕರ್ಣನ ಪರವಾಗಿಯೋ ಇವನು ಚಕ್ರವರ್ತಿಯಾಗುವುದರಿಂದ ಹಿತಕರವೂ ತಮ್ಮಂದಿರೊಡನೆ

ಶತ್ರುಭಾವ ಬಿಟ್ಟು ಮಿತ್ರಭಾವ ಉದಿಸುವದರಿಂದ ಧರ್ಮಸಮ್ಮತವೂ ಆಗಿತ್ತು. ದುರ್ಯೋಧನಾದಿಗಳ ಪರವಾಗಿಯೂ ಹಿತಕರವೇ ಆಗಿತ್ತು. ಯುದ್ಧ ನಿಲ್ಲುವ ಪಕ್ಷದಲ್ಲಿ ಇತರ ಪ್ರಾಣಿಗಳು ಉಳಿಯುವುವಲ್ಲದೆ ಕೌರವರ ರಾಜ್ಯವೂ ಅವರಿಗೆ ಉಳಿದುಕೊಳ್ಳುತ್ತಿತ್ತು. ಇದರಿಂದ ಪಾಂಡವರಿಗೂ ಹಿತವೂ ಧರ್ಮಕರವೂ ಆಗಿತ್ತು, ಯುದ್ಧದಂತಹ ಭಯಂಕರ ಕಾರ್ಯಕ್ಕೆ ಕೈಯಿಕ್ಕದೆ ಆತ್ಮೀಯಜ್ಞಾತಿಬಾಂಧವರಾದಿಯಾಗಿ ಒಬ್ಬರನ್ನೂ ಕೊಲ್ಲದೆ ಸ್ವರಾಜ್ಯವನ್ನು ಕರ್ಣನೊಡನೆ ಅನುಭವಿಸುವವರಾಗುತ್ತಿದ್ದರು. ಅಲ್ಲದೆ ಅಸಂಖ್ಯಾತರಾದ ಮನುಷ್ಯರ ಪ್ರಾಣರಕ್ಷಣೆಯಾಗಬಹುದಾಗಿ ಇದ್ದುದರಿಂದ ಪರಮಧರ್ಮವೂ ಹಿತಕರವೂ ಆದುದಾಗಿತ್ತು.

ಕರ್ಣನು ಇಷ್ಟನ್ನೂ ಒಪ್ಪಿದನು. ಮುಂದಿನ ಯುದ್ಧದಲ್ಲಿ ದುರ್ಯೋಧನ ಮುಂತಾದವರು ಉಳಿಯುವುದಿಲ್ಲವೆಂದೂ ತಿಳಿದನು. ಆದರೂ ತಾನು ಕೃಷ್ಣನ ಮಾತನ್ನು ಒಪ್ಪಿಕೊಂಡೆನಾದರೆ ಹಲವು ಗುರುತರವಾದ ಅಪರಾಧಗಳಲ್ಲಿ ಮುಳುಗಬೇಕಾಗುವುದೆಂದಂದುಕೊಂಡನು. ಅತಿರಥನೂ ರಾಧೆಯೂ ಅವನನ್ನು ಪಾಲಿಸಿರುವರು. ಅವರಾಶ್ರಯದಲ್ಲಿದ್ದು ಕೊಂಡು ಸೂತವಂಶದ ಕನ್ಯೆಯನ್ನು ಮದುವೆಯಾಗಿರುವನು. ಅವಳಿಂದ ತನಗೆ ಮಕ್ಕಳೂ ಮೊಮ್ಮಕ್ಕಳೂ ಆಗಿರುವರು. ಅವರನ್ನೆಲ್ಲ ಬಿಡುವುದ ಕ್ಕಾದೀತೆ ? ದುರ್ಯೋಧನನ ಆಶ್ರಯದಲ್ಲಿ ಅನೇಕ ವರ್ಷಗಳಿಂದಿದ್ದುಕೊಂಡು ರಾಜ್ಯಭೋಗವನ್ನು ಅನುಭವಿಸಿರುವನು. ಇಂಥವನು ಈಗ ಬಿಟ್ಟು ಪಾಂಡವರ ಕಡೆಗೆ ಹೋದರೆ ತನ್ನನ್ನು ಕೃತಘ್ನನು; ಪಾಂಡವರ ಸಂಪತ್ತಿಗೆ ಆಶೆ ಬಿದ್ದು ಅವರ ಭಯಕ್ಕೆ ಭೀತನಾಗಿ ಬಂದ ಕಾಪುರುಷನು-ಎಂದು ಲೋಕವು ಜರೆಯುವುದಿಲ್ಲವೆ! ಹೀಗೆಲ್ಲಾ ಯೋಚಿಸಿ ಕರ್ಣನು ಕೃಷ್ಣನ ಮಾತನ್ನು ಒಪ್ಪದೆ ಹೋದನು.

ಆಗ ಕೃಷ್ಣನು—''ನನ್ನ ಮಾತು ನಿನ್ನ ಮನಸ್ಸಿಗೆ ಹತ್ತದೆಹೋಯಿತು. ನಿಶ್ಚಯವಾಗಿಯೂ ಈ ಪ್ರಪಂಚಕ್ಕೆ ಮರಣವು ಒದಗಿರುವುದು'' ಎಂದನು.

ಕರ್ಣನು ಉಪಯುಕ್ತನಾದ ಉತ್ತರವನ್ನಿತ್ತು ಕೃಷ್ಣನನ್ನಾಲಿಂಗಿಸಿ ವಿಷಣ್ಣಭಾವದಿಂದ ಬೀಳ್ಕೊಂಡು ರಥದಿಂದಿಳಿದನು.

ಕೃಷ್ಣನ ಚರಿತ್ರೆಯನ್ನು ತಿಳಿದುಕೊಳ್ಳುವುದಕ್ಕೋಸ್ಕರ ಕರ್ಣನ ಚರಿತ್ರೆಯನ್ನು ವಿಸ್ತಾರವಾಗಿ ವಿಮರ್ಶಿಸಬೇಕಾದುದಿಲ್ಲ; ಆದರೂ ಕರ್ಣನ ಚರಿತ್ರೆಯು ಬಲು ಬೆಲೆಯುಳ್ಳುದೂ ಅತ್ಯಂತ ಮನೋಹರವಾದುದೂ ಆಗಿರುವುದು.

ನವಮ ಪರಿಚ್ಛೇದ

ಉಪಸಂಹಾರ

ಕೃಷ್ಣನು ಹಿಂದಿರುಗಿ ಉಪಪ್ಲಾವ್ಯನಗರಕ್ಕೆ ಬಂದ ಬಳಿಕ ಯುಧಿಷ್ಠಿರ ಮೊದಲಾದವರು ಇವನನ್ನು ಹಸ್ತಿನಾವತಿಯಲ್ಲಿ ನಡೆದ ವೃತ್ತಾಂತವೇನೆಂದು ಕೇಳಿದರು.

ಅಲ್ಲಿ ನಡೆದ ವಿಷಯಗಳನ್ನೆಲ್ಲ ಕೃಷ್ಣನು ತಿಳಿಸಿರುವನು. ಇಲ್ಲಿ ಮಾತುಗಳನ್ನಾಡಿರುವ ಪ್ರತಿಯೊಬ್ಬರ ಅಭಿಪ್ರಾಯಗಳಿಗೂ ಹಿಂದಿನ ಪರ್ವಗಳಲ್ಲಿ ಇವರಿವರು ಆಡಿರುವ ಮಾತಿನ ಅಭಿಪ್ರಾಯಗಳಿಗೂ ಸಾಮಂಜಸ್ಯವು ಬರುವುದಿಲ್ಲ. ಸಾಮಂಜಸ್ಯವು ಉಂಟಾಗಿದ್ದರೂ ಬಹು ದೀರ್ಘವಾದ ಪುನರುಕ್ತಿಯಾಗುತ್ತಿತ್ತು. ಆದುದರಿಂದ ಇದನ್ನು ಪರಿಹರಿಸುವುದಕ್ಕೋಸ್ಕರ ಆವನೋ ಓರ್ವ ಮಹಾಪುರುಷನು ಒಂದು ಹೊಸ ರೀತಿಯಲ್ಲಿ ವಿಷಯಗಳನ್ನು ಸೇರಿಸಿಬಿಟ್ಟಿರುವನೆಂದು ತೋರುವುದು.

ಇಲ್ಲಿಗೆ ಭಗವದ್ಯಾನಪರ್ವವು ಮುಗಿದು ಸೈನ್ಯನಿರ್ಮಾಣಪರ್ವವು ಪ್ರಾರಂಭವಾಗುವುದು. ಇದರಲ್ಲಿ ವಿಶೇಷವೇನೂ ಇಲ್ಲ. ಕೆಲವು ಅಸಲು, ಕೆಲವು ಹೊಸದು ಎಂದು ತೋರುವುದು. ಕೃಷ್ಣಸಂಬಂಧವಾದ ಮಾತುಗಳು ವಿರಳ. ಕೃಷ್ಣಾರ್ಜುನರ ಸಲಹೆಗೆ ಅನುಸಾರವಾಗಿ ಧೃಷ್ಟದ್ಯುಮ್ನನನ್ನು ಸೇನಾಧಿಪತಿಯನ್ನಾಗಿ ಗೊತ್ತುಮಾಡಿಕೊಂಡರು. ಬಲರಾಮನು ಸುರೆಯನ್ನು ಸೇವಿಸಿ ಬಂದು ಕೃಷ್ಣನನ್ನು ಕುರಿತು ಸವಿಯಾದ ಕೆಲವು ಮಾತುಗಳಿಂದ ಆಕ್ಷೇಪಿಸಿದನು. ಕೃಷ್ಣನು ಕುರುಪಾಂಡವರನ್ನು ಸಮಾನವಾಗಿ ಕಾಣುತ ಲಿಲ್ಲವೆಂಬುದೇ ಈ ಆಕ್ಷೇಪಣೆ. ಕುರುಸಭೆಯಲ್ಲಿ ನಡೆದ ಕೆಲವು ಮಾತು ಗಳಲ್ಲದೆ ಇಲ್ಲಿ ಇನ್ನೇನೂ ಇಲ್ಲ.

ಇದಾದ ಮೇಲೆ ಉಲೂಕ ದೂತನು ಬಂದದ್ದು. ಇದು ಸುತರಾಂ ಕೆಲಸಕ್ಕೆ ಬಾರದ್ದು. ಇದರಲ್ಲಿ ಒಂದು ಕಡೆಯುವರು ಎದುರು ಕಡೆಯವರನ್ನು ಎತ್ತಿ ಆಡುವುದು. ಶಕುನಿ ಮುಂತಾದವರ ಪ್ರೇರಣೆಯಿಂದ ದುರ್ಯೋಧನನು ಉಲೂಕನನ್ನು ಪಾಂಡವರ ಹತ್ತಿರಕ್ಕೆ ಕಳುಹಿದನು. ಇದರ ಉದ್ದೇಶವು ಪಾಂಡವರನ್ನೂ ಕೃಷ್ಣನನ್ನೂ ಚೆನ್ನಾಗಿ ಬೈದು ಭಂಗಿಸಿ ಬರಬೇಕೆಂಬುದಲ್ಲದೆ ಇನ್ನೇನೂ ಇಲ್ಲ. ಉಲೂಕನು ಆ ಆರು ಜನಗಳನ್ನೂ ಚೆನ್ನಾಗಿ ಬೈದನು. ಇದಕ್ಕೆ ಪ್ರತಿಯಾಗಿ ಪಾಂಡವರೂ ಚೆನ್ನಾಗಿ ಬೈದರು. ಕೃಷ್ಣನು ವಿಶೇಷವಾಗಿ ಏನೂ ಹೇಳಿಲ್ಲ. ರೋಷಾಸೂಯೆಗಳಿಲ್ಲದ ಕೃಷ್ಣನಂಥವನು ಬೈಗಳಕ್ಕೆ ಹೋಗನು. ಅಲ್ಲದೆ ಪಾಂಡವರು ಉತ್ತರವನ್ನು ಕೊಡುವುದಕ್ಕೆ ಮೊದಲೇ ಉಲೂಕನನ್ನು ಹಿಂದಕ್ಕೆ ಕಳುಹಿಸಿಬಿಡಬೇಕೆಂಬ ಪ್ರಯತ್ನವನ್ನೂ ಮಾಡಿದ್ದನು.

"ಎಲೈ ಉಲೂಕ, ನಿನ್ನ ಮಾತುಗಳನ್ನೆಲ್ಲ ಕೇಳಿ ಅವುಗಳ ಅರ್ಥವನ್ನು ಪಾಂಡವರು ಮನಸ್ಸಿಗೆ ತಂದುಕೊಂಡಿದಾರೆ ; ಈಗ ನಿನ್ನ ಅಭಿಪ್ರಾಯದಂತೆಯೇ ನಡೆಯುವುದು ಎಂದು ದುರ್ಯೋಧನನಿಗೆ ತಿಳಿಸು" ಎಂದು ಹೇಳಿದನು. ಇದರಿಂದ ಕೃಷ್ಣಾರ್ಜುನರ ಮೇಲೆ ಹೆಚ್ಚು ಬೈಗಳು ಬಿದ್ದಿರಬೇಕೆಂದು ತೋರುವುದು.

ದುರ್ಬುದ್ಧಿಯಾದ ಉಲೂಕನು ತನ್ನ ದಾರಿಯನ್ನು ಬಿಡುವನೆ? ಮರಳಿ ಬೈಗಳಿಂದ ಮೂದಲಿಸುವುದಕ್ಕೆ ಮೊದಲುಮಾಡಿದನು. ಇವನು ದುರ್ಯೋಧನನ ತಮ್ಮನು. ಪಾಂಡವರು ಇವನ ಬೈಗಳಿಗೆಲ್ಲಾ ಒಂದೊಂದಾಗಿ ಉತ್ತರವನ್ನು ಹೇಳಿದ್ದಾಯಿತು. ಆಮೇಲೆ ಕೃಷ್ಣನು— "ಅರ್ಜುನನ ಸಾರಥಿತನವನ್ನೊಪ್ಪಿಕೊಂಡಿರುವ ನಾನು ಯುದ್ಧಮಾಡುವುದಿಲ್ಲವೆಂದಂದುಕೊಂಡು ಹೆದರದೆ ಇರುವೆ, ಹುತಾಶನನು ಒಣಹುಲ್ಲನ್ನು ಸುಟ್ಟು ಬೂದಿಮಾಡುವ ಪ್ರಕಾರಕ್ಕೆ ಕಡೆಗಾಲಕ್ಕೆ ನಾನೂ ಕೂಡ ಕೋಪದಿಂದ ರಾಜಸಮೂಹವನ್ನು ತರಿದೊಟ್ಟುವೆನು. ಸಂದೇಹಪಡಬೇಡ" ಎಂದು ಹೇಳಿದನು.

ಉಲೂಕ ದೂತಾಗಮನ ಪರ್ವಾಧ್ಯಾಯದಿಂದ ಮಹಾಭಾರತದ ಕಾರ್ಯಕ್ಕೆ ಯಾವ ಪ್ರಯೋಜನವೂ ಕಾಣುವುದಿಲ್ಲ. ಇದರಲ್ಲಿ

ರಚನಾನೈಪುಣ್ಯವಾಗಲಿ ಪ್ರೌಢಕವಿತ್ವವಾಗಲಿ ಇರುವುದಿಲ್ಲ. ಅಲ್ಲದೆ ಅಲ್ಲಲ್ಲಿ ಮಹಾಭಾರತದ ಇತರ ಭಾಗಗಳೊಡನೆ ಸಮಂಜಸವಾಗದ ಭಾಗಗಳಿವೆ. ಅನುಕ್ರಮಣಿಕಾಧ್ಯಾಯದಲ್ಲಿ ಸಂಜಯನ ಮತ್ತು ಕೃಷ್ಣನ ದೌತ್ಯದ ವಿಷಯ ಹೇಳಲ್ಪಟ್ಟಿರುವುದಾದರೂ ಉಲೂಕದೂತನ ವಿಷಯವಿರುವುದಿಲ್ಲ. ಈ ಕಾರಣಗಳಿಂದ ಇದನ್ನು ಮಹಾಭಾರತದ ಮೌಲಿಕ ಅಂಶವೆಂದು ವಿವೇಚಿಸುವುದಕ್ಕಾಗುವುದಿಲ್ಲ.

ಇದಾದಮೇಲೆ ರಥಾತಿರಥರುಗಳ ಎಣಿಕೆ. ಬಳಿಕ ಅಶ್ವೋಪಾಖ್ಯಾನ ಪರ್ವ. ಇವುಗಳಲ್ಲಿ ಕೃಷ್ಣನ ವೃತ್ತಾಂತವೇ ಇರುವುದಿಲ್ಲ. ಇಲ್ಲಿಗೆ ಉದ್ಯೋಗಪರ್ವವು ಮುಗಿಯಿತು.

—ಪಂಚಮ ಖಂಡ ಸಂಪೂರ್ಣ—

ಷಷ್ಠ ಖಂಡ

ಕುರುಕ್ಷೇತ್ರ

ಯೋ ನಿಷಣ್ಣೋ ಭವೇದ್ರಾತ್ರೌ ದಿವಾ ಭವತಿ ವಿಷ್ಠಿತಃ ॥
ಇಷ್ಟಾನಿಷ್ಟಸ್ಯ ಚ ದ್ರಷ್ಟಾ ತಸ್ಮೈ ದ್ರಷ್ಟಾತ್ಮನೇ ನಮಃ ॥

ಶಾಂತಿಪರ್ವ, ೪೭ನೆಯ ಅಧ್ಯಾಯ

ಪ್ರಥಮ ಪರಿಚ್ಛೇದ

ಭೀಷ್ಮನ ಯುದ್ಧ

ಈಗ ಕುರುಕ್ಷೇತ್ರದಲ್ಲಿ ಯುದ್ಧವು ಮೊದಲಾಗುವುದು. ಇದನ್ನು ಮಹಾಭಾರತದಲ್ಲಿ ನಾಲ್ಕು ಪರ್ವಗಳಲ್ಲಿ ವರ್ಣಿಸುತ್ತಾರೆ. ದುರ್ಯೋಧನನ ಸೇನಾಧಿಪತಿಗಳ ದರ್ಜೆ ಮತ್ತು ಹೆಸರುಗಳನ್ನನುಸರಿಸಿ ಭೀಷ್ಮಪರ್ವ, ದ್ರೋಣಪರ್ವ, ಕರ್ಣಪರ್ವ, ಶಲ್ಯಪರ್ವಗಳೆಂದು ಇವಕ್ಕೆ ಹೆಸರಾಗಿವೆ.

ಈ ಯುದ್ಧಪರ್ವಗಳನ್ನು ಮಹಾಭಾರತದಲ್ಲಿನ ಅತಿನಿಕೃಷ್ಟ ಅಂಶವೆಂದು ಎಣಿಸುವುದುಚಿತವು. ಅಕಾರಣ ಪುನರುಕ್ತಿಯೂ ಅರುಚಿಯೂ ಸಾಲದೆ ವರ್ಣನಾ ಬಾಹುಳ್ಯಗಳಿಂದಲೂ ಅನೈಸರ್ಗಿಕತೆ ಅತ್ಯುಕ್ತಿ ಮತ್ತು ಅಸಂಬದ್ಧ ದೋಷಗಳಿಂದಲೂ ಇವು ತುಂಬಿರುವುವು. ಇವುಗಳ ಬಹು ಕೊಂಚ ಭಾಗವೇ ಆದಿಮ ಸ್ತರಕ್ಕೆ ಸೇರಿದ್ದೆಂದು ತೋರುವುದಾದರೂ ಯಾವ ಭಾಗವು ಮೂಲದ್ದು, ಯಾವುದು ಅಲ್ಲ ಎಂಬುದನ್ನು ಗೊತ್ತು ಮಾಡುವುದು ಅತಿ ದುಷ್ಕರವಾಗಿರುವುದು.

ಸಂಪೂರ್ಣವಾಗಿ ಮುಳ್ಳಿನಿಂದ ತುಂಬಿದ ವನದಲ್ಲಿ ಹೂಗಳನ್ನೆತ್ತುವುದು ಬಹುಕಷ್ಟ. ಆದರೆ ಕೃಷ್ಣಚರಿತ್ರೆಗೆ ಸಂಬಂಧಪಟ್ಟ ಮಾತುಗಳು ಸಿಕ್ಕುವ ಸ್ಥಳಗಳನ್ನು ಕೈಲಾದಮಟ್ಟಿಗೆ ತಿಳಿದುಕೊಳ್ಳಲು ಯತ್ನಿಸೋಣ.

ಭೀಷ್ಮಪರ್ವದ ಪ್ರಾರಂಭದಲ್ಲಿ ಜಂಬೂದ್ವೀಪ ನಿರ್ಮಾಣ ಪರ್ವಾಧ್ಯಾಯ ಇರುವುದು. ಅದರೊಡನೆ ಯುದ್ಧಕ್ಕೆ ಯಾವ ಸಂಬಂಧವೂ ಇಲ್ಲ; ಮಹಾಭಾರತಕ್ಕೂ ಸಂಬಂಧ ಬಹು ಸ್ವಲ್ಪ. ಕೃಷ್ಣ ಚರಿತ್ರೆಯ ಯಾವ ಮಾತೂ ಇಲ್ಲಿ ಇಲ್ಲ. ಇದಾದಮೇಲೆ ಭಗವದ್ಗೀತಾ ಪರ್ವಾಧ್ಯಾಯ ಬರುವುದು. ಇದರ ಮೊದಲನೆಯ ೨೪ ಅಧ್ಯಾಯಗಳು ಕಳೆದ ಬಳಿಕ ಗೀತಾರಂಭ. ಈ ೨೪ ಅಧ್ಯಾಯಗಳಲ್ಲಿಯೂ ಕೃಷ್ಣಸಂಬಂಧವಾದ ವಿಶೇಷವಾದ ಯಾವ ಮಾತೂ ಇಲ್ಲ. ಕೃಷ್ಣನು ಯುದ್ಧವನ್ನು ಪ್ರಾರಂಭಿಸುವುದಕ್ಕೆ ಮೊದಲು ದುರ್ಗಾಸ್ತುತಿಯನ್ನು ಮಾಡುವಂತೆ ಹೇಳಿದನು. ಅರ್ಜುನನೂ ಯುದ್ಧಾರಂಭದಲ್ಲಿ ದುರ್ಗಾಸ್ತುತಿಯನ್ನು ಮಾಡಿದನು. ಗುರುತರವಾದ ಕಾರ್ಯವಾವುದನ್ನು ಮಾಡಬೇಕಾದರೂ ತಂತಮ್ಮ ಇಷ್ಟದೇವತೆಯನ್ನು ಆರಾಧಿಸಿ ಕೆಲಸಕ್ಕೆ ಕೈ ಇಡುವುದು ಕರ್ತವ್ಯ. ಹೀಗೆ ಮಾಡಿದರೆ ಈಶ್ವರನ ಆರಾಧನೆಯೇ ಆಯಿತು. ಬೇಕಾದ ಹೆಸರನ್ನಿಡಿ; ಈಶ್ವರನೊಬ್ಬನಲ್ಲದೆ ಇನ್ನಿಲ್ಲ.

ಅದಾದಮೇಲೆ ಗೀತಾ. ಇದು ಕೃಷ್ಣಚರಿತ್ರೆಯಲ್ಲಿನ ಅಂಶ. ಈ ಗೀತೋಕ್ತವಾದ ಅನುಪಮ ಪವಿತ್ರ ಧರ್ಮಪ್ರಚಾರವೇ ಕೃಷ್ಣನ ಆದರ್ಶ ಮನುಷ್ಯತ್ವದ ಅಥವಾ ದೇವತ್ವದ ಒಂದು ಹೆಗ್ಗುರುತು.

ಇಲ್ಲಿ ಗೀತಾ ಸಂಬಂಧವಾದ ಯಾವ ಮಾತನ್ನೂ ಹೇಳುವುದಿಲ್ಲ. ಗೀತೋಕ್ತ ಧರ್ಮವನ್ನು "ಧರ್ಮತತ್ತ್ವ" ಎಂಬ ಗ್ರಂಥದಲ್ಲಿ ಕೊಂಚಕೊಂಚ ತಿಳಿಸಲು ಯತ್ನಿಸಿದೇನೆ. ಇನ್ನೂ ಒಂದು ಪುಸ್ತಕವನ್ನು ಇದೇ ವಿಷಯವಾಗಿಯೇ ಬರೆದಿರುತ್ತೇನೆ. ಈ ಎರಡು ಗ್ರಂಥಗಳಲ್ಲಿಯೂ ಗೀತಾ ವಿಚಾರವಾದ ನನ್ನ ಮತ ದೊರೆಯುವುದು. ಇಲ್ಲಿ ಪುನರುಕ್ತಿಯಿಂದ ಪ್ರಯೋಜನವಿಲ್ಲ.

ಭಗವದ್ಗೀತಾ ಪರ್ವಾಧ್ಯಾಯವಾದಮೇಲೆ ಭೀಷ್ಮವಧ ಪರ್ವಾಧ್ಯಾಯ. ಇಲ್ಲಿಯೇ ಯುದ್ಧಕ್ಕೆ ಮೊದಲಾಗುವುದು. ಯುದ್ಧದಲ್ಲಿ ಕೃಷ್ಣನು ಅರ್ಜುನನ ಸಾರಥಿ ಮಾತ್ರ. ಸಾರಥಿಗಳ ಅದೃಷ್ಟ ಬಹಳ ಕಷ್ಟದ್ದಾಗಿತ್ತು. ಮಹಾಭಾರತದಲ್ಲಿರುವ ಯುದ್ಧದ ವರ್ಣನೆಗಳಲ್ಲಿ ಹಲವು ದ್ವೈರಥ ಯುದ್ಧಗಳು. ರಥಿಕರು ಯುದ್ಧಮಾಡುವಾಗ ಒಬ್ಬರು

ಇನ್ನೊಬ್ಬರ ಕುದುರೆಗಳನ್ನೂ ಸಾರಥಿಯನ್ನೂ ಕೆಡಹಲು ಪ್ರಯತ್ನಿಸುತ್ತಿದ್ದರು. ಕುದುರೆ ಅಥವಾ ಸಾರಥಿ ಬಿದ್ದರೆ ರಥ ನಡೆಯದೆ ರಥಿಕನು ಕೆಳಕ್ಕೆ ಬೀಳುತ್ತಿದ್ದನು. ಸಾರಥಿಗಳು ಯೋಧರಲ್ಲ. ದೋಷವಿಲ್ಲದೆ, ಯುದ್ಧವನ್ನು ಮಾಡದೆ, ಇವರು ಕೊಲೆಗೀಡಾಗುತ್ತಿದ್ದರು. ಕೃಷ್ಣನು ಈ ಸುಖಕ್ಕೆ ಭಾಗಿಯಾಗಬೇಕಾಗಿತ್ತು. ಅವನು ಹತನೇನೋ ಆಗಲಿಲ್ಲ; ಆದರೂ ಹದಿನೆಂಟು ದಿನಗಳ ಯುದ್ಧದ ಪ್ರತಿ ಮುಹೂರ್ತದಲ್ಲಿಯೂ ಬಹುಸಂಖ್ಯಗಳಾದ ಬಾಣಗಳಿಂದ ಚುಚ್ಚಲ್ಪಟ್ಟು ಕ್ಷತವಿಕ್ಷತನಾಗುತ್ತಲಿದ್ದನು. ಇತರ ಸಾರಥಿಗಳು ಆತ್ಮಸಂರಕ್ಷಣೆಯನ್ನು ಮಾಡಿಕೊಳ್ಳಲು ಶಕ್ತರಾಗಿರಲಿಲ್ಲ. ಅವರು ಜಾತಿಯಲ್ಲಿ ಕ್ಷತ್ರಿಯರಲ್ಲ. ವೈಶ್ಯರಾಗಿದ್ದರು. ಕೃಷ್ಣನು ಆತ್ಮರಕ್ಷಣೆಯಲ್ಲಿ ಅತಿಶಯ ಶಕ್ತನಾದರೂ ಕರ್ತವ್ಯದ ಬಲವಂತಕ್ಕೆ ಬಿದ್ದು ಕೂತು ಏಟುಗಳನ್ನು ತಿನ್ನುತ್ತಿದ್ದನು.

ಮಹಾಭಾರತ ಯುದ್ಧದಲ್ಲಿ ಅಸ್ತ್ರಧಾರಣವನ್ನು ಮಾಡುವುದಿಲ್ಲವೆಂದು ಕೃಷ್ಣನು ಪ್ರತಿಜ್ಞೆಮಾಡಿದ್ದರೂ ಒಂದು ದಿನ ಮಟ್ಟಿಗೆ ಅಸ್ತ್ರವನ್ನು ಹಿಡಿದನು. ಪ್ರಯೋಗವನ್ನು ಮಾತ್ರ ಮಾಡಲಿಲ್ಲ. ಈ ಘಟನೆಯು ಹೀಗಿರುವುದು :

ಭೀಷ್ಮನು ದುರ್ಯೋಧನನ ಸೇನಾಪತಿತ್ವದಲ್ಲಿ ನಿಯುಕ್ತನಾಗಿ ಯುದ್ಧಕ್ಕೆ ನಿಂತನು. ಇವನ ನೈಪುಣ್ಯದ ಮುಂದೆ ಪಾಂಡು ಸೈನ್ಯದಲ್ಲಿ ಅರ್ಜುನನ ಹೊರತು ಮತ್ತಾರೂ ಇಲ್ಲದೆ ಹೋದರು. ಅರ್ಜುನನಾದರೋ ಅವನೊಡನೆ ಸರಿಯಾಗಿ ಸ್ವಶಕ್ತಿಗೆ ಅನುಗುಣವಾಗಿ ಯುದ್ಧವನ್ನು ಮಾಡದೆ ಹೋದನು. ಭೀಷ್ಮನು ಅರ್ಜುನನ ಪಿತಾಮಹನು. ಬಾಲ್ಯಕಾಲದಲ್ಲಿಯೇ ತಂದೆಯನ್ನು ಕಳೆದುಕೊಂಡ ಪಾಂಡವರನ್ನು ಭೀಷ್ಮನೇ ಪಿತೃವಾತ್ಸಲ್ಯದಿಂದ ಪಾಲಿಸಿಕೊಂಡು ಬಂದಿದ್ದನು. ಈಗ ದುರ್ಯೋಧನನ ಬಲವಂತಕ್ಕೆ ಸಿಕ್ಕಿ ನಿರಪರಾಧಿಗಳಾದ ಪಾಂಡವರಿಗೆ ಶತ್ರುವಾಗಿ ಅವರಿಗೆ ಅನಿಷ್ಟಗಳನ್ನುಂಟು ಮಾಡಲಿಕ್ಕೆ ಅವರೊಡನೆ ಯುದ್ಧವನ್ನು ಮಾಡುತ್ತಿರುವನು. ಧರ್ಮತಃ ಅರ್ಜುನನಿಂದ ಭೀಷ್ಮನು ವಧಿಸಲ್ಪಡತಕ್ಕವನಾದರೂ ಪೂರ್ವಸ್ಥಿತಿಯನ್ನು ಜ್ಞಾಪಕದಲ್ಲಿಟ್ಟುಕೊಂಡು ಭೀಷ್ಮನನ್ನು ವಧಿಸಲಾರದವನಾಗಿ ಭೀಷ್ಮನು ಎಲ್ಲಿ ಬಿದ್ದು ಬಿಟ್ಟಾನೋ ಎಂಬ ಭಯದಿಂದ ಅರ್ಜುನನು ಸಂಕೋಚದಿಂದಿರಲು ಭೀಷ್ಮನು ಅಪ್ರತಿಹತವಾದ ವೀರ್ಯವುಳ್ಳವನಾಗಿ ಬಹು ಸಂಖ್ಯಾಕವಾದ

ಪಾಂಡವ ಸೈನ್ಯವನ್ನು ಹಾಳುಮಾಡುತ್ತಿದ್ದನು. ಇದನ್ನು ನೋಡಿ ಒಂದು ದಿವಸ ಭೀಷ್ಮನನ್ನು ವಧಿಸುವುದಕ್ಕೋಸ್ಕರ ಕೃಷ್ಣನು ಸ್ವಯಂ ಚಕ್ರಹಸ್ತನಾಗಿ ಅರ್ಜುನನ ರಥದಿಂದ ಇಳಿದು ಭೀಷ್ಮನಮೇಲೆ ಕಾಲು ನಡಗೆಯಲ್ಲೇ ಓಡಿದನು. ನೋಡಿ, ಕೃಷ್ಣಭಕ್ತನಾದ ಭೀಷ್ಮನು ಪರಮಾಹ್ಲಾದಿತನಾಗಿ ಹೀಗೆ ಹೇಳಿದನು. :

ಏಹ್ಯೇಹಿ ದೇವೇಶ ಜಗನ್ನಿವಾಸ ನಮೋಽಸ್ತು ತೇ ಶಾರ್ಙಗದಾಸಿಪಾಣೇ ।
ಪ್ರಸಹ್ಯ ಮಾಂ-ಪಾತಯ ಲೋಕನಾಥ ರಥೋತ್ತಮಾತ್ ಭೂತಶರಣ್ಯ ಸಂಖ್ಯೇ ॥

ದೇವೇಶ, ಜಗನ್ನಿವಾಸ, ಬಾ ಬಾ. ಶಾರ್ಙ, ಗದಾ, ಖಡ್ಗಗಳನ್ನು ಧರಿಸಿರುವವನೇ, ನಿನಗೆ ನಮಸ್ಕಾರ. ಎಲೈ ಲೋಕನಾಥನೇ, ಭೂತ ಶರಣ್ಯನೇ, ಯುದ್ಧದಲ್ಲಿ ನನ್ನನ್ನು ತಡಮಾಡದೆ ಉತ್ತಮವಾದ ರಥದಿಂದ ಕೆಳಕ್ಕೆ ಬೀಳಿಸು.

ಅರ್ಜುನನು ಕೃಷ್ಣನನ್ನು ಹಿಂಬಾಲಿಸಿ ಓಡಿಹೋಗಿ ಸಾಧ್ಯಾನುಸಾರ ವಾಗಿ ಯುದ್ಧಮಾಡುವಂತೆ ಪ್ರತಿಜ್ಞೆಯನ್ನು ಮಾಡಿ ಹಿಂದಿರುಗಿಸಿದನು. ಇದನ್ನು ಮೂರು ಮತ್ತು ಒಂಬತ್ತನೆಯ ದಿನದ ಯುದ್ಧಗಳಲ್ಲಿ ಎರಡುಸಲ ವರ್ಣಿಸಿರುತ್ತಾರೆ. ಶ್ಲೋಕಗಳೂ ಒಂದೇ. ಒಂದೇ ದಿನದ ಸಂಗತಿ ಬರೆದವನ ಭ್ರಮೆಯಿಂದಲೋ ಅಥವಾ ಇಚ್ಛೆಯಿಂದಲೋ ಎರಡು ಸಲ ಬಂದಿರುವ ಹಾಗೆ ಇದೆ. ಸಂಸ್ಕೃತಗ್ರಂಥಗಳಲ್ಲಿ ಬಹಳವಾಗಿ ಹೀಗಾಗು ವುದುಂಟು.

ರಚನೆಯನ್ನು ನೋಡಿ ವಿವೇಚಿಸಲು ಈ ವಿವರಣೆ ಮಹಾ ಭಾರತದ ಮೊದಲನೆಯ ಸ್ತರಕ್ಕೆ ಸೇರಿದ್ದೆಂದು ತೋರುವುದು. ಕವಿತ್ವವೂ, ಭಾವವೂ, ಭಾಷೆಯೂ ಉದಾರವಾದದ್ದು ಮತ್ತು ತೊಡಕು ಇಲ್ಲದ್ದು. ಮೊದಲನೆಯ ಸ್ತರವನ್ನು ಎಷ್ಟುಮಟ್ಟಿಗೆ ಮೌಲಿಕವೆಂದು ಸ್ವೀಕರಿಸ ಬಹುದೋ ಅಷ್ಟುಮಟ್ಟಿಗೆ ಇದನ್ನೂ ಮೌಲಿಕವೆಂದು ಸ್ವೀಕರಿಸಬಹುದು.

ಈ ಘಟನೆಯನ್ನು ಕುರಿತು ಕೃಷ್ಣಭಕ್ತರು ಕೃಷ್ಣನ ಪ್ರತಿಜ್ಞಾ ವಿಷಯವಾಗಿ ತರ್ಕಮಾಡುವುದುಂಟು. ಕಾಶೀದಾಸ ಮೊದಲಾದ ಹರಿ ಕಥೆಯ ದಾಸರು ಈ ಪ್ರತಿಜ್ಞಾಭಂಗವನ್ನೇ ಎತ್ತಿ ಕೃಷ್ಣಮಹಾತ್ಮ್ಯವನ್ನು ಕೀರ್ತಿಸಿರುತ್ತಾರೆ. ಭೀಷ್ಮನು ಯುದ್ಧಾರಂಭ ಕಾಲದಲ್ಲಿಯೇ ಕೃಷ್ಣನ

ಎದುರಿಗೆ "ನೀನು ಅಸ್ತ್ರವನ್ನು ಹಿಡಿಯುವುದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿದ್ದೀ, ನಾನು ನಿನ್ನ ಕೈಯಲ್ಲಿ ಅಸ್ತ್ರವನ್ನು ಹಿಡಿಸಿಯೇ ಹಿಡಿಸುತ್ತೇನೆ" ಎಂದು ಶಪಥಮಾಡಿ ಇದ್ದನು. ಭಕ್ತವತ್ಸಲನಾದ ಕೃಷ್ಣನು ತನ್ನ ಪ್ರತಿಜ್ಞೆಯನ್ನು ಕಳೆದುಕೊಂಡರೂ ಭಕ್ತನ ಪ್ರತಿಜ್ಞೆಯನ್ನು ರಕ್ಷಿಸಿ ಇರುವನು.

ಈ ಸುಬುದ್ಧಿ ರಚನೆಯಿಂದ ಪ್ರಯೋಜನವೇನೂ ಇಲ್ಲ. ಭೀಷ್ಮನ ಇಂಥ ಪ್ರತಿಜ್ಞೆಯೇನೂ ಮೂಲ ಮಹಾಭಾರತದಲ್ಲಿಲ್ಲ. ಅಲ್ಲದೆ ಕೃಷ್ಣನೂ ಪ್ರತಿಜ್ಞೆಯನ್ನು ಮೀರಿಲ್ಲ. ಆ ಪ್ರತಿಜ್ಞೆಯ ಮರ್ಮವು ಯುದ್ಧಮಾಡುವುದಿಲ್ಲವೆಂದು. ದುರ್ಯೋಧನ, ಅರ್ಜುನ ಇವರಿಬ್ಬರೂ ಒಂದೇ ಕಾಲದಲ್ಲಿ ಚುನಾಯಿಸಲು ಇಬ್ಬರಲ್ಲೂ ಒಂದೇ ಸಮವಾದ ವ್ಯವಹಾರವನ್ನು ತೋರಿಸಿ ನನ್ನ ಸಮಾನ ಬಲಶಾಲಿಗಳಾದ ನಾರಾಯಣೀ ಸೈನ್ಯವನ್ನು ಒಬ್ಬನು ಸ್ವೀಕರಿಸಲಿ; ಇನ್ನೊಬ್ಬನು ನನ್ನನ್ನು ಸ್ವೀಕರಿಸಲಿ.—

ಅಯುಧ್ಯಮಾನಃ ಸಂಗ್ರಾಮೇ ನ್ಯಸ್ತ ಶಸ್ತ್ರೋಽಹಮೇಕತಃ

ಈ ಪ್ರಕಾರ ಪ್ರತಿಜ್ಞೆ ಮಾಡಿದ್ದು. ಇದೇನೋ ಸುರಕ್ಷಿತವಾಗಿಯೇ ಇತ್ತು. ಭೀಷ್ಮ ಸಂಬಂಧವಾದ ಈ ಘಟನೆಯು ಸಾಧ್ಯಾನುಸಾರವಾಗಿ ಪರಾಙ್ಮುಖನಾದ ಅರ್ಜುನನನ್ನು ಯುದ್ಧಕ್ಕೆ ಪ್ರೇರಿಸಿ ಹುರಿಮಾಡುವ ಉದ್ದೇಶಕ್ಕಾಗಿ ಇತ್ತು. ಸಾರಥಿಗಳು ಹೀಗೆ ಮಾಡುತ್ತಿದ್ದರು. ಉದ್ದೇಶವು ಸಫಲವೂ ಆಯಿತು.

ಯುದ್ಧ ನಡೆಯುತ್ತಿರುವಾಗ ಒಂಬತ್ತನೆಯ ರಾತ್ರಿಯಲ್ಲಿಯೂ ಇದೇ ಅಭಿಪ್ರಾಯದಿಂದ ಕೃಷ್ಣನು ಹೇಳುತ್ತಿರುವನು. ಭೀಷ್ಮನು ಅಪರಾಜಿತನಾಗಿ ಇರುವುದನ್ನು ನೋಡಿ ಯುಧಿಷ್ಠಿರನು ಒಂಬತ್ತನೆಯ ರಾತ್ರಿಯಲ್ಲಿ ಬಂಧು ಬಾಂಧವರನ್ನು ಸೇರಿಸಿ ಭೀಷ್ಮನ ವಧೆಯ ವಿಷಯವನ್ನು ಕುರಿತು ಆಲೋಚಿಸಿದನು. ಆಗ ಕೃಷ್ಣನು "ನನಗೆ ಅನುಮತಿಯನ್ನು ಕೊಡಿ. ನಾನೇ ಭೀಷ್ಮನನ್ನು ಕೊಲ್ಲುವೆನು; ಅಥವಾ ಅರ್ಜುನನಮೇಲೆ ಈ ಭಾರವು ನಿಂತಿರಲಿ. ಅರ್ಜುನನು ಈ ಕೆಲಸದಲ್ಲಿ ಸಂಪೂರ್ಣ ಶಕ್ತನಾಗಿರುವನು" ಎಂದು ಹೇಳಿದನು.

ಯುಧಿಷ್ಠಿರನು ಈ ಮಾತಿಗೆ ಒಪ್ಪಲಿಲ್ಲ. ಇಚ್ಛೆಪಟ್ಟರೆ ಕೃಷ್ಣನು ಭೀಷ್ಮನನ್ನು ಕೊಲ್ಲಬಲ್ಲನೆಂದು ಅನುಮೋದಿಸಿದರೂ "ಆತ್ಮಗೌರವ ಕೋಸ್ಕರ ನಿನ್ನನ್ನು ಸುಳ್ಳುಗಾರನನ್ನಾಗಿ ಮಾಡಲೊಲ್ಲೆನು. ನೀನು ಅಯುಧ್ಯಮಾನನಾಗಿಯೇ ಸಹಾಯವನ್ನು ಮಾಡು" ಎಂದನು. ಯುಧಿಷ್ಠಿರನು ಅರ್ಜುನನ ವಿಷಯವಾಗಿ ಏನೂ ಹೇಳಲಿಲ್ಲ. ಆಮೇಲೆ ಪಾಂಡವರು ಕೃಷ್ಣನ ಸಮ್ಮತಿಯನ್ನು ಪಡೆದು ಅವನನ್ನು ಒಡಗೊಂಡು ಭೀಷ್ಮನಲ್ಲಿಗೆ ಅವನ ವಧೋಪಾಯವನ್ನು ತಿಳಿದುಕೊಂಡು ಬರುವುದ ಕೋಸ್ಕರ ಹೋದನು.

ಭೀಷ್ಮನು ತನ್ನ ವಧೋಪಾಯವನ್ನು ತಿಳುಹಿಸಿದನು. ಅದೇ ಪ್ರಕಾರ ನೋಟಕ್ಕೇನೋ ಕೆಲಸವೂ ನಡೆಯಿತು. ಆದರೆ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಕೃಷ್ಣನು ಹೇಳಿದ್ದಕ್ಕೇ ಬಂತು. ಅರ್ಜುನನೇ ಭೀಷ್ಮನನ್ನು ರಥದಿಂದ ಉರುಳಿಸಿ ಶರಶಯ್ಯೆಯಲ್ಲಿ ಮಲಗಿಸಿದನು. ಮೂಲ ಮಹಾಭಾರತದಮೇಲೆ ದ್ವಿತೀಯಸ್ತರದ ಕವಿ ತನ್ನ ಲೇಖಣಿ ಯನ್ನು ಚಲಾಯಿಸಿ ಅಸಂಬದ್ಧವಾದ, ನಿಷ್ಪ್ರಯೋಜನವಾದರೂ ಅಪಾತತಃ ಮನೋಹರವಾದ, ಶಿಖಂಡಿ ಸಂಬಂಧವಾದ ಕಥೆಯೊಂದನ್ನು ಕೂಡಿಸಿ ಇರುವನು. ಕೃಷ್ಣ ಚರಿತ್ರೆಗೆ ಇದರ ಸಂಬಂಧವೇನೂ ಇಲ್ಲ. ಆದುದರಿಂದ ನಾವು ಅದರ ಸಮಾಲೋಚನೆಗೆ ಕೈಹಾಕಿಲ್ಲ.

ದ್ವಿತೀಯ ಪರಿಚ್ಛೇದ

ಜಯದ್ರಥನ ವಧೆ

ಭೀಷ್ಮನಾದಮೇಲೆ ಸೇನಾಪತಿಯು ದ್ರೋಣ. ದ್ರೋಣಪರ್ವದ ಮೊದಲಿನಲ್ಲಿ ಕೃಷ್ಣನ ಯಾವ ಕೆಲಸವೂ ಕಂಡುಬರುವುದಿಲ್ಲ. ಅವನು ನಿಪುಣನಾದ ಸಾರಥಿಯಂತೆ ರಥವನ್ನು ಚಲಾಯಿಸುತ್ತಿರುವನು. ಕುರುಕ್ಷೇತ್ರ ಯುದ್ಧದಲ್ಲಿ ಇವನೇ ಕರ್ತನು ಮತ್ತು ನಾಯಕನು ಎಂಬ ಮಾತು ಸಲ್ಲದು. ಅಲ್ಲಲ್ಲಿ ಅರ್ಜುನ ಮತ್ತು ಯುಧಿಷ್ಠಿರರಿಗೆ ಸದುಪದೇಶ ವನ್ನು ಕೊಟ್ಟಿರುವುದು ಹೊರತು ಇನ್ನೇನೂ ಇಲ್ಲ. ದ್ರೋಣಾಭಿಷೇಕ

ಪರ್ವಾಧ್ಯಾಯದ ಹನ್ನೊಂದನೆಯ ಅಧ್ಯಾಯದಲ್ಲಿ ಸಂಜಯನಿಂದಾದ ಕೃಷ್ಣನ ಬಲ, ವೀರ್ಯ ಮತ್ತು ಮಹಿಮೆಯ ಕೀರ್ತನೆ ಮಾತ್ರ ಬಹು ಲಂಬಿಸಿದ ಬರಹದಲ್ಲಿದೆ. ಇದರಿಂದ ಪ್ರಯೋಜನವೇನೂ ಇಲ್ಲ. ಈ ಅಧ್ಯಾಯವು ಪ್ರಕ್ಷಿಪ್ತವಾಗಿ ಇರಬೇಕು. ಕೃಷ್ಣನ ಬಲ, ವೀರ್ಯ, ಮಹಿಮೆಗಳ ಕೀರ್ತನೆ ಇತರೆಡೆಗಳಲ್ಲಿ ಇದ್ದೇ ಇರುವುದು. ನಾವು ಅವನ ಮಾನವ ಚರಿತ್ರೆಯನ್ನು ಮಾತ್ರ ತಿಳಿಸಲುಳ್ಳವರು. ಮಾನವ ಚರಿತ್ರೆ ಕಾರ್ಯಗಳನ್ನು ತೋರಿಸತಕ್ಕದ್ದು. ಆದುದರಿಂದ, ಕೃಷ್ಣನಿಂದ ಮಾಡಲ್ಪಟ್ಟ ಕಾರ್ಯಗಳನ್ನೇ ಹುಡುಕೋಣ.

ದ್ರೋಣಪರ್ವದಲ್ಲಿ ಮೊದಲು ಭಗದತ್ತ ವಧೆಯಲ್ಲಿ ಕೃಷ್ಣನ ಕಾರ್ಯವೊಂದು ಕಂಡುಬರುವುದು. ಭಗದತ್ತನು ಮಹಾವೀರ. ಪಾಂಡವ ಪಕ್ಷದಲ್ಲಿ ಅವನೊಡನೆ ಮತ್ತಾರೂ ಯುದ್ಧಮಾಡಲಾರದೆ ಹೋದರು. ಕೊನೆಗೆ ಅರ್ಜುನನೇ ನಿಲ್ಲಲು ಭಗದತ್ತನು ಅವನಮೇಲೆ ವೈಷ್ಣವಾಸ್ತ್ರವನ್ನು ಬಿಟ್ಟನು. ಅರ್ಜುನನಾಗಲಿ, ಇನ್ನು ಇತರರಾಗಲಿ ಇದನ್ನು ನಿವಾರಿಸುವುದಕ್ಕೆ ಸಮರ್ಥರಾಗಿರಲಿಲ್ಲ. ಕೃಷ್ಣನೇ ಅರ್ಜುನನನ್ನು ಆಚ್ಛಾದಿಸಿ ನಿಂತು ತನ್ನ ವಕ್ಷದಲ್ಲಿ ಈ ಅಸ್ತ್ರವನ್ನು ಗ್ರಹಣಮಾಡಿದನು. ಅವನ ವಕ್ಷದಲ್ಲಿ ಅಸ್ತ್ರವು ವೈಜಯಂತಿ ಮಾಲೆಯಾಗಿ ಜೋಲುಬಿತ್ತು.

ಈ ಅಸ್ತ್ರವು ತಿಳಿಯಲಾಗದ ಅನೈಸರ್ಗಿಕ. ಅನೈಸರ್ಗಿಕವಾದದ್ದನ್ನು ನಂಬಬೇಕೆಂದು ನಮ್ಮ ಪಾಠಕರನ್ನು ಬಲವಂತಮಾಡುತ್ತಿಲ್ಲ. ಅನೈಸರ್ಗಿಕದಮೇಲೆ ಸತ್ಯವಾದುದನ್ನೂ ಸಂಸ್ಥಾಪಿಸುವುದಕ್ಕಾಗುವುದಿಲ್ಲ. ಆದುದರಿಂದ ಇದನ್ನು ನಾವು ಬಿಟ್ಟುಬಿಡಲೇ ಬೇಕು.

ದ್ರೋಣಪರ್ವದಲ್ಲಿ ಅಭಿಮನ್ಯುವಿನ ವಧೆಯಾದಮೇಲೆ ಕರ್ಮಕ್ಷೇತ್ರದಲ್ಲಿ ಕೃಷ್ಣನು ಬಂದಿರುವುದು ಕಾಣುವುದು. ಏಳುಮಂದಿ ರಥಿಕರು ಸುತ್ತುಗಟ್ಟಿ ಅನ್ಯಾಯವಾಗಿ ಅಭಿಮನ್ಯುವನ್ನು ಕೊಂದುಹಾಕಿದ ದಿವಸ ಕೃಷ್ಣಾರ್ಜುನರು ಆ ರಣಕ್ಷೇತ್ರದಲ್ಲಿ ಇರಲಿಲ್ಲ. ಅವರು ನಾರಾಯಣೀ ಸೇನೆಯಮೇಲೆ ಯುದ್ಧಮಾಡುತ್ತಿದ್ದರು. ಈ ಸೈನ್ಯವನ್ನು ಕೃಷ್ಣನೇ ದುರ್ಯೋಧನನಿಗೆ ಕೊಟ್ಟಿದ್ದನು. ಒಂದೆಡೆ ತಾನೇ. ಎದುರೆಡೆ ತನ್ನದೇ ಸೈನ್ಯ. ಹೀಗೆ ಎರಡು ಪಕ್ಷಕ್ಕೂ ತಾನು ಸಮತೆಯನ್ನು

ಸಾಧಿಸಿಕೊಂಡಿದ್ದನು. ಯುದ್ಧ ಮುಗಿದಮೇಲೆ ಸಾಯಂಕಾಲ ಶಿಬಿರಕ್ಕೆ ಬರಲು ಕೃಷ್ಣಾರ್ಜುನರು ಅಭಿಮನ್ಯು ವಧೆಯನ್ನು ಕೇಳಿದರು. ಅರ್ಜುನನು ಬಹಳವಾದ ದುಃಖದಿಂದ ಕಾತರನಾದನು. ಯೋಗೀಶ್ವರನಾದ ಕೃಷ್ಣನು ಶೋಕ ಮೋಹಗಳಿಗೆ ಮೀರಿದವನಾದರೂ ಅರ್ಜುನನನ್ನು ಸಮದಾಯಿಸುವುದು ಅವನಿಗೆ ಮೊದಲನೆಯ ಕಾರ್ಯ. ಅವನು ಆವ ಮಾತುಗಳನ್ನು ಹೇಳಿ ಎಚ್ಚರಗೊಳಿಸಿದನೋ ಅವು ಅವನಿಗೇ ಸಲ್ಲತಕ್ಕವು. ಗೀತೆಯಲ್ಲಿ ಅವನು ಪ್ರಚಾರಿಸಿರುವ ಧರ್ಮಾನುಮೋದಿತವಾದ ಮಹಾ ವಾಕ್ಯಗಳಿಂದ ಅರ್ಜುನನ ಶೋಕವನ್ನು ತೊಡೆದನು. ಋಷಿಗಳು "ಎಲ್ಲರೂ ಸತ್ತಿರುವರು, ಎಲ್ಲರೂ ಸಾಯಲೇಬೇಕು" ಎಂದು ಯುಧಿಷ್ಠಿರನನ್ನು ಎಚ್ಚರಿಸುತ್ತಿದ್ದರು. ಕೃಷ್ಣನು ಹಾಗೆ ಹೇಳಲಿಲ್ಲ. "ಯುದ್ಧೋಪಜೀವಿಗಳಾದ ಕ್ಷತ್ರಿಯರಿಗೆ ಇದೇ ದಾರಿ. **ಯುದ್ಧಮೃತ್ಯುವೇ ಕ್ಷತ್ರಿಯರಿಗೆ ಸನಾತನ ಧರ್ಮ"** ಎಂದು ತಿಳಿಸಿದನು.

ಕೃಷ್ಣನು ಅಭಿಮನ್ಯುವಿನ ತಾಯಿಯಾದ ಸುಭದ್ರೆಗೂ ಇದೇ ಮಾತನ್ನು ತಿಳಿಸಿ ಸಮದಾಯಿಸಿದನು:

"ಸತ್ಕುಲ ಪ್ರಸೂತನಾದ ಧೈರ್ಯಶಾಲಿಯಾದ ಕ್ಷತ್ರಿಯನಿಗೆ ಉಚಿತವಾದಂತೆಯೇ ನಿನ್ನ ಪುತ್ರನು ಪ್ರಾಣವನ್ನು ಬಿಟ್ಟಿರುವನು. ಆದುದರಿಂದ ದುಃಖಪಡುವುದಕ್ಕೆ ಕಾರಣವಿಲ್ಲ. ಮಹಾರಥನೂ, ಧೀರನೂ, ತಂದೆಗೆ ಸಮಾನ ಬಲವುಳ್ಳವನೂ ಆದ ಅಭಿಮನ್ಯು ಭಾಗ್ಯವಶದಿಂದ ವೀರರು ಆಶೆಪಡುವ ಗತಿಯನ್ನೇ ಪಡೆದುಕೊಂಡು ಇರುವನು. ಮಹಾವೀರನಾದ ಅಭಿಮನ್ಯು ಶತ್ರುಗಳನ್ನು ಭೂರಿ ಭೂರಿಯಾಗಿ ಸಂಹರಿಸಿ ಪುಣ್ಯಜನಿತವಾದ, ಸರ್ವಕಾಮಪ್ರದವಾದ, ಅಕ್ಷಯವಾದ ಲೋಕಕ್ಕೆ ಹೋಗಿದ್ದಾನೆ. ಸಾಧುಗಳು ತಪಸ್ಸಿನಿಂದಲೂ ಬ್ರಹ್ಮಚರ್ಯಾದಿಗಳಿಂದಲೂ ಶಾಸ್ತ್ರ ಮತ್ತು ಜ್ಞಾನದಿಂದಲೂ ಅಭಿಲಾಷಿಸುವಂತಹ ಗತಿ ನಿನ್ನ ಕುಮಾರನಿಗೆ ಲಭಿಸಿರುವುದು. ಎಲೌ ಸುಭದ್ರೆ! ನೀನೇ ವೀರಜನನಿ, ವೀರಪತ್ನಿ, ವೀರನಂದಿನಿ ಮತ್ತು ವೀರಬಾಂಧವೆ. ಆದುದರಿಂದ ನೀನು ತನಯನ ನಿಮಿತ್ತವಾಗಿ ಶೋಕಾಕುಲಳಾಗುವುದುಚಿತವಲ್ಲ."

ಈ ಮಾತುಗಳಿಂದ ತಾಯಿಯ ಶೋಕವು ನಿವಾರಣೆಯಾಗದು; ಆದರೂ ಈ ಪಾಪಿಷ್ಠ ದೇಶದಲ್ಲಿ ಇಂತಹ ಮಾತುಗಳನ್ನು ಹೇಳುವುದಕ್ಕೂ ಕೇಳುವುದಕ್ಕೂ ಆಶೆ ಬಾಧಿಸುವುದು.

ಇತ್ತಕಡೆ ಪುತ್ರಶೋಕದಿಂದ ಆರ್ತನಾದ ಅರ್ಜುನನು ಅತಿಶಯವಾದ ರೋಷಕ್ಕೆ ಸಿಲುಕಿ ತನ್ನನ್ನು ಕಡುಕಷ್ಟವಾದ ಪ್ರತಿಜ್ಞೆಯಿಂದ ಬಂಧಿಸಿಕೊಂಡನು. ತಾನು ಕೇಳಿದ ವರ್ತಮಾನದಿಂದ ಅಭಿಮನ್ಯುವಿನ ಮೃತ್ಯುವಿಗೆ ಜಯದ್ರಥನೇ ಮೂಲಕಾರಣನೆಂದು ತಿಳಿದಮೇಲೆ ಮರುದಿನ ಸೂರ್ಯಾಸ್ತವಾಗುವುದರೊಳಗೆ ಇವನನ್ನು ಕೊಲ್ಲುವೆನೆಂದು ಶಪಥ ಮಾಡಿದನು. ಹಾಗೆ ಕೊಲ್ಲದೇಹೋದರೆ ಅಗ್ನಿಪ್ರವೇಶನನ್ನು ಮಾಡಿ ಪ್ರಾಣ ಬಿಡುವೆನೆಂದು ಪ್ರತಿಜ್ಞೆ ಮಾಡಿದನು.

ಈ ಪ್ರತಿಜ್ಞೆಯಿಂದ ಉಭಯ ಬಿಡಾರಗಳಲ್ಲಿಯೂ ಬಹಳ ಗಲಭೆಗೆ ಮೊದಲಾಯಿತು. ಪಾಂಡವ ಸೈನ್ಯ ಸಿಂಹನಾದಗಳನ್ನು ಮಾಡಿ ಭಯಂಕರವಾದ ಭೇರಿ ತಮ್ಮಟೆಗಳ ಗರ್ಜನೆಯಿಂದ ದಿಕ್ಕುಗಳನ್ನು ತುಂಬಿತು. ಕೌರವರು ಇದರಿಂದ ಬೆಚ್ಚಿಬಿದ್ದವರಾಗಿ, ವಿಚಾರದಿಂದ ಅರ್ಜುನನ ಪ್ರತಿಜ್ಞೆಯನ್ನು ಅರಿತು, ಜಯದ್ರಥನ ಸಂರಕ್ಷಣಾರ್ಥವಾಗಿ ಮಂತ್ರಾಲೋಚನೆಯನ್ನು ಮಾಡಿದರು.

ಹೀಗೆ ವಿಷಮವ್ಯಾಪಾರವೊಂದುಂಟಾದುದನ್ನು ಕೃಷ್ಣನು ನೋಡಿ ಇದರಿಂದ ತಪ್ಪಿಸಿಕೊಳ್ಳುವುದು ಸುಲಭಸಾಧ್ಯವಲ್ಲವೆಂದುಕೊಂಡನು. ಜಯದ್ರಥನು ಮಹಾರಥಿಯೂ, ಸಿಂಧೂ ಸೌವೀರ ದೇಶಗಳ ಅಧಿಪತಿಯೂ, ಬಹುಸೇನೆಗಳ ನಾಯಕನೂ, ದುರ್ಯೋಧನನ ತಂಗಿಯ ಗಂಡನೂ ಆದುದರಿಂದ ಕೌರವಪಕ್ಷದ ಜಯಿಸಲಸಾಧ್ಯರಾದ ಯೋಧಪ್ರಮುಖರು ಅವನನ್ನು ಸಾಧ್ಯಾನುಸಾರವಾಗಿ ರಕ್ಷಿಸುವರು. ಇತ್ತಕಡೆಯಲ್ಲಿ ಪಾಂಡವ ಪಕ್ಷದಲ್ಲಿನ ಮುಖಂಡರೆಲ್ಲರೂ ಅಭಿಮನ್ಯುವಿನ ಶೋಕದಿಂದ ವಿಹ್ವಲರಾಗಿ ಮಂತ್ರಾಲೋಚನೆಗೆ ವಿಮುಖರಾಗಿರುವರು ಆದುದರಿಂದ ಕೃಷ್ಣನು ತಾನೇ ನೇತೃತ್ವವನ್ನು ವಹಿಸಿ ಕರ್ಮದಲ್ಲಿ ಪ್ರವೃತ್ತನಾದನು. ಅವನು ಕೌರವ ಶಿಬಿರಕ್ಕೆ ಗೂಢಚಾರರನ್ನು ಕಳುಹಿಸಿ ಅಲ್ಲಿನ ವೃತ್ತಾಂತವನ್ನೆಲ್ಲ ತಿಳಿದನು. ಕೌರವರಿಗೆ ಪ್ರತಿಜ್ಞೆ ತಿಳಿದಿರುವುದು. ದ್ರೋಣಾಚಾರ್ಯನು ವ್ಯೂಹವನ್ನು ರಚಿಸುವನು. ಅದರ ಹಿಂದುಗಡೆ ಕರ್ಣನೇ ಮೊದಲಾದ ಏಳುಮಂದಿ ಕೌರವಪಕ್ಷ ಪ್ರಮುಖರು ಜಯದ್ರಥನನ್ನು ಕಾಪಾಡುವರು. ಈ ದುರ್ಭೇದ್ಯವಾದ ವ್ಯೂಹವನ್ನು ಒಡೆದು ವೀರರೆಲ್ಲರನ್ನೂ ಒಟ್ಟಿಗೆ ಜಯಿಸಿ ಮಹಾ

ವೀರನಾದ ಜಯದ್ರಥನನ್ನು ಕೊಲ್ಲುವುದು ಅರ್ಜುನನಿಗೆ ಕೂಡಾ ಅಸಾಧ್ಯವಾಗಬಹುದು. ಸಾಧ್ಯವಾಗದಿದ್ದಲ್ಲಿ ಅರ್ಜುನನು ನಿಜವಾಗಿಯೂ ಆತ್ಮಹತ್ಯವನ್ನು ಮಾಡಿಕೊಳ್ಳುವನು.

ಆದುದರಿಂದ ನಾನೇನು ಮಾಡತಕ್ಕದ್ದೆಂದು ಕೃಷ್ಣನು ಬಹು ಚಿಂತಿಸಿ ತನ್ನ ಸ್ವಂತ ಸಾರಥಿಯಾದ ದಾರುಕನನ್ನು ಕರೆದು ತನ್ನ ರಥಕ್ಕೆ ಉತ್ತಮವಾದ ಕುದುರೆಗಳನ್ನು ಕಟ್ಟಿಸಿ ಅಸ್ತ್ರ ಶಸ್ತ್ರಗಳನ್ನು ರಥದಲ್ಲಿ ತುಂಬಿ ಮರುದಿನದ ಬೆಳಗಿಗೆ ಸಜ್ಜು ಮಾಡಿ ಇರುವಂತೆ ಕಟ್ಟುಮಾಡಿದನು. ಅರ್ಜುನನು ಒಂದುವೇಳೆ ವ್ಯೂಹವನ್ನು ಮೆಟ್ಟಿ ಸಕಲ ವೀರರನ್ನೂ ಸೋಲಿಸದಿದ್ದರೆ ತಾನೇ ಯುದ್ಧಮಾಡಿ ಕೌರವನಾಯಕರನ್ನು ವಧಿಸಿ, ಜಯದ್ರಥನ ವಧೆಗೆ ದಾರಿಯನ್ನು ಬಿಡಿಸಬೇಕೆಂಬುದು ಇವನ ಉದ್ದೇಶ.

ಕೃಷ್ಣನು ಯುದ್ಧಮಾಡಬೇಕಾಗಿ ಬರಲಿಲ್ಲ. ಅರ್ಜುನನು ಸ್ವಂತ ಬಾಹುಬಲದಿಂದಲೇ ಕೃತಕಾರ್ಯನಾದನು. ಆದರೆ ಕೃಷ್ಣನು ಯುದ್ಧ ಮಾಡಬೇಕಾಗಿದ್ದರೆ—"ಅಯುಧ್ಯಮಾನೇ ಸಂಗ್ರಾಮೇ ನ್ಯಸ್ತಶಸ್ತ್ರೋಽಹಮೇಕತಃ" ಎಂಬ ಮಾತಿಗೆ ವಿರೋಧವೇನೂ ಆಗುತ್ತಿರಲಿಲ್ಲ. ಏಕೆಂದರೆ ಕುರು ಪಾಂಡವರ ರಾಜ್ಯಕ್ಕೋಸ್ಕರ ಮಾಡುತಲಿದ್ದ ಯುದ್ಧದ ವಿಷಯದಲ್ಲೇನೋ ಮೇಲಿನ ಪ್ರತಿಜ್ಞೆ ಆಯಿತು. ಈ ದಿನದ ಯುದ್ಧ ಅದಲ್ಲ. ಅರ್ಜುನನ ಪ್ರತಿಜ್ಞೆಯಿಂದುಂಟಾದ ಯುದ್ಧ. ಈ ಯುದ್ಧದ ಉದ್ದೇಶವೇ ಬೇರೆ. ಒಂದು ಕಡೆ ಜಯದ್ರಥ, ಇನ್ನೊಂದು ಕಡೆ ಅರ್ಜುನ; ಹೀಗೆ ಇವರಿಬ್ಬರ ಜೀವನವನ್ನು ಕುರಿತು ಯುದ್ಧ. ಯುದ್ಧದಲ್ಲಿ ಅರ್ಜುನನು ಸೋತರೆ ಅಗ್ನಿಪ್ರವೇಶದಿಂದ ಆತ್ಮಹತ್ಯವನ್ನು ಮಾಡಿಕೊಳ್ಳಬೇಕು ಈ ಯುದ್ಧ ಮೊದಲು ಗೊತ್ತಾಗಿ ಇದ್ದದ್ದಲ್ಲ. "ಅಯುಧ್ಯಮಾನೇ ಸಂಗ್ರಾಮೇ" ಎಂಬ ವಚನ ಇಲ್ಲಿಗೆ ಖಂಡಿತವಾಗಿಯೂ ಅನ್ವಯಿಸುವುದಿಲ್ಲ. ಅರ್ಜುನನು ಕೃಷ್ಣನ ಸಖ, ಶಿಷ್ಯ ಮತ್ತು ಭಾವಮೈದುನ. ಅವನ ಆತ್ಮಹತ್ಯವನ್ನು ತಪ್ಪಿಸತಕ್ಕದ್ದು ಕೃಷ್ಣನ ಕರ್ತವ್ಯ.

ಇದಾದಮೇಲೆ ಕೃಷ್ಣನೂ ಮತ್ತು ಇತರರೂ ನಿದ್ರೆಗೈದರು. ಇಲ್ಲಿ ಒಂದು ಬಗೆಯ ವಿಚಿತ್ರವಾದ ಸ್ವಪ್ನದ ವರ್ಣನೆಯಿರುವುದು. ಸ್ವಪ್ನದಲ್ಲಿ ಕೃಷ್ಣನು ಮತ್ತೆ ಅರ್ಜುನನಲ್ಲಿಗೆ ಬಂದು ಇಬ್ಬರೂ ಸೇರಿ ರಾತ್ರಿ

ಹಿಮಾಲಯಕ್ಕೆ ಹೋಗಿ ಮಹಾದೇವನನ್ನು ಪೂಜಿಸಿ ಪಾಶುಪತಾಸ್ತ್ರವನ್ನು (ವನವಾಸದಲ್ಲಿದ್ದಾಗ ಅರ್ಜುನನು ಈ ಅಸ್ತ್ರವನ್ನು ಪಡೆದುಕೊಂಡಿದ್ದರೂ ಮತ್ತೆ ಬೇಡಿ) ಪಡೆದುಕೊಂಡನು..................ಇತ್ಯಾದಿ. ಇವೆಲ್ಲಾ ಸಮಾಲೋಚನೆಗೆ ಅರ್ಹವಲ್ಲ.

ಮರುದಿವಸ ಸೂರ್ಯಾಸ್ತಕ್ಕೆ ಮುಂಚೆಯೇ ಅರ್ಜುನನು ಜಯದ್ರಥನನ್ನು ಕೆಡಹಿದನು. ಇದಕ್ಕಾಗಿ ಕೃಷ್ಣನ ಸಹಾಯವಾವುದೂ ಬೇಕಾಗಲಿಲ್ಲ. ಹೀಗಿದ್ದರೂ ಕೃಷ್ಣನು ಅಪರಾಹ್ನದಲ್ಲಿ ಯೋಗಮಾಯೆಯಿಂದ ಸೂರ್ಯನನ್ನು ಮುಚ್ಚಿದನೆಂತಲೂ, ಜಯದ್ರಥನು ಬಿದ್ದಮೇಲೆ ಪುನಃ ಸೂರ್ಯನನ್ನು ಮುಚ್ಚುಮರೆಯಿಂದ ಬಿಡಿಸಿ ಪ್ರಕಾಶಗೊಳಿಸಿದನೆಂತಲೂ ಹೇಳಿ ಇದೆ. ಏಕೆಂದರೆ ಸೂರ್ಯಾಸ್ತವಾಯಿತೆಂದು ಭ್ರಮೆಗೊಂಡು ಅರ್ಜುನನ ಮುಂದುಗಡೆ ಜಯದ್ರಥನು ಬರುವನು ಎಂದೋ, ಇಂತಹ ಭ್ರಾಂತಿಗೆ ಬಿದ್ದು ಜಯದ್ರಥನೂ ಅವನ ರಕ್ಷಕರೂ ಉಲ್ಲಾಸವೇರಿ ಕಟ್ಟುಸಡಲುವುದು ಎಂದೋ ಇಲ್ಲಿ ಕಾವ್ಯದ ಒಂದು ಸ್ತರದಮೇಲೆ ಮತ್ತೊಂದು ಸ್ತರವು ಬೆರತಿರುವುದು ಸ್ಪಷ್ಟವಾಗಿ ಕಂಡುಬರುವುದು. ಇಂತಹ ಭ್ರಾಂತಿಯನ್ನುಂಟುಮಾಡುವುದರಿಂದಾವ ಪ್ರಯೋಜನವೂ ಇರಲಿಲ್ಲವೆಂಬುದು ಒಂದುಕಡೆಯಿಂದ ಕಂಡುಬರುವುದು. ಯೋಗಮಾಯೆಯ ವಿಕಾಸಕ್ಕೆ ಮುಂಚೆಯೇ ಜಯದ್ರಥನು ಅರ್ಜುನನನ್ನು ಪ್ರಹರಿಸುತಲೂ ಇದ್ದು, ಸೂರ್ಯನ ಆಚ್ಛಾದನೆಯ ಅನಂತರವೂ ಹೊಡೆದಾಡಿ ಮಡಿಯಲು ಮಧ್ಯೆ ಸೂರ್ಯಾಚ್ಛಾದನೆಯು ಅವಶ್ಯವಿಲ್ಲ. ಸಮಸ್ತ ಕೌರವ ವೀರರನ್ನೂ ಸೋಲಿಸದೆ ಅರ್ಜುನನು ಜಯದ್ರಥನನ್ನು ಕೊಲ್ಲುವುದಕ್ಕಾಗಲಿಲ್ಲ. ಇನ್ನೊಂದುಕಡೆ ಈ ಮೇಲಿನ ಮಾತುಗಳಿಗೆ ವ್ಯತಿರೇಕವಾದ ಸೂರ್ಯಾವರಣಕಾರಿಯಾದ ಯೋಗಮಾಯೆಯ ವಿಕಾಸ. ಈ ಭ್ರಾಂತಿಸೃಷ್ಟಿಗೆ ಪ್ರಯೋಜನವನ್ನು ಮುಂದಿನ ಪರಿಚ್ಛೇದದಲ್ಲರುಹುವೆವು.

ತೃತೀಯ ಪರಿಚ್ಛೇದ

ಎರಡನೆಯ ಸ್ತರದ ಕವಿ

ನಾವು ಇದುವರೆಗೂ ನೇರವಾದ ದಾರಿಯಲ್ಲಿ ಅನುಕೂಲವಾಗಿ ನಡೆದು ಬಂದೆವು. ಇನ್ನುಮುಂದೆ ಘೋರವಾದ ಗಲಭೆ. ಮಹಾಭಾರತ ಸಮುದ್ರ ದಲ್ಲಿ ಈವರೆಗೂ ನಾವು ಸ್ಥಿರವಾದ ವಾರಿರಾಶಿಯಮೇಲೆ ಮಧುರ ಮೃದು ಗಂಭೀರ ಶಬ್ದವನ್ನು ಕೇಳುತ್ತ ಸುಖವಾಗಿ ಹಡಗಿನ ಯಾತ್ರೆಯನ್ನು ಮಾಡಿದೆವು ಈಗ ಥಟ್ಟನೆ ಭಯಂಕರವಾದ ಬಿರುಗಾಳಿಗೆ ಸಿಲುಕಿಕೊಂಡು ಅಲೆಗಳ ಹೊಡೆತದಿಂದ ಬಾರಿ ಬಾರಿಗೂ ಮುಳುಗಿ ಎದ್ದು ತೊಂದರೆಪಡಬೇಕು. ಇಲ್ಲಿ ನಾವು ಮಹಾಭಾರತದ ಎರಡನೆಯ ಸ್ತರದ ಕವಿಯ ಕೈಗೆ ಸಿಲುಕಿರುವೆವು. ಇವನ ಕೈಯಲ್ಲಿ ಕೃಷ್ಣಚರಿತ್ರೆಯು ಸಂಪೂರ್ಣವಾಗಿ ಬದಲಾಗಿರುವುದು. ಯಾವುದು. ಉದಾರವೋ ಅದು ಈಗ ಕ್ಷುದ್ರವೂ ಇಕ್ಕಟ್ಟಾದದ್ದೂ ಆಗಿರುವುದು. ಸರಳವಾವುದೋ ಅದು ಕೌಶಲಮಯವಾಗಿರುವುದು. ಸತ್ಯಮಯವಾದುದು ಅಸತ್ಯವೂ ಮರುಳುಮಾಡತಕ್ಕುದೂ ಆಗಿರುವುದು. ಯಾವುದು ನ್ಯಾಯವೂ ಧರ್ಮಬದ್ಧವೂ ಆದುದೋ, ಅದು ಈಗ ಅಧರ್ಮದಿಂದ ಕಳಂಕಿತವಾಗಿರುವುದು. ಈ ಎರಡನೆಯ ಸ್ತರದ ಕವಿಯ ಕೈಯಿಂದ ಚರಿತ್ರೆ ಹೀಗೆ ವಿಕಾರವಾಗಿದೆ.

ಹೀಗಾಗುವುದಕ್ಕೆ ಕಾರಣವೇನು? ಎರಡನೆಯ ಸ್ತರದ ಕವಿ ಅಂತಹ ಕ್ಷುದ್ರನೇನೂ ಅಲ್ಲ. ಅವನ ಸೃಷ್ಟಿ ಕೌಶಲವು ಜಾಜ್ವಲ್ಯಮಾನವಾಗಿರುವುದು. ಅವನು ಧರ್ಮಾಧರ್ಮಜ್ಞಾನಶೂನ್ಯನೂ ಅಲ್ಲ. ಆದರೆ ಕೃಷ್ಣನಿಗೆ ಇಂತಹ ದಶೆಯನ್ನು ತಂದಿರುವನೇಕೆ! ಇದಕ್ಕೆ ಅತಿ ಗಹನವಾದ ತಾತ್ಪರ್ಯವಿರುವುದು.

ಪ್ರಥಮ ಸ್ತರದ ಕವಿಯ ಕೈಯಲ್ಲಿ ಕೃಷ್ಣನು ಈಶ್ವರಾವತಾರನೆಂದು ಪರಿಸ್ಫುಟವಾಗಿಲ್ಲದ್ದನ್ನು ನಾವು ಬಾರಿ ಬಾರಿಗೂ ನೋಡಿರುವೆವು. ಅವನು ಈ ಮಾತನ್ನು ಕೂಡಾ ಬಾಯಿಬಿಟ್ಟು ಆಡಿಲ್ಲ. ಪುನಃ ಪುನಃ ತನ್ನ ಮನುಷ್ಯ ಪ್ರಕೃತಿಯನ್ನೇ ಹೇಳಿ ತೋರಿಸಿ ಇರುವನು. ಮತ್ತು ಮನುಷ್ಯ ಶಕ್ತಿಯಿಂದಲೇ ಕೆಲಸಗಳನ್ನೂ ಮಾಡಿರುವನು. ಕವಿ ಕೂಡಾ ಇದೇ

ಭಾವದಲ್ಲಿಯೇ ಅವನನ್ನು ಸ್ಥಾಪಿಸಿ ಇರುವನು. ಮೊದಲನೆಯ ಸ್ತರದ ಕವಿತೆ ಆದಾಗ ಕೃಷ್ಣನು ಈಶ್ವರಾವತಾರನೆಂದು ಸಮಸ್ತರಿಂದಲೂ ಸ್ವೀಕೃತನಾಗಿರಲಾರನೆಂಬ ಸಂಶಯ ಉಂಟಾಗುವುದು. ಅಲ್ಲದೆ ಕವಿಯ ಮನಸ್ಸು ಇದೇ ಭಾವದಲ್ಲಿ ಸಕಲ ಸಮಯಗಳಲ್ಲಿಯೂ ವಿರಾಜಮಾನವಲ್ಲ. ಮುಖ್ಯವಾಗಿ ಮಹಾಭಾರತದ ಪ್ರಥಮ ಸ್ತರವು ಬಹು ಪೂರ್ವಕಾಲದ ಲೋಕವಾರ್ತೆಗಳನ್ನು ಸಂಗ್ರಹಿಸಿದ್ದು. ಮತ್ತು ಕವಿಯ ಮೂಲಕ ಈ ಲೋಕವಾರ್ತೆಗಳೇ ಕಾವ್ಯಾಲಂಕಾರದಿಂದ ರಂಜಿತವಾಗಿ ಒಂದೇ ಕಥೆಯ ಸೂತ್ರದಲ್ಲಿ ಬಿಗಿಯಲ್ಪಟ್ಟದ್ದು, ಮಹಾಭಾರತದಲ್ಲಿ ದ್ವಿತೀಯ ಸ್ತರವು ಪ್ರವೇಶಿಸಿದಾಗ ಕೃಷ್ಣನ ಈಶ್ವರತ್ವವು ಸರ್ವತ್ರ ಸ್ವೀಕೃತವಾಗಿದ್ದಿತು. ಆದುದರಿಂದ ದ್ವಿತಿಯ ಸ್ತರದ ಕವಿ ಅವನನ್ನು ಈಶ್ವರಾವತಾರಿಯನ್ನಾಗಿಯೇ ಇಡಲು ಯತ್ನಿಸಿರುವನು. ಅವನ ರಚನೆಯಲ್ಲಿ ಕೃಷ್ಣನು ಕೂಡ ಅನೇಕವೇಳೆ ತನ್ನ ಈಶ್ವರತ್ವದ ಪರಿಚಯನ್ನು ಕೊಟ್ಟಿರುವನಲ್ಲದೆ ಐಶೀಶಕ್ತಿಯ ಮೂಲಕ ವಾಗಿಯೇ ಕಾರ್ಯಗಳನ್ನೂ ನಡೆಯಿಸಿರುವನು. ಆದರೆ ಈಶ್ವರನು ಪುಣ್ಯ ಮಯನು. ಕವಿ ಅದನ್ನು ಬಲ್ಲನು. ಆದರೂ ಗೂಢತತ್ವವೊಂದನ್ನು ಪರಿಸ್ಫುಟವಾಗಿ ತಿಳಿಸಲು ಆತುರಪಟ್ಟಿರುವನು. ಯೂರೋಪಿಯನರು ಕೂಡಾ ಅದೇ ತತ್ತ್ವವನ್ನು ಹಿಡಿದು ವಿಶೇಷವಾಗಿ ಪಟ್ಟಾಡಿರುವರು. ಅವರು ಹೇಳುವುದೇನೆಂದರೆ—"ಭಗವಂತನು ದಯಾಮಯನು. ಕರುಣೆಯಿಂದಲೇ ಜೀವಸೃಷ್ಟಿಯನ್ನು ಮಾಡಿರುವನು. ಜೀವರ ಮಂಗಳವನ್ನೇ ಅವನು ಸದಾ ಕೋರುತ್ತಿರುವನು." ಹೀಗಾದರೆ ಪೃಥ್ವಿಯಲ್ಲಿ ದುಃಖವೇಕೆ? ಪುಣ್ಯಮಯ ನಾದ ದೇವರು ಪುಣ್ಯಾಕಾಂಕ್ಷಿಯಾಗಿರಲು ಪಾಪವು ಪೃಥ್ವಿಗೆ ಎಲ್ಲಿಂದ ಇಳಿಯಿತು? ಕ್ರಿಶ್ಚಿಯನ್ನರ ವಿಷಯದಲ್ಲಿ ಈ ತತ್ತ್ವದ ಮೀಮಾಂಸೆ ಬಹು ಕಠಿನವಾಗಿರುವುದು. ಹಿಂದೂಗಳ ಪಕ್ಷದಲ್ಲಿ ಇದು ಸುಲಭ. ಈಶ್ವರನೇ ಜಗತ್ತೆಂದು ಇವರು ನಂಬಿರುವರು. ಅವನು ಸುಖದುಃಖಗಳಿಗೆ ಅತೀತನು. ನಾವು ಸುಖದುಃಖಗಳು ಪಾಪ ಪುಣ್ಯಗಳು ಎಂದು ಹೇಳತಕ್ಕವು ಭಗವಂತನ ಎಣಿಕೆಗೆ ಅಲ್ಲ. ಅವನು ಲೀಲೆಗಾಗಿ ಈ ಜಗತ್ತನ್ನು ಸೃಷ್ಟಿಸಿ ಇರುವನು. ಜಗತ್ತು ಅವನಿಂದ ಬೇರೆ ಇಲ್ಲ; ಅವನ ಅಂಶವೇ. ಅವನು ತನ್ನ ಸತ್ವತ್ತಕ್ಕೆ ಅವಿದ್ಯೆಯ ಆವರಣವನ್ನಿಡಲು ಅದು ಸುಖದುಃಖಗಳಿಗೂ ಪಾಪಪುಣ್ಯಗಳಿಗೂ

ಆಧಾರವಾಗಿ ಪರಿಣಮಿಸಿ ಇದೆ. ಆದುದರಿಂದ ಪಾಪ ಪುಣ್ಯಗಳೂ ಸುಖ ದುಃಖಗಳೂ ಅವನ ಮಾಯೆಯಿಂದಲೇ ಹುಟ್ಟಿದವು. ನಾವು ಪಡುವ ದುಃಖವೂ ಅವನ ಮಾಯೆ. ಪಾಪವೂ ಅವನ ಮಾಯೆ. ವಿಷ್ಣುಪುರಾಣ ದಲ್ಲಿ ಕೃಷ್ಣನಿಂದ ಪೀಡಿತವಾದ ಸರ್ಪರಾಜ ಕಾಳಿಂಗನ ಬಾಯಲ್ಲಿ ಕವಿ ಈ ಮಾತನ್ನು ಇಟ್ಟಿದ್ದಾನೆ—

ಯಥಾಹಂ ಭವತಾ ಸೃಷ್ಟೋ ಜಾತ್ಯಾ ರೂಪೇಣ ಚೇಶ್ವರ ।
ಸ್ವಭಾವೇನ ಚ ಸಂಯುಕ್ತಸ್ತಥೇದಂ ಚೇಷ್ಟಿತಂ ಮಮ ॥

ಎಂದರೆ, ನೀನು ನನ್ನನ್ನು ಸರ್ಪಜಾತಿಯಲ್ಲಿ ಸೃಷ್ಟಿಸಿದೆ. ಆದುದರಿಂದ ನಾನು ಹಿಂಸೆಯನ್ನು ಮಾಡುತಲಿದ್ದೇನೆ.

ಪ್ರಹ್ಲಾದನು ವಿಷ್ಣುವನ್ನು ಸ್ತೋತ್ರ ಮಾಡುವಾಗ್ಗೆ—

ವಿದ್ಯಾವಿದ್ಯೇ ಭವಾನ್ ಸತ್ಯಮಸತ್ಯಂ ತ್ವಂ ವಿಷಾಮೃತೇ ॥

ವಿಷ್ಣುಪುರಾಣ, ೧ನೆಯ ಮ. ಅ. ೧೯

"ನೀನೇ ವಿದ್ಯೆಯು ನೀನೇ ಅವಿದ್ಯೆಯು, ನೀನೇ ಸತ್ಯವು ನೀನೇ ಅಸತ್ಯವು, ವಿಷವೂ ಅಮೃತವೂ ನೀನೇ." ಅವನ ವಿನಾ ಜಗತ್ತಿನಲ್ಲಿ ಬೇರೆ ಇಲ್ಲ. ಧರ್ಮ ಅಧರ್ಮ, ಜ್ಞಾನ ಅಜ್ಞಾನ, ಸತ್ಯ ಅಸತ್ಯ, ನ್ಯಾಯ ಅನ್ಯಾಯ, ಬುದ್ಧಿ ದುರ್ಬುದ್ಧಿ ಸಮಸ್ತವೂ ಅವನಿಂದಲೇ.

ಅವನೇ ಗೀತೆಯಲ್ಲಿ ಹೀಗೆ ಹೇಳಿದ್ದಾನೆ.—

ಯೇ ಚೈವ ಸಾತ್ತ್ವಿಕಾಭಾವಾ ರಾಜಸಾಸ್ತಾಮಸಾಶ್ಚ ಯೇ ॥
ಮತ್ತ ಏವೇತಿ ತಾನ್ ವಿದ್ಧಿ ನ ತ್ವಹಂ ತೇಷು ತೇ ಮಯಿ ॥

ಭ॥ ಗೀ॥ ೭ನೆಯ ಅ. ಶ್ಲೋಕ ೧೨

ಸಾತ್ತ್ವಿಕ, ರಾಜಸ, ತಾಮಸಭಾವ ಸ್ವರೂಪಗಳೆಲ್ಲವೂ ನನ್ನಿಂದಲೇ ಎಂದು ತಿಳಿ. ನಾನು ಅವುಗಳಿಗೆ ವಶನಲ್ಲ. ನನಗೇ ಅವು ಅಧೀನಗಳು.

ಶಾಂತಿಪರ್ವದಲ್ಲಿ ಭೀಷ್ಮನು ವಿಷ್ಣುಸ್ತುತಿಯನ್ನು ಮಾಡುವಾಗ ಸತ್ಯಾತ್ಮನೇ ನಮಃ, ಧರ್ಮಾತ್ಮನೇ ನಮಃ, ಕಾಮಾತ್ಮನೇ ನಮಃ, ಘೋರಾ ತ್ಮನೇ ನಮಃ, ಕ್ರೌರ್ಯಾತ್ಮನೇ ನಮಃ, ದೃಪ್ತಾತ್ಮನೇ ನಮಃ, ಇತ್ಯಾದಿ ಅಭಿಪ್ರಾಯಗಳಿಂದ ನಮಸ್ಕಾರಮಾಡುತಲಿದಾನೆ ಮತ್ತು ಉಪಸಂಹಾರದಲ್ಲಿ

ಸರ್ವಾತ್ಮನೇ ನಮಃ ಎಂದು ಹೇಳುತಲಿದಾನೆ. ಪ್ರಾಚೀನ ಹಿಂದೂ ಶಾಸ್ತ್ರಗಳಿಂದ ಇಂತಹ ವಾಕ್ಯಗಳನ್ನು ಎತ್ತಿ ನೂರಾರು ಪೇಜುಗಳನ್ನು ತುಂಬಬಹುದು.

ಆದರೆ ಇದರಿಂದ ಮನುಷ್ಯನು ಒಂದು ಗುರುತರವಾದ ವಿಷಯವನ್ನು ತಿಳಿದುಕೊಳ್ಳಬೇಕಾಯಿತು. ದುಃಖವು ಜಗದೀಶ್ವರನಿಂದ ಪ್ರೇರಿಸಲ್ಪಟ್ಟದ್ದು, ಇದಕ್ಕೆ ಬೇರೆ ಕಾರಣವಿಲ್ಲ. ನಿಂದಿತನೂ ಪಾಪಿಷ್ಠನೂ ಆದವನು ದಂಡನೀಯನು. ಈ ವಿಷಯದಲ್ಲಿ ಜಗದೀಶ್ವರನಿಂದ ಪಾಪಬುದ್ಧಿ ಪ್ರೇರಿತವಾಗಲು ಅದರ ವಿಚಾರಕರ್ತನು ಅವನೇ ಹೊರತು ಮಿಕ್ಕವರಿಗೆ ಸಂಬಂಧವೇನು ?

ಈ ತತ್ತ್ವವನ್ನು ಹಿಂಡುವುದಕ್ಕಾಗಿ ದ್ವಿತೀಯ ಶ್ರೇಣಿಯ ಕವಿ ಭಾರತ ಗ್ರಂಥದ ಒಳಗಡೆಯಲ್ಲಿ ಹೊಕ್ಕು ಕೆಲಸಮಾಡಿರುವನು. ಶ್ರೇಷ್ಠರಾದ ಕವಿಗಳು ಈಗಿನ ಕಾಲದವರಂತೆ ಪೀಠಿಕೆಯನ್ನು ಹಾಕಿಕೊಂಡು ಅದರಲ್ಲಿಯೇ ಹೇಳಬೇಕಾದುದನ್ನೆಲ್ಲ ಹೇಳಿ ಕಾವ್ಯವನ್ನಾರಂಭಿಸುತ್ತಿರಲಿಲ್ಲ. ಪ್ರಯತ್ನಪಟ್ಟು ಮರ್ಮಾರ್ಥವನ್ನು ಗ್ರಹಿಸಲು ಯತ್ನಿಸಬೇಕು. ಷೇಕ್ಸ್‌ಪಿಯರಿನ ಮರ್ಮಾರ್ಥವನ್ನು ಒಂದೊಂದುಕಡೆ ತಿಳಿದುಕೊಳ್ಳಬೇಕಾದಾಗ ಕೃತವಿದ್ಯರೂ ಪ್ರತಿಭಾಶಾಲಿಗಳೂ ಪ್ರಖ್ಯಾತರಾದ ಪಂಡಿತಶ್ರೇಷ್ಠರೂ ಆದ ಹಲವರು ಎಷ್ಟೆಷ್ಟೋ ಭಾವನೆಗಳನ್ನು ಮಾಡಿರುವರು, ಮತ್ತೂ ಎಷ್ಟೋ ಬರೆದಿರುವರು. ಅವುಗಳನ್ನೆಲ್ಲ ತಿಳಿದುಕೊಳ್ಳುವುದಕ್ಕೆಂದು ನಮ್ಮ ತಲೆ ಎಷ್ಟೋಸಲ ಬೆವರುಗಟ್ಟಿಹೋಗಿಲ್ಲವೆ! ನಮ್ಮ ಈ ಅಪೂರ್ವವಾದ ಮಹಾಭಾರತ ಗ್ರಂಥದ ಒಂದು ಅಧ್ಯಾಯದ ಪ್ರಕೃತ ಮರ್ಮವನ್ನಾದರೂ ತಿಳಿದುಕೊಳ್ಳುವುದಕ್ಕೆಂದು ಒಂದು ಗಳಿಗೆಯನ್ನಾದರೂ ಕಳೆದಿಲ್ಲವಲ್ಲಾ ! ಒಂದುಕಡೆ ಹರಿಸಂಕೀರ್ತನ ಕಾಲದಲ್ಲಿ ಮೃದಂಗನಾದವು ಕೇಳಿಸಿತೋ ಇಲ್ಲವೋ ಭಕ್ತ್ಯಾವೇಶದಿಂದ ಮೈಮರೆತು ಮಣ್ಣು, ಕಲ್ಲು, ಮುಳ್ಳು, ಧೂಳುಗಳನ್ನು ಸುದಾ ಗಮನಿಸದೆ ನೆಲದ ಮೇಲೆ ಬಿದ್ದು ಹಲವು ವೈಷ್ಣವರು ಹೊರಳಾಡುತ್ತಿರುವರು. ಇನ್ನೊಂದು ಕಡೆಯಲ್ಲಾದರೆ, ಇದೇನು ಹಾಳು (ನ್ಯೂಸೆನ್ಸ್) ಎಂದು ಅರಚುತ್ತ ನವ್ಯ ಶಿಕ್ಷಕರು ಹಿಂಬಾಲಿಸುತ್ತಿರುವರು. ಹೀಗೆ ಪ್ರಾಚೀನ ಹಿಂದೂ ಗ್ರಂಥದ ಹೆಸರನ್ನು ಕೇಳಿದಮಾತ್ರಕ್ಕೇ ಒಂದು ದಳದವರು ಭೂಮಿಯಮೇಲೆ ಸಾಷ್ಟಾಂಗ ದಂಡವನ್ನು ಸಮರ್ಪಿಸುತ್ತಿರುವರು. ಕಂತೆ ಬಂತೆ ಕಗ್ಗಗಳನ್ನು

ಕೇಳಿ ಭಕ್ತಿಪ್ರವಾಹದಿಂದ ದೇಶವನ್ನೆಲ್ಲಾ ಮುಳುಗಿಸುತ್ತಿರುವರು. ಇನ್ನೊಂದು ದಳದವರು ಸಮಸ್ತವೂ ಸುಳ್ಳು, ನಕಲಿ, ಕೇಳಲಿಕ್ಕಾಗದ್ದು, ತಳ್ಳುಪಡಿಗೆ ತಕ್ಕದ್ದು ಎಂದು ವಿವೇಚಿಸುತ್ತಿರುವರು. ತಿಳಿಯಬೇಕೆಂದು ಪ್ರಯತ್ನಿಸ ಲೊಲ್ಲರು. ಶಬ್ದಾರ್ಥಗಳು ತಿಳಿದ ಮಾತಕ್ಕೇ ಬೇಕಾದಷ್ಟಾಯಿತು ಎಂದಂದು ಕೊಳ್ಳುವರು. ಯಾರಾದರೂ ತಿಳಿಯಹೇಳಿದರೂ ತಿಳಿದುಕೊಳ್ಳಲಪೇಕ್ಷೆ ಪಡರು. ಇದೇ ಬಹು ದುಃಖಕರವಾದ ವಿಷಯ.

ಈಶ್ವರನೇ ಸಮಸ್ತ; ಈಶ್ವರನಿಂದಲೇ ಸಮಸ್ತ; ಅವನಿಂದಲೇ ಜ್ಞಾನ; ಅವನಿಂದಲೇ ಜ್ಞಾನ ಅಭಾವದ ಭ್ರಾಂತಿ; ಅವನಿಂದಲೇ ಬುದ್ಧಿ; ಅವನಿಂದಲೇ ದುರ್ಬುದ್ಧಿ; ಅವನಿಂದಲೇ ಸತ್ಯ; ಅವನಿಂದಲೇ ಅಸತ್ಯ; ಅವನಿಂದಲೇ ನ್ಯಾಯ ಮತ್ತು ಅನ್ಯಾಯ. ಮನುಷ್ಯ ಜೀವನದ ಪ್ರಧಾನ ಪ್ರಯೋಜನ ಜ್ಞಾನ, ಬುದ್ಧಿ, ಸತ್ಯ, ನ್ಯಾಯ—ಇಲ್ಲವೇ ಅವುಗಳ ಅಭಾವದ ಭ್ರಾಂತಿ. ದುರ್ಬುದ್ಧಿ, ಅಸತ್ಯ ಮತ್ತು ಅನ್ಯಾಯ—ಎಲ್ಲವೂ ಈಶ್ವರ ಪ್ರೇರಿತಗಳು. ಜ್ಞಾನ, ಬುದ್ಧಿ, ಸತ್ಯ ಮುಂತಾದುವು ಅವನಿಂದಲೇ ಎಂದು ತಿಳಿಸಬೇಕಾದದ್ದಿಲ್ಲ. ಹಿಂದೂವಿಗೆ ಇವು ಸ್ವತಸ್ಸಿದ್ಧಗಳು. ಆದರೆ ಭ್ರಾಂತಿ, ದುರ್ಬುದ್ಧಿ ಮುಂತಾದುವು ಸುದಾ ಅವನಿಂದಲೇ ಎಂಬುದಕ್ಕೆ ಪ್ರಯೋಜನ ವುಂಟು. ಇದನ್ನೇ ಮಹಾಭಾರತದ ದ್ವಿತೀಯ ಸ್ತರದ ಕವಿ ಯೋಚಿ ಸಿದಂತೆ ಕಾಣುವುದು. ಜ್ಯೋತಿಷ್ಕರು ಬಹುಕಾಲದಿಂದಲೂ ಚಂದ್ರನ ಒಂದೇ ಭಾಗವನ್ನು ನೋಡಿಕೊಂಡು ಬರುತ್ತಿರುವೆವೆಂದೂ, ಇನ್ನೊಂದು ಭಾಗವನ್ನು ನೋಡಿಯೇ ಇಲ್ಲವೆಂದೂ ಹೇಳುವರು. ಈ ಕವಿ ಆ ನೋಡದೇ ಇರುವ ಜಗದ್ರಹಸ್ಯದ ಅಪರಪೃಷ್ಠವನ್ನು ನಮ್ಮಗಳಿಗೆ ತೋರಿಸಲುಳ್ಳವನು. ಅವನು ಜಯದ್ರಥನ ವಧೆಯಲ್ಲಿ, ಭ್ರಾಂತಿಯು ಈಶ್ವರನಿಂದಲೇ ಉಂಟಾದುದೆಂತಲೂ, ಘಟೋತ್ಕಚನ ವಧೆಯಲ್ಲಿ ದುರ್ಬುದ್ಧಿಯು ಅವನಿಂದಲೇ ಉಂಟಾಯಿ ತೆಂತಲೂ, ದ್ರೋಣನ ವಧೆಯಲ್ಲಿ ಅಸತ್ಯವು ಈಶ್ವರನಿಂದಲೇ ಹುಟ್ಟಿತೆಂತಲೂ, ದುರ್ಯೋಧನನ ವಧೆಯಲ್ಲಿ ಅನ್ಯಾಯ ಅವನಿಂದಲೇ ಉಂಟಾಯಿತೆಂತಲೂ ತೀಸಲು ಯತ್ನಿಸಿರುವನು. ಇನ್ನೊಂದು ಮಾತು ಉಳಿಯಿತು—ಜ್ಞಾನ ಬಲ, ಬುದ್ಧಿಬಲ, ಸತ್ಯಬಲ ಮತ್ತು ನ್ಯಾಯಬಲ ಇವುಗಳು ಬಾಹುಬಲದ ಎದುರಿಗೆ ಏನೂ ಮಾಡಲಾರವು. ಮುಖ್ಯವಾಗಿ ರಾಜನೀತಿಯಲ್ಲಿ ಪ್ರಧಾನ

ವಾದುದು ಬಾಹುಬಲ. ಮಹಾಭಾರತವು ಸಮಸ್ತ ಪ್ರಕಾರದಿಂದಲೂ ರಾಜನೈತಿಕ ಕಾವ್ಯ ಎಂದರೆ ಐತಿಹಾಸಿಕ (ಇತಿಹಾಸದಮೇಲೆ ಸೃಷ್ಟಿಸಲ್ಪಟ್ಟ) ಕಾವ್ಯ. ಆದುದರಿಂದ ಈ ಕಾವ್ಯದಲ್ಲಿ ಬಾಹುಬಲವು ಜ್ಞಾನ ಬುದ್ಧಿ ಮೊದಲಾದುವಕ್ಕಿಂತ ಹೆಚ್ಚಿನದು. ದ್ವಿತೀಯ ಸ್ತರದ ಕವಿಯು ಜ್ಞಾನ ಭ್ರಾಂತಿ, ಬುದ್ಧಿ ದುರ್ಬುದ್ಧಿ, ಸತ್ಯಾಸತ್ಯ ಮತ್ತು ನ್ಯಾಯಾನ್ಯಾಯಗಳು ಈಶ್ವರನ ಅಧೀನಗಳೆಂದು ಅಂದಮಾತ್ರಕ್ಕೇ ರಾಜನೈತಿಕ ತತ್ತ್ವವು ಸಂಪೂರ್ಣವನ್ನು ಹೊಂದಲಿಲ್ಲವೆಂದು ತಿಳಿದು, ಬಾಹುಬಲವೂ ಮತ್ತು ಬಾಹುಬಲದ ಅಭಾವವೂ ಸಹ ಅವನ ಅಧೀನಗಳೇ ಎಂದು ತೋರಿಸುವುದಕ್ಕೋಸ್ಕರ ಮೌಸಲಪರ್ವವನ್ನು ಬರೆದು ಇರುತ್ತಾನೆ. ಅಲ್ಲಿ ಕೃಷ್ಣನಿಲ್ಲದಿರಲು ಅರ್ಜುನನು ದೊಣ್ಣೆಯನ್ನು ಹಿಡಿದ ಕೃಷೀವಲರಿಂದಲೇ ಪರಾಭವ ಹೊಂದಿದನು.

ಈಶ್ವರ ನಿಯಮವೆಂದು ನಾನು ಆವುದನ್ನು ಹೇಳುತ್ತಲಿದ್ದೇನೋ, ಅಥವಾ ದ್ವಿತೀಯ ಸ್ತರದ ಕವಿ ಆವುದನ್ನು ಈಶ್ವರಪ್ರೇರಣವೆಂದು ತಿಳಿಸುತ್ತಲಿದಾನೋ, ಅಥವಾ ಯೂರೋಪಿಯನ್ನರು ''Law'' ಎಂದು ಆವುದನ್ನು ಸಂಸ್ಥಾಪಿಸಿರುವರೋ ಇವೆಲ್ಲಾ ಒಂದೇ. ಮಹಾಭಾರತದ ಕವಿಗಳ ಬುದ್ಧಿಯಲ್ಲಿ ''Law'' ಅವಕಾಶವನ್ನು ಪಡೆದಿತ್ತೋ ಇಲ್ಲವೋ ತಿಳಿಯದು. ಆದರೆ ಯಾವುದು "ಲಾ" ಆಧಾರದಿಂದಲೋ ಅಥವಾ "ಲಾ" ದ್ವಾರವೋ ಉಂಟಾಗತಕ್ಕದ್ದೆಂಬುದನ್ನು ಚೆನ್ನಾಗಿ ತಿಳಿದಿದ್ದರು. ಅವರು ಸಮಸ್ತವೂ ಈಶ್ವರೇಚ್ಛೆ ಎಂಬುದನ್ನು ಬಲ್ಲವರಾಗಿದ್ದರು. ಕೃಷ್ಣನನ್ನು ಕರ್ಮಕ್ಷೇತ್ರದಲ್ಲಿ ನಿಲ್ಲಸಿ ಈ ಕವಿ ಈಶ್ವರೇಚ್ಛೆಯನ್ನು ವಿವರಿಸಲು ಪ್ರಯತ್ನಿಸಿ ಇರುವನು.

ಚತುರ್ಥ ಪರಿಚ್ಛೇದ

ಘಟೋತ್ಕಚ ವಧೆ

ಜಯದ್ರಥನ ವಧೆಯಲ್ಲಿ ಕೃಷ್ಣಸಂಬಂಧವಾದ ಅನೈಸರ್ಗಿಕವಾದ ಕಥೆಯೊಂದುಂಟು. ಅರ್ಜುನನು ಜಯದ್ರಥನ ಶಿರಚ್ಛೇದನಕ್ಕೆ ತೊಡಗಲು ಕೃಷ್ಣನು ಅವನನ್ನು ಹೀಗೆ ಎಚ್ಚರಿಸಿದನು—"ಜಯದ್ರಥನ ತಂದೆಯು ಪುತ್ರಾರ್ಥಿಯಾಗಿ ತಪ್ಪಸ್ಸುಮಾಡಿ, ಮಗನ ತಲೆಯನ್ನು ನೆಲಕ್ಕೆ ಉರುಳಿಸು ವವನ ತಲೆಯು ಒಡೆದು ಸಹಸ್ರ ಹೋಳಾಗುವಂತೆ ವರವನ್ನು ಪಡೆದು ಕೊಂಡಿರುವನು. ಆದುದರಿಂದ ನೀನು ಇವನ ತಲೆಯನ್ನು ನೆಲಕ್ಕೆ ಉರುಳಿಸದೆ ಬಾಣಗಳಿಂದಲೇ ತಡೆದು ಸಂಧ್ಯಾವಂದನೆಯನ್ನು ಮಾಡುತ ಲಿರುವ ಇವನ ತಂದೆಯ ಮಡುಲಿಗೆ ಉರುಳಿಸು" ಎಂದು ಹೇಳಿಕೊಟ್ಟನು. ಅರ್ಜುನನು ಹಾಗೆಯೇ ಮಾಡಿದನು. ಮುದುಕ ತಂದೆ ಅರ್ಘ್ಯವನ್ನು ಕೊಟ್ಟು ಏಳಲು ಈ ತಲೆ ನೆಲಕ್ಕುರುಳಿ ಅವನ ತಲೆಯೇ ಸಹಸ್ರ ಹೋಳಾಯಿತು.

ಅನೈಸರ್ಗಿಕವಾದ ಇದನ್ನು ನಾವು ಬಿಡಲೇಬೇಕು. ಇನ್ನು ಘಟೋತ್ಕಚ ವಧೆ ಎಂಬ ಭಯಾನಕವಾದ ಭಾಗವನ್ನು ವರ್ಣಿಸಬೇಕು.

ಹಿಡಿಂಬ ಎಂಬೊಬ್ಬ ರಾಕ್ಷಸನಿದ್ದನು. ಹಿಡಿಂಬಿ ಇವನ ತಂಗಿ. ಒಂದಾನೊಂದು ಕಾಲದಲ್ಲಿ ಭೀಮನು ಹಿಡಿಂಬನನ್ನು ಕೊಂದು ಹಿಡಿಂಬಿ ಯನ್ನು ಮದುವೆಯಾದನು. ವರ–ಕನ್ಯೆಯರು ಪರಸ್ಪರ ಅನುಪಯೋಗಿ ಗಳೆಂದು ಹೇಳಕೂಡದು. ರಾಕ್ಷಸಿಯ ಗರ್ಭದಲ್ಲಿ ಭೀಮನಿಗೊಬ್ಬ ಮಗನು ಹುಟ್ಟಿದನು. ಇವನೇ ಘಟೋತ್ಕಚನು. ಇವನೂ ರಾಕ್ಷಸನೇ. ಇವನು ಬಹು ಬಲವಂತನು. ಈ ಕುರುಕ್ಷೇತ್ರ ಯುದ್ಧದಲ್ಲಿ ಚಿಕ್ಕಪ್ಪ, ದೊಡ್ಡಪ್ಪ, ಅಪ್ಪ ಮುಂತಾದವರ ಸಹಾಯಕ್ಕಾಗಿ ತನ್ನ ದಳಬಲಗಳನ್ನು ಕೂಡಿಹಾಕಿ ಕೊಂಡು ಬಂದು ಯುದ್ಧಮಾಡುತ್ತಿದ್ದನು. ಅವನ ಬುದ್ಧಿ ಕೊಂಚ ವ್ಯತ್ಯಾಸವಾಗಿರಬಹುದು. ಇಲ್ಲವಾದರೆ ಇವನು ಮೇಲೆ ಬೀಳುವವರನ್ನು ಹಿಡಿದು ಬಾಯಿಗೆ ಹಾಕಿಕೊಳ್ಳದೆ ಅವರೊಡನೆ ಬಾಣಾದಿಗಳ ಮೂಲಕ ಮನುಷ್ಯರಂತೆ ಯುದ್ಧಮಾಡುವುದೆ! ಇವನ ದೌರ್ಭಾಗ್ಯಕ್ಕೆ ತಕ್ಕಹಾಗೆ

ದುರ್ಯೋಧನನ ಕಡೆಯೂ ಒಬ್ಬ ರಾಕ್ಷಸನಿದ್ದನು; ಇವರೀರ್ವರಿಗೂ ಕಡು ಕಾಳಗ ನಡೆಯಿತು.

ಇತರ ದಿವಸಗಳಂತೆ ಈ ದಿವಸ ಯುದ್ಧ ಸಂಧ್ಯಾಸ್ತಕ್ಕೆ ಸರಿಯಾಗಿ ನಿಲ್ಲದೆ ದೀವಟಿಗೆಗಳ ಬೆಳಕಿನಲ್ಲಿ ರಾತ್ರಿಯೂ ನಡೆಯತೊಡಗಿತು. ರಾತ್ರಿಯಲ್ಲಿ ನಿಶಾಚರರಿಗೆ ಬಲವು ಸ್ವಾಭಾವಿಕಕ್ರಮದಲ್ಲಿ ಪ್ರಬಲವಾಯಿತು. ಆಗ ಘಟೋತ್ಕಚನನ್ನು ಇದುರಿಸಲಾರದವರಾದರು. ಕೌರವನ ಕಡೆಯ ರಾಕ್ಷಸನೂ ಮಡಿದನು. ಕರ್ಣನೊಬ್ಬನೇ ಅವನನ್ನಿದುರಿಸಿ ನಿಂತು ಕಡಿದಾಡಿ ಸೋಲುವಂತಾದನು. ಆಗ ಇಂದ್ರನು ಕೊಟ್ಟ ಏಕಪುರುಷಘಾತಿನಿ ಎಂಬೊಂದು ಶಕ್ತಿಯಿತ್ತು. ಈ ಶಕ್ತಿಯ ವಿಷಯದಲ್ಲಿ ಅದ್ಭುತಕ್ಕಿಂತಲೂ ಅದ್ಭುತವಾದ ವಾರ್ತೆಯುಂಟು. ಅದನ್ನೆಲ್ಲಾ ಹೇಳಿ ಪಾಠಕರನ್ನು ಪೀಡಿಸಲಾರೆನು. ಇಷ್ಟು ಹೇಳಿದರೆ ಸಾಕು—ಈ ಶಕ್ತಿ ಯಾರಮೇಲೂ ವ್ಯರ್ಥವಾಗದು. ಆದರೆ ಒಂದುಸಲ ಒಬ್ಬನಮೇಲೆ ಬಿಟ್ಟರೆ ಅವನನ್ನು ಹತಮಾಡಿ ಬಿಡುವುದು. ಆಮೇಲೆ ಮಾತ್ರ ಈ ಶಕ್ತಿ ಹಿಂದಕ್ಕೆ ಬಾರದು. ಆದುದರಿಂದಲೇ ಇದಕ್ಕೆ ಏಕಪುರುಷಘಾತಿನಿ ಎಂಬ ಹೆಸರು. ಇದನ್ನು ಕರ್ಣನು ಅರ್ಜುನನನ್ನು ಕೊಲ್ಲುವುದಕ್ಕೆಂದು ಇಟ್ಟುಕೊಂಡಿದ್ದವನು ಈಗ ಘಟೋತ್ಕಚನಿಗೆ ಸೋಲಬೇಕಾಗಿ ಬರಲು ಅವನಮೇಲೆ ಅಸ್ತ್ರವನ್ನು ಬಿಡಬೇಕಾಯಿತು. ಘಟೋತ್ಕಚನು ಸತ್ತನು. ಸತ್ತು ವಿಂಧ್ಯಪರ್ವತದ ಪಾದಪ್ರದೇಶದಷ್ಟು ಶರೀರವನ್ನು ವಹಿಸಿ ನೆಲಕ್ಕೆ ಬೀಳಲು ಒಂದಕ್ಷೋಹಿಣೀ ಬಲವು ಅವನ ಕೆಳಗಡೆಗೆ ಸಿಕ್ಕಿ ನುಗ್ಗುನುರಿಯಾಗಿ ಹೋಯಿತು.

ಇಂತಹ ಅನೇಕ ಅಪರಾಧಗಳಿಂದ ಪ್ರಾಚೀನ ಹಿಂದೂ ಕವಿಗಳನ್ನು ಮನ್ನಿಸಬಹುದು. ಬಾಲಕರೂ ತಿಳಿವಳಿಕೆಯಿಲ್ಲದ ಹೆಂಗಸರೂ ಈ ಬಗೆಯ ಕಥೆಗಳನ್ನು ಆನಂದದಿಂದ ಕೇಳುವರಲ್ಲದೆ. ಬರಹಕಾರನಿಗೂ ಆನಂದಕರವಾಗಿರಬಹುದು. ಘಟೋತ್ಕಚನು ಸಾಯಲು ಪಾಂಡವರು ಶೋಕಾರ್ತರಾಗಿ ಅತ್ತರು. ಕೃಷ್ಣನು ರಥದಮೇಲೆ ಕುಣಿಯತೊಡಗಿದನು. ಕೃಷ್ಣನು ಈಗ ಗೋಪಬಾಲಕನಲ್ಲ. ಇವನಿಗೆ ಮೊಮ್ಮಕ್ಕಳೂ ಆಗಿರುವರು. ವಾತ ರೋಗವೂ ಬಂತೆಂದು ಕವಿ ಕಾಣಿಸಿ ಇಲ್ಲ. ಬರಿಯ ಕುಣಿತವಲ್ಲ. ಸಿಂಹನಾದ, ಕೈಚಪ್ಪಾಳೆ. ಈ ವಿಪರೀತವನ್ನು ನೋಡಿ ಅರ್ಜುನನು

ಆಶ್ಚರ್ಯದಿಂದ ಇದೇನು ಎಂದು ಕೇಳಿದನು. ಕೃಷ್ಣನು—"ಕರ್ಣನ ಹತ್ತಿರ ಅಮೋಘವಾದೊಂದು ಅಸ್ತ್ರವಿತ್ತು; ಅದನ್ನು ನಿನ್ನ ವಧೆಗೋಸ್ಕರ ಇಟ್ಟು ಕೊಂಡಿದ್ದವನು ಈಗ ಅದನ್ನು ಘಟೋತ್ಕಚನಮೇಲೆ ಬಿಟ್ಟುಬಿಟ್ಟಿರುವನು. ಇನ್ನು ನಿನಗೆ ಭಯವಿಲ್ಲ. ಕರ್ಣನೊಡನೆ ನೀನಿನ್ನು ಯುದ್ಧ ಮಾಡಲಾವ ಅಡ್ಡಿಯೂ ಇಲ್ಲ" ಎಂದು ಹೇಳಿದನು. ಜಯದ್ರಥನ ವಿಚಾರದಲ್ಲಿ ಕರ್ಣ ನೊಡನೆ ಅರ್ಜುನನಿಗೆ ಬಾರಿಬಾರಿಗೂ ಯುದ್ಧವಾಗಿ ಕರ್ಣನು ಸೋತು ಸೋತು ಹೋಗುತ್ತಿದ್ದನು. ಆಗ ಈ ಇಂದ್ರಸಂಬಂಧ ಶಕ್ತಿ ಆರ ಗೋಚರಕ್ಕೂ ಬರಲಿಲ್ಲ. ಕವಿಗೂ ಇಲ್ಲ. ಆಗ ಇದು ಇದ್ದರೆ ಜಯದ್ರಥನ ವಧೆಯೇ ಆಗುತ್ತಿರಲಿಲ್ಲ. ಕರ್ಣನು ಜಯದ್ರಥನ ರಕ್ಷಕನಾಗಿ ಇದ್ದೂ ಕೆಲಸವು ಸರಾಗವಾಗಿ ನಡೆದುಹೋಯಿತು. ಹೋಗಲಿ--ಈ ಶಕ್ತಿ ವೃತ್ತಾಂತವು ಅನೈಸರ್ಗಿಕವೂ ಆಲೋಚನೆಗೆ ಅನರ್ಹವೂ ಆದದ್ದಾದರೂ ಇದನ್ನೆತ್ತಿದ್ದು ಮೇಲೆ ಹೇಳಿದ ಅರ್ಜುನನ ಪ್ರಶ್ನೆಗೆ ಕೃಷ್ಣನು ಹೇಳಿದ ಉತ್ತರವನ್ನು ಆಲೋಚಿಸುವುದಕ್ಕೋಸ್ಕರ, ಅಷ್ಟೇ.

"ಎಲೈ ಧನಂಜಯನೇ, ನಾನು ನಿನ್ನ ಹಿತಾರ್ಥವಾಗಿ ವಿವಿಧೋಪಾಯ ಗಳನ್ನುಂಟುಮಾಡಿ ಕ್ರಮವಾಗಿ ಮಹಾಬಲಶಾಲಿಗಳಾದ ಜರಾಸಂಧ, ಶಿಶುಪಾಲ, ನಿಷಾದ ಏಕಲವ್ಯ, ಹಿಡಿಂಬ, ಕಿರ್ಮೀರ, ಬಕ, ಅಲಾಯುಧ, ಉಗ್ರಕರ್ಮ, ಘಟೋತ್ಕಚ ಮೊದಲಾದವರ ವಧೆಯನ್ನು ಸಾಧಿಸಿದೆನು."

ಈ ಮಾತುಗಳು ಸುಳ್ಳು. ಕೃಷ್ಣನು ಶಿಶುಪಾಲನನ್ನು ಕೊಂದದ್ದು ಅರ್ಜುನನ ಹಿತಾರ್ಥವಾಗಿ ಅಲ್ಲ; ಶಿಶುಪಾಲನು ಕೃಷ್ಣನನ್ನು ಸಭಾಮಧ್ಯ ದಲ್ಲಿ ಅವಮಾನಪಡಿಸಿ ಯುದ್ಧಕ್ಕೆ ಕರೆದುದರಿಂದಲೂ, ಯಜ್ಞವನ್ನು ಸಂರಕ್ಷಿ ಸುವುದಕ್ಕೋಸ್ಕರಲೂ ಸಹ. ಇನ್ನು ಜರಾಸಂಧ ವಧೆ ಕೃಷ್ಣನಿಂದಲ್ಲ ವಾದರೂ ಅದಕ್ಕೆ ಇವನೂ ಸೇರಿದ್ದುಂಟು. ಆದರೆ ಅದು ಅರ್ಜುನನ ಹಿತಾರ್ಥವಾಗಿ ಅಲ್ಲ; ಕಾರಾಗೃಹದಲ್ಲಿ ತೊಳಲುತ್ತಿದ್ದ ರಾಜನ್ಯರುಗಳನ್ನು ಬಿಡುಗಡೆಮಾಡುವುದಕ್ಕೋಸ್ಕರ. ಬಕ, ಹಿಡಿಂಬ, ಕಿರ್ಮೀರ ಮೊದಲಾದ ವರ ವಧೆ ಮತ್ತು ಏಕಲವ್ಯನ ಅಂಗುಷ್ಠವನ್ನು ಕತ್ತರಿಸಿದ್ದು. ಇದರಲ್ಲಿ ಕೃಷ್ಣನಿಗೆ ಎಳ್ಳಷ್ಟು ಸಂಬಂಧವಿಲ್ಲ. ಕೃಷ್ಣನು ಇವರುಗಳನ್ನು ಅರಿಯು ವಲ್ಲದೆ ಈ ಘಟನೆಗಳು ನಡೆದಾಗ ಅವನು ಇರಲೂ ಇಲ್ಲ. ಕೃಷ್ಣನು

ಏಕಲವ್ಯನನ್ನು ಕೊಂದಿದ್ದನೆಂದೊಂದು ಕಡೆಯಲ್ಲೇನೋ ಇದೆ; ಆದರೆ ಅಂಗುಷ್ಠಛೇದನವು ಇದಕ್ಕೆ ವಿರೋಧವಾದದ್ದು. ಅಲ್ಲದೆ ಏಕಲವ್ಯನ ಅಂಗುಷ್ಠಛೇದನವೂ ರಾಕ್ಷಸನ ವಧೆಯೂ ಅತಿಪ್ರಕೃತಿ. ಆದರೆ ಈ ಸುಳ್ಳು ನುಡಿಗಳನ್ನು ಕೃಷ್ಣನ ಬಾಯಿಂದ ಆಡಿಸುವ ಉದ್ದೇಶವೇನು?

ಈ ವಿಷಯದಲ್ಲಿ ಇನ್ನೊಂದಂಶವನ್ನು ಎತ್ತುವೆನು. ಕೃಷ್ಣನು ಇಚ್ಛಾಮಾತ್ರದಿಂದಲೇ ಸಮಸ್ತವನ್ನೂ ಮಾಡುತಲಿದಾನೆ. ಅವನ ಇಚ್ಛೆಯಿಂದಲೇ ಘಟೋತ್ಕಚನಮೇಲೆ ಕರ್ಣನ ಶಕ್ತಿಪ್ರಯೋಗವೂ, ಹಿಡಿಂಬನ ವಧೆಯೂ ಆದುವೆಂದು ಭಕ್ತರು ಹೇಳುವುದಾದರೆ ಇದು ಸಂಗತವಲ್ಲವೆಂದು ತಿರಸ್ಕರಿಸಬೇಕಾಗುವುದು. ವಿವಿಧೋಪಾಯಗಳಿಂದ ಇವನ್ನು ಸಾಧಿಸುವೆನೆಂದು ತಾನೇ ಹೇಳಿರುವನು. ಇಚ್ಛಾಮಾತ್ರದಿಂದ ಸರ್ವಕರ್ತನು ಈ ಸಮಸ್ತಕಾರ್ಯಗಳನ್ನೂ ಮಾಡುವನಾದರೆ ಮನುಷ್ಯ ಶರೀರವನ್ನು ಧರಿಸುವುದೇಕೆ? ಇಚ್ಛಾಶಕ್ತಿಯಿಂದ ಶ್ರೀಕೃಷ್ಣನು ಆವ ಕಾರ್ಯವನ್ನೂ ಮಾಡುತಲಿಲ್ಲವೆಂಬುದನ್ನು ನಾವು ಬಾರಿಬಾರಿಗೂ ನೋಡುತಲಿರುವೆವು. ಅವನು ಮನುಷ್ಯಶಕ್ತಿಯನ್ನೇ ಅವಲಂಬಿಸಿ ಇದ್ದಾನೆ; ಬಾಯಿಂದಲೂ ಹಾಗೆಯೇ ಹೇಳಿದ್ದಾನೆ. ಇದನ್ನು ನಾವು ಮೊದಲೇ ತೋರಿಸಿದ್ದೇವೆ. ಅವನು ಇಚ್ಛೆಯಿಂದ ಸಂಧಿಸ್ಥಾಪನೆಯನ್ನು ಮಾಡಲಾರದೆಹೋದುದೂ, ಕರ್ಣನನ್ನು ಯುಧಿಷ್ಠಿರನ ಪಕ್ಷಕ್ಕೆ ಸೆಳೆಯಲಾರದೆ ಹೋದುದೂ ನಮಗೆ ಕಂಡುಬಂದಿರಲು ಅಪ್ರಯೋಜಕವಾದೊಂದು ಜಡವಸ್ತುವಾದ ಶಕ್ತ್ಯಸ್ತ್ರ ವಿಷಯದಲ್ಲಿ ಇಚ್ಛಾಮಯನಿಗೆ ಇಷ್ಟೊಂದು ಸಡಗರವೇಕೆ!

ಇದರ ಅಭಿಪ್ರಾಯವನ್ನು ಹಿಂದಿನ ಪರಿಚ್ಛೇದದಲ್ಲಿಯೇ ತಿಳಿಸಿದೆ. ಬುದ್ಧಿಯೂ ದುರ್ಬುದ್ಧಿಯೂ ಈಶ್ವರಪ್ರೇರಿತವೆಂಬುದನ್ನು ಕವಿ ಹೇಳಲುಳ್ಳವನು. ಕರ್ಣನು ಅರ್ಜುನನಿಗಾಗಿ ಇಂದ್ರಾಸ್ತ್ರವನ್ನು ಬಚ್ಚಿಟ್ಟದ್ದನು. ಘಟೋತ್ಕಚನ ಮೇಲೆ ಅದನ್ನು ಪ್ರಯೋಗಿಸಿದ್ದು ಅವನ ದುರ್ಬುದ್ಧಿ. ಅದನ್ನು ನಾನು ಉಂಟುಮಾಡಿದೆನೆಂದು ಕೃಷ್ಣನು ಹೇಳಿದನು. ಎಂದರೆ, ದುರ್ಬುದ್ಧಿಯೂ ಈಶ್ವರಪ್ರೇರಿತ ಎಂದಷ್ಟೇ. ಶಿಶುಪಾಲನೂ ದುರ್ಬುದ್ಧಿಯಿಂದಲೇ ಸಭೆಯಲ್ಲಿ ಕೃಷ್ಣನನ್ನು ಬಗೆಬಗೆಯಾಗಿ ಭಂಗಿಸಿದ್ದು. ಜರಾಸಂಧನು ಸಸೈನ್ಯನಾಗಿ ಯುದ್ಧಕ್ಕೆ ನಿಂತಿದ್ದರೆ ಜಯಿಸಲು ಆಗದವನು.

ಪಾಂಡವರು ಹಾಗಿರಲಿ, ಕೃಷ್ಣನಿಂದಲೇ ನಡಸಲ್ಪಟ್ಟ ಯಾದವರಿಗೂ ಕೂಡ ಅವನು ಅಜೇಯನಾಗಿದ್ದನು. ಶಾರೀರಕ ಬಲದಲ್ಲಾದರೋ ಭೀಮನು ಅವನಿಗಿಂತಲೂ ಬಲವಂತನು. ಒಬ್ಬಂಟಿಗನಾಗಿ ಭೀಮನಮೇಲೆ ಜಟ್ಟಿಯಂತೆ ಕಾಳಗಕ್ಕೆ ನಿಂತದ್ದು, ಇಂತಹ ರಾಜರಾಜೇಶ್ವರನಾದ ಚಕ್ರವರ್ತಿಯಲ್ಲಿ ತೋರಿದ ದುರ್ಬುದ್ಧಿ ! ಆ ದುರ್ಬುದ್ಧಿ ತನ್ನಿಂದಲೇ ಉಂಟಾದುದೆಂಬುದೂ ಕೃಷ್ಣವಾಕ್ಯದ ಮರ್ಮ. ದ್ರೋಣಾಚಾರ್ಯನೂ ಅನಾರ್ಯನಾದ ಏಕಲವ್ಯನ ಹತ್ತಿರ ಗುರುದಕ್ಷಿಣಾ ಸ್ವರೂಪವಾಗಿ ತನ್ನ ಬಲಗೈ ಹೆಬ್ಬೆರಳನ್ನು ಆಶಿಸಿದ್ದೂ ಕೃಷ್ಣನಿಂದಲೇ. ಆ ಬೆರಳನ್ನು ಕೊಟ್ಟರೆ ತಾನು ಕಲಿತ ಧನುರ್ವಿದ್ಯೆಯೆಲ್ಲಾ ಶಿಥಿಲವಾಗುವುದೆಂದವನಿಗೆ ತಿಳಿದೂ, ಗುರುದಕ್ಷಿಣೆಯನ್ನು ಕೊಡುವುದಕ್ಕೆ ಮನಸ್ಸುಮಾಡಿದ ಏಕಲವ್ಯನಲ್ಲಿ ದಾನ ದುರ್ಬುದ್ಧಿಯುಂಟಾದುದೂ ಕೃಷ್ಣನಿಂದಲೇ. ಎಂದರೆ, ಇವೆಲ್ಲಾ ಈಶ್ವರಪ್ರೇರಿತಗಳು. ರಾಕ್ಷಸನ ವಧೆಯ ವಿಚಾರದಲ್ಲೂ ಹೀಗೆಯೇ. ಇವಷ್ಟೂ ದ್ವಿತೀಯ ಸ್ತರದ.

ಪಂಚಮ ಪರಿಚ್ಛೇದ

ದ್ರೋಣ ವಧೆ

ಪೂರ್ವಕಾಲದಲ್ಲ ಕ್ಷತ್ರಿಯರೊಬ್ಬರೇ ಯುದ್ಧಮಾಡುತ್ತಿದ್ದಂತೆ ಕಾಣಬರುವುದಿಲ್ಲ. ಮಹಾಭಾರತದಲ್ಲಿಯೇ ಬ್ರಾಹ್ಮಣ ಮತ್ತು ವೈಶ್ಯಯೋದ್ಧರ ಕಾರ್ಯಕಲಾಪಗಳೂ ಇವೆ. ದುರ್ಯೋಧನನ ಸೇನಾನಾಯಕ ಮುಖಂಡರಲ್ಲಿ ಮೂವರು ಬ್ರಾಹ್ಮಣರು. ದ್ರೋಣ, ಇವನ ಭಾವ ಮೈದುನ ಕೃಪ ಮತ್ತು ಮಗ ಅಶ್ವತ್ಥಾಮ. ಇತರ ವಿದ್ಯೆಗಳನ್ನುಪದೇಶಿಸುವಂತೆಯೇ ಬಾಹ್ಮಣರು ಯುದ್ಧವಿದ್ಯೆಯನ್ನೂ ಉಪದೇಶಿಸುತ್ತಿದ್ದರು. ಇದರಿಂದಲೇ ಇವರನ್ನು ದ್ರೋಣಾಚಾರ್ಯ, ಕೃಪಾಚಾರ್ಯ ಎಂದು ಕರೆಯುತ್ತಲಿದ್ದರು.

ಇತ್ತಕಡೆ ಬ್ರಾಹ್ಮಣರೊಡನೆ ಯುದ್ಧಮಾಡುವುದರಲ್ಲೂ ಬಹಳ ತೊಡಕು. ಬ್ರಾಹ್ಮಣನನ್ನು ಯುದ್ಧದಲ್ಲಿ ಕೊಂದರೂ ಬ್ರಹ್ಮಹತ್ಯಾ ಪಾತಕ ಬರುವುದು. ಮಹಾಭಾರತಕಾರನು ಇದೇ ಕಾರಣದಿಂದ ಬ್ರಾಹ್ಮಣ ಯೋಧ ರನ್ನು ಕುರಿತು ಬಹು ಸಂಕಟಪಟ್ಟಿದ್ದಾನೆಂಬುದು ಸ್ಪಷ್ಟಪಡುತಲಿದೆ. ಆದುದ ರಿಂದ ಕೌರವನ ಕಡೆಯ ಸಮಸ್ತರು ಸತ್ತರೂ ಕೃಪ ಮತ್ತು ಅಶ್ವತ್ಥಾಮರು ಮಾತ್ರ ಸಾಯಲಿಲ್ಲ. ಅವರು ಅಮರರು ಎಂದು ಹೇಳಿ ತಂಟೆಯನ್ನು ಬಗೆಹರಿಸಿಕೊಂಡಿದಾನೆ. ದ್ರೋಣಾಚಾರ್ಯನು ಸಾಯದಿದ್ದರೆ ನಡೆಯದು. ಭೀಷ್ಮನಾದಮೇಲೆ ಇವನೇ ಸರ್ವ ಪ್ರಧಾನ ಯೋಧನು. ಇವನು ಬದು ಕಿದ್ದರೆ ಪಾಂಡವರಿಗೆ ಜಯವಾಗುತ್ತಿರಲಿಲ್ಲ. ಧಾರ್ಮಿಕ ರಾಜರುಗಳಲ್ಲಿ ಯಾರಾದರೂ ಇವನನ್ನು ಕೊಂದು ಬ್ರಹ್ಮಹತ್ಯವನ್ನು ಕಟ್ಟಿಕೊಂಡರೆಂದು ಹೇಳುವುದಕ್ಕೂ ಕವಿಗೆ ಇಷ್ಟವಿಲ್ಲ. ಮುಖ್ಯವಾಗಿ ದ್ವೈರಥ ಯುದ್ಧದಲ್ಲಿ ಅವನನ್ನು ಜಯಿಸುವಂಥವರು ಅರ್ಜುನನ ಹೊರತು ಮತ್ತಾರೂ ಇಲ್ಲ. ಆದರೆ ಅರ್ಜುನನಿಗೆ ದ್ರೋಣನು ಗುರುವಾದುದರಿಂದ ಇವನಿಂದ ಖಂಡಿತ ವಾಗಿಯೂ ದ್ರೋಣ ವಧೆಯಾಗಕೂಡದು. ಈ ಕಾರಣಗಳಿಂದ ಗ್ರಂಥ ಕಾರನು ಇಲ್ಲಿ ಒಂದು ಚಮತ್ಕಾರವನ್ನವಲಂಬಿಸಿರುವನು.

ದ್ರೌಪದಿಯ ತಂದೆಯಾದ ದ್ರುಪದನೊಡನೆ ಹಿಂದೊಂದು ದೊಡ್ಡ ವಿವಾದವುಂಟಾಗಿತ್ತು. ದ್ರುಪದನು ಪರಾಕ್ರಮದಲ್ಲಿ ದ್ರೋಣನ ಸರಿಬಾರದೆ ಪದಭ್ರಷ್ಟನೂ ಅವಮಾನಿತನೂ ಆಗಿ ತಪಸ್ಸುಮಾಡಿ ಯಜ್ಞಕುಂಡದಿಂದ ದ್ರೋಣನನ್ನು ಕೊಲ್ಲುವಂಥ ಪುತ್ರನೊಬ್ಬನನ್ನು ಪಡೆದಿದ್ದನು. ಇವನೇ ಧೃಷ್ಟದ್ಯುಮ್ನನು. ಕುರುಕ್ಷೇತ್ರ ಯುದ್ಧದಲ್ಲಿ ಇವನು ಪಾಂಡವರ ಕಡೆಯ ಸೇನಾನಾಯಕನು. ಇವನೇ ದ್ರೋಣನನ್ನು ಕೊಲ್ಲುವನೆಂದು ಪಾಂಡವರು ನಂಬಿದ್ದರು. ಬ್ರಾಹ್ಮಣವಧಾರ್ಥವಾಗಿಯೇ ದೈವಕರ್ಮದಿಂದ ಹುಟ್ಟಿದವನಿಗೆ ಬ್ರಹ್ಮವಧೆಯ ಪಾಪವೆಲ್ಲಿಯದು !

ಮಹಾಭಾರತ ಒಂದು ಕೈಯಿನದಲ್ಲ; ಅದರಲ್ಲಿ ಹಲವು ಕೈವಾಡಗಳು ಬೆರಕೆ ಇವೆ. ಹದಿನೈದನೆಯ ದಿವಸದ ಯುದ್ಧ ನಡೆಯಿತು. ಧೃಷ್ಟ ದ್ಯುಮ್ನನು ದ್ರೋಣಾಚಾರ್ಯನನ್ನು ಗೆಲ್ಲಲಾಗಲಿಲ್ಲ. ತಾನೇ ಅವನಿಗೆ

ಸೋತುಹೋದನು. ಆದುದರಿಂದ ದ್ರೋಣನು ಸಾಯುವ ನಂಬುಗೆ ಹೋಯಿತು. ಪಾಂಡವ ಸೈನ್ಯ ಪ್ರತಿ ದಿವಸದಲ್ಲಿಯೂ ಲಯವಾಗುತ್ತ ಬಂತು. ಆಗ ಇವನ ವಧೆಗಾಗಿ ಭಯಂಕರವಾದ ಪಾಪಾಚರಣೆಯ ಪರಾಮರ್ಶವೊಂದು ಪಾಂಡವರಲ್ಲಿ ಹೊರಟಿತು. ಈ ಮಹಾಪಾತಕದ ಸಲಹೆಯು ಕೃಷ್ಣನ ಹೆಗಲಮೇಲೆ ಬಿದ್ದಿರುವುದು. ಇದನ್ನು ಸೂಚಿಸಿದವನೇ ಕೃಷ್ಣನೆಂದು ಹೇಳಿದೆ—

"ಎಲೈ ಪಾಂಡವರೇ, ಇತರರ ಮಾತು ಹಾಗಿರಲಿ. ಸಾಕ್ಷಾತ್ ದೇವೇಂದ್ರ ನಿಂದಲೂ ದ್ರೋಣನು ಸಂಗ್ರಾಮದಲ್ಲಿ ಸೋಲುವುದಿಲ್ಲ. ಅವನು ಅಸ್ತ್ರಶಸ್ತ್ರಗಳನ್ನು ಬಿಸುಟರೆ ಮಾತ್ರ ಮನುಷ್ಯರೇ ಅವನನ್ನು ಕೊಲ್ಲಬಹುದು. ಆದುದರಿಂದ ನೀವು ಧರ್ಮವನ್ನು ಬಿಟ್ಟು ಅವನನ್ನು ಜಯಿಸಲೆತ್ನಿಸಿ."

ಹತ್ತು ಹನ್ನೆರಡು ಹಾಳೆಗಳ ಹಿಂದೆ ಕವಿ ಇವನ ಬಾಯಲ್ಲಿಯೇ ಈ ಕೆಳಗಿನ ವಾಕ್ಯಗಳನ್ನಾಡಿಸಿರುವನು—

"ಎಲ್ಲಿ ಬ್ರಹ್ಮ, ಸತ್ಯ, ದಮ, ಶೌಚ, ಧರ್ಮ, ಶ್ರೀ, ಲಜ್ಜೆ, ಕ್ಷಮೆ, ಧೈರ್ಯ ಇವು ಉಂಟೋ ಅಲ್ಲೇ ಸದಾ ನಾನೂ ಇರುವೆನು ಎಂದು ಶಪಥಮಾಡಿ ಹೇಳುತ್ತಲಿದೇನೆ."

ಘಟೋತ್ಕಚ ವಧ ಪರ್ವಾಧ್ಯಾಯ ೧೮೧

ಭಗವದ್ಗೀತಾ ಪರ್ವಾಧ್ಯಾಯದಲ್ಲಿ ಧರ್ಮಸಂರಕ್ಷಣಾರ್ಥವಾಗಿಯೇ ಯುಗಯುಗದಲ್ಲಿಯೂ ಅವತರಿಸುವೆನೆಂದು ಹೇಳಿದವನು ಆವನೋ, ಈವರೆಗೂ ಆದರ್ಶಧಾರ್ಮಿಕನೆಂದು ಚರಿತ್ರೆಯಲ್ಲಾವನು ಬೆಳಗುತಿದ್ದನೋ, ಶತ್ರುಗಳೂ ಕೂಡ ಯಾವನ ಧರ್ಮದಾರ್ಢ್ಯವನ್ನು ಸ್ವೀಕರಿಸಿ ವರ್ಣಿಸಿರುವರೋ* ಅಂಥವನೇ ಇಲ್ಲಿ ಧರ್ಮವನ್ನು ಪರಿತ್ಯಾಗಮಾಡಿ ಎಂದು ಹೇಳಿದ್ದಾನೆ. ಹೀಗಿರುವುದರಿಂದಲೇ ಮಹಾಭಾರತ ಹಲವರ ರಚನೆ ಎಂದು ಹೇಳಬೇಕಾಗಿದೆ. ಸಿಕ್ಕಿದವರೆಲ್ಲ ಮನಸ್ಸಿಗೆ ಕೈಹಾಕಿದ್ದಾರೆ.

"ಅಶ್ವತ್ಥಾಮನು ಸತ್ತನೆಂದು ದ್ರೋಣನಿಗೆ ತಿಳಿದರೆ, ದ್ರೋಣನು ಯುದ್ಧವನ್ನು ಬಿಡುವನೆಂದು ನನಗೆ ಚೆನ್ನಾಗಿ ಗೊತ್ತಿದೆ. ಆದದ್ದರಿಂದ ಅವನ ಹತ್ತಿರಕ್ಕೆ ಯಾರಾದರೂ ಹೋಗಿ ಅಶ್ವತ್ಥಾಮನು ಸತ್ತನು ಎಂದು ಹೇಳಲಿ."
ಎಂದು ಕೃಷ್ಣನೆಂದನು.

---

* ಧೃತರಾಷ್ಟ್ರನ ವಾಕ್ಯವನ್ನು ನೋಡಿ.

ಅರ್ಜುನನು ಸುಳ್ಳನ್ನು ಹೇಳುವುದಕ್ಕೊಪ್ಪಲಿಲ್ಲ. ಯುಧಿಷ್ಠಿರನು ಬಲು ಕಷ್ಟದಿಂದ ಸಮ್ಮತಿಪಟ್ಟನು. ಭೀಮನು ಮರುಮಾತಾಡದೆ ಅಶ್ವತ್ಥಾಮವೆಂಬೊಂದು ಆನೆಯನ್ನು ಕೊಂದು ದ್ರೋಣಾಚಾರ್ಯನನ್ನು ಕುರಿತು ಅಶ್ವತ್ಥಾಮನು ಸತ್ತನೆಂದು ಹೇಳಿದನು. ತನ್ನ ಮಗನು "ಅಮಿತ ಬಲ ಪರಾಕ್ರಮಿಯೂ ಶತ್ರುವಿಗೆ ಅಸಹ್ಯನೂ" ಎಂದು ತಿಳಿದಿದ್ದ ದ್ರೋಣನು ಭೀಮನ ಮಾತನ್ನು ನಂಬಲಿಲ್ಲ. ಧೃಷ್ಟದ್ಯುಮ್ನನನ್ನು ಕೊಲ್ಲುವುದಕ್ಕೆ ಪುನಃ ದ್ರೋಣನು ನಿಂತು ಯುಧಿಷ್ಠಿರನನ್ನು ಕುರಿತು ಅಶ್ವತ್ಥಾಮನು ಸತ್ತದ್ದು ನಿಜವೇ ಎಂದು ಕೇಳಿದನು. ಯುಧಿಷ್ಠಿರನು ಆವಾಗಲೂ ಅಧರ್ಮವನ್ನು ನುಡಿದವನಲ್ಲ; ಸುಳ್ಳನ್ನು ಹೇಳನು. ಆದುದರಿಂದ ದ್ರೋಣನು ಅವನನ್ನೇ ಕೇಳಿದನು. "ಅಶ್ವತ್ಥಾಮೋ ಹತಃ ಕುಂಜರಃ"* ಎಂದನು. ಕುಂಜರ ಶಬ್ದ ಕೇಳಿಸದಂತಾಯಿತು.

ಇದರಿಂದ ಪ್ರಯೋಜನವೇನಾಯಿತು? ದ್ರೋಣನು ಮೊದಲು ಮನಸ್ಸನ್ನು ಇಳಿಯಬಿಟ್ಟವನಾಗಿ ಬಳಿಕ ಅತಿಘೋರವಾಗಿ ಯುದ್ಧ ಮಾಡತೊಡಗಿದನು. ಅವನ ಮೃತ್ಯುಸ್ವರೂಪನಾದ ಧೃಷ್ಟದ್ಯುಮ್ನನು ತನ್ನ ಶಕ್ತಿಯನ್ನು ಮೀರಿ ಯುದ್ಧ ಮಾಡಿ ದ್ರೋಣನಿಂದ ಪೆಟ್ಟುತಿಂದು ಸಾಯುವಂತಾದನು. ಆಗ ಭೀಮನು ಧೃಷ್ಟದ್ಯುಮ್ನನನ್ನು ಉಳಿಯುವಹಾಗೆ ಮಾಡಿ ದ್ರೋಣನ ರಥವನ್ನು ಹಿಡಿದು ಹೇಳಿದ ಕೆಲವು ಮಾತುಗಳೇ ದ್ರೋಣನು ಯುದ್ಧವನ್ನು ಬಿಟ್ಟು ತೆರಳುವುದಕ್ಕೆ ಸಾಕಾದಷ್ಟಾಯಿತು—"ಗುರೂಜಿ, ಸ್ವಧರ್ಮದಲ್ಲಿ ಅಸಂತುಷ್ಟರಾಗಿ ಅಸ್ತ್ರಶಾಸ್ತ್ರವನ್ನು ಕಲಿತಂಥ ಬ್ರಾಹ್ಮಣಾಧಮರೂ ಯುದ್ಧಕ್ಕೆ ಕೈಹಾಕರು. ಹಾಗಿರುವುದರಿಂದಲೇ ಕ್ಷತ್ರಿಯರೇನೊ ಎಂದಿಗೂ ನಾಶವಾಗುವುದಿಲ್ಲ. ಪ್ರಾಣಿಗಳನ್ನು ಹಿಂಸಿಸದಿರುವುದೇ ಪ್ರಧಾನ ಧರ್ಮವೆಂದು ಪಂಡಿತರು ಹೇಳುತ್ತಾರೆ. ಈ ಧರ್ಮವನ್ನುಳಿಸುವುದೇ ಬ್ರಾಹ್ಮಣರ ಅವಶ್ಯ ಕರ್ತವ್ಯ. ತಾವು ಬ್ರಾಹ್ಮಣ ಶ್ರೇಷ್ಠರು. ಚಂಡಾಲರಂತೆ ಅಜ್ಞಾನದಿಂದ ಅಂಧರಾಗಿ ಪುತ್ರಕಳತ್ರಗಳ ಉಪಕಾರಾರ್ಥವಾಗಿ ದ್ರವ್ಯಾಕಾಂಕ್ಷೆಗೆ ಸಿಲುಕಿ ವಿವಿಧವಾಗಿ

---

* ಈ ಮಾತು ಮಹಾಭಾರತದಲ್ಲಿಲ್ಲ. ಯಾರೋ ದಾಸರು ತಯಾರಿಸಿ ಸೇರಿಸಿರಬೇಕು. ಮೂಲಭಾರತದಲ್ಲಿ

"ತಮತಥ್ಯಭಯೇ ಮಗ್ನೋ ಜಯೇ ಸಕ್ತೋ ಯುಧಿಷ್ಠಿರಃ ।
ಅವ್ಯಕ್ತಮಬ್ರವೀದ್ವಾಕ್ಯಂ ಹತಃ ಕುಂಜರ ಇತ್ಯುತ"

ಎಂದಿದೆ.

ಮ್ಲೇಚ್ಛ ಮತ್ತು ಇತರ ಜಾತಿಯ ಜನರ ಪ್ರಾಣಗಳನ್ನು ಏಕೆ ನಾಶಪಡಿಸುತ್ತಲಿರುವಿರಿ! ತಾವೊಬ್ಬ ಮಗನ ಉಪಕಾರಕ್ಕಾಗಿ ಸ್ವಧರ್ಮವನ್ನು ಬಿಟ್ಟು, ಸ್ವಕಾರ್ಯಸಾಧನೆಯಲ್ಲಿ ನಿಂತು ಲೆಕ್ಕವಿಲ್ಲದಷ್ಟು ಪ್ರಾಣಿಗಳ ಪ್ರಾಣವನ್ನು ನಾಶಪಡಿಸಿದರೂ ನಾಚಿಕೆಯಿಲ್ಲದೆ ಇದ್ದೀರಲ್ಲಾ!"

ಮೇಲೆ ಹೇಳಿದ ಮಾತುಗಳೆಲ್ಲವೂ ಸತ್ಯ. ಇದಕ್ಕಿಂತಲೂ ತಿರಸ್ಕಾರವುಂಟೆ? ಇಷ್ಟರಿಂದಲೂ ಹಿಮ್ಮೆಟ್ಟದವನು ದುರ್ಯೋಧನನಂಥ ದುರಾತ್ಮನಲ್ಲದೆ ಬೇರೆ ಯಾವನಿಂದಾದೀತು. ದ್ರೋಣನು ಧರ್ಮಾತ್ಮನು. ಇಷ್ಟೇ ಅವನಿಗೆ ಸಾಕಾಯಿತು. ಇದರಮೇಲೆ ಅಶ್ವತ್ಥಾಮನ ಸಾವಿನ ಸುದ್ದಿಯನ್ನೆತ್ತದೇ ಇದ್ದರೂ ಆಗಿತ್ತು. ಆದರೆ ತಿರುಗಿ ಅದು ಪುನರುಕ್ತಿಯಾಗಿದೆ.

ಇಷ್ಟಾದಮೇಲೆ ದ್ರೋಣನು ಅಸ್ತ್ರವನ್ನು ಬಿಸುಡಲು ಧೃಷ್ಟದ್ಯುಮ್ನನು ಅವನ ತಲೆಯನ್ನು ಕತ್ತರಿಸಿದನು. ಈಗ ವಿಚಾರಮಾಡಿ ನೋಡಲು— ಇದು ಯಥಾರ್ಥವಾಗಿದ್ದರೆ ಇದಕ್ಕೆ ಸಂಬಂಧಪಡುವ ಸಮಸ್ತರೂ ಮಹಾಪಾಪಕ್ಕೆ ಸಿಲುಕಿದವರು. ಇದನ್ನು ಗ್ರಂಥಕಾರನು ಬಲ್ಲನು. ಇದಕ್ಕೆ ಮುಂಚೆ ಧರ್ಮಾತ್ಮನಾದ ಯುಧಿಷ್ಠಿರನ ರಥ ಭೂಮಿಗೆ ಸೋಂಕದೆ ನಾಲ್ಕು ಅಂಗುಲಗಳಮೇಲೆ ನಡೆಯುತ್ತಿದ್ದುದು ಈಗ ಭೂಮಿಗೆ ತಾಕಿ ಉರುಳತೊಡಗಿತು. ಈ ಅಪರಾಧದಿಂದಲೇ ಅವನಿಗೆ ನರಕದರ್ಶನವೂ ಆಯಿತೆಂದು ಹೇಳಿರುವನು. ಇಂಥ ವಿಶ್ವಾಸಘಾತಕತನದ ಸುಳ್ಳು ಮೋಸಗಳಿಂದಾಚರಿಸಿದ ಗುರುಹತ್ಯಕ್ಕೆ ಸರಿಯಾದ ದಂಡವು ನರಕದರ್ಶನವಲ್ಲ; ಅನಂತಕಾಲ ನರಕವಾಸವೇ ಅಲ್ಲವೆ?

ಇಂಥ ಮಹಾಪಾಪವನ್ನು ಸೂಚಿಸಿದ ಕೃಷ್ಣನೂ ಅಂಥ ಅಪರಾಧಿಯೆಂದೇ ಎಣಿಸಬೇಕಲ್ಲವೆ? ಈಶ್ವರನು ಪಾಪಪುಣ್ಯಕರ್ತನೂ ವಿಧಾತನೂ ಆಗಿರಲು ಅವನಿಗೆ ಪಾಪಪುಣ್ಯಗಳೆಂದರೇನು? ಅವುಗಳು ಅವನನ್ನು ಸ್ಪರ್ಶಿಸಲಾದೀತೆ? ಎಂದು ರೂಢಿಯಾಗಿ ಸಮಾಧಾನ ಹೇಳುವರು. ಇದು ನಿಜವೆ. ಆದರೆ ಮನುಷ್ಯದೇಹವನ್ನು ಧರಿಸಿ ಇರುವಾಗ ಅವನು ಪಾಪವನ್ನು ಆಚರಿಸಬಹುದೆ? ಧರ್ಮಸಂಸ್ಥಾಪನಾರ್ಥವಾಗಿ ಅವತಾರಮಾಡಿ ಪಾಪಚರಣೆಯಿಂದ ಧರ್ಮವನ್ನು ಸಂಸ್ಥಾಪಿಸುವುದು ಅವನ ಉದ್ದೇಶವೆ? ಅವನು ಕೂಡಾ ಹೀಗೆಂದಿಲ್ಲವಲ್ಲಾ! ಗೀತೆಯಲ್ಲಿ—

"ಜನಕಾದಿಗಳೂ ಕರ್ಮದಿಂದಲೇ ಸಿದ್ಧಿಲಾಭವನ್ನು ಪಡೆದರು. ಜನಗಳನ್ನು ದೃಷ್ಟಾಂತದಿಂದ ಸ್ವಧರ್ಮದಲ್ಲಿ ಪ್ರವರ್ತಿಸುವಂತೆ ನೀನು ಕರ್ಮವನ್ನಾಚರಿಸಬೇಕು. ಶ್ರೇಷ್ಠರು ಹೇಗೆ ನಡಸುವರೋ ಇತರರೂ ಹಾಗೇ ಮಾಡುವರು. ಶ್ರೇಷ್ಠರು ಯಾವುದನ್ನು ಮನ್ನಿಸುವರೋ ಲೋಕವು ಅದನ್ನೇ ಒಪ್ಪಿಕೊಳ್ಳುವುದು. ಎಲೈ ಪಾರ್ಥ, ಮೂರು ಲೋಕದಲ್ಲೂ ನಾನು ಮಾಡಬೇಕಾದ ಕೆಲಸವಾವುದೂ ಇಲ್ಲ; ನನಗೆ ಬೇಕಾದುದೂ ಬೇಡವಾದುದೂ ಇಲ್ಲ. ಆದರೂ ನಾನು ಸದಾ ಕರ್ಮವನ್ನು ಮಾಡುತ್ತಲೇ ಇರುತ್ತೇನೆ; ನಾನು ಸದಾ ಪಾಲುಮಾರಿಕೆಯಿಲ್ಲದೆ ಕರ್ಮವನ್ನು ಅನುವರ್ತಿಸದಿದ್ದರೆ ಮನುಷ್ಯರು ಎಲ್ಲೆಲ್ಲೂ ನನ್ನ ಹಾದಿಯನ್ನೇ ಹಿಡಿಯುವರು."

ಭಗವದ್ಗೀತೆ, ಅಧ್ಯಾಯ ೩, ಶೋ|| ೨೦—೨೩

ಆದುದರಿಂದ ಶ್ರೀಕೃಷ್ಣನು ಮನುಷ್ಯಾವತಾರವನ್ನೆತ್ತಿ ಸ್ವಕಾರ್ಯ ನಿದರ್ಶನೆಯಿಂದ ಧರ್ಮಸಂಸ್ಥಾಪನೆಯನು ಮಾಡುವುದೇ ತನ್ನ ಉದ್ದೇಶ ವೆಂದು ಹೇಳಿಯೇ ಇರುವನು. ಮಹಾಪಾಪವು ಸ್ವಕರ್ಮದಿಂದ ದೃಷ್ಟಾಂತ ಪಡುವುದು ಅವನ ಅಭಿಪ್ರಾಯವೆಂದಿಗೂ ಆಗಲಾರದು.

ಇದನ್ನು ನಿಶ್ಚಯಿಸದೆ ನಾನು ಕೃಷ್ಣಚರಿತ್ರೆಗೆ ಕೈಹಚ್ಚಲಿಲ್ಲ. 'ಬೃಂದಾ ವನದ ಗೋಪಿಗಳು" ಮತ್ತು 'ಅಶ್ವತ್ಥಾಮೋ ಹತಃ ಕುಂಜರಃ' ಎಂಬುವುಗಳೇ ಕೃಷ್ಣನ ಮೇಲಿನ ಎಲ್ಲಕ್ಕೂ ಮೀರಿದ ದೋಷಗಳು.

ಇದೇನು? ಅಮೌಲಿಕವೇ? ಅಮೌಲಿಕ ಹೌದೋ ಅಲ್ಲವೋ ಎಂದು ಗುರುತಿಸಲು ನಾವು ಇಟ್ಟುಕೊಂಡಿರುವ ಹೆಗ್ಗುರುತುಗಳ ಪೈಕಿ ಇದೂ ಒಂದು.

(೧) ಶ್ರೇಷ್ಠ ಕವಿಗಳಿಂದ ವರ್ಣಿಸಲ್ಪಟ್ಟ ಚರಿತ್ರೆಗಳು ಸರ್ವಾಂಶ ಗಳಲ್ಲಿಯೂ ಸುಸಂಗತಗಳಾಗಿರುವುವು. ಎಲ್ಲಿಯಾದರೂ ವ್ಯತ್ಯಾಸ ಕಂಡಲ್ಲಿ ಅದನ್ನು ಪ್ರಕ್ಷಿಪ್ತವಿರಬಹುದೆಂದು ಸಂಶಯ ಹುಟ್ಟುವುದು. ಇದಕ್ಕೆ ಉದಾಹರಣೆಯಾಗಿ ಭೀಷ್ಮನ ಪರದಾರ ಪರಾಯಣತೆಯನ್ನೋ ಭೀಮನ ಭೀರುತೆಯ ವರ್ಣನೆಯನ್ನೋ ಕಂಡಲ್ಲಿ ಇದು ಪ್ರಕ್ಷಿಪ್ತವೆಂದು ಖಂಡಿಸ ಬಹುದೆಂಬುದು ನಮ್ಮ ಮತ. ಆದರೆ ಮೇಲಿನ ಉದಾಹರಣೆ ಪಾಪ ಪ್ರಮಾಣದಲ್ಲಿ ಮುಮ್ಮಡಿಗಿಂತ ಮೀರಿದ್ದು. ಪರಮ ಧಾರ್ಮಿಕನಾದ ಯುಧಿಷ್ಠಿರನ ಚರಿತ್ರೆಯೊಡನೆ ಈ ಕ್ರೂರ ವಿಶ್ವಾಸಘಾತುಕತೆಯೂ ಮೋಸವೂ ಗುರುಹತ್ಯವೂ ಸಹ ಎಂದಿಗೂ ಬೆರೆಯಲಾರದು. ಮಹಾ

ತೇಜೋವಂತನೂ ಬಲಗರ್ವಶಾಲಿಯೂ ಭಯಶೂನ್ಯನೂ ಆದ ಭೀಮನ ವಿಷಯದಲ್ಲಿಯೂ ಇದು ಅಸಂಗತ. ಭೀಮನು ಬಾಹುಬಲವೊಂದನ್ನು ಬಿಟ್ಟು ಬೇರೆ ಯಾವುದನ್ನೂ ಮನ್ನಿಸನು. ಶತ್ರುವಿನಮೇಲೆಯೂ ಮತ್ತೆ ಯಾವುದನ್ನೂ ಪ್ರಯೋಗಿಸನು. ರಾಜ್ಯ ಸಿಕ್ಕುವುದನ್ನಾಗಲಿ, ಪ್ರಾಣ ಹೋಗುವುದನ್ನಾಗಲಿ ಲಕ್ಷಿಸನು. ಅಶ್ವತ್ಥಾಮನು ಅನಿವಾರ್ಯವಾದ ದೈವಿಕ ನಾರಾಯಣಾಸ್ತ್ರವನ್ನು ಪ್ರಯೋಗಮಾಡಲು ಪೃಥ್ವಿಯೆಲ್ಲವೂ ಇದರಿಂದ ನಷ್ಟವಾಗಬಹುದಾಗಿತ್ತು. ದಿವ್ಯಾಸ್ತ್ರಗಳನ್ನು ಬಲ್ಲ ಅರ್ಜುನನು ಕೂಡಾ ಅದನ್ನು ತಡೆಯಲಾರದೆಹೋದನು. ಪಾಂಡವ ಸೈನ್ಯವೆಲ್ಲವೂ ನಾಶಹೊಂದುತ್ತ ಬಂದಿತು. ಇದರ ಹಾವಳಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಇದ್ದ ಉಪಾಯ ಒಂದೇ. ಈ ದೈವಾಸ್ತ್ರವು ಸಮರ ಪರಾಙ್ಮುಖನನ್ನು ಹುಟ್ಟಲಾರದು. ಆದುದರಿಂದ ಪ್ರಾಣರಕ್ಷಣಾರ್ಥ ಮತ್ತು ಕೃಷ್ಣನ ಆಜ್ಞಾನುಸಾರ—ಸಮಸ್ತ ಪಾಂಡವ ಸೇನೆಯೂ ಮತ್ತು ಸೇನಾಪತಿಗಳೂ ರಥವಾಹನಗಳನ್ನು ಬಿಟ್ಟು ನೆಲದಮೇಲೆ ನಿಂತು ಅಸ್ತ್ರಶಸ್ತ್ರಗಳನ್ನು ಬಿಸುಟು ವಿಮುಖರಾಗಿ ನಿಂತರು. ಕೃಷ್ಣನ ಆಜ್ಞೆಯಿಂದ ಅರ್ಜುನನೂ ಹೀಗೆಯೇ ಮಾಡಿದನು. ಭೀಮನು ಮಾತ್ರ ಇದಕ್ಕೆ ಒಪ್ಪದೆ—

"ನಾನು ಶರಸಮೂಹಗಳನ್ನು ಬಿಟ್ಟು ಅಶ್ವತ್ಥಾಮನ ಅಸ್ತ್ರವನ್ನು ಪಡೆಯುತ್ತೇನೆ. ಈ ಸುವರ್ಣಮಯವಾದ ಭಾರವಾದ ಗದೆಯನ್ನು ಎತ್ತಿ ದ್ರೋಣಪುತ್ರನ ನಾರಾಯಣಾಸ್ತ್ರವನ್ನರೆದು ಯಮನಹಾಗೆ ರಣರಂಗದಲ್ಲಿ ಅಲೆಯುವೆನು. ಭೂಮಂಡಲದ ನಡುವೆ ಸೂರ್ಯನಿಗೆ ಸಮಾನವಾದ ಜ್ಯೋತಿ ಹೇಗೆ ಇಲ್ಲವೋ ಹಾಗೆ ನನ್ನ ಸಮಾನವಾದ ಪರಾಕ್ರಮಶಾಲಿ ಮತ್ತಾರೂ ಇಲ್ಲ. ನನ್ನ ಈ ಐರಾವತದ ಸೊಂಡಲಿನಂತೆ ದೃಢವಾಗಿರುವ ಭುಜಗಳನ್ನು ನೋಡಿದರೆ ಹಿಮಾಲಯವನ್ನಾದರೂ ಉರುಳಿಸುವುದಕ್ಕೆ ಅದು ಸಾಕಾಗಿವೆ. ನಾನು ಹತ್ತುಸಹಸ್ರ ಆನೆಯ ಬಲವುಳ್ಳವನು. ದೇವಲೋಕದಲ್ಲಿ ಪುರಂದರನು ಹೇಗೋ ನರಲೋಕದಲ್ಲಿ ನಾನೂ ಹಾಗೆ ಇದುರಿಲ್ಲದವನು. ಇಂದು ದ್ರೋಣಪುತ್ರನ ಅಸ್ತ್ರವನ್ನು ನಿವಾರಿಸಿ ನನ್ನ ಬಾಹುಬಲವನ್ನು ತೋರಿಸುವೆನು. ಈ ನಾರಾಯಣಾಸ್ತ್ರದ ಎದುರಿಗೆ ಯಾರೂ ನಿಲ್ಲದೆ ಹೋದರೆ ನಾನೊಬ್ಬನೇ ಸಮಸ್ತರ ಸಮಕ್ಷದಲ್ಲಿಯೇ ಈ ಅಸ್ತ್ರವನ್ನೆದುರಿಸುವೆನು."

ಎಂದು ಹೇಳಿರುವನು. ಬಡಾಯಿಯೇನೋ ಹೆಚ್ಚು. ಇದನ್ನು ಒಪ್ಪಿಕೊಳ್ಳುತ್ತೇನೆ. ಮಾತು ನಗುಪಾಟಲಾದದ್ದೂ ಅಹುದು. ಇದು ಸತ್ಯವೆಂದು ಯಾರೂ ಒಪ್ಪಬೇಕಾಗಿಲ್ಲ. ಕವಿಯಿಂದ ರಚಿತವಾದ

ಚಾರಿತ್ರಕ ಚಿತ್ರದ ಸುಸಂಗತಿಯನ್ನು ಕುರಿತು ನಾವಾಲೋಚಿಸುತಲಿರುವೆವು. ನಾರಾಯಣಾಸ್ತ್ರವನ್ನು ಬಿಟ್ಟದ್ದು ಮೌಲಿಕವಲ್ಲದಿರಬಹುದು. ಆದರೆ, ಮೌಲಿಕ ಮಹಾಭಾರತದಲ್ಲೆಲ್ಲ ಭೀಮ ಚಾರಿತ್ರ ಇದೇ ಅಚ್ಚಿನ ಎರಕ. ಇಂಥ ಭೀಮನ ವಿಷಯದಲ್ಲಿ ನರಿಯಂತೆ ದ್ರೋಣನನ್ನು ಮೋಸಗೊಳಿಸಿದ್ದು ಎಷ್ಟುಮಟ್ಟಿಗೆ ಒಪ್ಪೀತು. ಹೆಂಗಸೂ ಕೂಡ ಹೇಸುವ ಶತ್ರುವಧೋಪಾಯ ಭೀಮನಂಥವನಿಂದ ಆದೀತೆ? ದ್ರೋಣಾಚಾರ್ಯನಿಗಿಂತಲೂ ಸಹಸ್ರಪಾಲು ಭಯೋತ್ಪಾದಕವಾದುದು ನಾರಾಯಣಾಸ್ತ್ರ. ಆದರೂ ಇದರ ಮುಂದೆ ಸಿಂಹದಂತೆ ಗರ್ವದಿಂದ ನಿಂತು ಯಾರೇನೆಂದರೂ ಕೇಳದೆ, ಕೃಷ್ಣಾರ್ಜುನರು ಬಲವಂತ ರಥದಿಂದ ಎಳೆದು ಅಸ್ತ್ರಶಸ್ತ್ರಗಳನ್ನು ಕಿತ್ತುಕೊಂಡರೂ ಕೊಡದೆ, ಇದ್ದಂಥವನು (ಅರ್ಜುನನ) ಸಮಗಟ್ಟನವನಾದ ದ್ರೋಣನಿಗೆ ಹೆದರಿ ನರಿಯ ಮರಿಯಂತೆ ನಟಿಸಿದನೆಂಬ ಹೇಯವಾದ ಬರಹವನ್ನು ಬೆರಸಿದ ಕವಿಯಿಂದ ಮಹಾಭಾರತ ಬರೆಯಲಾದೀತೆ?

ಭೀಮ ಯುಧಿಷ್ಠಿರರ ವಿಷಯದಲ್ಲಿ ಅಶ್ವತ್ಥಾಮವೆಂಬ ಆನೆಯ ಸಂಗತಿ ಎಷ್ಟು ಅಸಂಗತವೋ, ಅದಕ್ಕಿಂತ ಅತಿಶಯವಾಗಿ ಕೃಷ್ಣನ ವಿಷಯದಲ್ಲಿಯೂ ಅಸಂಗತ. ಈ ಅಸಂಗತದ ಪರಿಮಾಣವೆಷ್ಟೆಂಬುದು ಕೃಷ್ಣನ ವಿಷಯವಾಗಿ ನಾವು ಹೇಳಿರುವುದು ಪಾಠಕರ ಮನಸ್ಸಿಗೆ ಬಂದಿದ್ದರೆ ತಿಳಿದೇ ತಿಳಿಯುವುದು. ಬೆಳಕಿಗೂ ಕತ್ತಲೆಗೂ, ಬಿಳುಪಿಗೂ ಕಪ್ಪಿಗೂ, ಬೆಂಕಿಗೂ ನೀರಿಗೂ, ಸಿಹಿಗೂ ಕಹಿಗೂ, ರೋಗಕ್ಕೂ ಸ್ವಸ್ಥತೆಗೂ, ಭಾವಕ್ಕೂ ಅಭಾವಕ್ಕೂ ತಾರತಮ್ಯ ಎಷ್ಟೋ ಅಷ್ಟೇ ಕೃಷ್ಣನಿಗೂ ಈ ಅಶ್ವತ್ಥಾಮವೆಂಬಾನೆಯ ವಿಷಯಕ್ಕೂ ಇರುವುದು. ಮೌಲಿಕವಾದ ಚರಿತ್ರೆಗಳ ಪೈಕಿ ಒಂದರೊಡನೆ ಅಲ್ಲ. ಯಾವುದು ಮೌಲಿಕ, ಯಾವುದು ಮೌಲಿಕವಲ್ಲ ಎಂಬುದನ್ನು ತಿಳಿಯುವುದಕ್ಕಾಗಿ ನಾವು ಗೊತ್ತು ಮಾಡಿಕೊಂಡಿರುವ ಮೂರು ನಿಯಮಗಳಲ್ಲಿ ಒಂದಕ್ಕೂ ಸಂಗತವಲ್ಲದ ಈ ಅಂಶವನ್ನು ನಾವು ತಿರಸ್ಕರಿಸಿ ತಳ್ಳಿಹಾಕತಕ್ಕದ್ದೆಂದು ಹೇಳಬೇಕಾಗಿಲ್ಲ.

(೨) ಇಷ್ಟೇ ಅಲ್ಲ. ಮೌಲಿಕವಾವುದು ಅಮೌಲಿಕವಾವುದು ಎಂದು ಗೊತ್ತುಮಾಡುವುದಕ್ಕೆ ನಾವು ಇಟ್ಟುಕೊಂಡಿರುವ ಲಕ್ಷಣಗಳ ಪೈಕಿ

ಒಂದರಿಂದ ಪರೀಕ್ಷಿಸಲು ಈ ಹತಗಜವೃತ್ತಾಂತ ಮೂಲಭಾರತದ್ದಲ್ಲವೆಂದು ಗೊತ್ತಾಯಿತು. ಈಗ ಇನ್ನೊಂದು ಲಕ್ಷಣದಿಂದ ಇದನ್ನು ಗೊತ್ತುಮಾಡೋಣ. ಪರಸ್ಪರ ವಿರೋಧಕರಗಳಾದ ವರ್ಣನೆಗಳು ಎರಡೂ ಒಂದರ ವಿಷಯದಲ್ಲಿ ಇದ್ದರೆ ಅದರಲ್ಲಿ ಒಂದು ಪ್ರಕ್ಷಿಪ್ತವಾಗಿರಬೇಕು. ಅಶ್ವತ್ಥಾಮವೆಂಬಾನೆಯ ವೃತ್ತಾಂತದ ಜೊತೆಯಲ್ಲಿಯೇ ದ್ರೋಣವಧೆಯ ವೃತ್ತಾಂತವೂ ಸಿಕ್ಕುವುದು. ಇವುಗಳ ಪೈಕಿ ಒಂದೇ ವೃತ್ತಾಂತವು ಸಾಕಾಗಿದ್ದರೂ ಎರಡೂ ಜೋಡಿಯಾಗಿವೆ. ಈ ಎರಡನೆಯ ವೃತ್ತಾಂತವನ್ನು ಬೇರ್ಪಡಿಸಿ ಕೆಳಗೆ ಬರೆದಿದೇನೆ. ಅದನ್ನು ತಿಳಿಯುವುದಕ್ಕೋಸ್ಕರ ಮೊದಲು ಕೆಲವು ವಿಷಯಗಳನ್ನು ಸೂಚಿಸಬೇಕಾಗಿದೆ: ದ್ರೋಣನು ಅಧರ್ಮಯುದ್ಧವನ್ನು ಮಾಡುತ್ತಿದ್ದನು. ಮಹಾಭಾರತದಲ್ಲಿ ಹೇಳುವ ಅನೇಕ ದೈವಾಸ್ತ್ರಗಳ ಪೈಕಿ ಬ್ರಹ್ಮಾಸ್ತ್ರವೂ ಒಂದು. ಈ ದೇಶದಲ್ಲಿ ಈಗಲೂ ಯಾವುದಾದರೂ ಒಂದು ಕಾರ್ಯವನ್ನು ಸಾಧಿಸಬೇಕಾದಾಗ ವ್ಯರ್ಥವಾಗದ ಉಪಾಯಕ್ಕೆ ಬ್ರಹ್ಮಾಸ್ತ್ರವೆನ್ನುವರು. ಇದನ್ನು ಅಸ್ತ್ರಗಳನ್ನು ತಿಳಿಯದವರಮೇಲೆ ಪ್ರಯೋಗಿಸುವುದು ನಿಷಿದ್ಧವೆಂದೂ ಅಧರ್ಮವೆಂದೂ ಋಷಿಗಳು ಹೇಳಿರುತ್ತಾರೆ. ದ್ರೋಣನು ಅಸ್ತ್ರವನ್ನರಿಯದ ಸೈನ್ಯದ ಭಟ್ಟರಮೇಲೆ ಬ್ರಹ್ಮಾಸ್ತ್ರವನ್ನು ಬಿಟ್ಟು ಅವರನ್ನು ಕೊಲ್ಲುತ್ತಿದ್ದನು. ಇಂತಹ ಸಮಯದಲ್ಲಿ,—

“ವಿಶ್ವಾಮಿತ್ರ, ಜಮದಗ್ನಿ, ಭರದ್ವಾಜ, ಗೌತಮ, ವಸಿಷ್ಠ, ಅತ್ರಿ, ಭೃಗು, ಅಂಗಿರಸ, ಸಿಕತ, ಪ್ರಶ್ನಿ, ಗರ್ಗ, ವಾಲಖಿಲ್ಯ, ಮರೀಚಿ ಮತ್ತು ಇತರ ಆಹಿತಾಗ್ನಿಗಳಾದ ಋಷಿಗಳು ಆಚಾರ್ಯನು ಕ್ಷತ್ರಿಯ ವಿರುದ್ಧ ಕರ್ಮವನ್ನು ಮಾಡುವುದನ್ನು ನೋಡಿ ಅವನನ್ನು ಬ್ರಹ್ಮಲೋಕಕ್ಕೆ ಕರೆದುಕೊಂಡುಹೋಗುವ ಅಭಿಲಾಷೆಯಿಂದ ಬೇಗ ಬಂದು, ‘ಎಲೈ ದ್ರೋಣನೆ, ನೀನು ಅಧರ್ಮಯುದ್ಧವನ್ನು ಮಾಡುತಲಿದ್ದಿ; ಆದುದರಿಂದ ನಿನಗೆ ವಿನಾಶಕಾಲವುಂಟಾಗಿರುವುದು. ನೀನೊಂದು ಕ್ಷಣ ಯುದ್ಧವನ್ನು ಬಿಟ್ಟು ನಮ್ಮ ಕಡೆ ನೋಡು. ಇಂಥ ಕೆಲಸ ನಿನಗೆ ಸರಿಯಾದುದಲ್ಲ. ವೇದವೇದಾಂಗ ಪಾರಂಗತನಾಗಿ ಸತ್ಯಧರ್ಮ ಪರಾಯಣನಾದ ನಿನ್ನಂಥವನು ಹೀಗೆ ಪ್ರವರ್ತಿಸುವುದು ಅತ್ಯಂತ ಅನುಚಿತ. ನೀನು ಮೌಢ್ಯವನ್ನು ಬಿಟ್ಟು ಆಯುಧವನ್ನೆಸೆದು ಶಾಶ್ವತವಾದ ದಾರಿಯಲ್ಲಿ ನಡೆಯುವವನಾಗು. ಇಲ್ಲಿಗೆ ನಿನ್ನ ಮರ್ತ್ಯಲೋಕದ ವಾಸ ಮುಗಿಯಿತು. ಎಲೈ ವಿಪ್ರನೆ, ಅಸ್ತ್ರವನ್ನು ತಿಳಿಯದವರಮೇಲೆ ಬ್ರಹ್ಮಾಸ್ತ್ರವನ್ನು ಬಿಟ್ಟು ಅವರನ್ನು ನಾಶಗೊಳಿಸಿ ಬಹಳ ಅಸತ್ಕಾರ್ಯವನ್ನು ಮಾಡಿರುತ್ತಿ. ಆದುದರಿಂದ ಆಯುಧವನ್ನು ಬಿಸುಡು. ಇನ್ನು ಕ್ರೂರಕಾರ್ಯಕ್ಕೆ ನೀನು ಕೈಯಿಕ್ಕಲಾಗದು’ ಎಂದು ಬಲವಂತಪಡಿಸಿದರು.”

ಇದರಿಂದಲೇ ದ್ರೋಣಾಚಾರ್ಯನು ಯುದ್ಧವನ್ನು ಸಾಕು ಮಾಡಿದ್ದು. ಯುಧಿಷ್ಠಿರನಿಂದ ಅಶ್ವತ್ಥಾಮನ ಮೃತ್ಯುವನ್ನು ಕೇಳಿದ ಮೇಲೂ ದ್ರೋಣನು ಯುದ್ಧವನ್ನು ಬಿಟ್ಟರಲಿಲ್ಲ. ಧೃಷ್ಟದ್ಯುಮ್ನನನ್ನು ನಾಶಮಾಡುವುದಕ್ಕೆ ಯತ್ನಿಸಲು ಯದುವಂಶದ ಸಾತ್ಯಕಿ ಬಂದು ಉಳಿಸಿಕೊಂಡನು. ಸಾತ್ಯಕಿ ಯೊಡನೆ ಯಾರಿಂದಲೂ ಯುದ್ಧಮಾಡುವುದಕ್ಕಾಗದೆ ಹೋಯಿತು. ದ್ರೋಣನೂ ಕೂಡ ಹಿಂಜರಿದನು. ಆಗ ಯುಧಿಷ್ಠಿರನು ತನ್ನ ಕಡೆಯ ವೀರರನ್ನು ಕುರಿತು—

"ಎಲೈ ವೀರರೆ! ನೀವೆಲ್ಲರೂ ಪ್ರಯತ್ನಪೂರ್ವಕವಾಗಿ ದ್ರೋಣನಮೇಲೆ ನಡೆಯಿರಿ. ಮಹಾವೀರನಾದ ಧೃಷ್ಟದ್ಯುಮ್ನನು ದ್ರೋಣಾಚಾರ್ಯನ ವಿನಾಶ ಕ್ಕಾಗಿ ಸಾಧ್ಯವಾದಷ್ಟು ಪ್ರಯತ್ನಮಾಡುತಲಿರುತ್ತಾನೆ. ಇಂದು ಸಮರಕ್ಷೇತ್ರದಲ್ಲಿ ದ್ರುಪದನಂದನನ ಕಾರ್ಯಗಳನ್ನು ನೋಡಿದರೆ ಅವನು ಕೋಪಿಸಿಕೊಂಡು ದ್ರೋಣ ನನ್ನು ಕೆಡಹುವನೆಂದು ತೋರುತ್ತದೆ. ಆದುದರಿಂದ ನೀವೆಲ್ಲರೂ ಒಟ್ಟುಗೂಡಿ ಯುದ್ಧ ಮಾಡಿ,"

ಎಂದನು ಪಾಂಡವರ ಕಡೆಯ ವೀರರು ದ್ರೋಣನಿಗೆದುರಾಗಲು— "ಮಹಾರಥನಾದ ದ್ರೋಣನು ಮರಣವು ನಿಶ್ಚಯವೆಂದು ತಿಳಿದು ಒಟ್ಟು ಗೂಡಿ ಬಂದ ವೀರರಮೇಲೆ ಬಹು ವೇಗದಿಂದ ನಡೆಯಲು ಭೂಮಿ ನಡುಗಿತು. ವಾಯು ಭಯಂಕರವಾದ ವೇಗದಿಂದ ಚಲಿಸಿತು. ಮಹತ್ತರ ವಾದ ಮಂಜು ಸೂರ್ಯಾಕಾಶಗಳಿಂದ ಹೊರಚ್ಚಾಗಿ ಭಯಂಕರವಾದ ಉರಿಗಳು ಕಾಣಿಸಿಕೊಂಡು ಎಲ್ಲರಿಗೂ ಭಯ ಸಂಶಯಗಳನ್ನುಂಟುಮಾಡಿತು. ದ್ರೋಣಾಚಾರ್ಯನ ಅಸ್ತ್ರಗಳೆಲ್ಲವೂ ಉರಿದು ಎದ್ದವು. ರಥಗಳು ಭಯಂಕರ ವಾಗಿ ಗರ್ಗರ ಶಬ್ದವನ್ನು ಮಾಡತೊಡಗಿದುವು. ಕುದುರೆಗಳು ಕಣ್ಣೀರ್ಗ ರೆದುವು. ಆಗ ಮಹಾರಥನಾದ ದ್ರೋಣನು ತೇಜೋವಿಹೀನನಾದನು. ಅವನ ಎಡಗಣ್ಣೂ ಎಡಗೈಯೂ ನಡುಗಿದುವು. ಎದುರಿಗಿರುವ ಧೃಷ್ಟ ದ್ಯುಮ್ನನನ್ನು ನೋಡಿ ಉನ್ಮತ್ತನಾಗಿ,—ಬ್ರಹ್ಮವಾದಿಗಳಾದ ಋಷಿಗಳು ವಾಕ್ಯವನ್ನು ನೆನೆದು,—ಧರ್ಮಯುದ್ಧವನ್ನವಲಂಬಿಸಿ ಪ್ರಾಣತ್ಯಾಗವನ್ನು ಮಾಡುವುದಕ್ಕುದ್ಯುಕ್ತನಾದನು."

ಇಲ್ಲಿ ದ್ರೋಣನ ಪ್ರಾಣತ್ಯಾಗದ ಅಭಿಲಾಷೆಯ ಕಾರಣಗಳಲ್ಲಿ ಅಶ್ವತ್ಥಾ ಮನ ಸಾವಿನ ಸುದ್ದಿ ಎಣಿಸಲ್ಪಟ್ಟಿಲ್ಲ. ವಿವೇಚಕರಿಗೆ ಇದೊಂದೇ ಪ್ರಮಾಣ ಸಾಕು.

ಆದರೂ ದ್ರೋಣನು ಯುದ್ಧವನ್ನು ಬಿಡಲಿಲ್ಲ. ಮಹಾಭಾರತಕಾರನು ಹತ್ತು ಸಾವಿರ ಸೈನ್ಯ ಧ್ವಂಸಕ್ಕೆ ಕಡಿಮೆಯಾದ ಮಾತನ್ನಾಡುವುದೇ ಇಲ್ಲ. ಹೀಗೆ ದ್ರೋಣಾಚಾರ್ಯನು ಮೂವತ್ತು ಸಾವಿರ ಸೈನ್ಯವನ್ನು ಕೊಂದನು. ಧೃಷ್ಟದ್ಯುಮ್ನನನ್ನು ತಿರುಗಿ ಸೋಲಿಸಿದನು. ಭೀಮನು ಧೃಷ್ಟದ್ಯುಮ್ನನಿಗೆ ಅಡ್ಡಲಾಗಿ ದ್ರೋಣನ ರಥವನ್ನು ಹಿಡಿದು* (ಭೀಮನು ರಥಗಳನ್ನು ಹಿಡಿದು ಉರುಳಿಸಿ ಒಡೆಯುವುದು ಅವನಿಗೆ ಸ್ವಭಾವ.) ಹಿಂದೆ ಉದಾಹರಿಸಿರುವಂತೆ ತೀವ್ರವಾದ ತಿರಸ್ಕಾರವನ್ನು ಮಾಡಿದನು. ಇದರಿಂದ ದ್ರೋಣನು ನಿಶ್ಚಯವಾಗಿಯೂ ಆಯುಧವನ್ನು ಬಿಸುಟನು. ಆಮೇಲೆ ರಥದಲ್ಲಿ ಅಸ್ತ್ರಗಳನ್ನೆಲ್ಲ ರಾಶಿಹಾಕಿ ಯೋಗವನ್ನವಲಂಬಿಸಿ ಸಮಸ್ತ ಜೀವಿಗಳಿಗೂ ಅಭಯವನ್ನು ಕೊಟ್ಟನು. ಆಗ ಮಹಾವೀರನಾದ ಧೃಷ್ಟದ್ಯುಮ್ನನು ರಂಧ್ರವನ್ನು ಕಂಡು ತನ್ನ ಭೀಷಣವಾದ ಶರಾಸನವನ್ನು ರಥದಲ್ಲಿ ಇಟ್ಟು ಕತ್ತಿಯನ್ನು ಹಿಡಿದು ದ್ರೋಣನಿಗಿದಿರಾಗಿ ಬಂದು ಅವನನ್ನು ಹಿಡಿದನು. ಹೀಗೆ ಧೃಷ್ಟದ್ಯುಮ್ನನಿಗೆ ದ್ರೋಣನು ಸಿಕ್ಕಿಕೊಳ್ಳಲು ಮಹತ್ತರವಾದ ಹಾಹಾಕಾರ ಶಬ್ದವೆದ್ದಿತು. ಇತ್ತಕಡೆ ಜ್ಯೋತಿರ್ಮಯನೂ ಮಹಾ ತಪಸ್ವಿಯೂ ಆದ ದ್ರೋಣನು ಅಸ್ತ್ರಶಸ್ತ್ರಗಳನ್ನು ಬಿಟ್ಟು ಶಾಂತಿ ಭಾವದಿಂದ ಯೋಗವನ್ನವಲಂಬಿಸಿ, ಅನಾದಿಪುರುಷ ವಿಷ್ಣುವನ್ನು ಧ್ಯಾನ ಮಾಡತೊಡಗಿದನು. ಮುಖವನ್ನು ಕೊಂಚ ಮೇಲಕ್ಕೆತ್ತಿ, ವಕ್ಷವನ್ನು ಮುಂದಕ್ಕೆ ಚಾಚಿ ಕಣ್ಣುಗಳನ್ನು ಮುಚ್ಚಿ ವಿಷಯಾದಿ ವಾಸನೆಗಳನ್ನು ಬಿಟ್ಟು ಸಾತ್ತ್ವಿಕ ಭಾವವನ್ನವಲಂಬಿಸಿ, ಏಕಾಕ್ಷರ ವೇದಮಂತ್ರವಾದ ಓಂಕಾರದಿಂದ ಪರಾತ್ಪರನೂ ದೇವದೇವೇಶನೂ ಆದ ವಾಸುದೇವನನ್ನು ಸ್ಮರಿಸುತ್ತ ಸಾಧುಜನರಿಗೂ ದುರ್ಲಭವಾದ ಸ್ವರ್ಗಕ್ಕೆ ತೆರಳಿದನು."

ಆಮೇಲೆ ಧೃಷ್ಟದ್ಯುಮ್ನನು ಕಾಲವಶನಾದ ದ್ರೋಣನ ತಲೆಯನ್ನು ಕತ್ತರಿಸಿ ತೆಗೆದುಕೊಂಡುಹೋದನು.

ದ್ರೋಣನು ಸತ್ತ ಸುದ್ದಿಯನ್ನು ಹೀಗೆ ಬೇರೆ ಬೇರೆಯಾದ ಎರಡು ರೀತಿಯಲ್ಲಿ ಕಾಣುವೆವು. ಎರಡೂ ಸಂಪೂರ್ಣವಾಗಿ ವಿರೋಧವಾದುವೂ

*ರಥಗಳು ಈಗಿನ ಯಕ್ಕ (ಇದು ಒಂದು ತರಹ ಒಂಟಿ ಕುದುರೆಗಾಡಿ) ಗಳಂಥವಾದರೆ, ಈಗಿನವರೂ ಇಂಥಾ ಕೆಲಸವನ್ನು ಮಾಡಬಹುದು.

ಅಲ್ಲದೆ ಒಂದೇ ಕಡೆಯಲ್ಲಿಯೇ ಬೆರಸಲ್ಪಟ್ಟು ಇವೆ. ಅದರಲ್ಲೂ ಚೆನ್ನಾಗಿ ಮಿಳಿತವಾಗಿಲ್ಲ. ಒರಟು ಒರಟಾಗಿ ಶತ್ರುಗಳ ಕಾರ್ಯಗಳು ಅಲ್ಲಲ್ಲೇ ಜೋಡಣೆಯಿಲ್ಲದೆ ಇವೆ. ಇವೆರಡರ ಪೈಕಿ ಒಂದೇ ದ್ರೋಣನ ಸಾವಿಗೆ ಸಾಕಾಗಿರುವಾಗ ಇನ್ನೊಂದರಿಂದ ಪ್ರಯೋಜನವೇನು? ಒಬ್ಬನೇ ಕವಿ ಹೀಗೆ ಎರಡು ಬಗೆಯಾಗಿ ವರ್ಣಿಸುವ ಸಂಭವವಿಲ್ಲ. ಆದುದರಿಂದ ಇಬ್ಬರು ಬೇರೆ ಬೇರೆ ತರದ ಕವಿಗಳು ಬೆರಸಿದ ಬರಹವೆಂದು ಹೇಳಬೇಕು. ಇವುಗಳಲ್ಲಿ ಯಾವುದು ಪ್ರಕ್ಷಿಪ್ತ! ಮೇಲೆ ಎತ್ತಿರುವ ದ್ರೋಣನ ಪ್ರಾಣತ್ಯಾಗದ ಇಚ್ಛೆಯಲ್ಲಿ ಅಶ್ವತ್ಥಾಮನ ಮೃತ್ಯುವಿನ ಮಾತೇ ಇಲ್ಲ. ಆದುದರಿಂದ ಅಶ್ವತ್ಥಾಮನು ಸತ್ತ ಸಮಾಚಾರವು ಪ್ರಕೃತಕ್ಕೆ ಅಸಂಭವ. ಈಗ ನಾವು ಮೊದಲು ಸೂಚಿಸಿರುವ ಸೂತ್ರಗಳನ್ನು ಜ್ಞಾಪಿಸಿಕೊಂಡರೆ ಇದು ಗೊತ್ತಾಗುವುದು.

ಪರಸ್ಪರ ವಿರೋಧಕರಗಳಾದ ವರ್ಣನೆಗಳಲ್ಲಿ ಒಂದು ಪ್ರಕ್ಷಿಪ್ತವೆಂದು ಮೊದಲೇ ಸೂಚಿಸಿರುವೆವು. ಅವುಗಳಲ್ಲಾವುದು ಪ್ರಕ್ಷಿಪ್ತವೆಂಬುದಕ್ಕೆ ಅನ್ಯ ಲಕ್ಷಣಗಳಿಂದ ಪರಸ್ಪರ ವಿರೋಧಕರಗಳೆಂದು ಗೊತ್ತಾಗತಕ್ಕದ್ದು ಪ್ರಕ್ಷಿಪ್ತವೆಂದು ಬಿಡತಕ್ಕದ್ದು. ಅಶ್ವತ್ಥಾಮವಧ ಸಂವಾದ ವಿಷಯವು ಕೃಷ್ಣ, ಭೀಮ, ಯುಧಿಷ್ಠಿರರ ವಿಷಯದಲ್ಲಿ ಅಸಂಗತವಾಗಿರಲು ನಾವು ಅಸಂಗತವಾದುದನ್ನು ಪ್ರಕ್ಷಿಪ್ತವೆಂದು ಗೊತ್ತುಮಾಡಿಕೊಂಡು ಇರುವಲ್ಲಿ, ಅಶ್ವತ್ಥಾಮವಧ ಸಂವಾದವೇ ಪ್ರಕ್ಷಿಪ್ತವಾಗಿರಬೇಕು. ಇದಕ್ಕೆ ಸಂದೇಹವಿಲ್ಲ.

(೩) ಇನ್ನೂ ಒಂದು ಮಾತುಂಟು. ಅಶ್ವತ್ಥಾಮನ ಮೃತ್ಯುವಿನ ವಾರ್ತೆಯಿಂದ ದ್ರೋಣನು ಕೊಂಚವೂ ಯುದ್ಧವನ್ನು ಸಡಲಿಸಲಿಲ್ಲ. ಆದಕಾರಣ ಕೃಷ್ಣನು ಏತಕ್ಕೆ ಈ ಉಪಾಯವನ್ನು ಸೂಚಿಸಿದನು? ದ್ರೋಣನು ಯುದ್ಧವನ್ನು ಬಿಡಬಹುದೆಂಬ ನಂಬಿಕೆಯಿಂದಲ್ಲವೆ? ನಂಬಿಕೆ ತಾನೇ ಎಲ್ಲಿ! ಅಶ್ವತ್ಥಾಮನು ಚಿರಂಜೀವಿಯೆಂಬುದನ್ನು ದ್ರೋಣನು ಬಲ್ಲವನಾಗಿದ್ದನು. ಇದು ಅನೈಸರ್ಗಿಕವೆಂದಲ್ಲವೇ ಬಿಟ್ಟುಬಿಡಬೇಕು? ಸಾಮಾನ್ಯ ಜೀತಗಾರನೊಬ್ಬನು ಯೋಚಿಸುವಷ್ಟು ಬುದ್ಧಿಯಾದರೂ ಕೃಷ್ಣನಿಗೆ ಇತ್ತು ಎಂದು ಒಪ್ಪುವುದಾದರೆ ಅವನಿಂದ ಇಂತಹ ಪರಾಮರ್ಶ ಬರುವ ಸಂಭವವಿಲ್ಲ.

ದ್ರೋಣನಾಗಲಿ, ಇನ್ಯಾರಾದರಾಗಲಿ ಇಂಥಾ ಮಾತನ್ನು ಕೇಳಿ ಆತ್ಮಹತ್ಯೆವನ್ನು ಮಾಡಿಕೊಳ್ಳುವುದಕ್ಕೆ ಮುಂಚೆ ತನ್ನ ಕಡೆಯ ಒಬ್ಬಿಬ್ಬರನ್ನಾದರೂ ಈ ವಿಷಯದ ನಿಜತ್ವವನ್ನು ವಿಚಾರಿಸಿ ಅಶ್ವತ್ಥಾಮನನ್ನು ಹುಡುಕುವುದಕ್ಕೆ ಕಳುಹಿಸಬೇಡವೆ? ಹೀಗಾದರೆ ಮೋಸ ತಕ್ಷಣವೇ ಬೈಲಿಗೆ ಬರುವುದಲ್ಲವೆ!

ಆದುದರಿಂದ ಇದು ಮೊದಲಿಗೆ ಪ್ರಕ್ಷಿಪ್ತ. ಎರಡನೆಯದು ಸುಳ್ಳು. ಋಷಿಗಳ ವಾಕ್ಯಗಳನ್ನು ಕೇಳಿ ಅಸ್ತ್ರವನ್ನು ದ್ರೋಣನು ಬಿಸುಟದ್ದೇ ಸರಿ ಎಂದು ನಾನೆನ್ನುವುದಿಲ್ಲ. ಋಷಿಗಳು ಆ ರಣಕ್ಷೇತ್ರಕ್ಕೆ ಬರುವುದು ಅನೈಸರ್ಗಿಕ ಮತ್ತು ಅಪ್ರಕೃತ. ಇದರಲ್ಲಿ ಪ್ರಕೃತ ಅಥವಾ ವಿಶ್ವಾಸ ಯೋಗ್ಯವಾದ ಮಾತು, ದ್ರೋಣನು ಅಧರ್ಮಾಚರಣೆಯನ್ನು ಮಾಡುತ್ತಲಿರುವಾಗ ಭೀಮನ ತಿರಸ್ಕಾರ ಮನಸ್ಸಿಗೆ ತಗಲಿರಬಹುದು. ಯುದ್ಧವನ್ನು ಬಿಟ್ಟು ವಿಮುಖನಾಗುವುದು ಅವನಿಂದಾಗದ್ದು. ಅಪಟುತೆ ಮತ್ತು ದುರ್ಯೋಧನನನ್ನು ವಿಪತ್ಕಾಲದಲ್ಲಿ ಪರಿತ್ಯಾಗಮಾಡಿದ ದೋಷ, ಇವುಗಳಿಂದ ಅವನು ದೂಷಿತನಾಗಬೇಕಾಗುವುದು. ಆದುದರಿಂದ ಮೃತ್ಯುವನ್ನೇ ನಿಶ್ಚಯಮಾಡಿಕೊಂಡಿರಬೇಕು. ಇಷ್ಟರಮಟ್ಟಿಗೆ ವಾರ್ತೆಯಿರಲು ಮಹಾಭಾರತದ ಮೂಲಕವಿ ತನ್ನ ಕವಿತೆಯನ್ನು ನಿರ್ಮಿಸಿದಾನೆ. ಅದೂ ವಾಸ್ತವಿಕವಲ್ಲದಿರಬಹುದು. ದ್ರೋಣನು ಯುದ್ಧದಲ್ಲಿ ದ್ರುಪದನ ಮಗನಿಂದ ಕೊಲ್ಲಲ್ಪಟ್ಟಿರಬಹುದು. ಆಮೇಲೆ (ಸತ್ತಮೇಲೆ) ಹೇಳಿರುವುದರಿಂದ ಹೀಗೆಯೇ ತಿಳಿಯುವುದು. ಪ್ರಬಲ ಪರಾಕ್ರಮಿಯಾದ ಪಾಂಚಾಲ ವಂಶವನ್ನು ಬ್ರಹ್ಮಹತ್ಯಾ ಕಳಂಕದಿಂದ ಉದ್ಧಾರಮಾಡುವುದಕ್ಕಾಗಿ ಹೀಗೆ ಹಲವು ಬಗೆಯ ಕಥೆಗಳು ನಿರ್ಮಿತವಾಗಿವೆ.

(೪) ಅನುಕ್ರಮಣಿಕಾ ಮತ್ತು ಪರ್ವಸಂಗ್ರಹಾಧ್ಯಾಯಗಳಿರುವುದನ್ನು ನೋಡೋಣ. ಅನುಕ್ರಮಣಿಕಾಧ್ಯಾಯದ ಧೃತರಾಷ್ಟ್ರ ವಿಲಾಪದಲ್ಲಿ ಹೀಗೆ ಇದೆ:—

> ಯದಾ ಶ್ರೌಷಂ ದ್ರೋಣಮಾಚಾರ್ಯಮೇಕಂ ।
> ಧೃಷ್ಟದ್ಯುಮ್ನೇನಾಭ್ಯತಿಕ್ರಮ್ಯ ಧರ್ಮ್ಯಂ ॥
> ರಥೋಪಸ್ಥೇ ಪ್ರಾಯಗತಂ ವಿಶಸ್ತ್ರಂ ।
> ತದಾ ನಾಶಂಸೇ ವಿಜಯಾಯ ಸಂಜಯ ॥

ಅರ್ಥ:—ಹೇ ಸಂಜಯ, ಆಚಾರ್ಯನಾದ ದ್ರೋಣನೊಬ್ಬನೇ ಪ್ರಾಯೋಪವಿಷ್ಟನಾಗಿ ರಥದಲ್ಲಿರುವಾಗ ಧೃಷ್ಟದ್ಯುಮ್ನನು ಧರ್ಮವನ್ನು ಮೀರಿ ಅವನನ್ನು ಕೊಂದಿರಲು ಜಯ ವಿಷಯದಲ್ಲಿ ನನಗೆ ಸಂಶಯ ವುಂಟಾಗಲಿಲ್ಲ.

ಆದುದರಿಂದ ಧೃಷ್ಟದ್ಯುಮ್ನನ ವಿನಾ ಮತ್ತಾರೂ ದ್ರೋಣನ ವಧೆಯಲ್ಲಿ ಅಧರ್ಮಾಚರಣೆಯನ್ನು ಮಾಡಲಿಲ್ಲ. ಪ್ರಾಯೋಪವಿಷ್ಟನಾದ ವೃದ್ಧನನ್ನು ಧೃಷ್ಟದ್ಯುಮ್ನನು ಕೊಂದದ್ದೇ ಅವನ ಪಾಪಕೃತ್ಯ. ದ್ರೋಣನು ಏತಕ್ಕೋಸ್ಕರ ಪ್ರಾಯೋಪವಿಷ್ಟನಾದನೆಂಬುದು ಇಲ್ಲಿಲ್ಲ. ಯುಧಿಷ್ಠಿರ ವಾಕ್ಯ, ಋಷಿಗಳ ಮಾತು, ಭೀಮನ ತಿರಸ್ಕಾರ–ಇವುಗಳಾವುದರಿಂದಲೂ ಇದಕ್ಕೆ ಕಾರಣ ದೊರೆಯುವುದಿಲ್ಲ. ಅವನು ಬಳಲಿಯೇ ಸತ್ತುಹೋದನೆಂಬುದನ್ನು ಆಮೇಲೆ ನೋಡಬಹುದು. ಮೃತ್ಯು ಒದಗಿ ಬಂದಿರುವುದೇ ಬ್ರಾಹ್ಮಣನ ಪ್ರಾಯೋಪವೇಶಕ್ಕೆ ಕಾರಣ.

(೫) ಪರ್ವಸಂಗ್ರಹಾಧ್ಯಾಯದಲ್ಲಿ "ದ್ರೋಣೇ ಯುಧಿ ನಿಪತಿತೇ" ಎಂಬ ಮಾತು ವಿನಾ ಮತ್ತೇನೂ ಇಲ್ಲ. ಹತಗಜದ ವಿಷಯ ನಿಜವಾಗಿದ್ದರೆ ಅದರ ಪ್ರಸಂಗ ಇಲ್ಲಿ ಅವಶ್ಯವಾಗಿಯೂ ಇರಲೇಬೇಕು. ಅಭಿಮನ್ಯು ಅಧರ್ಮಯುದ್ಧದಲ್ಲಿ ಸತ್ತದ್ದು ಇಲ್ಲಿ ಇದೆ; ದ್ರೋಣನಿಗೂ ಹಾಗೆಯೇ ಇರುತ್ತಿತ್ತು. ಇದು ಆಗ್ಗೆ ತಯಾರಾಗಿರಲಿಲ್ಲವಾದದ್ದರಿಂದ ಇಲ್ಲಿ ಇಲ್ಲ.

(೬) ದ್ರೋಣಪರ್ವದ ೭ನೆಯ ಮತ್ತು ೮ನೆಯ ಅಧ್ಯಾಯಗಳಲ್ಲಿ ದ್ರೋಣನು ಮಾಡಿದ ಯುದ್ಧದ ಸಂಕ್ಷೇಪ ವರ್ಣನೆಯಿದೆ. ಅಲ್ಲೂ ಈ ಮೋಸದ ಪ್ರಸಂಗವೇ ಇಲ್ಲ. ಧೃಷ್ಟದ್ಯುಮ್ನನು ದ್ರೋಣನನ್ನು ಕೆಡಹಿದನು ಎಂದು ಮಾತ್ರ ಇದೆ. ಈ ಅಧ್ಯಾಯಗಳನ್ನು ಬರೆದಾಗಲೂ ಮೇಲಿನ ಕಥೆ ತಯಾರಾಗಿರಲಿಲ್ಲ.

(೭) ಆಶ್ವಮೇಧಿಕ ಪರ್ವದಲ್ಲಿ ಕೃಷ್ಣನು ದ್ವಾರಕಿಗೆ ಹಿಂದಿರುಗಿದ ಮೇಲೆ ವಸುದೇವನು ಕೃಷ್ಣನಿಂದ ಯುದ್ಧವೃತ್ತಾಂತವನ್ನು ಕೇಳಲಿಚ್ಛೈಸಿದಾಗ ಕೃಷ್ಣನು ಸಂಕ್ಷೇಪವಾಗಿ ಈ ವೃತ್ತಾಂತಗಳನ್ನು ತಿಳಿಸಿರುವನು. ಅಲ್ಲಿ ದ್ರೋಣಾಚಾರ್ಯನು ಧೃಷ್ಟದ್ಯುಮ್ನನೊಡನೆ ಐದು ದಿನಗಳು ಯುದ್ಧಮಾಡಿ ಆಯಾಸದಿಂದ ಬಳಲಿ ಬೇಸತ್ತಿರುವಾಗ ಧೃಷ್ಟದ್ಯುಮ್ನನಿಂದ ಕೊಲ್ಲಲ್ಪಟ್ಟನು

ಎಂದು ಹೇಳಿದ್ದಾನೆ. ಇಷ್ಟೇ ಸರಿ ಎಂದು ತೋರುವುದು: ಯುವ್ವನಸ್ಥ ನೊಡನೆ ವೃದ್ಧನು ಯುದ್ಧಮಾಡಿ ಬಳಲಿ ಬೇಸತ್ತಿದ್ದುದೇ ದ್ರೋಣನ ಸಾವಿಗೆ ನಿಜವಾದ ಕಾರಣ. ಮಿಕ್ಕುವೆಲ್ಲಾ ಕಟ್ಟುಕಥೆ. ಇದನ್ನು ಏಳು ಬಗೆಯಾಗಿ ರುಜುವಾತುಪಡಿಸಿದ್ದಾಯಿತು.

ಈ ಕಟ್ಟುಕಥೆಯಲ್ಲಿ ಕೃಷ್ಣನನ್ನು ಮಿಥ್ಯಾಪ್ರವಂಚನೆಯಲ್ಲಿ ಸಿಲುಕಿ ಸಲು ಏನುಕಾರಣ? ಜ್ಞಾನವು ಈಶ್ವರದತ್ತ. ಅಜ್ಞಾನವೂ ಭ್ರಾಂತಿಯೂ ಕೂಡ ಹಾಗೆಯೇ. ಜಯದ್ರಥನ ವಧೆಯಲ್ಲಿಯೂ ಕವಿಯು ಇದನ್ನೇ ತೋರಿಸಲು ಯತ್ನಿಸಿದ್ದಾನೆ. ಭ್ರಾಂತಿಯೂ ಈಶ್ವರಪ್ರೇರಿತವೆಂದು ತಿಳಿಸಿ ದಾನೆ. ಘಟೋತ್ಕಚ ವಧೆಯಲ್ಲಿ ಬುದ್ಧಿ ಹೇಗೋ ಹಾಗೆಯೇ ದುರ್ಬುದ್ಧಿಯೂ ಈಶ್ವರಪ್ರೇರಿತವೆಂದು ತೋರಿಸಿರುವನು. ಸತ್ಯಾಸತ್ಯ ಗಳೂ ಕೂಡ ಅವನಿಂದಲೇ ಎಂದು ದ್ರೋಣ ವಧೆಯಲ್ಲಿ ತೋರಿಸಿರುವನು.

ಇದರಮೇಲೆ ನಾರಾಯಣಾಸ್ತ್ರ ಮೋಕ್ಷಪರ್ವಾಧ್ಯಾಯ. ಅದನ್ನು ಸಂಕ್ಷೇಪವಾಗಿ ವಿವರಿಸಿರುವೆನು. ಅನೈಸರ್ಗಿಕವಾದ ನಾರಾಯಣಾಸ್ತ್ರ ವೃತ್ತಾಂತವನ್ನು ವಿಸ್ತರಿಸಿ ಪ್ರಯೋಜನವಿಲ್ಲ. ಇದು ಸಂಪೂರ್ಣವಾಗಿಯೂ ಬಿಡತಕ್ಕದ್ದು. ಆದರೆ ಇಲ್ಲಿಯೊಂದು ರಹಸ್ಯವುಂಟು—

ದ್ರೋಣನು ನೆಲಕ್ಕೆ ಬೀಳಲು ಗುರುವಿಗಾಗಿ ಅರ್ಜುನನು ಬಹು ದುಃಖಿಸಿದನು. ಸುಳ್ಳು ಹೇಳಿ ಗುರುವನ್ನು ಕೊಲ್ಲಿಸಿದ್ದಕ್ಕಾಗಿ ಯುಧಿಷ್ಠಿರ ನನ್ನು ತುಂಬಾ ತಿರಸ್ಕಾರಮಾಡಿರುವನು. ಧೃಷ್ಟದ್ಯುಮ್ನನನ್ನು ಬಯ್ದನು. ಯುಧಿಷ್ಠಿರನು ಒಳ್ಳೆಯ ಮನುಷ್ಯನಾದುದರಿಂದ ಮರುಮಾತಾಡಲಿಲ್ಲ. ಭೀಮನು ಮಾತ್ರ ಕಡುಖಂಡಿತವಾದ ಎರಡು ಮಾತನ್ನಾಡಿದನು. ಧೃಷ್ಟ ದ್ಯುಮ್ನನು ಅರ್ಜುನನನ್ನು ಇನ್ನೂ ಬಲವಾಗಿ ಆಕ್ಷೇಪಿಸಿದನು. ಆಗ ಅರ್ಜುನ ಶಿಷ್ಯನಾದ ಸಾತ್ಯಕಿ ಅರ್ಜುನ ಪಕ್ಷವನ್ನು ವಹಿಸಿ ಧೃಷ್ಟದ್ಯುಮ್ನ ನನ್ನು ಮೂದಲಿಸಿದನು. ಬಡ್ಡಿಯನ್ನು ಸೇರಿಸಿ ಧೃಷ್ಟದ್ಯುಮ್ನನನು ಮೂದಲಿಕೆಯನ್ನು ಸಾತ್ಯಕಿಗೆ ಕೊಟ್ಟನು. ಆಗ ಅವರಿಬ್ಬರಿಗೂ ಮಾರಾ ಮಾರಿ. ಕೃಷ್ಣನ ಇಂಗಿತಾನುಸಾರವಾಗಿ ಭೀಮನೂ ಸಹದೇವನೂ ಅವ ರೀರ್ವರನ್ನೂ ಬೇರೆ ಮಾಡಿದರು. ಸುಳ್ಳು ಹೇಳಿ ದ್ರೋಣನನ್ನು ಕೊಲ್ಲು ವುದು ಕರ್ತವ್ಯವೋ ಅಕರ್ತವ್ಯವೋ ಎಂಬುದನ್ನು ಕುರಿತ ವಿವಾದ. ಈ

ತತ್ತ್ವವನ್ನು ಕುರಿತು ಎರಡು ಪಕ್ಷದವರೂ ಹೇಳಬಹುದಾದ ಮಾತು ಗಳನ್ನೆಲ್ಲಾ ಹೇಳಿಯಾಯಿತು. ಆದರೂ ಕೃಷ್ಣನು ಒಳ್ಳೆಯದು ಕೆಟ್ಟದ್ದು ಯಾವುದನ್ನೂ ಹೇಳಲಿಲ್ಲ. ಕೃಷ್ಣನ ಮಾತಿನಿಂದಲೇ ಹೀಗಾಯಿತೆಂದು ಯಾರೂ ತಿಳಿಸಲಿಲ್ಲವಲ್ಲದೆ ಯಾರೂ ಕೃಷ್ಣನ ಹೆಸರನ್ನೇ ಎತ್ತಲಿಲ್ಲ. ಹಲವು ಕೈವಾಡಗಳಿಲ್ಲದೆ ಇಂಥ ಘಟನೆಗಳುಂಟಾಗಲಾರವು.

ಷಷ್ಠ ಪರಿಚ್ಛೇದ

ಕೃಷ್ಣನು ಹೇಳಿದ ಧರ್ಮತತ್ತ್ವ

ಅಶ್ವತ್ಥಾಮನ ಸಾವಿನ ಸುದ್ದಿಯನ್ನು ಹುಟ್ಟಿಹಾಕಿದ ಕವಿ ಅರ್ಜುನನಿಗೆ ಬಹು ಶ್ರೇಷ್ಠವಾದ ಸ್ಥಾನವನ್ನು ಕೊಟ್ಟಿರುವನು. ಕೃಷ್ಣ, ಯುಧಿಷ್ಠಿರ, ಭೀಮ ಇವರಿಗಿಂತ ಇವನು ಅತ್ಯಂತ ಧರ್ಮಾತ್ಮನೆಂದು ತೋರಿಸಿರುವನು. ಈ ವಾರ್ತೆಯನ್ನು ಕೃಷ್ಣನ ಬಾಯಲ್ಲಿ ಹುಟ್ಟಿಸಿ, ಭೀಮ ಯುಧಿಷ್ಠಿರರ ಮುಖಾಂತರ ಅದರ ಕೊನೆಯನ್ನು ಕಾಣಿಸಿರುವನು. ಅರ್ಜುನನು ಸುಳ್ಳೆಂದು ಅದಕ್ಕೆ ಸಮ್ಮತಿಸದೆ ಇದ್ದುದಲ್ಲದೆ ಈ ವಿಷಯವಾಗಿ ಯುಧಿಷ್ಠಿರ ನನ್ನೂ ವಿಶೇಷವಾಗಿ ಹೀನಾಯಮಾಡಿರುವನಷ್ಟೆ. ಈಗ ನಾವು ವಿವರಿಸು ತ್ತಿರುವುದರಲ್ಲಿ ಇಂಥಾ ಅರ್ಜುನನು ಅತಿಮೂಢನು ಮತ್ತು ಪಾಷಂಡನು. ಕೃಷ್ಣನಿಂದ ಧರ್ಮೋಪದೇಶವನ್ನು ಪಡೆದು ಇವನು ಒಳ್ಳೇ ದಾರಿಯನ್ನವ ಲಂಬಿಸಿದನು.

ದ್ರೋಣನಾದಮೇಲೆ ಕರ್ಣನು ದುರ್ಯೋಧನನ ಸೇನಾಪತಿ ಯಾದನು. ಅವನ ಯುದ್ಧದಲ್ಲಿ ಪಾಂಡವ ಸೇನೆ ಅಲ್ಲಾಡಿಹೋಯಿತು. ಯುಧಿಷ್ಠಿರನು ದುರದೃಷ್ಟವಶನಾಗಿ, ಕರ್ಣನನ್ನೆದುರಿಸಲೆತ್ನಿಸಿ ಅವನಿಂದ ಚೆನ್ನಾಗಿ ಪೆಟ್ಟುತಿಂದು ರಣರಂಗವನ್ನು ಬಿಟ್ಟು ಓಡಿ ಶಿಬಿರದ ಒಳಹೊಕ್ಕು ಹಾಸಿಗೆಯ ಮೂಲೆಯಲ್ಲಿ ಅವಿತುಕೊಂಡನು. ಇತ್ತ ಕಡೆ ಯುದ್ಧದಲ್ಲಿ ಜಯಶಾಲಿಯಾಗಿ ಅರ್ಜುನನು ಯುಧಿಷ್ಠಿರನನ್ನು ಕಾಣದೆ ಚಿಂತಿತನಾಗಿ ಅವನನ್ನು ಹುಡುಕುವುದಕ್ಕೋಸ್ಕರ ಶಿಬಿರಕ್ಕೆ ಬಂದನು. ಆಗ ಇನ್ನೂ

ಕರ್ಣನು ಹತನಾಗಿರಲಿಲ್ಲ. ಯುಧಿಷ್ಠಿರನು ಅರ್ಜುನನಿಂದ ಕರ್ಣನು ಇನ್ನೂ ಹತನಾಗಿಲ್ಲವೆಂಬುದನ್ನು ಕೇಳಿ ಕಿಡಿಕಿಡಿಯಾದನು—ತಾನು ಮಾಡಲಾರದ ಕೆಲಸವನ್ನು ಇನ್ನೊಬ್ಬನು ಮಾಡದೇಹೋದರೆ ಅತ್ಯಂತ ಕೋಪಗೊಳ್ಳುವುದು ಕಾಪುರುಷರ ಲಕ್ಷಣ. ಯುಧಿಷ್ಠಿರನು ಅರ್ಜುನನನ್ನು ಕುರಿತು ಅತ್ಯಂತ ವಿಶೇಷವಾಗಿಯೂ ಕಠಿನವಾಗಿಯೂ ಕರ್ಣವಧೆಯನ್ನು ಮಾಡದಿದ್ದುದಕ್ಕಾಗಿ ಹೀಯಾಳಿಸಿದನು. ಕೊನೆಗೆ ಯುದ್ಧದಲ್ಲಿ ಭೀತನಾಗಿ ನೀನು ಹೀಗೆ ಓಡಿಬರುವಾಗ ನಿನ್ನ ಗಾಂಡೀವವನ್ನು ಕೃಷ್ಣನಿಗಾದರೂ ದಾನಮಾಡಿ ಬರಬೇಕಾಗಿತ್ತು ಎಂದು ಮುಗಿಸಿರುವನು. ಆಗ ಅರ್ಜುನನು ಕತ್ತಿಯನ್ನು ಹಿರಿದು ಯುಧಿಷ್ಠಿರನ ತಲೆಯನ್ನು ಕತ್ತರಿಸುವುದಕ್ಕೆ ಹೋದನು. ಕೃಷ್ಣನು ಇದಕ್ಕೆ ಅಡ್ಡಲಾಗಿ ಬಂದು, ಯಾರನ್ನು ಕೊಲ್ಲಬೇಕೆಂದಿರುವೆ? ಎನ್ನಲು—

"ಗಾಂಡೀವವನ್ನು ಅನ್ಯನಿಗೆ ಸಮರ್ಪಿಸಬೇಕೆಂಬ ಮಾತನ್ನು ನನಗೆ ಯಾರು ಹೇಳುವರೋ ಅವರ ಮಸ್ತಕವನ್ನು ಕತ್ತರಿಸುವೆನೆಂದು ನಾನು ಶಪಥಮಾಡಿರುವೆನು. ಈಗ ನಿನ್ನ ಎದುರಿಗೇ ಮಹಾರಾಜನು ನನಗೀ ಮಾತನ್ನು ಹೇಳಿದಕಾರಣ ಈ ಧರ್ಮಭೀರುವಾದ ನರಪತಿಯನ್ನು ಕೊಂದು ಪ್ರತಿಜ್ಞಾಪರಿಪಾಲನೆಯನ್ನು ಮಾಡಿ ಸತ್ಯದ ಬಗೆಯನ್ನು ಹರಿಸಿಕೊಳ್ಳುವೆನು."

ಎಂದು ಹೇಳಿದನು.

ಇದು ಮೂಢನೂ ಪಾಷಂಡನೂ ಹೇಳುವ ಮಾತೇ ಹೊರತು ಅರ್ಜುನನಂಥವನು ಆಡತಕ್ಕುದಲ್ಲ. ಗಾಂಡೀವವನ್ನು ಬೇರೆಯವನಿಗೆ ಕೊಡು ಎಂದು ಹೇಳುವವನನ್ನು ಖೂನಿಮಾಡಿಬಿಡಬೇಕೆಂಬ ಪ್ರತಿಜ್ಞೆಯೂ ಮೂಢನಿಗೆ ತಕ್ಕದ್ದು. ಇದರಮೇಲೆ ಪೂಜ್ಯಪಾದನಾದ ಹಿರಿಯಣ್ಣನು ಹುರಿಗಟ್ಟುವುದಕ್ಕಾಗಿ ಈ ಮಾತನ್ನಾಡಿರುವಾಗ ಅವನನ್ನು ಕೊಲ್ಲುವುದಕ್ಕೆ ಹೋಗುವುದು ಕೇವಲ ನೀಚನಿಗೆ ತಕ್ಕದ್ದು. ಆದರೆ ಇದರೊಳಗೆ ಗುರುತರವಾದ ವಿಷಯವೊಂದು ಕೃಷ್ಣನಿಂದ ವಿಸ್ತಾರವಾಗಿ ವಿವರಿಸಲ್ಪಟ್ಟದೆ ಎಂದು ತೋರಿಸಲು ಇದನ್ನೆತ್ತಿರುವೆವು.

ಸತ್ಯವು ಪರಮಧರ್ಮ. ಅರ್ಜುನನು ಯುಧಿಷ್ಠಿರನನ್ನು ಕೊಲ್ಲದೆ ಹೋದರೆ ಸತ್ಯಭ್ರಷ್ಟನಾಗುವನು. ಆದುದರಿಂದ ಅರ್ಜುನನು ಸತ್ಯವನ್ನು ಪರಿಪಾಲಿಸುವುದಕ್ಕಾಗಿ ಯುಧಿಷ್ಠಿರನನ್ನು ಕೊಂದುಬಿಡುವುದು

ಕರ್ತವ್ಯವಲ್ಲವೆ? ಎಂದು ಕೃಷ್ಣನನ್ನು ಕೇಳಿದನು. ಪಾಠಕರೆ!,— ನೀವೇ ಹೇಳಿ ಇದಕ್ಕುತ್ತರವೇನು? ಎಲ್ಲರೂ ಒಂದೇ ಮತದಿಂದ ಯುಧಿಷ್ಠಿರನನ್ನು ಕೊಲ್ಲುವುದು ಅರ್ಜುನನ ಕರ್ತವ್ಯವೇನೂ ಅಲ್ಲವೆಂದು ಹೇಳುತ್ತೀರೆಂದು ನಾನೆಂದುಕೊಂಡಿದೇನೆ. ಕೃಷ್ಣನೂ ಹೀಗೆಯೇ ಹೇಳಿದನು. ಆದರೆ ಪಾಶ್ಚಾತ್ಯ ನೀತಿವಿಶಾರದರು ಈಗಿನ ಕಾಲದ ಪಾಠಕರುಗಳಿಗೆ ಯಾವ್ಯಾವ ಕಾರಣಗಳನ್ನುದಾಹರಿಸುವರೋ ಆ ಕಾರಣಗಳೊಂದನ್ನೂ ಕೃಷ್ಣನು ಉದಾಹರಿಸಿರುವುದಿಲ್ಲ. ಅವನು ಪೂರ್ವಕಾಲದ ನೀತಿಗೆ ಕಟ್ಟುಬಿದ್ದೇ ಉತ್ತರವನ್ನು ಕೊಟ್ಟನು. ಹೀಗೆ ಮಾಡಿದ್ದೇಕೆಂಬುದಕ್ಕೆ ಕಾರಣಗಳನ್ನು ತಿಳಿಸಬೇಕಾಗಿಲ್ಲ. ಶ್ರೀಕೃಷ್ಣನು ಭಾರತವರ್ಷದಲ್ಲಿ ಅವತಾರಮಾಡಿರುವನೇ ಹೊರತು ಇಂಗ್ಲೆಂಡಿನಲ್ಲಲ್ಲ. ಅಲ್ಲದೆ ಅವನು ಭಾರತವರ್ಷದ ನೀತಿಯಲ್ಲೇ ಸುಪಂಡಿತನು. ಯೂರೋಪಿನಲ್ಲಿ ನೀತಿ ಆಗ ಇನ್ನೂ ತಯಾರಾಗಿರಲಿಲ್ಲ. ಆದ್ದರಿಂದ ಕೃಷ್ಣನು ಒಂದುವೇಳೆ ಹಾಗೆ ಹೇಳಿದ್ದರೂ ಅರ್ಜುನನಿಗೆ ಅರ್ಥವಾಗುತ್ತಲೂ ಇರಲಿಲ್ಲ.

ಅರ್ಜುನನಿಗೆ ತಿಳಿಸುವುದಕ್ಕಾಗಿ ಕೃಷ್ಣನು ಎತ್ತಿರುವ ಸಕಲ ತತ್ತ್ವಗಳ ಸಾರವನ್ನು ಇಲ್ಲಿ ಉದಾಹರಿಸುವೆವು. ಅದರಲ್ಲಿಯೂ ಎಲ್ಲಿ ವಿವಾದವುಂಟಾಗಬಹುದೋ ಆ ಭಾಗವನ್ನೇ ಎತ್ತಿರುವೆವು.

ಅವನ ಮೊದಲನೇ ಕಾರಣ—"**ಅಹಿಂಸೆ ಪರಮ ಧರ್ಮ.**" ಇದಕ್ಕೆ ಮೊದಲನೇ ಆಪತ್ತಿ ಸಕಲ ಸ್ಥಳಗಳಲ್ಲಿಯೂ ಅಹಿಂಸೆಯು ಪರಮ ಧರ್ಮವಲ್ಲವೆಂಬುದು. ಗೀತೆಯಲ್ಲಿ ಇವನಿಂದಲೇ ತಿಳಿಸಲ್ಪಟ್ಟು ಇರುವ ಯಾವ ನೀತಿಯನ್ನನುಸರಿಸಿ ಅರ್ಜುನನು ಯುದ್ಧಕ್ಕೆ ಹೊರಟನೋ ಅದಕ್ಕೂ ಇದು ವಿರೋಧ.

ಅಹಿಂಸೆಯ ಮರ್ಮವನ್ನು ನಿಜವಾಗಿ ತಿಳಿಯದವನೇ ಈ ಆಪತ್ತಿಯನ್ನೊಡ್ಡುವನು. ಅಹಿಂಸೆ ಪರಮಧರ್ಮವೆಂದರೆ ಯಾವ ಅವಸ್ಥೆಯಲ್ಲಾಗಲಿ ಯಾವ ಪ್ರಕಾರದಲ್ಲಾಗಲಿ ಪ್ರಾಣಿಹಿಂಸೆಯನ್ನು ಮಾಡಿದರೆ ಅಧರ್ಮವೆಂದರ್ಥವೆ? ಅಲ್ಲ. ಪ್ರಾಣಿಹಿಂಸೆಯ ವಿನಾ ನಾವು ಒಂದು ಕ್ಷಣಕಾಲವೂ ಜೀವನವನ್ನು ಧರಿಸಲಾರೆವು. ಇದು ಈಶ್ವರ ನಿಯಮ. ನೀರನ್ನು ಕುಡಿದರೂ ಅದರ ಜೊತೆಯಲ್ಲಿ ಸಾವಿರಾರು ಅಣು

ಜೀವಿಗಳನ್ನು ಹೊಟ್ಟೆಗೆ ತುಂಬುತ್ತೇವೆ. ಪ್ರತಿ ಉಚ್ಛ್ವಾಸದಲ್ಲಿಯೂ ಅನೇಕ ಈ ಬಗೆಯ ಜೀವಿಗಳನ್ನು ಮೂಗಿನ ದಾರಿಯಲ್ಲಿ ಸೆಳೆಯುವೆವು. ಹೆಜ್ಜೆ ಹೆಜ್ಜೆಗೂ ನೂರಾರು ಪ್ರಾಣಿಗಳನ್ನು ತುಳಿದುಬಿಡುವೆವು. ತರಕಾರಿಯ ಒಂದು ಎಲೆ, ಇಲ್ಲವೇ ಒಂದು ಕಾಯಿಯ ದ್ವಾರ ಹಲವು ಪ್ರಾಣಿಗಳನ್ನು ಅಟ್ಟುಣ್ಣುವೆವು. ಇವಿಷ್ಟೂ ಅಜ್ಞಾನ ಕೃತ್ಯಗಳು. ಇವಕ್ಕೆ ಪಾಪವಿಲ್ಲ ಎಂದರೂ ಜ್ಞಾನಪೂರ್ವಕ ಪ್ರಾಣಿಹಿಂಸೆಯಲ್ಲದೆ ನಮ್ಮ ರಕ್ಷಣೆಯಾಗುವುದಿಲ್ಲ. ಒಂದು ಹಾವೋ ಚೇಳೋ ಮನೆಯೊಳಗೆ ಆಶ್ರಯವನ್ನು ಪಡೆದುಕೊಂಡಿರುವಾಗ ನಾವು ಅದನ್ನು ಕೊಲ್ಲದಿದ್ದರೆ ಅದು ನಮ್ಮನ್ನು ಕೊಲ್ಲುವುದು. ಹುಲಿ ನಮ್ಮನ್ನು ಹಿಡಿಯುವುದಕ್ಕೆಂದು ಹಾರಿಬರುವಾಗ ನಾವದನ್ನು ನಾಶಮಾಡದಿದ್ದರೆ ಅದು ನಮ್ಮನ್ನು ಬಿಟ್ಟೀತೆ? ಶತ್ರುವು ವಧೆಗಾಗಿ ಆಯುಧವನ್ನೆತ್ತಿ ಮೇಲೆಬಿದ್ದು ಬರುತ್ತಿರುವಾಗ ಅವನನ್ನು ನಾನು ಕೊಲ್ಲದೇಹೋದರೆ ಅವನು ನನ್ನನ್ನು ಬಿಡುವನೆ? ಕಳ್ಳನು ಆಯುಧವನ್ನು ಹಿಡಿದು ಕತ್ತಲೆಯಲ್ಲಿ ಮನೆಯೊಳಕ್ಕೆ ನುಗ್ಗಿ ದೋಚಿಕೊಂಡು ಹೋಗುತ್ತಿರಲು, ಅವನನ್ನು ಕೊಲ್ಲುವುದನ್ನು ಬಿಟ್ಟು ಬೇರೇ ಉಪಾಯವಿಲ್ಲದಿದ್ದರೆ ನಾನವನನ್ನು ಕೊಂದುಬಿಡುವುದೇ ಧರ್ಮವಲ್ಲವೆ? ವಿಚಾರಕರ ಎದುರಿಗೆ ಖೂನಿ ಪ್ರಮಾಣವಾಗಲು ಗಲ್ಲಿಗೆ ಎತ್ತುವುದು ರಾಜನಿಯೋಗ ಸಮ್ಮತವಾಗಿ ವಿಚಾರಕನು ವಧಾಜ್ಞೆಯನ್ನು ಕೊಡುವುದಕ್ಕೆ ಧರ್ಮವಾಗಿಯೂ ಕಟ್ಟುಬಿದ್ದಿರುವನಲ್ಲವೆ! ಅಲ್ಲದೆ ಯಾವ ರಾಜಪುರುಷರ ಮೇಲೆ ವಧಾರ್ಹನನ್ನು ಕೊಂದುಬಿಡುವ ಭಾರವು ಬೀಳುವುದೋ ಅವರು ಅವನನ್ನು ವಧಿಸಲು ಕಟ್ಟುಬಿದ್ದಿರುವರಲ್ಲವೆ? ಸಿಕಂದರನಾಗಲಿ, ಘಜ್ನಿ ಮುಹಮ್ಮದನಾಗಲಿ, ಅಟಿಲ್ಲನಾಗಲಿ, ಚಂಗೇಜಖಾನನಾಗಲಿ, ನಾದಿರನಾಗಲಿ, ಎರಡನೆಯ ಫ್ರೆಡರಿಕನೋ, ನೆಪೋಲಿಯನ್ನೋ—ಪರಸ್ವತ್ತನ್ನೂ ಪರದೇಶವನ್ನೂ ಅಪಹರಿಸುವುದಕ್ಕಾಗಿ ಅಗಣಿತರಾದ ತಸ್ಕರರನ್ನು ಸೇರಿಸಿಕೊಂಡು, ಪರರಾಷ್ಟ್ರಗಳಮೇಲೆ ನಡೆದ ಪ್ರತಿಯೊಬ್ಬರೂ—ಲಕ್ಷೋಪಲಕ್ಷವಾಗಿ ಬಂದಿದ್ದರೂ ಅವರೆಲ್ಲಾ ವಧಾರ್ಹರಲ್ಲವೆ? ಇಲ್ಲಿ ಹಿಂಸೆಯೇ ಧರ್ಮ.

ಪಕ್ಷಾಂತರದಲ್ಲಿ ಆಕಾಶದಲ್ಲಿ ಹಾರಾಡುತ್ತಿರುವ ಪಕ್ಷಿಯನ್ನು ಆಟಕ್ಕಾಗಿ, ಇಲ್ಲವೇ ಭೋಜನಕ್ಕಾಗಿ ಕೆಡಹುವುದು ಅಧರ್ಮ. ಸಿಹಿಯು

ತಂತುವನ್ನು ಹುಡುಕಿಕೊಂಡು ಹಾರಾಡುತ್ತಿರುವ ಪತಂಗವನ್ನು ಹುಡುಗನು ಆಟಕ್ಕಾಗಿ ಹಿಡಿದು ಕೊಂದರೆ ಅಧರ್ಮ. ಜಿಂಕೆಯೂ ಕೋಳಿಯೂ ನಿಮ್ಮ ನಮ್ಮ ಹಾಗೆಯೇ ಜೀವನವನ್ನು ಮಾಡುವುದಕ್ಕಾಗಿ ಭೂಮಿಗೆ ಬಂದಿರುವುವು. ಹೊಟ್ಟೆಬಾಕನು ಅವುಗಳನ್ನು ಹಿಡಿದು ತಿನ್ನುವುದು ಅಧರ್ಮ. ನಾವು ವಾಯುಮಂಡಲದ ಕೆಳಗಡೆಯಲ್ಲಿ ವಾಸಿಸುವ ಜನಗಳು, ಮೀನುಗಳು ಜಲಮಂಡಲದ ಮೇಲೆ ವಾಸಿಸುವವುಗಳು, ನಾವು ಅದನ್ನು ಹಿಡಿದು ತಿನ್ನುವುದು ಧರ್ಮ.

ಧರ್ಮಪ್ರಯೋಜನವನ್ನು ಬಿಟ್ಟು ಮಾಡುವ ಹಿಂಸೆ ಅಧರ್ಮವೆಂಬುದನ್ನು ಹೇಳುವುದಕ್ಕೇ "ಅಹಿಂಸಾ ಪರಮೋ ಧರ್ಮಃ" ಎಂಬ ವಾಕ್ಯ ಉದಾಹೃತವಾಗಿದೆ. ಅಲ್ಲದೆ ಹಿಂಸಿಸುವವನನ್ನು ಅಡ್ಡಿಮಾಡುವುದರಲ್ಲಿ ಉಂಟಾಗುವ ಹಿಂಸೆ ಅಧರ್ಮವಲ್ಲ. ಅದಕ್ಕೆ ಬದಲು ಪರಮ ಧರ್ಮವೇ ಇದೆಂದು ಸ್ಪಷ್ಟಮಾಡುವುದಕ್ಕಾಗಿ ಶ್ರೀ ಕೃಷ್ಣನು ಅರ್ಜುನನಿಗೆ ಬಲಾಕನ ವೃತ್ತಾಂತವನ್ನು ಹೇಳಿದನು.

ಇದರ ಸಾರಾಂಶ:—ಬಲಾಕನೆಂಬ ವ್ಯಾಧನು ಪ್ರಾಣಿಗಳನ್ನು ವಿಶೇಷವಾಗಿ ನಾಶಮಾಡುತ್ತಿದ್ದ ಕ್ರೂರ ಮೃಗವೊಂದನ್ನು ಕೊಂದೊಡನೆಯೇ—"ಆಕಾಶದಿಂದ ಅವನ ಮೇಲೆ ಪುಷ್ಪವೃಷ್ಟಿಯಾಯಿತು. ಅಪ್ಸರೆಯರ ಮನೋಹರವಾದ ವಾದ್ಯಗೀತಗಳು ಕೇಳಿಸಿದುವು. ಅವನನ್ನು ಸ್ವರ್ಗಕ್ಕೆ ಕರೆದುಯ್ಯಲು ವಿಮಾನ ಬಂತು." ವ್ಯಾಧನ ಪುಣ್ಯವು ಹಿಂಸಕಾರಿಯನ್ನು ಕೊಂದುದೇ!

"ಅಹಿಂಸಾ ಪರಮೋ ಧರ್ಮಃ" ಈ ಅರ್ಥದಲ್ಲಿ ಎಂದರೆ, ಧರ್ಮ ಪ್ರಯೋಜನ ವಿನಾ ಹಿಂಸೆಯನ್ನು ಮಾಡಬಾರದು. ಈ ವಿಷಯವಾಗಿ ಬಹು ಕಾಲದಿಂದಲೂ ದೊಡ್ಡ ಗಲಭೆಯುಂಟಾಗಿರುವುದು. ಧರ್ಮಪ್ರಯೋಜನ ವೆಂದರೇನು? ಯಾವುದು ಧರ್ಮ? Inquisition—*ಇನ್‌ಕ್ವಿಜಿಷನ್ ಮೂಲಕ ಮನುಷ್ಯರನ್ನು ಕೊಲ್ಲುವುದು ಧರ್ಮಪ್ರಯೋಜನವೆಂದು ತಿಳಿದು, ಕೋಟಿ ಕೋಟಿ ಮನುಷ್ಯರು ಯಮನಗರಿಗೆ ತಳ್ಳಲ್ಪಟ್ಟಿರುವರು. ಧರ್ಮಾರ್ಥಕ್ಕಾಗಿಯೇ ಸೆಂಟ್ ಬಾರ್ತಲೋಮಿಯ (I. Barthalomew) ಕೊಲೆಯು ನಡೆದದ್ದು ಧರ್ಮಾಚರಣ ವಿವೇಚನೆಯಿಂದಲೇ. *ಕ್ರೂಸೇಡರ

---

*ಮತಕ್ಕೋಸ್ಕರ ಜನಗಳನ್ನು ಸುಡುವುದು.

ದ್ವಾರಾ ಪೃಥ್ವಿಯು ನರರಕ್ತ ಪ್ರವಾಹದಿಂದ ಕೆಸರಾಯಿತು. ಧರ್ಮಪ್ರಸರಣೆ ಗೆಂತಲೇ ಮುಸಲ್ಮಾನರು ಲಕ್ಷೋಪಲಕ್ಷ ಮನುಷ್ಯರನ್ನು ಕೊಲೆಮಾಡಿದರು. ಧರ್ಮಪ್ರಯೋಜನ ಸಂಬಂಧವೆಂಬ ಭ್ರಾಂತಿಗೆ ಬಿದ್ದು, ಮನುಷ್ಯನು ಮನುಷ್ಯನನ್ನು ಹಿಂಸೆ ಮಾಡಿರುವಷ್ಟು ಇನ್ನಾವ ಕಾರಣದಿಂದಲೂ ಮಾಡಿಲ್ಲ ವೆಂದು ತೋರುತ್ತದೆ.

ಅರ್ಜುನನಿಗೂ ಅಂಥಾ ಭ್ರಾಂತಿಯೇ ಉಂಟಾಗಿತ್ತು. ಅದರಿಂದಲೇ ಸತ್ಯರಕ್ಷಣ ಧರ್ಮಕ್ಕೋಸ್ಕರ ಯುಧಿಷ್ಠಿರನನ್ನು ಕೊಲ್ಲುವುದು ಕರ್ತವ್ಯ ವೆಂದು ಹೊರಟನು. ಈ ಅರ್ಜುನನಿಗೆ "ಅಹಿಂಸಾ ಪರಮೋ ಧರ್ಮಃ" ಎಂದು ಉಪದೇಶಿಸಿದರೆ ಅವನ ಭ್ರಾಂತಿಯು ಹೋದೀತೆ? ಶ್ರೀ ಕೃಷ್ಣನ ಎರಡನೆಯ ಮಾತು.

† ಸುಳ್ಳನ್ನಾದರೂ ಆಡಬಹುದೇ ವಿನಾ ಪ್ರಾಣಿಹಿಂಸೆಯನ್ನು ಮಾತ್ರ ಮಾಡಬಾರದು.

ಇದರ ಮುಖ್ಯ ತಾತ್ಪರ್ಯವು ಅಹಿಂಸೆ ಮತ್ತು ಸತ್ಯ ಇವೆರಡರಲ್ಲಿ ಅಹಿಂಸೆಯೇ ಶ್ರೇಷ್ಠ. ನಾನಾವಿಧವಾದ ಪುಣ್ಯಕರ್ಮಗಳನ್ನು ಧರ್ಮ ಗಳೆಂದೆಣಿಸುವರು. ದಾನ, ತಪಸ್ಸು, ದೇವಭಕ್ತಿ, ಸತ್ಯ, ಶೌಚ, ಅಹಿಂಸೆ, ಇತ್ಯಾದಿ. ಇವುಗಳಲ್ಲಿ ಎಲ್ಲವೂ ಸಮಾನಗಳಲ್ಲ. ಶೌಚ ಮತ್ತು ದಾನ ಮಾಹಾತ್ಮ್ಯವು ಸತ್ಯ ಮತ್ತು ಅಹಿಂಸೆಯ ಮಾಹಾತ್ಮ್ಯಗಳಿಗೆ

---

* ಕ್ರೂಸೇಡು :—ಯೂರೋಪ್ ಕ್ರಿಶ್ಚಿಯನ್ನರು ತಮ್ಮ ಯಾತ್ರಾಸ್ಥಳವಾದ ಜೆರೂಸಲೆಂ ನಗರಿಯನ್ನೂ, ಪ್ಯಾಲೆಸ್ಟೈನ್ ದೇಶವನ್ನೂ ಆ ದೇಶದ ಸರ್ವೋತ್ತಮ ರಾಜಶ್ರೇಷ್ಠನಾದ ಸುಲೇಮಾನ ಆಳ್ವಿಕೆಯಿಂದ ತಪ್ಪಿಸಬೇಕೆಂದು ಪಾದರಿಗಳಿಂದ ಪ್ರೇರಿತರಾಗಿ ಹಲವುವೇಳೆ ದಾಳಿ ನುಗ್ಗಿ ಲಕ್ಷಗಟ್ಲೆ ಜನಗಳನ್ನು ವಧಿಸುತ್ತಿದ್ದರು.

† ಯಾವ ಮಾತಿನಿಂದ ಮೇಲಿನ ತತ್ತ್ವವು ಹುಟ್ಟದೆಯೋ ಅದರ ಮೂಲವನ್ನು ಎತ್ತಿದೆ :

ಪ್ರಾಣಿನಾಮವಧಸ್ತಾತ ಸರ್ವಜ್ಯಾಯಾನ್ಮತೋ ಮಮ ।
ಅನೃತಂ ವಾ ವದೇದ್ವಾಚಂ ನ ತು ಹಿಂಸ್ಯಾತ್ ಕಥಂಚನ ॥

ಇಲ್ಲಿ ಪಾಠಕರಿರಾ, "ಅಹಿಂಸಾ ಪರಮೋ ಧರ್ಮಃ" ಎಂದು ಕೃಷ್ಣನ ಮಾತಿಗೆ ಅರ್ಥ ಮಾಡುವುದು ಸರಿಯಾದ್ದಲ್ಲವೆಂಬುದನ್ನು ನೋಡಬಹುದು. (ನನ್ನ ಮತದಲ್ಲಿ ಪ್ರಾಣಿಗಳನ್ನು ಹಿಂಸಿಸದೇ ಇರುವುವೇ ಎಲ್ಲಕ್ಕಿಂತಲೂ ಒಳ್ಳೆಯದು. ಅರ್ಥದಲ್ಲಿ ವಿಶೇಷ ಭೇದವೇನೂ ಇಲ್ಲವೆಂದು ರೂಢಿಯಲ್ಲಿರುವ "ಅಹಿಂಸಾ ಪರಮೋ ಧರ್ಮಃ" ಎಂಬ ವಾಕ್ಯವನ್ನೇ ವ್ಯವಹರಿಸಿರುತ್ತೇನೆ.)

ಸರಿಯಾದೀತೆ? ತಾರತಮ್ಯವಿರುವುದೆಂದೊಪ್ಪಿದರೆ ಸರ್ವ ಶ್ರೇಷ್ಠವಾವುದು? ಕೃಷ್ಣನು—"ಅಹಿಂಸೆಯೇ ಶ್ರೇಷ್ಠವೆಂದೂ, ಸತ್ಯವು ಎರಡನೆಯ ದರ್ಜೆಯದೆಂದೂ" ಹೇಳುತ್ತಾನೆ.

ನಾವು ಪಾಶ್ಚಾತ್ಯರ ಶಿಷ್ಯರು. ಪಾಠಕರಲ್ಲಿ ಹಲವರು ಈ ಮೇಲಿನ ಮಾತುಗಳನ್ನು ಕೇಳಿ ಬೇಸರಗೊಳ್ಳಬಹುದು. ಯಾವ ಅವಸ್ಥೆಯಲ್ಲೇ ಆಗಲಿ ಸುಳ್ಳನ್ನು ಹೇಳಬಾರದೆಂದಲ್ಲವೇ ಪಾಶ್ಚಾತ್ಯರು ಹೇಳಬಹುದಾದದ್ದು. ಸುಳ್ಳು ಹೇಳಬಾರದು ಸರಿಯೆ. ಅದರ ಪ್ರಸಂಗ ಇಲ್ಲಲ್ಲ. ಪಾಶ್ಚಾತ್ಯ ಮತದಲ್ಲಿ ಒಬ್ಬ ಸುಳ್ಳುಗಾರರು ಕೊಲೆಪಾತಕನಿಗಿಂತ ಹೆಚ್ಚಿನ ಪಾಪಿಷ್ಠನೆಂದು ಅಥವಾ ಸುಳ್ಳುಗಾರನೂ ಕೊಲೆಪಾತಕನೂ ಸಮಾನ ಪಾಪಿಷ್ಠರೆಂದು ಆರಾದರೂ ಹೇಳಲಾದೀತೆ? ಆಗಲಾರದೆಂಬುದಕ್ಕೆ ಯೂರೋಪೀಯ ದಂಡವಿಧಿ (ಪಿನಲ್ ಕೋಡ್) ಶಾಸ್ತ್ರವೇ ಪ್ರಮಾಣವಾಗಿರುವುದು. ಈಗ ಕೃಷ್ಣನಿಗೂ ಪಾಶ್ಚಾತ್ಯ ಶಿಷ್ಯನಿಗೂ ಮತಭೇದದ ಲಕ್ಷಣವಾವುದೂ ಕಾಣುವುದಿಲ್ಲ. ಇಲ್ಲಿ ಬರೀ ಪಾಪಗಳ ತಾರತಮ್ಯ ವಿಚಾರ ನಡೆಯುತ್ತಲಿದೆ. ಯಾವ ಅಧರ್ಮವನ್ನೂ ಯಾವಾಗಲೂ ಮಾಡಬಾರದು. ನರಹತ್ಯವನ್ನೂ ಮಾಡಬಾರದು. ಸುಳ್ಳನ್ನೂ ಹೇಳಬಾರದು. ಆದರೆ ಸುಳ್ಳು ಹೇಳಿದ ಹೊರತು ನರಹತ್ಯ ನಿಲ್ಲಲೇಲಾರದಾಗಿರುವಾಗ ಸುಳ್ಳನ್ನಾದರೂ ಹೇಳಬಹುದು. ನರಹತ್ಯವನ್ನು ಮಾಡಬಾರದು. ಯಾವನಾದರೂ ನರಹತ್ಯವಾದರೂ ಆಗಲಿ ಸುಳ್ಳು ಹೇಳುವುದಿಲ್ಲ ಎಂದು ಸಾಧಿಸುವ ಧರ್ಮಾತ್ಮನಾದ ನೀತಿಜ್ಞನು ಇರುವುದಾದರೆ, ಅವನ ಧರ್ಮ ಅವನಿಗೇ ಇರಲಿ. ಈ ನರಕ ಧರ್ಮಪ್ರಚಾರವು ಭಾರತವರ್ಷದಲ್ಲಿ ವಿರಳವಿರಲೆಂದು ಪ್ರಾರ್ಥಿಸುವೆವು.

ಕೃಷ್ಣನದೂ ಇದೇ ಮತ. ಅರ್ಜುನನು ಇದನ್ನು ಅನುವರ್ತಿಸಿದರೆ ಅಣ್ಣನನ್ನು ಕೊಂದ ಪಾಪದಿಂದ ತಪ್ಪಿಸಿಕೊಳ್ಳುವುದಕ್ಕೆ ದಾರಿ ಸಿಕ್ಕುವುದು. ಆದರೆ—

"ಇದಂತೂ ನಿನ್ನ ಮತವಾಯಿತು. ಲೌಕಿಕ ಮತ್ತು ಪ್ರಚಾರದಲ್ಲಿರುವ ಧರ್ಮವಾವುದು? ನಿನ್ನ ಮತವೇ ಯಥಾರ್ಥವಾಗಿದ್ದು, ಅದು ರೂಢಿಗೆ ಬಂದ ಧರ್ಮಕ್ಕೆ ವಿರೋಧವಾಗಿದ್ದರೆ, ನಾನು ಜನಸಮಾಜದಲ್ಲಿ ಸತ್ಯಭ್ರಷ್ಟನಾಗಿ ಪಾಪಾತ್ಮನೆಂದು ದೂಷಿತನಾಗುವೆನು."

ಎಂದು ಅರ್ಜುನನೆನ್ನಬಹುದು. ಆದುದರಿಂದ ಕೃಷ್ಣನು ತನ್ನ ಮತವನ್ನು ಮೊದಲು ಹೇಳಿ ಪ್ರಚಲಿತವಾದ ಧರ್ಮವನ್ನು ತಿಳಿಸಿದಾನೆ—

"ಎಲೈ ಧನಂಜಯನೇ, ಕುರುಪಿತಾಮಹನಾದ ಭೀಷ್ಮನೂ, ಧರ್ಮರಾಜನಾದ ಯುಧಿಷ್ಠಿರನೂ, ವಿದುರನೂ ಮತ್ತು ಯಶಸ್ವಿನಿಯಾದ ಕುಂತಿಯೂ ಮಾಡಿರುವ ಧರ್ಮರಹಸ್ಯವನ್ನು ಯಥಾರ್ಥರೂಪವಾಗಿ ಹೇಳುತ್ತೇನೆ ಕೇಳು—ಸತ್ಪುರುಷನು ಸತ್ಯವನ್ನೇ ಹೇಳುವನು; ಸತ್ಯಕ್ಕಿಂತಲೂ ಶ್ರೇಷ್ಠವಾದ್ದು ಯಾವುದೂ ಇಲ್ಲ." *

ಸತ್ಯ ತತ್ತ್ವವನ್ನರಿಯುವುದು ಬಹಳ ಕಷ್ಟ. ಆದರೂ ಸತ್ಯವನ್ನು ಪ್ರಯೋಗಿಸುವುದೇ ಅವಶ್ಯ ಕರ್ತವ್ಯ. ಇದಂತೂ ಸ್ಥೂಲ ನೀತಿ. ಇದಾದ ಮೇಲೆ ಬಿಡಬೇಕಾದ ತತ್ತ್ವವನ್ನು ಹೇಳಿದಾನೆ—"ಯಾವ ಸ್ಥಾನದಲ್ಲಿ ಸತ್ಯವು ಸುಳ್ಳಿನಂತೆಯೂ, ಸುಳ್ಳು ಸತ್ಯದಂತೆಯೂ ಇರುವುದೋ ಅಂಥಾ ಸ್ಥಳಗಳಲ್ಲಿ ಸುಳ್ಳನ್ನು ಹೇಳುವುದು ದೋಷವಲ್ಲ."

ಆದರೆ ಹೀಗೆ ಯಾವಾಗಲಾದರೂ ಆಗುವುದುಂಟೆ? ಈ ಮಾತು ಪುನಃ ಬರುವುದು. ಅಲ್ಲಿ ಯಥಾಸಾಧ್ಯ ವಿಚಾರಮಾಡುವೆವು. ಇದಾದ ಮೇಲೆ ಕೃಷ್ಣನು—"ವಿವಾಹ, ರತಿಕ್ರೀಡೆ, ಪ್ರಾಣವಿಯೋಗ, ಸರ್ವಸ್ವಾಪಹರಣ—ಈ ಕಾಲಗಳಲ್ಲೂ ಬ್ರಾಹ್ಮಣನಿಗೋಸ್ಕರಲೂ ಸುಳ್ಳನ್ನು ಹೇಳಿದರೆ ಪಾತಕವಲ್ಲ" ಎಂದು ಹೇಳಿರುವನು.

ಇಲ್ಲಿ ದೊಡ್ಡ ವಿವಾದವುಂಟಾಗುವುದು. ಇದು ಹಾಗಿರಲಿ; ಕಾಳೀಪ್ರಸನ್ನಸಿಂಹರ ಅನುವಾದದಲ್ಲಿ ಮೇಲೆ ಬರೆದಂತೆ ಇದೆ. ಅದು ಒಂದು ಶ್ಲೋಕದ ಅರ್ಥಮಟ್ಟಿಗೆ. ಮೂಲದಲ್ಲಿ ಎರಡು ಶ್ಲೋಕಗಳಿವೆ; † ಈ ಎರಡು ಶ್ಲೋಕಗಳಿಗೂ ಅರ್ಥವೇನೋ ಒಂದೆ. ೧ನೆಯ ಶ್ಲೋಕದಲ್ಲಿ ಬ್ರಾಹ್ಮಣರ ಮಾತಿಲ್ಲ. ಒಂದೇ ಮಾತಿಗೆ ಈ ಎರಡು ಶ್ಲೋಕವೇಕೆಂದು ಪಾಠಕರು ಕೇಳಬಹುದು.

---

* "ನ ಸತ್ಯಾದ್ವಿದ್ಯತೇ ಪರಮ್" ಎಂದು ಕೃಷ್ಣನು ಮೊದಲು ಹೇಳಿರುವನು. "ಪ್ರಾಣಿನಾಮವಧಸ್ತಾತ ಸರ್ವಜ್ಯಾಯಾನ್ಮತೋ ಮಮ" ಎಂದರೆ, ಎರಡೂ ಪರಸ್ಪರ ವಿರೋಧವಾಗುವುವು. ಇವಲ್ಲಿ ಕೊನೆಯದು ಕೃಷ್ಣನ ಮತ. ಮೊದಲಿನದು ಭೀಷ್ಮ ಮೊದಲಾದವರಿಂದ ಹೇಳಲ್ಪಟ್ಟ ರೂಢಿಯಲ್ಲಿನ ಧರ್ಮದ ನೀತಿ.

† ಪ್ರಾಣಾತ್ಯಯೇ ವಿವಾಹೇ ಚ ವಕ್ತವ್ಯಮನೃತಂ ಭವೇತ್ ।
ಸರ್ವಸ್ವಸ್ಯಾಪಹಾರೇ ಚ ವಕ್ತವ್ಯಮನೃತಂ ಭವೇತ್ ॥ ೧ ॥
ವಿವಾಹಕಾಲೇ ರತಿಸಂಪ್ರಯೋಗೇ ಪ್ರಾಣಾತ್ಯಯೇ ಸರ್ವಧನಾಪಹಾರೇ ।
ವಿಪ್ರಸ್ಯ ಚಾರ್ಥೇ ಹ್ಯನೃತಂ ವದೇತ ಪಂಚಾನೃತಾನ್ಯಾಹುರಪಾತಕಾನಿ ॥ ೨ ॥

ಇವೆರಡೂ ಬೇರೆಬೇರೆ ಕಡೆಯಿಂದ ಬಂದವು. ಉದಾಹರಣೆಗಾಗಿ ಆರಿಸಿದ್ದು; ಕೃಷ್ಣನ ಮಾತುಗಳಲ್ಲ. ಸಂಸ್ಕೃತ ಗ್ರಂಥಗಳಲ್ಲಿ ಯಾವುದೋ ಒಂದರಿಂದ ಎತ್ತಿ ಬರೆದರೂ ಇಂಥ ಕಡೆಯಿಂದ ಎತ್ತಿದ್ದೆಂದು ಹೇಳಿಲ್ಲ. ಮಹಾಭಾರತದ ಗೀತಾಪರ್ವಾಧ್ಯಾಯದಲ್ಲಿ ಇದಕ್ಕೆ ಉದಾಹರಣೆಗಳನ್ನು ಇನ್ನೊಂದೆಡೆಯಲ್ಲಿ ಕೊಟ್ಟಿರುವೆನು.

ನಾನು ಸುಮಾರು ಅಂದಾಜಿನಮೇಲೆ ಇವು ಬೇರೇ ಕಡೆಯವು ಎಂದು ಹೇಳಿಲ್ಲ. ಎರಡನೆಯ ಶ್ಲೋಕವು ವಸಿಷ್ಠರ ವಚನ. ಪಾಠಕರು ೧೬ನೆಯ ಅಧ್ಯಾಯದ ೩೫ನೆಯ ಶ್ಲೋಕವನ್ನು ನೋಡಬಹುದು. ಈ ವಾಕ್ಯವು ಆದಿಪರ್ವದ ೩,೪೧೨ನೆಯ ಶ್ಲೋಕದಲ್ಲಿಯೂ ಇದೆ. ಇಲ್ಲಿ ಕೃಷ್ಣನ ಮಾತೇ ಇಲ್ಲ. ಅಲ್ಲಿಯೂ ಕೊಂಚ ಬದಲಾಯಿಸಿರುವುದು :—

ನ ಧರ್ಮಯುಕ್ತಂ ವಚನಂ ಹಿನಸ್ತಿ । ನ ಸ್ತ್ರೀಷು ರಾಜ್ಞ ನ ವಿವಾಹಕಾಲೇ ॥
ಪ್ರಾಣಾತ್ಯಯೇ ಸರ್ವಧನಾಪಹಾರೇ । ಪಂಚಾನೃತಾನ್ಯಾಹುರಪಾತಕಾನಿ ॥

ಎಂದು ಇಲ್ಲಿ ನಾಲ್ಕು ಸುಳ್ಳಿದೆಯೇ ವಿನಾ ಐದಿಲ್ಲ. ಆದರೂ ಪಂಚಾನೃತಾನಿ ಎಂದೇನೋ ಇದೆ. ಹೀಗೆ ರೂಢಿಯ ನುಡಿಗಳು ಬಾಯಿಂದ ಬಾಯಿಗೆ ಬದಲಾವಣೆಯನ್ನು ಹೊಂದುತ್ತ ಹೋಗುವುವು. ಮೊದಲನೆಯ ಶ್ಲೋಕದ ಹಿಂದಿನ ಶ್ಲೋಕಗಳನ್ನೂ ಸೇರಿಸಿ ಕೆಳಗೆ ಬರೆದಿದೇನೆ :—

ಭವೇತ್ ಸತ್ಯಮವಕ್ತವ್ಯಂ ವಕ್ತವ್ಯಮನೃತಂ ಭವೇತ್ ॥ ಕ ॥
ಯತ್ರಾನೃತಂ ಭವೇತ್ ಸತ್ಯಂ ಸತ್ಯಂ ಚಾಪ್ಯನೃತಂ ಭವೇತ್ ॥ ಖ ॥
ಪ್ರಾಣಾತ್ಯಯೇ ವಿವಾಹೇ ಚ ವಕ್ತವ್ಯಮನೃತಂ ಭವೇತ್ ॥ ಗ ॥
ಸರ್ವಸ್ವಸ್ಯಾಪಹಾರೇ ಚ ವಕ್ತವ್ಯಮನೃತಂ ಭವೇತ್ ॥ ಘ ॥

ಸಭಾಪರ್ವದ ೧೩,೮೪೪ನೆಯ ಶ್ಲೋಕವು ಹೀಗೆ ಇದೆ. ಅಲ್ಲಿಯೂ ಕೃಷ್ಣನ ಮಾತೇ ಇಲ್ಲ—

ಪ್ರಾಣಾಂತಿಕೇ ವಿವಾಹೇ ಚ ವಕ್ತವ್ಯಮನೃತಂ ಭವೇತ್ ॥ ಚ ॥
ಅನೃತೇನ ಭವೇತ್ ಸತ್ಯಂ ಸತ್ಯೇನೈವಾನೃತಂ ಭವೇತ್ ॥ ಛ ॥

ಇಲ್ಲಿ ಗ ಮತ್ತು ಚ, ಖ ಮತ್ತು ಛ—ಇವೆಲ್ಲಾ ಒಂದೇ ಆಗಿವೆ. ಶಬ್ದಗಳೂ ಪ್ರಾಯಃ ಒಂದೇ; ಆದಕಾರಣ ಇವು ರೂಢಿಯಾದ ಹಳೆಯ ನುಡಿಗಳು.

ಇವು ಕೃಷ್ಣನ ಮತವಲ್ಲ. ತನ್ನಿಂದ ಒಪ್ಪಲ್ಪಟ್ಟ ನೀತಿಯೆಂದೂ ಅವನು ಹೇಳಿಲ್ಲ. ಭೀಷ್ಮಾದಿಗಳಲ್ಲಿ ಇವನು ಕೇಳಿರುವುದನ್ನು ಹೇಳಿದಾನೆ. ಕೃಷ್ಣ ಚರಿತ್ರೆಯಲ್ಲಿ ಈ ನೀತಿಗಳು ಯಥಾರ್ಥಗಳೆ, ಅಲ್ಲವೆ ಎಂಬ ವಿಚಾರ ದಿಂದ ಪ್ರಯೋಜನವೇನು.?

ಮುಖ್ಯ ಮಾತು ಅನೇಕವೇಳೆ ಸತ್ಯವು ಸುಳ್ಳೂ, ಸುಳ್ಳು ನಿಜವೂ ಆಗುವುದುಂಟು. ಅಂಥಾ ಕಡೆಗಳಲ್ಲಿ ಸುಳ್ಳನ್ನೇ ಹೇಳಬೇಕು. ಕೃಷ್ಣನ ಮತವೂ ಹೀಗೆಯೇ ಇದೆ. ಇದನ್ನು ಕೊನೆಯಲ್ಲಿ ಹೇಳಿರುವೆನು.

ಸುಳ್ಳು ನಿಜವಾಗಿ, ನಿಜವು ಸುಳ್ಳಾಗಿ ಆಗುವುದುಂಟೆ? ಎಂಬುದನ್ನು ಮೊದಲು ವಿಚಾರಿಸಬೇಕು. ಇದಕ್ಕೆ ಸ್ಥೂಲ ಉತ್ತರವು—

"ಧರ್ಮಸಮ್ಮತವಾದುದೇ ಸತ್ಯವು. ಅಧರ್ಮವೇ ಸುಳ್ಳು. ಧರ್ಮಸಮ್ಮತ ವಾದ ಸುಳ್ಳಾಗಲಿ, ಅಧರ್ಮಸಮ್ಮತವಾದ ಸತ್ಯವಾಗಲಿ ಇಲ್ಲ. ಹಾಗಾದರೆ ಸುಳ್ಳು ನಿಜಗಳ ನಿರ್ಧಾರವು ಧರ್ಮಾಧರ್ಮದ ನಿರ್ಧಾರದಮೇಲೆ ಇದೆ."

ಹೀಗೆಂದೇ ಶ್ರೀ ಕೃಷ್ಣನು ಮೊದಲು ಧರ್ಮತತ್ತ್ವವನ್ನು ನಿರ್ಣೈಸಿ ದ್ದಾನೆ. ಮಾತುಗಳಲ್ಲಿ ಗೀತೆಯ ಉದಾರನೀತಿಯ ಗಂಭೀರವಾಕ್ಯಗಳು ಕಾಣಬರುತ್ತಲಿವೆ—

ಧರ್ಮ ಮತ್ತು ಅಧರ್ಮಗಳನ್ನು ನಿರ್ಣಯಿಸುವುದಕ್ಕೋಸ್ಕರ ವಿಶೇಷ ಲಕ್ಷಣಗಳು ಗೊತ್ತುಮಾಡಲ್ಪಟ್ಟಿವೆ. ಬಹು ಕಷ್ಟವಾದ ಧರ್ಮವನ್ನು ಅನುಮಾನದ * ಮೂಲಕ ಅಲ್ಲಲ್ಲಿ ಗೊತ್ತುಮಾಡ ಬೇಕಾಗುವುದು.

ಇದಕ್ಕಿಂತ ಹೆಚ್ಚಿನ ಔದಾರ್ಯ ಯೂರೋಪಿನಲ್ಲೆಲ್ಲೂ ಇಲ್ಲ. ಇನ್ನು ಹಲವರು ಶ್ರುತಿಗಳು ಧರ್ಮಕ್ಕೆ ಪ್ರಮಾಣವೆಂದುದಾಹರಿಸುವರು. ಅದರಲ್ಲಿ ನಾನು ದೋಷಾರೋಪಣೆಯನ್ನು ಮಾಡುತ್ತಲಿಲ್ಲ. ಆದರೆ ಶ್ರುತಿಗಳಲ್ಲಿ ಸಮಸ್ತ ಧರ್ಮತತ್ತ್ವಗಳನ್ನೂ ಉದಾಹರಿಸಿಲ್ಲ. ಇದರಿಂದಲೇ ಹಲವೆಡೆಗಳಲ್ಲಿ ಅನುಮಾನದಿಂದಲೇ ಧರ್ಮವನ್ನು ತಿಳಿದುಕೊಳ್ಳಬೇಕಾಗುವುದು.

---

* ಅನುಮಾನವೆಂದರೆ ಕಾರಣದ ಮೂಲಕ ಕಾರ್ಯವನ್ನೂಹಿಸುವುದು.

ಇದನ್ನು ಕುರಿತೇ ಜಗತ್ತಿನಲ್ಲಿ ದೊಡ್ಡ ಸಂತೆ. ದೈವೋಕ್ತಿ, ಅಪ್ತವಾಕ್ಯ ಎಂದು ಹೇಳುವವರು ಅದು ಬೈಬಲ್ ಆಗಲಿ ವೇದವಾಗಲಿ ಅಥವಾ ಕೊರಾನೇ ಆಗಲಿ ಅವುಗಳಲ್ಲಿರುವುದು ಮಾತ್ರ ಧರ್ಮ: ಇದು ಹೊರತು ಬೇರೆ ಧರ್ಮವೇ ಇಲ್ಲವೆಂದು ಹೇಳುವವರು ಈಗಲೂ ಬಲಿಷ್ಠ ರಾಗಿಯೇ ಇದಾರೆ. ಅವರ ಮತದಲ್ಲಿ ಧರ್ಮವು ದೈವೋಕ್ತಿಯಿಂದ ಉದಾಹೃತವಾದುದೇ ಹೊರತು ಅನುಮಾನಕ್ಕೆ ವಿಷಯವಲ್ಲ. ಈ ಮಾತು ಮನುಷ್ಯಜಾತಿಯ ಉನ್ನತಿಯ ದಾರಿಗೆ ಹಾಕಿರುವ, ದಾಟುವುದಕ್ಕಶಕ್ಯ ವಾದ, ಮುಳ್ಳಿನ ಬೇಲಿ. ನಮ್ಮ ದೇಶದವರು ಹಾಗಿರಲಿ; ಯೂರೋಪಿನವರಲ್ಲೂ ಈಗಲೂ ಈ ಮತವು ಉನ್ನತಿಯ ದಾರಿಯನ್ನು ತಡೆದು ಇದೆ. ನಮ್ಮ ದೇಶದ ಪತನಕ್ಕೆ ಇದೇ ಒಂದು ದೊಡ್ಡ ಕಾರಣ. ಈಗಲೂ ಭಾರತವರ್ಷದಲ್ಲಿ ಧರ್ಮಜ್ಞಾನ ವೇದ ಮತ್ತು ಮನು ಯಾಜ್ಞವಲ್ಕ್ಯಾದಿ ಸ್ಮೃತಿಗಳಿಂದ ಅಡ್ಡಗಿಸಲ್ಪಟ್ಟಿರುವುದು. ಅನುಮಾನದ ದಾರಿ ನಿಷೇಧಿತ ವಾಗಿರುವುದು. ಅತಿದೂರದರ್ಶಿಯೂ, ಆದರ್ಶ ಪುರುಷನೂ ಆಗಿರುವ ಶ್ರೀ ಕೃಷ್ಣನು ಲೋಕೋನ್ನತಿಗೆ ಇರುವ ಈ ಸಂಕಟವಾದ ತಡೆಯನ್ನು ಬಹು ಪ್ರಾಚೀನ ಕಾಲದಲ್ಲಿಯೇ ತಿಳಿದುಕೊಂಡಿದ್ದನು. ಈಗಿನ ಹಿಂದೂ ಸಮಾಜದ ಧರ್ಮಜ್ಞಾನವನ್ನು ನೋಡಿ ಬಹು ನೊಂದು ಆ ಶ್ರೀ ಕೃಷ್ಣನ ಮರೆಯನ್ನೇ ಹೊಗೋಣವೆನ್ನಿಸುವುದು.

ಆದರೆ ಅನುಮಾನಕ್ಕೆ ಒಂದು ಮೂಲವುಂಟು; ಅಗ್ನಿಯ ವಿನಾ ಧೂಮೋತ್ಪತ್ತಿಯಾಗದು. ಎದುರಿಗೆ ಇರುವ ಹೊಗೆಯಿಂದಾವೃತವಾದ ಪರ್ವತವು ಬೆಂಕಿಯಿಂದಲೇ ಆವೃತವಾಗಿರಬೇಕು. ಹೀಗೆ ಅನುಮಾನಕ್ಕೆ ಲಕ್ಷಣವು ಬೇಕೇಬೇಕು.

ಶ್ರೀ ಕೃಷ್ಣನು ಹೀಗೆಯೇ ಧರ್ಮಾನುಮಾನಕ್ಕೆ ಲಕ್ಷಣವನ್ನು ಕೊಟ್ಟಿರುವನು. ''ಧರ್ಮವು ಪ್ರಾಣಿಗಳನ್ನು ಧಾರಣಮಾಡುವುದೆಂದೇ ಅದಕ್ಕೆ ಧರ್ಮವೆಂಬ ಹೆಸರುಂಟಾಗಿರುವುದು.'' ಆದ್ದರಿಂದ,—

ಯಾವುದರಿಂದ ಪ್ರಾಣಿಗಳ ರಕ್ಷಣೆಯಾಗುವುದೋ ಅದೇ ಧರ್ಮ.

ಇದಂತೂ ಕೃಷ್ಣನಿರ್ದಿಷ್ಟವಾದ ಧರ್ಮ. ಈಗಿನ ಕಾಲದ ಹರ್ಬರ್ಟ್ ಸ್ಪೆನ್ಸರ್, ಬೆನ್‌ಥ್ಯಾಂ ಮಿಲ್ ಸಂಪ್ರದಾಯಗಳ ಶಿಷ್ಯರೂ ಇದನ್ನೊಪ್ಪದೆ ಇರ

ಲಾರರು. ಆದರೆ ಈ ಘೋರತರ ಉಪಯೋಗಿತಾವಾದವು (Utilitarian) ಮಾದರಿಯ ಶುದ್ಧ ಪಾರ್ಥಿಕ್ಯವಾದ. ನಾನು ಬೇರೇ ಗ್ರಂಥದಲ್ಲಿ ಧರ್ಮ ತತ್ತ್ವವನ್ನು ಈ ಹಿತವಾದದಿಂದ ಬೇರ್ಪಡಿಸುವುದಕ್ಕಾಗುವುದಿಲ್ಲವೆಂಬುದನ್ನು ತೋರಿಸುವೆನು. ಬಿಕ್ಕಟ್ಟಿನ ಕ್ರಿಸ್ತ ಧರ್ಮದೊಡನೆ ಹಿತವಾದವು ವಿರೋಧ ವಾಗಬಹುದು. ಸರ್ವ ಪ್ರಾಣಿಗಳಲ್ಲಿಯೂ ಈಶ್ವರನಿರುವನೆಂದು ಹಿಂದೂ ಧರ್ಮವು ಹೇಳುತ್ತಲಿರುವಾಗ, ಹಿತವಾದವೇ ಧರ್ಮದ ಉಪಯೋಗಾಂಶ ವಾಗಿರುವುದು. ಈ ಕೃಷ್ಣವಾಕ್ಯವೇ ಯಥಾರ್ಥವಾದ ಧರ್ಮ ಲಕ್ಷಣ. ಧರ್ಮಸಮ್ಮತನಾದುದೇ ಸತ್ಯವೆಂದೂ, ಹಾಗಲ್ಲದುದೇ ಸುಳ್ಳೆಂದೂ ಹಿಂದೆಯೇ ತಿಳಿಸಿದೆ. ಇದರಿಂದ ಸರ್ವಲೋಕಕ್ಕೂ ಹಿತವಾದುದೇ ಸತ್ಯ. ಜನಗಳಿಗೆ ಅಹಿತವಾವುದೋ ಅದೇ ಸುಳ್ಳು ಎಂಬರ್ಥದಲ್ಲಿ ಲೌಕಿಕ ಸತ್ಯವು ಧರ್ಮತಃ ಸುಳ್ಳಾಗಿಯೂ, ಲೌಕಿಕ ಮಿಥ್ಯವು ಧರ್ಮತಃ ಸತ್ಯವಾಗಿಯೂ ಪರಿಣಮಿಸಬಹುದು. ಇಂಥ ಕಡೆಗಳಲ್ಲಿ ಮಿಥ್ಯವು ಸತ್ಯವಾಗಿಯೂ ಸತ್ಯವು ಸುಳ್ಳಾಗಿಯೂ ಪರಿಣಮಿಸುವುದು.

ಉದಾಹರಣಾರ್ಥ ಕೃಷ್ಣನು ಹೇಳಿರುವುದು :—“ ಯಾರಾದರೂ ಒಬ್ಬನನ್ನು ನಾಶಪಡಿಸುವುದಕ್ಕಾಗಿ ಅವನನ್ನು ಹುಡುಕಿಕೊಂಡು ಬಂದು ಅವನೆಲ್ಲೆಂದು ತಿಳಿದವನನ್ನು ಕೇಳಿದರೆ **ಅವನು ಮೌನವನ್ನವಲಂಬಿಸುವುದೇ ಉಚಿತ.** ಬಲವಂತವಾಗಿ ಹೇಳಲೇಬೇಕಾದಾಗ ಸುಳ್ಳನ್ನೇ ಹೇಳುವುದು ಕರ್ತವ್ಯ. **ಇಂಥ ಕಡೆಯಲ್ಲಿ ಸುಳ್ಳು ಸತ್ಯಸ್ವರೂಪ** ವಾಗುವುದು.”

ಇದನ್ನು ಹೇಳುವುದಕ್ಕೆ ಮುಂಚೆ ಕೃಷ್ಣನು ಕೌಶಿಕೋಪಾಖ್ಯಾನವನ್ನು ಉದಾಹರಣೆಯಾಗಿ ಅರ್ಜುನನಿಗೆ ತಿಳಿಸಿದ್ದಾನೆ. ಕೌಶಿಕನೆಂಬ ಬಹು ಪಂಡಿತನಾದ ತಾಪಸ ಶ್ರೇಷ್ಠ ವಿಪ್ರನೊಬ್ಬನು ಒಂದು ಗ್ರಾಮದ ಹತ್ತಿರ ನದೀಸಂಗಮ ಪ್ರದೇಶದಲ್ಲಿ ವಾಸಮಾಡುತ್ತಿದ್ದನು. ಇವನು ಸರ್ವದಾ ಸತ್ಯವಾಕ್ಯವನ್ನೇ ಹೇಳುವೆನೆಂಬ ವ್ರತವನ್ನು ಹಿಡಿದು ಬಹು ಸತ್ಯವಂತನೆಂಬ ಪ್ರಖ್ಯಾತಿಯನ್ನು ಹೊಂದಿ ಇದ್ದನು. ಒಂದು ವೇಳೆ, ಕೆಲವು ಜನಗಳು ಲೂಟಿಗಾರರ ಭಯದಿಂದ ಅಲ್ಲಿನ ಒಂದು ವನದಲ್ಲಿ ಅಡಗಿಕೊಂಡಿದ್ದರು. ಲೂಟಿಗಾರರು ಬಹಳ ಸಾಹಸಪಟ್ಟು ಹುಡುಕಿ, ಈ ಋಷಿಯನ್ನು ಕಂಡು—

“ಇತ್ತಕಡೆ ಎಷ್ಟು ಜನ ಬಂದಿದ್ದರು, ಎತ್ತಕಡೆ ಹೋದರು, ತಾವು ಕಂಡಿದ್ದರೆ ದಯವಿಟ್ಟು ಹೇಳಬೇಕೆಂದು” ಕೇಳಿದರು. ಸತ್ಯಪರಾಯಣನಾದ ಕೌಶಿಕನು ಇಷ್ಟಿಷ್ಟು ಜನ ಈ ಈ ವೃಕ್ಷದಲ್ಲಿ, ಅಷ್ಟಷ್ಟು ಜನ ಆಯಾ ಲತೆಯಿಂದ ಮುಚ್ಚಲ್ಪಟ್ಟ ಗುಲ್ಮದಲ್ಲಿ, ಇರುವರೆಂಬುದನ್ನು ತಿಳಿಸಿದನು. ಆಗ ಕ್ರೂರಕರ್ಮಿಗಳಾದ ಲೂಟಿಗಾರರು ಅವರನ್ನು ಹಿಡಿದು ಕೊಂದರು. ಸೂಕ್ಷ್ಮ ಧರ್ಮವನ್ನು ತಿಳಿಯದ ಸತ್ಯವಾದಿಯಾದ ಕೌಶಿಕನು ಇಂಥ ಸತ್ಯವಾಕ್ಯದಿಂದ ಪಾಪವನ್ನು ಗಳಿಸಿ ಘೋರವಾದ ನರಕಕ್ಕೆ ಗುರಿಯಾದನು.

ಇಲ್ಲಿನ ಅಭಿಪ್ರಾಯವು, ಕೌಶಿಕನು—ಇವರು ಲೂಟಿಗಾರರು, ಕೆಡುಕೇ ಇವರ ಉದ್ದೇಶ ಎಂಬುದನ್ನು ಚೆನ್ನಾಗಿ ತಿಳಿದೂ ಸತ್ಯವನ್ನು ಹೇಳಿದ್ದು ಪಾಪ. ಇವರ ಉದ್ದೇಶವನ್ನು ತಿಳಿಯದೇ ಹೇಳಿದ್ದಪಕ್ಷದಲ್ಲಿ ಇವನಿಗೆ ಪಾಪವಿರಲಿಲ್ಲ. ಇದೇ ಕೃಷ್ಣನ ಮತ. ಈ ವಿಷಯದಲ್ಲಿ ಪೂರ್ವ ದೇಶಕ್ಕೂ ಪಶ್ಚಿಮ ದೇಶಕ್ಕೂ ಮತಭೇದವು ವಿಪರೀತ. ನಾವು ಪಾಶ್ಚಾತ್ಯರ ಗುರುಗಳಿಂದ, ‘‘ಸತ್ಯವೇ ನಿತ್ಯವು; ಸುಳ್ಳು ಎಂದಿಗೂ ನಿತ್ಯವಾಗಲಾರದು ಮತ್ತು ಮಿಥ್ಯವನ್ನಾವಾಗಲೂ ಆಡಬಾರದು’’ ಎಂದು ಕಲಿತಿರುವೆವು. ಆದರೆ ಕೃಷ್ಣನ ಮತವು ಶಿಕ್ಷಿತ ಸಂಪ್ರದಾಯದವರಿಗೆ ನಿಂದಿತವಾಗಿ ಕಾಣಬಹುದು. ಹೀಗೆ ಆರು ನಿಂದಿಸುವರೋ ಅವರನ್ನು ಕುರಿತು—

ಕೌಶಿಕನು ಇಲ್ಲಿ ಏನುಮಾಡಬೇಕಾಗಿತ್ತೆಂದು ಕೇಳಿಕೊಳ್ಳುವೆನು. ಬಾಯಿ ಮುಚ್ಚಿಕೊಂಡಿರಬೇಕಾದ್ದೇನೋ ನಿಜ. ಅದನ್ನು ಕೃಷ್ಣನೇ ಹೇಳಿದಾನೆ. ಇದರಲ್ಲಿ ಮತಭೇದವಿಲ್ಲ. ಆದರೆ ಹಿಂಸಿಸಿ ಉತ್ತರವನ್ನು ಹೊರಡಿಸಿದರೆ ? ಹಿಂಸೆಯನ್ನಾದರೂ ಸಹಿಸಿ ಮೃತ್ಯುವನ್ನಾದರೂ ಹೊಂದಿ ಮೌನವನ್ನು ರಕ್ಷಿಸಬೇಕಾಗಿತ್ತೆಂದು ಕೆಲವರೆನ್ನಬಹುದು.

ಇದನ್ನು ನಾವೂ ಒಪ್ಪುವೆವು. ಆದರೆ ಇಂಥ ಧರ್ಮವು ಪೃಥ್ವಿಯಲ್ಲಿ ಸಾಧಾರಣವಾಗಿ ನಡೆಯುವ ಸಂಭವವುಂಟೆ ಇಲ್ಲವೆ ಎಂಬುದನ್ನು ನೋಡಬೇಕು. ಇಲ್ಲಿ ಸಾಂಖ್ಯಪ್ರವಚನಕಾರನ ಒಂದು ಸೂತ್ರವು ನನ್ನ ಜ್ಞಾಪಕಕ್ಕೆ ಬರುವುದು. ಮಹರ್ಷಿ ಕಪಿಲರು ಹೇಳಿರುವರು :—

ನಾಶಕ್ಯೋಪದೇಶ ವಿಧಿರುಪದಿಷ್ಟೇಽಪ್ಯನುಪದೇಶಃ ॥ ಅ. ೧, ಸೂ. ೯ ॥

ಅಶಕ್ಯವಾದ ಉಪದೇಶವನ್ನು ವಿಧಿಸಿದರೂ ಅದು ಉಪದೇಶವಾಗಿ ನಿಲ್ಲುವುದಿಲ್ಲ. ಇಂತಹ ಧರ್ಮಪ್ರಚಾರಕ್ಕೆ ಕೈಹಾಕುವುದು ನಿಷ್ಫಲ. ಒಂದು ವೇಳೆ ಸಫಲವಾದರೆ, ಅದು ಮಾನವ ಜಾತಿಯ ಸೌಭಾಗ್ಯವೇ.

ಮಾತನಾಡಲೇಬೇಕಾದ ಕಡೆಯಲ್ಲಿ ಅಥವಾ ಸುಮ್ಮನೆ ಇದ್ದರೂ ಸಂಶಯವುಂಟಾಗುವ ವಿಷಯದಲ್ಲಿ ಏನುಮಾಡಬೇಕು? "ಅವಶ್ಯಂ ಕೂಜಿತವ್ಯೇ ವಾ ಶಂಕೇರನ್ ವಾಪ್ಯಕೂಜಿತಃ" ಸತ್ಯವನ್ನು ಹೇಳಿ ನರಹತ್ಯಕ್ಕೆ ಸಹಾಯಮಾಡಬೇಕೆ? ಹೀಗೆ ಧರ್ಮತತ್ತ್ವವನ್ನು ತಿಳಿಸುವವನು, ಅದು ಧರ್ಮವಾಗಲಿ, ಅಧರ್ಮವಾಗಲಿ ಮಾಡಲೇಬೇಕೆಂದು ಹೇಳುವವನು, ಅತ್ಯಂತ ಕಟುಕನೇ ಸರಿ.

ಈ ಕೃಷ್ಣೋಕ್ತಿಯಲ್ಲಿ ಅಡಗಿರುವ ನೀತಿಯ ಫಲ ಒಂದು ಪ್ರಕಾರ ವಾಗಿ ಕೊಲೆಪಾತಕನ ಜೀವಸಂರಕ್ಷಣೆಗೆ ಸುಳ್ಳುಪ್ರಮಾಣ ಮಾಡಬಹು ದೆಂದು ಹೇಳಿಕೊಟ್ಟ ಹಾಗೆ ಆಗುವುದಿಲ್ಲವೆ ಎಂದು ಪ್ರತಿವಾದಿಗಳು ಎನ್ನ ಬಹುದು. ನಿಜವಾಗಿಯೂ ಈ ಸತ್ಯತತ್ತ್ವವನ್ನು ತಿಳಿದವನು ಇಂಥ ಆಪತ್ತಿಯನ್ನು ಒಡ್ಡುವುದಿಲ್ಲ. ಖೂನೀ ಮಾಡಿದವನನ್ನು ದಂಡಿಸುವುದು ಮಾನವ ಮಂಡಲಿಯ ನೆಮ್ಮದಿಗಾಗಿ ಅತ್ಯಂತ ಅವಶ್ಯ. ಹೀಗೆ ಶಿಕ್ಷಿಸದೆ ಹೋದರೆ ಸಿಕ್ಕಿದವರು ಸಿಕ್ಕಿದವರನ್ನು ಎಂದರೆ, ಯಾರು ಯಾರನ್ನಾದರೂ ಕೊಂದುಹಾಕಿಬಿಡಬಹುದು. ಆದುದರಿಂದ ಕೊಲೆಪಾತಕನನ್ನು ದಂಡಿಸುವುದೇ ಧರ್ಮ. ಇಂಥವರನ್ನು ಉಳಿಸುವುದಕ್ಕಾಗಿ ಸುಳ್ಳು ಹೇಳಿದವನೂ ಪಾತಕನೇ ಆಗುವನು.

ಕೃಷ್ಣನಿಂದ ಹೇಳಲ್ಪಟ್ಟ ಈ ಸತ್ಯತತ್ತ್ವವು ನಿರ್ದೋಷವಾದುದೆ, ಸಾಧಾರಣ ಮಾನವರಿಂದ ಅವಲಂಬಿಸತಕ್ಕುದೆ—ಎಂಬುದನ್ನು ಈಗ ಹೇಳಲು ಸಿದ್ಧನಾಗಿಲ್ಲ. ಕೃಷ್ಣ ಚರಿತ್ರೆಯನ್ನು ತಿಳಿದುಕೊಳ್ಳುವುದಕ್ಕೋಸ್ಕರ ಇದನ್ನು ಪರಿಸ್ಫುಟವಾಗಿ ನಾನು ಹೇಳಲೇಬೇಕು. ಪಾಶ್ಚಾತ್ಯರು ಯಾವ ಕಾರಣಗಳಿಂದ ''ಸತ್ಯವು ಸದಾ ಸತ್ಯವೇ—ಇದು ಯಾವ ಅವಸ್ಥೆಯಲ್ಲೂ ಬದಲಾವಣೆ ಮಾಡತಕ್ಕದ್ದಲ್ಲ" ಎಂದು ಹೇಳುವುದರ ಮರ್ಮವೊಂದುಂಟು. ಅದೇನೆಂದರೆ—ಸತ್ಯಾಸತ್ಯಗಳನ್ನು ಅವಸ್ಥಾವಿಶೇಷಗಳ ಗಣನೆಯಿಂದ ಧರ್ಮ ಸಮ್ಮತ ಹೌದೇ ಅಲ್ಲವೇ ಎಂಬುದನ್ನು ಗೊತ್ತುಮಾಡಬೇಕೆಂದು ಸರ್ವರಿಗೂ

ಬಿಟ್ಟರೆ, ಇದು ಲೋಕಹಿತಕ್ಕೆ ಬದಲು ವಿಪರೀತವಾಗುತ್ತದೆ. ಶಿಕ್ಷಾಜ್ಞಾನ ಮತ್ತು ಬುದ್ಧಿ ಅನೇಕರಿಗೆ ಅಲ್ಪವಾಗಿರುವುದಲ್ಲದೆ ಯಾರೂ ಈ ವಿಷಯಗಳಲ್ಲಿ ಸಂಪೂರ್ಣ ಪಂಡಿತರಲ್ಲ. ಹಲವರಿಗೆ ಕೆಲಸದಲ್ಲಿ ತೊಡಗುವಾಗ್ಗೆ ವಿಚಾರಶಕ್ತಿ ಕೊಂಚವಾಗಿಯೇ ಇರುತ್ತದೆ. ಇದರಮೇಲೆ ಇಂದ್ರಿಯಗಳ ಆವೇಶ, ಭಯ, ಲೋಭ, ಮೋಹ—ಇವುಗಳ ಅವಾಂತರ ಬೇರೆ. ಸತ್ಯವು ನಿತ್ಯರಕ್ಷಣೀಯ ವೆಂದು ಧರ್ಮವ್ಯವಸ್ಥೆಯನ್ನು ಮಾಡದೆಹೋದರೆ ಮನುಷ್ಯ ಜಾತಿಯು ಸತ್ಯ ಶೂನ್ಯತೆಯನ್ನೇ ಹೊಂದಿಬಿಡುವ ಸಂಭವ ಹೆಚ್ಚು.

ಪ್ರಾಚೀನ ಹಿಂದೂ ಋಷಿಗಳು ಇದನ್ನರಿಯದವರಲ್ಲ. ಇದರಿಂದಲೇ ಅವರು ವಿಶೇಷವಾಗಿ ಯಾವ್ಯಾವ ಸಮಯಗಳಲ್ಲಿ ಸುಳ್ಳನ್ನು ಹೇಳಬಹುದು ಎಂಬುದನ್ನು ಗೊತ್ತುಮಾಡಿಟ್ಟದ್ದಾರೆ. ಇದನ್ನು ಹಿಂದೆಯೇ ತಿಳಿಸಿದೆ. ಮನು, ಗೌತಮ ಮೊದಲಾದ ಋಷಿಗಳೂ ಇದೇ ಮಾತನ್ನನುಮೋದಿಸಿರು ವರು. ಅವರಿನ್ನೂ ವಿಶೇಷ ವಿಧಿಗಳನ್ನು ಹೇಳಿರುವುದು ಧರ್ಮಸಮ್ಮತವೋ, ಅಲ್ಲವೋ ಎಂಬುದನ್ನು ವಿಚಾರಮಾಡಿ ಪ್ರಯೋಜನವಿಲ್ಲ. ಕೃಷ್ಣನು ಹೇಳಿದ ಸತ್ಯತತ್ತ್ವವನ್ನು ತೋರಿಸುವುದೇ ನಮ್ಮ ಉದ್ದೇಶ. ಅವನೂ ಕೂಡ ವಿಶೇಷ ವಿಧಿಯ ಹೊರತು ಈ ಸಾಧಾರಣ ನಿಯಮವನ್ನನುಸರಿಸುವುದು ಸಾಧಾರಣರ ಪಕ್ಷದಲ್ಲಿ ದುಷ್ಕರವೆಂದು ತಿಳಿದಿದ್ದನು. ಆದರೆ, ಅವನ ವಿವೇಚನೆಯಲ್ಲಿ ಪ್ರಾಣಹತ್ಯೆ ಮೊದಲಾದ ಕೆಲವು ವಿಶೇಷ ಅವಸ್ಥೆಗಳನ್ನು ತೋರಿದ ಮಾತ್ರದಿಂದಲೇ ಧರ್ಮಸಮ್ಮತವಾದ ಸತ್ಯಾಚರಣೆಗಳು ಆದುವು ಎಂದು ದೃಢಪಡುವುದಿಲ್ಲ. ಇದಕ್ಕೆ ಬದಲಾಗಿ ವಿತರ್ಕ್ಯೋಸ್ಕರ ಮತ್ತು ಎಂಥ ಸ್ಥಾನಗಳಲ್ಲಿ ಸಾಧಾರಣ ವಿಧಿಯನ್ನುಲ್ಲಂಘಿಸುವುದುಚಿತವೆಂಬುದನ್ನು ನಿರ್ದೇಶಿಸಿರುವನು. ಅದನ್ನು ವಿವರಿಸುವುದೇ ನಮ್ಮ ಕರ್ತವ್ಯ. ದಾನ, ತಪ, ಶೌಚ, ಆರ್ಜವ, ಸತ್ಯ ಮೊದಲಾದುವುಗಳನ್ನು ಧರ್ಮವೆನ್ನುವರು. ಇವೆಲ್ಲಾ ಅವಸ್ಥಾಂತರಗಳಿಂದ ಅಧರ್ಮಗಳಾಗಿ ಪರಿಣಮಿಸುವುದೂ ಉಂಟು. ಉಪಯೋಗವಲ್ಲದುವನ್ನು ಪ್ರಯೋಗಿಸುವುದಾಗಲಿ, ವ್ಯವಹರಿಸುವುದಾಗಲಿ ಅಧರ್ಮ. ದಾನ ಸಂಬಂಧವಾಗಿ ಉದಾಹರಣೆಯನ್ನು ಬರೆಯುವೆನು. ಸಮರ್ಥನಾಗಿರುವಾಗ ಚೋರರಿಗೆ ಧನವನ್ನು ದಾನಮಾಡುವುದೆಂದಿಗೂ ಕರ್ತವ್ಯವಲ್ಲ. ಪಾಪಾತ್ಮರಿಗೆ ಧನವನ್ನು ದಾನಮಾಡಿದರೆ, ಅವರು ಮಾಡುವ

ಅಧರ್ಮವನ್ನು ದಾನಮಾಡಿದವನೂ ಅನುಭವಿಸಬೇಕಾಗುವುದು. ಸತ್ಯ ವಿಚಾರದಲ್ಲಿಯೂ ಹಾಗೆಯೇ. ಶ್ರೀ ಕೃಷ್ಣನು ಹೇಳಿದ ಉದಾಹರಣೆಗಳಲ್ಲಿ ಮೇಲೆ ಒಂದನ್ನು ಎತ್ತಿದೆ. ಇನ್ನೊಂದು ಉದಾಹರಣೆ:—ಸುಳ್ಳು ಶಪಥ ಗಳಿಂದಲಾದರೂ ಕಳ್ಳಕಾಕರ ಸಂಸರ್ಗವನ್ನು ಬಿಡುವುದಾದರೆ ಅಂಥ ಕಡೆಗಳಲ್ಲಿ ಸುಳ್ಳನ್ನು ಹೇಳುವುದೇ ಶ್ರೇಯಸ್ಸು. ಅಂಥಾ ಸುಳ್ಳು ನಿಶ್ಚಯ ವಾಗಿಯೂ ಸತ್ಯಸ್ವರೂಪವಾದುದು.

ಇವಲ್ಲದೆ ಪ್ರಚಾರದಲ್ಲಿರುವ ಧರ್ಮಶಾಸ್ತ್ರಗಳಲ್ಲಿನ ಪ್ರಾಣತ್ಯಾಗ ಮೊದಲಾದ ದೃಷ್ಟಾಂತಗಳನ್ನು ಮೇಲೆಯೇ ಎತ್ತಿದೆ. ಹೀಗಿರುವ ಕೃಷ್ಣನ ಸತ್ಯತತ್ತ್ವದ ಸ್ಥೂಲತಾತ್ಪರ್ಯ—

(೧) ಯಾವುದು ಧರ್ಮಸಮ್ಮತವೋ ಅದೇ ಸತ್ಯ. ಧರ್ಮಸಮ್ಮತ ವಲ್ಲದ್ದಾವುದೋ ಅದೇ ಅಸತ್ಯ.

(೨) ಯಾವುದು ಲೋಕಹಿತವೋ ಅದೇ ಧರ್ಮ.

(೩) ಆದಕಾರಣ, ಲೋಕಹಿತವಾವುದರಿಂದಲೋ ಅದೇ ಸತ್ಯ. ಲೋಕವಿರುದ್ಧವಾದುದು ಅಸತ್ಯ.

ಈ ಪ್ರಕಾರವಾದ ಸತ್ಯವನ್ನು ಎಲ್ಲೆಲ್ಲೂ ಪ್ರಯೋಗಿಸಬೇಕು.

ಇದಕ್ಕಿಂತ ಶ್ರೇಷ್ಠವಾದ ತತ್ತ್ವವನ್ನು ಎಲ್ಲಿಯಾದರೂ ತೋರಿಸುವು ದಾದರೆ, ನಾವು ಕೃಷ್ಣನ ಮತವನ್ನು ಬಿಟ್ಟು ಆ ಮತವನ್ನೇ ಸ್ವೀಕರಿಸಲು ಸಿದ್ಧರಾಗಿರುವೆವು. ಇಲ್ಲದೇ ಇದ್ದರೆ ಆದರ್ಶಮನುಷ್ಯೋಚಿತವಾದ ವಾಕ್ಯ ಗಳು ಇವೇ ಎಂದೊಪ್ಪಿಕೊಳ್ಳಿ. "ಯಾವುದರಿಂದ ಲೋಕರಕ್ಷಣೆಯೂ ಲೋಕಹಿತವೂ ಸಾಧಿತವಾಗುವುದೋ ಅದೇ ಧರ್ಮ. ಭಕ್ತಿಯಿಂದ ಈ ಕೃಷ್ಣವಾಕ್ಯವನ್ನು ಹಿಂದೂ ಧರ್ಮಕ್ಕೆ ಮೂಲಸ್ವರೂಪವೆಂದು ಗ್ರಹಿಸು ವುದಾದರೆ, ಹಿಂದೂ ಧರ್ಮದ ಮತ್ತು ಹಿಂದೂ ಜಾತಿಯ ಉನ್ನತಿ ಬೇಗನೆ ಆದೀತು! ಸಣ್ಣ ಪುಟ್ಟ ಆಚಾರಗಳ ಭಸ್ಮರಾಶಿಯ ಮುಸುಕಿನಿಂದ ಪವಿತ್ರವೂ ಜಗತ್ತಿನಲ್ಲಿ ಅತುಲ್ಯವೂ ಆದ ಹಿಂದೂ ಧರ್ಮವನ್ನು ಪರಿಹಾರ ಮಾಡಲಾದೀತು! ಶಾಸ್ತ್ರಕ್ಕೆ ಅಡ್ಡಬಿದ್ದು ಕೆಟ್ಟ ಕೆಲಸಗಳನ್ನು ಮಾಡುವುದು, ವ್ಯರ್ಥವಾಗಿ ಸಾಮರ್ಥ್ಯವನ್ನು ವ್ಯಯಮಾಡುವುದು, ನಿಷ್ಫಲವಾಗಿ

ಕಾಲವನ್ನು ಕಳೆಯುವುದು ಮುಂತಾದುವೆಲ್ಲ ದೇಶದಿಂದ ತೊಲಗಿ ಸತ್ಕರ್ಮ ಗಳನ್ನು ಸನ್ಮಾರ್ಗದಲ್ಲಿ ನಡಸುವಂತಾಗಿ, ಹಿಂದೂ ಸಮಾಜವು ತೇಜೋವಂತ ವಾಗಿ ತಲೆಯನ್ನೊದರಿಕೊಂಡೆದ್ದೀತು. ಹಾಗಾದರೆ ಭಂಡತನ ಜಾತಿಗಳ ಮಾರಾಮಾರಿ, ಪರಸ್ಪರ ವೈಷಮ್ಯ ಮತ್ತು ಅನಿಷ್ಟ ಚೇಷ್ಟೆಗಳು ದೇಶದಿಂದ ಅಳಿದಾವು. ನಾವು ಕೃಷ್ಣನಿಂದ ಹೇಳಲ್ಪಟ್ಟ ಮಹತೀವಾಣಿಯನ್ನು ಒತ್ತರಿಸಿ ಶಾಸ್ತ್ರಿಗಳು, ಭಟ್ಟರು, ಆಚಾರ್ರು ಇವರುಗಳ ಕಾಲುಗಳನ್ನು ಹಿಡಿಯುತ್ತ ಲಿದ್ದೇವೆ; ಅಲ್ಲದೆ ಲೋಕಹಿತವನ್ನು ಬಿಟ್ಟು ತಿಥಿತತ್ತ್ವ ಮಲಮಾಸತತ್ತ್ವ, ವ್ರತ, ಕಥೆ ಮುಂತಾಗಿ ಇಪ್ಪತ್ತೆಂಟು ತತ್ತ್ವಗಳ ಗಜಿಬಿಜಿ ಮಂತ್ರಗಳಲ್ಲಿ ಮುಳುಗಿ ಮುಗ್ಧರಾಗಿ ಹೋಗಿದ್ದೇವೆ. ನಮ್ಮ ಜಾತಿ ಮೇಲಕ್ಕೇಳುವದಾದರೆ ಪಾತಾಳಕ್ಕಿಳಿಯುವುದು ಮತ್ತಾವ ಜಾತಿ? ನಮ್ಮ ಹಣೆಯಲ್ಲಿ ಭಾಗ್ಯರೇಖೆ ಯೇನಾದರೂ ಇನ್ನೂ ಅಳಿಸಿಹೋಗದೆ ಇದ್ದರೆ ಎಲ್ಲಾ ಹಿಂದೂಗಳೂ ಒಗ್ಗಟ್ಟಾಗಿ "ಓಂ ನಮೋ ಭಗವತೇ ವಾಸುದೇವಾಯ" ಎಂದು ಕೃಷ್ಣನ ಪಾದ ಪದ್ಮಗಳಿಗೆರಗಿ, ಅವನಿಂದ ಉಪದೇಶಮಾಡಲ್ಪಟ್ಟ ಈ ಲೋಕಹಿತಾತ್ಮಕವಾದ ಧರ್ಮವನ್ನು ಗ್ರಹಿಸೋಣ.* ಹೀಗಾದರೆ ನಿಶ್ಚಯವಾಗಿಯೂ ನಮ್ಮ ಜಾತಿ ಉನ್ನತಿಗೆ ಏರುವುದು.

ಸಪ್ತಮ ಪರಿಚ್ಛೇದ

ಕರ್ಣ ವಧೆ

ಅರ್ಜುನನು ಕೃಷ್ಣನ ಮಾತನ್ನು ತಿಳಿದರೂ ಅವನು ಕ್ಷತ್ರಿಯನಲ್ಲವೆ? ತನ್ನ ಪ್ರತಿಜ್ಞೆಯನ್ನುಳಿಸಿಕೊಳ್ಳಬೇಕೆಂದೇ ಚಿಂತಿಸಿ ಎರಡೂ ಉಳಿಯುವಂಥ ಉಪಾಯವನ್ನು ತಿಳಿಸೆಂದು ಕೇಳಿದನು.

ಮಾನಿಷ್ಠನಿಗೆ ಅಪಮಾನವೇ ಮೃತ್ಯುಸ್ವರೂಪವಾದುದು. "ನೀನು ಅಪಮಾನಸೂಚಕವಾದ ಮಾತನ್ನು ಯುಧಿಷ್ಠಿರನಿಗೆ ಹೇಳು. ಅವನನ್ನು

---

*ಬೆನ್‌ಥ್ಯಾಮನ ಮಾತನ್ನು ಇಂಗ್ಲೆಂಡು ಕೇಳಿತು. ಕೃಷ್ಣನ ಮಾತನ್ನು ಭಾರತವು ಕೇಳಲೊಲ್ಲದೆ?

ಕೊಂದಹಾಗೇ ಆಗುವುದು" ಎನ್ನಲು, ಅರ್ಜುನನು ಅದೇ ಪ್ರಕಾರವಾಗಿ ಮಾಡಿ, ಕೃಷ್ಣನನ್ನು ಇನ್ನೊಂದು ವಿಪತ್ತಿಗೆ ಒಡ್ಡಿದನು. ನಾನು "ದೊಡ್ಡಣ್ಣ ನನ್ನು ಅಪಮಾನಮಾಡಿ ಮಹಾಪಾಪವನ್ನು ಮಾಡಿದವನಾದುದರಿಂದ ಆತ್ಮ ಹತ್ಯವನ್ನು ಮಾಡಿಕೊಳ್ಳುವೆ"ನೆಂದು ಪುನಃ ಕತ್ತಿಯನ್ನು ಹಿರಿದನು. ಆಗ ಕೃಷ್ಣನು ಅವನ ಮೃತ್ಯುವಿನ ವಿಚಾರವಾಗಿಯೂ ಸಹಜ ವ್ಯವಸ್ಥೆಯನ್ನೇ ಮಾಡಿದನು. ಆತ್ಮಶ್ಲಾಘನೆ ಸಜ್ಜನರಿಗೆ ಮೃತ್ಯುಸ್ವರೂಪವಾದುದು ಎಂದನು. ಈ ಮಾತು ಅನ್ಯಾಯವಾದುದೇನೂ ಅಲ್ಲ. ಆಗ ಅರ್ಜುನನು ಬಹಳವಾಗಿ ತನ್ನನ್ನು ತಾನೇ ಹೊಗಳಿಕೊಂಡನು. ಬಳಿಕ ಎಲ್ಲವೂ ಸರಿಹೋಯಿತು.

ಕೃಷ್ಣನು ಅರ್ಜುನನ ರಥಾಶ್ವಗಳನ್ನು ಹೇಗೋ ಹಾಗೆಯೇ ಅರ್ಜುನ ನನ್ನೂ ನಡೆಯಿಸುವನು. ಆಗಿಂದಾಗ್ಗೆ ಕೃಷ್ಣನ ಆಜ್ಞೆಯಂತೆ ಅರ್ಜುನನು ನಡೆಯುವನು. ಇಲ್ಲಿ ಕೃಷ್ಣನು ಅರ್ಜುನನಿಗೆ ಕರ್ಣನನ್ನು ವಧಿಸೆಂದು ಸೂಚಿಸಿದನು.

ಮಹಾಭಾರತದ ಮುಖ್ಯಾಂಶಗಳ ಪೈಕಿ ಈ ಕರ್ಣವಧೆ ಒಂದು ಪ್ರಧಾನ ಘಟನೆ. ಬಹುಕಾಲದಿಂದಲೂ ಇದು ಒಂದೇ ಅಚ್ಚಿನಿಂದ ತಯಾರಾಗಿ ಬಂದಿರುವುದು. ಕರ್ಣನೇ ಅರ್ಜುನನ ಪ್ರತಿಯೋದ್ಧನು. ಭೀಮಾರ್ಜುನ ನಕುಲ ಸಹದೇವರೆಂಬ ನಾಲ್ವರು ಯುಧಿಷ್ಠಿರನಿಗಾಗಿ ದಿಗ್ವಿಜಯವನ್ನು ಮಾಡಿದ್ದರು. ದುರ್ಯೋಧನನ ಪಕ್ಷವಾಗಿ ಕರ್ಣ ನೊಬ್ಬನೇ ದಿಗ್ವಿಜಯವನ್ನು ಮಾಡಿದನು. ಅರ್ಜುನನು ದ್ರೋಣ ಶಿಷ್ಯನು. ದ್ರೋಣ ಗುರುವಾದ ಪರಶುರಾಮನ ಶಿಷ್ಯನು ಕರ್ಣನು. ಅರ್ಜುನನಿಗೆ ಗಾಂಡೀವ ಹೇಗೋ ಹಾಗೆ ಉತ್ಕೃಷ್ಟವಾದ ವಿಜಯವೆಂಬ ಧನುಸ್ಸು ಕರ್ಣನಿಗೆ ಇತ್ತು. ಇಬ್ಬರಿಗೂ ಅನೇಕ ದಿವ್ಯಾಸ್ತ್ರಗಳು ಸ್ವಾಧೀನವಾ ಗಿದ್ದುವು. ಇಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ಕೊಲ್ಲುವುದಕ್ಕೋಸ್ಕರ ಪ್ರತಿಜ್ಞೆಯನ್ನು ಮಾಡಿಕೊಂಡು ಬರುತ್ತಿದ್ದರು. ಭೀಷ್ಮ ದ್ರೋಣರ ವಧೆಗಳಲ್ಲಿ ಅರ್ಜುನನಿಗೆ ಕೊಂಚವೂ ಯತ್ನಶೀಲತೆ ಇರಲಿಲ್ಲ. ಕರ್ಣ ವಧೆಯಲ್ಲಿ ಮಾತ್ರ ದೃಢಯತ್ನ. ಕುಂತಿ ಕರ್ಣನ ಜನ್ಮವೃತ್ತಾಂತವನ್ನು ತಿಳಿಸಿ, ತನ್ನ ಐವರು ಪುತ್ರರ ಪ್ರಾಣಭಿಕ್ಷೆಯನ್ನು ಬೇಡಲು, ಕರ್ಣನು ಅರ್ಜುನನನ್ನು ವಿನಾ ಮಿಕ್ಕ ನಾಲ್ವರ ಗೋಜಿಗೆ ಹೋಗುವುದಿಲ್ಲವೆಂದು

ಮಾತು ಕೊಟ್ಟಿದ್ದನು. ಅರ್ಜುನನ ವಿಷಯದಲ್ಲಿ ಮಾತು ಕೊಡಲಿಲ್ಲ. ಅವನನ್ನು ವಧಿಸಬೇಕು ಇಲ್ಲವೇ ಅವನಿಂದ ಸಾಯಬೇಕು ಎಂಬ ನಿಶ್ಚಯವುಳ್ಳವನಾಗಿದ್ದನು.

ಇಂದು ಕರ್ಣನ ಮೇಲೆ ಯುದ್ಧಮಾಡುವುದಕ್ಕೆಂದು ಅರ್ಜುನನನ್ನು ಕೃಷ್ಣನು ಕರೆದುಕೊಂಡುಹೋದನು. ಅರ್ಜುನನನ್ನು ಯುಧಿಷ್ಠಿರನ ಬಿಡಾರಕ್ಕೆ ಕರೆದುಕೊಂಡು ಹೋದನು. ಭೀಮನು ಅರ್ಜುನನಿಗೆ ಯುಧಿಷ್ಠಿರನು ಎಲ್ಲೋ ಕಾಣೆ ನೋಡು ಎಂದು ಹೇಳಿದ್ದರೂ, ಅರ್ಜುನನು ರಣವನ್ನು ಮುಗಿಸದೆ ಈ ಕೆಲಸಕ್ಕೆ ಹೋಗಲು ಇಷ್ಟಪಡಲಿಲ್ಲ. ಕೃಷ್ಣನು ಹಠಹಿಡಿದು ಅವನನ್ನು ಕರೆದೊಯ್ದನು. ಕರ್ಣನು ಕ್ರಮಾಗತವಾದ ಯುದ್ಧವನ್ನು ಮಾಡಿ ಬಳಲಿ, ಅದುವರೆಗೂ ಅರ್ಜುನನು ವಿಶ್ರಮಿಸಿಕೊಂಡು ಪುನಃ ತೇಜೋವಂತನಾಗಲಿ ಎಂಬುದೇ ಕೃಷ್ಣನ ಅಭಿಪ್ರಾಯ. ಈಗ ಯುದ್ಧಕ್ಕೆ ಹಿಂದಿರುಗಿಸಿ ಕರೆದುಕೊಂಡುಬರುತ್ತಾ, ಅರ್ಜುನನ ತೇಜಸ್ಸನ್ನು ಇನ್ನೂ ಹೆಚ್ಚಿಸಬೇಕೆಂದು ಅವನ ವೀರತ್ವವನ್ನು ಪ್ರಶಂಶಿಸಿದನು. ಅವನು ಮೊದಲಿನಿಂದ ಮಾಡಿದ ಸಾಹಸಕಾರ್ಯಗಳನ್ನು ಒಂದೊಂದಾಗಿ ಹೊಗಳಿ, ಬಳಿಕ ದ್ರೌಪದೀ ವಸ್ತ್ರಾಪಹರಣ, ಅಭಿಮನ್ಯುವಿನ ಅನ್ಯಾಯ ವಧೆ ಮುಂತಾದ ಸಂದರ್ಭಗಳಲ್ಲಿ ಕರ್ಣನಿಂದಾದ ಅನಿಷ್ಟಗಳನ್ನೇ ಜ್ಞಾಪಿಸಿದನು. ಈ ಮಾತುಗಳನ್ನು ಇಲ್ಲಿ ಎತ್ತಲು ಪ್ರಯೋಜನವಿಲ್ಲ. ಇವುಗಳಲ್ಲಿ—"ಪೂರ್ವದಲ್ಲಿ ವಿಷ್ಣುವು ದಾನವ ಸಮೂಹವನ್ನು ಹೇಗೆ ವಿನಾಶ ಮಾಡಿದನೋ" ಎಂದರೆ, ಕೃಷ್ಣನು ಇದುವರೆಗೂ ತಾನು ವಿಷ್ಣುವಿನ ಅವತಾರವೆಂದು ಎಲ್ಲಿಯಾದರೂ ಹೇಳುವುದಾಗಲಿ ಹೆಚ್ಚಿನ ಅಧಿಕಾರವನ್ನು ಬೇಕೆಂದಾಶಿಸಿಯಾಗಲಿ ಇಲ್ಲ. (ಇದು ಮೊದಲನೆಯ ಸ್ತರದ ಲಕ್ಷಣವೊಂದು). ಹೀಗೆ ಕೃಷ್ಣನು ಎಂದಿರುವನು. ಕರ್ಣಾರ್ಜುನರ ಕಾಳಗವೊದಗಿತು. ಅದನ್ನು ವರ್ಣಿಸುವುದರಿಂದ ಪ್ರಯೋಜನವಿಲ್ಲ. ಕರ್ಣನ ಸರ್ಪಬಾಣದಿಂದ ಕೃಷ್ಣನು ಅರ್ಜುನನನ್ನುಳಿಸಿದನೆಂದು ಹೇಳಿದೆ. ಇದನ್ನು ಪರಿಹರಿಸಿಕೊಳ್ಳುವುದಕ್ಕಾಗದೆಂದು ತಿಳಿದು, ರಥವನ್ನು ಒದ್ದು ಕೆಳಕ್ಕೆ ಇಳಿಸಿದನು. ಕುದುರೆಗಳು ಮುಗ್ಗರಿಸಿ ಮೊಣಕಾಲೂರಿ ನಿಂತವು. ಅರ್ಜುನನ ತಲೆಯುಳಿದು ಕಿರೀಟ ಉರುಳಿಬಿತ್ತು. ಅರ್ಜುನನು ತಲೆಯನ್ನು

ಬಗ್ಗಿಸಿದ್ದರೂ ಇಷ್ಟೇ ಪ್ರಯೋಜನವಾಗುತ್ತಿತ್ತು. ಇದು ಸಮಾಲೋಚನೆಗೆ ಯೋಗ್ಯವಾದದ್ದೇನೂ ಅಲ್ಲ. ಮಹಾಭಾರತದಲ್ಲಿ ಕೃಷ್ಣನ ಸಾರಥ್ಯದ ಪ್ರಶಂಸೆ ಬಾರಿಬಾರಿಗೂ ಕಂಡುಬರುವುದು. ಯುದ್ಧದ ಕೊನೆಯ ಭಾಗದಲ್ಲಿ ಕರ್ಣನ ರಥಚಕ್ರಗಳು ಮಣ್ಣಿನಲ್ಲಿ ಹೂತುಹೋದವು. ಕರ್ಣನು ಅವನ್ನು ಎತ್ತುವುದಕ್ಕೆಂದು ಕೆಳಕ್ಕೆ ಇಳಿದನು. ರಥಚಕ್ರಗಳನ್ನೆತ್ತುವ ವರೆಗೂ ಅರ್ಜುನನಿಂದ ವಿರಾಮವನ್ನು ಪ್ರಾರ್ಥಿಸಿದನು. ಅರ್ಜುನನು ಹಾಗೆಯೇ ವಿರಾಮವನ್ನೂ ಕೊಟ್ಟನೆಂದು ತೋರುವುದು. ಆಮೇಲೆ ಮೊದಲಿನಂತೆ ಯುದ್ಧಮಾಡಿದನು. ಆದರೆ ಕರ್ಣನು ದುರದೃಷ್ಟದಿಂದ ಕ್ಷಮೆಯನ್ನು ಕೇಳುವಾಗ "ಧರ್ಮವಾಗಿ ಈ ಸಮಯದಲ್ಲಿ ನನ್ನನ್ನು ಕ್ಷಮಿಸಬೇಕು" ಎಂದನು. ಕೃಷ್ಣನು ಅಧರ್ಮವನ್ನು ದಂಡಿಸುವಂಥವನು. ಅವನು ಕರ್ಣನನ್ನು ಕುರಿತು—

‘‘ಎಲೈ ಸೂತಪುತ್ರನೇ! ಪುಣ್ಯದಿಂದ ನೀನೀಗ ಧರ್ಮಸ್ಮರಣೆಯನ್ನು ಮಾಡಿದೆ. ನೀಚಾಶಯರು ದುಃಖದಲ್ಲಿ ಮುಳುಗಿ, ಪ್ರಾಯಿಕವಾಗಿ ದೈವವನ್ನೇ ನಿಂದಿಸುವರು. ತಮ್ಮ ದುಷ್ಕರ್ಮಗಳನ್ನು ಕೊಂಚವೂ ಸ್ಮರಿಸರು. ದುರ್ಯೋಧನನೂ, ದುಶ್ಶಾಸನನೂ, ಶಕುನಿಯೂ ನಿನ್ನ ಅಭಿಪ್ರಾಯದಂತೆ ಏಕವಸ್ತ್ರಳಾದ ದ್ರೌಪದಿಯನ್ನು ಸಭೆಗೆ ಕರೆತಂದರಲ್ಲ, ಆಗ ನಿನ್ನ ಧರ್ಮ ಎಲ್ಲಿತ್ತು? ದುಷ್ಟ ಶಕುನಿಯು ದುಷ್ಟಬುದ್ಧಿಯಿಂದ ಅಕ್ಷಕ್ರೀಡೆಯನ್ನು ತಿಳಿಯದ ರಾಜಾ ಯುಧಿಷ್ಠಿರನನ್ನು ಪಗಡೆಯಾಟಕ್ಕೆ ಕರೆದು ಸೋಲಿಸಿದ್ದು ನಿನ್ನನುಮತಿಯಿಂದಲ್ಲವೇ? ನಿನ್ನ ಧರ್ಮ ಆಗ ಎಲ್ಲಿತ್ತು? ದುರ್ಯೋಧನನು ನಿನ್ನ ಮಾತನ್ನು ಕೇಳಿ ಭೀಮನಿಗೆ ವಿಷದ ಅನ್ನವನ್ನಿಕ್ಕಿದನಲ್ಲಾ ಆಗ ನಿನ್ನ ಧರ್ಮವೆಲ್ಲಿತ್ತು! ವಾರಣಾವತ ನಗರಿಯಲ್ಲಿ ಕೃತ್ರಿಮದ ಮನೆಯಲ್ಲಿ ನಿದ್ರೆ ಮಾಡುತಲಿದ್ದ ಪಾಂಡವರನ್ನು ಸುಡಬೇಕೆಂದು ನೀನು ಬೆಂಕಿಯನ್ನು ಹಾಕಿದೆಯಲ್ಲಾ ಆಗ ನಿನ್ನ ಧರ್ಮ ಎಲ್ಲಿ ಹೋಗಿತ್ತು? ಸಭಾಮಧ್ಯದಲ್ಲಿ ದುಶ್ಶಾಸನನಿಗೆ ಸಿಕ್ಕಿಬಿದ್ದಿದ್ದ ರಜಸ್ವಲೆಯಾದ ದ್ರೌಪದಿಯನ್ನು ಕುರಿತು ನೀನು—‘‘ಎಲೈ ಕೃಷ್ಣೆ, ಪಾಂಡವರು ಹಾಳಾಗಿ ಶಾಶ್ವತ ನರಕಕ್ಕೆ ಹೋದರು. ಈಗ ನೀನು ಬೇರೆ ಗಂಡನನ್ನಾರಿಸಿಕೊ" ಎಂದು ಪರಿಹಾಸ್ಯಮಾಡಿದೆಯಲ್ಲಾ ಮತ್ತು ಅನಾರ್ಯರು ನಿರಪರಾಧಿನಿಯಾದ ಅವಳನ್ನು ಹಿಂಸಿಸುತಿರಲು ಉಪೇಕ್ಷೆಯಿಂದ ನೋಡುತಲಿದ್ದೆಯಲ್ಲಾ, ಆವಾಗ ಈ ಧರ್ಮ ಎಲ್ಲಿತ್ತು? ರಾಜ್ಯಲೋಭದಿಂದ ಶಕುನಿಗೆ ಆಶ್ರಯವನ್ನಿತ್ತು ಪಾಂಡವರನ್ನು ಪಗಡೆಯ ಆಟಕ್ಕಾಗಿ ಕರಸಿದೆಯಲ್ಲಾ, ಆಗ ನಿನ್ನ ಧರ್ಮ ಎಲ್ಲಿ ಹೋಗಿತ್ತು? ಮಹಾರಥಿಕರ ಗುಂಪಿನಿಂದ ಕೂಡಿ ಬಾಲಕನಾದ ಅಭಿಮನ್ಯುವನ್ನು ಸುತ್ತಿಕೊಂಡು ಕೊಂದೆಯಲ್ಲಾ, ಆಗ ನಿನ್ನ ಧರ್ಮ ಎಲ್ಲಿ ಹೋಗಿತ್ತು? ಎಲೈ ಕರ್ಣನೇ, ನಿನಗೆ ಬೇಕು ಬೇಕಾದಾಗಲೆಲ್ಲ

ಅಧರ್ಮವನ್ನು ಆಚರಿಸಿ, ಈಗ ಧರ್ಮ, ಧರ್ಮ ಧರ್ಮ ಎಂಬುದಾಗಿ ಒರಲುತ್ತ ತುಟಿನಾಲಿಗೆಗಳನ್ನು ಒಣಗಿಸಿಕೊಳ್ಳುವುದರಿಂದ ಪ್ರಯೋಜನವೇನು? ಈಗ ನೀನು ಧರ್ಮಪರಾಯಣನಾಗುವುದಕ್ಕೆ ಯತ್ನಿಸಿ ಬದುಕಿಕೊಳ್ಳಬೇಕೆಂದಂದುಕೊಂಡಿದ್ದೀಯೇನೋ? ಅದೆಂದಿಗೂ ಆಗದು. ಪೂರ್ವದಲ್ಲಿ, ನಿಷಧದೇಶಾಧಿಪತಿಯಾದ ನಳನು ಪುಷ್ಕರನೊಡನೆ ದ್ಯೂತವನ್ನಾಡಿ ಸೋತು ಮತ್ತೆ ರಾಜ್ಯವನ್ನು ಪಡೆಯಲಿಲ್ಲವೆ? ಹಾಗೆಯೇ ಧರ್ಮಪರಾಯಣರಾದ ಪಾಂಡವರು ತಮ್ಮ ಭುಜಬಲಗಳಿಂದ ಶತ್ರುಗಳನ್ನು ತರಿದು, ರಾಜ್ಯವನ್ನು ಮರಳಿ ಪಡೆಯಲುಳ್ಳವರು. ಧೃತರಾಷ್ಟ್ರನ ಮಕ್ಕಳು ಅವಶ್ಯವಾಗಿ, ಧರ್ಮದಿಂದ ಕಾಪಾಡಲ್ಪಡುತಲಿರುವ ಪಾಂಡವರ ಕೈಯಿಂದ, ನಿಹತರಾಗುವರು.''

ಕೃಷ್ಣನ ಮಾತುಗಳನ್ನು ಕೇಳಿ ಕರ್ಣನು ಲಜ್ಜೆಯಿಂದ ತಲೆಯನ್ನು ಬಾಗಿಸಿದನು. ಆಮೇಲೆಮೊದಲಿನಂತೆ ಯುದ್ಧ ನಡೆದು ಅವನು ಅರ್ಜುನನ ಬಾಣದಿಂದ ಮಡಿದನು

ಅಷ್ಟಮ ಪರಿಚ್ಛೇದ

ದುರ್ಯೋಧನನ ವಧೆ

ಕರ್ಣನು ಬಿದ್ದ ಬಳಿಕ ದುರ್ಯೋಧನನು ಶಲ್ಯನನ್ನು ಸೇನಾಪತಿಯನ್ನಾಗಿ ಮಾಡಿಕೊಂಡನು. ಹಿಂದಿನ ದಿನದ ಯುದ್ಧದಲ್ಲಿ ಯುಧಿಷ್ಠಿರನು ಕ್ಷತ್ರಿಯನಾಗಿಯೂ ಕಾಪುರುಷನಂತೆ ಕಲಂಕವನ್ನು ಸಂಪಾದಿಸಿದ್ದನು. ಈಕಲಂಕವನ್ನು ತೊಳೆಯುವುದು ಅತ್ಯಂತ ಅವಶ್ಯವಾಗಿತ್ತು. ಸರ್ವದರ್ಶಿಯಾದ ಕೃಷ್ಣನು ಇಂದಿನ ಮುಖ್ಯ ಯುದ್ಧಕ್ಕೆ ಅವನನ್ನು ಗೊತ್ತುಮಾಡಲು ಸಾಹಸವನ್ನು ಮಾಡಿ, ಶಲ್ಯನೊಡನೆ ಯುದ್ಧವನ್ನು ನಡೆಯಿಸಿ, ಅವನನ್ನು ಕೊಲ್ಲಿಸಿದನು. ಇಲ್ಲಿಗೆ ಕೌರವ ಸೈನ್ಯವೆಲ್ಲವೂ ಪಾಂಡವರಿಂದ ನಿಶ್ಶೇಷವಾಯಿತು. ಕೃಪಾಶ್ವತ್ಥಾಮರೆಂಬೀರ್ವರು ವಿಪ್ರರು, ಯಾದವ ವಂಶದವನಾದ ಕೃತವರ್ಮನು, ಸ್ವಯಂ ದುರ್ಯೋಧನನು—ಈ ನಾಲ್ವರು ಮಾತ್ರ ಉಳಿದುಕೊಂಡಿದ್ದರು. ದುರ್ಯೋಧನನು ಓಡಿಹೋಗಿ ದ್ವೈಪಾಯನ ಸರೋವರವೊಂದರಲ್ಲಿ ಅವಿತುಕೊಂಡಿದ್ದನು. ಪಾಂಡವರು ಹುಡುಕಿ ಅವನನ್ನು ಪತ್ತೆ ಹಚ್ಚಿದರೂ ಅವನನ್ನು ಯುದ್ಧವಿಲ್ಲದೆ ಕೊಲ್ಲಲಿಲ್ಲ.

ಯುಧಿಷ್ಠಿರನ ಬುದ್ಧಿ ಸ್ವಲ್ಪ ಸ್ಥೂಲ. ಆದುದರಿಂದಲೇ ಪಾಂಡವರಿಗೆ ಇಷ್ಟು ಕಷ್ಟ ಬಂದದ್ದು. ಅದೇ ಬುದ್ಧಿ ಇಲ್ಲಿಯೂ ವಿಕಾಸವಾಗಿರುವುದು. ಅವನು ದುರ್ಯೋಧನನನ್ನು ಕುರಿತು—

"ನಿನಗೆ ಇಷ್ಟವಾದ ಆಯುಧವನ್ನು ತೆಗೆದುಕೊಂಡು, ನಮ್ಮ ಪೈಕಿ ನಿನಗೆ ಬೇಕಾದ ಯಾವನಾದರೂ ಒಬ್ಬನನ್ನಾರಿಸಿಕೊಂಡು ಯುದ್ಧಮಾಡು. ಮಿಕ್ಕವರೆಲ್ಲರೂ ನಿಮ್ಮ ಯುದ್ಧವನ್ನು ನೋಡುತ್ತ ನಿಂತಿರುತ್ತೇವೆ. ನೀನು ಜಯಿಸಿದರೆ ರಾಜ್ಯ ನಿನ್ನದೇ ಆಗುವುದು."

ಎಂದನು. ದುರ್ಯೋಧನನನ್ನು ತಾನು ಗದಾಯುದ್ಧವನ್ನು ಮಾಡುವೆನೆಂದನು. ಗದಾಯುದ್ಧದಲ್ಲಿ ಭೀಮನ ವಿನಾ ಮತ್ತಾರೂ ಅವನ ಸಮಕಕ್ಷಿಯವರಲ್ಲವೆಂಬುದನ್ನು ಕೃಷ್ಣನು ಚೆನ್ನಾಗಿ ಬಲ್ಲವನಾಗಿದ್ದನು. ಇವನನ್ನು ಬಿಟ್ಟು, ಪಾಂಡವರಲ್ಲಿ ಮತ್ತಾರನ್ನು ಯುದ್ಧಕ್ಕೆ ಕರೆದಿದ್ದರೂ ಪಾಂಡವರು ಪುನಃ ಭಿಕ್ಷಾಟನೆಗೆ ಹೋಗಬೇಕಾಗುತ್ತಿದ್ದಿತು. ಯಾರೂ ಏನೂ ಹೇಳಲಾರದೆ ಇದ್ದರು. ಎಲ್ಲರೂ ಬಲಗರ್ವಿತರು. ಯುಧಿಷ್ಠಿರನನ್ನು ಬೆದರಿಸುವ ಭಾರ ಶ್ರೀಕೃಷ್ಣನಿಗೇ ಬಂದು ಅದನ್ನು ಅವನ್ನು ಚೆನ್ನಾಗಿ ನಿರ್ವಹಿಸಿರುವನು.

ದುರ್ಯೋಧನನ ಮಿತಿಮೀರಿದ ಹೆಮ್ಮೆಯಿಂದಲೇ ಯುಧಿಷ್ಠಿರನ ಬುದ್ಧಿದೋಷ ತೊಳೆದುಹೋಯಿತು. "ಯಾರು ಬೇಕೋ ಅವರು ನನ್ನೊಡನೆ ಗದಾಯುದ್ಧಕ್ಕೆ ಬರಲಿ ; ಎಲ್ಲರನ್ನೂ ನಾನು ಸದೆಬಡಿಯುವೆನು" ಎಂದು ದುರ್ಯೋಧನನು ಡಂಭವನ್ನು ಮಾಡಲು, ಭೀಮನು ಗದೆಯನ್ನು ಹಿಡಿದು ಬಂದನು.

ಇಲ್ಲಿ ಮಹಾಭಾರತದ ರೀತಿ ಬದಲಾವಣೆಯನ್ನು ಹೊಂದಿರುವುದು. ಹದಿನೆಂಟು ದಿನಗಳು ನಡೆದ ಯುದ್ಧದಲ್ಲಿ ಭೀಮ ದುರ್ಯೋಧನರಿಗೆ ಗದಾಯುದ್ಧ ಎಷ್ಟೋಸಾರಿ ನಡೆದು ಇದೆ. ಅದರಲ್ಲಿ ಬಾರಿಬಾರಿಗೂ ಭೀಮನು ದುರ್ಯೋಧನನನ್ನು ಸೋಲಿಸಿದ್ದಾನೆ. ಈಗ ಮಾತ್ರ ಭೀಮನೂ ಕೂಡ ದುರ್ಯೋಧನನಿಗೆ ಸರಿಹೋಲದೆ ಸೋಲುವಹಾಗಾಯಿತು. ಏನಾದರೂ ಆಗಲಿ, ಮುಖ್ಯವಾಗಿ ಮೊದಲು ಭೀಮನು ಮಾಡಿದ ಆ ಭಯಂಕರವಾದ ಪ್ರತಿಜ್ಞೆ ನೆರವೇರಬೇಕು. ಸಭಾಪರ್ವದಲ್ಲಿ

ದುರ್ಯೋಧನನು ಪಗಡೆಯನ್ನಾಡಿ, ದ್ರೌಪದಿಯನ್ನು ಗೆದ್ದಮೇಲೆ ದುಶ್ಶಾಸನನು ರಜಸ್ವಲೆಯಾಗಿ ಏಕವಸ್ತ್ರದಲ್ಲಿದ್ದ ದ್ರೌಪದಿಯ ಮುಡಿಯನ್ನು ಹಿಡಿದು ಸಭಾಮಧ್ಯಕ್ಕೆ ಎಳೆದುತಂದು, ಸೀರೆಯ ಸೆರಗನ್ನು ಹಿಡಿದು ಎಳೆಯಲು, ಭೀಮನು ಕೆರಳಿ ದುಶ್ಶಾಸನನನ್ನು ಕೊಂದು, ಅವನ ಎದೆಯನ್ನು ಬಗೆದು ರಕ್ತವನ್ನು ಕುಡಿಯುವೆನೆಂದು ಪ್ರತಿಜ್ಞೆಯನ್ನು ಮಾಡಿದನು. ಅದೇ ಪ್ರಕಾರವಾಗಿ ಮಹಾಶ್ಮಶಾನದಂತೆ ಬಹು ಭಯಂಕರವಾದ ರಣರಂಗದಲ್ಲಿ ದುಶ್ಶಾಸನನನ್ನು ಕೆಡಹಿ, ರಾಕ್ಷಸನಂತೆ ಅವನ ಎದೆಯನ್ನು ಬಗೆದು ಬಿಸಿಬಿಸಿ ರಕ್ತವನ್ನು ಕುಡಿಯುತ್ತ, "ನಾನಿಂದು ಅಮೃತಪಾನವನ್ನು ಮಾಡಿದೆ"ನೆಂದು ಗಟ್ಟಿಯಾಗಿ ಕೂಗಿದನಲ್ಲವೆ? ಅದೇ ಸಭಾಮಧ್ಯದಲ್ಲಿ ದುರ್ಯೋಧನನು ಮುಗುಳ್ನಗೆಯಿಂದ ಕೂಡಿ ಕಡೆಗಣ್ಣಿಂದ ಇವಳ ಮುಖವನ್ನು ನೋಡುತ್ತ, ಸರ್ವಲಕ್ಷಣೋಪೇತವೂ ವಜ್ರಸದೃಶವೂ ದೃಢಕದಳೀಸ್ತಂಭ ಸಮಾನವೂ ಆನೆಯ ಸೊಂಡಿಲನ್ನು ಹೋಲುವುದೂ ಆದ ತನ್ನ ತೊಡೆಯ ಮೇಲಿನ ಬಟ್ಟೆಯನ್ನೆತ್ತಿ, ತೊಡೆಯನ್ನು ತಟ್ಟುತ್ತಲಿರುವುದನ್ನು ಕಂಡು ದುರ್ಯೋಧನನನ್ನು ಕುರಿತು—"ಯುದ್ಧದಲ್ಲಿ ನನ್ನ ಗದಾಪ್ರಹಾರದಿಂದ ನಿನ್ನ ತೊಡೆಯನ್ನು ಮುರಿದು ನಿನ್ನನ್ನು ನೆಲಕ್ಕುರುಳಿಸದಿದ್ದರೆ ನಾನು ಮಹಾನರಕಕ್ಕೆ ಹೋಗಲುಳ್ಳವನು'' ಎಂದು ಪ್ರತಿಜ್ಞೆಯನ್ನು ಮಾಡಿದ್ದನು.

ಈ ಹೊತ್ತು ಆ ತೊಡೆಯನ್ನು ಮುರಿಯಲೇಬೇಕು. ಆದರೆ ಗದಾಯುದ್ಧದ ನಿಯಮಕ್ಕೆ ಇದು ವಿರುದ್ಧ. ಹೊಕ್ಕಳಿನ ಕೆಳಗಡೆಗೆ ಏಟು ಬೀಳಕೂಡದು. ನ್ಯಾಯ ಯುದ್ಧದಲ್ಲಿ ದುರ್ಯೋಧನನನ್ನು ಕೊಂದರೂ ಪ್ರತಿಜ್ಞೆಯನ್ನು ಪರಿಪಾಲಿಸಿದಂತಾಗುವದಿಲ್ಲ.

ದೊಡ್ಡಪ್ಪನ ಮಗನ ಎದೆಯ ರಕ್ತವನ್ನು ಬಸಿದು ಪಾನಮಾಡಿದ ರಾಕ್ಷಸನು ಗದೆಯಿಂದ ತಲೆಯಿಂದ ಒಡೆದರೂ ಆಯಿತು; ತೊಡೆಯನ್ನು ಮುರಿದರೂ ಆಯಿತು. ಭಯಂಕರವಾದ ರೋಷಾವೇಶದಲ್ಲಿ ವ್ಯತ್ಯಾಸವನ್ನು ವಿವೇಚಿಸುವನಾರು! ದ್ರೋಣನ ಭಯದಿಂದ ಸುಳ್ಳನ್ನು ಹೇಳುವ ಸಮಯದಲ್ಲಿ ಮುಖಂಡನಾದವನು ಎಂದು ಗುರುತಿಸಲ್ಪಟ್ಟಿರುವ ವೃಕೋದರನಿಗೆ ತೊಡೆಯಮೇಲೆ ಪೆಟ್ಟಿಕ್ಕುವುದಕ್ಕೆ ಇನ್ನೊಬ್ಬರ ಉಪದೇಶ

ವೇತಕ್ಕೆ! ಹೀಗಾಗುವುದೂ ಆಗಲಿಲ್ಲ. ಭೀಮನು ತೊಡೆಯನ್ನು ಮುರಿಯುವ ಪ್ರತಿಜ್ಞೆಯನ್ನು ಮರೆತನು. ದ್ವಿತೀಯ ಸ್ತರದ ಕವಿ (ಇಲ್ಲಿ ಅವನ ಕೈವಾಡವೇ) ಚರಿತ್ರೆ ಸಾಂಗವಾಗಿ ಸಂಪೂರ್ಣವಾಗುವುದರಲ್ಲಿ ಕೊಂಚವೂ ಮನಸ್ಸನ್ನಿಡನು. ಇಲ್ಲಿಯೂ ಭೀಮ ಚರಿತ್ರೆಯ ವಿಷಯದಲ್ಲಿ ಸಾಮಂಜಸ್ಯವನ್ನು ಹೊಂದಿಸಲಿಲ್ಲ. ಅರ್ಜುನನ ವಿಷಯದಲ್ಲಿಯೂ ಹೀಗೆಯೇ ಮಾಡಿದಾನೆ. ಭೀಮನು ತೊಡೆಯನ್ನು ಮುರಿಯುವುದನ್ನು ಮರತೇಹೋದನು. ಯಾವ ಅರ್ಜುನನು ಅಸ್ತ್ರಗುರುವೂ ಧರ್ಮಾಚಾರ್ಯನೂ ಸಖನೂ ಪರಮ ಶ್ರದ್ಧೆಗೆ ಪಾತ್ರನೂ ಆದ ಕೃಷ್ಣನ ಬಲವಂತದಿಂದಲೂ ದ್ರೋಣನ ವಧೆಯಲ್ಲಿ ಸುಳ್ಳನ್ನು ಹೇಳುವುದಕ್ಕೊಪ್ಪಲಿಲ್ಲವೋ ಅಂತಹ ಪರಮ ಧಾರ್ಮಿಕನಾದ ಅರ್ಜುನನು ಅನ್ಯಾಯ ಯುದ್ಧವನ್ನು ಭೀಮನಿಗೆ ಉಪದೇಶಿಸಿದನು. ಆದರೆ ಈ ಮಾತು ಕೃಷ್ಣನಿಂದ ಉಂಟಾಗದಿರಲು ಕವಿಯ ಉದ್ದೇಶ ಸಫಲವಾಗಲಿಲ್ಲ. ಆದುದರಿಂದ ಮಾತು ಹೀಗುಂಟಾಗಿರುವುದು :

ಅರ್ಜುನನು ಭೀಮ ದುರ್ಯೋಧನರ ಯುದ್ಧವನ್ನು ನೋಡಿ, ಇವರ ಪೈಕಿ ಗದಾಯುದ್ಧದಲ್ಲಿ ಯಾರು ಶ್ರೇಷ್ಠರೆಂದು ಕೃಷ್ಣನನ್ನು ಕೇಳಿದನು. ಭೀಮನು ಹೆಚ್ಚು ಬಲಶಾಲಿ, ಆದರೆ ದುರ್ಯೋಧನನ ಯತ್ನವೂ ನಿಪುಣತೆಯು ಹೆಚ್ಚು ಎಂದು ಹೇಳಿದನು. ಮೊದಲು ವಿಶೇಷವಾಗಿ ಪ್ರಾಣಭಯದಿಂದ ಪಲಾಯನಮಾಡಿ ಪುನಃ ಶತ್ರುಗಳ ಇದುರಿಗೆ ಸಿಲುಕಿರುವಂಥವನಿಗೆ ಪ್ರಾಣದ ಮೇಲಿನ ಆಶೆ ಹರಿದು ದೃಢಚಿತ್ತತೆಯುಂಟಾಗುವುದೆಂದು ವಿವೇಚಿಸಬೇಕು. ಜೀವದಾಶೆಯನ್ನು ಬಿಟ್ಟು ಸಾಹಸದಿಂದ ಯುದ್ಧಮಾಡಿದರೆ ಸಂಗ್ರಾಮದಲ್ಲಿ ಯಾರೂ ಅಂಥವನನ್ನು ಸೋಲಿಸಲಾರರು. ಆದುದರಿಂದ ಭೀಮನು ದುರ್ಯೋಧನನನ್ನು ಹೇಗಾದರೂ ಕೊಲ್ಲದಿದ್ದರೆ ದುರ್ಯೋಧನನಿಗೇ ಜಯವುಂಟಾಗಿ ಯುಧಿಷ್ಠಿರನ ಮಾತಿನಂತೆ ಮತ್ತೆ ಅವನಿಗೇ ರಾಜ್ಯ ದೊರೆಯಬೇಕಾಗುವುದು.

ಕೃಷ್ಣನ ಇಂತಹ ಮಾತುಗಳನ್ನು ಕೇಳಿ ಅರ್ಜುನನು "ತನ್ನ ಸ್ವಂತ ತೊಡೆಯನ್ನು" ತಟ್ಟಿಕೊಂಡು ಭೀಮನಿಗೆ ಸಂಕೇತವನ್ನು ಮಾಡಿದನು. ಬಳಿಕ ಭೀಮನು ಅವನ ತೊಡೆಯನ್ನು ಮುರಿದು ನೆಲಕ್ಕೆ ಕೆಡವಿದನು.

ನ್ಯಾಯ ಹೇಗೆ ಈಶ್ವರಪ್ರೇರಿತವೋ ಅನ್ಯಾಯವೂ ಹಾಗೆಯೇ ಎಂಬುದು ದ್ವಿತೀಯ ಸ್ತರದ ಕವಿಯ ಆಶಯ.

ಈ ಗದಾಯುದ್ಧವನ್ನು ನೋಡುತ್ತಲಿದ್ದವರ ನಡುವೆ ಬಲರಾಮನೂ ಇದ್ದನು. ಭೀಮ ದುರ್ಯೋಧನರು ಗದಾಯುದ್ಧವನ್ನು ಇವನಿಂದಲೇ ಕಲಿತಿದ್ದರೂ ದುರ್ಯೋಧನನಲ್ಲಿಯೇ ಇವನಿಗೆ ಹೆಚ್ಚು ಪ್ರೀತಿಯಿತ್ತು. ರೇವತೀವಲ್ಲಭ ಬಲರಾಮನಿಗೆ ದುರ್ಯೋಧನನಲ್ಲಿಯೇ ಹೆಚ್ಚು ಪಕ್ಷಪಾತ. ಭೀಮನು ಅನ್ಯಾಯವಾಗಿ ದುರ್ಯೋಧನನನ್ನು ಕೆಳಕ್ಕೆ ಕೆಡಹಿದುದನ್ನು ಕಂಡು ಕಡುಸಿಟ್ಟಿನಿಂದ ತನ್ನ ನೇಗಿಲನ್ನೆತ್ತಿ ಭೀಮನನ್ನು ಬಡಿಯಬೇಕೆಂದು ಹೋದನು. ಬಲರಾಮನು ಯಾವಾಗಲೂ ನೇಗಿಲನ್ನು ಹೆಗಲಮೇಲೆ ಹಾಕಿಕೊಂಡು ತಿರುಗುತಲಿದ್ದದೆಂಬುದೂ, ಆದ್ದರಿಂದಲೇ ಅವನಿಗೆ ಹಲಧರನೆಂಬ ಹೆಸರುಂಟಾಗಿರುವುದೆಂಬುದೂ ಎಲ್ಲರಿಗೂ ತಿಳಿದ ಅಂಶ. ಏತಕ್ಕೆ ಇವನಿಗೆ ಈ ವಿಡಂಬನೆಯೋ ನಾನು ಅರಿಯೆ. ಆದುದಾಗಲಿ. ಕೃಷ್ಣನು ಅವನನ್ನು ಬೇಡಿಕೊಂಡು ಹೇಗಾದರೂ ಸಮಾಧಾನ ಮಾಡಬೇಕೆಂದು ಯತ್ನಿಸಿದನು. ಬಲರಾಮನು ಸುಮ್ಮನಾಗಲಿಲ್ಲ. ಕೊನೆಗೆ ಸಿಟ್ಟನ್ನು ತಡೆದುಕೊಳ್ಳಲಾರದೆ ಅಲ್ಲಿಂದ ಹೊರಟುಹೋದನು.

ಇಷ್ಟಾದಮೇಲೆ ಅಸಹ್ಯವಾದೊಂದು ಕೆಲಸ ನಡೆಯಿತು. ನೆಲದ ಮೇಲೆ ಬಿದ್ದಿರುವ ದುರ್ಯೋಧನನ ತಲೆಯನ್ನು ತನ್ನ ಕಾಲಿನಿಂದ ಭೀಮನು ಒದೆದು, ಯುಧಿಷ್ಠಿರನು ಬೇಡವೆಂದರೂ ಕೇಳದೆ ಉರುಳಿಸಿದನು. ಕೃಷ್ಣನು ಭೀಮನಿಂತಹ ಹೀನವಾದ ಕೆಲಸವನ್ನು ಮಾಡುತ್ತಿರುವುದನ್ನು ಕಂಡು ತಡೆಯಲಾರದೆ ಅವನನ್ನು ತಿರಸ್ಕಾರಮಾಡಿದನು. ಇತ್ತ ಕಡೆ ಪಾಂಡವ ಪಕ್ಷದ ವೀರರು ಭೀಮನನ್ನು ಬಹಳವಾಗಿ ಹೊಗಳಿ ದುರ್ಯೋಧನನನ್ನು ಕುರಿತು ಬೈಯುತಲಿದ್ದರು. ಕೃಷ್ಣನು ಬೇಸರಗೊಂಡು

‘‘ಸಾಯುತ್ತಲಿರುವ ಶತ್ರುವನ್ನು ಮೂದಲಿಸುವುದು ಸರಿಯಲ್ಲ’’

ಎಂದು ಹೇಳಿದನು.

ಇಲ್ಲಿಯುವರೆಗೆ ಎಲ್ಲವೂ ಕೃಷ್ಣನಂತಹ ಆದರ್ಶ ಪುರುಷನಿಗೆ ಉಚಿತವಾದುದು. ಇನ್ನುಮುಂದಿನ ವಿಷಯವು ಬಹು ವಿಚಿತ್ರವಾಗಿದೆ. ಕೃಷ್ಣನು ಮೇಲೆ ತಾನು ಹೇಳಿದ ಮಾತಿಗೆ ವಿರೋಧವಾಗಿ ತಾನೇ ದುರ್ಯೋಧನನನ್ನು ಬೈದಿರುವನು. ಇನ್ನೂ ಒಂದು ಆಶ್ಚರ್ಯವೇನೆಂದರೆ, ದುರ್ಯೋಧನನು ಇದಕ್ಕೆ ಬದಲಾಗಿ ಹೇಳಿದ ಉತ್ತರ. ದುರ್ಯೋಧನನು ಇನ್ನೂ ಸಾಯದೆ ತೊಡೆ ಮುರಿದು ಬಿದ್ದಿದ್ದನು:

“ಎಲೈ ಕಂಸದಾಸಪುತ್ರನೇ, ಧನಂಜಯನು ನಿನ್ನ ಮಾತಿನಮೇಲೆ ವೃಕೋದರನಿಗೆ ಸನ್ನೆಯನ್ನು ಮಾಡಲು ಅವನು ನನ್ನ ತೊಡೆಯನ್ನು ಮುರಿದು ಅಧರ್ಮಯುದ್ಧದಲ್ಲಿ ನನ್ನನ್ನು ಕೆಡಹಿರುವನಲ್ಲಾ. ಇದಕ್ಕೆ ನಿನಗೆ ಸ್ವಲ್ಪವೂ ನಾಚಿಕೆಯಿಲ್ಲವೆ? ನಿನ್ನ ಅನ್ಯಾಯವಾದ ಯುಕ್ತಿಯಿಂದ ಪ್ರತಿದಿನವೂ ಧರ್ಮಯುದ್ಧವನ್ನು ಮಾಡುತ್ತಿದ್ದ ಸಹಸ್ರಾರು ನರಪತಿಗಳು ಕೊಲ್ಲಲ್ಪಟ್ಟರು.* ನೀನು ಶಿಖಂಡಿಯನ್ನು ಮುಂದೆಮಾಡಿ ಪಿತಾಮಹನಾದ ಭೀಷ್ಮನನ್ನು ಕೊಲ್ಲಿಸಿದೆ.† ಅಶ್ವತ್ಥಾಮವೆಂಬ ಆನೆಯನ್ನು ಕೊಂದು ಕೌಶಲದಿಂದ ಆಚಾರ್ಯನಾದ ದ್ರೋಣನು ಅಸ್ತ್ರಶಸ್ತ್ರಗಳನ್ನು ಬಿಸುಡುವಂತೆ ಮಾಡಿ, ಆ ಸಮಯದಲ್ಲಿ ದುರಾತ್ಮನಾದ ಧೃಷ್ಟದ್ಯುಮ್ನನು ನಿನ್ನ ಎದುರಿಗೇ ಅವನನ್ನು ಕೊಲ್ಲುವುದನ್ನು ನೋಡುತ್ತಿದ್ದೆ.‡ ಅರ್ಜುನನನ್ನು ಕೊಲ್ಲುವುದಕ್ಕಾಗಿ ಬಹು ದಿವಸಗಳ ಬಲು ಪ್ರಯತ್ನದಿಂದ ಬಚ್ಚಿಟ್ಟುಕೊಂಡಿದ್ದ ಶಕ್ತಿಯನ್ನು ನೀನು ಕೌಶಲದಿಂದ ಕರ್ಣನು ಘಟೋತ್ಕಚನಮೇಲೆ ಪ್ರಯೋಗಿಸುವಂತೆಮಾಡಿ ಅದನ್ನು ವ್ಯರ್ಥಗೊಳಿಸಿದೆ.§ ಸಾತ್ಯಕಿಯನ್ನು ನಿನ್ನ ನಡವಳಿಕೆಗೆ ಸಿಕ್ಕಿಸಿಕೊಂಡು, ಕತ್ತರಿಸಿಬಿದ್ದ ಕೈಯುಳ್ಳ ಸಾಯುತ್ತಿದ್ದ ಭೂರಿಶ್ರವನ ತಲೆಯನ್ನು ತೆಗೆಯಿಸಿದೆ.× ಮಹಾವೀರನಾದ ಕರ್ಣನು ಅರ್ಜುನನನ್ನು ಕೊಲ್ಲುವುದಕ್ಕೆ ಯತ್ನಿಸಿ ಸರ್ಪಾಸ್ತ್ರವನ್ನು ಬಿಟ್ಟಾಗ ನೀನು ಅತಿ ಬುದ್ಧಿವಂತಿಕೆಯಿಂದ ಅದನ್ನು ವ್ಯರ್ಥಪಡಿಸಿದೆ.§§ ಕೊನೆಗೆ ಸೂತ ಪುತ್ರನಾದ ಕರ್ಣನ ರಥದ ಚಕ್ರಗಳು ಬದಿಯಲ್ಲಿ ಹೂತುಹೋಗಿರುವಾಗ ಅದನ್ನು ಎತ್ತುವುದಕ್ಕೋಸ್ಕರ ಕೆಳಕ್ಕಿಳಿದು ಆ ಕೆಲಸದಲ್ಲಿ ಮಗ್ನನಾಗಿರಲು ನೀನು ಉಪಾಯದಿಂದ ಅರ್ಜುನನ ಕೈಯಲ್ಲಿ ಅವನನ್ನು ಕೊಲ್ಲಿಸಿ ಕೆಲಸವನ್ನು ಕೈಗೂಡಿಸಿಗೊಂಡೆ.‖ ಅದ್ದ

---

* ಹೀಗೆ ಹೇಳುವುದಕ್ಕೆ ಕಾರಣವು ಮಹಾಭಾರತದಲ್ಲೆಲ್ಲೂ ಇಲ್ಲ.

† ಕೃಷ್ಣನು ಈ ವಿಚಾರದಲ್ಲಿ ಎಳ್ಳಷ್ಟೂ ಸಂಬಂಧಪಟ್ಟವನಲ್ಲ; ಭಾರತದಲ್ಲೆಲ್ಲೂ ಹೀಗಿಲ್ಲ.

‡ ಶತ್ರುವನ್ನು ಕೊಲ್ಲುತ್ತಿರುವಾಗ ನಿಷೇಧಿಸುವುದೇಕೆ?

§ ಕೃಷ್ಣನು ಇದಕ್ಕಾಗಿ ಯಾವ ಯತ್ನವನ್ನೇ ಆಗಲಿ, ಕೌಶಲವನ್ನೇ ಆಗಲಿ ಮಾಡಿಲ್ಲ. ಕೌರವರ ಬಲವಂತದಿಂದಲೇ ಕರ್ಣನು ಈ ಶಕ್ತಿಯನ್ನು ಘಟೋತ್ಕಚನ ಮೇಲೆ ಬಿಟ್ಟದ್ದು.

× ಇದು ಸುಳ್ಳು. ಈ ಮಾತು ಮಹಾಭಾರತದಲ್ಲಿಲ್ಲ. ಸಾತ್ಯಕಿಯು ಭೂರಿಶ್ರವನನ್ನೇನೋ ಬೀಳಿಸಿದ್ದನಾದರೂ, ಕೃಷ್ಣನು ಛಿನ್ನಹಸ್ತನಾದ ಭೂರಿಶ್ರವನನ್ನು ಕೊಲ್ಲಬಾರದೆಂದೇ ನಿಷೇಧಮಾಡಿದ್ದನು.

§§ ಈ ಕೌಶಲವು ತನ್ನ ಸ್ವಂತ ಕಾಲಿನ ಬಲದಿಂದ ಆದದ್ದು. ಸಾರಥಿ ತನ್ನ ರಥಿಕನನ್ನು ರಕ್ಷಿಸುವುದೇ ಧರ್ಮ.

‖ ಇಲ್ಲಿ ಕೌಶಲವೇನೂ ಇಲ್ಲ. ಯುದ್ಧದಲ್ಲಿಯೇ ಅರ್ಜುನನು ಕರ್ಣನನ್ನು ಕೊಂದಿದ್ದಾನೆ. ಮಹಾಭಾರತದಲ್ಲಿ ಹೀಗೆಂದೇ ಇದೆ.

ರಿಂದ ನಿನ್ನಂತಹ ಪಾಪಾತ್ಮನೂ ನಾಚಿಕೆಗೇಡಿಯೂ ಇನ್ನಾರಿರುವರು ? ನೋಡು, ನೀನು ಭೀಷ್ಮ ದ್ರೋಣ ಕರ್ಣ ಮತ್ತು ನಾನು ಇವರೊಡನೆ ನ್ಯಾಯವಾಗಿ ಯುದ್ಧವನ್ನು ಮಾಡಿದ್ದರೆ ನಿಮಗೆಂದಿಗೂ ಜಯವಾಗುತ್ತಿರಲಿಲ್ಲ. ನಿನ್ನ ಅಯೋಗ್ಯವಾದ ಉಪಾಯಗಳ ಪ್ರಭಾವದಿಂದಲೇ ನಾನು ನನ್ನ ಕಡೆಯ ಧರ್ಮಾತ್ಮರಾದ ಕ್ಷತ್ರಿಯರ ಸಹಿತ ನಾಶವಾದೆನು.''

ದುರ್ಯೋಧನನು ಹೇಳಿರುವ ಮಾತುಗಳ ವಿಷಯದಲ್ಲಿ ಕೆಳಗಡೆ ಇರುವ ವಿಶೇಷಾಂಶ (ಫುಟ್‌ನೋಟು)ಗಳನ್ನು ಪಾಠಕರು ಮನಸ್ಸಿಟ್ಟು ನೋಡಬೇಕು. ಆಡಿರುವುದೆಲ್ಲಾ ಸುಳ್ಳುಮಾತು. ಹೀಗೆ ಸುಳ್ಳುಸುಳ್ಳಾಗಿ ಆದ ತಿರಸ್ಕಾರ ಮಹಾಭಾರತದಲ್ಲೆಲ್ಲೂ ಸಿಕ್ಕುವುದಿಲ್ಲ. ಆದದ್ದರಿಂದಲೇ ದುರ್ಯೋಧನನು ಆಶ್ಚರ್ಯಕರವಾದ ಉತ್ತರವನ್ನು ಕೊಟ್ಟನು ಎಂದು ಬರೆದಿರುವುದು.

ಮತ್ತಷ್ಟು ಆಶ್ಚರ್ಯಕರವಾದ ಅಂಶವೇನೆಂದರೆ, ಕೃಷ್ಣನು ಇದಕ್ಕೆ ಉತ್ತರವನ್ನು ಕೊಟ್ಟನೆಂದು ಬರೆದು ಇರುವುದು. ಗಂಭೀರಶಾಲಿಯೂ ಕ್ಷಮಾಶೀಲನೂ ಆದ ಕೃಷ್ಣನು ತನ್ನನ್ನು ಕುರಿತು ಆಡಿದ ತಿರಸ್ಕಾರವನ್ನು ಗಮನಿಸಲಾರನೆಂಬುದನ್ನು ನಾವು ಮೊದಲಿನಿಂದಲೂ ನೋಡುತ ಬಂದಿರುವೆವು. ಸಹಿಸಲಿಕ್ಕಾಗದ ಮಾತುಗಳಿಂದ ಸಭಾಮಧ್ಯದಲ್ಲಿ ಶಿಶುಪಾಲನು ನಿಂದಿಸುತ್ತಿದ್ದುದನ್ನು ಕೇಳುತ್ತ ಬಾಯಿ ಮುಚ್ಚಿಕೊಂಡು ಇದ್ದುದನ್ನು ನಾವು ನೋಡಿರುವೆವು. ಹೀಗಿದ್ದೂ ಸಾಯುತ ಬಿದ್ದಿರುವ ದುರ್ಯೋಧನನನ್ನು ಮಾತಿನಿಂದ ನೋಯಿಸಬಾರದೆಂದು ಮೊದಲು ತಾನೇ ಹೇಳಿಯೂ, ಈಗ ಅವನ ಮಾತಿಗೆ ಉತ್ತರವನ್ನು ಕೊಡುವುದರಿಂದಾವ ಪ್ರಯೋಜನವಿಲ್ಲದಿದ್ದಾಗ್ಗೂ ಗಮನಿಸದೆ ದುರ್ಯೋಧನನು ಮಾಡಿದ ಪಾಪಕೃತ್ಯಗಳನ್ನೆಲ್ಲ ಒಂದೊಂದಾಗಿ ವಿವರಿಸಿ ಕೊನೆಯಲ್ಲಿ—"ನೀನು ಬೇಕುಬೇಕಾದಷ್ಟು ಕೆಟ್ಟ ಕೆಲಸಗಳನ್ನು ಮಾಡಿದೆ; ಅವುಗಳ ಫಲವನ್ನನುಭವಿಸು" ಎಂದು ಮುಗಿಸಿದನು.

ಇದಕ್ಕುತ್ತರವಾಗಿ ದುರ್ಯೋಧನನು "ನಾನು ವೇದಾಧ್ಯಯನವನ್ನು ಮಾಡಿ ಶಾಸ್ತ್ರರೀತಿಯಿಂದ ನಡೆದು ಮಾನವನ್ನು ಗಳಿಸಿ ಸಾಗರದಿಂದ ಸುತ್ತುವರಿಯಲ್ಪಟ್ಟ ವಸುಂಧರೆಯನ್ನುಪಭೋಗಿಸುತ್ತ ಚಕ್ರವರ್ತಿಯಾಗಿ ಶತ್ರುಗಳ ತಲೆಯನ್ನು ಮೆಟ್ಟಿ ನಿಂತಿರುವವನಾಗಿ ಭೂಪಾಲರುಗಳಿಗೆ ದುರ್ಲಭವೂ ದೇವಭೋಗ್ಯವೂ ಆದ ಸುಖಸಂಪತ್ತುಗಳನ್ನು ಹೊಂದಿ ಕೊನೆಗೆ ಧರ್ಮಪರಾಯಣನಾದ ಕ್ಷತ್ರಿಯನಪೇಕ್ಷಿಸುವ ಸಮರ ಮೃತ್ಯುವನ್ನು ಪಡೆದಿದ್ದೇನೆ.

ನನ್ನಂತಹ ಸೌಭಾಗ್ಯಶಾಲಿ ಇನ್ನಾರು? ಈಗ ತಮ್ಮಂದಿರಿಂದಲೂ ಬಂಧು ಬಾಂಧವರಿಂದಲೂ ಕೂಡಿ ಸ್ವರ್ಗಕ್ಕೆ ತೆರಳುವೆನು. ನೀವು ಶೋಕದಿಂದ ಕದಡಿದ ಮನಸ್ಸುಳ್ಳವರಾಗಿ ಸತ್ತವರಂತೆ ಈ ಪೃಥ್ವಿಯಲ್ಲಿ ಇದ್ದುಕೊಂಡು ಇರಿ."

ಈ ಉತ್ತರದಲ್ಲಿ ಆಶ್ಚರ್ಯವೇನೂ ಇಲ್ಲ. ಸರ್ವಸ್ವವನ್ನೂ ಕದ್ದು ದುರ್ಯೋಧನನಂತೆ ಇರುವ ಡಾಂಭಿಕನು ಶತ್ರುವನ್ನು ಕುರಿತು "ನಾನೇ ಗೆದ್ದೆನು, ನೀವೇ ಸೋತಿರಿ" ಎಂದು ಸೋತು ಸಾಯುತ್ತಿರುವಾಗಲೂ ಹೇಳುವುದು ಆಶ್ಚರ್ಯವಲ್ಲ. ಮೊದಲು ದ್ವೈಪಾಯನ ಸರೋವರದಲ್ಲಿ ಮುಳುಗಿಕೊಂಡಿರುವಾಗಲೂ ಹೀಗೆಯೇ ಹೇಳಿದ್ದನು. ಯುದ್ಧದಲ್ಲಿ ಸತ್ತರೆ ಸ್ವರ್ಗ ಲಾಭವಾಗುವುದೆಂದು ಎಲ್ಲರೂ ಹೇಳುವರು. ಆದರೆ ಉತ್ತರದ ಫಲವು ಎಲ್ಲದಕ್ಕಿಂತ ಆಶ್ಚರ್ಯವಾದುದು. ಹೀಗೆ ಅವನು ಮಾತುಗಳನ್ನು ಮುಗಿಸಿದೊಡನೆಯೇ—

"ಆಕಾಶದಿಂದ ಪುಷ್ಪವೃಷ್ಟಿ ಇವನಮೇಲೆ ಸುರಿಯಿತು. ಗಂಧರ್ವರು ಮಧುರವಾದ ಗಾನವನ್ನು ಮಾಡತೊಡಗಿದರು. ಅಪ್ಸರೆಯರೆಲ್ಲರೂ ದುರ್ಯೋಧನನ ಯಶಸ್ಸನ್ನು ಹೊಗಳಲಾರಂಭಿಸಿದರು. ಸಿದ್ಧರು ಸಾಧು ಸಾಧು ಎಂದು ಕೊಂಡಾಡಿದರು. ಸುಗಂಧಯುಕ್ತನಾಗಿ ವಾಯು ಮೆಲ್ಲಮೆಲ್ಲನೆ ಇವನಮೇಲೆ ಬೀಸತೊಡಗಿದನು. ದಿಙ್ಮಂಡಲವೂ ನಭೋಮಂಡಲವೂ ನಿರ್ಮಲವಾಗಿ ಬೆಳಗಿದುವು. ಆಗ ವಾಸುದೇವನೇ ಮೊದಲಾಗಿ ಪಾಂಡವರು ಈ ದುರ್ಯೋಧನ ಸನ್ಮಾನ ಸೂಚಕವಾದ ಅದ್ಭುತವನ್ನು ನೋಡಿ ಬಹುವಾಗಿ ನಾಚಿಕೊಂಡರು. ಅಲ್ಲದೆ ಭೀಷ್ಮ, ದ್ರೋಣ, ಕರ್ಣ, ಭೂರಿಶ್ರವ ಮೊದಲಾದವರು ಅಧರ್ಮ ಯುದ್ಧದಲ್ಲಿ ಮಡಿದುದನ್ನು ನೆನೆ ನೆನೆದು ವ್ಯಸನಪಟ್ಟರು."

ಯಾವನು ಮಹಾಭಾರತದಲ್ಲಿ ಪಾಪಾತ್ಮರೊಳಗೆ ಅತ್ಯಂತ ನೀಚನೆಂದು ಎಣಿಸಲ್ಪಟ್ಟಿರುತ್ತಾನೋ ಅಂಥವನಿಗೆ ಈಗುಂಟಾದ ಅದ್ಭುತ ಮರ್ಯಾದೆಯೂ ಸಾಧುವಾದವೂ (ಹೊಗಳುವಿಕೆ), ಧರ್ಮಾತ್ಮರೊಳಗೆ ಶ್ರೇಷ್ಠನೆಂದು ವರ್ಣಿಸಲ್ಪಟ್ಟಿರುವವರ ಅಧರ್ಮಾಚರಣೆಗೋಸ್ಕರ ಹುಟ್ಟಿದ ಲಜ್ಜೆಯೂ ಮಹಾಭಾರತದ ವಿಷಯದಲ್ಲಿ ಆಶ್ಚರ್ಯವೇ. ಸಿದ್ಧರು, ಅಪ್ಸರೆಯರೇ ಮೊದಲಾದ ದೇವಸಮೂಹವು ಒತ್ತಟ್ಟಿಗೆ ಸೇರಿ, ದುರಾತ್ಮನಾದ ದುರ್ಯೋಧನನು ಮಾನನೀಯನೆಂದೂ ಧರ್ಮಿಷ್ಠರಾದ ಕೃಷ್ಣಪಾಂಡವರು ಅಧರ್ಮಿಷ್ಠರೆಂದೂ ಪ್ರಕಟಿಸುತಲಿದಾರೆ. ಸಿದ್ಧರು ಹಾಗಿರಲಿ, ಮನುಷ್ಯರು ಯಾರಾದರೂ ಹೀಗೆ ಸಾಧುವಾದಮಾಡಿದರೆ ಅದು ಸಹ ಆಶ್ಚರ್ಯವೆಂದೇ

ಹೇಳಬೇಕಾಗುವುದು. ಮಹಾಭಾರತದ ಉದ್ದೇಶವು ದುರ್ಯೋಧನನ ಅಧರ್ಮವನ್ನೂ, ಕೃಷ್ಣಪಾಂಡವರ ಧರ್ಮಾಸಕ್ತಿಯನ್ನೂ ಕೀರ್ತನೆ ಮಾಡಬೇಕೆಂದಲ್ಲವೇ! ರಸದಮೇಲೆ ರಸದ ಬೆರಕೆಯಾಗಿರುವುದು. ದುರ್ಯೋಧನನ ಬಾಯಿಂದ ಅವರು ಭೀಷ್ಮ, ದ್ರೋಣ, ಕರ್ಣ, ಭೂರಿ ಶ್ರವರು ಅಧರ್ಮದಿಂದ ಸತ್ತರೆಂದು ಕೇಳಿದಾಗ ದುಃಖವನ್ನು ತೋರಿಸಿದರು. ಇದುವರೆಗೂ ಈ ವಿಷಯವು ಅವರಿಗೆ ಸ್ವಲ್ಪವೂ ತಿಳಿಯದಂತೆಯೂ, ಶತ್ರುವಿನ ಬಾಯಲ್ಲಿ ಈಗ ಕೇಳಿ ದೊಡ್ಡಮನುಷ್ಯರಂತೆ ವ್ಯಸನಪಡುವಂತೆಯೂ ಆಯಿತು. ಭೀಷ್ಮನಾಗಲಿ ಕರ್ಣನಾಗಲಿ ತಮಗೆ ತಿಳಿದ ಯಾವ ಅಧರ್ಮ ದಿಂದಲೂ ಸಾಯಲಿಲ್ಲವೆಂದು ಪಾಂಡವರೆಂದುಕೊಂಡಿದ್ದರೂ ಪರಮ ಶತ್ರು ದುರ್ಯೋಧನನ ಬಾಯಲ್ಲಿ ಅವರು ಅಧರ್ಮದಿಂದ ಕೊಲ್ಲಲ್ಪಟ್ಟರೆಂಬುದನ್ನು ಕೇಳಿದೊಡನೆಯೇ ನಂಬಿಬಿಟ್ಟರು. ಭೂರಿಶ್ರವನನ್ನು ತಾವು ಯಾರೂ ಕೊಲ್ಲಲಿಲ್ಲ; ಸಾತ್ಯಕಿ ಕೊಂದಿದ್ದನು. ಸಾತ್ಯಕಿಯನ್ನು ಕೃಷ್ಣ, ಅರ್ಜುನ, ಭೀಮ—ಈ ಮೂವರೂ ಕೊಲ್ಲಬಾರದೆಂದು ನಿಷೇಧಿಸಿದ್ದರೂ ಈಗ ಪರಮ ಶತ್ರುವಾದ ದುರ್ಯೋಧನನು ಹೇಳಿದೊಡನೆಯೇ—ಅದು ತಮ್ಮದೇ ತಪ್ಪು ಎಂದು ಏನೂ ತಿಳಿಯದ ಮಕ್ಕಳಂತೆ ಒಪ್ಪಿ ರೋಧಿಸಿಬಿಟ್ಟರು. ಈ ಪೊಳ್ಳು ಕೂಗುಗಳನ್ನೆಲ್ಲ ಸಮಾಲೋಚಿಸುವುದು ಬರೀ ವಿಡಂಬನ. ಆದರೂ ಈ ದುರ ದೃಷ್ಟ ದೇಶದಲ್ಲಿ ಓಲೆಯ ಕಡತಗಳಲ್ಲಿ ಸಿಕ್ಕುವುದೆಲ್ಲಾ ಋಷಿವಾಕ್ಯಗಳು, ಶಿರೋಧಾರ್ಯಗಳು, ನಿಶ್ಚಯಗಳು ಎಂದು ಜನಗಳು ನಂಬಿರುವರು. ಆದುದರಿಂದ ವಿಡಂಬನವಾದರೂ ನಾವು ಇಂಥವನ್ನೆಲ್ಲ ಕಟ್ಟಿಕೊಳ್ಳ ಬೇಕಾಯಿತು.

ಆಶ್ಚರ್ಯಗಳು ಇಲ್ಲಿಗೇ ಮುಗಿಯಲಿಲ್ಲ; ಕೃಷ್ಣನು ತಾನು ಮಾಡಿದ ಅಧರ್ಮಗಳಿಗಾಗಿ ಬಹು ನಾಚಿಕೆಯನ್ನು ಹೊಂದಿ, ಅದೇ ಸಮಯದಲ್ಲಿ ನಾಚಿಕೆಯಿಲ್ಲದವನಂತೆ ಪಾಂಡವರ ಮುಂದೆ ಈ ಪಾಪಾಚರಣೆಗಳ ವಿಷಯ ವಾಗಿಯೇ ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುವುದಕ್ಕಾರಂಭಿಸಿದನು.*

*ಏನೆಂದರೆ “ಭೀಷ್ಮ ಮೊದಲಾದ ಮಹಾರಥರೂ ಮತ್ತು ರಾಜಾ ದುರ್ಯೋಧ ನನೂ ಯುದ್ಧವಿದ್ಯೆಯಲ್ಲಿ ಅತ್ಯಂತ ನಿಪುಣರಾಗಿದ್ದರು. ನೀವು ಎಂದೆಂದಿಗೂ ಅವರನ್ನು ಧರ್ಮಯುದ್ಧದಲ್ಲಿ ಜೈಸುವುದಕ್ಕೆ ಆಗುತ್ತಿರಲಿಲ್ಲ. ನಾನು ನಿಮ್ಮ ಹಿತವನ್ನು ಕೋರಿ

ಈ ದುರ್ಯೋಧನನಿಂದಾದ ತಿರಸ್ಕಾರ ಮುಂತಾದುವುಗಳೆಲ್ಲವೂ ಮೂಲಮಹಾಭಾರತದಲ್ಲಿ ಇಲ್ಲವೆಂದು ಹೇಳಬೇಕಾದುದಿಲ್ಲ. ದ್ರೋಣವಧೆ ಮುಂತಾದುವೂ ಆಧಾರವಿಲ್ಲದುವುಗಳೆಂದು ನಾವು ಮೊದಲೇ ಹೇಳಿದ್ದೇವೆ. ಇವುಗಳ ಪ್ರಸಂಗವಿರುವ ಭಾಗವೂ ಕೂಡ ಅವಶ್ಯವಾಗಿ ಆಧಾರರಹಿತ ವಾದುವುಗಳೆಂದು ಬಿಡಬೇಕು. ಇಲ್ಲಿ ದ್ವಿತೀಯ ಸ್ತರದ ಕವಿಯ ಲೆಕ್ಕಣಿಕೆಯ ಗುರುತು ಕೂಡ ಸಿಕ್ಕುವುದಿಲ್ಲ. ಇವನು ಕೃಷ್ಣಭಕ್ತನು. ಇವೆಲ್ಲಾ ಕೃಷ್ಣವಿರೋಧಿಯಾದ ಮೂರನೆಯ ಸ್ತರದವನ ಬರವಣಿಗೆಯಾಗಿರಬೇಕು. ಶೈವ ಮುಂತಾದ ವೈಷ್ಣವ ದ್ವೇಷಿಗಳು ಅಲ್ಲಲ್ಲಿ ಮಹಾಭಾರತದ ಕಲೆಯನ್ನು ಹೆಚ್ಚಿಸಿರುವರೆಂದು ಮೊದಲೇ ತಿಳಿಸಿರುವೆನು. ಅವರೊಳಗೆ ಯಾರೋ ಇದನ್ನೆಲ್ಲ ಬರೆದಿರಬೇಕು. ಕೃಷ್ಣಭಕ್ತರಿಂದಲೂ ಒಂದುವೇಳೆ ಈ ಲೆಕ್ಕಣಿಕೆ ನಡೆದಿದ್ದರೂ ಇರಬಹುದು. ನಿಂದಾಸ್ತುತಿಯೂ ಕೂಡ ಭಾರತಕವಿಗಳ ವಿದ್ಯದಲ್ಲಿ ಒಂದು. ಇದಾದಮೇಲೆ ಏನಾದರೂ ಆಗಲಿ, ದುರ್ಯೋಧನನು ಅಶ್ವತ್ಥಾಮನನ್ನು ಕುರಿತು—

"ನಾನು ಅಮಿತ ತೇಜೋವಂತನಾದ ವಾಸುದೇವನ ಮಹಾತ್ಮ್ಯವನ್ನು ಚೆನ್ನಾಗಿ ತಿಳಿದಿರುವೆನು. ಅವರು ನನ್ನನ್ನು ಕ್ಷತ್ರಿಯ ಧರ್ಮದಿಂದ ಭ್ರಷ್ಟನನ್ನಾಗಿ ಮಾಡಗೊಡಲಿಲ್ಲ. ಆದುದರಿಂದ ನನ್ನ ವಿಷಯವಾಗಿ ದುಃಖ ಅವಶ್ಯವಿಲ್ಲ."

ಎಂದು ಹೇಳಿದನು. ಇಂತಹ ಹತ್ತಾರು ರಸಿಕರ ಗುಲ್ಲನ್ನು ಸಮಾಲೋಚನೆ ಗೈವುದು ವಿಡಂಬನೆಯಲ್ಲವೆ?

ಅನೇಕ ಉಪಾಯಗಳನ್ನು ಹೂಡಿ, ಮಾಯಾಬಲವನ್ನು ತೋರಿ, ಅವರನ್ನು ಕೊಲ್ಲಿಸಿದೆನು. ನಾನು ಹೀಗೆ ಕೃತ್ರಿಮ ವ್ಯಾಪಾರವನ್ನು ನಡಸದೇಹೋಗಿದ್ದರೆ, ನಿಮಗೆ ಜಯವೂ ಅರ್ಥಲಾಭವೂ ರಾಜ್ಯಪ್ರಾಪ್ತಿಯೂ ಎಂದೆಂದಿಗೂ ಆಗುತ್ತಿರಲಿಲ್ಲ. ಭೀಷ್ಮನೇ ಮೊದಲಾದ ಆ ನಾಲ್ಕುಜನ ಮಹಾತ್ಮರೂ ಅತಿರಥರೆಂದು ಪ್ರಖ್ಯಾತರಾಗಿ ದಿಕ್ಪಾಲಕರು ಒಟ್ಟುಗೂಡಿ ಬಂದರೂ ಧರ್ಮಯುದ್ಧದಲ್ಲಿ ಅವರನ್ನು ಕೊಲ್ಲುವುದಕ್ಕಾಗುತ್ತಿರಲಿಲ್ಲ; ಮತ್ತು ಯುದ್ಧದಲ್ಲಿ ಆಯಾಸವಿಲ್ಲದ ಗದಾಧಾರಿಯಾದ ದುರ್ಯೋಧನನನ್ನು ದಂಡಧಾರಿಯಾದ ಯಮನೇ ಆದರೂ ಧರ್ಮಯುದ್ಧದಲ್ಲಿ ಸೋಲಿಸುವುದಕ್ಕಾಗುತ್ತಿರಲಿಲ್ಲ. ಭೀಮನು ಮಾಡಿದ ಕೆಲಸವನ್ನು ಹೇಳಬೇಕೆ? ಶತ್ರುಗಳ ಸಂಖ್ಯೆ ಹೆಚ್ಚಿದರೆ ಕೂಟಯುದ್ಧವನ್ನವಲಂಬಿಸಿ, ಅವರನ್ನು ನಾಶಪಡಿಸಬೇಕು. ಮಹಾತ್ಮರಾದ ದೇವತೆಗಳೂ ಹೀಗೆ ಕೂಟಯುದ್ಧವನ್ನೇ ಮಾಡಿ, ಎಷ್ಟೋಸಲ ರಾಕ್ಷಸರನ್ನಟ್ಟಿರುವರು. ಅವರನ್ನೇ ಹಿಂಬಾಲಿಸುವುದು ಎಲ್ಲರಿಗೂ ಕರ್ತವ್ಯ." ಹೀಗೆ ಹೀನಾಯದ ಅಧರ್ಮ ಇನ್ನೆಲ್ಲಿಯೂ ಕೇಳಬರುವುದಿಲ್ಲ.

ನವಮ ಪರಿಚ್ಛೇದ

ಯುದ್ಧ ಪರಿಸಮಾಪ್ತಿ

ಅನ್ಯಾಯ ಯುದ್ಧದಲ್ಲಿ ದುರ್ಯೋಧನನು ಹತನಾದನೆಂದು ತಪಃ ಪ್ರಭಾವಶೀಲಳಾದ ಗಾಂಧಾರಿಯು ಕೇಳಿದರೆ, ಪಾಂಡವರನ್ನು ಭಸ್ಮಮಾಡಿ ಬಿಡುವಳೆಂದು ಯುಧಿಷ್ಠಿರನು ಬೆದರಿ ಕೃಷ್ಣನನ್ನು ಕುರಿತು—"ನೀನೇ ಹಸ್ತಿನಾವತಿಗೆ ಹೋಗಿ ಗಾಂಧಾರಿಯನ್ನೂ ಧೃತರಾಷ್ಟ್ರನನ್ನೂ ಸಮದಾಯಿಸ ಬೇಕು" ಎಂದು ಕೇಳಿಕೊಂಡನು.

ಇದು ಪ್ರಥಮ ಸ್ತರದ್ದಲ್ಲ—ಏಕೆಂದರೆ, "ನೀನು ಅವ್ಯಯನು. ನೀನೇ ಲೋಕದ ಸೃಷ್ಟಿಗೂ ಸಂಹಾರಕ್ಕೂ ಕರ್ತನು" ಎಂದು ಹೇಳಿದ್ದಾನೆ. ಇದಕ್ಕೆ ಸ್ವಲ್ಪ ಮುಂಚೆಯೇ ಅರ್ಜುನನೂ ಕೃಷ್ಣನೂ ರಥದಿಂದಿಳಿಯಲು ರಥವು ಉರಿದು ಬೂದಿಯಾಯಿತು. ಇದಕ್ಕೆ ಕಾರಣವನ್ನು ಅರ್ಜುನನು ಕೇಳಲು— "ಬ್ರಹ್ಮಾಸ್ತ್ರಪ್ರಭಾವದಿಂದ ಇದಕ್ಕೆ ಮೊದಲೇ ಬೆಂಕಿ ಬಿದ್ದಿತ್ತು. ನಾನು ಇದರಲ್ಲಿ ಇದ್ದೇನೆಂದು ಇದುವರೆಗೂ ಅದು ಸುಡಲಿಲ್ಲ" ಎಂದು ಹೇಳಿದನು. ಎಂದರೆ ನಾನು ದೇವರು ಎಂದು. ಇದು ದ್ವಿತೀಯ ಅಥವಾ ತೃತೀಯ ಸ್ತರದವನದು.

ಕೃಷ್ಣನು ಹಸ್ತಿನಾವತಿಗೆ ಹೋಗಿ, ಧೃತರಾಷ್ಟ್ರನಿಗೂ ಗಾಂಧಾರಿಗೂ ತಿಳಿವಳಿಕೆಯನ್ನು ಹೇಳಿದನು. ಇದರಲ್ಲಿ, ಇಲ್ಲಿ ನಿರೂಪಿಸತಕ್ಕ ಅಥವಾ ಸಮಾಲೋಚಿಸತಕ್ಕ ಅಂಶವಾವುದೂ ಇಲ್ಲ. ಇದಾದಮೇಲೆ ದುರ್ಯೋಧನನು ಅಶ್ವತ್ಥಾಮನನ್ನು ಸೇನಾಪತಿತ್ವಕ್ಕೆ ಗೊತ್ತುಮಾಡಿದನು. ಆಗ ಸೇನೆ ಸೇನಾಪತಿಯ ಹೊರತು ಕೃಪ ಕೃತವರ್ಮ ಎಂಬಿಬ್ಬರೇ. ಇಲ್ಲಿಗೆ ಶಲ್ಯಪರ್ವ ಮುಗಿಯಿತು.

ಇನ್ನು ಸೌಪ್ತಿಕಪರ್ವ. ಇದು ಅತ್ಯಂತ ಭಯಂಕರವಾದ ಕಾರ್ಯ ಗಳಿಂದ ತುಂಬಿದೆ. ಇದರ ಮೊದಲನೆಯ ಅಂಶದಲ್ಲಿ ಅಶ್ವತ್ಥಾಮನು ಕಳ್ಳನಂತೆ ರಾತ್ರಿಯಲ್ಲಿ ಪಾಂಡವರ ಬಿಡಾರವನ್ನು ಹೊಕ್ಕು, ನಿದ್ರೆಮಾಡುತ್ತಿದ್ದ ಧೃಷ್ಟ ದ್ಯುಮ್ನ, ಶಿಖಂಡಿ, ದ್ರೌಪದಿಯ ಪಂಚಪುತ್ರರು ಮತ್ತು ಸಮಸ್ತ ಪಾಂಚಾಲರು, ಸೇನೆ, ಸೇನಾನಾಯಕರು ಇವರನ್ನೆಲ್ಲ ಕೊಂದುಬಿಟ್ಟನು.

ಪಂಚಪಾಂಡವರು, ಕೃಷ್ಣ ಇವರನ್ನು ಬಿಟ್ಟರೆ ಪಾಂಡವ ಪಕ್ಷದಲ್ಲಿ ಮತ್ತಾರೂ ಉಳಿಯಲಿಲ್ಲ. ವಸ್ತುತಃ ಈ ಕುರುಕ್ಷೇತ್ರ ಯುದ್ಧ ಕುರು ಪಾಂಚಾಲರ ಯುದ್ಧ. ಪಾಂಚಾಲರು ನಿರ್ಮೂಲವಾಗಲು ಈ ಯುದ್ಧ ಮುಗಿಯಿತು.

ಇದಾದಮೇಲೆ, ಸೌಪ್ತಿಕಪರ್ವದಲ್ಲಿ ಐಷೀಕಪರ್ವಾಧ್ಯಾಯವಿರುವುದು. ಅಶ್ವತ್ಥಾಮನು ಹೀಗೆ ಕಳ್ಳಗೆಲಸವನ್ನು ಮಾಡಿ, ಪಾಂಡವರ ಭಯದಿಂದ ಕಾಡಿಗೆ ಹೋಗಿ ಅವಿತುಕೊಂಡನು. ಪಾಂಡವರು ಮರುದಿನ ಅವನನ್ನು ಹುಡುಕಿ ಹಿಡಿದರು. ಅಶ್ವತ್ಥಾಮನು ಆತ್ಮರಕ್ಷಣಾರ್ಥವಾಗಿ ಅತಿಭಯಂಕರವಾದ ಬ್ರಹ್ಮಶಿರಾಸ್ತ್ರವನ್ನು ಬಿಟ್ಟನು. ಅರ್ಜುನನು ಇದನ್ನು ನಿವಾರಿಸುವುದಕ್ಕೆಂದು ತಾನೊಂದು ಬ್ರಹ್ಮಶಿರಾಸ್ತ್ರವನ್ನು ಬಿಟ್ಟನು. ಈ ಅಸ್ತ್ರಗಳ ತೇಜಸ್ಸಿನಿಂದ ಬ್ರಹಾಂಡವೇ ಧ್ವಂಸವಾಗುತ್ತಿರುವುದನ್ನು ಕಂಡು ಋಷಿಗಳು ಕಣ್ಣು ಬಿಟ್ಟು, ಮಿಟಿ ಮಿಟಿಗುಟ್ಟುತ ಇದ್ದರು. ಅಶ್ವತ್ಥಾಮನು ತನ್ನ ತಲೆಯಲ್ಲಿದ್ದ ಸಹಜಮಣಿಯನ್ನು ಕತ್ತರಿಸಿ ದ್ರೌಪದಿಗೆ ಕಾಣಿಕೆಯಾಗಿ ಅರ್ಪಿಸಿದನು. ಇತ್ತಕಡೆ ಬ್ರಹ್ಮಶಿರವು ಪಾಂಡವರ ಸೊಸೆ ಉತ್ತರೆಯ ಗರ್ಭವನ್ನು ನಷ್ಟಪಡಿಸಿತು. ಇವಿಷ್ಟೂ ಅಸ್ವಾಭಾವಿಕವೆಂದು ಬಿಟ್ಟುಬಿಡಬೇಕು. ನಮ್ಮ ವಿಮರ್ಶೆಗೆ ತಕ್ಕ ಕೃಷ್ಣ ಚರಿತ್ರೆಯ ವಿಷಯ ಈ ಪರ್ವದಲ್ಲಿ ಇಲ್ಲ.

ಆಮೇಲೆ ಸ್ತ್ರೀಪರ್ವ. ಇದರಲ್ಲಿ ಇನ್ನೂ ಭಯಂಕರ. ಸತ್ತುಹೋದ ವೀರರ ವನಿತೆಯರ ಗೋಳು. ಇಂಥಾ ಗೋಳು ಇನ್ನೆಲ್ಲೂ ಇಲ್ಲ. ಇದರಲ್ಲಿ ಕೃಷ್ಣವಿಷಯಕವಾದ ಎರಡೇ ಎರಡು ಮಾತುಗಳು :

೧. ಧೃತರಾಷ್ಟ್ರನು ಆಲಿಂಗನೆ ಮಾಡಿಕೊಳ್ಳುವಾಗ ಭೀಮನನ್ನು ಪುಡಿಪುಡಿಮಾಡಬೇಕೆಂದುಕೊಂಡಿದ್ದನು. ಕೃಷ್ಣನು ಇದನ್ನು ತಪ್ಪಿಸುವುದಕ್ಕೆಂದೇ ಕಬ್ಬಿಣದ ಭೀಮ ಮೂರ್ತಿಯನ್ನು ಮಾಡಿಸಿಟ್ಟದ್ದನು. ಕುರುಡ ರಾಜನು ಅವನ್ನೇ ಪುಡಿಪುಡಿಮಾಡಿದನು. ಅಸ್ವಾಭಾವಿಕವಾದ ಇದೂ ಬಿಡತಕ್ಕುದು.

೨. ಗಾಂಧಾರಿಯು ಕೃಷ್ಣನಲ್ಲಿ ಬಹಳವಾಗಿ ಹೇಳಿಕೊಂಡು ಪೇಚಾಡಿ ಅತ್ತು, ಅವನನ್ನೇ ಶಪಿಸಿದಳು—

"ಎಲೈ ಜನಾರ್ದನನೇ, ಕೌರವರೂ ಪಾಂಡವರೂ ಕ್ರೋಧಾವೇಶದಿಂದ ದಗ್ಧರಾಗುತ್ತಿರಲು, ನೀನು ಯಾತಕ್ಕೋಸ್ಕರ ಉಪೇಕ್ಷೆಯನ್ನು ಮಾಡಿದೆ. ನಿನಗೆ ಬಹುಸಂಖ್ಯಾತವಾದ ಭೃತ್ಯರ ಸೈನ್ಯವೂ ಇರುವುದಲ್ಲಾ. ನೀನು ಶಾಸ್ತ್ರಜ್ಞಾನಸಂಪನ್ನನಾಗಿ, ವಾಕ್ಯವಿಶಾರದನಾಗಿ, ಅಸಾಧಾರಣ ಬಲವೀರ್ಯಶಾಲಿಯಾಗಿ ಇದ್ದರೂ ಬೇಕೆಂತಲೇ ಕೌರವರ ವಿನಾಶದಲ್ಲಿ ಉಪೇಕ್ಷೆಯನ್ನು ತೋರಿಸಿದೆ. ಆದುದರಿಂದ ನೀನು ಅವಶ್ಯವಾಗಿ ಇದರ ಫಲವನ್ನನುಭವಿಸುವಿ. ನಾನು ಪತಿಶುಶ್ರೂಷೆಯಿಂದ ಸಂಪಾದಿಸಿರುವ ಅತ್ಯಂತ ದುರ್ಲಭವಾದ ತಪಃ ಪ್ರಭಾವದಿಂದ ನಿನ್ನನ್ನು ಶಪಿಸುತ್ತಿದೇನೆ. ನೀನು ಕೌರವ ಪಾಂಡವರೆಂಬ ಜ್ಞಾತಿಗಳ ವಿಷಯದಲ್ಲಿ ಹೇಗೆ ಉಪೇಕ್ಷೆಯನ್ನು ಮಾಡಿ ನಾಶಪಡಿಸಿದೆಯೋ, ಹಾಗೆಯೇ ನಿನ್ನ ಜ್ಞಾತಿಗಳೂ ಕೂಡ ನಿನ್ನಿಂದಲೇ ನಾಶವನ್ನು ಹೊಂದಲಿ. ಆಮೇಲೆ ಮೂವತ್ತಾರು* ವರ್ಷಗಳಾಗಲು ನೀನು ಅಮಾತ್ಯ ಜ್ಞಾತಿಪುತ್ರರನ್ನು ಕಳೆದುಕೊಂಡು ಕಾಡುಪಾಲಾಗಿ, ಬಹು ಕುತ್ಸಿತವಾದ ಉಪಾಯದಿಂದ ಸಾಯುವನಾಗು. ನಿಮ್ಮ ಕುಲವನಿತೆಯರೂ ಭರತವಂಶದ ಮಹಿಳೆಯರಂತೆ ಪುತ್ರ ಬಂಧು ಬಾಂಧವರನ್ನು ನೀಗಿಕೊಂಡು ಗೋಳಾಡಲಿ.''

ಕೃಷ್ಣನು ನಕ್ಕು ದೇವಿ—

"ನನ್ನ ವಿನಾ ಯದುವಂಶೀಯರನ್ನು ನಾಶಮಾಡುವುದಕ್ಕೆ ಶಕ್ತರಾದವರು ಯಾರೂ ಇಲ್ಲ. ನಾನು ಈ ವಂಶವನ್ನು ಧ್ವಂಸಮಾಡಬೇಕೆಂದು ಅನೇಕ ದಿನಗಳಿಂದ ಗೊತ್ತುಮಾಡಿಕೊಂಡೇ ಇದೇನೆ. ನಾನು ಅವಶ್ಯವಾಗಿ ಮಾಡಬೇಕಾದದ್ದನ್ನು ನೀನೀಗ ಸೂಚಿಸಿದೆ. ಯಾದವರು ದೇವಮಾನವರಾರಿಂದಲೂ ವಧ್ಯರಲ್ಲ. ಅವರು ತಮ್ಮ ತಮ್ಮೊಳಗೇ ಬಡಿದಾಡಿಕೊಂಡು ಹಾಳಾಗುವರು."

ಹೀಗೆ ದ್ವಿತೀಯ ಸ್ತರದ ಕವಿ ಮೌಸಲಪರ್ವಕ್ಕೆ ಸೂಚಿಕೆಯನ್ನು ಹಾಕಿಕೊಂಡಿರುವನು. ಮೌಸಲಪರ್ವವು ದ್ವಿತೀಯ ಸ್ತರದ್ದೆಂದು ನಾವೂ ಕೂಡ ಮುಂಚಿತವಾಗಿಯೇ ಸೂಚನೆಮಾಡಿಟ್ಟು ಇರುವೆವು.

---

*ಮೂವತ್ತಾರು ಏಕೆ?

ದಶಮ ಪರಿಚ್ಛೇದ

ವಿಧಿ ಸಂಸ್ಥಾಪನೆ

ನಾವು ದುಸ್ತರವಾದ ಕುರುಕ್ಷೇತ್ರ ಯುದ್ಧದ ವಿವರಣೆಯಿಂದ ಪಾರಾದೆವು. ಕೃಷ್ಣ ಚರಿತ್ರೆ ಪುನಃ ಸುವಿಮಲ ಪ್ರಭೆಯಿಂದ ಪ್ರಕಾಶಿಸುತ್ತ ನಡೆದಿದೆ. ಆದರೆ ಶಾಂತಿ ಮತ್ತು ಅನುಶಾಸನಿಕ ಪರ್ವಗಳಲ್ಲಿ ಕೃಷ್ಣನು ಈಶ್ವರನೆಂದು ಸ್ಪಷ್ಟವಾಗಿ ಸ್ವೀಕರಿಸಲ್ಪಟ್ಟಿರುವನು.

ಯುದ್ಧವಾದಮೇಲೆ—"ಅಗಾಧ ಬುದ್ಧಿಯುಳ್ಳ ಯುಧಿಷ್ಠಿರನು ತನ್ನ ಪ್ರಭಾವವನ್ನು ಮತ್ತೆ ತೋರಿದನು. ಇಷ್ಟು ಜ್ಞಾತಿಗಳನ್ನು ಕೊಂದ ನನ್ನ ಮನಸ್ಸು ಸುಖವನ್ನು ಹೊಂದದೆ ಇದೆ. ಆದುದರಿಂದ ನಾನು ವನಕ್ಕೆ ಹೋಗಿ ಭಿಕ್ಷಾಟನೆಯಿಂದ ಜೀವಿಸುವೆನು" ಎಂದನು. ಅರ್ಜುನನು ಸಿಟ್ಟುಗೊಂಡು ಯುಧಿಷ್ಠಿರನಿಗೆ ಬಹಳವಾಗಿ ಹೇಳಿದನು. ಆಗ ಅರ್ಜುನ ಯುಧಿಷ್ಠಿರರ ನಡುವೆ ಬಹಳವಾಗಿ ವಾದಾನುವಾದ ನಡೆಯಿತು. ಕೊನೆಗೆ ಭೀಮ, ನಕುಲ, ಸಹದೇವ, ದ್ರೌಪದಿ ಮತ್ತು ಸ್ವಯಂ ಕೃಷ್ಣನೂ ಸಹಿತ ಅನೇಕ ಪ್ರಕಾರವಾಗಿ ಹೇಳಿದರು. ದುರ್ಬಲಚಿತ್ತನಾದ ಯುಧಿಷ್ಠಿರನು ಏತರಿಂದಲೂ ಸಮಾಧಾನವನ್ನು ಪಡೆಯಲಿಲ್ಲ. ವ್ಯಾಸ ನಾರದ ಮೊದಲಾದವರು ಹೇಳಿದರೂ ಆಗದೆಹೋಯಿತು. ಕೊನೆಗೆ ಕೃಷ್ಣನ ಮಾತಿಗೆ ಸಿಕ್ಕಿಬಿದ್ದು ಮಹಾಸಡಗರದಿಂದ ಹಸ್ತಿನಾವತಿಯನ್ನು ಪ್ರವೇಶಿಸಬೇಕಾಯಿತು.

ಕೃಷ್ಣನು ಅವನಿಗೆ ರಾಜ್ಯಾಭಿಷೇಕವನ್ನು ಮಾಡಿಸಿದನು. ಯುಧಿಷ್ಠಿರನು ಕೃಷ್ಣನನ್ನು ಬಹುವಾಗಿ ಸ್ತುತಿಸಿದನು. ಆದರೆ ಈ ಸ್ತುತಿಯೂ ಜಗದೀಶ್ವರನದು. ಹೀಗೆ ಸ್ತುತಿಮಾಡಿ ಕೃಷ್ಣನ ಕಾಲಿಗೆ ಬಿದ್ದನು. ಕೃಷ್ಣನು ಯುಧಿಷ್ಠಿರನಿಗಿಂತ ವಯಸ್ಸಿನಲ್ಲಿ ಚಿಕ್ಕವನು. ಯುಧಿಷ್ಠಿರನು ಇದಕ್ಕೆ ಮುಂಚೆ ಹೀಗೆಲ್ಲಿಯೂ ನಮಸ್ಕಾರವನ್ನಾಗಲಿ ಸ್ತುತಿಯನ್ನಾಗಲಿ ಮಾಡಿಲ್ಲ.

ಇತ್ತ ಕೌರವಶ್ರೇಷ್ಠನಾದ ಭೀಷ್ಮನು ಶರಶಯ್ಯೆಯಲ್ಲಿ ತೀವ್ರವಾದ ಸಂಕಟದಿಂದ ತಲ್ಲಣಿಸುತ್ತ, ಉತ್ತರಾಯಣವನ್ನು ಎದುರು ನೋಡುತ್ತ

ಶರೀರವನ್ನು ಕಾಪಾಡುತ್ತಿದ್ದನು. ಅವನು ಋಷಿ ಸಮೂಹದಿಂದ ಸುತ್ತು ವರಿಯಲ್ಪಟ್ಟು, ಸರ್ವಮಯನೂ ಸರ್ವಾಧಾರಿಯೂ, ಪರಮಪುರುಷನೂ ಆದ ಕೃಷ್ಣನನ್ನು ಧ್ಯಾನಮಾಡತೊಡಗಿದನು. ಅವನ ಸ್ತುತಿಯನ್ನು ಕೇಳಿ, ಚಂಚಲನಾದ ಕೃಷ್ಣನು ಯುಧಿಷ್ಠಿರ ಮುಂತಾದವರನ್ನು ಕರೆದುಕೊಂಡು ಭೀಷ್ಮನಿಗೆ ದರ್ಶನ ಕೊಡುವುದಕ್ಕೆಂದು ಬಂದನು. ದಾರಿಯಲ್ಲಿ ಯುಧಿಷ್ಠಿರನು ಕೃಷ್ಣನನ್ನು ಕೇಳಿ, ಅವನಿಂದ ಪರಶುರಾಮ ಉಪಾಖ್ಯಾನವನ್ನು ಶ್ರವಣಮಾಡಿದನು.

ಕೃಷ್ಣನು ಯುಧಿಷ್ಠಿರನಿಗೆ ಭೀಷ್ಮನ ಬಳಿಗೆ ಹೋಗಿ ಜ್ಞಾನಲಾಭವನ್ನು ಪಡೆಯುವಂತೆ ಸಮ್ಮತಿಸಿದ್ದನು. ಸರ್ವಧರ್ಮವೇತ್ತನಾದ ಭೀಷ್ಮನು ಸತ್ತ ಬಳಿಕ, ಅವನ ಜ್ಞಾನವು ಅವನ ಸಂಗಡಲೇ ಹೋಗಿಬಿಡುವುದು. ಆದುದರಿಂದ, ಮೃತ್ಯುವಿಗಿಂತ ಮುಂಚೆ ಅವನ ಜ್ಞಾನವು ಜಗತ್ತಿನಲ್ಲಿ ಪ್ರಚಾರಿತವಾಗಲೆಂಬುದೇ ಅವನ ಇಷ್ಟ. ಹೀಗೆಂದೇ ಯುಧಿಷ್ಠಿರನನ್ನು ಜ್ಞಾನಲಾಭಕ್ಕಾಗಿ ಅಲ್ಲಿಗೆ ಹೋಗುವುದೆಂದು ಹೇಳಿದ್ದು. ಭೀಷ್ಮನನ್ನು ಕುರಿತು, ಕೃಷ್ಣನು ಯುಧಿಷ್ಠಿರನಿಗೆ ಧರ್ಮೋಪದೇಶವನ್ನು ಮಾಡಿ ಅನುಗ್ರಹಿಸೆಂದು ಹೇಳಿದನು.

ಭೀಷ್ಮನು ಒಪ್ಪದೇಹೋದನು. "ಧರ್ಮ ಕರ್ಮಗಳೆಲ್ಲವೂ ನಿನ್ನಿಂದಲೇ. ಸರ್ವಜ್ಞನಾದ ನೀನೇ ಯುಧಿಷ್ಠಿರನಿಗೆ ಉಪದೇಶಮಾಡುವುದುತ್ತಮ. ನಾನು ಬಾಣಗಳ ಪೆಟ್ಟಿನಿಂದ ಕಷ್ಟಪಡುತ್ತ ಸಾವನ್ನು ನಿರೀಕ್ಷಿಸಿಕೊಂಡಿದೇನೆ. ನನ್ನ ಬುದ್ಧಿ ಸ್ಥಿರವಾಗಿಲ್ಲ. ನಾನು ಏಳಲಾರದೆ ಇದೇನೆ" ಎಂದನು. ಕೃಷ್ಣನು "ಶರಘಾತದಿಂದುಂಟಾದ ಸಮಸ್ತ ಕ್ಲೇಶವೂ ಹೋಗುವಂತೆಯೂ, ಅಂತಃಕರಣವೂ ಜ್ಞಾನದೃಷ್ಟಿಯೂ ಉಂಟಾಗುವಂತೆಯೂ ನಿನಗೆ ವರವನ್ನು ಕೊಟ್ಟಿದೇನೆ. ಈಗ ನಿನ್ನ ಬುದ್ಧಿ ನಿಶ್ಚಲವಾಗಿರುವುದು. ಮನಸ್ಸು ಸತ್ತ್ವ ಗುಣ ಪರಿಪೂರ್ಣವಾಗಿರುವುದು, ದಿವ್ಯ ದೃಷ್ಟಿಯ ಪ್ರಭಾವದಿಂದ ಭೂತ ಭವಿಷ್ಯದ್ವರ್ತಮಾನಗಳೆಲ್ಲವೂ ನಿನಗೀಗ ಕರತಲಾಮಲಕವಾಗುತಲಿವೆ" ಎಂದನು.

ಆದರೂ ಭೀಷ್ಮನು ಒಪ್ಪದೆ—ನೀನೇ ಉಪದೇಶವನ್ನು ಯುಧಿಷ್ಠಿರನಿಗೇಕೆ ಮಾಡಬಾರದು? ಎಂದು ಕೇಳಿದನು. ಸಮಸ್ತ ಹಿತಾಹಿತ

ಕರ್ಮಗಳೂ ನನ್ನಿಂದಲೇ ಉಂಟಾಗುವುವು. ಚಂದ್ರನಿಗೆ ಅಮೃತಕಿರಣನೆಂಬ ಯಶಸ್ಸು ಹೇಗುಂಟಾಗಿದೆಯೋ ಹಾಗೆಯೇ ನಿನ್ನ ಮನಸ್ಸೂ ಅಮೃತಮಯವಾಗಿರುವುದು. ಈಗ ನನ್ನ ಅಪೇಕ್ಷೆ ನಿನ್ನನ್ನು ಕೀರ್ತಿವಂತನನ್ನಾಗಿ ಮಾಡಬೇಕೆಂದಿರುವುದರಿಂದ ನಿನಗೆ ಪೂರ್ಣ ಪ್ರಜ್ಞೆಯುಂಟಾಗುವಂತೆ ಮಾಡಿರುವೆನು, ಇತ್ಯಾದಿ.

ಆಗ ಭೀಷ್ಮನು ಸಂತೋಷದಿಂದ ಧರ್ಮತತ್ತ್ವವನ್ನು ಯುಧಿಷ್ಠಿರನಿಗೆ ನಿರೂಪಿಸಿದನು ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಎಂಬಿವುಗಳನ್ನು ಸವಿಸ್ತಾರವಾಗಿ ಹೇಳುವಲ್ಲಿಗೆ ಶಾಂತಿಪರ್ವವು ಮುಗಿಯುವುದು.

ಈ ಶಾಂತಿಪರ್ವದಲ್ಲಿ ಮೂರು ಸ್ತರಗಳು ಕಾಣುವುವು. ಪ್ರಥಮ ಸ್ತರವು ಈ ಪರ್ವದ ಅಸ್ಥಿಪಂಜರ ಮಾತ್ರ. ಇದರಮೇಲೆ ಆರಾರು ಆವಾವ ಧರ್ಮವನ್ನು ಹೇಳಬೇಕೆಂದಿದ್ದರೋ ಅದನ್ನೆಲ್ಲ ಬೆರಸಿಟ್ಟಿದ್ದಾರೆ. ಇದರೊಳಗೆ ನಮ್ಮ ವಿಮರ್ಶೆಗೆ ಯೋಗ್ಯವಾದ ದೊಡ್ಡ ವಿಷಯವೊಂದಿರುವುದು. ಕೇವಲ ಧಾರ್ಮಿಕ ರಾಜನನ್ನು ಧರ್ಮರಾಜ್ಯಕ್ಕೆಲ್ಲ ರಾಜನನ್ನಾಗಿ ಮಾಡಿದ ಮಾತ್ರಕ್ಕೆ ಧರ್ಮರಾಜ್ಯ ಸಂಸ್ಥಾಪಿತವಾಗುವುದಿಲ್ಲ. ಇಂದಿನ ರಾಜನೇನೋ ಧಾರ್ಮಿಕನಾದ ಯುಧಿಷ್ಠಿರನು. ನಾಳೆ ಅವನ ಉತ್ತರಾಧಿಕಾರಿ ಪಾಪಾತ್ಮನಾಗಬಹುದು. ಆದುದರಿಂದ ಧರ್ಮರಾಜ್ಯವನ್ನು ಸ್ಥಾಪಿಸಿ ಅದರ ರಕ್ಷಣೆಗೆ ಧರ್ಮಸಮ್ಮತವಾದ ವ್ಯವಸ್ಥೆಯನ್ನು ವಿಧಿಸಬೇಕು. ರಣದಲ್ಲಿ ಜಯವು ರಾಜ್ಯಸ್ಥಾಪನೆಯ ಮೊದಲನೆಯ ಕಾರ್ಯ ಮಾತ್ರ. ಅದರ ರಕ್ಷಣೆಗಾಗಿ ಶಾಸನ(ಲೆಜಿಸ್ಲೇಷನ್)ಗಳನ್ನು ವಿಧಿಸುವುದು ಮುಖ್ಯವಾದ ಕೆಲಸ. ಕೃಷ್ಣನು ಈ ಕಾರ್ಯಕ್ಕೆ ಭೀಷ್ಮನನ್ನು ಗೊತ್ತುಮಾಡಿದನು. ಇದಕ್ಕೆ ಮುಖ್ಯ ಕಾರಣವೂ ಇತ್ತು. ಆದರ್ಶನೀತಿಜ್ಞನಾದರೆ ಈ ಕಾರಣದಮೇಲೆ ದೃಷ್ಟಿಯನ್ನಿಡುವನು. ಇದನ್ನೆಲ್ಲ ತಾನಾಗಿ ಕೃಷ್ಣನು ಭೀಷ್ಮನಿಗೆ ಹೇಳುತ್ತಲಿದ್ದಾನೆ—

"ತಾವು ವಯೋವೃದ್ಧರಾಗಿಯೂ ಶಾಸ್ತ್ರಜ್ಞಾನವುಳ್ಳವರಾಗಿಯೂ ಶುದ್ಧಾಚಾರ ಸಂಪನ್ನರಾಗಿಯೂ ಇರುವಿರಿ. ರಾಜಧರ್ಮವೂ ಇತರ ಧರ್ಮಗಳೂ ನಿಮಗೆ ತಿಳಿಯದೆ ಇಲ್ಲ. ಹುಟ್ಟಿದಂದಿನಿಂದಲೂ ತಮ್ಮಲ್ಲಿ ಅವ ದೋಷವೂ ಕಂಡುಬಂದಿಲ್ಲ. ನರಪತಿಗಳು ತಮ್ಮನ್ನು ಸರ್ವ ಧರ್ಮವನ್ನೂ ಬಲ್ಲವರೆಂದು ಕೀರ್ತಿಸುತ್ತಿರುವರು. ಆದುದರಿಂದ ತಂದೆಯೋಪಾದಿಯಲ್ಲಿ ನೀವೇ ಈ ಭೂಪಾಲರಿಗೆ ನೀತಿಯನ್ನುಪದೇಶಿಸೋಣಾಗಲಿ. ತಾವು ಪರಿಶುದ್ಧಾಂತಃಕರಣರಾಗಿ ದೇವರನ್ನು ಪೂಜಿಸಿರುವಿರಿ.

ಆದುದರಿಂದ ಈಗ ಈ ಭೂಪತಿಗಳು ನಿಮ್ಮಲ್ಲಿ ಧರ್ಮವೃತ್ತಾಂತವನ್ನು ಕೇಳಲು ಉತ್ಸುಕರಾಗಿರುವರು. ಮುಖ್ಯವಾಗಿ ಸಮಸ್ತ ಧರ್ಮಗಳನ್ನೂ ಉಪದೇಶಿಸಬಲ್ಲವರು ತಾವೇ. ಧರ್ಮೋಪದೇಶವನ್ನು ಮಾಡುವುದು ವಿದ್ವಾಂಸರ ಕರ್ತವ್ಯವೆಂದು ಪಂಡಿತರು ಹೇಳುತ್ತಾರೆ."

ಆಮೇಲೆ ಆನುಶಾಸನಿಕಪರ್ವ. ಇಲ್ಲಿಯೂ ಹಿತೋಪದೇಶ— ಯುಧಿಷ್ಠಿರನು ಕೇಳುವುದು. ಭೀಷ್ಮನು ಹೇಳುವುದು. ಹಲವು ವ್ಯರ್ಥವಾದ ಮಾತುಗಳನ್ನು ಕಟ್ಟಿಕೊಂಡು ಆನುಶಾಸನಿಕ ಪರ್ವವು ರಚಿತವಾಗಿದೆ. ಇದಷ್ಟೂ ಕೊನೇ ಸ್ತರದ ಕವಿಗಳದು. ಇದರ ನಡುವೆ ನಮಗುಪಯೋಗಕರ ಗಳಾದ ಅಂಶಗಳಾವುವೂ ಇಲ್ಲ.

ಕೊನೆಗೆ ಭೀಷ್ಮನು ಸ್ವರ್ಗಾರೋಹಣವನ್ನು ಮಾಡಿದನು. ಇದು ಮಟ್ಟಿಗೆ ಪ್ರಥಮ ಸ್ತರದ ಕವಿಯಿಂದಾದುದು.

ಏಕಾದಶ ಪರಿಚ್ಛೇದ

ಕಾಮಗೀತೆ

ಭೀಷ್ಮನು ಸ್ವರ್ಗಾರೋಹಣವನ್ನು ಮಾಡಿದಮೇಲೆ ಯುಧಿಷ್ಠಿರನು ಮತ್ತೆ ಅತ್ತು ಕಣ್ಣೀರಲ್ಲಿ ಮುಳುಗಿದನು. ಹಟವನ್ನು ಹಿಡಿದು ವನವನ್ನು ಕುರಿತು ತೆರಳುವುದಕ್ಕೆ ಅನುವಾದನು. ಹಲವರು ಹಲವು ಪರಿಗಳಿಂದ ತಿಳಿಯಹೇಳಿದರೂ ಕೇಳದೆ ಇರುವಾಗ ಕೃಷ್ಣನು ಈ ಸಲ ರೋಗಕ್ಕೆ ತಕ್ಕ ಔಷಧವನ್ನು ಕೊಟ್ಟನು. ಇಂಥ ರೋಗವನ್ನು ಗೊತ್ತುಮಾಡುವುದು ಇನ್ನಾರಿಗೂ ಸಾಧ್ಯವಿಲ್ಲ. ಯುಧಿಷ್ಠಿರನ ಈಗಿನ ರೋಗ ಅಹಂಕಾರ. ಇಂಗ್ರೇಜೀ ವಿದ್ಯಾಲಯಗಳಲ್ಲಿ Pride (ಪ್ರೈಡ್) ಶಬ್ದಕ್ಕೆ ಅಹಂಕಾರವೆಂಬ ಪ್ರತಿಶಬ್ದವನ್ನು ಕಲಿತಿರುವೆವು. ವಸ್ತುತಃ ಹಾಗಲ್ಲ. ಅಹಂಕಾರವೂ ಅಭಿಮಾನವೂ ಬೇರೆ ಬೇರೆಯಾದುವು—

"'ನಾನು ಸಮಸ್ತವನ್ನೂ ಮಾಡುತ್ತೇನೆ,' 'ಇದು ನನ್ನದು,' 'ಇದು ನನ್ನ ಸುಖ,' 'ಇದು ನನ್ನ ದುಃಖ' ಎಂಬುದೇ ಅಹಂಕಾರ. ಇದೇ ಯುಧಿಷ್ಠಿರನ ದುಃಖಕ್ಕೆ ಕಾರಣ. ನಾನು ಈ ಪಾಪವನ್ನು ಮಾಡಿದ್ದೇನೆ.

ನನಗೆ ಈ ದುಃಖವುಂಟಾಗಿರುವುದು. ನಾನು, ನಾನು ಎಂಬ ಸಮಸ್ತವೂ ನನ್ನ ಮೇಲೆ ಇದೆ. ಆದುದರಿಂದ ನಾನು ವನಕ್ಕೆ ಹೋಗುವೆನು," ಇತ್ಯಾದಿ ಆತ್ಮಾಭಿಮಾನವೇ ಯುಧಿಷ್ಠಿರನ ಗೋಳಾಟಕ್ಕೆ ಕಾರಣ.

ಈ ದುಃಖಮೂಲಕ್ಕೆ ಕೊಡಲಿ ಹಾಕುವುದೇ ಧರ್ಮವೇತ್ತ ಶ್ರೇಷ್ಠನ ಉದ್ದೇಶ. ಆದುದರಿಂದ ಇವನು ಕಠಿನವಾದ ಮಾತುಗಳಿಂದ ಹೀಗೆ ಹೇಳಿದನು:—"ತಮ್ಮ ಶತ್ರುಗಳೆಲ್ಲರೂ ಇನ್ನೂ ಉಳಿದಿರುವರು. ತಮ್ಮ ಶರೀರದೊಳಗಡೆಯಲ್ಲಿ ಅಹಂಕಾರ ಸ್ವರೂಪಿಯಾದ ಜಯಿಸಲಸಾಧ್ಯನಾದ ಶತ್ರುವು ಇದ್ದಾನೆ. ಅವನನ್ನು ತಾವು ಮನಸ್ಸಿಟ್ಟು ನೋಡಿದಹಾಗೆ ಕಾಣುವುದಿಲ್ಲವೆ!" ಎಂದು ಹೇಳಿ ತತ್ತ್ವಜ್ಞಾನವನ್ನು ಉಪದೇಶಿಸುವುದರ ಮೂಲಕ ಒಂದು ರೂಪಕ (ವರ್ಣನೆ) ವನ್ನು ಹೇಳಿರುವನು. ಯುಧಿಷ್ಠಿರ ನಿಗುಪದೇಶಿಸಿರುವ ಅತ್ಯುತ್ಕೃಷ್ಟವಾದ ಜ್ಞಾನೋಪದೇಶವನ್ನು ಕೆಳಗೆ ಎತ್ತಿರುವೆನು. ನಾವು ಗೀತೆಯಲ್ಲಿ ಓದಿರುವ ನಿಷ್ಕಾಮ ಧರ್ಮ ಇಲ್ಲಿಯೂ ಇದೆ. ಇಂಥ ಮಹತ್ತಾದ ಧರ್ಮೋಪದೇಶ ಕೃಷ್ಣಚರಿತ್ರೆಯಲ್ಲಿ ವಿಶೇಷವಾಗಿ ಅರಳಿ ಇದೆ:—"ಎಲೈ ಧರ್ಮರಾಯನೆ, ರೋಗಗಳು ಶಾರೀರಕ, ಮಾನಸಿಕ ಎಂಬ ಎರಡು ಬಗೆಯಾಗಿ ಇರುವುವು. ಇವೆರಡೂ ಒಂದನ್ನೊಂದು ಅನುಸರಿಸಿ ಇನ್ನೊಂದನ್ನು ಹುಟ್ಟಿಸಿಕೊಳ್ಳುತ್ತವೆ. ಶರೀರದಲ್ಲಿ ಪೀಡೆಯುಂಟಾದರೆ ಅದು ಶಾರೀರಕವ್ಯಾಧಿಯೆಂದೂ, ಮನಸ್ಸಿನಲ್ಲಿ ಪೀಡೆಯುಂಟಾದರೆ ಅದು ಮನೋವ್ಯಾಧಿಯೆಂದೂ ಎನ್ನಿಸಿಕೊಳ್ಳುತ್ತವೆ. ವಾತ ಪಿತ್ತ ಶ್ಲೇಷ್ಮ ಎಂಬಿವು ಮೂರೂ ಶರೀರದ ಗುಣಗಳು. ಇವು ಸಮಭಾವದಲ್ಲಿದ್ದರೆ ಶರೀರವು ಸ್ವಸ್ಥತೆಯಲ್ಲಿರುವುದು. ಈ ಗುಣಗಳಲ್ಲಿ ವೈಷಮ್ಯವು ಹುಟ್ಟಿದರೆ ಆಗ ಅಸ್ವಸ್ಥತೆಯುಂಟಾಗುವುದು. ಪಿತ್ತ ಹೆಚ್ಚಿದರೆ ಶ್ಲೇಷ್ಮ ಕಮ್ಮಿಯಾಗುವುದು. ಶ್ಲೇಷ್ಮ ಹೆಚ್ಚಿದರೆ ಪಿತ್ತ ಕಮ್ಮಿಯಾಗುವುದು. ಶರೀರಕ್ಕೆ ಹೇಗೋ ಹಾಗೆ ಆತ್ಮಕ್ಕೂ ಮೂರು ಗುಣಗಳುಂಟು. ಇವುಗಳನ್ನು ಸತ್ತ್ವ, ರಜಸ್ಸು, ತಮಸ್ಸು ಎನ್ನುವರು. ಈ ಮೂರೂ ಸಮಭಾವದಲ್ಲಿದ್ದರೆ ಆತ್ಮ ಆರೋಗ್ಯಲಾಭವನ್ನು ಪಡೆಯುವುದು. ಈ ಮೂರರ ಪೈಕಿ ಯಾವುದು ಹೆಚ್ಚಿದರೂ ಇನ್ನೊಂದು ಕಡಮೆಯಾಗುವುದು. ಹರ್ಷ ಹೆಚ್ಚಿದರೆ ಶೋಕ ಕಮ್ಮಿಯಾಗುವುದು. ಶೋಕ ಹೆಚ್ಚಿದರೆ ಹರ್ಷವೂ ಕಡಮೆ ಬೀಳುವುದು. ದುಃಖವೇಳೆಯಲ್ಲಿ

ಸುಖವನ್ನು ಯಾರುತಾನೆ ಹೊಂದಬಲ್ಲರು. ಹೇಗಾದರೂ ಆಗಲಿ, ಈಗ ಸುಖದುಃಖಗಳನ್ನು ಜ್ಞಾಪಿಸಿಕೊಳ್ಳುವುದು ನಿಮ್ಮ ಕೆಲಸವಲ್ಲ. ಸುಖ ದುಃಖಗಳನ್ನು ಮೀರಿದ ಪರಬ್ರಹ್ಮನನ್ನು ಸ್ಮರಿಸುವುದೇ ನಿಮ್ಮ ಕರ್ತವ್ಯ.... ಭೀಷ್ಮ ದ್ರೋಣರುಗಳೊಡನೆ ತಾವು ಭಯಂಕರವಾದ ಯುದ್ಧವನ್ನು ಮಾಡಿದಿರಿ; ಈಗ ಅಹಂಕಾರವೊಂದರ ಸಂಗಡ ಮೊದಲಿಗಿಂತಲೂ ಭಯಂಕರವಾದ ಯುದ್ಧ ಉಂಟಾಗಿರುವುದು. ಈ ಯುದ್ಧಕ್ಕೆ ತಾವು ಎದೆಗೊಟ್ಟು ನಿಲ್ಲಬೇಕಾದ್ದು ಅವಶ್ಯ. ಯೋಗ ಮತ್ತು ಅದಕ್ಕೆ ಉಪಯೋಗ ವಾದ ಕಾರ್ಯಗಳನ್ನೆಲ್ಲ ಅಣಿಮಾಡಿಕೊಂಡು ಮುಂದುವರೆದರೆ ಈ ಯುದ್ಧ ದಲ್ಲಿಯೂ ಜಯಲಾಭವಾಗುವುದು. ಈ ಯುದ್ಧದಲ್ಲಿ ಶರಸಮೂಹವೂ, ಭೃತ್ಯರೂ, ಬಂಧುಗಳೂ ಯಾವ ಸಹಾಯವನ್ನೂ ಮಾಡಲಾರರು. ಮನಸ್ಸೊಂದನ್ನೇ ಸಹಾಯವಾಗಿಟ್ಟುಕೊಂಡು ಯುದ್ಧಕ್ಕೆ ಇಳಿಯಬೇಕು. ಇಲ್ಲಿ ಗೆಲ್ಲದೆ ಹೋದರೆ ದುಃಖದ ಎದುರು ತಟ ಸಿಕ್ಕುವುದೇ ಇಲ್ಲ. ಆದುದರಿಂದ ತಾವು ನನ್ನ ಉಪದೇಶವನ್ನನುಸರಿಸಿ ತಡಮಾಡದೆ ಎಚ್ಚರ ಮಾಡಿಕೊಂಡು ಅಹಂಕಾರವನ್ನು ಮುರಿದು, ದುಃಖವನ್ನು ತೊಲಗಿಸಿ ಸ್ವಸ್ಥಚಿತ್ತತೆಯನ್ನು ಸಾಧಿಸಿ ರಾಜ್ಯವನ್ನು ಪರಿಪಾಲಿಸಿ.

"ಎಲೈ ಧರ್ಮರಾಜನೆ, ರಾಜ್ಯಾದಿಗಳನ್ನು ಪರಿತ್ಯಜಿಸಿದ ಮಾತ್ರ ದಿಂದಲೇ ಸಿದ್ಧಿಯನ್ನು ಪಡೆಯಬಹುದೆಂಬುದು ಎಂದಿಗೂ ಆಗತಕ್ಕದ್ದಲ್ಲ. ಇಂದ್ರಿಯ ಸಮುದಾಯಗಳನ್ನು ಸೋಲಿಸಿದಾಗ್ಯೂ ಸಿದ್ಧಿಲಾಭ ದೊರೆಯು ವುದು ಸಂಶಯ. ರಾಜ್ಯಾದಿ ವಿಷಯ ಸಮುದಾಯಗಳನ್ನು ಬಿಟ್ಟೂ ಯಾರು ಮನಸ್ಸಿನಲ್ಲಿಯೇ ವಿಷಯ ಭೋಗಗಳ ವಾಸನೆಯನ್ನು ಪಡೆಯುವರೋ, ಅವರ ಧರ್ಮವೂ ಸುಖವೂ ನಿನ್ನ ಶತ್ರುಗಳಿಗೂ ಬೇಡ. ಮಮತೆ ಸಂಸಾರದ ಗಂಟಿಗೂ ನಿರ್ಮಮತೆ ಬ್ರಹ್ಮಲಾಭಕ್ಕೂ ಕಾರಣವೆಂದು ನಿರ್ದಿಷ್ಟವಾಗಿದೆ. ಒಂದಕ್ಕೊಂದು ವಿರೋಧಭಾವವನ್ನು ಹೊಂದಿರತಕ್ಕ ಮಮತೆ ಮತ್ತು ನಿರ್ಮಮತೆಗಳು ಜನಗಳ ಹೃದಯವನ್ನವಲಂಬಿಸಿ, ಅಲಕ್ಷ್ಯಭಾವದಿಂದ ಇದ್ದುಕೊಂಡು ಪರಸ್ಪರ ಹೋರಾಟವನ್ನು ಮಾಡಿ, ಸೋಲು ಗೆಲವುಗಳನ್ನು ಹೊಂದುತ್ತಲಿರುವುವು. ಯಾರಾದರೆ ಈಶ್ವರನುಂಟೆಂದೂ ಅವನು ನಾಶರಹಿತನೆಂದೂ ಗೊತ್ತುಮಾಡಿಕೊಂಡು,

ಜಗತ್ತಿನ ಇರುವಿಕೆಯನ್ನೂ ನಾಶಕ್ಕೆ ಮಾರಿರುವುದನ್ನೂ ಅರಿಯುವನೋ ಅವನು ಪ್ರಾಣಿಗಳ ದೇಹನಾಶವನ್ನು ಮಾಡಿದರೂ ಹಿಂಸೆ, ಪಾಪ ಇವುಗಳಿಗೆ ತಾನು ಒಳಗಾಗನು. ಸ್ಥಾವರ ಜಂಗಮಗಳಿಂದ ಕೂಡಿದ ಜಗತ್ತಿನ ಆಧಿಪತ್ಯವನ್ನು ಪಡೆದಿದ್ದಾಗ್ಯೂ ಮಮತೆಯನ್ನು ಬಿಡಲಾರದವನು ಸಣ್ಣ ಸಂಸಾರಿಯಂತೆಯೇ ಒದೆದಾಡುತ್ತಲಿರಬೇಕು. ಅರಣ್ಯದಲ್ಲಿ ಫಲಮೂಲಗಳನ್ನು ತಿಂದು ಹೊಟ್ಟೆಯನ್ನು ಹೊರೆಯುವವನೂ ಕೂಡ ವಿಷಯವಾಸನೆಯನ್ನು ಬಿಡದೆಹೋದರೆ ಸಂಸಾರಪಾಶಕ್ಕೆ ಕಟ್ಟುಬೀಳುವನು. ಆದುದರಿಂದ ಇಂದ್ರಿಯಗಳೂ ವಿಷಯ ಸಮುದಾಯಗಳೂ ಮಾಯಾಮಯಗಳೆಂದು ನಿಶ್ಚಯವಾಗಿ ನೀನರಿತುಕೊಳ್ಳಬೇಕು. ಯಾವನು ಇವುಗಳ ವಿಷಯವಾಗಿ ಕೊಂಚವೂ ಮಮತೆಯನ್ನು ಇಟ್ಟುಕೊಳ್ಳುವುದಿಲ್ಲವೋ ಅವನು ನಿಶ್ಚಯವಾಗಿಯೂ ಸಂಸಾರದಿಂದ ಮುಕ್ತಿಲಾಭವನ್ನು ಪಡೆಯುವನು. ಕಾಮಜಾಲಕ್ಕೆ ಸಿಕ್ಕಿಬಿದ್ದ ಮೂಢನು ಎಂದಿಗೂ ಪ್ರಶಂಸೆಗೆ ಪಾತ್ರನಾಗನು. ಕಾಮ ಮನಸ್ಸಿನಿಂದ ಹುಟ್ಟುವುದು. ಸಮಸ್ತವಾದ ಪ್ರವರ್ತನೆಗಳಿಗೂ ಇದೇ ಮೂಲಕಾರಣ. ಯಾವ ಮಹನೀಯರು ಬಹು ಜನ್ಮಗಳ ಅಭ್ಯಾಸಬಲದಿಂದ ಕಾನು ಅಧರ್ಮವೆಂದು ತಿಳಿದು ಇದನ್ನು ಗೆಲ್ಲುವಾಸೆಯಿಂದ ವೇದಾಧ್ಯಯನ, ತಪಸ್ಸು, ವ್ರತ, ಯಜ್ಞ ವಿವಿಧ ನಿಯಮಗಳು ಧ್ಯಾನಮಾರ್ಗ ಯೋಗಮಾರ್ಗ ಮುಂತಾದುವುಗಳನ್ನು ಅವಲಂಬಿಸುವರೋ ಅವರು ಕಾಮವನ್ನು ನಿಗ್ರಹಿಸಲು ಸಮರ್ಥರಾಗುವರು. ಹೀಗೆ ನಿಗ್ರಹವೇ ಧರ್ಮ ಮತ್ತು ಮೋಕ್ಷಕ್ಕೆ ಬೀಜಸ್ವರೂಪ."

ಪ್ರಾಚೀನಜ್ಞರು ಹೇಳಿರುವ ಕಾಮಗೀತೆಯನ್ನು ನಿನಗೆ ಹೇಳುವೆನು ಕೇಳು :—"ನಿರ್ಮಮತೆ ಯೋಗಾಭ್ಯಾಸಗಳನ್ನು ಬಿಟ್ಟು ಯಾರೂ ನನ್ನನ್ನು ಜಯಿಸಲು ಶಕ್ತರಾಗಿಲ್ಲ. ಜಪಾದಿ ಕಾರ್ಯಗಳಿಂದ ನನ್ನನ್ನು ಜಯಿಸಲು ಯತ್ನಿಸಿದವರ ಮನಸ್ಸಿನಲ್ಲಿ ನಾನು ಅಭಿಮಾನರೂಪವಾಗಿ ಹುಟ್ಟಿ, ಅವರ ಕೆಲಸವನ್ನು ವಿಫಲಮಾಡುತ್ತೇನೆ. ಯಜ್ಞಾನುಷ್ಠಾನಗಳಿಂದ ನನ್ನನ್ನು ಜಯಿಸಲು ಯತ್ನಿಸುವವರ ಮನಸ್ಸಿನಲ್ಲಿ ಜಂಗಮ ಮಧ್ಯಗತವಾದ ಜೀವಾತ್ಮರೂಪದಲ್ಲಿ ಎಲ್ಲರಿಗೂ ಕಾಣುವ ಹಾಗೇ ಹುಟ್ಟುವೆನು. ವೇದವೇದಾಂತಗಳ ಸಮಾಲೋಚನೆಯಿಂದ ನನ್ನನ್ನು ಅಡಗಿಸಲು

ಯತ್ನಮಾಡುವವನ ಮನಸ್ಸಿನಲ್ಲಿ ಸ್ಥಾವರದೊಳಗಿರುವ ಜೀವಾತ್ಮನಂತೆ ಅವ್ಯಕ್ತವಾಗಿರುವೆನು. ಧೈರ್ಯದಿಂದ ನನ್ನನ್ನು ಗೆಲ್ಲುವುದಕ್ಕೆ ಪ್ರಯತ್ನಿಸುವವನ ಮನಸ್ಸಿನಿಂದ ನಾನು ಬೇರೆಯಾಗುವುದೇ ಇಲ್ಲ. ತಪಸ್ಸಿನಿಂದ ನನ್ನನ್ನು ಗೆಲ್ಲಲೆಳಸುವವನ ಮನಸ್ಸಿನಲ್ಲಿಯೇ ನಾನು ಹುಟ್ಟಿ ಬೆಳೆಯುವೆನು. ಯಾವನಾದರೆ ಮೋಕ್ಷಾರ್ಥಿಯಾಗಿ ನನ್ನನ್ನು ಜಯಿಸಲೆಳಸುವನೋ, ನಾನು ಅವನನ್ನು ನೋಡಿ ಕುಣಿದು ಉಪಹಾಸಮಾಡುವೆನು. ಪಂಡಿತರು ನನ್ನನ್ನು ಆರಿಂದಲೂ ಕೊಲ್ಲಲ್ಪಡಲು ಆಗದವನೆಂದೂ ಸನಾತನನೆಂದೂ ಹೇಳುವರು."

"ಎಲೈ ಧರ್ಮರಾಜನೆ, ಈ ಕಾಮಗೀತೆಯನ್ನು ನಿನಗೆ ಹೇಳಿರುವೆನು. ಕಾಮವನ್ನು ಜಯಿಸುವುದು ಕಷ್ಟತಮ. ಆದುದರಿಂದ ನೀನು ಶಾಸ್ತ್ರೋಕ್ತವಾಗಿ ಅಶ್ವಮೇಧ ಮೊದಲಾದ ಅನೇಕ ಯಜ್ಞಗಳನ್ನು ಮಾಡು. ಕಾಮಗಳನ್ನು ಧರ್ಮವಿಷಯದಲ್ಲಿ ಪರಿವರ್ತಿಸುವಂತೆ ಮಾಡು. ಬಾರಿಬಾರಿಗೂ ಬಂಧುವಿಯೋಗ ಸಂಕಟಗಳಿಗೆ ಸಿಕ್ಕಿ ನರಳುತಲಿರುವುದು ನಿನಗೆ ಅತ್ಯಂತ ಅನುಚಿತ. ಎಷ್ಟು ಅನುತಾಪ ಪಟ್ಟರೂ ತಿರುಗಿ ಅವರನ್ನು ನೀನು ನೋಡಲಾರೆ. ಈಗ ಮಹಾ ಅಟ್ಟಹಾಸದಿಂದ ಯಜ್ಞಗಳನ್ನು ಮಾಡುವವನಾಗಿ ಇಹಲೋಕದಲ್ಲಿ ಅತ್ಯುನ್ನತವಾದ ಕೀರ್ತಿಯನ್ನೂ, ಪರಲೋಕದಲ್ಲಿ ಉತ್ಕೃಷ್ಟವಾದ ಗತಿಯನ್ನೂ ಪಡೆದುಕೊಳ್ಳಬಹುದು."

ದ್ವಾದಶ ಪರಿಚ್ಛೇದ

ಕೃಷ್ಣನ ಪ್ರಯಾಣ

ಧರ್ಮರಾಜ್ಯ ಸಂಸ್ಥಾಪಿತವಾಯಿತು. ಧರ್ಮ ಹರಡುತ್ತಲಿರುವುದು. ಪಾಂಡವರೊಡನೆ ಕೃಷ್ಣನ ಸಂಬಂಧದಿಂದ ಈ ಗ್ರಂಥದಲ್ಲಿ ಇರುವುದೂ ಮತ್ತು ಇತರ ಸಂಬಂಧದಿಂದ ಇರುವುದೂ ಮುಗಿಯಿತು. ಇಲ್ಲಿ ಕೃಷ್ಣನು ಮಹಾಭಾರತದಿಂದ ಮಾಯವಾಗುವುದುಚಿತ. ಆದರೆ, ರಚನೆಯ ಕಡಿತದಿಂದ ಬಹು ಪೀಡಿತರಾದವರು ಕೃಷ್ಣನನ್ನು ಸುಮ್ಮನೆ ಬಿಡತಕ್ಕವರಲ್ಲ. ಅರ್ಜುನನ ಮುಖದಲ್ಲಿ ಅವರು ಅನಾವಶ್ಯಕವಾಗಿ ಅದ್ಭುತವಾದೊಂದು ಪ್ರಸ್ತಾಪವನ್ನು ಎತ್ತಿದರು. "ಯುದ್ಧಕಾಲದಲ್ಲಿ ನನಗೆ ನೀನು ಮಾಡಿದ ಧರ್ಮೋಪದೇಶ

ವೆಲ್ಲವೂ ಮರೆತುಹೋಯಿತು. ಈಗ ಇನ್ನೊಂದು ಸಲ ನನಗೆ ಹೇಳು" ಎಂದು. ಕೃಷ್ಣನು ಅರ್ಜುನನಿಗೆ ಇಲ್ಲಿ ಹೇಳಿದ್ದು :—

"ಮೊದಲು ನಾನು ನಿನಗೆ ಮಾಡಿದ ಉಪದೇಶಗಳು ಈಗ ನನ್ನ ಜ್ಞಾಪಕಕ್ಕೆ ಬಾರವು. ಆಗ ನಾನು ಯೋಗಪ್ರಭಾವದಿಂದ ಆ ಉಪದೇಶಗಳನ್ನು ನಿನಗೆ ಕೊಟ್ಟಿದ್ದೆ. ನೀನು ಶ್ರದ್ಧೆಯಿಲ್ಲದ ದಡ್ಡ. ಇನ್ನು ನಿನಗೆ ನಾನೇನು ಹೇಳುವುದೂ ಬೇಕಿಲ್ಲ. ಆದರೂ ಒಂದಿತಿಹಾಸವನ್ನು ಹೇಳುವೆನು."

ಈ ಇತಿಹಾಸದಲ್ಲಿ ಹೇಳಿರುವ ವ್ಯಕ್ತಿಗಳನ್ನು ಅವಲಂಬಿಸಿಕೊಂಡು ಕೊಂಚ ತತ್ತ್ವಜ್ಞಾನವನ್ನು ನಿರೂಪಿಸಿದನು. ಮೊದಲು ಹೇಳಿದ್ದು 'ಗೀತಾ' ಎಂದು ಪ್ರಸಿದ್ಧವಾಗಿರುವುದಷ್ಟೆ! ಈಗ ಹಾಗೆ ಹೇಳುವುದಕ್ಕೆ 'ಅನುಗೀತೆ' ಎಂದು ಇದರ ಒಂದು ಭಾಗಕ್ಕೆ 'ಬ್ರಾಹ್ಮಗೀತ' ಎಂದೂ ಗ್ರಂಥಕಾರನು ಹೆಸರಿಕ್ಕಿದ್ದಾನೆ.

ಭಗವದ್ಗೀತಾ, ಪ್ರಜಾಗರ, ಮಾರ್ಕಂಡೇಯ ಸಮಸ್ಯಾ, ಸನತ್ಸುಜಾತೀಯ—ಈ ಅನುಗೀತ ಮೊದಲಾದ ಹಲವು ಧರ್ಮಸಂಬಂಧವಾದ ಗ್ರಂಥಗಳು ಮಹಾಭಾರತದಲ್ಲಿ ಬೆರಕೆಯಾಗಿ, ಅದರ ಅಂಶಗಳೇ ಎಂದು ಬಳಕೆಗೆ ಬಂದಿದೆ. ಇವುಗಳಲ್ಲಿ ಶ್ರೇಷ್ಠವಾದದ್ದು 'ಗೀತೆಯಾದರೂ ಮಿಕ್ಕವುಗಳಲ್ಲಿಯೂ ಸಾರವಾದ ಮಾತುಗಳಿರುವುವು. ಅನುಗೀತೆಯೂ ಉತ್ತಮ ಗ್ರಂಥ; "ಮೋಕ್ಷಮುಲ್ಲ ಭಟ್ಟರು" (Max Mullar) ತಮ್ಮ Sacred Books of the East—ಪೂರ್ವದೇಶದ ಪೂಜ್ಯಗ್ರಂಥಗಳು ಎಂಬ ಗ್ರಂಥಾವಳಿಯೊಳಗೆ ಇದಕ್ಕೂ ಸ್ಥಾನವನ್ನು ಕೊಟ್ಟಿರುವರು. ಶ್ರೀಯುತ ತ್ರ್ಯಂಬಕ ತೆಲಂಗರು* ಅನುಗೀತೆಯನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿದ್ದಾರೆ. ಗ್ರಂಥ ಎಂಥಾದ್ದಾದರೂ ಇದು ಕೃಷ್ಣೋಕ್ತಿಯಲ್ಲಿ. ಗ್ರಂಥಕಾರನೋ ಅಥವಾ ಮತ್ತಾರೋ ಕೃಷ್ಣನ ಬಾಯಲ್ಲಿ ಹೊರಟಿತೆಂದು ಹೇಳಿದ್ದಾನೆ. ಇವನ

"ಇವರು ಪ್ರಖ್ಯಾತರಾದ ಮಹಾರಾಷ್ಟ್ರ ದೇಶದ ಪಂಡಿತರು (ಓರಿಯಂಟಲ್ ಸ್ಕಾಲರ್). ಇವರು ಬೊಂಬಾಯಿ "ಹೈಕೋರ್ಟ್ ಜಡ್ಜಿ"ಯಾಗಿದು ಮಹಾರಾಷ್ಟ್ರ ಇತಿಹಾಸವನ್ನೂ ಇನ್ನೂ ಅನೇಕ ಅಮೂಲ್ಯ ಗ್ರಂಥಗಳನ್ನೂ ಬರೆದಿರುವರು. ಇವರ ದೇಶವಾತ್ಸಲ್ಯ 'ಕಾಂಗ್ರೆಸ್' ಮೆಂಬರಾಗಿ ಮಾಡಿದ ಹಲವು ಕೆಲಸಗಳಿಂದ ಕಂಡು ಬಂದಿದ.

ಜೋಡುವಣಿಯ ಸಂದು ಬಿರಕುಗಳು ಮುಚ್ಚದೆ ಚೆನ್ನಾಗಿಯೇ ಕಾಣ ಬರುತ್ತವೆ. ಮತ್ತು ಗೀತೆಯ ಧರ್ಮದ ಸಂಗಡ ಅನುಗೀತೆಯ ಧರ್ಮವನ್ನು ಹೋಲಿಸಿದರೆ, ಗೀತೆಯನ್ನು ತಿಳಿದವನಿಂದ ರಚಿಸಲ್ಪಟ್ಟಿತೆಂದು ಹೇಳುವ ಮಟ್ಟಿಗೂ ಇಲ್ಲ. ತೆಲಂಗರು ತಮ್ಮ ಪುಸ್ತಕದ ಪೀಠಿಯಲ್ಲಿ ಕೊಟ್ಟಿರುವ ಅನುಕ್ರಮಣಿಕೆಯಲ್ಲಿ ಪ್ರಮಾಣಗಳನ್ನುದಾಹರಿಸಿ, ಅನುಗೀತೆಯು ಗೀತೆಯನ್ನು ಬರೆದ ನೂರಾರು ವರ್ಷಗಳಾದಮೇಲೆ ಆದುದೆಂದು ಹೇಳಿರುವುದು ಸಂತೋಷಕರವಾದ ವಿಷಯವಾಗಿದೆ. ಇದನ್ನು ಈಗ ವಿಮರ್ಶಿಸುವುದು ನಮ್ಮ ಕೆಲಸವಲ್ಲ. ಕೃಷ್ಣ ಚರಿತ್ರೆಯ ಯಾವ ಅಂಶದ ಭಾರವೂ ಅನುಗೀತೆಯಮೇಲೆ ಇಲ್ಲ. ಅನುಗೀತೆ ಮತ್ತು ಬ್ರಾಹ್ಮಣ ಗೀತೆ ಪ್ರಸಂಗಗಳು ಪರ್ವಸಂಗ್ರಹಾಧ್ಯಾಯದಲ್ಲಿ ಸೂಚಿತವಾಗಿಲ್ಲವೆಂದು ಹೇಳಿದರೆ ಸಾಕು.

ಅರ್ಜುನನಿಗೆ ಉಪದೇಶವನ್ನು ಕೊಟ್ಟು ಅವನಿಂದಲೂ ಯುಧಿಷ್ಠಿರನಿಂದಲೂ ಬೀಳ್ಕೊಂಡು ಕೃಷ್ಣನು ದ್ವಾರಕಿಗೆ ಪ್ರಯಾಣಮಾಡಿದನು. ಈ ಬೀಳ್ಕೊಳ್ಳುವಿಕೆಯು ಮನುಷ್ಯ ಪ್ರಕೃತಿಗೆ ಸಹಜವಾದ ಸ್ನೇಹದ ಕುರುಹುಗಳಿಂದ ತುಂಬಿದೆ. ಕೃಷ್ಣನ ಮನುಷ್ಯವಾಸಿಯನ್ನು ಮೊದಲೇ ನಾವು ಅನೇಕ ಸಾರಿ ಉದಾಹರಿಸಿರುವೆವು. ಪುನಃ ಅದನ್ನಿಲ್ಲಿ ವಿಸ್ತರಿಸಿ ಪ್ರಯೋಜನವಿಲ್ಲ.

ದಾರಿಯಲ್ಲಿ ಉತಸ್ಕ ಮನಿಯನ್ನು ಕೃಷ್ಣನು ಕಂಡನು. ಯುದ್ಧ ನಿವಾರಣೆಯನ್ನು ಮಾಡಲಿಲ್ಲವೆಂದು ಕೃಷ್ಣನನ್ನು ಇವನು ಶಪಿಸುವುದಕ್ಕೆ ಹೋದನು. "ಶಾಪವನ್ನು ಕೊಟ್ಟರೆ ತಪಸ್ಸು ಕ್ಷಯವಾಗುವುದು. ನಾನು ಸಂಧಿಯನ್ನು ಮಾಡಿಸಬೇಕೆಂದು ಎಷ್ಟೋ ಸಾಹಸವನ್ನು ಮಾಡಿದೆನು. ಅಲ್ಲದೆ ನಾನು ಜಗದೀಶ್ವರನು" ಎಂದು ಹೇಳಿದನು. ಬಳಿಕ ಮುನಿಯು ಇವನನ್ನು ವಂದಿಸಿ ಸ್ತುತಿಸಿ, ಕೃಷ್ಣನ ವಿಶ್ವರೂಪವನ್ನು ನೋಡಬೇಕೆಂದು ಕೇಳಿಕೊಳ್ಳಲು, ಅವೇ ಪ್ರಕಾರ ವಿಶ್ವರೂಪವನ್ನು ತೋರಿಸಿದನು. ಆಮೇಲೆ ಬಲವಂತದಿಂದ ತನಗೆ ಬೇಕಾದ ವರಗಳನ್ನು ಪಡೆದುಕೊಂಡರು. ಇಷ್ಟಾದ ಬಳಿಕ ಚಂಡಾಲ ಮತ್ತು ನಾಯಿ. "ಚಂಡಾಲನು ನಾಯಿಯ ಉಚ್ಚೆಯನ್ನು ಕುಡಿಯೆಂದು ಉತಸ್ಕನಿಗೆ ಹೇಳಿದನು" ಇತ್ಯಾದಿ. ಇನ್ನೂ ಇತರ ಅಸಹ್ಯಕರವಾದ ವಿಷಯಗಳು. ಉತಸ್ಕ ಸಮಾಗಮ ವೃತ್ತಾಂತವು ಪರ್ವಸಂಗ್ರಹಾಧ್ಯಾಯದಲ್ಲಿಲ್ಲ. ಇದು ಮಹಾಭಾರತಕ್ಕೆ ಸೇರಿದ್ದೆಂದಿಗೂ

ಅಲ್ಲ. ಇದರ ವಿಷಯುವೂ ನಮಗವಶ್ಯಕವಾದುದಲ್ಲ. ಇದು ಮೂರನೆಯ ಸ್ತರದ್ದೆಂದು ಸ್ಪಷ್ಟವಾಗುವುದು.

ಕೃಷ್ಣನು ದ್ವಾರಕಿಗೆ ಬಂದುಬಾಂಧವರನ್ನು ಸಂದರ್ಶಿಸಿದನು. ವಸುದೇವನು ಯುದ್ಧವೃತ್ತಾಂತವನ್ನು ಕೃಷ್ಣನಿಂದ ಕೇಳುವುದಕ್ಕೆ ಅಪೇಕ್ಷಿಸಲು ಅದೇ ಪ್ರಕಾರ ತಂದೆಗೆ ಹೇಳಿರುವನು. ಇದು ಸಂಕ್ಷೇಪವಾಗಿ ಅತ್ಯುಕ್ತಿಗಳಿಲ್ಲದೆ ಮತ್ತು ಅನೈಸರ್ಗಿಕವಾದ ಘಟನೆಗಳನ್ನು ಬಿಟ್ಟು ಮುಖ್ಯ ವಿಷಯಗಳಿಂದ ಕೂಡಿ ಇರುವುದು. ಅಭಿಮನ್ಯು ವಧೆಯನ್ನು ಮಾತ್ರ ಮುಚ್ಚಿರುವನು. ಸುಭದ್ರೆಯು ಕೃಷ್ಣನೊಡನೆಯೇ ದ್ವಾರಕಿಗೆ ಹೋಗಿದ್ದಳು, ಇವಳು ಅಭಿಮನ್ಯು ವಧೆಯ ವೃತ್ತಾಂತವನ್ನು ಎತ್ತಿದಳು. ಆಗ ಕೃಷ್ಣನು ಇದನ್ನು ವಿಸ್ತಾರವಾಗಿ ಹೇಳಿದನು.

ಇತ್ತಕಡೆ ಯುಧಿಷ್ಠಿರನು ಕೃಷ್ಣನನ್ನು ಕಳುಹಿಸಿಕೊಡುವಾಗ ಅಶ್ವಮೇಧ ಯಾಗಕ್ಕೆ ಮತ್ತೆ ಬರಬೇಕೆಂದು ಬೇಡಿಕೊಂಡಿದ್ದನು. ಯಜ್ಞಕಾಲವು ಸಮಿಾಪಿಸಲು ಯಾದವರಿಂದ ಕೂಡಿ ಹಸ್ತಿನಾವತಿಗೆ ಕೃಷ್ಣನು ತೆರಳಿದನು.

ಅಭಿಮನ್ಯುವಿನ ಹೆಂಡತಿಯಾದ ಉತ್ತರೆಯು ಕೃಷ್ಣನು ಬಂದಮೇಲೆ ಒಂದು ಮೃತ ಪುತ್ರನನ್ನು ಪ್ರಸವಿಸಿದಳು. ಕೃಷ್ಣನು ಅದನ್ನು ಬದುಕಿಸಿದನು. ಇಷ್ಟರಿಂದ ಕೃಷ್ಣನ ಈಶ್ವರಶಕ್ತಿಯನ್ನುಪಯೋಗಿಸಿ ಈ ಕೆಲಸ ನಡೆಯಿತೆಂದು ತಿಳಿಯುವುದಿಲ್ಲ. ಈಗಿನ ಅನೇಕ ವೈದ್ಯರು ಸತ್ತಮಗು ಈಚೆಗೆ ಬಂದರೆ ಬದುಕಿಸಬಲ್ಲರು. ಅಲ್ಲದೆ ಹೀಗೆ ಬದುಕಿರುವುದನ್ನು ಅನೇಕವಾಗಿ ನಾವೂ ನೋಡಿರುವೆವು. ಇದರಿಂದ ಆಗಿನ ಕಾಲದಲ್ಲಿ ಹಲವರಿಗೆ ತಿಳಿಯದಿದ್ದ ವಿಷಯ ಗಳನ್ನು ಕೃಷ್ಣನು ಬಲ್ಲವನಾಗಿದ್ದನು. ಅವನು ಆದರ್ಶ ಪುರುಷನಾದುದರಿಂದ ಸರ್ವಪ್ರಕಾರವಾದ ವಿದ್ಯೆಯಲ್ಲಿಯೂ ತಿಳುವಳಿಕೆಯಲ್ಲಿಯೂ ಹೆಚ್ಚಿಗೆಯನ್ನು ಹೊಂದಿದವನಾಗಿದ್ದನು.

ಕೊನೆಗೆ ಯಜ್ಞ ನಿರ್ವಿಘ್ನವಾಗಿ ಪರಿಸಮಾಪ್ತಿಯಾಯಿತು. ಕೃಷ್ಣನು ದ್ವಾರಕಿಗೆ ಹಿಂದಿರುಗಿದನು ಇಷ್ಟಾದ ಬಳಿಕ ಪಾಂಡವರು ಕೃಷ್ಣನನ್ನು ಸಂದರ್ಶಿಸಲಿಲ್ಲ.

—ಷಷ್ಠ ಖಂಡ ಸಂಪೂರ್ಣ—

ಸಪ್ತಮ ಖಂಡ

ಪ್ರ ಭಾ ಸ

ಯೋಽಸೌ ಯುಗ ಸಹಸ್ರಾಂತೇ। ಪ್ರದೀಪ್ತಾರ್ಚಿರ್ವಿಭಾವಸುಃ ॥
ಸಂಭಕ್ಷಯತಿ ಭೂತಾನಿ। ತಸ್ಮೈ ಘೋರಾತ್ಮನೇ ನಮಃ ॥

ಶಾಂತಿಪರ್ವ । ಅ. ೪೭

ಪ್ರಥಮ ಪರಿಚ್ಛೇದ

ಯದುವಂಶ ನಾಶ

ಆಮೇಲೆ ಆಶ್ರಮವಾಸಿಕಪರ್ವ. ಇದರಲ್ಲಿ ಕೃಷ್ಣ ಸಂಬಂಧವಾಗಿ ಏನೂ ಇಲ್ಲ. ಇದಾದಮೇಲೆ ಭಯಂಕರವಾದ ಮೌಸಲಪರ್ವ. ಇದರಲ್ಲಿ ಯದುವಂಶವು ನಿಶ್ಶೇಷವಾಗಿ ಧ್ವಂಸವಾಗಿ, ಕೃಷ್ಣಬಲರಾಮರು ದೇಹವನ್ನು ಬಿಡುವರು. ಯದುವಂಶೀಯರು ಒಬ್ಬರನ್ನೊಬ್ಬರು ಬಡಿದಾಡಿ ಸತ್ತರು. ಕೃಷ್ಣನು ಈ ಮಹಾಭಯಂಕರವಾದ ಅನಿಷ್ಟವನ್ನು ಪರಿಹರಿಸುವುದಕ್ಕೆ ಯಾವ ಉಪಾಯವನ್ನೂ ಯೋಚಿಸದಿದ್ದುದು ಹಾಗಿರಲಿ; ಅವನ ಕೈಯಿಂದಲೇ ಅನೇಕ ಯಾದವರು ಪ್ರಾಣಬಿಟ್ಟರು. ಹೇಗೆಂದಿದೆ :—ಗಾಂಧಾರಿಯು ಶಪಿಸಿದಂತೆ ಮೂವತ್ತಾರು ವರ್ಷಗಳು ಕಳೆದ ಮೇಲೆ ಯಾದವರು ಅತ್ಯಂತ ದುರ್ಮಾರ್ಗಪರಾಯಣರಾಗಿದ್ದರು. ಒಂದು ಸಲ ವಿಶ್ವಾಮಿತ್ರ, ಕಣ್ವ, ನಾರದರೆಂಬ ಲೋಕಪ್ರಖ್ಯಾತರಾದ ಋಷಿಗಳು ದ್ವಾರಕಿಗೆ ಬಂದರು." ದುರ್ವಿನೀತರಾದ ಯಾದವರು ಕೃಷ್ಣನ ಮಗನಾದ ಶಾಂಬನಿಗೆ ಸ್ತ್ರೀವೇಷವನ್ನು ಹಾಕಿ ಋಷಿಗಳ ಮುಂದಕ್ಕೆ ಕರೆದುಕೊಂಡು ಹೋಗಿ "ಈಕೆಯು ಗರ್ಭವತಿಯು, ಇವಳಿಗೆ ಎಂಥ ಮಗು ಆಗುವುದೋ ಹೇಳಬೇಕು" ಎಂದು ಕೇಳಿದರು. ಪುರಾಣೇತಿಹಾಸಗಳಲ್ಲಿ ವರ್ಣಿಸಲ್ಪಟ್ಟಿರುವ ಋಷಿಗಳು ಅತಿಭಯಾನಕವಾದ ಕ್ರೋಧಪರವಶರು. ಮಾತು ಮಾತಿಗೂ ಅವರು ಕೊಡುವ ಶಾಪಗಳನ್ನು ನೋಡಿದರೆ, ಜಿತೇಂದ್ರಿಯರೂ ಈಶ್ವರಪರಾಯಣರೂ ಆದವರು ಇವರೆಂದು ಹೇಳುವುದಕ್ಕೆ ಬದಲು ಕೊಲೆಪಾತಕ ನರಪಿಶಾಚಿಗಳು

ಎನ್ನಬೇಕು. ಈಗಿನ ಕಾಲದಲ್ಲಿ ಒಳ್ಳೆಯವರೂ ಇಂಥ ವಿಷಯಗಳಲ್ಲಿ ಕೊಂಚ ಹಾಸ್ಯವನ್ನು ಮಾಡಿ ನಕ್ಕು ಮುಗಿಸಿಬಿಡುತ್ತಿದ್ದರು. ಕೊಂಚ ತಿರಸ್ಕಾರವೇ ಇಂಥ ಅಪರಾಧಕ್ಕೆ ಸಾಕಾಗಿತ್ತು. ಆದರೆ ಜಿತೇಂದ್ರಿಯರಾದ ಮಹರ್ಷಿಗಳು "ಕಬ್ಬಿಣದ ಮುಸಲವನ್ನು ಈಕೆ ಹೆರುವಳು. ಅದರಿಂದ ಕೃಷ್ಣ ಬಲರಾಮರ ವಿನಾ ಮಿಕ್ಕವರೆಲ್ಲರೂ ಒಬ್ಬರಿಗೊಬ್ಬರು ಹೊಡೆದಾಡಿ ಸಾಯುಃ ವರು" ಎಂದು ಶಪಿಸಿದರು. ಕೃಷ್ಣನು ಈ ಮಾತನ್ನು ಕೇಳಿ, ಮುನಿಗಳು ಹೇಳಿದ್ದು ಅವಶ್ಯವಾಗಿ ನಡೆದೇ ನಡೆಯುವುದು ಎಂದು ಶಾಪಪರಿಹಾರಕ್ಕೆ ಉಪಾಯವೇನನ್ನೂ ಹೇಳದೆ ಹೋದನು.

ವಾಸ್ತವವಾಗಿ ಶಾಂಬನು ಪುರುಷನಾಗಲಿ ಏನೇ ಆಗಲಿ, ಕಬ್ಬಿಣದ ಒನಕೆಯನ್ನೇನೋ ಹೆತ್ತನು. ಯಾದವರಾಜನೂ (ಕೃಷ್ಣನು ರಾಜನಲ್ಲ) ರಾಜಮುಖಂಡನೂ ಆದ ಉಗ್ರಸೇನನು ಈ ಮುಸಲವನ್ನು ಪುಡಿಮಾಡಿಬಿಡಿ ಎಂದು ಅಪ್ಪಣೆಮಾಡಿದನು. ಅದನ್ನು ಪುಡಿಮಾಡಿ ಸಮುದ್ರದಲ್ಲಿ ಕದಡಿದರು. ಇತ್ತಕಡೆ ಯಾದವರು ಸರ್ವಧರ್ಮವನ್ನೂ ಬಿಟ್ಟರು. ಕೃಷ್ಣನು ಅವರ ವಿನಾಶದ ಆಶೆಯಿಂದ ಯಾದವರನ್ನು ಪ್ರಭಾಸತೀರ್ಥಕ್ಕೆ ಹೊರಡುವಂತೆ ಬಲವಂತಮಾಡಿದನು. ಪ್ರಭಾಸತೀರ್ಥಕ್ಕೆ ಹೋಗಿ ಯಾದವರು ಸುರಾಪಾನ ವನ್ನು ಮಾಡಿ ನಾನಾವಿಧವಾದ ಉತ್ಸವಗಳನ್ನು ಮಾಡತೊಡಗಿದರು. ಕುರುಕ್ಷೇತ್ರದ ಮಹಾರಥಿಕನಾದ ಸಾತ್ಯಕಿಯು ಇಲ್ಲಿ ವ್ಯಾಜ್ಯಕ್ಕೆ ಆರಂಭ ಮಾಡಿದನು. ಅವನು ಕೃತವರ್ಮನೊಡನೆ ಜಗಳವಾಡಲು ಪ್ರದ್ಯುಮ್ನನು ಸಾತ್ಯಕಿಯ ಪಕ್ಷವನ್ನು ವಹಿಸಿದನು. ಸಾತ್ಯಕಿಯು ಕೃತವರ್ಮನ ಶಿರಸ್ಸನ್ನು ಕತ್ತರಿಸಿದನು. ಕೃತವರ್ಮನ ಜ್ಞಾತಿಗಳು (ಯಾದವರು) ವೃಷ್ಣಿ, ಭೋಜ, ಅಂಧಕ, ಕುಕುರ ಎಂಬ ಬೇರೆಬೇರೆ ವಂಶಿಕರು ಸಾತ್ಯಕಿಯನ್ನೂ ಪ್ರದ್ಯುಮ್ನನನ್ನೂ ಕೊಂದರು. ಆಗ ಕೃಷ್ಣನು ಒಂದು ಹಿಡಿ ಹೊಡಿಕೆ ಹುಲ್ಲನ್ನು ಹಿಡಿದು ಅದರಿಂದ ಹಲವು ಯಾದವರನ್ನು ಕೊಂದನು. ಈ ಹೊಡಿಕೆಯ ಹುಲ್ಲು ಹಿಂದೆ ರಾಜನ ಆಜ್ಞೆಯಂತೆ ಪುಡಿಮಾಡಿ ಬಿಸುಟ ಮುಸಲ ಚೂರ್ಣದಿಂದ ಉತ್ಪತ್ತಿಯಾದ್ದೆಂದು ಬೇರೆ ಗ್ರಂಥದಲ್ಲಿ ಹೇಳಿದೆ. ಮಹಾಭಾರತದಲ್ಲಿ ಈ ಮಾತು ಸಿಕ್ಕಲಿಲ್ಲ. ಆದರೂ ಹೊಡಿಕೆಯ ಹುಲ್ಲನ್ನು ಮುಟ್ಟಿದೊಡನೆಯೇ ಅವು ಮುಸಲಗಳಾದುವೆಂದೂ ಬ್ರಾಹ್ಮಣಶಾಪದಿಂದ

ಅಲ್ಲಿ ಬೆಳೆದಿದ್ದ ಹೊಡಿಕೆಯ ಹುಲ್ಲೆಲ್ಲವೂ ಮುಸಲಗಳಾಗಿಯೇ ಇದ್ದು ವೆಂತಲೂ ಹೇಳಲ್ಪಟ್ಟಿರುವುದು. ಆಗ ಯಾದವರು ಈ ಹುಲ್ಲನ್ನು ಕಿತ್ತು ಒಬ್ಬರನ್ನೊಬ್ಬರು ಹೊಡೆದು ಕೊಂದರು. ದಾರುಕನೂ ಬಬ್ರುವೂ ಕೃಷ್ಣನನ್ನು ಕುರಿತು "ಎಲೈ ಜನಾರ್ದನನೇ, ತಾವು ಈಗ ಅಸಂಖ್ಯಾಕರಾದ ಜನಗಳನ್ನು ಸಂಹರಿಸಿರುವಿರಿ. ಇನ್ನೇನು ಹೊರಡೋಣಾಗಲಿ, ನಾವು ಮಹಾತ್ಮನಾದ ಬಲಭದ್ರನಲ್ಲಿಗೆ ಹೋಗುವೆವು" ಎಂದರು. ಕೃಷ್ಣನು ದಾರುಕನನ್ನು–ಹಸ್ತಿನೆಯಲ್ಲಿರುವ ಅರ್ಜುನನ ಬಳಿಗೆ ಯಾದವ ವನಿತೆಯರನ್ನು ಕರೆದುಕೊಂಡುಹೋಗುವುದೆಂದು ಹೇಳಿ ಕಳುಹಿಸಿದನು. ಬಲರಾಮನು ಯೋಗಾಸನದಲ್ಲಿ ಕುಳಿತಿರಲು ಅವನ ಮುಖದಿಂದ ಸಾವಿರ ಹೆಡೆಗಳನ್ನುಳ್ಳ ಸರ್ಪವೊಂದು ಹೊರಕ್ಕೆ ಬಂದು ನದಿ, ವರುಣ, ವಾಸುಕಿ ಮೊದಲಾದ ಇತರ ಸರ್ಪಗಳಿಂದ ಹೊಗಳಿಸಿಕೊಳ್ಳುತ್ತ ಸಮುದ್ರವನ್ನು ಹೊಕ್ಕಿತು. ಇದನ್ನು ಕೃಷ್ಣನು ಕಂಡು ಮರ್ತ್ಯಲೋಕವನ್ನು ತಾನು ಬಿಟ್ಟುಬಿಡಬೇಕೆಂದು ನಿಶ್ಚಯಿಸಿ, ಯೋಗನಿದ್ರೆಯನ್ನವಲಂಬಿಸಿ ನೆಲದಮೇಲೆ ಒರಗಿದನು. ಜರೆಯೆಂಬ ವ್ಯಾಧನು ಮೃಗವೆಂಬ ಭ್ರಾಂತಿಯಿಂದ ಅವನ ಪಾದಪದ್ಮವನ್ನು ಬಾಣದಿಂದ ತಿವಿದನು. ಆಮೇಲೆ ತನ್ನ ತಪ್ಪನ್ನು ತಿಳಿದು ಭಯದಿಂದ ಕೃಷ್ಣನ ಕಾಲಿಗೆ ಬೀಳಲು ಕೃಷ್ಣನು ಅವನನ್ನು ಸಮದಾಯಿಸಿ, ಆಕಾಶ ಮಂಡಲವು ತನ್ನ ತೇಜಸ್ಸಿನಿಂದ ಪ್ರಕಾಶಿಸುತ್ತಿರಲು, ಸ್ವರ್ಗವನ್ನು ಕುರಿತು ತೆರಳಿದನು.

ಇತ್ತಕಡೆ ಅರ್ಜುನನು ದ್ವಾರಕಿಗೆ ಬಂದು, ಕೃಷ್ಣ ಬಲರಾಮ ಮೊದಲಾದವರ ದೇಹಸಂಸ್ಕಾರಗಳನ್ನು ಮಾಡಿ, ಯಾದವಕುಲ ವನಿತೆಯರನ್ನು ಕರೆದುಕೊಂಡು ಹಸ್ತಿನೆಗೆ ಪ್ರಯಾಣಮಾಡಿದನು. ದಾರಿಯಲ್ಲಿ ಕಳ್ಳರು ದೊಣ್ಣೆಯನ್ನು ಹಿಡಿದು ಬಂದು ಅರ್ಜುನನಮೇಲೆ ಬಿದ್ದರು. ಪೃಥ್ವಿಯನ್ನೆಲ್ಲಾ ಗೆದ್ದು, ಭೀಷ್ಮ ಕರ್ಣ ಮೊದಲಾದವರನ್ನು ಕೊಂದ ಅರ್ಜುನನು ದೊಣ್ಣೆಗಳನ್ನು ಹಿಡಿದ ಹಳ್ಳಿಕಾರರನ್ನು ಗೆಲ್ಲುವುದಕ್ಕೆ ಸಮರ್ಥನಾಗಲಿಲ್ಲ. ಗಾಂಡೀವವನ್ನು ಎತ್ತಲಾರದೇ ಹೋದನು. ರುಕ್ಮಿಣಿ, ಸತ್ಯಭಾಮೆ, ಹೈಮವತಿ (ಜಾಂಬವತಿ), ಮೊದಲಾದ ಕೃಷ್ಣನ ಮುಖ್ಯ ಮಹಿಷಿಯರು ವಿನಾ ಮಿಕ್ಕವರೆಲ್ಲರನ್ನೂ ಕಳ್ಳರು ಎತ್ತಿಕೊಂಡು ಓಡಿದರು.

ಈ ಸಮಸ್ತವೂ ಮೂಲಭಾರತದ್ದೇ ? ಮುಸಲ ಹೊಡಿಕೇ ಹುಲ್ಲು ; ಇದು ಅನೈಸರ್ಗಿಕ ವ್ಯಾಪಾರವಾದ್ದರಿಂದ ನಾವು ಬಿಟ್ಟುಬಿಡಲುಳ್ಳವರು. ಇದನ್ನು ಬಿಟ್ಟರೂ ನಡೆಯಬಹುದಾದ ಮುಖ್ಯವಾದ ಮಾತು ಏನು ಉಳಿಯುವುದೋ ಅದನ್ನು ಅಷ್ಟು ಸುಲಭವಾಗಿ ಬಿಡುವುದಕ್ಕಾಗುವುದಿಲ್ಲ. ಯಾದವರು ಪಾನಾಸಕ್ತರೂ ದುರ್ನೀತಿಪಾರಾಯಣರೂ ಆಗಿದ್ದರು. ಇದನ್ನು ಮೊದಲೇ ತಿಳಿಸಿದೆ. ಇವರೆಲ್ಲರೂ ಒಂದೇ ವಂಶದವರಲ್ಲ. ಆಗಿಂದಾಗ್ಗೆ ಒಂದು ವಂಶದವರಿಗೆ ವಿರೋಧವಾಗಿ ಇನ್ನೊಂದು ವಂಶದವರು ಹೊಡೆದಾಡಿದ್ದಾರೆ. ಕುರುಕ್ಷೇತ್ರ ಯುದ್ಧದಲ್ಲಿ ವಾರ್ಷ್ಣೇಯರೂ ಸಾತ್ಯಕಿಯೂ ಕೃಷ್ಣನೂ ಪಾಂಡವಪಕ್ಷಕ್ಕೂ, ಅಂಧಕ ಮತ್ತು ಭೋಜವಂಶೀಯರೂ ಕೃತವರ್ಮನೂ ದುರ್ಯೋಧನ ಪಕ್ಷಕ್ಕೂ ಹೋಗಿದ್ದರು. ಇದರ ಮೇಲೆ ಯಾದವರಿಗೆ ರಾಜನಾರೂ ಇರಲಿಲ್ಲ. ಉಗ್ರಸೇನನನ್ನು ರಾಜ ಎಂದು ಅಲ್ಲಲ್ಲಿ ಕರೆದಿದ್ದರೂ ಇದು ಹೆಸರು ಮಾತ್ರಕ್ಕೆ. ಯಾದವರಲ್ಲಿ ಯಾರೂ ನಿಜವಾಗಿ ರಾಜರಲ್ಲ. ಗುಣಾಧಿಕತೆಯಿಂದ ಕೃಷ್ಣನು ಯಾದವರ ನಾಯಕನಾಗಿದ್ದನು. ಅಣ್ಣನಾದ ಬಲರಾಮನೊಡನೆಯೇ ಇವನಿಗೆ ಮತಭೇದ ಇದ್ದಂತೆ ಕಂಡುಬರುವುದು. ಶಾಂತಿಪರ್ವದಲ್ಲಿ ಭೀಷ್ಮನು ಕೃಷ್ಣ ನಾರದ ಸಂವಾದವನ್ನು ಹೇಳಿರುವನು. ಅದರಲ್ಲಿ ಕೃಷ್ಣನು ನಾರದರೊಡನೆ ತನ್ನ ದುಃಖವನ್ನು ಹೇಳಿಕೊಂಡಿದ್ದಾನೆ. ಅವನ ಜ್ಞಾತಿಗಳ ಮನರಂಜನೆಗಾಗಿ ವಿಧವಿಧವಾಗಿ ಪ್ರಯತ್ನಗಳನ್ನು ಮಾಡಿದರೂ ಸಫಲವಾಗದೆ ಹೋಯಿತು. ಇದನ್ನೆಲ್ಲ ಮೊದಲೇ ಹೇಳಿದೆ. "ಯಾದವರು ಪರಸ್ಪರ ದ್ವೇಷದಿಂದ ತಂತಮ್ಮ ಪ್ರಾಧಾನ್ಯವೇ ಹೆಚ್ಚೆಂದು ತಿಳಿದು, ಅತ್ಯಂತ ಬಲಗರ್ವಿತರಾಗಿ ದುರ್ನೀತಿಯಲ್ಲಿ ಆಸಕ್ತರಾಗಿ ಸುರಾಪಾನ ನಿರತರಾಗಿ * ಇರಲು ಅವರು ಪರಸ್ಪರವಾಗಿ ಕಾದಾಡಿ ಯದುಕುಲವನ್ನು ನಾಶಪಡಿಸಿದರು. ಮತ್ತು ಕೃಷ್ಣ ಬಲರಾಮರು ತಮಗೆ ಬೇಕಾಗಲಿ, ಬೇಡವಾಗಲಿ ಈ ಕಟ್ಟಿಗೆ ಸಿಕ್ಕಿಬಿದ್ದು ಸಾಯುವರು" ಎಂಬುದರಲ್ಲಿ ಅನೈಸರ್ಗಿಕವಾಗಲಿ ಅಸಂಭವವಾಗಲಿ

---

* ಯಾದವರು ಬಹಳವಾಗಿ ಮದ್ಯಪಾನವನ್ನು ಮಾಡುತ್ತಿದ್ದುದರಿಂದ "ಸುರೆಯನ್ನು ದ್ವಾರಕಿಗೆ ತಂದವರನ್ನು ಶೂಲಕ್ಕೆ ಹಾಕಿಸುವೆವು" ಎಂದು ಕೃಷ್ಣ ಬಲರಾಮರು ಡಂಗುರ ಹಾಕಿಸಿದರು. ಪಾಶ್ಚಾತ್ಯ ರಾಜರಿಗೆ ಈ ನೀತಿಯನ್ನವಲಂಬಿಸಬೇಕೆಂದು ಹೇಳಬಿಚ್ಛೈಸುತ್ತೇನೆ.

ಇರುವುದಿಲ್ಲ. ಹೀಗೊಂದು ಕಿಂವದಂತಿ ರೂಢಿಗೆ ಬಂದಿರಬಹುದು. ಇದರಮೇಲೆ ಪುರಾಣಕಾರರು ಯದುವಂಶ ಧ್ವಂಸ ಕಾಂಡವೊಂದನ್ನು ಸ್ಥಾಪಿಸಿರುವರು. ಆದುದರಿಂದ ಈ ವಂಶದ ಮೌಲಿಕತೆಯ ವಿಷಯವಾಗಿ ಪರಂಪರೆಯ ವಿಚಾರಣೆಯು ನಮಗೆ ಬೇಕಾಗಿಲ್ಲ. ಕೃಷ್ಣನು ಈ ಯದುವಂಶ ಧ್ವಂಸವನ್ನು ನಿವಾರಣೆಮಾಡುವುದಕ್ಕಾಗಿ ಏನೂ ಮಾಡಿಲ್ಲ ವೆಂದೂ, ಅಲ್ಲದೆ ಅದಕ್ಕೆ ಅನುಕೂಲವನ್ನೇ ಮಾಡಿದನೆಂದೂ ಬರೆದಿದೆ. ಇದು ನಿಜವಾದರೆ, ಇದರಲ್ಲಿ ಕೃಷ್ಣ ಚರಿತ್ರೆಗೆ ಅಸಂಗತವಾಗಲಿ ಅಗೌರವವಾಗಲಿ ಏನೂ ಇಲ್ಲ. ಆದರ್ಶ ಮನುಷ್ಯನಿಗೆ ಸರಿಯಾದ ಕೆಲಸವನ್ನೇ ಮಾಡಿರುವನು. ಅವನಿಗೆ ತಮ್ಮವನು ಪರನು ಎಂಬ ಭೇದವಿಲ್ಲ. ಆದರ್ಶ ಪುರುಷನಿಗೆ ಆತ್ಮೀಯ (ನನ್ನದು) ಎಂಬುದು ಧರ್ಮವೇ ? ಯದುವಂಶೀಯರು ಅಧಾರ್ಮಿಕರಾಗಲು ಅವರನ್ನು ದಂಡಿಸುವುದೂ, ಅವಶ್ಯವಾದರೆ ವಿನಾಶಮಾಡುವುದೂ ಅವನ ಕರ್ತವ್ಯವಾಗಿರುವುದು. ಅಧಾರ್ಮಿಕರೆಂದು ಜರಾಸಂಧಾದಿಗಳನ್ನು ನಾಶ ಗೊಳಿಸಿದನು. ಇನ್ನು ಯಾದವರು ಅಧಾರ್ಮಿಕರಾದ್ದನ್ನು ನೋಡಿ ನಾಶ ಮಾಡದೆ ಹೋದರೆ ಅವನು ಧರ್ಮಬಂಧುವಾಗುವುದಿಲ್ಲ. ಸ್ವಪಕ್ಷಪಾತಿ ಯಾಗುತ್ತಾನೆ. ಆದರ್ಶ ಧರ್ಮಾತ್ಮನು ಹೀಗೆ ಆಗಲಾರನು.

ಕೃಷ್ಣನ ದೇಹತ್ಯಾಗದ ಕಾರಣವು ಬಹುಮಟ್ಟಿಗೆ ಅನಿಶ್ಚಿತವಾಗಿರು ವುದು. ಇದಕ್ಕೆ ನಾಲ್ಕು ಕಾರಣಗಳು ತೋರುವವು : (೧) ಟಾಲ್ಬಾಯ್ಸ್ ವೀಲರ್ ಸಂಪ್ರದಾಯವನ್ನನುಸರಿಸಿ ಕೃಷ್ಣನು 'ಜೂಲಿಯಸ್ ಸೀಸರ' ನಂತೆ ದ್ವೇಷಬುದ್ಧಿಯುಳ್ಳ ಬಂಧುಗಳಿಂದಲೇ ಹತನಾದನೆಂದು ಹೇಳ ಬಹುದು. ಇದಕ್ಕೆ ಆಧಾರವು ಯಾವ ಗ್ರಂಥದಲ್ಲೂ ಇಲ್ಲ ; (೨) ಯೋಗ ವನ್ನವಲಂಬಿಸಿ ದೇಹವನ್ನು ತ್ಯಾಗಮಾಡಿರಬಹುದು. ಪಾಶ್ಚಾತ್ಯ ವಿಜ್ಞಾನ ಪಂಡಿತರ ಶಿಷ್ಯರು ಯೋಗಾವಲಂಬನದಿಂದ ದೇಹತ್ಯಾಗ ಮಾಡುವುದನ್ನು ನಂಬರು. ನಾನು ನಂಬದಿರುವುದಕ್ಕೆ ಕಾರಣವನ್ನರಿಯೆನು. ಯೋಗಾ ಭ್ಯಾಸಮಾಡುವಾಗ ನಿಃಶ್ವಾಸವನ್ನು ತಡೆಯಲು ಅಭ್ಯಾಸಮಾಡಿರುವರು. ಅದನ್ನು ನಿಲ್ಲಿಸಿ ತಮ್ಮ ಮೃತ್ಯುವನ್ನು ಸಂಪಾದಿಸಲಾರರು ಎಂದು ಸಾಹಸ ಮಾಡಿ ಹೇಳುವುದಕ್ಕಾಗುವುದಿಲ್ಲ. ಇಂತಹ ಘಟನೆಗಳನ್ನು ನಂಬುಗೆಯ ಹಾದಿಯಲ್ಲಿ ಕೇಳಿಯೂ ಇರಬಹುದು. ಇದು ಆತ್ಮಹತ್ಯ, ಪಾಪ,

–ಆದರ್ಶ ಮನುಷ್ಯನಿಂದ ಆಗಬಾರದ್ದು ಎಂದು ಅನ್ಯರು ಹೇಳಬಹುದು ಹೀಗೆ ನಾನು ಹೇಳಲಾರೆ. ಅಪರವಯಸ್ಸಿನಲ್ಲಿ ಜೀವನದ ಕಾರ್ಯವನ್ನು ಮುಗಿಸಿದಮೇಲೆ ಈಶ್ವರನಲ್ಲಿ ಸೇರಿಕೊಳ್ಳುವುದಕ್ಕಾಗಿ ಮನೋಮಧ್ಯದಲ್ಲಿ ತನ್ಮಯನಾಗಿ ಶ್ವಾಸಾವರೋಧಮಾಡುವುದನ್ನು 'ಆತ್ಮಹತ್ಯೆ' ಎನ್ನೋಣವೇ? ಈಶ್ವರಪ್ರಾಪ್ತಿ ಎನ್ನೋಣವೆ? ಆತ್ಮಹತ್ಯೆಯೇನೋ ಮಹಾಪಾಪವೆಂದು ಒಪ್ಪುವೆನು. ಆದರೂ ಜೀವನದ ಕೊನೆಯಲ್ಲಿ ಯೋಗಬಲದಿಂದ ಪ್ರಾಣ ತ್ಯಾಗಮಾಡುವುದೂ ಅದೇನೆ? (೩) ಜರೆಯೆಂಬ ವ್ಯಾಧನ ಶರಾಘಾತ; (೪) ಜರಾವ್ಯಾಧಿ—ಈ ಸಮಯದಲ್ಲಿ ಕೃಷ್ಣನಿಗೆ ನೂರಕ್ಕಿಂತಲೂ ಹೆಚ್ಚಾಗಿ ವಯಸ್ಸಾಗಿತ್ತೆಂದು ವಿಷ್ಣುಪುರಾಣದಲ್ಲಿ ಹೇಳಿದೆ. ಈ ಜರಾವ್ಯಾಧನು ಜರಾವ್ಯಾಧಿಯಷ್ಟೆ?

ಕೃಷ್ಣನು ಮನುಷ್ಯಮಾತ್ರನೆಂದು ತಿಳಿದು ಅವನ ಈಶ್ವರತ್ವವನ್ನು ಒಪ್ಪದಿರುವವನು ಮೇಲಿನ ನಾಲ್ಕು ಮತಗಳಲ್ಲಿ ಯಾವುದಾದರೊಂದನ್ನು ಸ್ವೀಕರಿಸಬಹುದು. ನಾನು ಕೃಷ್ಣನನ್ನು ಈಶ್ವರಾವತಾರನೆಂದು ನಂಬಿರುವೆನು. ಆದುದರಿಂದ ಕೃಷ್ಣನ ಇಚ್ಛೆಯೇ ಅವನ ದೇಹತ್ಯಾಗಕ್ಕೆ ಕಾರಣ. ಜಗತ್ತಿನಲ್ಲಿ ಮನುಷ್ಯತ್ವದ ಆದರ್ಶವನ್ನು ಪ್ರಚಾರಿಸುವುದು ಯಾರ ಇಚ್ಛೆಯೋ ಮತ್ತು ಈ ಇಚ್ಛೆಯನ್ನು ಪೂರ್ಣಮಾಡುವುದಕ್ಕೋಸ್ಕರ ಯಾವನು ಮನುಷ್ಯ ಶಕ್ತಿಯ ಮೂಲಕವಾಗಿಯೇ ಸಮಸ್ತ ಕಾರ್ಯಗಳನ್ನೂ ನಿರ್ವಹಿಸಿದ್ದನೋ ಅಂಥವನ ಈಶ್ವರಾವತಾರಕ್ಕೆ ಜನ್ಮವೃತ್ತಿಗಳು ಇಚ್ಛಾಧೀನ ಗಳೆಂದು ಹೇಳಬೇಕು. ಆದುದರಿಂದ ಕೃಷ್ಣನ ಇಚ್ಛೆಯೊಂದೇ ಅವನ ದೇಹತ್ಯಾಗಕ್ಕೆ ಕಾರಣವೆಂದು ಹೇಳುತ್ತೇನೆ.

ಮೌಸಲಪರ್ವ ಮಹಾಭಾರತದ ಪ್ರಥಮ ಸ್ತರದಲ್ಲಿ ಸೇರತಕ್ಕದ್ದು ಹೌದೇ ಅಲ್ಲವೇ ಎಂಬುದನ್ನು ಪ್ರಯೋಜನವಿಲ್ಲವೆಂದು ನಾನು ವಿಚಾರ ಮಾಡಲಿಲ್ಲ. ಸ್ಥೂಲಘಟನೆಗಳು ಸತ್ಯವೆಂದು ತೋರುವುವು. ಆದರೂ ಪ್ರಥಮ ಸ್ತರವಲ್ಲಿಲ್ಲವೆಂದೇ ಹೊಳೆಯುವುದು. ಪುರಾಣದಲ್ಲಿಯೂ ಹರಿವಂಶ ದಲ್ಲಿಯೂ ಇರುವ ಕೃಷ್ಣಜೀವನಿಯ ಇಂತಹ ಘಟನೆಗಳು ಮಹಾ ಭಾರತದಲ್ಲಿಲ್ಲ. ಇದು ಮಾತ್ರ ಪುರಾಣ, ಹರಿವಂಶ, ಮಹಾಭಾರತ ಈ ಮೂರರಲ್ಲಿಯೂ ಇರುವುದು:—ಪಾಂಡವರೊಡನೆ ಸೇರಿ ಕೃಷ್ಣನು

ಮಾಡಿರುವ ಕೆಲಸಗಳನ್ನು ಬಿಟ್ಟರೆ ಮಹಾಭಾರತದಲ್ಲಿ ಕೃಷ್ಣನ ವಿಷಯ ಇಲ್ಲ. ಇರುವ ಸಂಭವವೂ ಇಲ್ಲ. ಈ ಮೌಸಲಪರ್ವವೊಂದು ಮಾತ್ರ ಇದಕ್ಕೆ ವಿರೋಧವಾಗಿದೆ; ಕೃಷ್ಣನು ಈಶ್ವರಾವತಾರನು. ಇದು ದ್ವಿತೀಯ ಅಥವಾ ತೃತೀಯ ಸ್ತರದ ಕವಿಯದೆಂದು ಮೊದಲೇ ತಿಳಿಸಿರುವೆನು. ಈ ವಿವೇಚನೆಗೆ ಇನ್ನೂ ಹಲವು ಕಾರಣಗಳನ್ನು ತೋರಿಸಬಹುದು. ಪ್ರಯೋಜನವಿಲ್ಲವೆಂದು ಬಿಟ್ಟಿರುವೆನು. ಅನುಕ್ರಮಣಿಕಾಧ್ಯಾಯದಲ್ಲಿ ಮೌಸಲಪರ್ವದ ಆವ ಪ್ರಸಂಗವೂ ಇಲ್ಲ. ಪರೀಕ್ಷಿತನ ಜನ್ಮವಾದ ಅನಂತರದ ಮಾತು ಅನುಕ್ರಮಣಿಕೆಯಲ್ಲಿಲ್ಲ. ನನ್ನ ವಿಮರ್ಶೆಯಲ್ಲೂ ಪರೀಕ್ಷಿತನ ಜನನಕ್ಕೇ ಆದಿ ಮಹಾಭಾರತ ಮುಗಿಯಿತು. ಅದಾದ ಮೇಲಿನ ಕಥೆಯೆಲ್ಲಾ ಎರಡನೆಯ ಮೂರನೆಯ ಸ್ತರದವುಗಳು.

ದ್ವಿತೀಯ ಪರಿಚ್ಛೇದ

ಉಪಸಂಹಾರ

ಸಮಾಲೋಚಕನ ಕೆಲಸ ಎರಡು ವಿಧವಾದ ಪ್ರಯೋಜನವುಳ್ಳದ್ದು : (೧) ಪೂರ್ವಿಕವಾದ ಕುಸಂಸ್ಕಾರವನ್ನು ತೊಳೆಯುವುದು; (೨) ಸತ್ಯವನ್ನು ಹುಡುಕುವುದು. ಕೃಷ್ಣ ಚರಿತ್ರೆಯಲ್ಲಿ ಮೊದಲನೆಯ ಕಾರ್ಯವೇ ಮುಖ್ಯ. ಆದುದರಿಂದ ನಮ್ಮ ಸಮಯವು ಒಂದನೆಯದಕ್ಕೇ ವಿಶೇಷವಾಗಿ ವೆಚ್ಚವಾಯಿತು. ಕೃಷ್ಣ ಚರಿತ್ರೆಯಲ್ಲಿ ಸತ್ಯವನ್ನು ಹೊಸದಾಗಿ ಹೊರಪಡಿಸುವುದು ಬಹು ಕಷ್ಟವಾದ ಕೆಲಸ. ಸುಳ್ಳಿನಿಂದ,-ಸಹಜಕ್ಕೆ ಮೀರಿದವುಗಳೆಂಬ ಬೂದಿಯ ರಾಶಿಯಿಂದ,-ಬೆಂಕಿಯು ಮುಚ್ಚಿಹೋಗಿ ಅದನ್ನು ಗೊತ್ತು ಮಾಡುವುದೇ ಕಷ್ಟವಾಗಿದೆ. ಮಿಥ್ಯೆಯೆಂದು ಸಾಗರದ ನಡುವೆ ಮುಳುಗಿ ಹೋಗಿರುವ ಈ ಕೃಷ್ಣಚರಿತ್ರೆಯನ್ನು ನನ್ನ ಕೈಯಲ್ಲಾದಮಟ್ಟಿಗೂ ಎತ್ತಬೇಕೆಂದು ಸಾಹಸಮಾಡಿರುವೆನು.

ಉಪಸಂಹಾರದಲ್ಲಿ—ಪುರಾಣೇತಿಹಾಸಗಳಲ್ಲಿ ಸತ್ಯ ಎಷ್ಟರಮಟ್ಟಿಗೆ ಸಿಕ್ಕುವುದೋ ಅಷ್ಟರಿಂದ ಕೃಷ್ಣ ಚರಿತ್ರೆ ಎಂಥದೆಂದು ಸಿದ್ಧಾಂತವಾಯಿತೋ ನೋಡೋಣ.

ಬಾಲ್ಯದಲ್ಲಿ ಕೃಷ್ಣನು ದೇಹಶಕ್ತಿಯಿಂದ ಆದರ್ಶ ಬಲವಂತನು ಎಂಬು ದನ್ನು ನೋಡಿದೆವು. ಹೋಲಿಕೆ ಇಲ್ಲದ ಅವನ ಬಲದ ಮಹತ್ತಿನಿಂದಲೇ ಬೃಂದಾವನ ದುಷ್ಟಪ್ರಾಣಿಗಳ ಬಾಧೆಯಿಲ್ಲದೆ ಸುರಕ್ಷಿತವಾಗಿತ್ತು. ಈ ಶಕ್ತಿ ಯಿಂದಲೇ ಕಂಸನ ಜಟ್ಟಿಗಳೂ ಸೋತುಹೋಗಿದ್ದರು. ಗೋವುಗಳನ್ನು ಕಾಯುವಾಗ ಗೋಪಾಲರೊಡನೆ ಆಟ ಪಾಟ ವ್ಯಾಯಾಮಗಳಿಂದ ಬಲದಲ್ಲಿ ಸ್ಫೂರ್ತಿಯನ್ನು ಪಡೆದಿದ್ದನು. ಓಡುವುದರಲ್ಲಿ ಕಾಲಯವನನೂ ಅವನನ್ನು ಮೀರಿಸಲಾರದೆಹೋದನು. ಕುರುಕ್ಷೇತ್ರ ಯುದ್ಧದಲ್ಲಿ ಅವನ ರಥಸಂಚಾಲನ ವಿದ್ಯೆಯ ಪಾಂಡಿತ್ಯವನ್ನು ನೋಡಿದೆವು.

ಶಿಕ್ಷಣೆಯನ್ನು ಪಡೆದು ಅವನು ಆಗಿನ ಕಾಲದ ಕ್ಷತ್ರಿಯರಲ್ಲಿ ಸರ್ವ ಶ್ರೇಷ್ಠನಾದ ಅಸ್ತ್ರವೇತ್ತನೆಂದು ಎಣಿಸಲ್ಪಟ್ಟಿದ್ದನು. ಆರೂ ಆವಾಗಲೂ ಅವನನ್ನು ಸೋಲಿಸಲಾರದವರಾಗಿದ್ದರು. ಅವನು ಕಂಸ, ಜರಾಸಂಧ, ಶಿಶುಪಾಲ ಮೊದಲಾದ ಆ ಕಾಲದ ಸರ್ವಪ್ರಧಾನರಾದ ಯೋದ್ಧರುಗಳ ಸಂಗಡಲೂ ಇತರ ರಾಜರುಗಳಾದ ಕಾಶಿ, ಕಳಿಂಗ, ಪೌಂಡ್ರ, ಗಾಂಧಾರ ಮೊದಲಾದ ಅಧಿಪತಿಗಳೊಡನೆಯೂ ಯುದ್ಧಮಾಡಿ ಎಲ್ಲರನ್ನೂ ಜಯಿ ಸಿದನೇ ಹೊರತು ಇವನನ್ನಾರೂ ಸೋಲಿಸಲಾರದೆ ಹೋದರು. ಯುದ್ಧ ವಿದ್ಯೆಯಲ್ಲಿ ಇವನ ಶಿಷ್ಯರಾದ ಸಾತ್ಯಕಿ, ಅಭಿಮನ್ಯು ಪ್ರಾಯಃ ಅಪರಾಜಿತರೇ ಆಗಿದ್ದರು. ಸ್ವಯಂ ಅರ್ಜುನನೂ ಅವನ ಹತ್ತಿರ ಕೆಲಕೆಲವು ಯುದ್ಧ ವಿಷಯಗಳಲ್ಲಿ ಶಿಷ್ಯತ್ವವನ್ನು ಸ್ವೀಕಾರಮಾಡಿದ್ದನು.

ಕೇವಲ ಶರೀರದ ಬಲದಲ್ಲಿಯೂ ಶಿಕ್ಷಣೆಯಿಂದಲೂ ಯಾವ ರಣ ಪಾಟವ ನಿಲ್ಲುವುದೋ ಅಂಥವೇ ಪುರಾಣಗಳಲ್ಲಿಯೂ ಪ್ರಶಂಸೆಗೆ ಬರುವಂತೆ ಕಾಣುವುದು. ಇಂಥ ರಣಪಾಂಡಿತ್ಯ ಸಾಮಾನ್ಯ ಸೈನಿಕನೊಬ್ಬನಿಗೂ ಇರಬಹುದು. ಸೇನಾಧಿಪತ್ಯವೇ ಯೋದ್ಧನಿಗೆ ಅವಶ್ಯವಾದುದು. ಆ ಕಾಲದಲ್ಲಿ ಯೋದ್ಧರು ಸೇನಾಧಿಪತಿತ್ವದಲ್ಲಿ ಪಟುಗಳಾಗಿರಲಿಲ್ಲ. ಮಹಾ ಭಾರತದಲ್ಲಿಯೂ ಪುರಾಣದಲ್ಲಿಯೂ ಈ ಗುಣದ ಪರಿಚಯ ವಿಶೇಷ ವಾಗಿಲ್ಲ. ಅರ್ಜುನನಲ್ಲಿಯೂ ಭೀಷ್ಮನಲ್ಲಿಯೂ ಸಹ ಇಲ್ಲ. ಸೇನಾಧಿ ಪತ್ಯಕ್ಕೆ ವಿಶೇಷವಾಗಿ ಬೇಕಾದ ಈ ಗುಣ ಜರಾಸಂಧ ವಧೆಯಲ್ಲಿ ಸ್ವಲ್ಪ ಮಟ್ಟಿಗೆ ಸಿಕ್ಕುವುದು. ಕೃಷ್ಣನ ಸೇನಾಧಿಪತ್ಯದ ಗುಣದಿಂದ ಸಣ್ಣ ಯಾದವ

ಸೇನೆ ಜರಾಸಂಧನ ಅಸಂಖ್ಯ ಸೈನ್ಯವನ್ನು ಮಥುರೆಯಿಂದ ಹಿಂದಕ್ಕೆ ತಿರುಗಿಸಿತ್ತು. ಅಗಣಿತವಾದ ಸೈನ್ಯದ ಕ್ಷಯ ಯಾದವರಿಂದ ಸಾಗದುದೆಂದು ಮಥುರೆಯನ್ನು ಬಿಟ್ಟು ಹೊಸ ನಗರಿಯನ್ನು ಕಟ್ಟಿಕೊಳ್ಳುವುದಕ್ಕೋಸ್ಕರ ಸಮುದ್ರದಿಂದ ಸುತ್ತುವರಿಯಲ್ಪಟ್ಟ ದ್ವಾರಕಿಗೆ ಬಂದುದೂ, ಅದರ ಎದುರಿಗೆ ಇದ್ದ ರೈವತಕ ಪರ್ವತಮಾಲೆಯಲ್ಲಿ ದುರ್ಭೇದ್ಯವಾದ ದುರ್ಗ ಶ್ರೇಣಿಯನ್ನು ನಿರ್ಮಿಸಿದುದೂ ಇವನ ರಣನೀತಿಜ್ಞತೆಯನ್ನು ತೋರಿಸುವುವು. ಇಂತಹ ಇನ್ನೊಂದು ಪರಿಚಯ ಇತರ ಯಾವ ಕ್ಷತ್ರಿಯರಲ್ಲೂ ಪುರಾಣೇತಿಹಾಸಗಳಲ್ಲಿಯೂ ಕಂಡುಬಂದಿಲ್ಲ. ಪುರಾಣಕಾರ ಋಷಿಗಳಿಗೆ ಇದು ತಿಳಿಯಲಾರದ್ದಾಗಿತ್ತು. ಆದುದರಿಂದಲೇ ಕೃಷ್ಣಚರಿತ್ರೆ ಅವರಿಂದ ಕಲ್ಪಿಸಲ್ಪಟ್ಟದ್ದಲ್ಲವೆಂಬುದಕ್ಕೆ ಇದೂ ಒಂದು ಪ್ರಮಾಣವಾಗಿದೆ.

ಕೃಷ್ಣನ ಜ್ಞಾನವನ್ನು ಸಂಪಾದಿಸುವ ವೃತ್ತಿಗಳೆಲ್ಲವೂ ಸಂಪೂರ್ಣ ವಿಕಾಸವನ್ನು ಹೊಂದಿದ್ದವು. ಇದಕ್ಕೆ ಬೇಕಾದಷ್ಟು ನಿದರ್ಶನಗಳು ಕಂಡುಬಂದಿವೆ. ಅವನು ಅದ್ವಿತೀಯ ವೇದಜ್ಞನು. ಅವನಿಗೆ ಅರ್ಘ್ಯವನ್ನು ಕೊಡುವುದಕ್ಕೆ ಕಾರಣವಾಗಿ ಇದೂ ಒಂದನ್ನು ಭೀಷ್ಮನು ನಿರ್ದೇಶಿಸಿರುವನು. ಶಿಶುಪಾಲನು ಇದಕ್ಕೆ ಬೇರೆ ಉತ್ತರವನ್ನು ಕೊಡದೆ ವೇದವ್ಯಾಸನಿರುವಾಗ ಇವನನ್ನು ಪೂಜಿಸುವುದೇಕೆ ? ಎಂದಿದಾನೆ.

ಇವನ ಜ್ಞಾನವಿಕಾಸದ ಶ್ರೇಷ್ಠತೆಗೆ ಅವನು ಹೇಳಿರುವ ಧರ್ಮವೇ ತೀವ್ರವಾದ ಮತ್ತು ಉಜ್ಜ್ವಲವಾದ ಪ್ರಮಾಣವಾಗಿದೆ. ಇದು ಗೀತೆಯಲ್ಲಿ ಸಿಕ್ಕುವುದು ಮಾತ್ರ ಎಂದಲ್ಲ; ಮಹಾಭಾರತದ ಇತರ ಕಡೆಗಳಲ್ಲಿಯೂ ಇದು ಸಿಕ್ಕುವುದನ್ನು ನೋಡಿರುವೆವು. ಕೃಷ್ಣನು ಹೇಳಿದ ಧರ್ಮಕ್ಕಿಂತ ಉನ್ನತವಾದ, ಸರ್ವಲೋಕಕ್ಕೂ ಹಿತಕರವಾದ, ಸಮಸ್ತರೂ ಆಚರಿಸಲರ್ಹವಾದ ಧರ್ಮ ಪೃಥ್ವಿಯಲ್ಲಿ ಇನ್ನೆಲ್ಲೂ ಪ್ರಚಾರವಾಗಿಲ್ಲ. ಇದನ್ನು ಬೇರೆ ಗ್ರಂಥದಲ್ಲಿ ತೋರಿಸಿರುವೆನು. ಈ ಧರ್ಮದಲ್ಲಿ ಪರಿಚಯವಾಗುವ ಜ್ಞಾನ ಪ್ರಾಯಃ ಮನುಷ್ಯನಿಗೆ ಮೀರಿದ್ದು. ಕೃಷ್ಣನು ಮನುಷ್ಯಶಕ್ತಿಯಿಂದಲೇ ಕಾರ್ಯವನ್ನು ನಿರ್ವಹಿಸಿರುವನೆಂದು ಹೇಳಿ, ಬಾರಿಬಾರಿಗೂ ನಿದರ್ಶಿಸಿರುವೆನು. ಈ ಗೀತೆಯಲ್ಲಿ ಕೃಷ್ಣನು ಮಾತ್ರ ಪ್ರಾಯಃ ಅನಂತ ಜ್ಞಾನದ ಆಶ್ರಯವನ್ನು ಪಡೆದಿರುವನು.

ಸರ್ವಜನರಿಗೆ ಸಂಬಂಧಿಸುವ ಧರ್ಮದಿಂದ ಹಿಡಿದು ರಾಜಧರ್ಮದ (ರಾಜ ನೀತಿಯ)ವರೆಗೂ ನೋಡಲು ಕೃಷ್ಣನ ಜ್ಞಾನಾರ್ಜನೆಯ ವೃತ್ತಿಗಳೆಲ್ಲವೂ ಸಂಪೂರ್ಣ ವಿಕಾಸವನ್ನು ಪಡೆದುವಾಗಿವೆ. ಅವನು ಸರ್ವಶ್ರೇಷ್ಠನೆಂದೇ—ದೊಡ್ಡ ದೊಡ್ಡ ರಾಜನೀತಿಜ್ಞರು ಹೇಳಿದರೂ ವ್ಯಾಸದೇವನು ಸಲಹೆಯನ್ನು ಕೊಟ್ಟರೂ—ಯುಧಿಷ್ಠಿರನು ಕೃಷ್ಣನನ್ನು ವಿಚಾರಿಸದೆ ರಾಜಸೂಯೆಗೆ ಕೈಹಾಕಲಿಲ್ಲ. ತನ್ನ ಸ್ವಾಧೀನಕ್ಕೆ ಮೀರಿದ ಯಾದವರೂ, ತನ್ನ ಸ್ವಾಧೀನದಲ್ಲೇ ಇದ್ದ ಪಾಂಡವರೂ ಅವನನ್ನು ಕೇಳದೆ ಏನನ್ನೂ ಮಾಡರು. ಜರಾಸಂಧನನ್ನು ಕೊಂದು ಸೆರೆಯೊಳಗೆ ಬಿದ್ದಿದ್ದ ರಾಜರುಗಳನ್ನು ಬಿಡಿಸಿದ್ದು ಉನ್ನತ ರಾಜನೀತಿಯ ಅತಿ ಉತ್ಕೃಷ್ಟವಾದ ಉದಾಹರಣೆ. ಸಾಮ್ರಾಜ್ಯ ಸ್ಥಾಪನೆಯನ್ನು ಸುಲಭವಾಗಿಯೇ ಮಾಡಬಹುದಾಗಿದ್ದಾಗ್ಗೂ ಪರಮ ಧರ್ಮವನ್ನೇ ಅವಲಂಬಿಸಿ ರಾಜಗಣಗಳನ್ನು ಅವರವರ ರಾಜ್ಯಕ್ಕೆ ಸನ್ಮಾನದಿಂದ ಕಳುಹಿಸಿದನು. ಧರ್ಮರಾಜ್ಯವನ್ನು ಸಂಸ್ಥಾಪಿಸಿದಮೇಲೆ ಅದರ ಶಾಸನಕ್ಕಾಗಿ ರಾಜಧರ್ಮವನ್ನು ನಿಯಮಿಸುವುದಕ್ಕೂ, ರಾಜ್ಯವ್ಯವಸ್ಥೆಯನ್ನು ಸರಿಪಡಿಸುವುದಕ್ಕೂ, ಭೀಷ್ಮನನ್ನು ನಿಯೋಗಿಸಿದುದು ಕೃಷ್ಣನ ರಾಜನೀತಿಜ್ಞತೆಯ ಅತಿ ಪ್ರಶಂಸನೀಯವಾದ ಎರಡನೆಯ ನಿದರ್ಶನ.

ಕೃಷ್ಣನ ಬುದ್ಧಿ ಸರ್ವವ್ಯಾಪಿ, ಸರ್ವದರ್ಶಿ, ಸರ್ವಪ್ರಕಾರವಾದ ಉಪಾಯಗಳನ್ನು ಉದ್ಭಾವಿಸುವಂಥಾದ್ದು ಎಂಬುದನ್ನು ನಾವು ಬಾರಿ ಬಾರಿಗೂ ನೋಡಿದೆವು. ಮನುಷ್ಯಶರೀರವನ್ನು ಧರಿಸಿ ಎಷ್ಟರವರೆಗೂ ಎಲ್ಲ ಬಗೆಗಳಲ್ಲಿಯೂ ಸರ್ವಜ್ಞನಾಗಿರಬಹುದೋ ಅಷ್ಟರವರೆಗೂ ಕೃಷ್ಣನು ಸರ್ವಜ್ಞತೆಯನ್ನು ಸಂಪಾದಿಸಿದ್ದನು. ಅಪೂರ್ವವಾದ ಅಧ್ಯಾತ್ಮತತ್ತ್ವ ಮತ್ತು ಧರ್ಮತತ್ತ್ವಗಳು ಇವನಿಗಿಂತ ಹೆಚ್ಚಿಗೆ ಯಾರೂ ತಿಳಿಯಲು ಆಗದಿರುವಂಥವು. ಚಿಕಿತ್ಸಾಶಾಸ್ತ್ರ, ಸಂಗೀತಶಾಸ್ತ್ರ ಕೊನೆಗೆ ಕುದುರೆ ತಿಕ್ಕುವ ಶಾಸ್ತ್ರದವರೆಗೆ ಎಲ್ಲವೂ ಅವನ ಅಧೀನದಲ್ಲಿದ್ದುವು. ಉತ್ತರೆಯ ಮೃತ ಶಿಶುವನ್ನು ತಿರುಗಿ ಬದುಕಿಸಿದ್ದು ಚಿಕಿತ್ಸಾಶಾಸ್ತ್ರವನ್ನು ಬಲ್ಲನೆಂಬುದಕ್ಕೆ ನಿದರ್ಶನ. ಕೊಳಲೂದುವುದು ಸಂಗೀತವಿದ್ಯೆಯ ನಿದರ್ಶನ. ಜಯದ್ರಥನ ವಧೆಯಾದಾಗ ಅಶ್ವಗಳ ವೇಧೆಯನ್ನು ಪರಿಹರಿಸಿದ್ದು ಅಶ್ವವಿದ್ಯೆಯ ನಿದರ್ಶನ.

ಸಮಸ್ತ ಪ್ರಕಾರವಾದ ಕಾರ್ಯನಿರ್ವಾಹ ಸಾಮರ್ಥ್ಯಗಳೂ ಕೃಷ್ಣನಲ್ಲಿ ಸಂಪೂರ್ಣ ಪ್ರಕಾಶಸ್ಥಿತಿಯನ್ನು ಹೊಂದಿದ್ದುವು. ಅವನ ಸಾಹಸಕ್ಕೂ ಜಾಗರೂಕತೆಗೂ ಮತ್ತು ಸಮಸ್ತ ಕೆಲಸಗಳಲ್ಲಿ ಇದ್ದ ಶ್ರದ್ಧೆಗೂ ಅನೇಕ ನಿದರ್ಶನಗಳನ್ನು ಕೊಟ್ಟಿರುವೆವು. ಅವನ ಧರ್ಮವೂ ಸತ್ಯವೂ ದೃಢವಾದುವು. ಈ ಗ್ರಂಥದಲ್ಲಿ ಅದರ ಪ್ರಮಾಣಗಳು ತುಂಬಿವೆ. ಸರ್ವರಲ್ಲಿಯೂ ದಯೆ ಪ್ರೀತಿ ಮುಂತಾದುವು ಇತಿಹಾಸದಲ್ಲಿ ಚೆನ್ನಾಗಿ ವ್ಯಕ್ತವಾಗುತ್ತಲಿರುವುವು. ದುರಹಂಕಾರದಿಂದ ಮೆರೆಯುವ ಪರಾಕ್ರಮ ಶಾಲಿಗಳಿಗಿಂತ ತಾನೆಷ್ಟೋ ಬಲವಂತನಾಗಿದ್ದರೂ ಲೋಕಹಿತಾರ್ಥವಾಗಿಯೂ ಸಮಾಧಾನತೆ (ಶಾಂತಿ) ಗಾಗಿಯೂ ದೃಢಯತ್ನನೂ ಪ್ರತಿಜ್ಞಾಶಾಲಿಯೂ ಆಗಿದ್ದನು.

ಇವನು ಸರ್ವಭೂತಹಿತೈಷಿಯಾಗಿದ್ದನು ; ಎಂದರೆ, ಬರೀ ಮನುಷ್ಯರ ಮಟ್ಟಿಗೇ ಅಲ್ಲ. ದನಕರುಗಳೇ ಮೊದಲಾದ ತಿರ್ಯಗ್ಯೋನಿಗಳ ಮೇಲೂ ಇವನ ದಯೆಯಿತ್ತು. ಇದು ಗಿರಿಯಜ್ಞದಲ್ಲಿ ಸ್ಪಷ್ಟಪಟ್ಟಿರುವುದು. ಭಾಗವತಕಾರನು ಹೇಳಿರುವ ಪ್ರಕಾರ ಇವನು ಹುಡುಗನಾಗಿದ್ದಾಗ ವಾನರ ಗಳಿಗೆ ಕೊಡುವುದಕ್ಕೋಸ್ಕರ ಬೆಣ್ಣೆಯನ್ನು ಕದಿಯುತ್ತಿದ್ದುದೂ, ಹಣ್ಣು ಮಾರುತ್ತಿದ್ದ ಹಸೆರುವಾಣಿಯವಳ ವಿಚಾರವೂ ಕಿಂವದಂತಿಯ ಮೂಲಕ ಎಷ್ಟರವರೆಗೆ ಸ್ಥಾಪಿತವಾಗಿತ್ತೋ ಹೇಳಲು ಸಾಧ್ಯವಿಲ್ಲ. ದನಕರು ಗಳಿಗೆ ಒಳ್ಳೆಯ ಉಣಿಸನ್ನಿಕ್ಕುವುದಕ್ಕೋಸ್ಕರ ಇಂದ್ರಯಜ್ಞವನ್ನೇ ತಡೆದ ಇವನ ಚರಿತ್ರೆಗೆ ಮೇಲೆ ಹೇಳಿದ ವಿಷಯಗಳೂ ಒಪ್ಪತಕ್ಕುವುಗಳೇ ಆಗಿವೆ. ಅವನ ಆತ್ಮೀಯರು ಸ್ವಜನಜ್ಞಾತಿಗಳು ಮುಂತಾದವರ ವಿಷಯಲ್ಲಿ ಎಷ್ಟರ ಮಟ್ಟಿಗೆ ಹಿತವನ್ನು ಕೋರುವವನಾಗಿದ್ದನೋ ಅದನ್ನು ನೋಡಿದೆವು. ಅಲ್ಲದೆ ಇಂಥವರು ಪಾಪಚರ್ಯೆಯುಳ್ಳವರಾದರೆ ಅವರಿಗೆ ತಾನೇ ಶತ್ರು ವಾಗುತ್ತಿದ್ದನು. ಎಲ್ಲೆಯಿಲ್ಲದ ಅವನ ಕ್ಷಮಾಗುಣದ ಪರಿಚಯವೂ ನಮಗೆ ಆಗಿಯೇ ಇದೆ. ಸಮಯವೊದಗಿದಾಗ ಅವನು ವಜ್ರಹೃದಯ ನಂತೆ ಹಿಂದುಮುಂದು ನೋಡದೇ ದಂಡನೆಯನ್ನು ವಿಧಿಸುವನು. ಸ್ವಜನ ಪ್ರಿಯನಾದರೂ ಅವರು ದುಷ್ಟರಾಗಿದ್ದರೆ ಲೋಕದ ಕ್ಷೇಮಕ್ಕೋಸ್ಕರ ಅವರನ್ನು ನಾಶಪಡಿಸುವ ವಿಷಯದಲ್ಲಿ ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ. ಕಂಸನು ಸೋದರಮಾವ, ಪಾಂಡವರಂತೆಯೇ ಶಿಶುಪಾಲನೂ ಸೋದರ

ಮಾವನ (ತಾಯಿಯ ತಮ್ಮನ) ಮಗ. ಆದರೂ ಇವರು ಲೋಕ ಕಂಟಕರಾಗಿದ್ದುದರಿಂದ ಈ ಈರ್ವರನ್ನೂ ಸಂಹರಿಸಿದನು. ಯಾದವರು ಮದ್ಯಪಾನಾಸಕ್ತರಾಗಿ ದುಷ್ಟಮಾರ್ಗ ಪ್ರವರ್ತಕರಾಗಲು ಅವರನ್ನೂ ಉಳಿಸಲಿಲ್ಲ.

ಹೀಗೆ ಸಮಸ್ತ ಶ್ರೇಷ್ಠ ವೃತ್ತಿಗಳೂ ಕೃಷ್ಣನಲ್ಲಿ ಸಂಪೂರ್ಣ ಪ್ರಕಾಶ ವನ್ನು ಹೊಂದಿದ್ದವು. ಮನುಷ್ಯರನ್ನು ಸಂತೋಷಪಡಿಸುವ ಶಕ್ತಿಯಲ್ಲೂ ಅವನು ಹಿಮ್ಮೆಟ್ಟುವವನಾಗಿರಲಿಲ್ಲ. ಬೃಂದಾವನದಲ್ಲಿ ವ್ರಜಲೀಲೆ, ಪರಿಣತ ವಯಸ್ಸಿನಲ್ಲಿ ಸಮುದ್ರವಿಹಾರ, ಯಮುನಾ ವಿಹಾರ, ರೈವತಕ ವಿಹಾರ ಇವು ಉದಾಹರಣೆಗಳು. ಇವನ್ನು ವಿಸ್ತರಿಸುವ ಆವಶ್ಯಕತೆ ಕಾಣಲಿಲ್ಲ.

ಇನ್ನೂ ಒಂದು ಮಾತುಂಟು—ಭಕ್ತಿಯೇ ಮನುಷ್ಯನಿಗೆ ಪ್ರಧಾನ ವಾದ ವೃತ್ತಿ ಎಂದು ಧರ್ಮತತ್ತ್ವದಲ್ಲಿ ಹೇಳಿರುವೆನು. ಆದರ್ಶ ಪುರುಷನಾದ ಕೃಷ್ಣನು ಮನುಷ್ಯತತ್ತ್ವದ ಆದರ್ಶವನ್ನು ಪ್ರಚಾರಪಡಿಸಲು ಅವತರಿಸಿರುವ ನಷ್ಟೆ. ಅವನು ಭಕ್ತಿಯನ್ನು ಸಂಪೂರ್ಣ ಮಾರ್ಗದಲ್ಲಿ ಪ್ರಕಾಶಪಡಿಸಿರು ವುದನ್ನು ಕಾಣೆ. ಅವನು ಈಶ್ವರಾವತಾರನಾಗಿದ್ದರೆ ಅವನ ಭಕ್ತಿಗೆ ಯಾರು ಪಾತ್ರರು? ಅವನು ಸ್ವಂತವಾಗಿ ತನ್ನಲ್ಲೇ ಭಕ್ತಿಯಿರಿಸಬೇಕು. ತಾನು ಪರಮಾತ್ಮನಲ್ಲಿ ಬೇರೆಯಲ್ಲವೆಂದು ತಿಳಿದರೆ ಭಕ್ತಿಯಾಯಿತು. ಇದು ಜ್ಞಾನಮಾರ್ಗದ ಕೊಟ್ಟಕೊನೆ.* ಇದಕ್ಕೆ ಆತ್ಮರತಿ ಎನ್ನುವರು. ಛಾಂದೋಗ್ಯೋಪನಿಷತ್ತಿನಲ್ಲಿ ಇದನ್ನು ಕುರಿತು ಹೀಗೆ ಹೇಳಿರುವರು :—

ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ನಾತ್ಮರತಿರಾತ್ಮ ಕ್ರೀಡ ಆತ್ಮ ಮಿಥುನ ಆತ್ಮಾನಂದಃ ಸ ಸ್ವರಾಟ್ ಭವತೀತಿ ॥

ಯಾವನಾದರೆ ಇದನ್ನೇ ನೋಡಿ ಇದನ್ನೇ ಭಾವಿಸಿ ಇದನ್ನೇ ತಿಳಿದು, ಆತ್ಮನಲ್ಲಿಯೇ ಆಸಕ್ತನಾಗಿ ಆತ್ಮದಲ್ಲಿಯೇ ಕ್ರೀಡಾಶೀಲನಾಗು ವನೋ, ಆತ್ಮವೇ ಯಾರ ಸಂಗಾತಿಯೋ, ಆತ್ಮವೇ ಯಾರ ಆನಂದವೋ ಅವನೇ "ಸ್ವರಾಟ್." ಇದೇ ಗೀತೆಯಲ್ಲಿಯೂ ಇರುವುದು. ಕೃಷ್ಣನು

---

* ಮಹಾಭಾರತದಲ್ಲಿ ಅವನು ಶಿವೋಪಾಸಕನೆಂದು ವರ್ಣಿಸಿರುವುದೆಲ್ಲಾ ಪ್ರಕ್ಷಿಪ್ತ ಚಿಹ್ನೆಗಳಿಂದ ತುಂಬಿರುವುವು.

ಆತ್ಮಾರಾಮನು; ಆತ್ಮ ಶಕ್ತಿಯನ್ನು ಎಲ್ಲೆಲ್ಲೂ ಹರಡಿ ಜಗನ್ಮಯನು; ಆ ಜಗತ್ತಿನಲ್ಲಿಯೇ ಪ್ರೀತಿ ಪೂರ್ಣನು. ಪರಮಾತ್ಮನ ಆತ್ಮಾಸಕ್ತತೆಯನ್ನು ಇನ್ನು ಬೇರೆ ಯಾವ ಮಾರ್ಗದಲ್ಲಿಯೂ ನಾನರಿಯೆ; ಅಂದರೆ, ಈ ವಿಚಾರವನ್ನು ನಾನು ತಿಳಿಯುವಂತೆ ವಿವರಿಸಲಾರೆ.

ಉಪಸಂಹಾರದಲ್ಲಿ—ಕೃಷ್ಣನು ಸರ್ವತ್ರ ಸರ್ವ ಸಮಯದಲ್ಲೂ ಸರ್ವ ಗುಣಗಳನ್ನೂ ಬಹು ಚೆನ್ನಾಗಿ ತೋರ್ಪಡಿಸಿರುವನು. ಅವನು ಅಪರಾಜಯ, ಅಪರಾಜಿತ, ವಿಶುದ್ಧ, ಪುಣ್ಯಮಯ, ಪ್ರೀತಿಮಯ, ದಯಾಮಯ, ಕರ್ತವ್ಯನಿಷ್ಠ, ಧರ್ಮಾತ್ಮ, ವೇದಜ್ಞ, ನೀತಿಜ್ಞ, ಧರ್ಮಜ್ಞ, ಲೋಕ ಹಿತೈಷಿ, ನ್ಯಾಯನಿಷ್ಠ, ಕ್ಷಮಾಶೀಲ, ನಿರಪೇಕ್ಷ, ಶಾಸನಕರ್ತ, ನಿರ್ಮಮ, ನಿರಹಂಕಾರಿ, ಯೋಗಿ, ತಪಸ್ವಿ—ಮನುಷ್ಯ ಶಕ್ತಿಯಿಂದಲೇ ಸಮಸ್ತ ಕೆಲಸಗಳನ್ನು ಮಾಡಿದನಾದರೂ ಅವನ ಚರಿತ್ರೆ ಅತಿ ಅಮಾನುಷ ವಾಗಿರುವುದು. ಈ ಪ್ರಕಾರವಾಗಿ ಮನುಷ್ಯ ಚರಿತ್ರೆಯ ದ್ವಾರಾ ಅಮಾನುಷ ವ್ಯಾಪಾರದ ನಿದರ್ಶನೆಯಾಗಿರಲು ಅವನ ಮನುಷ್ಯತ್ತ್ವವೋ ಅಥವಾ ಈಶ್ವರತ್ವವೋ ಎಂಬುದನ್ನು ನಿಶ್ಚೈಸಬಹುದೋ ಇಲ್ಲವೋ ಎಂಬುದನ್ನು ಪಾಠಕರೇ ತಮ್ಮ ಬುದ್ಧಿಯಿಂದ ಗೊತ್ತುಮಾಡಿಕೊಳ್ಳಲಿ. ಅವನು ಮನುಷ್ಯಮಾತ್ರನೆಂದು ಯಾರು ಸಿದ್ಧಾಂತಮಾಡುವರೋ ಅವರು (Rhys Davids) ರಿಸ್ ಡೇವಿಡ್ಸ್ ಎಂಬುವನು ಶಾಕ್ಯಸಿಂಹನ ವಿಷಯದಲ್ಲಿ ಹೇಳಿರುವಂತೆ ಕೃಷ್ಣನ ವಿಷಯದಲ್ಲಿಯೂ (The wisest and greatest of the Hindus) ಹಿಂದುಗಳಲ್ಲಿ ಅತ್ಯಂತ ಜ್ಞಾನಿ ಮತ್ತು ಮಹಾತ್ಮ ತಮನು ಎಂದು ಹೇಳಲೇಬೇಕು. ಕೃಷ್ಣ ಚರಿತ್ರೆಯಲ್ಲಿ ಈಶ್ವರನ ಪ್ರಭಾವ ವನ್ನು ತಿಳಿದುಕೊಳ್ಳುವುದಕ್ಕೆ ಸಮರ್ಥನಾದವನು ಕೈಜೋಡಿಸಿ ವಿನಯ ಭಾವದಿಂದ ಈ ಗ್ರಂಥವು ಮುಗಿಯುವ ಕಾಲದಲ್ಲಿ ನನ್ನೊಡನೆ

ನಾಕಾರಣಾತ್ ಕಾರಣಾದ್ವಾ ।
ಕಾರಣಾಕಾರಣಾನ್ನ ಚ ॥
ಶರೀರಗ್ರಹಣಂ ವಾಪಿ ।
ಧರ್ಮತ್ರಾಣಾಯ ತೇ ಪರಂ ॥

ಎಂದು ನಮಸ್ಕರಿಸಲಿ.

ಅಕ್ಷರಾನುಕ್ರಮಣಿಕೆ

		ಪುಟ
ಅಗ್ನಿಯ ಅಜೀರ್ಣ ಪರಿಹಾರ	....	೨೩೮
ಅರ್ಜುನ ಎಂದರೆ ಬೆಳಕು	....	೩೪
ಅರ್ಜುನನಲ್ಲೂ ಇಂಥ ರಣಪಾಂಡಿತ್ಯ ಇಲ್ಲ	....	೪೩೩
ಅರ್ಜುನನು ಯುಧಿಷ್ಠಿರನನ್ನು ಕೊಲ್ಲಲು ಹೋದದ್ದು	....	೩೮೩
ಅತ್ಯಾಚಾರದ ಮದುವೆ ಅವುದು ?	....	೨೩೬
ಅಧರ್ಮ ತರುವ ಇಂದ್ರಪದವಿಯೂ ಧರ್ಮರಾಜನಿಗೆ ಬೇಡ	....	೩೦೪
ಅನುಶೀಲನ ಮತ್ತು ಅದರ ಚರಮಾದರ್ಶ	....	೪, ೨೭೧
ಅನನ್ಯಭಕ್ತಿ	....	೧೪೦, ೧೪೫, ೧೪೮
ಅನೈಸರ್ಗಿಕತೆ ಮತ್ತು ಅದಕ್ಕೆ ಕಾರಣ	....	೧೨, ೧೪, ೫೯
ಅನಂತ ಜ್ಞಾನದ ಆಶ್ರಯಪಡೆದಿರುವಿಕೆ	....	೪೩೪
ಅಮಾನುಷ ಕೃತ್ಯಕ್ಕೆ ಅವತಾರ ಏಕೆ ?	....	೬೦—೬೫
ಅಯನಗಳುಂಟಾಗುವಿಕೆ	....	೨೩—೨೪
ಅಂಧಕಾರ ಪೂರ್ಣಸ್ಥಾನದಲ್ಲಿ ಕೃಷ್ಣನಗರ	....	೩೪—೩೫
ಆತ್ಮಹತ್ಯೆಯೋ ಈಶ್ವರಪ್ರಾಪ್ತಿಯೋ	....	೪೩೧
ಆತ್ಮವೇ ಯಾರ ಆನಂದವೋ ಅವನೇ ಸ್ವರಾಟ್	....	೪೩೭
ಆದರ್ಶ ಚರಿತ್ರೆ ಮತ್ತು ಧಾರ್ಮಿಕತೆ	....	೩, ೨೪೩, ೨೪೪
ಆ ಆದರ್ಶ ಹಿಂದುವು ಯಾರು	....	೫, ೨೭೯
ಆಯು ಎಂಬ ಆಜ್ಯವು ರಾಜಪುತ್ರನಾದ್ದು	....	೯೧—೯೭
ಇತಿಹಾಸ ಮತ್ತು ಅದರಲ್ಲಿ ಸುಳ್ಳು	....	೧೧—೧೨
ಇಂದ್ರ ಪೂಜೆಯ ಅಭಿಪ್ರಾಯ	....	೧೧೪—೧೧೫
ಇಪ್ಪತ್ತೆರಡು ಮಂದಿ ಪತ್ನಿಗುರು	....	೨೦೧—೨೦೨
ಉಗ್ರಸೇನ ರಾಜಾ	....	೧೭೪, ೧೯೩
ಉತ್ಕೃಷ್ಟ ಶ್ರೇಣಿಯ ಕವಿಯ ರಚನೆ	....	೩೩೮
ಉದ್ಯೋಗ ಪರ್ವದ ಅಧಿಕ ಅಧ್ಯಾಯಗಳು	....	೧೮೭
ಉನ್ನತಿ, ಉನ್ನತ ರಾಜನೀತಿಯ ಉತ್ಕೃಷ್ಟ ಉದಾ.	....	೬೭, ೪೩೫
ಉಲೂಕನು ಆರು ಜನಗಳನ್ನೂ ಚೆನ್ನಾಗಿ ಬೈದನು	....	೩೪೪
ಊರ್ವಶಿ ಎಂಬ ಅರಣಿ ಕಡ್ಡಿಯು ರಾಣಿಯಾಯಿತು	....	೯೦—೯೩
ಎಳೆಯ ರೋಮವೊಂದು ಕೃಷ್ಣನಾಗಿ ಬೆಳೆದದ್ದು	....	೨೧೯
ಎಂಟು ಬಗೆಯ ಮದುವೆಗಳು	....	೨೩೧
ಎಂಭತ್ತಾರು ರಾಜರು ಗಿರಿದುರ್ಗದಲ್ಲಿ ಪಶುಗಳು	....	೨೫೨—೫೩
ಏಳು ಜನ ಪ್ರಮುಖರು ಜಯದ್ರಥನನ್ನುಳಿಸಲು ಕಾಯುವುದು	....	೩೫೪—೫೬

ಪುಟ
ಏಸುವಿನ ವ್ಯವಸಾಯವೇನು ? ಅವನು ಸೇನಾಪತಿ ಆಗಿದ್ದರೊ? ೨೬೮—೭೧
ಐದು ಮಂದಿ ಇಂದ್ರರು .... ೧೯—೨೧೮
ಒಂದೇ ಗ್ರಂಥ, ಒಂದೇ ವಿಷಯ, ಎರಡು ಪ್ರಕಾರ ವರ್ಣಿತ ಏಕೆ! ೨೯೭
ಒಂದೇ (ದ್ರೋಣ ವಧೆ) ಸಾಕಾಗಿದ್ದರೂ ಎರಡೂ
(ಹತಗಜ) ಜೋಡಿ ೨೧೭, ೩೭೫
ಓಂಕಾರದಿಂದ ದ್ರೋಣನು ಸ್ವರ್ಗಕ್ಕೆ ತೆರಳಿದ್ದು ೩೭೭
ಕಬಷ ಎಂಬ ಶೂದ್ರ ಋಷಿ ೪೪
ಕವಿ ಕಲ್ಪನಾ ವಿಚಾರ .... ೩೦—೩೨
ಕಾಮಗೀತೆಯ ತತ್ವ .... ೪೧೮—೪೨೨
ಕಾಮರೂಪಿ ೧೯೯
ಕಾಲಿಯ (ಕಾಳಿಂಗ) ವೃತ್ತಾಂತ ೯೪, ೧೦೯
ಕಾಲಯವನ .... ೧೭೯—೮೧
ಕುಬ್ಜ ವೃತ್ತಾಂತ .... ೧೭೧—೭೨
ಕುಲೀನರ ಮನೆಯ ಅಗ್ರತಾಂಬೂಲ ಪದ್ಧತಿ ೨೮೪
ಕುರುಕ್ಷೇತ್ರ ಯುದ್ಧ ಕಲಿಯ ಆರಂಭದಲ್ಲಿ ಅಲ್ಲ .... ೧೮—೨೬
ಕುರು ಪಾಂಚಾಲರ ನಿರ್ಣಯ .... ೨೮—೨೯
ಕೃಷ್ಣ ವೃತ್ತಾಂತವಿರುವ ಪುರಾಣ ಗ್ರಂಥಗಳು ೭
ಕೃಷ್ಣ ಮತ್ತು ಏಸು ತಾರತಮ್ಯ .... ೨೬೬—೨೭೧
ಕೃಷ್ಣ, ನಿಮ್ಮ ಬಾಯಿಂದ ಬರುವ ಮಾತು ಕೇಳಬೇಕು ! ... ೩೨೬
ಕೃಷ್ಣ ಚರಿತ್ರ ವ್ಯಾಖ್ಯೆಯ ಮರ್ಮ ೫-೬-೨೭೩-೩೯೨
ಕೃಷ್ಣನ ಅಂತರಂಗದಲ್ಲಿ ದುಃಖ ... ೧೯೩
ಕೃಷ್ಣನ ಬಸು ವಿವಾಹ ... ೧೯೭—೨೦೪
ಕೇಶಿ ಎಂಬವನ ವೃತ್ತಾಂತ ೧೬೯
ಕೌಶಲಾತಿಶಯತೆಯ ಸ್ವಭಾವ ೫೯, ೨೬೦
ಕರ್ಣಚಾರಿತ್ರವು ಬೆಲೆ ಉಳ್ಳದು, ಮನೋಹರ ೩೪೩, ೪೦೨
ಕ್ರಾಂತಿ ಬಿಂದು ವಿಷಯ ೨೩
ಗದಾವಸಾನ ೨೭೭
ಗಾಂಧಾರಿಯ ಶಾಪ, ಪರ್ಯವಸಾನ ೪೧೩, ೨೬
ಗೋಲ್ಡ್‌ಸ್ಟಕ್ಕರಾದಿಗಳ ಮತ (ಪಾಣಿನಿಯ ಕಾಲ) ೩೯
ಎಂತಹ ಗ್ಲೋರಿಗೂ (Glory) ಕಳ್ಳತನಕ್ಕೂ ಭೇದವಿಲ್ಲ ೩೧೬
ಗೋವರ್ಧನ ವಿಷಯ ... ೧೧೧—೧೧೩
ಗೋಪ ಕನ್ಯೆಯರು ... ೧೪೫—೪೬

ಪುಟ

ಘಟೋತ್ಕಚ ವಧೆ ... ೩೬೩
ಚಕ್ರದ ನಡವಳಿಕೆ-ಜೀವರಂತೆ ಅಪ್ಪಣೆ ಪ್ರಕಾರ ... ೨೯೬
ಜರ್ಮನ್ ಪಂಡಿತ ವೇಬರನ ಕಳ್ಳವಿದ್ಯೆ ... ೧೭—೧೮
ಜರಾಸಂಧನ ಬಲ ಮತ್ತು ಸಂಬಂಧ—ಅವನ ವಧೆ ... ೧೭೮—೭೯, ೨೬೭
ಜರಾವ್ಯಾಧ—ಜರಾವ್ಯಾಧಿ ... ೪೨೮, ೪೩೧
ಜೀವದಾನಪಡೆದ ಮಯನ ಪ್ರಾರ್ಥನೆ ... ೨೪೦—೨೪೧
ಜ್ಞಾನವಿಕಾಸ ಶ್ರೇಷ್ಠತೆಯ ಉಜ್ವಲ ಪ್ರಮಾಣ ... ೪೩೪
ಡಯೋಜನೀಸನು ಸಿಕಂದರನನ್ನು ಕಳ್ಳ ಎಂದ ... ೩೧೭
ಡಿಂಭಕ ಸತ್ತದ್ದು ... ೧೮೨
ಡ್ಯೂಟಿ ಎಂದರೇನು ... ೩೧೫
ತಪಸ್ಸಿನ ಅರ್ಥ ... ೧೭೭
ತೃಣಾವರ್ತ ... ೧೦೩
ತನ್ನ (ಕೃಷ್ಣನ) ಪ್ರತಿಜ್ಞೆ ತೊರೆದುದು ಭಕ್ತನ ಪ್ರತಿಜ್ಞೆ ಉಳಿಸಿದ್ದು ೩೫೦
ದಾಮೋದರ ... ೧೦೬
ದೇಹನಾಶ ಮಾಡಿದರೂ ಪಾಪಗಳಿಗೊಳಗಾಗನು ... ೪೨೧
ಧರ್ಮತತ್ತ್ವ, ಕಾರ್ಯ ಧರ್ಮತಃ ... ೩, ೧೭೪, ೨೪೩
ಧರ್ಮರಕ್ಷಕನು ಸುಮ್ಮನಿದ್ದರೆ ಪಾಪ ... ೨೬೪—೨೬೫
ಧರ್ಮದೇಳಿಗೆಗೆ ಕೃಷ್ಣ ಚರಿತ್ರ ಸಮಾಲೋಚನೆ ... ೩
ಧರ್ಮ ಬಲ್ಲಂಥವರನ್ನು ದೌತ್ಯಕ್ಕೆ ಕಳುಹಬೇಕು ... ೩೦೫—೩೧೮
ಧೃತರಾಷ್ಟ್ರನು ಜಾರಿಕೊಂಡದ್ದು ... ೩೩೫
ಧೇನುಕಾಸುರ ... ೧೧೧
ನರಕ ಮತ್ತು ಅವನ ಹದಿನಾರು ಸಾವಿರ ಕನ್ಯೆಯರು ... ೧೮೯
ನಾರದರು ಕೃಷ್ಣಚರಿತ್ರೆ ಬರೆಯಲು ವ್ಯಾಸರಿಗೆ ಉಪದೇಶವಿತ್ತರು ೭
ನಿಗ್ರಹವೇ ಧರ್ಮ, ಮೋಕ್ಷಕ್ಕೆ ಬೀಜಸ್ವರೂಪ ... ೪೨೧
ನಿಸ್ವಾರ್ಥ ಧರ್ಮಲಕ್ಷಣ ೨೧೬–೨೧೭, ೨೪೧–೪೨
ನಿನ್ನ ಅಯೋಗ್ಯ ಉಪಾಯ ಪ್ರಭಾವದಿಂದ ನಾನು
(ಕೌರವನು) ನಾಶವಾದೆ ... ೪೦೮
ನಿರ್ಮಮತೆಯಿಂದ ಬ್ರಹ್ಮಲಾಭವಾಗುವಿಕೆ ... ೪೨೦—೨೧
ನೂತನ ವೈಷ್ಣವ ಧರ್ಮ (ರಾಧಾಕೃಷ್ಣ) ... ೧೫೪—೫೫
ಪಾಣಿನಿ ಸೂತ್ರದಿಂದ ಮಹಾಭಾರತ ಕಾಲ ... ೩೭—೪೦
ಪ್ರಕ್ಷಿಪ್ತವನ್ನರಿಯುವ ಏಳು ದಾರಿಗಳು ... ೫೧—೫೨

		ಪುಟ
ಪುರಾಣ ಮತ್ತು ಅದರ ಬಗೆ	...	೬೪—೯೬
ಪುರೂರವ ಎಂಬ ಅಗ್ನಿಯು ರಾಜನಾಗಿ ಬೆಳೆದದ್ದು	...	೮೯—೯೨
ಪೂತನಾ ವೃತ್ತಾಂತ	...	೯೩—೯೪, ೧೦೨
ಪಂಚ ಪಾಂಡವರ ಮತ್ತು ಪಾಂಚಾಲೀ ಜನನ ನಿಮಿತ್ತ	...	೨೧೮
ಪಾಂಡವರೆಂಬವರೇ ಸುಳ್ಳು	...	೩೦
ಪಾಪ ಪುಣ್ಯ	...	೧೩೯—೪೦
ಪ್ರಕೃತಿ ಪುರುಷ	...	೧೬೨
ಪಾಂಚಾಲಿ ಶಬ್ದದ ಅರ್ಥ	...	೨೧೦
ಪೌಂಡ್ರ ವಾಸುದೇವ	...	೧೯೧
ಬರಹರೂಪದಲ್ಲಿರುವ ಭಾರತದ ಮೂರು ಸ್ತರಗಳು	...	೫೩—೫೬
ಬಲಿತ ರೋಮವೊಂದು ಬಲರಾಮನಾಗಿ ಬೆಳೆಯಿತು	...	೨೧೯
ಭಗವಂತನ ಲಕ್ಷಣ	...	೨
ಭಾರತದ ಐತಿಹಾಸಿಕತೆ	...	೨೭
ಭಾಗವತ ಎಂದರೇನು	...	೮೫
ಭಾರತ ಯುದ್ಧವು ಯಾವಾಗ	...	೨೫—೨೬
ಬ್ರಾಹ್ಮಣವು ಉಪನಿಷತ್ತಿಗಿಂತ ಪ್ರಾಚೀನ	...	೪೪
ಬ್ರಾಹ್ಮಣರಿಗೆ ನಾನಾತರಹದ ಬುದ್ಧಿ	...	೩೧೩
ಭೀಷ್ಮನು ಕೃಷ್ಣ ಪೂಜೆಗೆ ಹೇಳಿದ ಕಾರಣಗಳು	...	೨೮೮
ಭೀಷ್ಮನಿಗಿರುವ ಉಪದೇಶಾರ್ಹತೆ	...	೪೧೬—೧೮
ಮಥುರಾಪುರ ನಿರ್ಮಾಣ	...	೧೮೩
ಮನುಷ್ಯತ್ವ—ಅಮಾನುಷತೆ ಎಂತು?	...	೨೪೪—೪೫, ೨೭೦
ಮೂಲ ಮಹಾಭಾರತದ ಸುಭದ್ರಾ	...	೨೨೨
ಮೊಟ್ಟಮೊದಲು ಕೃಷ್ಣ ಯಾವಾಗ ಜಗದೀಶ್ವರ	...	೨೮೨
ಯದು ಎಂಬವನ ವಿಚಾರ	...	೯೮—೯೯
ಯಮಳಾರ್ಜುನ ಭಂಗ	...	೧೦೫
ಯಾರಿಗೆ ಈ ಪುಸ್ತಕ?	...	೧೦
ಯಾದವರ ಅವಧ್ಯತೆ	...	೪೧೪
ಯುದ್ಧ ಧರ್ಮ	...	೧೮೦
ಯುಧಿಷ್ಠಿರ—ಕೃಷ್ಣ ಸಂದರ್ಶನ	...	೨೧೫
ಯುದ್ಧವಾದರೆ ಅನ್ಯಾಯ ಜನಹತ್ಯ	...	೨೯೩
ಯುದ್ಧಪರ್ವ ಅತಿನಿಕೃಷ್ಟ—ಉಚಿತ	...	೩೪೬

		ಪುಟ
ಯುದ್ಧವು ಕೃಷ್ಣನಿಗೆ ಸ್ವಲ್ಪವೂ ಇಷ್ಟವಿಲ್ಲ	...	೩೦೬
ಯುದ್ಧಮೃತ್ಯುವೇ ಧರ್ಮ ಸನಾತನ	...	೩೫೩
ಯುಧಿಷ್ಠಿರ ರಣರಂಗ ಬಿಟ್ಟು ಓಡಿದ್ದು; ಅರ್ಜುನ ಕೋಪ	...	೩೮೨—೮೪
ಯುರೋಪಿನಲ್ಲಿ ಧರ್ಮಕ್ಕಿಂತ ರಾಜನೀತಿಯೇ ಬಲ	...	೩೦೨
ರಥಸಪ್ತಮಿಯ ಹಬ್ಬ ಏನು ?	...	೨೬
ರಮೇಶಚಂದ್ರರ ಕುರುಪಾಂಚಾಲ ನಿರ್ಣಯ	...	೨೭—೩೦
ರಾಜಸೂಯ ಯಾಗಾರ್ಹತೆ	...	೨೪೮—೨೫೨
ರಾಜಲಾಭ, ವನವಾಸ—ಎರಡೂ ಸುಖಕ್ಕೇ ಮೂಲ	...	೩೩೧
ರಾಸಕ್ರೀಡ	...	೧೧೯—೧೩೦
		೧೪೪—೪೮
ರಾಧಾ ಮತ್ತು ರಾಧಾಕೃಷ್ಣ ವಿವಾಹ	...	೧೪೯—೧೬೧
ರುಕ್ಮಿಣೀ ಹರಣ	...	೧೮೪
ರುಕ್ಮಿಯ ಕಪಟ	...	೧೮೭
ರೂಪಕ ಮತ್ತು ಅದರ ಅಸಂಗತ	...	೩೪—೩೫—೩೬
ಲಕ್ಷ ಶ್ಲೋಕಾತ್ಮಕ ಭಾರತದಲ್ಲಿ ಅಧಿಕ ಶ್ಲೋಕಗಳು	...	೪೭—೪೮
ಲಾಸನ್ ಸಾಹೇಬರ ಮತದಂತೆ ಪಾಂಡವಾದಿಗಳು	...	೩೪—೨೨೩
ವಸ್ತ್ರಾಪಹರಣ	...	೧೩೬—೧೩೭
ವೃತ್ತಿ ಎಂದರೇನು	...	೪
ವಕ್ಷದಲ್ಲಿ ಅಸ್ತ್ರವು ವೈಜಯಂತೀಮಾಲೆಯಾಗಿ ಬಿತ್ತು	...	೩೫೨
ವಾಕ್ಯತಃ ಧರ್ಮಪ್ರಚಾರ	...	೨೬೫
ವಾಸುದೇವ ಎಂದರೆ ಯಾರು	...	೪೧, ೧೯೦—೧೯೧
ವಿರಜಾ—ರಾಧ	...	೧೫೧
ವಿಷ್ ಧಾತು ವಿಷ್ಣುವಾಗಿ ಬೆಳೆದದ್ದು	...	೮೯—೯೦
ವೀರರಿಗುಚಿತ ಸುಖ ಯಾವುದು ?	...	೩೩೦
ವೇದವ್ಯಾಸರು ಮತ್ತು ಕೃಷ್ಣ	...	೪೩, ೫೭, ೭೬
ವೈಷ್ಣವರ ಕೈಲಕ್ಷಣ	...	೨೨೧
ಶಕಟ ಭಂಗ	...	೧೦೩
ಶಕ್ತಿ ಜನ್ಮ	...	೧೦೧
ಶತ್ರುನಿಗ್ರಹ ಚಾತುರ್ಯ	...	೨೫೭
ಶಸ್ತ್ರ ಶಿಕ್ಷಣ	...	೧೭೬
ಶಾರೀರಕ —ಮಾನಸಿಕ ಸರ್ವಾಂಗೀಣ ಪರಿಣತಿ	...	೪
ಶಾಸನ ವಿಧಿ (ಮುಖ್ಯ ಕೆಲಸ)	...	೪೧೭
ಶಾಂತಿ ಮತ್ತು ಆನುಶಾಸನಿಕ ಪರ್ವದ ಕೃಷ್ಣ ಈಶ್ವರ	...	೪೧೫

ಪುಟ

ಶಾಂಬ ಪುರುಷನು ಕಬ್ಬಿಣದ ಒನಕೆ ಹೆತ್ತದ್ದು ... ೪೨೭

ಶ್ರೀಕೃಷ್ಣನ ವ್ಯವಹಾರ ಎಲ್ಲವೂ...ಮನುಷ್ಯೋಪಯೋಗಿ ... ೩೨೫—೩೨೬

ಶ್ವೇತಕಿರಾಯನ ಯಜ್ಞ ... ೨೩೭

ಶ್ರೇಷ್ಠ ಹಿಂದೂ ಆದರ್ಶ ... ೫, ೨೭೧

ಶೈವರ ಕೈ ಮಾದರಿ ... ೨೨೦

ಶೌನಕ ಕೃಷ್ಣ (ಆಂಗಿರಸ) ... ೪೪

ಸಭಾಭವನ ನಿರ್ಮಾಣ ... ೨೪೨

ಸಮಾಲೋಚಕನ ಎರಡು ವಿಧದ ಕೆಲಸ ... ೪೩೨

ಸಮಸ್ತ ಗ್ರಂಥಗಳಲ್ಲೂ ಪ್ರಕ್ಷಿಪ್ತ ... ೨೫೭—೫೮

ಸಭ್ಯತೆಯ ಬೆಳಕಿನೊಳಗೆ ಅಸಭ್ಯತೆ ೨೦೯

ಸಪ್ತರ್ಷಿಮಂಡಲ ಚಲನ (ಕುರುಕ್ಷೇತ್ರ ಯುದ್ಧನಿರ್ಣಯ)... ೨೦

ಸರ್ವಾಂಗ ಸ್ಫೂರ್ತಿ—ಈಶ್ವರನೊಬ್ಬನಲ್ಲೇ ... ೫

ಸಾಂಖ್ಯ ... ೧೫೭

ಸಿಮ್ಲಾ ದಿಲ್ಲಿ ರಾಜಪ್ರಾಸಾದಗಳಿಗೆ ಆದರ್ಶವಾಕ್ಯ ... ೩೩೩

ಸುಭದ್ರಾವೃತ್ತ ಮೂಲಭಾರತದ್ದು ..... ೨೨೨—೨೫

ಸುಳ್ಳು ಮತ್ತು ಸತ್ಯಗಳಿಂದ ಯಾವಾಗ ಪಾಪ, ಯಾವಾಗ ಅಲ್ಲ ೩೮೩—೩೯೭

ಸಂಧಿಯು ಮೀರಿದಮೇಲೆ ಯುದ್ಧ ೩೩೨

ಹರಿವಂಶ ರಚನೆ ಮತ್ತು ಶ್ಲೋಕ ಸಂಖ್ಯೆ ..... ೭—೪೭

ಹಾಲು ಬೆಣ್ಣೆಗಳನ್ನು ಕೃಷ್ಣನು ಕದಿಯುವಿಕೆ ... ೧೦೩—೧೦೪

ಹಿಮವಂತನು ಚಲಿಸಿದರೂ ನನ್ನ ಮಾತು ಸುಳ್ಳಾಗದು ೩೨೪

ಹೀಗೆ ಹಲವು ಬಗೆ ಕಥೆಗಳು (ದ್ರೋಣ ವಧೆ) ನಿರ್ಮಿತವಾಗಿವೆ ೩೭೯

ಹೀಗೆ ಹೀನಾಯದ ಅಧರ್ಮ (ಕೃತ್ರಿಮ ವ್ಯಾಪಾರ) ಇನ್ನೆಲ್ಲೂ ಇಲ್ಲ ..... ೪೧೦—೧೧

ಹೆಂಗಸೂ ಹೇಸುವಂಥ ಉಪಾಯ (ಅಶ್ವತ್ಥಾಮೋ ಹತಃ) ಭೀಮನಿಂದಲೆ? ... ೩೭೪

ಹೊಡಿಕೆಯ ಹುಲ್ಲೆಲ್ಲವೂ ಮುಸಲಗಳು ... ೪೨೮

ಕ್ಷತ್ರಿಯರ ಅನ್ಯಾಯ ಯುದ್ಧವನ್ನು ಕೃಷ್ಣನು ತಪ್ಪಿಸಿದ್ದು ..... ೨೧೨—೧೩

ಕ್ಷತ್ರಿಯರಿಗೆ ಕನ್ಯಾಹರಣವೇ ಶ್ಲಾಘ್ಯ ... ೨೨೬—೩೨

ಕ್ಷಮಿಸಿದ್ದೇನೆ ಎಂದು ಹೇಳಿ ಕ್ಷಮಿಸುವುದು ಕ್ಷಮೆ ಅಲ್ಲ ೨೮೬

ಕ್ಷತ್ರಿಯ ಧರ್ಮಪಾಲನೆಹೇಗೆ? —ಸಂಜಯನಿಗೆ ಕೃಷ್ಣ ಪ್ರಶ್ನೆ ೩೧೫

Call No:

Author : ವ್ಯಾಸರಾಯ್. R. (ಪರಿವರ್ತಕ:)

Title : ಶ್ರೀಕೃಷ್ಣ ಚರಿತ್ರೆ.

Signature	Borrowing Date
R. S. Sharma	26/9/80
[illegible]	4-4

1061